ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ಮಹಾ ಪ್ರಬಂಧ)

ಸಂಶೋಧಕ
ಕಡ್ಲಬಾಳ ಪನ್ನಂಗಧರ

ಮಾರ್ಗದರ್ಶಕರು
ಡಾ.ಕೇಶವನ್ ಪ್ರಸಾದ್.ಕೆ
ಪ್ರವಾಚಕರು

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ - ಹಂಪಿ
ವಿದ್ಯಾರಣ್ಯ 583276

೨೦೦೪

ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ಮಹಾ ಪ್ರಬಂಧ)

ಸಂಶೋಧಕ

ಕಡ್ಲಬಾಳ ಪನ್ನಂಗಧರ

ಮಾರ್ಗದರ್ಶಕರು

ಡಾ.ಕೇಶವನ್ ಪ್ರಸಾದ್.ಕೆ

ಪ್ರವಾಚಕರು.

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ - ಹಂಪಿ

ವಿದ್ಯಾರಣ್ಯ583276

2004



ಕುಲದೇವತೆ ಮಲೆಮ್ಮ

ಪ್ರಮಾಣ ಪತ್ರ

ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಡಾ. ಕೇಶವನ್‌ಪ್ರಸಾದ್.ಕೆ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ, ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಾಹಾಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ : 30-04-04
ಸ್ಥಳ : ವಿದ್ಯಾರಣ್ಯ

ಕದ್ಲಬಾಳ ಪನ್ನಂಗಧರ
ಸಂಶೋಧಕ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಢ ವಿಶ್ವವಿದ್ಯಾಲಯ, ಹಂಪಿ.

ದೃಢೀಕರಣ ಪತ್ರ

ಕಡ್ಲಬಾಳ ಪನ್ನಂಗಧರ ಇವರು ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 30.04.04
ಸ್ಥಳ : ವಿದ್ಯಾರಣ್ಯ

ಡಾ. ಕೇಶವನ್‌ಪ್ರಸಾದ್ ಕೆ.
ಮಾರ್ಗದರ್ಶಕರು ಹಾಗೂ ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ,
ಹಂಪಿ

ಯಾರ್ಯಾರ ನೆನೆಯಾಲಿ...

ಕನ್ನಡ ವಿಶ್ವವಿದ್ಯಾಲಯದ ಪ್ರಭಾರಿ ಕುಲಪತಿಗಳಾದ ಡಾ.ಕೆ.ವಿ.ನಾರಾಯಣ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ಕರೀಗೌಡಬೀಚನಹಳ್ಳಿ ಅವರಿಗೆ ತುಂಬು ಹೃದಯದ ಕೃತಜ್ಞತೆಗಳು ಸಲ್ಲುತ್ತವೆ. ಪಿಎಚ್.ಡಿ ಅಧ್ಯಯನಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಡಾ. ಹೆಚ್.ಜೆ.ಲಕ್ಕಪ್ಪಗೌಡ ಅವರನ್ನು ಕೃತಜ್ಞತೆಯಿಂದ ನೆನೆಯುವೆ.

ಮಹಾಪ್ರಬಂಧದ ರಚನೆಯಲ್ಲಿ ಪ್ರತಿ ಹಂತದಲ್ಲೂ ನನ್ನನ್ನು ಪ್ರೋತ್ಸಾಹಿಸಿ, ನನ್ನನ್ನು ಬಹಳ ಆತ್ಮೀಯವಾಗಿ ನಡೆಸಿಕೊಂಡು ಅವಶ್ಯವಾದ ಸಲಹೆ ಸೂಚನೆಗಳನ್ನು ನೀಡಿ ಮಾರ್ಗದರ್ಶನ ಮಾಡಿದ ಡಾ. ಕೇಶವನ್‌ಪ್ರಸಾದ್ ಕೆ ಅವರಿಗೆ ನಾನು ಯಾವತ್ತೂ ಕೃತಜ್ಞ. ನನ್ನ ಅಧ್ಯಯನಕ್ಕೆ ಬೇಕಾದ ಅಧ್ಯಯನದ ಒಳನೋಟ ಮತ್ತು ಅಧ್ಯಯನದ ವಿಧಿ ವಿಧಾನ ಕುರಿತು ಸೂಕ್ತ ಸಲಹೆ ನೀಡಿ ಸಹಕರಿಸಿದ ಬುಡಕಟ್ಟು ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಕೆ.ಎಂ. ಮೈತ್ರಿ,ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ.ಹಿ.ಚಿ. ಬೋರಲಿಂಗಯ್ಯ ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು. ಅಧ್ಯಯನದ ಅವಧಿಯಲ್ಲಿ ನನ್ನನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಡಾ.ಚಲುವರಾಜು, ಎ.ಎಸ್.ಪ್ರಭಾಕರ, ಗಂಗಾಧರದೈವಜ್ಞ, ಡಾ.ಮಂಜುನಾಥಬೇವಿನಕಟ್ಟಿ, ಡಾ.ಮೊಗಳ್ಳಿಗಣೇಶ, ಡಾ. ರವೀಂದ್ರನಾಥ, ಡಾ.ಹನುಮಣ್ಣನಾಯಕದೊರೆ, ಸಹೋದರನಾದ ಕರುಣಾಕರ, ಡಿ.ವಿ.ಪ್ರಕಾಶ್, ಡಾ. ಹನುಮಂತಪ್ಪತಾರಳ್ಳಿ, ಶಿವಪ್ರಕಾಶ್ ಇವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ನನ್ನನ್ನು ಸಂಶೋಧನೆಮಾಡಲು ಪ್ರೋತ್ಸಾಹಿಸಿ ಸಹಕರಿಸಿದ ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಐ.ಬಸವರಾಜ, ಡಾ.ಬಿ.ಜಿ. ಕನಕೇಶಮೂರ್ತಿ, ಡಾ. ಅಬ್ದುಲ್‌ಗಫರಖಾನ್, ಟಿ. ರಾಮಲಿಂಗಪ್ಪ ಜಿ.ಮಲ್ಲಿಕಾರ್ಜುನ, ಬಸಪ್ಪ ಪಿ.ಉರುಕಡ್ಲಿ, ಈಶ್ವರಚಂದ್ರಸಿ, ಕನ್ನಕಟ್ಟಿ ಜಯಣ್ಣ ಬಿ. ಮಾರುತೇಶ್, ಡಾ. ಸಿದ್ದಪ್ಪ ಬಿ.ಬಿ.ಅಯ್ಯಪ್ಪನವರು, ಶಿವರಾಜ ಸಾಗರ, ನಾಗಣ್ಣ ಎಸ್, ನಾಗರಾಜಪ್ಪ ಜಿ. ರಾಮಮೂರ್ತಿ ಮತ್ತು ಸಿಬ್ಬಂದಿ ವರ್ಗದವರಿಗೆ ಹಾಗೂ ನನ್ನ ವಿದ್ಯಾರ್ಥಿ ವೃಂದಕ್ಕೆ ನನ್ನ ಅಭಿನಂದನೆಗಳು.

ನನ್ನ ಸರ್ವತೋಮುಖದ ಬೆಳವಣಿಗೆಗೆ ಸದಾ ನನ್ನನ್ನು ಆಶೀರ್ವದಿಸಿ ಹಾರೈಸಿದ ಪೂಜ್ಯಗುರುಗಳಾದ ಶ್ರೀಚರಂತಪ್ಪ ಅಜ್ಜನವರಿಗೆ ನನ್ನ ಭಕ್ತಿಪೂರ್ವಕ ನಮಸ್ಕಾರಗಳು. ನನಗೆ ವಿದ್ಯಾರ್ಜನೆ ಮಾಡಿದ ಕೆ.ಚಂದ್ರಶೇಖರಾವ್, ನ.ಹಿ.ಮ.ಸಿದ್ದಲಿಂಗಸ್ವಾಮಿ, ಸಿ. ಶಿವನಾಗಪ್ಪ ಕೆ. ಬಸವರಾಜ, ಡಾ. ಬಸವರಾಜ ಸೂಳಿಕೆರೆಮಠ, ಡಾ. ಕನಹಳ್ಳಿ, ಹಾಗೂ ನನಗೆ ಕಂಪ್ಯೂಟರ್‌ತರಬೇತಿ ನೀಡಿ, ಸಹಕರಿಸಿದ ಜಿ.ಎಂ. ಮಹೇಶ್ವರಸ್ವಾಮಿ ನಂದಿಪುರ ಅವರಿಗೆ ನನ್ನ ನಮನಗಳು.

ತಂದೆಯವರಾದ ದಿ|| ಕಡ್ಲಬಾಳ ಹನುಂತಪ್ಪ ಮತ್ತು ಮಾವನವರಾದ ದಿ||ಎಂ. ಹನುಮಂತಪ್ಪ, ಮಾತೋಶ್ರೀ ಹೊನ್ನಮ್ಮ, ಸಹೋದರರಾದ ಕೆ.ಕೊಟ್ರೇಶಪ್ಪ ಗಂಗಾಧರ ಮತ್ತು, ಸದಾನನ್ನ ಹಿತವನ್ನೇ ಬಯಸುವ ನನ್ನ ಅತ್ತಿಗೆಯರಾದ ಶ್ರೀಮತಿಶೋಭ,ಶ್ರೀದೇವಿ,ನನ್ನ ಸಹೋದರಿಯರಾದ , ಶ್ರೀಮತಿ ನಿಂಗಮ್ಮ, ಸುಶೀಲ, ಹುಲಿಗೆಮ್ಮ, ಲಲಿತ, ಪಾರ್ವತೆಮ್ಮ ಹಾಗೂ ವಿಠೋಬನಾಯಕ ಡಿ ,ರಾಮಚಂದ್ರಕಾಶಿರಾಜ್, ಬಿ.ಎಂ.ಸತೀಶ್, ಲಕ್ಷ್ಮಣ ಹಿಂದಿನಮನೆ, ಟಿ. ಹನುಮಂತಪ್ಪ, ನರಸಿಂಹಮೂರ್ತಿ ಹಾಗೂ ಕೆ. ಆನಂದ. ಕೆ.ಆರ್. ಶಿವರಾಜ್ ಅವರನ್ನು ಈ ಸಂದರ್ಭದಲ್ಲಿ ನನೆಸಿಕೊಳ್ಳಲೇಬೇಕು.

ನನ್ನ ಅಧ್ಯಯನಕ್ಕೆ ಸಕಲ ರೀತಿಯಿಂದ ತಾಳ್ಮೆಯಿಂದ ಸಹಕರಿಸಿದ ನನ್ನ ಪತ್ನಿ ಶ್ರೀಮತಿ ಕೆ.ಪಿ. ಶೈಲಜ ಮತ್ತು ನನ್ನ ಮಕ್ಕಳಾದ ರಾಣಿ, ಸೌಜನ್ಯ, ಪ್ರತ್ಯಕ್ಷರಿಗೂ ನಾನು ಚಿರರುಣಿ. ನನ್ನ ಸಂಶೋಧನಾ ಕಾರ್ಯದ ಸುಖ ದುಃಖ ದಲ್ಲಿ ಪಾಲ್ಗೊಂಡು ನನ್ನ ಕ್ಷೇತ್ರಕಾರ್ಯದಲ್ಲಿ ಸಂಪೂರ್ಣವಾಗಿ ಸಹಕರಿಸಿದ ಸಹೋದರನಾದ ಟಿ. ಬಸವರಾಜ, ಎಂ.ಬಸವರಾಜ, ಡಾ. ವಿಶ್ವನಾಥ. ಕೆ. ನಾಗರಾಜ,ಜಗದೀಶ, ವಿವೇಕಾನಂದಸ್ವಾಮಿ ಅವರಿಗೆ ನನ್ನ ಕೃತಜ್ಞತೆಗಳು. ಸಮಯಕ್ಕೆ ಸರಿಯಾಗಿ ಛಾಯಚಿತ್ರ ತೆಗೆದುಕೊಟ್ಟ ಫೋಟೋಗ್ರಾಫರ್ ಶರಣಪ್ಪ ರಮೇಶ, ಬಿ.ಎಂ.ಸೋಮಶೇಖರಯ್ಯ ನಂದಿಪುರ ಮತ್ತು ಡಿಟಿಪಿ ಕಾರ್ಯದಲ್ಲಿ ನೆರವಾದ ಹೆಚ್. ಆನಂದ, ಟಿ. ಪ್ರಹ್ಲಾದ, ವಸಂತ ಮಾಲ್ವಿ ಕೊಟ್ರೇಶ್, ಪ್ರಕಾಶ್ ಅವರಿಗೆ ನಾನು ಯಾವತ್ತೂ ಕೃತಜ್ಞ.

ಸದಾ ನನ್ನನ್ನು ಸಂಶೋಧನೆ ಮಾಡುವಂತೆ ಬೆನ್ನು ತಟ್ಟಿ ಪ್ರೋತ್ಸಾಹಿಸಿದ, ಶಿವಾನಂದ, ನಾಗರಾಜ, ಅಂಜನಪ್ಪ ಹುಳ್ಳಿ ಪ್ರಕಾಶ್, ಚಿದಾನಂದ ಗೌಡ್, ರಮೇಶ್ ಪತ್ತಾರ, ಗೌಸಮಹ್ಮದ್, ರಫಿ, ಮಂಜುನಾಥ, ದಾದಾಪೀರ, ಸಣ್ಣ ಬಸವರಾಜ, ಸುಭಾಷ್‌ಚಂದ್ರ, ಸಹೋದರರಾದ ಕೆಚ್ಚನಬಂಡಿ ಹನುಮಂತಪ್ಪ ಮತ್ತು ಸಿದ್ದೇಶಪ್ಪ ಶಿವಪುರ, ಪಿ. ರಾಜಲಿಂಗಪ್ಪ ,ಎಂ.ಜಿ.ಮಲ್ಲಿಕಾರ್ಜುನ, ಜಿ.ಎಂ. ಗುರುಬಸವರಾಜ ಹಾಗೂ ಲಯನ್ಸ್‌ಕ್ಲಬ್ ಸದಸ್ಯರಿಗೆ ಮತ್ತು ತುಂಗಭದ್ರ ಕಲಾತಂಡಕ್ಕೂ, ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಕೃತಜ್ಞತೆಗಳೊಂದಿಗೆ ,

ಕಡ್ಲಬಾಳ ಪನ್ನಂಗಧರ.

ಪರಿವಿಡಿ

ಭಾಗ : ಒಂದು. ಸಂಸ್ಕೃತಿಯ ಅಧ್ಯಯನ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಮಹತ್ವ, ವಿಧಾನ ಮತ್ತು ವ್ಯಾಪ್ತಿ

1.1 ಅಧ್ಯಯನದ ಉದ್ದೇಶ

1.2 ಮಹತ್ವ

1.3 ಅಧ್ಯಯನದ ವಿಧಾನ

1.4 ಅಧ್ಯಯನದ ವ್ಯಾಪ್ತಿ

1.5 ಜನಾಂಗಿಕ ಮೂಲ ಮತ್ತು ಬುಡಕಟ್ಟುಗಳ ಸ್ಥಿತಿಗತಿ

1.6 ಮೇದ ಬುಡಕಟ್ಟು ಸಮುದಾಯದ ಪದನಿಷ್ಪತ್ತಿ ಮತ್ತು ಪೂರ್ವಾಧ್ಯಯನ

1.7 ಮೇದರ ಸೃಷ್ಟಿ ಪುರಾಣಗಳು

ಅಧ್ಯಾಯ : ಎರಡು

ಮೇದರ ಜೀವನ ಕ್ರಮ ಮತ್ತು ಆಚರಣೆಗಳು (ವಾರ್ಷಿಕ ಆವರ್ತನ, ಆಚರಣೆಗಳು)

2.1 ಜನನ ಮತ್ತು ಬಾಣಂತನ

2.2 ನಾಮಕರಣ

2.3 ಜವಳ

2.4 ಋತುಮತಿ

2.5 ಜಾತಿ ಸಂಸ್ಕಾರ

2.6 ಮದುವೆ

2.7 ಸೀಮಂತ

2.8 ಸಾವು-ಸಂಸ್ಕಾರ

2.9 ನಂಬಿಕೆ-ನಿಷೇಧ-ಚಿಕಿತ್ಸೆ

ಅಧ್ಯಾಯ : ಮೂರು

ಮೇದರ ಸಾಮಾಜಿಕ ವ್ಯವಸ್ಥೆ ಮತ್ತು ಧಾರ್ಮಿಕ ಆಚರಣೆಗಳು

3.1 ಪ್ರಸಾರ-ನೆಲೆಗಳು ಮತ್ತು ಜನಸಂಖ್ಯೆ

3.2 ಕೌಟುಂಬಿಕ ವ್ಯವಸ್ಥೆ ಮತ್ತು ನ್ಯಾಯ ನಿರ್ಣಯ

3.3 ಮೇದರ ಕುಲದ ಚಿಹ್ನೆ, ಬೆಡಗು ಮತ್ತು ಗೋತ್ರಗಳು

3.4 ವಸತಿ ಮತ್ತು ಆಹಾರ ಪದ್ಧತಿ

3.5 ಹಬ್ಬಗಳು ಮತ್ತು ಧಾರ್ಮಿಕ ಆಚರಣೆಗಳು

3.6 ಪವಾಡ ಪುರುಷರು ಮತ್ತು ಸಾಂಸ್ಕೃತಿಕ ವೀರರು

ಭಾಗ : ಎರಡು. ವಾಣಿಜ್ಯ ಅಧ್ಯಯನ

ಅಧ್ಯಾಯ : ನಾಲ್ಕು

ಮೇದರ ಕುಲಕಸುಬು ಮತ್ತು ವಾಣಿಜ್ಯದ ಸ್ವರೂಪ

4.1 ಕುಲಕಸುಬು (ಬುಡಕಟ್ಟುಕೈಗಾರಿಕೆ)

4.2 ತಯಾರಿಸುವ ವಸ್ತುಗಳ ವೈಶಿಷ್ಟ್ಯ

4.3 ಬಿದಿರು

4.4 ವಾಣಿಜ್ಯ

4.5 ಮೇದರ ಬುಡಕಟ್ಟು ವಾಣಿಜ್ಯ ಭಾಷೆ

ಅಧ್ಯಾಯ : ಐದು

ಬಿದಿರಿನ ವಸ್ತುಗಳ ತಯಾರಿಕೆ ಮತ್ತು ಮಾರಾಟ

5.1 ಬಿದಿರಿನ ವಸ್ತುಗಳ ತಯಾರಿಕೆ (ಉತ್ಪಾದನೆ)

5.1.1 ಪ್ರವೇಶಿಕೆ

5.1.2 ವಸ್ತುವಿನ ಕಲ್ಪನೆ

5.1.3 ಬಿದಿರಿನ ವಸ್ತುಗಳ ಉತ್ಪಾದನೆಯ ಸಮಸ್ಯೆಗಳು

5.1.3.1 ಕಚ್ಚಾ ಪದಾರ್ಥದ ಸಮಸ್ಯೆ

5.1.3.2 ಹಣಕಾಸು ಸಮಸ್ಯೆಗಳು

5.1.3.3 ವಸ್ತುಗಳ ಉತ್ಪಾದನೆಯ ಯೋಜನೆಯ ಸಮಸ್ಯೆ

5.2 ತಯಾರಿಸಿದ ವಸ್ತುಗಳ ಮಾರಾಟ ಪ್ರಕ್ರಿಯೆ

5.2.1 ಮಾರಾಟದ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳು

5.2.1.ಅ) ಆಂತರಿಕ ಅಂಶಗಳು

5.2.1. ಆ) ಬಾಹ್ಯ ಅಂಶಗಳು

5.2.2 ತಯಾರಿಸಿದ ವಸ್ತುಗಳ ಮಾರಟ ಪ್ರಕ್ರಿಯೆಯ ಸಮಸ್ಯೆಗಳು

5.3 ವಸ್ತುಗಳ ವೈವಿಧ್ಯತೆ

5.4 ಗೃಹ ಮತ್ತು ಸಣ್ಣ ಕೈಗಾರಿಕೆಗಳ ಸ್ಥಿತಿಗತಿ

5.5 ಬುಡಕಟ್ಟು ವಾಣಿಜ್ಯದಲ್ಲಿ ನೈತಿಕ ಮೌಲ್ಯಗಳು

ಅಧ್ಯಾಯ : ಆರು

ಸಮಾರೋಪ

ಅನುಬಂಧ :

ಗ್ರಂಥ ಋಣ

ಸಂಪ್ರದಾಯದ ಹಾಡುಗಳು

ಬುಡಕಟ್ಟುಗಾದೆ ಮತ್ತು ಒಗಟುಗಳು

ಕೋಷ್ಟಕಗಳು

ನಕ್ಷೆಗಳ ವಿವರ

ಬಳ್ಳಾರಿ ಜಿಲ್ಲೆಯ ಮೇದ ಬುಡಕಟ್ಟು ಸಮುದಾಯದ ನೆಲೆಗಳು



- 1) ಬಳ್ಳಾರಿ
  - ಎಮ್ಮಿಗನೂರು
  - ಕುಡುತಿನಿ
  - ಕುರುಗೋಡು
  - ರುದ್ರಪಾದ
  - ಶ್ರೀಧರಗಡ್ಡಿ
- 2) ಹಗರಿಬೊಮ್ಮನಹಳ್ಳಿ
  - ಬೆಣಕಲ್ಲು
  - ದಶಮಾಪುರ
  - ಹಂಪಸಾಗರ
  - ತಂಬ್ರಹಳ್ಳಿ
- 3) ಹೊಸಪೇಟೆ
  - ಅನಂತಶಯಗುಡಿ
  - ಡಾಣಾಪುರ
  - ಗರಗ
  - ಹಾರುವವನಹಳ್ಳಿ
  - ಕಂಪ್ಲಿ
  - ಕಾಮಾಲಾಪುರ
  - ಮರಿಯಮ್ಮನಹಳ್ಳಿ
  - ನಾಗೇನಹಳ್ಳಿ
- 4) ಹೂವಿನ ಹಡಗಲಿ
  - ಇಟ್ಟಿಗಿ
  - ಮಾಗಳ
  - ಮುದೆನೂರು
  - ಮೈಲಾರ
  - ಸೋಗಿ
- 5) ಕೂಡ್ಲಿಗಿ
  - ಅಪ್ಪಯ್ಯನಹಳ್ಳಿ
  - ಗುಡೆಕೋಟೆ
  - ಕೊಟ್ಟೂರು
  - ಮಹದೇವಪುರ
  - ರಾಯಪುರ
  - ಸಿಡೆಗಲ್ಲು
- 6) ಸಿರಗುಪ್ಪ
  - ಶಿರಿಗೇರಿ
  - ತೆಕ್ಕಲಕೋಟೆ
- 7) ಸೊಂಡೂರು
  - ಅಂಕಮ್ಮನಹಾಳು
  - ಬಂಡ್ರಿ
  - ಚೋರನೂರು
  - ಸುಶೀಲನಗರ
  - ತಾರಾನಗರ
  - ತೋರಣಗಲ್ಲು
  - ಯಶವಂತನಗರ

ಭಾಗ : ಒಂದು

ಸಂಸ್ಕೃತಿಯ ಅಧ್ಯಯನ

ಅಧ್ಯಾಯ : ಒಂದು: ಅಧ್ಯಯನದ ಉದ್ದೇಶ, ಮಹತ್ವ, ವಿಧಾನ ಮತ್ತು ವ್ಯಾಪ್ತಿ

1.1 ಅಧ್ಯಯನದ ಉದ್ದೇಶ

1.2 ಮಹತ್ವ

1.3 ಅಧ್ಯಯನದ ವಿಧಾನ

1.4 ಅಧ್ಯಯನದ ವ್ಯಾಪ್ತಿ

1.5 ಜನಾಂಗಿಕ ಮೂಲ ಮತ್ತು ಬುಡಕಟ್ಟುಗಳ ಸ್ಥಿತಿಗತಿ

1.6 ಮೇದ ಬುಡಕಟ್ಟು ಸಮುದಾಯದ ಪದನಿಷ್ಪತ್ತಿ ಮತ್ತು ಪೂರ್ವಾಧ್ಯಯನ

1.7 ಮೇದರ ಸೃಷ್ಟಿ ಪುರಾಣಗಳು

1.1 ಅಧ್ಯಯನದ ಉದ್ದೇಶ :

ಭೂಮಿಯ ಸೃಷ್ಟಿಯನ್ನು ಕುರಿತಾಗಿ ಅನೇಕ ವೈಜ್ಞಾನಿಕ ವಿವರಣೆಗಳಿವೆ. ಜೊತೆಗೆ ಅನೇಕ ಧಾರ್ಮಿಕ ಪುರಾಣ ಮತ್ತು ಕಥೆಗಳು ಸಹ ಕಂಡುಬರುತ್ತವೆ. ಹಾಗೆಯೇ ಭೂಮಿಯ ಮೇಲೆ ಜೀವಿಗಳ ಸೃಷ್ಟಿಯನ್ನು ಕುರಿತಾಗಿ, ಭೌಗೋಳಿಕ ಮತ್ತು ಬದಲಾದ ಪರಿಸರದ ಕಾರಣಗಳು ಎಂದು ತಿಳಿದು ಬರುತ್ತವೆ. ಭೂಮಂಡಲದ ಮೇಲೆ ಮೊದಲು ಪಾಚಿಯಂತಹ ಸಸ್ಯಗಳು ಮತ್ತು ಏಕಕೋಶ ಜೀವಿಗಳು ಕಾಣಿಸಿ ಕೊಂಡವು. ಜೀವವಿಕಸನದ ಪಥದಲ್ಲಿ ಮಾನವ ಪೂರ್ವ ಪ್ರಾಣಿಗಳ ವಿಕಾಸ, ಪೂರ್ವ ಮಾನವನ ಬೆಳವಣಿಗೆಯ, ಪೂರ್ವಾವಸ್ಥೆಗಳಾದ ವಾನರ-ನರ ಮತ್ತು ಅರೆಮಾನವರ ಸ್ಥಿತಿಯ ನಂತರದ ಪೂರ್ವ ಶುದ್ಧ ಮಾನವನ ಬೆಳವಣಿಗೆ ಒಂದು ಕುತೂಹಲಕಾರಿ ಸತ್ಯ ಸಂಗತಿ. ಭೂಮಿಯ ಮೇಲಿನ ವಿವಿಧ ಪರಿಸರ ಹಾಗೂ ಭೌಗೋಳಿಕ ಪ್ರಭಾವಗಳು ಮಾನವನಲ್ಲಿ ವಿವಿಧ ಮತ್ತು ವಿಭಿನ್ನ ಜನಾಂಗಿಕ ಲಕ್ಷಣಗಳಿಗೆ ಕಾರಣವಾದವು . ಒಂದು ಭೂಪ್ರದೇಶದ ಜನರು ಭೌತಿಕವಾಗಿ ಒಂದೇ ರೀತಿಯಾಗಿ ಕಂಡು ಬರುವುದು ಸಹಜ. ಆದರೆ, ಅವರ ಆಚಾರ-ವಿಚಾರ, ಸಾಂಸ್ಕೃತಿಕ ಜೀವನ ಇತರರಿಗಿಂತ ಭಿನ್ನ ಮತ್ತು ವಿಶಿಷ್ಟವಾಗಿ ಕಂಡುಬರುತ್ತದೆ. ಮೂಲತಃ ಕಾಡುವಾಸಿಯಾದ ಆದಿಮಾನವ ಹಲವು ಘಟ್ಟಗಳನ್ನು ದಾಟಿ ನಗರಜೀವನಕ್ಕೆ ಕಾಲಿರಿಸಿದ. ಈ ನಡುವೆ ಅನೇಕ ಸಮುದಾಯಗಳು ಕಾಡಿನಲ್ಲಿಯೇ ಉಳಿದು ನಗರವಾಸಿಗಳಿಗಿಂತ ಭಿನ್ನ ಮತ್ತು ಪ್ರತ್ಯೇಕ ಜೀವನ ರೂಢಿಸಿಕೊಂಡು ಬದುಕುತ್ತಾ ಬಂದವು. ಇಂತಹ ಸಮುದಾಯಗಳು ಇತ್ತೀಚೆಗೆ ಕಾಡು-ನಾಡುಗಳ ಮಧ್ಯೆ ಹಾಗೂ ನಾಡುಗಳಲ್ಲಿ ವಾಸಿಸುತ್ತಿದ್ದರೂ ತಮ್ಮ ಮೂಲ ಸಂಸ್ಕೃತಿಯ ಮೌಲ್ಯಗಳನ್ನು ಜೀವಂತವಾಗಿ ಉಳಿಸಿಕೊಂಡಿರುವರು. ಇವರ ಮೇಲೆ ಪರಿವರ್ತಿತ ಸಮುದಾಯಗಳ ಸಾಂಸ್ಕೃತಿಕ ಪ್ರಭಾವವಾಗಿದ್ದರೂ ತಮ್ಮ ಮೂಲಸಂಸ್ಕೃತಿಯ ನೆಲೆಗಟ್ಟಿನ ಮೇಲೆಯೇ ಇವರು ಬದುಕುತ್ತಿದ್ದಾರೆ. ಇಂತಹ ಸಮುದಾಯಗಳು ಜಗತ್ತಿನ ಪ್ರತಿಯೊಂದು ದೇಶದಲ್ಲಿಯೂ ಕಂಡುಬರುತ್ತವೆ. ಭಾರತ ಬಹುಸಂಸ್ಕೃತಿಯ ಬಹುಭಾಷೆಯ ಹಾಗೂ ಬಹು ಧರ್ಮಗಳ ನಾಡಾಗಿದೆ. ದೇಶದಾದ್ಯಂತ ಸಾವಿರಾರು ಬುಡಕಟ್ಟು ಸಮುದಾಯಗಳು ಈ ನೆಲದಲ್ಲಿ ನೆಲೆ ಕಂಡು ಕೊಂಡಿರುವುದುಂಟು. ಈ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಭಾಷೆ ಹಾಗೂ ಜೀವನ ವಿಧಾನವನ್ನು ರೂಢಿಸಿಕೊಂಡಿವೆ. ಅನೇಕ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ, ಸಾಮಾಜಿಕ ಆಚರಣೆಗಳು ಮೇಲ್ನೋಟಕ್ಕೆ ಒಂದೇ ರೀತಿಯಾಗಿ ಕಂಡರೂ ಅವುಗಳ ಆಳ ಮತ್ತು ಹರವನ್ನು ನೋಡಿದಾಗ ಭಿನ್ನತೆ ಕಂಡುಬರುತ್ತದೆ.

ಇದುವರೆಗೆ ಬುಡಕಟ್ಟು ಸಮುದಾಯಗಳ ಬಗ್ಗೆ ಅನೇಕ ರೀತಿಯ ಅಧ್ಯಯನಗಳು ನಡೆದಿವೆ. ಇಂತಹ ಸಮುದಾಯಗಳ ಸಾಂಸ್ಕೃತಿಕ ಅಧ್ಯಯನಗಳ ಜೊತೆಗೆ ಸಮುದಾಯದ ಕುಲಕಸುಬುಗಳ ಸ್ಥಿತಿಗತಿ ಅವುಗಳ ಉಳಿವು ಹಾಗೂ ಬೆಳವಣಿಗೆ ಅಧ್ಯಯನಕಾರರಿಗೆ ಅಧ್ಯಯನದ ವಸ್ತುವಾಗಿ ನಿಲ್ಲುತ್ತವೆ. ದೇಶ ವಿದೇಶಗಳಲ್ಲಿ ಬುಡಕಟ್ಟು ಸಮುದಾಯಗಳನ್ನು ಕುರಿತು ಅಧ್ಯಯನಗಳು ನಡೆಯುತ್ತಿರುವುದು ಪ್ರಶಂಸನೀಯ. ಕರ್ನಾಟಕದಲ್ಲಿ ಕನ್ನಡ

ವಿಶ್ವವಿದ್ಯಾಲಯ ಹಂಪಿಯಲ್ಲಿ ಬುಡಕಟ್ಟುಗಳ ಸಮುದಾಯದ ಅಧ್ಯಯನಕ್ಕೆ ಮೀಸಲಾದ ಬುಡಕಟ್ಟು ವಿಭಾಗವು ಅಸ್ತಿತ್ವಕ್ಕೆ ಬಂದಿರುವುದು ಮಹತ್ವದ ಬೆಳವಣಿಗೆ. ಬುಡಕಟ್ಟು ಅಧ್ಯಯನಕಾರರಿಗೆ ಇದೊಂದು ಉತ್ತಮ ಅವಕಾಶ. ಪ್ರಸ್ತುತ ಸಂದರ್ಭದಲ್ಲಿ ಇಂತಹ ಅಲಕ್ಷಿತ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಅಧ್ಯಯನಗಳ ಜೊತೆಗೆ ವಾಣಿಜ್ಯ ಮತ್ತು ಇತರೆ ಅಂತರ್‌ಶಿಸ್ತೀಯ ಅಧ್ಯಯನಗಳು ನಡೆಯುತ್ತಿರುವುದು ಬುಡಕಟ್ಟು ಸಮುದಾಯಗಳ ಹಿತದೃಷ್ಟಿಯಿಂದ ಬಹು ಅನುಕೂಲಕರವಾಗಿದೆ. ಇದರಿಂದ ಒಂದು ಸಮುದಾಯದ ಆರ್ಥಿಕ,ಸ್ಥಿತಿಗತಿ ಮತ್ತು ಜೀವನಕ್ರಮವನ್ನು ವಿಶೇಷ ದೃಷ್ಟಿಕೋನದಿಂದ ಗುರುತಿಸಲು ಸಹಕಾರಿಯಾಗುತ್ತದೆ. ಬುಡಕಟ್ಟು ಸಮುದಾಯಗಳ ಸಂಸ್ಕೃತಿಯಲ್ಲಿ ಜೀವಂತಿಕೆಯನ್ನು ವಿಸ್ತರಿಸುವುದರಿಂದ ಈ ಸಮುದಾಯಗಳು ಕಾಲ ಚಕ್ರದಲ್ಲಿ ಮುಳುಗಿ ಹೋಗುವುದನ್ನು ನಿಲ್ಲಿಸಬಹುದು. ಆಧುನಿಕ ತಂತ್ರಜ್ಞಾನ, ಬೆಳೆದು ನಿಂತ ವಿಜ್ಞಾನ ಮತ್ತು ಆಡಳಿತ ತಂತ್ರಗಳ ಸದ್ಬಳಕೆಯಿಂದ ಬುಡಕಟ್ಟು ಸಮುದಾಯಗಳ ಅನನ್ಯತೆಯನ್ನು ಜೀವಂತವಾಗಿರಿಸಿಕೊಳ್ಳಬಹುದು. ಪ್ರಸ್ತುತ ಸಂದರ್ಭದಲ್ಲಿ ಕೆಳಜಾತಿಯ ಈ ಸಮುದಾಯಗಳು ಅನೇಕ ಸವಾಲುಗಳಿಗೆ ಮುಖಾಮುಖಿಯಾಗಿ ನಿಲ್ಲುತ್ತವೆ. ಮೇಲ್ವರ್ಗದ ಸಂಸ್ಕೃತಿಯ ಸೆಳವಿನಲ್ಲಿ ಕೆಳವರ್ಗದವರ ಪಾರಂಪರಿಕ ಮೌಲ್ಯಗಳು ಕೊಚ್ಚಿಹೋಗದಂತೆ ತಡೆಯಬೇಕಾಗಿದೆ. ಬುಡಕಟ್ಟು ಸಮುದಾಯಗಳಲ್ಲಿ ಅನೇಕ ಸಮಸ್ಯೆಗಳು ಮೇರು ಸಂಸ್ಕೃತಿಯ ಅನುಕರಣೆಯ ಅನಿವಾರ್ಯತೆಯನ್ನು ಎದುರಿಸುತ್ತವೆ. ಆಗ ತಮ್ಮ ಮೌಲ್ಯಗಳನ್ನು ಅಡವಿಟ್ಟು ರಾಜಿಯಾಗುವುದು ಕಂಡು ಬರುತ್ತದೆ.

ನೈಸರ್ಗಿಕ ಸಂಪನ್ಮೂಲಗಳ ಸಂಪದ್ಭರಿತ ರಾಷ್ಟ್ರ ಭಾರತ. ಈ ದೇಶದ ಸಂಪನ್ಮೂಲಗಳಲ್ಲಿ ಅರಣ್ಯ ಸಂಪತ್ತು ಮಾನವ ದೇಹದ ಕಲೀಜದಂತೆ. ಅರಣ್ಯ ಸಂಪತ್ತಿಗೆ ಆಕರ್ಷಿತರಾದ ಅನೇಕ ವಿದೇಶಿಗರು ಭಾರತದ ಮೇಲೆ ಆಕ್ರಮಣ ನಡೆಸಿದರು. ಆಗ ಅರಣ್ಯದ ಜೊತೆ ತಮ್ಮ ಜೀವನದ ಆರ್ಥಿಕ ಮತ್ತು ಭೌತಿಕ ನಂಟು ಬೆಳೆಸಿಕೊಂಡ ಬುಡಕಟ್ಟು ಸಮುದಾಯ ಇವರಿಂದ ನಿರ್ಲಕ್ಷಿಸಲ್ಪಟ್ಟು ವಿಚಲಿತರಾದರು. ಅನೇಕ ಬಾರಿ ಈ ಸಮುದಾಯಗಳು ವಿದೇಶಿಗರ ವಿರುದ್ಧ ಬಂಡೆದ್ದರೂ ಅನಿವಾರ್ಯತೆಯ ಕಾರಣದಿಂದಾಗಿ ಪಲಸೆಯ ಕಾಲಾನುಪಾತ ಕಡಿಮೆಯಾಯಿತು. ವಸಾಹತುಶಾಹಿಯ ಆಡಳಿತವು ಅಡ್ಡವಾಗಿರುವ ಅರಣ್ಯವಾಸಿ ಸಮುದಾಯಗಳನ್ನು ಅಲ್ಲಿಂದ ಕಾಲ್ತೆಗೆಸಲು ಅನೇಕ ಅಸ್ತ್ರಗಳನ್ನು ಬಳಸಿತು. ಬುಡಕಟ್ಟು ಸಮುದಾಯ ಮತ್ತು ಅರಣ್ಯದ ನಡುವಿನ ಕಾಲ ಮೂಲದ ನಂಟಿಗೆ ಕೊಡಲಿ ಪೆಟ್ಟು ಬಿದ್ದಂತಾಯಿತು. ಬ್ರಿಟಿಷರು ಜಾರಿಗೊಳಿಸಿದ ಹೊಸ ಕಾನೂನಿನ ಗೊತ್ತುವಳಿ ಈ ಸಮುದಾಯಗಳನ್ನು ಅರಣ್ಯದಿಂದ ಬೇರ್ಪಡಿಸಿ ನಿಶ್ಯಸ್ತ್ರರನ್ನಾಗಿಸಿತು. ಅರಣ್ಯವನ್ನು ತಮ್ಮ ಜೀವಕ್ಕಿಂತ ಹೆಚ್ಚು ಪ್ರೀತಿಸಿ ರಕ್ಷಿಸುತ್ತಿದ್ದ ಬುಡಕಟ್ಟುಗರು ನಿಸ್ಸಹಾಯಕರಾದರು. ಒಂದು ಕಡೆಯಿಂದ ನಿತ್ಯಹರಿದ್ವರ್ಣದ ವ್ಯವಸ್ಥಿತವಾದ ದುರ್ಬಳಕೆ ನಿಲ್ಲದಾಯಿತು. ಮತ್ತೊಂದು ಕಡೆ ಬುಡಕಟ್ಟು ಸಮುದಾಯಗಳ ರಕ್ಷಣೆಗೆ ಮತ್ತು ಅವರ ಜೀವನ ಸುಧಾರಣೆಗೆ ಅನೇಕ ವ್ಯಕ್ತಿ ಮತ್ತು ಸಂಘಟನೆಗಳು ಪಣತೊಟ್ಟು ನಿಂತವು. ಕೆಲವು ರೀತಿಯಲ್ಲಿ ಇವರ ಮೇಲೆ ಅನ್ಯ ಧರ್ಮ ಮತ್ತು ಜಾತಿ ಸಂಸ್ಕಾರದ

ಒತ್ತಡಗಳು ಏರಿಬಂದವು. ಬದಲಾವಣೆಯ ಪರಿವರ್ತನೆ ಅವಶ್ಯಕತೆ ಮತ್ತು ಅನಿವಾರ್ಯವನ್ನು ವಿರೋಧಿಸಿ ಅನೇಕ ಬುಡಕಟ್ಟಿಗರು ಪ್ರತಿರೋಧ ಒಡ್ಡಿದರು. ಇವುಗಳ ನಡುವೆಯೂ ಉಸಿರು ಬಿಗಿಹಿಡಿದು ತಮ್ಮ ಮೂಲ ಮೌಲ್ಯಗಳ ಸಂಸ್ಕೃತಿಯ ಸಿರಿತನವನ್ನು ಈ ಸಮುದಾಯ ಯಥಾವತ್ತಾಗಿ ಉಳಿಸಿಕೊಂಡು ಬಂದವು. ಇವರ ನೆಲೆಗಳು ಬದಲಾದರೂ ಬುಡಕಟ್ಟಿಗರ ಮೂಲ ಮೌಲ್ಯಗಳು ಮಾತ್ರ ಗಟ್ಟಿಯಾಗಿ ನಿಂತವು.

14ನೇ ಶತಮಾನದ ಸ್ಫೋಟಿತ ಜನಸ್ತೋಮಕ್ಕೆ ನಿತ್ಯದ ಅವಶ್ಯಕತೆಯ ಉತ್ಪಾದನೆ ಮತ್ತು ಪೂರೈಕೆಯು ಪ್ರಪಂಚದ ಪ್ರಮುಖ ಸಮಸ್ಯೆಯಾಯಿತು. ಅಸ್ತಿತ್ವದಲ್ಲಿರುವ ಉತ್ಪಾದನೆಯ ಘಟಕಗಳು ಅಸಮರ್ಥವೆನಿಸಿಕೊಂಡವು. ತತ್ಪರಿಣಾಮ ಔದ್ಯೋಗೀಕರಣ ಬೃಹತ್ ಪ್ರಮಾಣದ ಉತ್ಪಾದನಾ ನೀತಿ ಮತ್ತು ಸಂಪನ್ಮೂಲಗಳ ಸಂಪೂರ್ಣ ಸದ್ಬಳಕೆಗಳು ಹೊಸ ತಂತ್ರಜ್ಞಾನದ ಶೋಧನೆ ಮತ್ತು ಅವಿಷ್ಕಾರಗಳಿಗೆ ದಾರಿಯಾಯಿತು. ಉತ್ಪಾದನೆಯ ಮೂಲ ಉದ್ದೇಶ ಲಾಭಾಂಶವಾಯಿತು. ಪಾರಂಪರಿಕತೆ ಎಲ್ಲೋ ಒಂದು ಕಡೆ ವಿಚಲಿತವಾಯಿತು. ಕಾಡನ್ನು ಕಡಿದು ನಾಡು ನಿರ್ಮಾಣ ಮಾಡತೊಡಗಿದರು. ಇದರಿಂದ ವಿಚಲಿತಗೊಂಡ ಬುಡಕಟ್ಟಿಗರು ವಲಸೆಯ ವೇಗ ದಿನ ಮತ್ತು ಗಂಟೆಗೆ ಇಳಿಯಿತು. ಇವರ ರಕ್ಷಣೆ ಮತ್ತು ಜೀವನದ ಪುನರ್‌ನಿರ್ಮಾಣದ ಹೆಸರಿನಲ್ಲಿ ಇವರನ್ನು ಪ್ರಾಣಿಗಳಂತೆ ಬಂಧಿಸಿ ನಾಡ ಜೀವನಕ್ಕೆ ಪರಿಚಯಿಸುವ ಪ್ರಯತ್ನಗಳು ನಡೆದವು.

ಈ ಸಂದರ್ಭದಲ್ಲಿ ಭಾರತಕ್ಕೆ ಎದುರಾದ ಹತ್ತು ಹಲವು ಸಮಸ್ಯೆಗಳಲ್ಲಿ ಇದು ಒಂದು. ಅಭಿವೃದ್ಧಿಯ ಜೊತೆಗೆ ದೇಶದ ಸಾಂಸ್ಕೃತಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಅರ್ಥಪೂರ್ಣವಾಗಿ ರೂಪಿಸಿಕೊಳ್ಳಬೇಕಾಯಿತು. ಏಕೆಂದರೆ ಅಭಿವೃದ್ಧಿಯ ಜೊತೆಗೆ ಮಾನವನ ಬೌದ್ಧಿಕ ವಿಕಾಸ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಬೆಳಸಿ ಉಳಿಸುವುದು ಆಧುನಿಕತೆಯ ಮೂಲಮಂತ್ರವಾಗಬೇಕು. ದೇಶೀಯ ಅನೇಕ ಸಮುದಾಯಗಳು ಸಂಬಂಧಗಳನ್ನು ಗಟ್ಟಿಗೊಳಿಸುವುದರ ಜೊತೆಗೆ ಒಂದು ದೇಶ ಮತ್ತೊಂದು ದೇಶದೊಡನೆ ಹೊಂದುವ ಸಂಬಂಧಗಳು ಅಭಿವೃದ್ಧಿಯ ದಾರಿಗೆ ವಿವಿಧ ಮಾರ್ಗಗಳಾಗುತ್ತವೆ. ಇದರಿಂದ ಪ್ರಪಂಚದ ಯಾವುದೇ ಮೂಲೆಯಲ್ಲಾದ ತಂತ್ರಜ್ಞಾನದ ಆವಿಷ್ಕಾರ ವಿಶ್ವದಾದ್ಯಂತ ಬಳಕೆಯಾಗುತ್ತದೆ. ವಿಶ್ವವು ದಿನದಿನಕ್ಕೆ ಕಿರು ವ್ಯಾಪ್ತಿಯಲ್ಲಿ ಸಂಪರ್ಕಹೊಂದಿ ವಿಶ್ವಗ್ರಾಮವಾಗುತ್ತವೆ. ಒಂದು ದೇಶದ ಸಂಪನ್ಮೂಲ ಇನ್ನೊಂದು ದೇಶದ ಕಚ್ಚಾ ಪದಾರ್ಥವಾಗುತ್ತದೆ. ವಿಶ್ವ ವಿನಿಮಯ ಪದ್ಧತಿಯಲ್ಲಿ ಹೊಸ ಒಡಂಬಡಿಕೆಯ ತಂತ್ರಗಳು ತಲೆ ಎತ್ತುತ್ತವೆ. ಸಾಂಸ್ಕೃತಿಕ ಭಿನ್ನತೆಗಳು ಸಹ, ಮಾನ್ಯತೆ ಪಡೆಯುತ್ತವೆ. ಜಾಗತೀಕರಣದ ಫಲವಾಗಿ ಇಂದು ವಿಶ್ವಮಾರುಕಟ್ಟೆಯ ನಿರ್ಮಾಣವಾಗಿದೆ. ಉತ್ಪಾದನೆಯ ತಂತ್ರಜ್ಞಾನದ ಜೊತೆಗೆ ವಿತರಣೆ ಮತ್ತು ಮಾರಾಟದ ಪ್ರಕ್ರಿಯೆಯಲ್ಲಿ ಗಣನೀಯ ಬದಲಾವಣೆಗಳಾದವು. ಆಧುನಿಕ ವಾಣಿಜ್ಯರಂಗದಲ್ಲಿ ವಿಕ್ರಯದ ಪ್ರಕ್ರಿಯೆ ಹೊಸ ಅವಿಷ್ಕಾರಗಳೊಂದಿಗೆ ಗ್ರಾಹಕನ ಸೇವೆಗೆ ಸಿದ್ಧವಾಗಿದೆ. ಇಂದಿನ ಮಾರುಕಟ್ಟೆಯಲ್ಲಿ ಗ್ರಾಹಕನೇ ಪ್ರಧಾನ. ತನಗೆ ಬೇಕಾದ ವಸ್ತುಗಳನ್ನು ತನ್ನ ಅಭಿರುಚಿಗೆ ತಕ್ಕಂತೆ ಉತ್ಪಾದಿಸಲು, ಉತ್ಪಾದನೆಯನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ. ಅವಶ್ಯ ವಸ್ತುಗಳನ್ನು ಕೊಳ್ಳಲು ಗ್ರಾಹಕ ಇಂದು ಮಾರುವ ಮಳಿಗೆಗಳಿಗೆ

ಹೋಗದೇ ತಾನಿದ್ದಲ್ಲಿಯೇ ಅವುಗಳನ್ನು ಕೊಳ್ಳುವ ಅನುಕೂಲತೆಗಳನ್ನು ಜಾಗತೀಕರಣ ಒದಗಿಸಿಕೊಟ್ಟಿದೆ. ಗ್ರಾಹಕನು ಬಳಸುವ ಅನೇಕ ವಸ್ತುಗಳ ಉತ್ಪಾದನೆಯಲ್ಲಿ ಹೊಸ ಹೊಸ ತಂತ್ರಗಳು ಬಳಕೆಯಾಗುತ್ತವೆ. ಆಕರ್ಷಕವಾದ ಅನುಕೂಲಕರ ಬೆಲೆ, ಗಾತ್ರ, ಉತ್ತಮ ಗುಣಮಟ್ಟದ ವಸ್ತುಗಳು ಗ್ರಾಹಕನನ್ನು ಆಕರ್ಷಿಸುತ್ತಿವೆ.

ಆಧುನಿಕ ಮಾಹಿತಿ ತಂತ್ರಜ್ಞಾನದಿಂದ ವಿಶ್ವದ ಅಂಚುಗಳ ಸಂಪರ್ಕ ಸುಲಭ ಸಾಧನವಾಗಿದೆ. ವಿಶ್ವದ ಯಾವುದೇ ಪ್ರದೇಶದಲ್ಲಿ ಉತ್ಪಾದಿಸಿದ ವಸ್ತು ಕೆಲವೇ ಗಂಟೆಗಳಲ್ಲಿ ಇನ್ನೊಂದು ಪ್ರದೇಶದಲ್ಲಿ ಉಪಭೋಗಕ್ಕೆ ಪೂರೈಕೆಯಾಗುತ್ತದೆ. ಇಂತಹ ವೈಜ್ಞಾನಿಕ ಮಾರುಕಟ್ಟೆಯ ನಿರ್ಮಾಣ ಜಾಗತೀಕರಣ ಪ್ರಭಾವದಿಂದಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಜಾಗತೀಕರಣದ ಅನುಕೂಲಗಳನ್ನು ನೆನೆದು ಸಂತೋಷ ಪಡುತ್ತೇವೆ. ಇನ್ನೊಂದು ರೀತಿಯಲ್ಲಿ ಇದರಿಂದಾಗುವ ಅಪಾಯ ಮತ್ತು ಭವಿತವ್ಯದ ಚಿಂತನೆಯ ಜಿಜ್ಞಾಸೆ ನಡೆದಿದೆ. ಇಂತಹ ಅಭೂತಪೂರ್ವ ವೈಜ್ಞಾನಿಕ ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಉತ್ಪಾದಕನೂ ತನ್ನ ವಸ್ತುಗಳ ಉತ್ಪಾದನೆ, ಬೆಲೆ, ಲಾಭಾಂಶ ಮತ್ತು ಮಾರುಕಟ್ಟೆ ವಿಸ್ತರಣೆಯಲ್ಲಿ ಅನೇಕ ವೈಜ್ಞಾನಿಕ ತಂತ್ರ ಮತ್ತು ಮಾರ್ಗಗಳನ್ನು ಅಳವಡಿಸಿದ್ದಾನೆ. ಇದಾವುದರ ಕಲ್ಪನೆಯೂ ಇಲ್ಲದೆಯೇ ಅನೇಕ ಬುಡಕಟ್ಟು ಸಮುದಾಯಗಳು ತಮ್ಮ ಕುಲಕಸುಬಿನಲ್ಲಿ ನಿರತರಾಗಿ ಅವುಗಳನ್ನೇ ನಂಬಿ ಬದುಕಿವೆ. ಇವರು ತಯಾರಿಸುವ ವಸ್ತುಗಳಲ್ಲಿ ದೇಶೀಯ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳು ಕಂಡುಬರುತ್ತವೆ. ಇಂತಹ ಬುಡಕಟ್ಟುಗಳು ತಯಾರಿಸುವ ವಸ್ತುಗಳ ಬದಲು ಪರ್ಯಾಯವಸ್ತುಗಳು ಜೀವತಾಳಿ ನಿಂತಿವೆ. ಪ್ಲಾಸ್ಟಿಕ್, ಪ್ಲಾಸ್ಟರ್ ಆಫ್‌ಪ್ಯಾರೀಸ್, ಸ್ಟೀಲು, ಕಬ್ಬಿಣ ಮತ್ತು ನೈಲನ್ನಿನಂತಹ ಪದಾರ್ಥಗಳು ಬುಡಕಟ್ಟಿಗರಿಗೆ ಮಾರಕವಾಗಿವೆ. ಇಂತಹ ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಮೇದ ಬುಡಕಟ್ಟು ಸಮುದಾಯ ಕೂಡ ಒಂದು.

ಮೇದರು ತಯಾರಿಸುವ ಬಿದಿರಿನ ವಸ್ತುಗಳು ನಿತ್ಯ ಜೀವನದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಮತ್ತು ವಾಣಿಜ್ಯದಂತಹ ಅನೇಕ ರಂಗಗಳಲ್ಲಿ ಮಾನವನಿಗೆ ಬಹು ಉಪಯೋಗಿಯಾಗಿವೆ. ಮಾನವನ ಹುಟ್ಟಿನಿಂದ ಅಂತಿಮ ಸಂಸ್ಕಾರದವರೆಗೆ ಈ ದೇಶದಲ್ಲಿ ಪ್ರಾದೇಶಿಕವಾಗಿ ಮೇದರು ತಯಾರಿಸಿದ ಬಿದಿರಿನ ವಸ್ತುಗಳು ಬಳಕೆಯಾಗುತ್ತಿವೆ. ಕೆಲವು ಸಮುದಾಯಗಳು ಹೊಸಜೀವಿಯೊಂದು ಈ ಜಗತ್ತಿಗೆ ಕಾಲಿಟ್ಟ ಕ್ಷಣದಿಂದಲೇ ಮೇದರು ಸಿದ್ಧಪಡಿಸುವ ಬಿದಿರ ಮೊರದಲ್ಲಿ ಮಗುವನ್ನು ಹಾಕುವುದರಿಂದ ಹಿಡಿದು ಜೀವಿಯೊಂದು ಸತ್ತು ಮಣ್ಣಲ್ಲಿ ಸೇರುವ ಕಾಲದವರೆಗೆ ಬಿದಿರಿನ ವಸ್ತುಗಳ ಬಳಕೆ ಪ್ರಧಾನವಾಗಿದೆ. ಇದು ಮೇದ ಬುಡಕಟ್ಟು ಸಮುದಾಯದ ಕುಲಕಸುಬಿನ ಅನನ್ಯತೆ. ಇಂತಹ ಅನೇಕ ವಿಧದ ಗೃಹ ಕೈಗಾರಿಕೆಗಳು ಭಾರತದ ಹಲವಾರು ಬುಡಕಟ್ಟು ಸಮುದಾಯಗಳ ಜೀವನ ಆಶ್ರಯಗಳಾಗಿವೆ. ಇಂತಹ ಸಮುದಾಯ ಮತ್ತು ಅವರ ಬುಡಕಟ್ಟು ಕಸುಬುಗಳ ಕುರಿತಾಗಿ ಅಧ್ಯಯನಗಳು ನಡೆದಿವೆ. ಹೊಸ ತಂತ್ರಜ್ಞಾನ ವಿಚಾರ, ಶಿಕ್ಷಣ ಮತ್ತು ಆಧುನಿಕತೆಯನ್ನು ಪ್ರತಿಯೊಂದು ಪಾರಂಪರಿಕ ಸಮುದಾಯಗಳೂ ಒಪ್ಪಿ ಅಳವಡಿಸಿಕೊಳ್ಳುವುದು ಅವಶ್ಯ ಮತ್ತು ಅನಿವಾರ್ಯವಾಗಿದೆ. ಏಕೆಂದರೆ ಪಾರಂಪರಿಕ ಸಮುದಾಯಗಳು ಅವುಗಳ, ಸಾಹಿತ್ಯ, ಭಾಷೆ , ಸಂಸ್ಕೃತಿ ಮತ್ತು ಚರಿತ್ರೆಯನ್ನು ಜಗತ್ತಿನ ಅನುಭವಗಳಿಗೆ ಪರಿಚಯಿಸುವುದರ ಮೂಲಕ ಅವುಗಳನ್ನು

ಪೋಷಿಸಿ ಉಳಿಸಿಕೊಳ್ಳಬಹುದಾಗಿದೆ. ಇಲ್ಲವಾದರೆ ಭಾರತದ ಬಹುರೂಪಿ ಸಂಸ್ಕೃತಿಯ ಮೂಲವಾದ ಬುಡಕಟ್ಟು ಸಮುದಾಯದ ಅನನ್ಯ ಸಂಸ್ಕೃತಿಯ ಭಾಷ್ಪೀಕರಣದ ಬಗ್ಗೆ ಭಯ ಮೂಡುತ್ತದೆ. ಈ ನಡುವೆ ಜಾಗತೀಕರಣದ ಅಬ್ಬರದಲ್ಲಿ ತನ್ನ ಮೂಲ ಮೌಲ್ಯಗಳ ನೆಲೆಗಟ್ಟಿನ ಮೇಲೆ ಅನೇಕ ಬುಡಕಟ್ಟು ಸಮುದಾಯಗಳು ನಿಂತಿವೆ. ಈ ಬುಡಕಟ್ಟು ಸಮುದಾಯಗಳ ಅಳಿವು ಉಳಿವಿನ ಚಿಂತನೆ, ಮತ್ತು ಅಧ್ಯಯನಗಳ ಆಯಾಮಗಳು ಹಲವು. ಕಾರಣ ಕರ್ನಾಟಕದ ಅನೇಕ ಬುಡಕಟ್ಟುಗಳಲ್ಲಿ ಬಹು ಮುಖ್ಯವಾಗಿ ತನ್ನ ಬುಡಕಟ್ಟು ಕುಲಕಸುಬನ್ನೇ ನಂಬಿ ಬದುಕುತ್ತಿರುವ ಮೇದ ಬುಡಕಟ್ಟು ಸಮುದಾಯದ ಸಂಸ್ಕೃತಿಯ ಜೊತೆಗೆ ಅವರ ಕುಲಕಸುಬಿನ ವಾಣಿಜ್ಯದ ಅನೇಕ ಆಯಾಮಗಳನ್ನು ಕುರಿತು ಅಧ್ಯಯನ ಮಾಡುವುದೇ ಇದರ ಉದ್ದೇಶವಾಗಿದೆ.

1.2 ಮಹತ್ವ :

ಮೇದರು ಕಾಡನ್ನೇ ನಂಬಿ ಬದುಕುವ ಒಂದು ಪ್ರಮುಖ ಬುಡಕಟ್ಟು ಸಮುದಾಯ. ಇವರ ಮೂಲ ನೆಲೆಯನ್ನು ಗಮನಿಸಲಾಗಿ, ಇವರು ಕರ್ನಾಟಕಕ್ಕೆ ಆಂಧ್ರಪ್ರದೇಶ, ಮಹಾರಾಷ್ಟ್ರ, ಹಾಗೂ ತಮಿಳುನಾಡಿನಿಂದ ಬಂದವರೆಂದು ತಿಳಿದು ಬರುತ್ತದೆ. ಇವರು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆ ಗಳಲ್ಲಿ ನೆಲೆಸಿದ್ದಾರೆ. ಕರ್ನಾಟಕದ ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಮೇದ ಸಮುದಾಯದ **80%** ಕ್ಕಿಂತ ಹೆಚ್ಚು ಜನರು ಅವರ ಮೂಲ ಕುಲಕಸುಬನ್ನೇ ನಂಬಿ ಬದುಕುತ್ತಿದ್ದಾರೆ. ತಾವು ಆಶ್ರಯಿಸಿರುವ ಕುಲಕಸುಬಿಗೆ ಬೇಕಾದ ಕಚ್ಚಾ ಪದಾರ್ಥದ ಸಮಸ್ಯೆಯಿಂದ ಅವರು ಉತ್ಪಾದಿಸಿದ ವಸ್ತುಗಳ ವಿತರಣೆ ಮತ್ತು ಮಾರಾಟದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆಧುನಿಕ ಉತ್ಪಾದನೆ ಮತ್ತು ವಿಕ್ರಯದ ತಂತ್ರಗಳ ವಿರುದ್ಧ ತಮ್ಮ ವಸ್ತುಗಳ ಮಾರುಕಟ್ಟೆ ನಿರ್ಮಾಣ ಮಾಡಬೇಕಾಗಿದೆ. ಇವರಿಗಿರುವ ಏಕೈಕ ಬಂಡವಾಳ ಈ ನಾಡಿನ ಸಂಸ್ಕೃತಿ . ಏಕೆಂದರೆ ಪ್ರಸ್ತುತ, ಸಮಾಜದಲ್ಲಿ ವಿಶೇಷವಾಗಿ ಗ್ರಾಮೀಣ ಜನತೆ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾಗೂ ವಿವಿಧ ಆಚರಣೆಗಳಲ್ಲಿ ಬಿದಿರಿನಿಂದ ತಯಾರಿಸಿದ ವಸ್ತುಗಳನ್ನು ಬಳಸುವುದು ಕಂಡುಬರುತ್ತದೆ.

ಮೇದರು ಬಿದಿರಿನಿಂದ ಸಿದ್ಧಪಡಿಸುವ ಸಾಮಗ್ರಿಗಳಿಗೆ ಪೈಪೋಟಿಯಾಗಿ ಆಧುನಿಕ ಸಮಾಜದಲ್ಲಿ ಗಾಜು, ಮತ್ತು ಲೋಹಗಳಿಂದ ತಯಾರಾದ ವಿವಿಧ ವಸ್ತುಗಳು ನಿಂತಿವೆ. ಈ ಬದಲೀ ವಸ್ತುಗಳ ವಿನ್ಯಾಸ ಬಿದಿರಿನ ಪಾರಂಪರಿಕ ವಸ್ತುಗಳ ಮಾದರಿಯಂತೆ ಇರುತ್ತದೆ. ಇದಕ್ಕೆಲ್ಲ ಔದ್ಯೋಗೀಕರಣ ಮತ್ತು ವಿಶ್ವಮಾರುಕಟ್ಟೆಯೇ ಕಾರಣ. ಇದರಿಂದ ಕುಲಕಸುಬನ್ನು ನಂಬಿ ಬದುಕುವ ಸಮುದಾಯಗಳು ಮಾರುಕಟ್ಟೆಯನ್ನು ಕಳೆದುಕೊಳ್ಳುತ್ತವೆ. ಮೇದ ಸಮುದಾಯದ ಕುಟುಂಬದ ಪುರುಷ ಮತ್ತು ಮಹಿಳೆಯರೆಲ್ಲ ಹೆಚ್ಚಾಗಿ ತಮ್ಮ ಕುಲಕಸುಬನ್ನೇ ಆಶ್ರಯಿಸಿ ಬದುಕುತ್ತಿದ್ದಾರೆ. ವಿಶೇಷವಾಗಿ ಮಹಿಳೆಯರು ಕುಲಕಸುಬಿನ ಜೊತೆಗೆ ಕೃಷಿ, ಉದ್ದಿಮೆಯ ಕೂಲಿಗೆ ಹೋಗುವುದು ವಿರಳ.

ಇವರ ಬದುಕಿಗೆ ಮೂಲ ಆಧಾರ ಬಿದಿರು. ವರ್ಷದ ಕೆಲವೇ ತಿಂಗಳಲ್ಲಿ ಮಾತ್ರ ಕಟಾವು ಮಾಡಬಹುದಾದ ಬಿದಿರು ಇವರ ಜೀವನಾಶ್ರಿತ ಕಸುಬಿಗೆ ವರ್ಷವಿಡೀ ಪೂರೈಕೆಯಾಗಬೇಕಾಗಿದೆ. ಸರ್ಕಾರದ ನಿಯಮಾನುಸಾರ ಮೇದರ ಪ್ರತಿ ಕುಟುಂಬಕ್ಕೆ ಪೂರೈಕೆಯಾಗುವ ಬಿದಿರು ಸಾಲದಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಕೆಲವು ಪ್ರದೇಶದ ಈ ಜನರು ಬಿದಿರು ಲಭ್ಯವಿರುವ ಪ್ರದೇಶಗಳಿಗೆ ತಾತ್ಕಾಲಿಕವಾಗಿ ಕೆಲವು ತಿಂಗಳುಗಳ ಕಾಲ ಅನಿವಾರ್ಯವಾಗಿ ವಲಸೆ ಹೋಗುತ್ತಾರೆ. ಕಾಡಿನ ಹತ್ತಿರದ ಗ್ರಾಮಗಳಲ್ಲಿ ಯಾರದೋ ಮನೆಯ ಗೋಡೆಯ ಚಾಟಿಗೆ, ಇಲ್ಲವೇ, ಕೊಟ್ಟಿಗೆಯಲ್ಲಿ, ಅಥವಾ ಗಿಡ-ಮರಗಳ ಕೆಳಗೆ, ಹಾಗೂ ಹಾಳುಬಿದ್ದ ಗುಡಿ-ಗುಂಡಾರಗಳಲ್ಲಿ ತಂಗುವರು . ಇವರು ಕಾಡಿನಿಂದ ತಂದ ಬಿದಿರಿನಿಂದಲೇ ಕಸುಬು ಮಾಡುತ್ತಾರೆ. ತಯಾರಿಸಿದ ವಸ್ತುಗಳನ್ನು ಮಧ್ಯವರ್ತಿಗಳಿಗೆ ಮಾರಾಟ ಮಾಡುವರು. ಕೆಲವೊಮ್ಮೆ ತಮ್ಮ ಸ್ವಸ್ಥಾನಗಳಿಗೆ ರವಾನಿಸುವರು. ಈ ಸಂದರ್ಭದಲ್ಲಿ ಇವರ ಬದುಕು ಕತ್ತಿಯ ಮೇಲೆ ಸಾಮು ಮಾಡಿದಂತೆ . ಏಕೆಂದರೆ, ಒಂದೆಡೆ ಅಧಿಕಾರಿಗಳ ಕಾಟವಾದರೆ ಇನ್ನೊಂದೆಡೆ ಕೆಲವು ಗ್ರಾಮಸ್ಥರು ಇವರ ವಲಸೆಯನ್ನು ಒಪ್ಪಿಕೊಳ್ಳದಿರುವುದು. ಅನೇಕ ಸಂದರ್ಭದಲ್ಲಿ ಇವರು ಅನ್ಯಬುಡಕಟ್ಟು ಸಮುದಾಯ ಅಥವಾ ಬುಡಕಟ್ಟೇತರ ಸಮುದಾಯಗಳ ಜೊತೆ ಮುಖಾ-ಮುಖಿಯಾಗುತ್ತಾರೆ. ಹಲವಾರು ಸಾರಿ ಇವರು ಅರಣ್ಯಾಧಿಕಾರಿಗಳಿಂದ ಬಂಧನಕ್ಕೊಳಗಾಗಿ ಶಿಕ್ಷೆಗೊಳಗಾಗಿರುವುದುಂಟು. ಇದೆಲ್ಲವನ್ನೂ ಸಹಿಸಿಕೊಂಡ ಈ ಜನ ತಮ್ಮ ಕುಲಕಸುಬನ್ನು ಮುಂದುವರಿಸುತ್ತಿದ್ದಾರೆ .

`ಇವರ ಮತ್ತೊಂದು ಸಮಸ್ಯೆ ಎಂದರೆ ತಾವು ತಯಾರಿಸಿದ ವಸ್ತುಗಳ ಮಾರಾಟಕ್ಕೆ ಮಹಿಳೆ , ಮಕ್ಕಳೂ ಹಳ್ಳಿ ಮತ್ತು ನಗರ ಪ್ರದೇಶಗಳಿಗೆ ಜಾತ್ರೆ ಮತ್ತು ಸಂತೆಯಂತಹ ಜನ ಸೇರುವಲ್ಲಿಗೆ ಹೋಗುವರು. ಏಕೆಂದರೆ ಇವರು ತಯಾರಿಸಿದ ವಸ್ತುಗಳ ಮಾರಾಟಕ್ಕೆ ಇಂದಿಗೂ ವ್ಯವಸ್ಥಿತವಾದ ಮಾರುಕಟ್ಟೆಗಳ ಕೊರತೆ ಇದೆ! ಈ ಎಲ್ಲಾ ಕಷ್ಟ ಕಾರ್ಪಣ್ಯಗಳ ನಡುವೆ ಇವರು ತಮ್ಮ ಕುಲಕಸುಬನ್ನೇ ನಂಬಿ ಬದುಕುವ ಅನನ್ಯ ಜೀವಿಗಳು. ಇಂತಹ ಸ್ಥಿತಿಯಲ್ಲಿ ಇವರ ಕಸುಬಿನಲ್ಲಿಯೂ ದೇಶೀಸಂಸ್ಕೃತಿಯ ಕೌಶಲ್ಯದ ರಕ್ಷಣೆಯ ಜೊತೆಗೆ ಈ ಸಮುದಾಯದ ಜೀವನ ಸ್ಥಿತಿಗತಿಗಳ ಕುರಿತು ಚಿಂತಿಸುವ ಅಗತ್ಯವಿದೆ. ಇವರಿಗೆ ನ್ಯಾಯಯುತ ಆವಶ್ಯಕತೆಗಳನ್ನು ಒದಗಿಸಬೇಕಾಗಿದೆ.

ಇವರ ಸಂಸ್ಕೃತಿಯ ಜೊತೆಗೆ ವಾಣಿಜ್ಯ ಕುರಿತಾದ ಅಧ್ಯಯನವೇ ಪ್ರಸ್ತುತ ಪ್ರಬಂಧದ ಉದ್ದೇಶವಾಗಿದೆ. ಇದರಿಂದ ಈ ಸಮುದಾಯದ ಕುಲಕಸುಬು, ವಾಣಿಜ್ಯ, ಆರ್ಥಿಕಸ್ಥಿತಿ, ಜೀವನ ಮಟ್ಟ ಮತ್ತು ಬದುಕಿನ ಸ್ಥಿತಿಗತಿಗಳು ಹಾಗೂ ದೇಶದ ಆರ್ಥಿಕ ಅಭಿವೃದ್ಧಿಗೆ ಈ ಸಮುದಾಯದ ಸಾಂಸ್ಕೃತಿಕ ಮತ್ತು ವಾಣಿಜ್ಯ ಕೊಡುಗೆಯನ್ನು ಗುರುತಿಸಲಾಗುವುದು. ಇದರ ಜೊತೆಗೆ ಇವರ ಅಭಿವೃದ್ಧಿಗೆ ಕುರಿತಂತೆ ಸರಕಾರದ ಯಾವುದೇ ಯೋಜನೆಗಳ ರೂಪುರೇಷಗಳಿಗೆ ಈ ಅಧ್ಯಯನವು ಸಹಕಾರಿಯಾಗಬಲ್ಲದು ಎನ್ನುವುದೇ ಇದರ ಮಹತ್ವವಾಗಿದೆ.

1.3 ಅಧ್ಯಯನದ ವಿಧಾನ:

ಮೇದ ಬುಡಕಟ್ಟು ಸಮುದಾಯದ ಅಧ್ಯಯನವನ್ನು ಎರಡು ನಿಟ್ಟನಲ್ಲಿ ಮಾಡಲಾಗಿದೆ. ಒಂದು, ಇವರ ಸಾಂಸ್ಕೃತಿಕ ಅಧ್ಯಯನವಾದರೆ, ಮತ್ತೊಂದು ವಾಣಿಜ್ಯ ಅಧ್ಯಯನ. ಮೇದರ ಸಾಂಸ್ಕೃತಿಕ ಅಧ್ಯಯನವನ್ನು ಕುರಿತಂತೆ, ಆಚರಣೆಗಳನ್ನು ಗಮನದಲ್ಲಿಟ್ಟುಕೊಂಡು ವಾರ್ಷಿಕ ಆವರ್ತನೆಗಳಾದ ಜನನದಿಂದ ಸಂಸ್ಕಾರದವರೆಗಿನ ಎಲ್ಲಾ ಆಚಾರ ಪದ್ಧತಿಗಳನ್ನು ನೇರವಾಗಿ ಪ್ರಾಥಮಿಕ ಆಕರಗಳನ್ನು ಬಳಸಿಕೊಂಡು ಛಾಯಚಿತ್ರಗಳ ಸಮೇತ ವಿಪುಲವಾಗಿ ಮಾಹಿತಿಯನ್ನು ಸಂಗ್ರಹಿಸಿ ದಾಖಲಿಸಿದೆ. ಕೆಲವು ಸಂದರ್ಭಗಳಲ್ಲಿ ವಕ್ತೃಗಳ ಮೂಲಕ ಸಾಂಸ್ಕೃತಿಕ ಮಾಹಿತಿ ವಿಷಯಗಳನ್ನು ಸಂಗ್ರಹಿಸಿ, ಅತಿ ವಿರಳವಾಗಿ ಸೆಕೆಂಡರಿ ಆಕರಗಳನ್ನು ಬಳಸಿಕೊಳ್ಳಲಾಗಿದೆ. ವಿಶೇಷವಾಗಿ ಹಬ್ಬ-ಹರಿದಿನ, ಜಾತ್ರೆ- ಉತ್ಸವ, ನಾಮಕರಣ-ತೊಟ್ಟಿಲು ಕಾರ್ಯ, ಋತುಮತಿ , ವಿವಾಹ, ಮತ್ತು ಸಂಸ್ಕಾರದ ಆಚರಣೆಗಳನ್ನು ಪ್ರತ್ಯಕ್ಷವಾಗಿ ಗಮನಿಸಿ ಮಾಹಿತಿ ಸಂಗ್ರಹಿಸಿ ದಾಖಲಿಸಿ ವಿಶ್ಲೇಷಿಸಲಾಗಿದೆ. ಇವರ ಸಾಮಾಜಿಕ ಜೀವನ ಮತ್ತು ಆರ್ಥಿಕ ಚಟುವಟಿಕೆ, ಹಾಗೂ ಸ್ಥಿತಿ-ಗತಿಗಳ ಕುರಿತಂತೆ ಮಾಹಿತಿಯನ್ನು ವಕ್ತೃಗಳಿಂದ ಧ್ವನಿ ಸುರುಳಿಗಳಲ್ಲಿ ದಾಖಲಿಸಿದೆ. ಅನೇಕ ಸಂದರ್ಭದ ಆಚರಣೆಗಳ ಸಂಪ್ರದಾಯದ ಹಾಡುಗಳನ್ನು , ನಂಬಿಕೆ, ನಿಷೇಧ ಮತ್ತು ಚಿಕಿತ್ಸೆಗಳನ್ನು ಅನುಭವಿಗಳಿಂದ ಕೇಳಿ ಧ್ವನಿಮುದ್ರಿಸಿಕೊಂಡು ಸಾದರಪಡಿಸಿದೆ. ಈ ಸಮುದಾಯದ ಮಹಾ ಪುರುಷನಾದ ಮೇದಾರ ಕೇತಯ್ಯನ ಜೀವನ ಕಥನದ 275 ನುಡಿಗಳ ಕೋಲಾಟದ ಪದವನ್ನು ದಾಖಲಿಸಿ ಕೊಳ್ಳಲಾಗಿದೆ. ಇವರ ಕುಲಕಸುಬಿಗೆ ಸಂಬಂಧಿಸಿದ ವಾಣಿಜ್ಯ ಚಟುವಟಿಕೆಗಳನ್ನು ಕುರಿತು ವಿಶೇಷ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನದಲ್ಲಿ ಬಳಸಿಕೊಂಡಿದೆ .

ಪ್ರಸ್ತುತ ಸಂದರ್ಭದಲ್ಲಿ ಭಾರತದ ಪ್ರಮುಖ ಗೃಹ ಕೈಗಾರಿಕೆಗಳಲ್ಲಿ ಒಂದಾದ ಮೇದ ಸಮುದಾಯದ ಬುಡಕಟ್ಟು ಕುಲಕಸುಬಿನ ಸ್ಥಿತಿಗತಿಗಳನ್ನು ಅವಲೋಕಿಸಲಾಗಿದೆ. ಜಾಗತೀಕರಣದ ಈ ಸಂದರ್ಭದಲ್ಲಿ ಇವರ ವಾಣಿಜ್ಯ ಸಮಸ್ಯೆಗಳನ್ನು ಮತ್ತು ಇಂತಹ ಸಾಂಪ್ರದಾಯಿಕ ಕುಲಕಸುಬಿನ ಅಳಿವು ಉಳಿವನ್ನು ಕುರಿತು ಚಿಂತನೆ ಮಾಡಿದೆ. ಮೇದ ಸಮುದಾಯದ ಆರ್ಥಿಕ, ಸಾಮಾಜಿಕ, ಹಾಗೂ ವಾಣಿಜ್ಯ ಕುರಿತಾಗಿ ವಿಶೇಷ ಪ್ರಶ್ನಾವಳಿಯ ಮೂಲಕ ಕ್ಷೇತ್ರ ಕಾರ್ಯದಲ್ಲಿ ಮಾಹಿತಿಯನ್ನು ಅಂಕಿ ಅಂಶಗಳ ಸಮೇತ ಸಂಗ್ರಹಿಸಿ ದಾಖಲಿಸಿ ವಿವರಣೆ ನೀಡಿದೆ.

ಬಳ್ಳಾರಿ ಜಿಲ್ಲೆಯಾದ್ಯಂತ ಮೇದ ಸಮುದಾಯದ ಪ್ರತಿ ಕುಟುಂಬದ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಕ್ಷೇತ್ರಕಾರ್ಯ ಮಾಹಿತಿ ಪಟ್ಟಿಕೆಯಲ್ಲಿ ದಾಖಲಿಸಿ ಕೋಷ್ಟಕಗಳ ಮೂಲಕ ಪ್ರಸ್ತುತ ಪಡಿಸಿದೆ.ಅಗತ್ಯವೆನಿಸಿದ ಕಡೆಗಳಲ್ಲಿ ಹಿಂದಿನ ಅಧ್ಯಯನಗಳನ್ನು ಉಲ್ಲೇಖಿಸಲಾಗಿದೆ. ನನ್ನ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಪ್ರತ್ಯಕ್ಷ ಅನುಭವಗಳನ್ನು ಇಲ್ಲಿ ಮಂಡಿಸಿದ್ದೇನೆ. ಸಾಧ್ಯವಾದ ಕಡೆಗಳಲ್ಲಿ ವಕ್ತೃಗಳ ಹೆಸರುಗಳನ್ನು ಸೂಚಿಸಿರುವೆ. ಮಾಹಿತಿ ಸಂಗ್ರಹಣೆಗೆ ಪ್ರಾಥಮಿಕ ಮಾಹಿತಿ ಸಂಗ್ರಹಣೆಯ ವಿಧಾನವನ್ನು ಬಳಸಿರುವೆ. ಈ ಕಾರಣದಿಂದಾಗಿ ಪ್ರಸ್ತುತ

ಮಹಾಪ್ರಬಂಧದಲ್ಲಿ ಅಡಿಟಿಪ್ಪಣಿಗಳು ವಿರಳವಾಗಿವೆ. ಬಳ್ಳಾರಿ ಜಿಲ್ಲೆಯ ಮೇದ ಬುಡಕಟ್ಟು ಸಮುದಾಯದ ಸಮಗ್ರ ಅಂಕಿ ಅಂಶಗಳ ಸಂಗ್ರಹಣೆ ಮತ್ತು ಟ್ಯಾಬುಲೆಷನ್ ಮಾಡಿದೆ. ಅವಶ್ಯಾನುಸಾರ ಕೋಷ್ಟಕಗಳನ್ನು ವಿವಿಧ ಉದ್ದೇಶಕ್ಕಾಗಿ ಮತ್ತು ವಿವಿಧ ಆಯಾಮಗಳಲ್ಲಿ ರಚಿಸಿ ವಿವರಣೆ ನೀಡಿರುವೆ. ಇದರಿಂದ ಮೇದ ಸಮುದಾಯದ ಸಾಂಸ್ಕೃತಿಕ ಮಾಹಿತಿ ಮತ್ತು ಬಳ್ಳಾರಿ ಜಿಲ್ಲೆಯ ಮೇದ ಸಮುದಾಯದ ಸಮಗ್ರ ಗಣತಿಯ ಅಂಕಿ ಅಂಶಗಳ ಮಾಹಿತಿ ಇಲ್ಲಿ ದೊರೆಯುತ್ತದೆ. ಕಾಡಿನ ಉತ್ಪನ್ನವಾದ ಬಿದಿರನ್ನು ಆಶ್ರಯಿಸಿ ಬದುಕುವ ಮೇದ ಸಮುದಾಯದ ಸಮಸ್ಯೆಗಳು ಹಲವು. ವಿಶೇಷವಾಗಿ ಬಳ್ಳಾರಿ ಜಿಲ್ಲೆಯಂತಹ ಬಯಲು ಸೀಮೆಯ ಪ್ರದೇಶದಲ್ಲಿ ಈ ಸಮುದಾಯದ ಜೀವನದ ಪ್ರತ್ಯಕ್ಷ ಚಿತ್ರಣವನ್ನು ಇಲ್ಲಿ ನಾನು ನನ್ನ ಅನುಭವಕ್ಕೆ ದೊರೆತ ಮಾಹಿತಿಗಳ ಮೂಲಕ ನೀಡಿದ್ದೇನೆ.

1.4 ಅಧ್ಯಯನದ ವ್ಯಾಪ್ತಿ :

ಮೇದ ಸಮುದಾಯವನ್ನು ಕುರಿತ ನನ್ನ ಅಧ್ಯಯನದ ಭೌಗೋಳಿಕ ವ್ಯಾಪ್ತಿಯನ್ನು ಬಳ್ಳಾರಿ ಜಿಲ್ಲೆಗೆ ಸೀಮಿತಗೊಳಿಸಲಾಗಿದೆ. ಬಳ್ಳಾರಿ ಜಿಲ್ಲೆಯಾಚೆಯ ಮೇದ ಸಮುದಾಯದ ಕೆಲವು ಸಾಂಸ್ಕೃತಿಕ ಅಂಶಗಳನ್ನು ಸಹ ಗಮನಿಸಿದೆ. ಮೇದರ ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಕರ್ನಾಟಕದ ಮೇದರಿಗೂ ಮತ್ತು ಆಂಧ್ರ ಮಹಾರಾಷ್ಟ್ರ , ತಮಿಳುನಾಡಿನ ಮೇದರಿಗೂ ಆಚರಣೆಯಲ್ಲಿ ಕೆಲವು ವಿಭಿನ್ನತೆಗಳು ಕಂಡುಬರುವುದು ಸಹಜವೆಂದು ಹಿಂದಿನ ಅಧ್ಯಯನಕಾರರ ಅಭಿಪ್ರಾಯವಾಗಿದೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಮೇದರ ಆಚರಣೆಗಳನ್ನು ಗಮನಿಸುವಾಗ ಬಳ್ಳಾರಿ, ಗುಲ್ಬರ್ಗ, ರಾಯಚೂರು, ಕೊಪ್ಪಳ, ಧಾರವಾಡ, ಮತ್ತು ದಾವಣಗೆರೆ ಜಿಲ್ಲೆಯ ಅಂಶಗಳನ್ನು ಗಮನಿಸುತ್ತಾ ಬಳ್ಳಾರಿ ಜಿಲ್ಲೆಯ ಆಚರಣೆಗಳನ್ನು ಕೇಂದ್ರವಾಗಿರಿಸಿಕೊಂಡು ಇಲ್ಲಿ ಹೇಳಿದ್ದೇನೆ. ಮೇದರ ಜನಗಣತಿ ಮತ್ತು ಮೇದರ ವೃತ್ತಿ , ಕಸುಬು, ಆರ್ಥಿಕ ಸ್ಥಿತಿ-ಗತಿ, ಶಿಕ್ಷಣ, ಹೊಂದಿರುವ ಸೌಲಭ್ಯಗಳು ಮತ್ತು ಕೊರತೆಗಳನ್ನು ಕುರಿತ ಅಧ್ಯಯನವನ್ನು ಬಳ್ಳಾರಿ ಜಿಲ್ಲೆಗೆ ಮಿತಗೊಳಿಸಲಾಗಿದೆ. ಮೇದರು ಕರ್ನಾಟಕ ರಾಜ್ಯದ ಮೈಸೂರು, ಮಂಡ್ಯ, ಹಾಸನ ಮತ್ತು ಇತರೆ ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಒತ್ತಾಗಿ ಬೀಡುಬಿಟ್ಟಿದ್ದಾರೆ. ಇವರು ಇಂದಿಗೂ ಸಹ ಅಲೆಮಾರಿಗಳಾಗಿರುವರು. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕಸುಬಿನ ಮೂಲಕ ಬಿದಿರಿನ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡಲು ತಮ್ಮ ಸೀಮಿತ ಗಡಿಯನ್ನು ದಾಟಿ ತಿಂಗಳುಗಳ ಕಾಲ ವಲಸೆ ಹೋಗುತ್ತಾರೆ. ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶದ ಮೇದರು ಸೊಂಡೂರು ಹಾಗೂ ಹೊಸಪೇಟೆ ವ್ಯಾಪ್ತಿಯ ಗುಡ್ಡದ ಪಕ್ಕದ ಗ್ರಾಮಗಳಿಗೆ ವಲಸೆ ಹೋಗುವರು. ಕೆಲವು ಕುಟುಂಬದವರು ತಾತ್ಕಾಲಿಕವಾಗಿ ಕುಲಕಸುಬು ಮಾಡಲು ಮತ್ತು ಡಿಪೋಗಳನ್ನು ನಡೆಸಲು ಪಕ್ಕದ ಜಿಲ್ಲೆ ಮತ್ತು ರಾಜ್ಯಗಳಿಗೆ ವಲಸೆ ಹೋಗಿರುವುದುಂಟು. ಮತ್ತೆ ಕೆಲವರು ಅಲೆಮಾರಿಗಳಾಗಿ ವರ್ಷದ ಕೆಲಕಾಲ ಒಂದು ಕಡೆ ನೆಲೆಸಿ ಜೀವಿಸಿದರೆ ಮತ್ತೆ ಕೆಲಕಾಲ ಮತ್ತೊಂದೆಡೆ ನೆಲೆಸಿ ಜೀವಿಸುತ್ತಿರುವುದು ಕಂಡುಬರುತ್ತದೆ. ಮೇದರ ವಲಸೆಯ ಬದುಕನ್ನು ಛಾಯ ಚಿತ್ರಗಳ

ಸಮೇತ ದಾಖಲಿಸಿ ಹೇಳಲಾಗಿದೆ. ಹೆಚ್ಚಿನ ಮಾಹಿತಿ ಸಂಗ್ರಹಣೆಗಾಗಿ ಅಧ್ಯಯನದ ವ್ಯಾಪ್ತಿಯ ಭೌಗೋಳಿಕ ಗಡಿದಾಟಿರುವುದು ಇಲ್ಲಿ ಅನಿವಾರ್ಯವಾಗಿದೆ. ಇದರಿಂದ ಅಗತ್ಯವಿದ್ದಲ್ಲಿ ತೌಲನಿಕ ವಿಶ್ಲೇಷಣೆ ಮಾಡಲು ಸಹಕಾರಿಯಾಗಿದೆ. ಅಧ್ಯಯನಕ್ಕೆ ಯಾವುದೇ ಪ್ರತ್ಯಕ್ಷ ಮತ್ತು ಪರೋಕ್ಷವಾದ ಧಕ್ಕೆ ಆಗಿಲ್ಲ ವೆಂದು ತಿಳಿಯಲಾಗಿದೆ. ಅರೆಅಲೆಮಾರಿಗಳಾದ ಇವರ ಜನಗಣತಿಯ ಸಂದರ್ಭದಲ್ಲಿ ಕೆಲವೊಮ್ಮೆ ಮೂರನೆಯ ವ್ಯಕ್ತಿಯಿಂದ ಮಾಹಿತಿಯನ್ನು ಸಂಗ್ರಹಿಸುವಾಗ ಪುನರಾವರ್ತನೆ ಅಥವಾ ಮರುದಾಖಾಲಾತಿಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ಸಾಧ್ಯವಾಗಿಲ್ಲ.

1.5 ಜನಾಂಗಿಕ ಮೂಲ ಮತ್ತು ಬುಡಕಟ್ಟುಗಳ ಸ್ಥಿತಿಗತಿ:

ಮಾನವನು ಪ್ರಸ್ತುತ ಜಗತ್ತಿನಲ್ಲಿ ತಾನು ಬದುಕಲು ಅನುಕೂಲಕರವಾದ ಪರಿಸರವಿರುವ ಎಲ್ಲೆಡೆಯಲ್ಲಿಯೂ ನೆಲೆಸಿರುವನು. ಹೆಚ್ಚುಕಡಿಮೆ ಇಡೀ ಭೂಮಂಡಲದ ಪ್ರತಿಯೊಂದು ಖಂಡ ಪ್ರದೇಶದಲ್ಲಿಯೂ ದ್ವೀಪ ಘಟ್ಟಗಳಲ್ಲಿಯೂ ಬೀಡುಬಿಟ್ಟಿದ್ದಾನೆ. ಇದಕ್ಕೆ ಸಾಲದೆಂಬಂತೆ ಸಾಗರಗಳ ಮೇಲೆ ಮತ್ತು ತಳದಲ್ಲಿ, ಭೂಮಿಯ ಒಡಲಿನಲ್ಲಿ ಅಲ್ಲದೇ ಚಂದ್ರ ಮಂಗಳರ ಅಂಗಳದಲ್ಲಿ ನೆಲೆಸಲು ಹುನ್ನಾರ ನಡೆಸಿದ್ದಾನೆ. ಭವಿತವ್ಯದಲ್ಲಿ ತನ್ನ ನೆಲೆಗೆ ಯೋಗ್ಯವಾದ ಬಾಹ್ಯಾಕಾಶದ ಲೋಕಗಳ ಶೋಧನೆ ನಡೆಸಿರುವನು. ಈ ನಿಟ್ಟಿನಲ್ಲಿ ಅಸಾಧ್ಯವಾದ ಸಾಹಸವನ್ನು ಮೆರೆಸಲು ಹೊರಟಿರುವನು. ಆಧುನಿಕ ಸಂಶೋಧನೆಗಳ ಮೂಲಕ ವಿಶಿಷ್ಟವಾದ ಜೀವನ ನಡೆಸುವುದರ ಕುರಿತು ಯೋಚಿಸಿ ಯೋಜನೆಗಳನ್ನು ಹಾಕಿರುವನು. ಈ ನಿಟ್ಟಿಗೆ ಬೆಳೆದು ನಿಂತ ಮಾನವ ಜೀವಿಯು ಆದಿಮ ಕಾಲದಿಂದ ತನ್ನ ಅಸ್ತಿತ್ವಕ್ಕಾಗಿ ನಿರಂತರವಾಗಿ ಹೋರಾಡುತ್ತಾ ಬಂದ. ಮಾನವ ಜೀವಿಯು ಜೀವಜಗತ್ತಿನ ಇತರೆಪ್ರಾಣಿಗಳಿಗಿಂತ ಭಿನ್ನ ಎಂದು ಸಾಬೀತು ಪಡಿಸಿರುವನು. ತಾನು ತನ್ನ ಮನುಕುಲದ ಪಾರಂಪರಿಕ ಮೌಲ್ಯಗಳನ್ನು ಕಾಪಾಡಿಕೊಂಡು ಬಂದಿರುವುದು ಕಂಡುಬರುತ್ತದೆ. ಮಾನವ ಜನಾಂಗದ ಯಾವುದೇ ಬುಡಕಟ್ಟು ಸಮುದಾಯದ ಜನಾಂಗಿಕ ಅಧ್ಯಯನದ ಸಂದರ್ಭದಲ್ಲಿ ಜನಾಂಗಿಕ ಮೂಲವನ್ನು ಕುರಿತಾಗಿ ಯೋಚಿಸುವುದು ಯೋಗ್ಯ. ಕಾರಣ ಮೇದ ಬುಡಕಟ್ಟು ಸಮುದಾಯದ ಸ್ಥಿತಿಗತಿಗಳನ್ನು ಕುರಿತು ಅಧ್ಯಯನ ಮಾಡುವ ಈ ಸಂದರ್ಭದಲ್ಲಿ ಈ ದೇಶದ ಜನಾಂಗದ ಮೂಲವನ್ನು ಕುರಿತು ಇಲ್ಲಿ ಪ್ರಸ್ತಾಪಿಸುತ್ತಿರುವೆ .

1.5.1 ಜನಾಂಗೀಯ ಮೂಲ:

"ಪಂಪಾದಿ ಮಹಾ ಕವಿಗಳು ಮಾನವ ಜಾತಿ ಒಂದೇ ತಾನೇ, ಎಂದು ಉದ್ಗರಿಸಿದ್ದಾರೆ ದಿಟ. ಹಾಗೆ ನೋಡಿದರೆ ಆದಿಮಾನವರಿಂದ ಹಿಡಿದು ಅತ್ಯಾಧುನಿಕರ ವರೆಗೆ ಸಮಸ್ತರ ಜೀವನೋದ್ದೇಶ, ಆದರ್ಶಗಳಲ್ಲಿ ಒಂದು ಬಗೆಯ ಏಕ ಸೂತ್ರತೆ, ಏಕ ಗುರಿ ಕಂಡುಬರುತ್ತದೆ. ಅದು ಮಾನವರ ಸಂಸ್ಕೃತಿ ಸಾಮಾನ್ಯದ ವಿಷಯ. ಆದರೆ ಭೌತಿಕವಾಗಿ ಮಾನವರನ್ನು ಇತರೆ ವರ್ಗದ ಪ್ರಾಣಿಗೆ ಹೋಲಿಸಿದಾಗ,ಜನಾಂಗಿಕವಾಗಿ ಅಸಮಾನ್ಯ ವೈವಿಧ್ಯ ಹಾಗೂ

ವಿಭಿನ್ನತೆಗಳನ್ನು ಇವರು ಪ್ರಕಟಿಸುವುದು ಕಂಡುಬರುತ್ತದೆ. ನಿದರ್ಶನಕ್ಕೆ ಕೆಲವು ಬುಡಕಟ್ಟುಗಳ ಅಥವಾ ದೇಶಗಳ ಜನರನ್ನು ನೋಡಿದರೆ ಮೇಲುನೋಟಕ್ಕೆ ಪ್ರತಿಯೊಬ್ಬನ ಮೈ ಬಣ್ಣವು ಚಾಕುಲೇಟ್ ಕಂದು ಬಣ್ಣದ್ದಾಗಿ ತೋರಿದರೆ, ಇನ್ನೂ ಕೆಲವರಲ್ಲಿ ಅದು ಮಾಸಲುಗೆಂಪಾಗಿರುತ್ತದೆ. "[1] ಹೀಗೆ ಮೈಬಣ್ಣ ಮಾತ್ರದಲ್ಲಿ ಅಲ್ಲದೇ ತಲೆಗೂದಲು, ದೇಹದ ಮೈಮಾಟ, ಮುಖಲಕ್ಷಣ ಪರಸ್ಪರರಲ್ಲಿ ಲಕ್ಷಣ, ವಿಲಕ್ಷಣದಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಒಂದು ನಿರ್ದಿಷ್ಟ ಸಮುದಾಯವನ್ನು ಕುರಿತು ಅಧ್ಯಯನ ಮಾಡುವಾಗ ಜನಾಂಗ ಎಂಬ ಶಬ್ದವನ್ನು **Race** (ರೇಸ್)ಎಂಬ ಇಂಗ್ಲೀಷಿನ ಪದವನ್ನು ಸಂವಾದಿಯಾಗಿ ಬಳಸಿದರು. ಜನಾಂಗ ಎಂದರೆ, ಒಂದು ನಿರ್ದಿಷ್ಟ ಪ್ರಾಣಿ ವರ್ಗಕ್ಕೆ ಸಂಬಂಧಿಸಿದ ಜೀವಶಾಸ್ತ್ರೀಯ ಪರಿಕಲ್ಪನೆ. ಒಂದು ನಿರ್ದಿಷ್ಟ ಪ್ರಾಣಿ ವರ್ಗವೆಂದರೆ, ತನ್ನ ವಂಶಾಭಿವೃದ್ಧಿಗೋಸ್ಕರ ತನ್ನ ವರ್ಗದೊಳಗೆ ಮಾತ್ರ ಸಮಯಾನುಸಾರ ಲೈಂಗಿಕ ಕ್ರಿಯೆಗೆ ಒಳಪಡುವಂತಹ ಪ್ರಾಣಿ ಸಮುದಾಯ. ಇಂತಹ ಪ್ರಾಣಿಸಮುದಾಯ ತನ್ನ ವರ್ಗವಲ್ಲದ ಅನ್ಯವರ್ಗದ ಪ್ರಾಣಿಗಳೊಂದಿಗೆ ಲೈಂಗಿಕವಾಗಿ ಬೆರೆಯದಿರುವ ಪ್ರಾಣಿ ಸಮುದಾಯವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ರೇಸ್ ಶಬ್ದಕ್ಕೆ ಹಲವು ಪ್ರಕಾರದ ಓಟದ ಸ್ಪರ್ಧೆ, ಎಂಬ ಸಾಮಾನ್ಯ ರೂಢಾರ್ಥ ಇರುವಂತೆ ಮನುಕುಲಕ್ಕೆ ಸಂಬಂಧಿಸಿದ ಹಾಗೆ (ರೇಸ್) ಜನಾಂಗ ಎಂದರೆ ಸಾಮಾನ್ಯವಾದ ಪೀಳಿಗೆ, ರಕ್ತಬಾಂಧವ್ಯ, ಅಥವಾ ಪರಂಪರೆಯನ್ನುಳ್ಳ ಜನಸಮುದಾಯ ಇತ್ಯಾದಿ ಅರ್ಥವೂ ಇದೆ. ಮಾನವಶಾಸ್ತ್ರ ಜ್ಞರ ಪ್ರಕಾರ ಪೀಳಿಗೆಯಿಂದ ಪೀಳಿಗೆಗೆ ಆನುವಂಶಿಕವಾಗಿ ಸಾಗುವ, ಹೆಚ್ಚು ಕಡಿಮೆ ವಿಶಿಷ್ಟವೆನ್ನಬಹುದಾದಂತಹ ಕೆಲವು ಭೌತಿಕ ಲಕ್ಷಣಗಳನ್ನುಳ್ಳ ಮಾನವ ಜಾತಿಯ ಒಂದು ಉಪ ವರ್ಗವೇ ಒಂದು ಜನಾಂಗ ಎಂಬ ವ್ಯಾಖ್ಯಾನ ಕೂಡ ಇದೆ. ಮತ್ತು ಮಾನವ ಪೀಳಿಗೆಗೆ ಸೇರಿದ ಬುಡಕಟ್ಟುಗಳ ಅಥವಾ ಜನಸಮುದಾಯಗಳ ಗುಂಪು ಈ ಬಗೆಯ ಹಲವು ವ್ಯಾಖ್ಯಾನಗಳಿವೆ. ಕನ್ನಡ-ಕನ್ನಡ ನಿಘಂಟುವಿನಲ್ಲಿ , ಜನಾಂಗ, ಶಬ್ದಕ್ಕೆ ಅರ್ಥ ಕೊಟ್ಟು ಒಂದು ದೇಶಕ್ಕೆ ಅಥವಾ ಪಂಗಡಕ್ಕೆ ಸೇರಿದ ಜನವರ್ಗ, ಜನತೆ, ಬುಡಕಟ್ಟು, ಪೀಳಿಗೆ, ತಲೆಮಾರು,[2] ಎಂದು ಹೇಳಲಾಗಿದೆ. ಹೀಗೆ ಜನಾಂಗವನ್ನು ಕುರಿತಂತೆ ಮಾನವ ಶಾಸ್ತ್ರಜ್ಞರು, ಜೀವಶಾಸ್ತ್ರಜ್ಞರು, ಸಮಾಜ ಶಾಸ್ತ್ರಜ್ಞರು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ.

ಜನಾಂಗದ ಅಧ್ಯಯನವು ಜನಾಂಗದ ವರ್ಗೀಕರಣದ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಆರಂಭವಾಗುತ್ತದೆ. **18ನೇ** ಶತಮಾನದಲ್ಲಿ ಲಿನ್ನೇಯಿಸ್ ಅವರ ವರ್ಗೀಕರಣದ ಪ್ರಕಾರ ಮಾನವ ಜನಾಂಗವನ್ನು ವರ್ಣ, ವೈವಿಧ್ಯತೆಯ ಮೇಲೆ ಐರೋಪ್ಯದ ಶ್ವೇತರು, ಏಷ್ಯಾದ ಪೀತರು, ಅಮೇರಿಕದ ಗೌರರು ಮತ್ತು ಆಫ್ರಿಕಾದ ಕೃಷ್ಣರು ಎಂದು ವರ್ಗೀಕರಿಸಿದರು. ಇವರ ಪ್ರಕಾರ ಭಾರತೀಯರು ಏಷ್ಯಾದ ಪೀತರ ಗುಂಪಿಗೆ ಸೇರುತ್ತಾರೆ.

ಇತ್ತೀಚಿಗೆ ಪ್ರೊಫೆಸರ್ ಕೂನ್ ಅವರು ವಾಸ್ತವವಾಗಿ ಜನಾಂಗ ವರ್ಗೀಕರಣವನ್ನು ಐದು ಗುಂಪುಗಳಾಗಿ ವಿಂಗಡಿಸಿದರು. ಅವೆಂದರೆ, ಕಕೇಷಿಯ ಜನಾಂಗ, ಮಂಗೋಲ ಜನಾಂಗ, ಆಸ್ಟ್ರೇಲಿಯ ಜನಾಂಗ, ಕಾಂಗೋ

ಜನಾಂಗ ಹಾಗೂ ಕಪ್ಪೋ ಜನಾಂಗ, ಎಂದು ಪಂಚ ಜನಾಂಗಿಕ ವರ್ಗಗಳಾಗಿ ವಿಂಗಡಿಸಿದರು. ಭಾರತದ ಪ್ರಸ್ತುತ ಪ್ರಾಚೀನ ಕಾಲದಿಂದ ಭರತ ಭೂಖಂಡದಲ್ಲಿ ನೆಲೆಸಿದ ಜನಾಂಗ ಕಕೇಷಿಯ ಜನಾಂಗ(ಕಕೆಷಾಯ್ಡ್) ಎಂದು ಗುರುತಿಸಲಾಗುವುದು. ಕಕೇಷಿಯ ಜನಾಂಗದ ಲಕ್ಷಣ ಇವರ ವರ್ಗೀಕರಣದ ಪ್ರಕಾರ ಹೀಗಿದೆ. ಪಾಕಿಸ್ತಾನ-ಇಂಡಿಯಾ ಪ್ರದೇಶಗಳ ಜನರ ಮೈಬಣ್ಣ ಬರುಬರುತ್ತಾ ಗಾಢವಾಗುತ್ತಾ ಸಾಗುತ್ತದೆ. ಬಂಗಾಳದ ದಕ್ಷಿಣಭಾರತ ಪ್ರಾಂತಗಳಲ್ಲಿ ಮೈಬಣ್ಣ ಹೆಚ್ಚು ಕಡಿಮೆ ಕಪ್ಪು ಎಂಬಷ್ಟರ ಮಟ್ಟಿಗೆ ಗಾಢವಾಗಿರುತ್ತದೆ. ಕಕೇಷಿಯರ ಕಣ್ಣುಗುಡ್ಡೆಯ ಬಣ್ಣ ನೀಲದಿಂದ ಕಡುಕಂದು ಬಣ್ಣದ್ದಾಗಿರುತ್ತವೆ. ಬಹು ಮಟ್ಟಿಗೆ ನೀಳ ಅಥವಾ ಅಲೆಯಾಕಾರದ ಕೂದಲುಗಳು, ಮುಖದ ಮಾಟವು ಕೋಲುಮುಖದಿಂದ ಅಗಲ ಮಾಟದವರೆಗೆ ವಿವಿಧವಾಗಿರುತ್ತವೆ. ನಾಸಿಕವು, ಗಿಳಿಮೂಗಿನಿಂದ ಅಗಲ ಗಿಡ್ಡನಾಸಿಕದವರೆಗೆ ವ್ಯತ್ಯಾಸ ಹೊಂದುತ್ತದೆ. ತೆಳುವಾದ ತುಟಿಯವರು ಇವರಲ್ಲಿ ವಿರಳ. ಉಬ್ಬಿಕೊಂಡ ಗಲ್ಲದ ಮೂಳೆಗಳು ಸಹ ಕಡಿಮೆ. ಸಣ್ಣ ಗಾತ್ರದಿಂದ ಮಧ್ಯಮ ಗಾತ್ರದ ಹಲ್ಲುಗಳು ಇವರದು. ಬೊಕ್ಕ ತಲೆಯ ಗಂಡಸರು ಸಾಮಾನ್ಯ. ಆದರೆ, ಗಂಡಸರಲ್ಲಿ ಗಡ್ಡ ಹಾಗೂ ಶರೀರ ರೋಮಗಳು ಧಾರಾಳವಾಗಿದ್ದು ತಲೆಯ ಕೂದಲು ಬೇಗನೆ ನೆರೆಯುತ್ತವೆ. ಇಂತಹ ಲಕ್ಷಣಗಳು ಭಾರತಿಯರಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಅಧ್ಯಯನದ ಬುಡಕಟ್ಟು ಸಮುದಾಯವಾದ ಮೇದರಲ್ಲಿಯೂ ಈ ಕಕೇಷಿಯ ಲಕ್ಷಣಗಳು ಕಾಣಸುತ್ತವೆ.

1.5.2 ಭಾರತದ ಬುಡಕಟ್ಟುಗಳು :

ಭಾರತದ ಬುಡಕಟ್ಟುಗಳ ಅಧ್ಯಯನದ ವಿಧಾನವು ಅಧ್ಯಯನದ ಉದ್ದೇಶದ ಆಧಾರದ ಮೇಲೆ ರೂಪ ಗೊಳ್ಳುತ್ತದೆ.ಭಾರತದ ಬುಡಕಟ್ಟುಗಳ ಬಗ್ಗೆ ಹೇಳುವ ಈ ಸಂದರ್ಭದಲ್ಲಿ ಮೊದಲು ಬುಡಕಟ್ಟುಗಳು ಎಂದರೆ ಯಾರು? ಯಾರನ್ನು ಬುಡಕಟ್ಟುಗಳು ಎಂದು ಕರೆಯಾಲಾಗುತ್ತದೆ? ಈ ಪ್ರಶ್ನೆಗಳಿಗೆ ಉತ್ತರ ಅಷ್ಟೊಂದು ಸುಲಭವಾಗಿ ಕಂಡುಕೊಳ್ಳಲು ಸಾಧ್ಯವಿಲ್ಲ ಎನಿಸುತ್ತದೆ. ಏಕೆಂದರೆ ಸರಕಾರವು ತನ್ನದೇ ಆದ ಅಳತೆಗೋಲಿನ ಮೂಲಕ ಅಳತೆಮಾಡಿ ತನ್ನ ಅಧಿಕೃತ ಪಟ್ಟಿಯಲ್ಲಿ ಸೇರಿಸಿಕೊಂಡ ಸಮುದಾಯಗಳು ಮಾತ್ರ ಬುಡಕಟ್ಟುಗಳಂತೂ ಅಲ್ಲ. ವೈಜ್ಞಾನಿಕ ಯುಗದ ಆಧುನಿಕ ಮಾನವ ಹಿಂದೊಂದು ಕಾಲದಲ್ಲಿ ಕಾಡುವಾಸಿಯಂತೂ ಹೌದು. ಅಲ್ಲಿಂದ ಇಲ್ಲಿಯವರೆಗಿನ ಈ ಯಾತ್ರೆಯಲ್ಲಿ ಕೆಲವರ ಜೀವನಕ್ರಮ, ಆಚಾರ, ವಿಚಾರ, ಸಂಪ್ರದಾಯಗಳಲ್ಲಿ, ಕೆಲವು ಮೂಲತನವನ್ನು ಹೊಂದಿದ್ದರೂ ಹೆಚ್ಚಾಗಿ ಹೊಸತನದ ಅಳವಡಿಕೆಗಳು ಕಂಡುಬರುತ್ತವೆ. ಮತ್ತೆ ಕೆಲವರಲ್ಲಿ ಮೂಲತನದ ಗಟ್ಟಿತನ ಹಾಗೆಯೇ ಉಳಿದುಕೊಂಡು ಬಂದಿದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಬುಡಕಟ್ಟು ಯಾರೆಂದು ಗುರುತಿಸಲು ಸರಕಾರದ ಮಾನದಂಡಕ್ಕಿಂತ ಈ ಕುರಿತಾಗಿ ವ್ಯಾಖ್ಯೆ ಕೊಡುವ ವಿದ್ವಾಂಸರ ಹೇಳಿಕೆಗಳು ಇಲ್ಲಿ ಮುಖ್ಯವಾಗುತ್ತವೆ.

ಈ ಕುರಿತು ಡಾ.ಹಿ.ಚಿ.ಬೋರಲಿಂಗಯ್ಯ ಅವರು ಹೀಗೆ ಹೇಳುತ್ತಾರೆ "ಇತ್ತೀಚಿನ ನಾಗರೀಕ ಹಂತದಲ್ಲಿರುವ ಅನೇಕ ಸಮುದಾಯಗಳು ಕೂಡ ಒಂದುಕಾಲದ ಬುಡಕಟ್ಟುಗಳೇ ಎನ್ನುವುದರಲ್ಲಿ ಸಂಶಯವಿಲ್ಲ. ಜಗತ್ತಿನ ಬಹುತೇಕ ಜನವರ್ಗಗಳಲ್ಲಿ ಇಂದಿಗೂ ಬುಡಕಟ್ಟಿನ ಅನೇಕ ರೀತಿಯ ಪಳೆಯುಳಿಕೆಗಳು ಕಂಡುಬರುತ್ತಿವೆ. ಹಾಗೆಂದು ಇವತ್ತಿನ ಸ್ಥಿತಿಯಲ್ಲಿ ಎಲ್ಲರೂ ಬುಡಕಟ್ಟುಗಳೇ ಎಂದು ತೀರ್ಮಾನಿಸುವ ಹಾಗೂ ಇಲ್ಲ. ಹಾಗಾದರೆ ನಿಜವಾದ ಬುಡಕಟ್ಟು ಯಾವುದು? ಯಾವುದೇ ಒಂದು ಪ್ರದೇಶದಲ್ಲಿ ತಮ್ಮದೇ ಆದ ವಿಶಿಷ್ಟ ಜೀವನ ಪದ್ಧತಿ ರೂಪಿಸಿಕೊಂಡು, ತಮ್ಮದೇ ಆದ ಪರಂಪರೆಯಲ್ಲಿ ನಿರ್ದಿಷ್ಟ ಜ್ಞಾನಶಾಖೆಗಳನ್ನು ಬೆಳೆಸಿಕೊಂಡು, ಸಾಮಾಜಿಕ ಪದ್ಧತಿಗಳನ್ನು ವಿಶಿಷ್ಟವಾಗಿ ಮತ್ತು ಅನನ್ಯವಾಗಿ ಅನುಸರಿಸುತ್ತಾ ಬರುತ್ತಿರುವ ಜನಸಮುದಾಯಕ್ಕೆ ಬುಡಕಟ್ಟು ಅನ್ನಬಹುದು. ಇವರು ಅರಣ್ಯದಲ್ಲೇ ಬದುಕಬೇಕು ಎಂದೇನಿಲ್ಲ. ಆದ್ದರಿಂದ ಬುಡಕಟ್ಟು ಎಂದರೆ ಒಂದು ಸಮಾನವಾದ ವಿಶಿಷ್ಟಾಂಶಗಳನ್ನು ಪಡೆದ ಒಂದು ಸಮುದಾಯ ಎಂದು ನಾವು ಅರ್ಥಮಾಡಿಕೊಳ್ಳಬೇಕು. ಉಡಿಗೆ, ತೊಡಿಗೆ, ಊಟ, ಉಪಚಾರ, ಆರಾಧನೆ ಸಂಪ್ರದಾಯ, ಭಾಷೆ ಸಾಹಿತ್ಯ, ನ್ಯಾಯ ಪದ್ಧತಿ, ನಿಷೇಧ ರೂಪಗಳು, ರೂಪಿಸಿಕೊಂಡ ಪರಂಪರೆ ಹಾಗೂ ನಂಬಿಕೆ ಇತ್ಯಾದಿಯಾಗಿ ಎಲ್ಲವೂ ಯಾವುದೇ ಮತ್ತೊಂದು ಸಮಾಜ ಅಥವಾ ಸಮುದಾಯಕ್ಕಿಂತ ಭಿನ್ನವಾಗಿ ಒಂದು ಬುಡಕಟ್ಟಿನಲ್ಲಿ ಕಾಣಿಸಿಕೊಳ್ಳುತ್ತವೆ. ಭಿನ್ನತೆ ಅಷ್ಟೇ ಅಲ್ಲ, ಅವರ ಆಚಾರ, ವಿಚಾರ, ಸಂಪ್ರದಾಯಗಳು ಮತ್ತು ಪ್ರಾಚೀನದಿಂದ ಬಂದ ಪರಂಪರಾಗತ ಪದ್ಧತಿಗಳನ್ನು ಇನ್ನೂ ಅನುಸರಿಸುವ ಪ್ರಯತ್ನದಲ್ಲಿರುತ್ತವೆ. ಒಟ್ಟಾರೆ, ಪ್ರಾಚೀನತೆ-ವಿಶಿಷ್ಟತೆ-ಪ್ರತ್ಯೇಕತೆ ಈ ಮೂರು ಒಂದು ಬುಡಕಟ್ಟಿನ ಮುಖ್ಯ ಲಕ್ಷಣಗಳು".[3]

ತೀ.ನಂ.ಶಂಕರನಾರಾಯಣ ಅವರು ಭಾರತದ ಬುಡಕಟ್ಟುಗಳನ್ನು ದಕ್ಷಿಣವಲಯ, ಮಧ್ಯವಲಯ ಮತ್ತು ಈಶಾನ್ಯವಲಯದ ಬುಡಕಟ್ಟುಗಳೆಂದು ವಿಂಗಡಿಸಿರುವರು. ಇದರಲ್ಲಿ ದಕ್ಷಿಣವಲಯದ ಬುಡಕಟ್ಟಿಗರಲ್ಲಿ ತಮ್ಮ ಪಾರಂಪರಿಕ ಮೂಲ ಮೌಲ್ಯಗಳು ಅನ್ಯ ಸಮುದಾಯದ ಪ್ರಭಾವಕ್ಕೆ ಒಳಗಾಗಿರುವುದು ಕಂಡುಬರುತ್ತವೆ. ಈ ಒಳಗಾಗುವಿಕೆಯು ಈ ವಲಯದ ಬುಡಕಟ್ಟು ಸಮುದಾಯಗಳಿಗೆ ಅನಿವಾರ್ಯವೆಂದು ಕಂಡುಬರುತ್ತದೆ. ಏಕೆಂದರೆ ನಾನು ನನ್ನ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಇಂತಹ ಬದಲಾಗುವಿಕೆಯನ್ನು ಕಂಡಿರುವುದನ್ನು ಇಲ್ಲಿ ಹೇಳಬೇಕಾಗುತ್ತದೆ. ಮೇದರು ತಮ್ಮ ಕುಲದೇವತೆಯಾದ ಮಲೆಮ್ಮ ಮತ್ತು ಚೌಡಮ್ಮರ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದ ಆಚರಣೆ ಪ್ರದೇಶಾನುಸಾರವಾಗಿ ಮತ್ತು ಅವರ ಅನುಕೂಲಕ್ಕೆ ತಕ್ಕಂತೆ ನವಂಬರ್ ತಿಂಗಳಿನಿಂದ ಫೆಬ್ರವರಿ-ಮಾರ್ಚ ತಿಂಗಳುಗಳಲ್ಲಿ ಆಚರಿಸುವರು. ಈ ಸಮುದಾಯದವರು ಆಚರಿಸುವ ಹಬ್ಬದ ಮೂಲ ಉದ್ದೇಶ ಒಂದೇ ಆಗಿದೆ. ಹಬ್ಬದ ದಿವಸ ಬೆಳಗಿನ ಜಾವ ದೇವತೆಗೆ ಕೋಳಿ-ಕುರಿಯಬಲಿ ಕೊಡುವುದು ಕಂಡು ಬರುತ್ತದೆ. ನನ್ನ ಕ್ಷೇತ್ರ ಕಾರ್ಯದಲ್ಲಿ ಗಮನಿಸಿದ ಕೆಲವು ಊರುಗಳಲ್ಲಿ ಮಲೆಮ್ಮನ ಹಬ್ಬದ ದಿವಸ ಬಲಿಕೊಡುವುದು ಕಂಡು ಬಂದಿದೆ. ಆದರೆ ಕೊಪ್ಪಳ ಜಿಲ್ಲೆಯ ಕೊಪ್ಪಳದಲ್ಲಿ ಮಾತ್ರ ಆ ದಿವಸ ಬಲಿಯನ್ನು ಕೊಡಲಿಲ್ಲ. ಕಾರಣ ಕೇಳಲು

ಅಲ್ಲಿಯ ಹಿರಿಯರು ಇಲ್ಲ ನಾವು ಈ ಊರಿನಲ್ಲಿ ಬಲಿ ಕೊಡುವುದಿಲ್ಲ ಕುಂಬಳ ಕಾಯಿ ಮಾತ್ರ ಬಲಿ ಕೊಡುತ್ತೇವೆ ಎಂದರು. ಕಾರಣವನ್ನು ಶೋಧಿಸುತ್ತಾ ಹೋದಂತೆಲ್ಲ ಒಂದು ಸತ್ಯ ಸಂಗತಿ ತಾನಾಗಿ ಸುಳಿ ಬಿಚ್ಚಿಕೊಂಡಿತು. ಕೊಪ್ಪಳದಲ್ಲಿ ಮಲೆಮ್ಮ ಮತ್ತು ಮಿಂಚಣ್ಣನ ದೇವಸ್ಥಾನವು ಅಲ್ಲಿನ ಪ್ರಮುಖ ಮಠವಾದ ಗವಿಸಿದ್ದೇಶ್ವರ ಮಠದ ವ್ಯಾಪ್ತಿಯ ಆವರಣದಲ್ಲಿ ಇದೆ. ಹಿಂದೆ ಈ ಪ್ರದೇಶವನ್ನು ಗವಿಮಠದ ಶ್ರೀಗಳು ತಮ್ಮ ದೇವರಿಗೆ ಕೊಟ್ಟಿರುವುದಾಗಿ ಹೇಳಿದರು. ಇದರ ವಾರಸುದಾರಿಕೆ ಮೂಲ ಇಲ್ಲಿ ನಮಗೆ ಅವಶ್ಯವಲ್ಲ. ಆದರೆ ನಾನು ಇಲ್ಲಿ ಏನನ್ನು ಹೇಳ ಬಯಸುತ್ತೇನೆಂದರೆ, ಅಲ್ಲಿ ಈ ಸಮುದಾಯದ ಜನ ತನ್ನ ಮೂಲ ಪರಂಪರೆಯ ಆಚರಣೆಯಲ್ಲಿ ಅಲ್ಲಿನ ಮೇಲ್ವರ್ಗದ ಆಚರಣೆಗಳ ಪ್ರಭಾವದಿಂದ ಬದಲಾವಣೆ ಮಾಡಿ ಕೊಂಡಿರುವುದು ಕಂಡುಬರುತ್ತದೆ. ಇವರು ಹಬ್ಬದ ಸಂದರ್ಭದಲ್ಲಿ ಮನೆಯಲ್ಲಿ ಮಾತ್ರ ಮಾಂಸದ ಅಡುಗೆ ಮಾಡಿ ಕೊಂಡು ಊಟ ಮಾಡುತ್ತಾರೆ. ಆದರೆ, ದೇವರಿಗೆ ಬಲಿ ಕೊಡುವುದಿಲ್ಲ ಎನ್ನುವುದು ಇವರ ಪ್ರಾದೇಶಿಕ ಅನಿವಾರ್ಯತೆಯ ರಾಜೀ ಸೂತ್ರವಾಗಿದೆ.

ಇನ್ನು ಭಾರತದ ಬುಡಕಟ್ಟುಗಳ ಸ್ಥಿತಿಗತಿಗಳ ಬಗ್ಗೆ ಹೇಳುವುದಾದರೆ. ಪ್ರಾಚೀನ ಕಾಲದಲ್ಲಿ ಈ ಬುಡಕಟ್ಟು ಸಮುದಾಯಗಳು ಮತ್ತು ವರ್ಗೀಕೃತ ಅನೇಕ ಜನಾಂಗಗಳು ಪ್ರಾದೇಶಿಕ ಸಹಜೋತ್ಪನ್ನಗಳನ್ನು ಬಳಕೆ ಮಾಡಿಕೊಂಡು ಬೆಳೆಯುತ್ತಾ ಬಂದವು. ಡಾ.ಹಿ.ಚಿ. ಬೋರಲಿಂಗಯ್ಯ ಅವರು ಹೇಳುವ ಹಾಗೆ "ಇಂದಿನ ನಾಗರೀಕ ಸಮಾಜದ ಅನೇಕ ಸಮುದಾಯಗಳು ಒಂದು ಕಾಲದ ಬುಡಕಟ್ಟೊಂದರ ಕವಲುಗಳಲ್ಲದೆ ಮತ್ತೇನೂ ಅಲ್ಲ"[4].ಪ್ರಾಚೀನ ಕಾಲದಲ್ಲಿ ಇತರೆ ಪ್ರಾಣಿ ಸಂಕುಲದ ಜೊತೆ ಬದುಕಿದ ವಾನರ-ನರ, ಇತರೆ ಸಸ್ತನಿ ಪ್ರಾಣಿಗಳಿಗಿಂತ ಭಿನ್ನವಾಗಿ ಬದುಕಿದ. ಸಾವಿರಾರು ವರ್ಷಗಳ ನಂತರ ಬೌದ್ಧಿಕ ಮತ್ತು ಭೌತಿಕ ಬೆಳವಣಿಗೆಯಿಂದಾಗಿ ಪ್ರಾಣಿ ಸಂಕುಲಗಳಿಂದ ಪ್ರತ್ಯೇಕ ಜೀವನ ನಡೆಸ ಹತ್ತಿದ. ಹಸಿವು ತೃಷೆಯನ್ನು ಹಿಂಗಿಸಲು ಸಹಜ ಹಣ್ಣು-ಹಂಪಲು, ಗಡ್ಡೆ-ಕಾಂಡಗಳನ್ನು ತಿಂದು ಸಾಲದುದಕ್ಕೆ ಬೇಟೆಯಾಡಿ ಮಾಂಸವನ್ನು ತಿನ್ನ ತೊಡಗಿದ. ಕಾಲಾಂತರದಲ್ಲಿ ವಿಕಸನ ಹೊಂದಿ ಬೇಟೆಗಾರಿಕೆಯಿಂದ ಕುಮುರಿ ಬೇಸಾಯಕ್ಕೆ ಪಾದಾರ್ಪಣೆ ಮಾಡಿದ. ಬಯಕೆಯ ಬದುಕಿನಲ್ಲಿ ಬದಲಾವಣೆ ಕಂಡು ತನ್ನ ಗುಂಪುಗಳೊಂದಿಗೆ ಒಂದು ಕಡೆ ನೆಲೆ ನಿಂತು ಜೀವಿಸ ಹತ್ತಿದ. ಕಾಡು ಕಡಿದು ಫಲವತ್ತಾಗಿಸಿ, ಬೇಸಾಯ ಮತ್ತು ಪಶುಪಾಲನೆಯಲ್ಲಿ ತೊಡಗಿದ. ಆಶ್ರಯಕ್ಕೆ ಮತ್ತು ಬಳಕೆಗೆ ಕಾಡಿನ ಬಿದಿರು, ಬೆತ್ತ, ಎಲೆ, ಕಾಂಡಗಳನ್ನು ಬಳಸಿ ಅವಶ್ಯ ವಸ್ತುಗಳನ್ನು ನಿರ್ಮಿಸಿಕೊಂಡ. ಮುಂದೆ ಪ್ರಾಣಿಸಂಕುಲದ ಕಾಡು ಬಿಟ್ಟು, ಕಾಡಂಚಿಗೆ ವಲಸೆಬಂದನು. ಅನೇಕ ಸಮುದಾಯದ ಗುಂಪುಗಳಾಗಿ ಪ್ರತ್ಯೇಕ ಜೀವನ ನಡೆಸತೊಡಗಿದನು. ಸಹಜೋತ್ಪನ್ನಗಳ ಬಳಕೆಯಿಂದ ಜೀವನಾವಶ್ಯಕ ವಸ್ತುಗಳನ್ನು ತಯಾರಿಸಿ ಬಳಸುವ ಕಲೆಯನ್ನು ಮೈಗೂಡಿಸಿಕೊಂಡ. ಈ ಕಲೆಯೇ ಮುಂದೆ ಬುಡಕಟ್ಟು ಕೈಗಾರಿಕೆಗಳಾಗಿ ಬೆಳೆದವು. ತಾನು ತಯಾರಿಸಿದ ಕೈಗಾರಿಕೆ ವಸ್ತುಗಳ ವಿನಿಮಯ ಕಲೆಯನ್ನು ರೂಪಿಸಿ ರೂಢಿಸಿಕೊಂಡ. ಈ ಬುಡಕಟ್ಟು ಕೈಗಾರಿಕೆಗಳೇ ಭಾರತದ ಗುಡಿ ಕೈಗಾರಿಕೆಗಳಾದವು. ಭಾರತದ ಪಿತಾಮಹ ಮಹಾತ್ಮ ಗಾಂಧಿಯಂಥವರ

ರಾಮರಾಜ್ಯದ ಕನಸಿನ ಭಾರತದ ಅಡಿಪಾಯಗಳು ಎನಿಸಿ ಕೊಂಡವು.ಕಾಡಂಚಿನ ಬುಡಕಟ್ಟು ಸಮುದಾಯಗಳು ಹಳ್ಳಿ ನಗರಗಳ ಸಂಪರ್ಕ ಹೊಂದಿದವು. ಹಸಿವು ಅವಶ್ಯಕತೆಗಳೊಂದಿಗಿನ ಹುಡುಕಾಟವು ಮಾನವನ ನಿರಂತರ ಬೆಳವಣಿಗೆಗೆ ಸಹಕಾರಿಯಾಯಿತು. ವರ್ತಮಾನದ ತನ್ನ ಬದುಕನ್ನು ಹಸನುಗೊಳಿಸುವ ಮಾನವನ ವಿಕಾಸಶೀಲಗುಣ ಯುಗಾಂತರಗಳಲ್ಲಿ ಬೆಳೆಯತೊಡಗಿತು. ಈ ಬೆಳವಣಿಗೆ ಕಾಲಘಟ್ಟದಲ್ಲಿ ಎದುರಾದ ಅನೇಕ ಸಮಸ್ಯಗಳಿಗೆ ಮುಖಾಮುಖಿಯಾಗಿ ನಿಂತು ತಂತ್ರ ಜ್ಞಾನದಲ್ಲಿ ಹೊಸತನವನ್ನು ಅಳವಡಿಸಿಕೊಂಡು ವಿಶ್ವಗ್ರಾಮದ ಕಲ್ಪನೆಗೆ ತಂದು ನಿಲ್ಲಿಸಿತು.

ಈ ನಡುವೆ ಭಾರತದ ಬುಡಕಟ್ಟುಗಳು ನಿರಂಕುಶ ಜಮೀನ್ದಾರ ಪದ್ಧತಿಯ ರಾಜಕಾರಣದೊಳಗೆ ಪ್ರಾಣಿಗಳಿಗಿಂತ ಪ್ರಾಣಿಗಳಾಗಿ ಅವರ ಕ್ರೂರ ಆಳ್ವಿಕೆಯನ್ನು ಸಹಿಸಿಕೊಂಡು ಜೀವಿಸಿದರು. ಸಾಮಾಜಿಕ , ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಜೊತೆಗೆ ಇವರು ಮೆಚ್ಚಿ , ನೆಚ್ಚಿ ಬಂದ ಆಶ್ರಿತ ಕುಲಕಸುಬುಗಳ ಅಸಮಾನತೆಯನ್ನು ಸಹ ಸಹಿಸಿಕೊಂಡರು. ಕೆಲವೊಮ್ಮೆ ನಿಸ್ಸಹಾಯಕ ಧ್ವನಿಯಲ್ಲಿ ಪ್ರತಿಭಟಿಸಿದರು. ತಮ್ಮ ಆವಶ್ಯಕತೆಗಳ ಮೇಲೆ ಕಾಲು ಚಾಚಿದವರುಗಳಲ್ಲಿ ದೀನರಾಗಿ ಬೇಡಿಕೊಂಡರು. ಆದರೆ ಮಾನವಿಕ ಮೌಲ್ಯಗಳಿಂದ ಬಹುದೂರಕ್ಕೆ ಬೆಳೆದ ಇವರ ಕಿವಿಗಳಿಗೆ ಬುಡಕಟ್ಟಿಗರ ಕೂಗು ಕೇಳಿಸದಾಯಿತು. ಇದಕ್ಕೆ ತಾವೇ ಹಾಡು, ಕಥೆ ,ಕಥನ ಕಾವ್ಯಗಳನ್ನು ಕಟ್ಟಿ ಅತ್ತು ಅಳಿಸಿ ಕಿಚ್ಚನ್ನು ಒಡಲಲ್ಲಿ ಮುಚ್ಚಿಕೊಂಡು ಸುಮ್ಮನಾದರು. ಶ್ರೇಣೀಕೃತ ಸಮಾಜದ ಬುಡ ಭಾಗದಲ್ಲಿರುವ ಬುಡಕಟ್ಟು ಸಮಾಜದ ಬೆಳವಣಿಗೆ ವಸಾಹತು ಸಂಸ್ಕೃತಿಗೆ ಅರ್ಥವಾಗದಾಗಿತ್ತು. ತಿರಸ್ಕೃತ ಸಮುದಾಯಗಳು ಆರ್ಥಿಕ, ರಾಜಕಿಯ, ಸಾಮಾಜಿಕ, ಹಾಗೂ ಸಾಂಸ್ಕೃತಿಕವಾಗಿ ನಿರ್ಲಕ್ಷ್ಕಕ್ಕೆ ಒಳಗಾಗಿದ್ದವು. ಇವರ ಜೊತೆಗೆ ಮೇರು ಸಂಸ್ಕೃತಿಗಳ ಭೀಕರ ಪ್ರವಾಹದಲ್ಲಿ ಬುಡಕಟ್ಟಿನಂತಹ ಕೆಳಜಾತಿಯ ಸಾಂಸ್ಕೃತಿಕ ಪರಂಪರೆಗಳು ಭಾಷ್ಪವಾಗುತ್ತವೆ. ವಸಾಹತುಶಾಹಿಯ ಮೂಲಕ ನಮಗೆ ವಿಜ್ಞಾನ , ಶಿಕ್ಷಣ, ಸಾರಿಗೆ ಸಂಪರ್ಕಗಳು ಕೊಡುಗೆಯಾಗಿ ಬಂದವು. ಆದರೂ ಕೆಳಜಾತಿಯ ಕಸುಬುಗಳ ವಸ್ತುಗಳು ಆಧುನಿಕ ಉತ್ಪಾದನೆಯ ನವವಸ್ತುಗಳ ಪ್ರವಾಹದ ಎದುರು ಈಜುವ ಸಾಮರ್ಥ್ಯವನ್ನು ಕಳೆದು ಕೊಳ್ಳ ಹತ್ತಿದವು. ಪಾಶ್ಚಿಮಾತ್ಯರು ಭಾರತದಂತಹ ರಾಷ್ಟ್ರಗಳ ನೈಸರ್ಗಿಕ ಸಂಪನ್ಮೂಲಗಳನ್ನು ಬುಡಕಟ್ಟು ಆದಿವಾಸಿಗಳ ಜೊತೆಗೂಡಿ ತಮ್ಮಿಚ್ಚೆಯಂತೆ ಬಳಸಿಕೊಂಡರು. ಅರಣ್ಯ ವಿವಸ್ತ್ರೀಕರಣ ಭಾರತದ ಅನೇಕ ಬುಡಕಟ್ಟು ನೆಲೆಗಳನ್ನು ಧ್ವಂಸ ಮಾಡಿತು. ಪ್ರದೇಶಾನುಸಾರವಾಗಿ ಬುಡಕಟ್ಟಿಗರ ಸಮಸ್ಯೆಗಳರೂಪ ಏಕರೀತಿಯಾಗಿ ಕರಾಳರೂಪ ತಾಳಿತು. ಆಧುನೀಕರಣದ ಅರ್ಥವಾಗದ ಅಬ್ಬರದ ಜಾತ್ರೆಯಲ್ಲಿ ಎಲ್ಲೋ ಒಂದುಕಡೆ ಬುಡಕಟ್ಟಿಗರು ಉಸಿರು ಬಿಗಿಹಿಡಿದು ತಮ್ಮ ಪಾರಂಪರಿಕ ಮೌಲ್ಯಗಳೊಂದಿಗೆ ಬದುಕುತ್ತಿದ್ದಾರೆ. ಭಾರತದ ಯಾವುದೇ ಬುಡಕಟ್ಟು ಸಮಾಜ ಜಾಗತೀಕರಣದ ಈ ಸಂದರ್ಭದಲ್ಲಿ ಪಡೆಯುವ ಅನುಕೂಲತೆಗಳಿಗಿಂತ ಅಪಾಯಗಳೇ ಅಧಿಕ. ಆಡಳಿತಾರೂಢ ಸರಕಾರಗಳು ದುರ್ಬಲರ, ಆದಿವಾಸಿ ಬುಡಕಟ್ಟಿಗರ ಸರ್ವತೋಮುಖ ಅಭ್ಯುದಯಕ್ಕೆ ಅನೇಕ ಯೋಜನೆಗಳನ್ನು ರೂಪಿಸಿದ್ದಾರೆ.

ಅವುಗಳು ಪೂರ್ಣ ಪ್ರಮಾಣದಲ್ಲಿ ಎಲ್ಲಾ ಬುಡಕಟ್ಟಿಗರಿಗೆ ತಲುಪದೇ, ಬುಡಕಟ್ಟಿಗರ ಜೀವನ ಯಥಾವತ್ತಾಗಿ ಮುಂದುವರಿದಿದೆ.

ಈ ಸಮುದಾಯಗಳು ತಾವು ನೆಚ್ಚಿ ನಂಬಿಕೊಂಡ ಆರ್ಥಿಕ ಚಟುವಟಿಕೆಗಳು ಮತ್ತು ಆಚರಣೆಗಳೊಂದಿಗೆ ಪ್ರತ್ಯೇಕವಾಗಿ ಬದುಕಲು ಇಷ್ಟಪಡುತ್ತವೆ. ಯಾವುದೇ ಆಧುನಿಕ ಸೌಲಭ್ಯಗಳನ್ನು ಬಳಸಿಕೊಳ್ಳಲು ತಿಳಿಹೇಳಿದರೆ ಇವರು ಅನುಮಾನದಿಂದ ನೋಡುತ್ತಾರೆ. ಇದಕ್ಕೆಲ್ಲ ವಸಾಹತುಶಾಹಿ ಮತ್ತು ಜಮೀನ್ದಾರ ಪ್ರಭುಗಳ ವರ್ತನೆಯ ಪೂರ್ವಾನುಭವವೇ ಕಾರಣ ಇರಬೇಕು. ಏಕೆಂದರೆ, ನನ್ನ ಕ್ಷೇತ್ರ ಕಾರ್ಯದಲ್ಲಿ ಕುಲಕಸುಬನ್ನೇ ಆಶ್ರಯಿಸಿದ ಮೇದರ ಕುಟುಂಬಗಳಿಂದ ಮಾಹಿತಿ ಸಂಗ್ರಹಿಸುವಾಗ ಅವರು ಕುಲಕಸುಬಿಗೆ ಹಾಕಿದ ಬಂಡವಾಳಕ್ಕೆ ಲಭ್ಯವಿರುವ ಸಾಲಸೌಲಭ್ಯಗಳು ಮತ್ತು ರಿಯಾಯಿತಿ ಸೌಲಭ್ಯಗಳ ಕುರಿತು ತಿಳಿಸಿದೆ. ಆದರೆ ಅವರು ನಮ್ಮ ಫೋಟೋ ತೆಗೆದುಕೊಂಡು ನಮ್ಮ ಬಗ್ಗೆ ಬರೆದು ಸಾಲ, ಮನೆ, ಏನೆಲ್ಲ ಕೊಡಿಸಿ ಉದ್ಧಾರ ಮಾಡುವುದು ಬೇಡ , ಇದರ ಬದಲು ನಮಗೆ ಸಾಕಾಗುವಷ್ಟು ಬಿದಿರು ಕೊಡಿಸಿದರೆ ಎಲ್ಲಿಯಾದರು ಬೀದಿ ಮರದ ಕೆಳಗೆ ಕಸುಬುಮಾಡಿ ಬದುಕುತ್ತೇವೆ ಎಂದು ತಿರಸ್ಕಾರದಿಂದ ನುಡಿದರು. ಇದರಿಂದ ಸರಕಾರದ ಹೊಸ ಅರಣ್ಯ ನೀತಿ ಮತ್ತು ಜಾಗತೀಕರಣ ಇಂತಹ ಬುಡಕಟ್ಟು ಸಮುದಾಯಗಳ ಮೂಲಕಸುಬಿಗೆ ಸಂಪೂರ್ಣ ಅನುಕೂಲವಾದ ನೀತಿಗಳನ್ನು ರೂಪಿಸಿರುವ ಕೊರತೆ ಕಂಡುಬರುತ್ತದೆ. ಏಕೆಂದರೆ, ನನ್ನ ಸಲಹೆಯನ್ನು ಲೆಕ್ಕಿಸದೇ ಇವರು ಈ ರೀತಿಯಾಗಿ ತಿರಸ್ಕಾರದ ಮಾತುಗಳ ಹಿಂದೆ ಅವರು ಕುಲಕಸುಬಿಗೆ ಬೇಕಾದ ಬಿದಿರು ಸಿಕ್ಕರೆ ಸ್ವತಂತ್ರರಾಗಿ ಬದುಕಬಲ್ಲೆವು ಎಂಬ ಆತ್ಮ ವಿಶ್ವಾಸ, ಸ್ಥೈರ್ಯ ಮತ್ತು ಧೈರ್ಯವನ್ನು ಇಲ್ಲಿ ಮೆಚ್ಚಬೇಕಾದುದು. ಇದಕ್ಕೆ ಪೂರಕವೆಂಬಂತೆ ಎ.ಎಸ್. ಪ್ರಭಾಕರ್. ಅವರು ಹೀಗೆ ಹೇಳುತ್ತಾರೆ. “ಕರ್ನಾಟಕದಲ್ಲಿ ಅದು ಕಂಪ್ಯೂಟರ್ ಯುಗಕ್ಕೆ , ಹೊಸ ಶತಮಾನಕ್ಕೆ ಕಾಲಿಡುತ್ತಿರುವ ಆಧುನಿಕ ವ್ಯವಸ್ಥೆ ಇಂದು ಅನೇಕ ಬುಡಕಟ್ಟುಗಳಿಗೆ ತಿನ್ನಲು ಮರದ ಹೊಟ್ಟನ್ನು ನೀಡಿದೆ, ಇಲ್ಲವೇ ಉಪವಾಸ ಕೆಡವಿ ಸಾಯಿಸಿದೆ. ಆಳುವ ವ್ಯವಸ್ಥೆ ಏನೇ ಬದಲಾವಣೆಗಳನ್ನು ಅವರಲ್ಲಿ ತರಲು ಯತ್ನಿಸಿದರೂ ಆ ಅಭಿವೃದ್ಧಿ ಯೋಜನೆಗಳು ಅವರನ್ನು ಶೋಷಣೆಗೊಳಮಾಡಿವೆ. ಇಂದು ಆಧುನಿಕರೆಂದು ಅವರ ಬಳಿ ಹೋದವರೆಲ್ಲ ತಿರಸ್ಕಾರಕ್ಕೊಳಗಾಗುತ್ತಿದ್ದಾರೆ.”[5] ಪ್ರಭಾಕರ ಅವರ ಹೇಳಿಕೆ ವಾಸ್ತವಿಕ ಮತ್ತು ಸತ್ಯವೆಂಬುದು ದಿಟ. ಏಕೆಂದರೆ ಈ ಸಮುದಾಯಗಳಿಗೆ ಏನು ಬೇಕು ಎಂಬುದನ್ನು ತಿಳಿದು ಅದನ್ನು ಅವರಿಗೆ ನಮ್ಮ ಯೋಜನೆಗಳ ವ್ಯಾಪ್ತಿಯಲ್ಲಿ ತಂದು ಒದಗಿಸಬೇಕಾಗಿದೆ. ಅದರ ಬದಲು ಅವರ ಮುಂದೆ ನಮ್ಮ ಯೋಜನೆಗಳನ್ನು ಸುರುವಿದರೆ ಅವರು ತಾನೇ ಏನು ಮಾಡಿಯಾರು ?. ಇವರ ಹೇಳಿಕೆಗೆ ಪೂರಕವಾದ ನನ್ನ ಕ್ಷೇತ್ರ ಕಾರ್ಯದಲ್ಲಿ ನನ್ನ ಅನುಭವಕ್ಕೆ ಬಂದ ಘಟನೆಯನ್ನು ಇಲ್ಲಿ ಹೇಳಬೇಕಾಗುತ್ತದೆ.

ಮೇದರ ಕುಲಕಸುಬಿಗೆ ಬಿದಿರು ತಮಗೆ ಸಾಕಾಗುವಷ್ಟು ಪೂರೈಕೆ ಆಗದೇ ಹೋದ ಸಂದರ್ಭದಲ್ಲಿ ಅವರಲ್ಲಿ ಕೆಲವರು ಅನ್ಯ ಮಾರ್ಗದಿಂದ ಬಿದರು ತಂದು ಕಸುಬು ಮಾಡುವಾಗ ಅನೇಕಬಾರಿ ಅಧಿಕಾರಿಗಳ ಕೈಯಿಂದ ಪೆಟ್ಟು

ತಿಂದಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಬುಡಕಟ್ಟು ಸಮುದಾಯಗಳ ಉದ್ಧಾರವು ಅವರು ನಂಬಿದ ಆರ್ಥಿಕ ಚಟುವಟಿಕೆಗಳೊಂದಿಗೆ ಎಷ್ಟರಮಟ್ಟಿಗೆ ಸಾಧ್ಯ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಇವರು ನೆಚ್ಚಿದ ಕುಲಕಸುಬಿಗೆ ಬೇಕಾದ ಬಿದಿರಿನ ಕೊರತೆ ಇವರನ್ನು ಹೀಗೆ ವಲಸೆ ಹೋಗಲು ಕಾರಣವಾಗುತ್ತದೆ. ಎಂತಹ ಪ್ರತಿಕೂಲ ಪರಿಸ್ಥಿತಿಗೆ ನೂಕುತ್ತದೆ ಎನ್ನುವುದಕ್ಕೆ ಪೂರಕವೆಂಬಂತೆ ಇನ್ನೊಂದು ಸಂದರ್ಭದಲ್ಲಿ ನನ್ನ ಅನುಭವ ಹೀಗಿದೆ. ನಾನು ನನ್ನ ಕ್ಷೇತ್ರ ಕಾರ್ಯದಲ್ಲಿ ನಿರತನಾದಾಗ, ಕಾಡು ಮತ್ತು ಹಳ್ಳಿಯ ನಡುವೆ 'ಇರುವ ಹಾಳು ದೇವಾಲಯ ಒಂದರಲ್ಲಿ ಪರ ಊರಿಂದ ವಲಸೆ ಬಂದ ಮೇದರು ಕಸುಬು ಮಾಡುತ್ತಿದ್ದಾರೆಂಬ ಸುದ್ದಿ ತಿಳಿಯಿತು. ಅವರಿಂದ ಮಾಹಿತಿ ಸಂಗ್ರಹಿಸಲು ನಾನು ಅಲ್ಲಿಗೆ ಹೋದೆ. ಹಾಳುದೇವಾಲಯದ ಮುಂದಿನ ಮರಕ್ಕೆ ತಾಗಿಕೊಂಡಂತೆ ಗರಿತೊಪ್ಪಲುಗಳಿಂದ ತಾತ್ಕಾಲಿಕ ಜೋಪಡಿಯಲ್ಲಿ ಯಾರೋ ಇರುವುದು ಕಂಡುಬಂತು. ಒಳಗೆ ಹೋಗಿ ನೋಡಲಾಗಿ ಒಬ್ಬ ಹೆಂಗಸು ನನ್ನ ಬರುವಿಕೆಯನ್ನು ಗಮನಿಸಿ ಕಸುಬಿನ ವಸ್ತು ತಯಾರಿಕೆಯ ಸಾಮಗ್ರಿಗಳನ್ನು ಮುಚ್ಚಿಟ್ಟು ನಿಂತಳು, ಅದೇ ಕ್ಷಣದಲ್ಲಿ ಜೋಪಡಿಯ ಹಿಂದಿನ ಕಿಂಡಿಯಿಂದ ಯಾರೋ ಓಡಿ ಹೋದರು. ನಂತರ ಆ ಹೆಂಗಸಿಗೆ ನಾನು ಬಂದಿರುವ ಉದ್ಧೇಶ ಮತ್ತು ಮಹತ್ವ ಕುರಿತು ತಿಳಿಸಿಹೇಳಿದೆ. ಅವರ ಸಮುದಾಯದ ಮತ್ತು ರಕ್ತಸಂಬಂಧಿಕರ ಪರಿಚಯ ಹೇಳಿ ನನ್ನಿಂದ ನಿಮಗೆ ಯಾವ ತೊಂದರೆಯೂ ಆಗುವುದಿಲ್ಲವೆಂಬುದನ್ನು ಖಚಿತಪಡಿಸಿದೆ. ಆಗ ಆ ಹೆಂಗಸು ಇಲ್ಲಿಗೆ 18 ಕಿ.ಮೀ. ದೂರದಲ್ಲಿರುವ ಹಳ್ಳಿಯಿಂದ ತಾತ್ಕಾಲಿಕವಾಗಿ ವಲಸೆ ಬಂದುದಾಗಿ ಹೇಳಿದಳು. ಇಲ್ಲೇ ಪಕ್ಕದಲ್ಲಿರುವ ಗುಡ್ಡದಿಂದ ಬಿದರು ಸಂಗ್ರಹಿಸಿ ಕಸುಬುಮಾಡುತ್ತೇವೆ ಎಂದು ಹೇಳಿದಳು. ಇದಕ್ಕೆ ಕಾರಣ ನಮ್ಮ ಊರಿನಲ್ಲಿ ಬಿದಿರನ್ನು ಕೊಡುವ ಮೇದರ ಸಂಘಗಳಿಲ್ಲ. ಪರ ಊರಿನ ನಮ್ಮ ಜಾತಿಯ ಸಂಘಗಳಿಂದ ಬಿದಿರು ತರಲು ಆ ಸಂಘದಲ್ಲಿ ನಮ್ಮ ಹೆಸರುಗಳಿಲ್ಲ ಎಂದು ಹೇಳಿದಳು. ನಮ್ಮಂತೆ ಇನ್ನೂ ಹತ್ತಾರು ಕುಟುಂಬಗಳು ಈ ಪ್ರದೇಶಕ್ಕೆ ಪ್ರತಿ ವರ್ಷ ಇದೇ ಸಂದರ್ಭದಲ್ಲಿ ವಲಸೆ ಬರುತ್ತಾರೆಂದಳು. ನಾವು ಅರಣ್ಯಾಧಿಕಾರಿಗಳ ಜೊತೆ ಹೊಂದಿಕೊಂಡು ಹೋಗುತ್ತೇವೆ ಎಂದು ಹೇಳಿದಳು. ಕೆಲವು ಸಂದರ್ಭದಲ್ಲಿ ಅವರು ನಮ್ಮ ಗಂಡಸರ ಮೇಲೆ ಕಾನೂನಿನ ಕ್ರಮ ಜರುಗಿಸಿ ಶಿಕ್ಷೆ ಕೊಡುತ್ತಾರೆ ಎಂದಳು. ಅದಕ್ಕಾಗಿಯೇ ನಿಮ್ಮನ್ನೂ ಸಹ ಅರಣ್ಯ ಇಲಾಖೆಯವರು ಎಂದು ತಿಳಿದು ನನ್ನ ಗಂಡ ಊಟ ಮಾಡುವುದನ್ನು ಅರ್ಧಕ್ಕೆ ಬಿಟ್ಟು ಓಡಿ ಹೋದ ನೋಡಿರಿ ಎಂದು ಅಲ್ಲಿಯೇ ಅರ್ಧ ಊಟ ಮಾಡಿ ಬಿಟ್ಟ ತಟ್ಟೆಯನ್ನು ತೋರಿಸಿ ಕಣ್ಣೀರಿಟ್ಟಳು. ಮತ್ತೆ ನಾವು ಇಲ್ಲಿ ಇರುವುದನ್ನು ಯಾರಿಗೂ ಹೇಳಬೇಡಿ ಎಂದು ಅಂಗಲಾಚಿದಳು. ನಮ್ಮಂತೆಯೇ ಇನ್ನೂ ಇಲ್ಲಿಯೇ ಹತ್ತಾರು ಕುಟುಂಬಗಳು ವಲಸೆ ಬಂದಿರುವುದಾಗಿ ಹೇಳಿ ನನಗೆ ಅವರ ನೆಲೆಗಳನ್ನು ತೋರಿಸಿದಳು. ಇವರಲ್ಲಿ ಕೆಲವರು ಹಳ್ಳಿಯ ಅನ್ಯರ ಮನೆಯ ಗೋಡೆಯ ಚಾಟಿಗೆ ತಾವು ತಯಾರಿಸಿದ ತಟ್ಟಿ ,ಚಾಪೆ, ಮತ್ತು ಬಟ್ಟೆಯಿಂದ ನೆರಳು ಮಾಡಿಕೊಂಡು ಕಸುಬು ನಿರತರಾಗಿದ್ದರು. ಮತ್ತೆ ಕೆಲವರು ಕೊಟ್ಟಿಗೆಯ ಮೂಲೆಯೊಂದರಲ್ಲಿ ದನಗಳ ಜೊತೆಗೆ ತಮ್ಮ ವಾಸ್ತವ್ಯ ಹೂಡಿರುವ ದಾರುಣ ಸನ್ನಿವೇಶ ಕಂಡುಬಂತು. ಇದರಿಂದ ಜಾಗತೀಕರಣದ ವಿಶ್ವ

ಗ್ರಾಮದ ಪ್ರಸ್ತುತ ಸಂದರ್ಭದಲ್ಲಿ ಬುಡಕಟ್ಟು ಸಮುದಾಯಗಳ ಜ್ವಲಂತ ಸಮಸ್ಯೆಗಳು ಜೀವಂತ ವಾಗಿರುವುದು ಕಂಡು ಬರುತ್ತವೆ.

ಭಾರತದಾದ್ಯಂತ ನೆಲೆಸಿರುವ ಅನೇಕ ಬುಡಕಟ್ಟು ಸಮುದಾಯಗಳ ಸ್ಥಿತಿ ಪ್ರದೇಶದಿಂದ ಪ್ರದೇಶಕ್ಕೆ ಅಧಿಕವಾಗುತ್ತಾ ವಿಚಿತ್ರ ಎನಿಸುವಂತೆ ಕಂಡುಬರುತ್ತದೆ. ಪ್ರಾಚೀನಕಾಲದಲ್ಲಿ ಅಲೆಮಾರಿ ಮಾನವ ಒಂದು ಕಡೆ ನೆಲೆ ನಿಂತು ಭೂಮಿಯನ್ನು ಉತ್ಪನ್ನದ ವಸ್ತುವನ್ನಾಗಿ ಬಳಸಿಕೊಂಡ. ತಾನು ತನ್ನ ಸಮುದಾಯದವರ ಜೊತೆಗೂಡಿ ಸಾಮೂಹಿಕ ಬೇಸಾಯಕ್ಕೆ ತೊಡಗಿದ. ಕಾಲ ಗತಿಸಿದಂತೆ ಭೂಮಿಯ ಒಡೆತನದ ಪ್ರಶ್ನೆ ಜಾಗೃತವಾಯಿತು. ಇದು ಭೂಮಿಯ ಆಕ್ರಮಣಕ್ಕೆ ದಾರಿ ಮಾಡಿ ಕೊಟ್ಟಿತು. ಆದಿಯಲ್ಲಿ ಯಾರ ಸ್ವತ್ತೂ ಆಲ್ಲದ ಆನ್ಯರ ಒಡೆತನದ ಹಿಡಿತಕ್ಕೆ ಬಾರದ ಭೂಮಿ ಬರುಬರುತ್ತಾ ಮಾನವನ ಸ್ವಾಧೀನಕ್ಕೆ ಒಳಪಟ್ಟಿತು. ಆಗ ಮನುಷ್ಯನ 'ಮಾನವಿಕ ಮೌಲ್ಯಗಳಲ್ಲಿ ಬದಲಾವಣೆ ಕಂಡಿತು. ಭೂಮಿ ತನ್ನನ್ನು ಬಡವ, ಶ್ರೀಮಂತ ಮತ್ತು ನಾಗರಿಕರನ್ನಾಗಿ ಮಾಡಬಲ್ಲದು ಎಂಬುದು ಬೌದ್ಧಿಕ ಬೆಳವಣಿಗೆಯಿಂದ ಮನುಷ್ಯ ತಿಳಿದು ಕೊಂಡ. ಮಾಲಿಕ ಮತ್ತು ಕೂಲಿಕಾರರ ಆರ್ಥಿಕ ಅಸಮಾನತೆಯ ಸಂಬಂಧಗಳು ಬೆಳೆದು ನಿಂತವು. ಮೇಲ್ಜಾತಿ ಮತ್ತು ಕೀಳು ಜಾತಿಯ ಅಂತಸ್ತು ರೂಪಗೊಂಡು ಭೂಮಾಲಿಕತ್ವವು ಶೋಷಿತ ಕೆಳಜಾತಿಯ ಕೈತಪ್ಪಿ ಮೇಲ್ಜಾತಿಯ ಶೋಷಕರ ಅಧೀನವಾಗುತ್ತಾ ಬಂತು.

ಪ್ರಸ್ತುತ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಭೂಒಡೆತನದ ಬುಡಕಟ್ಟಿಗರ ಕನಸು ಕನಸಾಗಿಯೇ ಉಳಿಯಿತು. ಈ ಕುರಿತಾಗಿ ಅನೇಕ ಕಥೆಗಳು, ಆ ಕಥೆಗಳಲ್ಲಿ ಭೂಒಡೆತನದ ಆಶೆಯನ್ನು ಹೊಂದಿದ ನಾಯಕನ ದಾರುಣ ಸೋಲು, ಸಾವು, ಹಾಗೆಯೇ ಹೆಪ್ಪುಗಟ್ಟಿ ನಿಂತಿವೆ. ಈಗಲೂ ಸಹ ಹಿಂದೆ ಬುಡಕಟ್ಟಿಗರ ವಶದಲ್ಲಿದ್ದ ಕಾಡು-ಗುಡ್ಡ ಮತ್ತು ಹದಗೊಳಿಸಿದ ವ್ಯವಸಾಯದ ಭೂಮಿಗಳು ಎಸ್ಟೇಟ್ ಮತ್ತು ಗಣಿಮಾಲಿಕರ ಕೈವಶದಲ್ಲಿವೆ. ಅಲ್ಲಿ ಬುಡಕಟ್ಟಿಗರು ಭೂ ಮಾಲಿಕತ್ವದ ಆಶೆಗೆ ತಿಲಾಂಜಲಿಯನ್ನಿಟ್ಟು ಭೂಮಿಯ ಜೊತೆಗಿರುವ ತಮ್ಮ ಪೂರ್ವ ನಂಟಿನ ಋಣಕ್ಕಾಗಿ ತಮ್ಮದೇ ಭೂಮಿಯಲ್ಲಿ ದುಡಿಯುವ ಕೂಲಿಕಾರರಾಗಿದ್ದಾರೆ.

1.5.3 ಕರ್ನಾಟಕದ ಬುಡಕಟ್ಟುಗಳು :

ಪ್ರಸ್ತುತ ಕರ್ನಾಟಕದ ಬುಡಕಟ್ಟುಗಳ ಸ್ಥಿತಿಗತಿಗಳನ್ನು ಕುರಿತು ಹೇಳುವುದಾದರೆ, ಕರ್ನಾಟಕ ರಾಜ್ಯವು ತನ್ನ ವಿಶಿಷ್ಟ ಕಾಡು,ಬೆಟ್ಟ,ಗುಡ್ಡ ಗಳಿಂದ ತುಂಬಿದ ನಿತ್ಯಹರಿದ್ವರ್ಣದ ಸಿರಿಗಂಧದ ನಾಡು. ಈ ನಾಡು ಮೇದರಂತಹ ಅನೇಕ ಬುಡಕಟ್ಟು ಸಮುದಾಯಗಳಿಗೆ ಆಶ್ರಯಕೊಟ್ಟ ತಾಣವಾಗಿದೆ. ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕ ರಾಜ್ಯದಲ್ಲಿ ನೆಲೆಸಿರುವ ಬುಡಕಟ್ಟು ಸಮುದಾಯಗಳ ಸಂಖ್ಯೆಯು ಕಡಿಮೆ ಇರಬಹುದು. ಆದರೆ ಇಲ್ಲಿನ ಬುಡಕಟ್ಟಿಗರ ವೈವಿಧ್ಯತೆಯಲ್ಲಿ ಹಿರಿದೆನಿಸಿಕೊಳ್ಳುತ್ತದೆ. ಈ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಒಂದಿಲ್ಲೊಂದು ಬುಡಕಟ್ಟುಸಮುದಾಯ ನೆಲೆಸಿರುವುದು ಕಂಡುಬರುತ್ತದೆ. ಇಲ್ಲಿಯ ಅರಣ್ಯಪ್ರದೇಶ, ಕರಾವಳಿ, ಮಲೆನಾಡು,ಮತ್ತು

ಬಯಲು ಸೀಮೆಯ ಜಿಲ್ಲೆಗಳಲ್ಲಿಯೂ ಅನೇಕ ಬುಡಕಟ್ಟು ಸಮುದಾಯಗಳು ವಾಸವಾಗಿವೆ. ಇವರ ಜೀವನ ಕ್ರಮ ,ಊಟೋಪಚಾರ , ಸಾಂಸ್ಕೃತಿಕ ಆಚರಣೆಗಳು, ಆರಾಧನೆ, ಮತ್ತು ಉಡುಗೆ: ತೊಡುಗೆಗಳು, ಈ ನಾಡಿನ ಪರಿಸರಕ್ಕೆ ಅನುಗುಣವಾಗಿ ವೈವಿಧ್ಯಮಯವಾಗಿವೆ. ಬಳ್ಳಾರಿ, ಚಿತ್ರದುರ್ಗ, ಗುಲ್ಬರ್ಗ. ಕೊಪ್ಪಳ, ದಾವಣಗೆರೆ, ಹಾವೇರಿ ಅಲ್ಲದೇ,ಕರ್ನಾಟಕದ ಇತರೆ ಜಿಲ್ಲೆಗಳಲ್ಲಿಯೂ ನೆಲೆಸಿರುವ ಮೇದರು ಕರ್ನಾಟಕದ ಬಹು ಪ್ರಮುಖ ಬುಡಕಟ್ಟು ಸಮುದಾಯದವರಾಗಿದ್ದಾರೆ. ಇವರಲ್ಲದೇ ಮೇಸಬೇಡರು, ಬೇಡರು(ನಾಯಕರು) ಕಾಡುಗೊಲ್ಲರು, ಹಲಸರು,ಕೊರಗರು, ಮಲೆಯಕುಡಿಯರು, ಯರವರು, ಜೇನುಕುರುಬರು, ಕೊರಮ, ಹಾಲಕ್ಕಿ ಒಕ್ಕಲಿಗರು, ಗೋಸಂಗಿ, ಹಕ್ಕಿ-ಪಿಕ್ಕಿ, ಸೋಲಿಗರು ಮುಂತಾದ ಸಮುದಾಯಗಳನ್ನು ಕರ್ನಾಟಕ ರಾಜ್ಯವು ಗುರುತಿಸಿ ಬುಡಕಟ್ಟು ಪಟ್ಟಿಯಲ್ಲಿ ಸೇರಿಸಿರುವ 29 ಸಮುದಾಯಗಳಿವೆ. ಇವುಗಳಲ್ಲದೇ ಬುಡಕಟ್ಟುಗಳಾಗಿದ್ದು ಸಹ ಸರಕಾರದ ಪಟ್ಟಿಯಲ್ಲಿ ಬುಡಕಟ್ಟು ಗುಂಪಿಗೆ ಸೇರಿರದ ಇನ್ನೂ ಅನೇಕ ಸಮುದಾಯಗಳುಂಟು. ಇವರ ಆರ್ಥಿಕ ಸ್ಥಿತಿಯನ್ನು ನೋಡಲಾಗಿ ಕರ್ನಾಟಕದ ಬುಡಕಟ್ಟಿಗರು ಮೂಲ ಅವಶ್ಯಕತೆಗಳಿಲ್ಲದೆಯೂ ಅತಂತ್ರ ಸ್ಥಿತಿಯಲ್ಲಿದ್ದಾರೆ. ಈ ರಾಜ್ಯದ ಭೌಗೋಳಿಕ ಪ್ರದೇಶಾನುಸಾರ ಒಂದೊಂದು ಜಿಲ್ಲೆಯಲ್ಲಿ ನಿರ್ದಿಷ್ಟ ಬುಡಕಟ್ಟು ಸಮುದಾಯ ಸಾಂದ್ರವಾಗಿ ವಾಸಿಸುತ್ತಿರುವುದು ಕಂಡುಬರುತ್ತದೆ. ಕರ್ನಾಟಕದ ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಮೇಸಬೇಡರು ಮತ್ತು ಕಾಡುಗೊಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇವರಲ್ಲಿ ಕೆಲವರು ಅಲ್ಪ ಸ್ವಲ್ಪ ಭೂಮಿಯನ್ನು ಹೊಂದಿದ್ದು ವ್ಯವಸಾಯವನ್ನು ಆಶ್ರಯಿಸಿದ್ದಾರೆ. ಮತ್ತೆ ಕೆಲವರು ಬುಡಕಟ್ಟು ಕುಲಕಸುಬನ್ನು ಆಶ್ರಯಿಸಿರುವುದು ಕಂಡುಬರುತ್ತದೆ. ಮಿಕ್ಕವರು ಪ್ರಾದೇಶಿಕವಾಗಿ ದುಡಿಯುವ ಕಾರ್ಮಿಕ ವರ್ಗದವವರು.

ಸರಕಾರದ ಇತ್ತೀಚಿನ ಅಭಿವೃದ್ಧಿಯ ಯೋಜನೆಗಳಿಂದಾಗಿ ಉತ್ತರ ಕನ್ನಡ ಜಿಲ್ಲೆಯನ್ನು ಸೇರಿದಂತೆ ಇನ್ನೂ ಕೆಲವು ಜಿಲ್ಲೆಗಳ ಬುಡಕಟ್ಟಿಗರು ವಿಚಲಿತರಾಗಿದ್ದಾರೆ. ಈ ಪ್ರದೇಶದಲ್ಲಿ ಅರಣ್ಯ ವಿವಸ್ತ್ರೀಕರಣವು ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಿಂದ ನಡೆಯುತ್ತಲೇ ಬಂದಿದೆ. ಇದರಿಂದಾಗಿ ಅಲ್ಲಿನ ಆದಿವಾಸಿಗಳು ತಲ್ಲಣಗೊಂಡಿದ್ದಾರೆ. ಇತ್ತೀಚಿನ ಸೀಬರ್ಡ್ ಯೋಜನೆಯಿಂದಹಿಡಿದು,ಕೈಗಾ ಯೋಜನೆ, ಕಾಳಿ ಯೋಜನೆ, ಟೇಲ್ ರೇಸ್ ಯೋಜನೆ, ಲಿಂಗನಮಕ್ಕಿ ಮತ್ತು ಸೂಪ ಆಣೆಕಟ್ಟುಗಳ ನಿರ್ಮಾಣ ಸಮಯದಲ್ಲಿ ಇವರಿಗೆ ಅಲ್ಪ-ಸ್ವಲ್ಪ ಪರಿಹಾರ ಧನ ಕೊಟ್ಟು ಗುಳೆ ಎಬ್ಬಿಸಿದರು.

ಕರ್ನಾಟಕ ಬುಡಕಟ್ಟು ಸಮುದಾಯಗಳ ಸರ್ವತೋಮುಖವಾದ ಏಳಿಗೆಗೆ ಅನೇಕ ಅಭಿವೃದ್ಧಿ ನೀತಿಗಳು, ಯೋಜನೆಗಳು ರೂಪತಾಳಿದವು. ಆದರೆ ಈ ಎಲ್ಲ ಯೋಜನೆಗಳೂ ಈ ಸಮುದಾಯಗಳಿಗೆ ಅವರ ಪಾರಂಪರಿಕ ಮತ್ತು ಭೌಗೋಳಿಕ ಹಾಗೂ ಪರಿಸರ ಮೌಲ್ಯಗಳನ್ನು ರೂಪಿಸಿ ಕೊಡಲಾರವು. ಏಕೆಂದರೆ ಬುಡಕಟ್ಟು ಸಮುದಾಯಗಳಿಗೆ ಆಧುನಿಕ ಪ್ರಪಂಚದ ಅರ್ಥವಾಗದ ನಾಗರಿಕ ಜಾತ್ರೆಯ ದಿಬ್ಬಣಕ್ಕಿಂತ ತಮ್ಮ ಮೂಲ ಸಂಸ್ಕೃತಿಯ ಆಚರಣೆ ಮತ್ತು ನಂಬಿಕೆ ಮುಖ್ಯ. ಇದರಿಂದಾಗಿ ಕರ್ನಾಟಕರಾಜ್ಯದ ಅಭಿವೃದ್ಧಿಯ ನೀತಿಯನ್ನು ಇಲ್ಲಿಯ ಬುಡಕಟ್ಟು

ಸಮುದಾಯಗಳು ಒಪ್ಪಿಕೊಳ್ಳಲಾರವು. ಆರ್ಥಿಕವಾಗಿ ಒಂದು ರಾಜ್ಯ ಮತ್ತು ದೇಶದ ಅಭಿವೃದ್ಧಿ ನೀತಿಗಳು ಅಲ್ಲಿನ ಸಾಂಸ್ಕೃತಿಕ ಮೌಲ್ಯಗಳ ಸಂರಕ್ಷಣೆಯ ಜೊತೆಯಾಗಿ ಸಾಗಬೇಕು. ಇಲ್ಲವಾದಲ್ಲಿ ಲಿಖಿತರೂಪದಲ್ಲಿ ಇದ್ದರೂ ಅಪೂರ್ಣವಾದ ಒಂದು ಸಮುದಾಯದ ಸಂಸ್ಕೃತಿಯ ಸ್ವರೂಪ ಇತಿಹಾಸದ ಪುಟಗಳಲ್ಲಿ ಸೇರ್ಪಡೆಯಾಗುವುದಕ್ಕೆ ಮುಂಚೆ ನಾಶವಾಗುತ್ತವೆ. ತಾವು ನಂಬಿ ಬದುಕುವ ಬುಡಕಟ್ಟು ಕಸುಬನ್ನು ರಾತ್ರೋರಾತ್ರಿ ತೊರೆದು ನಾಗರಿಕ ಜೀವನಕ್ಕೆ ಬನ್ನಿರಿ ಎಂದು ಹೇಳುವ ನೀತಿ ಎಂತಹದು.? ಇದರಿಂದ ಸಂಪ್ರದಾಯಬದ್ಧ ನಾಗರಿಕ ಸಮುದಾಯಗಳು ಸಹ ವಿಚಲಿತಗೊಂಡಿವೆ. ಅರಣ್ಯ ಸಂಪತ್ತನ್ನು ವಿದೇಶಿ ವಿನಿಮಯದ ಹೆಸರಿನಲ್ಲಿ ನಾಶ ಮಾಡಲಾಗುತ್ತದೆ. ಅಲ್ಲಿ ಇದ್ದ ಗಿಡ, ಮರ, ಔಷಧಿ, ಖನಿಜವೆಲ್ಲವನ್ನು ವಿದೇಶಿಯರಿಗೆ ಮಾರಿ ಸಾಲದೆಂಬಂತೆ ನದಿ, ಕಣಿವೆಯ ಮತ್ತು ಅಂಗಳದ ಮಣ್ಣನ್ನು ಸಹ ಕಡಲಾಚೆಯ ನಾಡುಗಳಿಗೆ ಮಾರುವ ನೀತಿಗಳಿಗೆ ಏನೆನ್ನಬೇಕೋ ತಿಳಿಯದು. ಈ ಪರಿಸ್ಥಿತಿ ಕರ್ನಾಟಕದಲ್ಲಿ ಉಲ್ಬಣಗೊಂಡು ಇಲ್ಲಿನ ಬುಡಕಟ್ಟಿಗರ ಬದುಕು ಛಿದ್ರ ಛಿದ್ರವಾಗಿದೆ.

ಕರ್ನಾಟಕದಲ್ಲಿ ಮೇದ ಬುಡಕಟ್ಟು ಸಮುದಾಯಗಳು ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿಯೂ ಕಂಡುಬರುತ್ತವೆ. ಮೇದ ಜನಾಂಗದ ಕೆಲವು ಪದಗಳು ಮಾತ್ರ ಕರ್ನಾಟಕ ರಾಜ್ಯದ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ. ಆದರೆ ಇದಕ್ಕೆ ಸಮಾನಾರ್ಥ ಕೊಡುವ ಇದೇ ಸಮುದಾಯದ ಪರ್ಯಾಯ ಪದಗಳು ಇನ್ನೂ ಬುಡಕಟ್ಟು ಪಟ್ಟಿಗೆ ಸೇರಬೇಕಾಗಿದೆ. ಮೇದರ ಕುಲಕಸುಬು ಆಧಾರಿತ ವಾಣಿಜ್ಯರೂಪದ ಅಧ್ಯಯನಗಳು ಈತನಕ ನಾನು ಗಮನಿಸಿರುವಂತೆ ನಡೆದಿರುವುದು ಕಂಡುಬಂದಿಲ್ಲ. ಈ ಸಂದರ್ಭದಲ್ಲಿ ಕರ್ನಾಟಕದ ಮೇದ ಬುಡಕಟ್ಟು ಸಮುದಾಯದ ಅಭಿವೃದ್ಧಿಯ ಯೋಜನೆಗಳಿಗೆ ಅವರ ಸಾಂಸ್ಕೃತಿಕ ಅಧ್ಯಯನದ ಜೊತೆಗೆ ವಾಣಿಜ್ಯಬದುಕನ್ನು ಕುರಿತು ಕೈಗೊಂಡ ಈ ಅಧ್ಯಯನವು ಸಮುದಾಯದ ಬಗೆಗೆ ಯಾವುದೇ ನಿರ್ಧಾರಗಳಿಗೆ ಸಹಕಾರಿಯಾಗಬಲ್ಲದು.

1.6 ಮೇದ ಬುಡಕಟ್ಟು ಸಮುದಾಯದ ಪದನಿಷ್ಪತ್ತಿ ಮತ್ತು ಪೂರ್ವಾಧ್ಯಯನ:

1.6.1 ಪದನಿಷ್ಪತ್ತಿ : ಮೇದ Meda ಎಂದರೆ ಮೇದರ, ಮೇದಾರ-ಬಿದಿರಿನಿಂದ ಬುಟ್ಟಿ, ಮೊರ, ಚಾಪೆಯನ್ನು ತಯಾರಿಸುವವನು. ಅಥವಾ ಚಪಕಾರಕ, ವಂಶಚ್ಛೇದಿ (A man who plaits baskets mats,etc of bamboo spilts. A man of the basket-maker-castes.) ಎಂದು ಎಫ್. ಕಿಟಲ್ ಅವರು ತಮ್ಮ ಕನ್ನಡ-ಇಂಗ್ಲಿಷ್ ನಿಘಂಟುವಿನಲ್ಲಿ ಹೇಳಿದ್ದಾರೆ. ಮೇದರು ಎಂದರೆ , ಮೇದ ಸಮುದಾಯಕ್ಕೆ ಸೇರಿದ ಜನರು ಎಂದು ಅರ್ಥೈಸಬಹುದು. ಬಿದಿರಿನಿಂದ ಬುಟ್ಟಿ, ಮೊರ ಮತ್ತು ಇನ್ನೂ ಅನೇಕ ವಸ್ತುಗಳನ್ನು ತಯಾರಿಸುವುದು ಇವರ ಮೂಲ ಕಸುಬು. ಈ ಕಸುಬನ್ನು ಇತರೆ ಸಮುದಾಯದವರು ಮಾಡುವುದು ವಿರಳ; ಆದ್ದರಿಂದ ಚಪಕಾರಕ ವೃತ್ತಿ ಈ ಸಮುದಾಯದ ಅನನ್ಯತೆ. ಕಾರಣ ಮೇದರೊಳಲ್ಲದೇ ವಂಶ ಚ್ಛೇದಂ ಗಾರುಡಿದೊಳಲ್ಲ ಎಂದು ಸೂಕ್ತಿಸುಧಾವರಣದಲ್ಲಿ ವ್ಯಾಕರಣಕಾರ ಕೇಶಿರಾಜನ ತಂದೆ ಮಲ್ಲಿಕಾರ್ಜುನ ಹೇಳಿರುವುದು ಕಂಡುಬರುತ್ತದೆ. ಮೇದ

ಎಂಬ ಶಬ್ದದ ಜೊತೆಗೆ ಮೇದರಿ, ಮೇದರೆ, ಮ್ಯಾದಾರ, ಮೇದರ್, ಗೌರಿಗ, (ಗವರಿಗ,ಗವಳಿ ಗ) ಬುರುಡ, ಮಿಯಾದಾರ, ಮೇದಾರಿ , ಬುಡ್ಡರ್, ಎಂದು ಹಲವು ಸಮಾನಾರ್ಥಕ ಶಬ್ದಗಳಿಂದ ಕರೆಯುತ್ತಾರೆ. ಇವರ ಮೂಲ ಮಹೇಂದ್ರ ಪರ್ವತ, ಇವರು ಮಹೇಂದ್ರ ಪರ್ವತದಿಂದ ಬಂದವರಾದ್ದರಿಂದ ಮಹೇಂದ್ರರು,ಮಹೇಂದರು - ಮೆಂದರು - ಮೇದರೆ - ಮೇದ ಎಂದು ರೂಢಿಯಲ್ಲಿ ಬಂದಿದೆ ಎಂದು ಹೇಳುವರು. ಇವರು ಪಾರ್ವತಿಗೆ (ಗೌರಿ) ಬೇಕಾದ ಮೊರ ತಯಾರಿಸಲು ಜನ್ಮತಾಳಿದವರಾದ್ದರಿಂದ ಗೌರಿಗ (ಗೌರಿಯ ಮಕ್ಕಳು) ಎಂದು ಕರೆಯಲ್ಪಟ್ಟರು. ಮೇದ ಸಮುದಾಯವನ್ನು (ಜಾತಿ) 1956 ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪಟ್ಟಿಗೆ ಸೇರಿಸಲಾಯಿತು. ಈ ಸಮುದಾಯವನ್ನು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆ ಮಾಡಿರುವ ಮತ್ತು ಸಮಯಾನು ಸಾರದ ತಿದ್ದುಪಡಿಯನ್ನು ಕುರಿತು ಡಾ. ಕೆ. ಎಂ. ಮೈತ್ರಿ.ಅವರು ಹೀಗೆ ಹೇಳುತ್ತಾರೆ. " ಮೇದ ಸಮುದಾಯವನ್ನು 1956ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪರಿಷ್ಕೃತ ಆದೇಶದ ಪರಿಶಿಷ್ಟ 3 ,ಭಾಗ 8 ರ ಮೈಸೂರು ರಾಜ್ಯದ ಪಟ್ಟಿಯ ಕ್ರಮಸಂಖ್ಯೆ (7), 5ರ ಪ್ರಕಾರ ಕೊಡಗು ಜಿಲ್ಲೆಗೆ ಸೀಮಿತಗೊಂಡಂತೆ ಬುಡಕಟ್ಟು ಪಟ್ಟಿಗೆ ಸೇರಿಸಲಾಗಿದೆ. ಇದರ ಪ್ರಾದೇಶಿಕ ಮಿತಿಯನ್ನು 27.7.1977ರಂದು ಸಡಿಲಿಸಿ ಕರ್ನಾಟಕಕ್ಕೆ ವಿಸ್ತರಿಸಲಾಯಿತು. ಆದರೆ, ಈ ಬುಡಕಟ್ಟಿನ ಪರ್ಯಾಯ ಪದಗಳಾವುವೂ ಈ ಪಟ್ಟಿಯಲ್ಲಿ ಸೇರಿಸಲ್ಪಟ್ಟಿಲ್ಲ . ಮೇದರನ್ನೇ ಪ್ರತಿನಿಧಿಸುವ ಪದಗಳಾದ ಮೇದರ್, ಮೇದರಿ, ಗೌವರಿಗ, ಬುರುಡ, ಮತ್ತು ಬುಡ್ಡರ್, ಪದಗಳನ್ನು ಮೇದ ಪದದ ಪರ್ಯಾಯ ಪದಗಳೆಂದು ಪರಿಗಣಿಸಿ ಆ ಎಲ್ಲಾ ಪದಗಳಿಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಕರ್ನಾಟಕ ಸರಕಾರ 29.11.1977 ರಿಂದ ಒಂದು ವರ್ಷದ ಮಟ್ಟಿಗೆ ಕಲ್ಪಿಸಿ ಮೊಟಕುಗೊಳಿಸಿತು. ಜೊತೆಗೆ 1.12.1978; 28.11.1984; 7.11.1987; 5.12.1991 ಮತ್ತು 19.10.1995 ಗಳೆಂದು ಈ ಬುಡಕಟ್ಟಿನ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕರ್ನಾಟಕ ಸರಕಾರ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿರುವುದು. ಕೇಂದ್ರ ಸರಕಾರ ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷೆಯಿದೆ. ಮೇದರನ್ನು ಭಾಷಿಕ ಹಿನ್ನೆಲೆಯಲ್ಲಿ ಕನ್ನಡ ಮತ್ತು ತೆಲುಗು ಮೇದರೆಂದು ವಿಭಜಿಸ ಬಹುದು . "[6] ಮೇದರ ಬೆಡಗು ಮತ್ತು ಬಳಿಗಳು ಕರ್ನಾಟಕ ಮತ್ತು ಇತರೆ ರಾಜ್ಯದ ಮೇದರ ಬಳಿಗಳಲ್ಲಿ ಪ್ರಾದೇಶಿಕ ಭಾಷಾ ಪ್ರಭಾವ ಕಂಡುಬರುತ್ತದೆ. ಆದರೆ ಕರ್ನಾಟಕ ಮತ್ತು ಇತರೆ ರಾಜ್ಯದ ಬೆಡಗುಗಳ ಮೇದರಿಗೆ ವೈವಾಹಿಕ ಸಂಬಂಧ ಏರ್ಪಟ್ಟಿವೆ ಎಂದು ಸಮುದಾಯದ ಹಿರಿಯರು ಹೇಳುತ್ತಾರೆ.

ನನ್ನ ಅಧ್ಯಯನದ ಭೌಗೋಳಿಕ ವ್ಯಾಪ್ತಿಯ ಬಳ್ಳಾರಿ ಜಿಲ್ಲೆಯಲ್ಲಿ ವಾಸಿಸುವ ಮೇದರು ಆಂಧ್ರಪ್ರದೇಶ, ಮಹಾರಾಷ್ಟ್ರ ಸೇರಿದಂತೆ ಬೆಂಗಳೂರು, ಮಂಡ್ಯ, ಮೈಸೂರು ಪ್ರದೇಶದ ಮೇದರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಮೇದರು ಹೆಚ್ಚಾಗಿ ಕನ್ನಡ ಮಾತನಾಡುವರು. ಬಳ್ಳಾರಿ, ಸಿರಗುಪ್ಪ, ಹೊಸಪೇಟೆ, ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಮಾತ್ರ ಇವರು ಕನ್ನಡದ ಜೊತೆಗೆ ತೆಲುಗನ್ನೂ ಮಾತನಾಡುತ್ತಾರೆ.

ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿದ ಮೇದರ ಬೆಡಗುಗಳು ಅಥವಾ ಗೋತ್ರ ಹೆಜ್ಜಾಗಿ, ನಾಯಕರು, ಗೌಡ್ರು, ಮಾದೇಶರು, ಹಾಲ್ದಾರು, ಮಳೆಗಲ್‌ರು,(ಮಳೆಗಲ್ಲರು) ಹುಲಿ ಮತ್ತು ಸೂರ್ಯ ಗೋತ್ರದವರು ಇದ್ದಾರೆ. ಮೇದರನ್ನು ಅವರು ಮಾತನಾಡುವ ಭಾಷೆಯ ಆಧಾರದ ಮೇಲೆ ತೆಲುಗು ಮೇದರು ಮತ್ತು ಕನ್ನಡ ಮೇದರು ಎಂದು ವಿಭಾಗಿಸಲಾಗಿದೆ. ಮೇದ, ಮೇದಾರ, ಮ್ಯಾದರ ಎಂದು ಕನ್ನಡ ಮೇದರನ್ನು ಕರೆದರೆ ಮೆದರ್ಕಳ್, ಮೇದರಕಾರನ್ ಎಂದು ತೆಲುಗು ಮೇದರನ್ನು ಕರೆಯುತ್ತಾರೆ.

1.6.2 ಪೂರ್ವಾಧ್ಯಯನ: ಮೇದ ಬುಡಕಟ್ಟು ಸಮುದಾಯದ ಪೂರ್ವಾಧ್ಯಯನಗಳನ್ನು ಕುರಿತು ಹೇಳುವುದಾದರೆ, Thurston, E.,k.,ಅವರು The castes and tribes of southern India vol.5 ನಲ್ಲಿ ಮೇದ ಸಮುದಾಯದ ವಿವರ ನೀಡಿದ್ದಾರೆ. ಅನಂತ ಕೃಷ್ಣ ಅಯ್ಯರ್ ಅವರು The Mysore Tribes and castes ಹಾಗೂ The castes and tribes Nizam's Dominions ನಲ್ಲಿ ಮೇದರನ್ನು ಮೇದಾರ, ಬುರುಡ ಎಂಬ ಸಮಾನಾರ್ಥಕ ಶಬ್ದಗಳಿಂದ ಪರಿಚಯಿಸಿದ್ದಾರೆ. ಇದಲ್ಲದೇ Scheduled Tribes, k.s. Singh . karnataka state Gazetteer. Part –1 The sheduled Tribes Bombay Enthnographical survey of Mysore. ಗೆಜೆಟಿಯರ್ ಮತ್ತು ವರದಿಗಳಲ್ಲಿ ಈ ಸಮುದಾಯದ ಪರಿಚಯವನ್ನು ಮೇದ ಪದದ ಜೊತೆಗೆ ಸಮನಾರ್ಥಕ ಶಬ್ದಗಳಿಂದ ಪರಿಚಯಿಸಿದ್ದಾರೆ. ಇದಲ್ಲದೇ ಮೇದರ ಅಧ್ಯಯನ ಕುರಿತು ಡಾ. ಡಿ.ಆರ್. ಪಾಂಡುರಂಗ ಅವರ ದೀರ್ಘ ಲೇಖನ ಡಾ. ಹೆಚ್. ಜಿ. ಲಕ್ಕಪ್ಪಗೌಡ ಅವರ ಪ್ರಧಾನ ಸಂಪಾದಕತ್ವದ ಕರ್ನಾಟಕ ಬುಡಕಟ್ಟುಗಳು ಸಂಪುಟ. 2 ರಲ್ಲಿದೆ. ಡಾ. ಪಾಂಡುರಂಗ ಅವರು ಮೇದರ ಸೃಷ್ಟಿ ಪುರಾಣ, ಮೂಲ ಮತ್ತು ಮೇದರ ನೆಲೆಗಳನ್ನು ಕುರಿತು ಹೇಳಿದ್ದಾರೆ. ಅಲ್ಲದೇ ಮೇದರ ಸಂಸ್ಕೃತಿಯನ್ನು ಕುರಿತಂತೆ ಪರಿಚಯಿಸಿದ್ದಾರೆ. ಸಾಂಸ್ಕೃತಿಕ ಆಚರಣೆಗಳನ್ನು ಕುರಿತಂತೆ ಕೆಲವು ಪ್ರದೇಶದ ಪ್ರಾದೇಸಿಕ ಆಚರಣೆಗಳನ್ನು ಮಾತ್ರ ಗಮನಿಸಿದ್ದಾರೆ. ಇವರ ಆರ್ಥಿಕ ಜೀವನ ವಿಧಾನ ಕುರಿತಂತೆ ಕುಲಕಸುಬಿನ ವಾಣಿಜ್ಯದ ಬಗ್ಗೆ ಪ್ರಸ್ತಾಪ ಮಾಡಿರುವುದಿಲ್ಲ.

ಶ್ರೀನಿವಾಸ ಎನ್. ಅವರು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮೇದರು ಮತ್ತು ಕೊರಚರು: ವೃತ್ತಿ ಪದಕೋಶ ಎಂಬ ತಮ್ಮ ಪ್ರಬಂಧಲ್ಲಿ ಮೇದರು ತಯಾರಿಸುವ ಕೆಲವು ವಸ್ತುಗಳ ವಿವರಣೆಯನ್ನು ನೀಡಿರುವರು. ಆದರೆ ವಸ್ತುಗಳ ತಯಾರಿಕೆಯ ವಿಧಾನವನ್ನು ಮತ್ತು ಇವರ ವಾಣಿಜ್ಯ ಭಾಷೆಯನ್ನು ಕುರಿತು ಪ್ರಸ್ತಾಪಿಸಿಲ್ಲ. ಡಾ.ಕರಿಗೌಡ ಬೀಚನಹಳ್ಳಿ ಅವರ ಸಂಪಾದಕತ್ವದ ಕರಕುಶಲ ಕಲೆಗಳು ವಿಶ್ವಕೋಶ - 2 ರಲ್ಲಿ ಎನ್. ಹುಚ್ಚಪ್ಪ ಮಾಸ್ತರ ಅವರು ಬಿದಿರು ಮತ್ತು ಬೆತ್ತ ಎಂಬ ದೀರ್ಘವಾದ ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಇವರು ಬಿದಿರನ್ನು ಕುರಿತು ಸಸ್ಯಶಾಸ್ತ್ರೀಯ ದೃಷ್ಟಿಯಿಂದ ವಿವರಣೆಯನ್ನು ನೀಡಿರುವರು. ಮತ್ತು ಬಿದಿರು-ಬೆತ್ತದ ಕರಕುಶಲ ಕಲೆಯನ್ನು ಕುರಿತು ಪರಿಚಯಿಸಿರುವರು. ಅಲ್ಲದೇ ಬುಡಕಟ್ಟು ಕುಲಕಸುಬುಗಳು ಪುಟ. 183 ರಲ್ಲಿ ಡಾ.ಕೆ.ಎಂ. ಮೈತ್ರಿ. ಅವರು ಮೇದ ಬುಡಕಟ್ಟನ್ನು ಕುರಿತು ಪರಿಚಯಿಸಿದ್ದಾರೆ ಹಾಗೂ ಮೇದರ ಬುಡಕಟ್ಟು

ಸಂಗಡಕ್ಕೆ ಸೇರ್ಪಡೆಯ ಕುರಿತು ಅಂಕಿ ಅಂಶಗಳ ಸಮೇತ ವಿವರ ನೀಡಿರುವರು. ಭೀಮಣ್ಣ ಬೋಸ್ಹಾಳ ಅವರ ಸಂಪಾದಕತ್ವದ ಕಾಯಕ ಗೌರವ ಶಿವಶರಣ ಮೇದಾರ ಕೇತಯ್ಯ ಸ್ಮಾರಕ ಸಂಪುಟದಲ್ಲಿ ಡಾ. ಸಿದ್ದಯ್ಯ ಪುರಾಣಿಕ. ಡಾ. ಸಿಂಪಿಲಿಂಗಣ್ಣ ಮುಂತಾದ 14 ಜನ ಪ್ರಮುಖ ಲೇಖಕರು ಮೇದಾರ ಕೇತಯ್ಯನನ್ನು ಕುರಿತಾಗಿ ಹೇಳಿದ್ದಾರೆ. ಇದಲ್ಲದೇ ಅನೇಕ ಕಡೆ ಮೇದಾರ ಕೇತಯ್ಯನ ಕುರಿತಾದ ವಚನ, ಜನಪದಗೀತೆ, ಕೋಲಾಟದ ಪದ, ಕಥನ ಕವನಗಳಿವೆ. ಮೇದಾರ ಕೇತಯ್ಯನ ಕುರಿತಂತೆ ನಾಟಕ, ಕಿರುಪುಸ್ತಕ, ವಚನಗಳಿವೆ. ಈ ಸಮುದಾಯದ ಪವಾಡ ಪುರುಷನಾದ ಹನುಮಂತಜ್ಜನವರ ಬಗೆಗೆ ಪುಸ್ತಕಗಳು ಮುದ್ರಣಗೊಂಡಿವೆ. ಹುಬ್ಬಳ್ಳಿಯಿಂದ ವೈ.ಕೆ.ಹಳೆಪೇಟೆಯವರ ಸಂಪಾದಕತ್ವದಲ್ಲಿ ಮೇದಘರ್ಜನೆ ಮತ್ತು ಮಂಡ್ಯದಿಂದ ಫೆರೆಂಡೆಯವರ ಸಂಪಾದಕತ್ವದ ಕೇತೇಶ್ವರವಾಣಿ ಎಂಬ ಎರಡು ಪತ್ರಿಕೆಗಳು ಈ ಸಮುದಾಯದ ಕುರಿತು ಕಾಲಕಾಲಿಕ ಮಾಹಿತಿಯನ್ನು ಒದಗಿಸುವ ಪತ್ರಿಕೆಗಳಾಗಿವೆ.

ಇಲ್ಲಿಯವರೆಗೆ ಮೇದರ ಹಾಗೂ ಅವರ ಸಂಸ್ಕೃತಿ ಕುರಿತಾದ ಸಂಕ್ಷಿಪ್ತ ಅಧ್ಯಯನಗಳಾಗಿವೆ. ಇವರ ಜೀವನದ ಆರ್ಥಿಕ ಸ್ಥಿತಿಗತಿಗಳನ್ನು ಕುರಿತಂತೆ ಪ್ರಾದೇಶಿಕ ಅಧ್ಯಯನಗಳು ನಡೆಯಬೇಕಾಗಿದೆ. ಇವರ ಕುಲಕಸುಬನ್ನು ಕುರಿತಂತೆ ವ್ಯಾಪಕವಾದ ಅಧ್ಯಯನಗಳು ನಡೆಯುವುದು ಅವಶ್ಯವಾಗಿದೆ. ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಇವರ ಕುಲಕಸುಬಿನ ವಾಣಿಜ್ಯ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬೇಕಾಗಿದೆ.

ಈ ಮೇಲೆ ಸೂಚಿಸಿದ ಅಧ್ಯಯನಗಳಲ್ಲಿ ಮೇದರ ಸಂಸ್ಕೃತಿ ಮತ್ತು ಕುಲಕಸುಬುಗಳ ಬಗೆಗೆ ಹೇಳಿದ್ದರೂ ಸಹ ಇವರ ಕುಲಕಸುಬು ಆಧಾರಿತ ವಾಣಿಜ್ಯ ಕುರಿತಾದ ಸಮಗ್ರ ಅಧ್ಯಯನ ನಡೆದಿಲ್ಲ. ಆದ್ದರಿಂದ ಈ ಕುರಿತಾದ ಅಧ್ಯಯನದ ಮೂಲ ಉದ್ದೇಶವೇ ನನ್ನ ಅಧ್ಯಯನದ ವಿಷಯವಾಗಿದೆ. ಇಲ್ಲಿ ನನ್ನ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಇವರ ವಾರ್ಷಿಕ ಆವರ್ತನೆಗಳ ಜೊತೆಗೆ ಸಂಪ್ರದಾಯಗಳು ಹಾಗೂ ಕುಲಕಸುಬಿನ ವಾಣಿಜ್ಯ ಕುರಿತಾಗಿ ಮಾಹಿತಿ ನೀಡಿದ್ದೇನೆ. ಈ ಸಮುದಾಯದ ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ಭೌಗೋಳಿಕ ವ್ಯಾಪ್ತಿಯ ಮೇದರ ಒಳ ಹರಿವಿನ ಸತ್ಯಾಸತ್ಯತೆಯ ಒಂದು ಪರಿಚಯ ಇದಾಗಿದೆ.

1.7 ಮೇದರ ಸೃಷ್ಟಿ ಪುರಾಣಗಳು :

ಒಂದು ಜನಾಂಗದ ಅಥವಾ ಸಮುದಾಯದ ಮೂಲವನ್ನು ತಿಳಿಸಿಕೊಡುವ ಪೌರಾಣಿಕ ಕಥೆಗಳು ಆಯಾ ಸಮುದಾಯದ ಸೃಷ್ಟಿ ಪುರಾಣಗಳಾಗಿರುತ್ತವೆ. ಮೇದ ಸಮುದಾಯದ ಮೂಲವನ್ನು ಕುರಿತಾದ ಬುಡಕಟ್ಟು ಪುರಾಣಗಳು ಈ ಸಮುದಾಯದ ಸಂಸ್ಕೃತಿಯ ಜೊತೆಗೆ ಅವರ ಬುಡಕಟ್ಟು ಕಸುಬು ಮತ್ತು ಅದನ್ನೇ ಆಶ್ರಯಿಸಿರುವ ಕಾರಣಗಳಿಗೆ ಗಟ್ಟಿತನವನ್ನು ಕೊಡುತ್ತದೆ. ಪ್ರಸ್ತುತ ಜಾಗತೀಕರಣದ ಅಬ್ಬರದಲ್ಲಿಯೂ ತಮ್ಮ ಕುಲಕಸುಬನ್ನೇ ಆಶ್ರಯಿಸಿದ ಇವರ ವಾಣಿಜ್ಯ ತನ್ನದೇ ಆದ ನೈತಿಕ ಮೌಲ್ಯಗಳನ್ನು ಹೊಂದಿದೆ. ಇದಕ್ಕೆ ಇವರು ನಂಬಿರುವ ಸೃಷ್ಟಿಪುರಾಣಗಳು ಕಾರಣವಾಗಿವೆ. ಯಾವುದೇ ಬುಡಕಟ್ಟಿನ ಸಂಸ್ಕೃತಿಯ ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ

ಈ ಸಮುದಾಯದ ಸೃಷ್ಟಿ ಪುರಾಣಗಳು ಮತ್ತು ಐತಿಹ್ಯಗಳು ಮಹತ್ವದ ಪಾತ್ರ ವಹಿಸುತ್ತವೆ. ಇವರ ಸಂಪ್ರದಾಯ ಮತ್ತು ಆಚರಣೆಗಳಲ್ಲಿ ಪುರಾಣಾಧಾರಿತ ಆಚರಣೆಗಳನ್ನು ಕಾಪಾಡಿಕೊಂಡು ಬಂದಿರುತ್ತಾರೆ. ಇದಕ್ಕೆ ಇವರು ನಂಬಿರುವ ಸೃಷ್ಟಿ ಪುರಾಣಗಳು ಮತ್ತು ಅವುಗಳಲ್ಲಿಯ ಇವರ ದೃಢವಾದ ವಿಶ್ವಾಸವೇ ಕಾರಣವಾಗಿದೆ. ಇಂತಹ ಪುರಾಣಗಳು ಒಂದು ಸಮುದಾಯದಲ್ಲಿ ಅವರ ಆಚಾರ-ವಿಚಾರ ಸಂಪ್ರದಾಯಗಳ ಜೊತೆಗೆ ಜೀವನ ಕ್ರಮದಲ್ಲಿ ಏಕತೆಯನ್ನುಂಟುಮಾಡಿ ಸಾಮಾಜಿಕ ಸಂಘಟನೆಯನ್ನು ಭದ್ರಗೊಳಿಸುತ್ತದೆ. "ಒಂದು ಬುಡಕಟ್ಟಿನ ಜನರಿಗೆ ಸಂಬಂಧಿಸಿದಂತೆ ಇತಿಹಾಸ ಮಾಡುವ ಕೆಲಸವೇ ಬೇರೆ, ಪುರಾಣ ಮಾಡುವ ಕೆಲಸವೇ ಬೇರೆ. ಬುಡಕಟ್ಟಿನ ಜನಜೀವನ ಕಾಲದಿಂದ ಕಾಲಕ್ಕೆ ಹೇಗೆ ಬದಲಾಗಿದೆ ಎಂಬುದರ ತಿಳಿವಳಿಕೆಯನ್ನು ಇತಿಹಾಸ ತಂದುಕೊಡುವುದಿಲ್ಲ ; ಬುಡಕಟ್ಟಿನ ಅಸ್ತಿತ್ವಕ್ಕೆ ಅಗತ್ಯವಾದ ಕ್ರಿಯೆಯನ್ನು ಸೂಚಿಸುವುದು. ಈ ಕಾರಣದಿಂದಾಗಿ ಬುಡಕಟ್ಟಿನ ಜನರಿಗೆ ತಮ್ಮ ಇತಿಹಾಸಕ್ಕಿಂತಲೂ ತಮ್ಮ ಪುರಾಣಗಳು ಪ್ರಮುಖವಾಗುತ್ತವೆ, ಜನಜೀವನಕ್ಕೆ ಹೆಚ್ಚು ಹತ್ತಿರವಾಗುತ್ತವೆ, ಆ ಮೂಲಕ ಹೆಚ್ಚು ಆತ್ಮೀಯವಾಗುತ್ತವೆ. ಹೀಗಾಗಿ ಬುಡಕಟ್ಟಿನ ಜನ ತಮ್ಮ ಬುಡಕಟ್ಟಿನ ಇತಿಹಾಸವನ್ನು ತಿಳಿಯದೇ ಇದ್ದರೂ ಕೂಡ ತಮ್ಮ ಬುಡಕಟ್ಟಿನ ಪುರಾಣಗಳನ್ನು ತಿಳಿದಿರುತ್ತಾರೆ."[7] ಇಂತಹ ಹಲವು ಸೃಷ್ಟಿ ಪುರಾಣಗಳು ಮೇದ ಬುಡಕಟ್ಟು ಸಮುದಾಯದಲ್ಲಿ ಕಂಡುಬರುತ್ತವೆ. ಈ ಪುರಾಣಗಳು ಇವರ ಕಸುಬು, ಜನಾಂಗಿಕ ಮೂಲ ಮತ್ತು ಇವರ ದೈವಾರಾಧನೆಯ ಕುರಿತಂತೆ ಇವರಲ್ಲಿ ನಂಬಿಕೆಗೆ ಕಾರಣವಾಗಿವೆ. ಈ ಸಮುದಾಯಕ್ಕೆ ಸಂಬಂಧ ಪಟ್ಟಂತೆ ಅಂತಹ ಕೆಲವು ಸೃಷ್ಟಿ ಪುರಾಣಗಳು ಹೀಗಿವೆ.

ಪುರಾಣ ಒಂದು: ಮೇದರ ಮೂಲ ಕುರಿತಂತೆ ಒಂದು ಪೌರಾಣಿಕ ಕಥೆಯ ಹಿನ್ನೆಲೆ ಹೀಗಿದೆ: ಮಹಾಭಾರತದಲ್ಲಿ ಬರುವ ನೀತಿಶಾಸ್ತ್ರ ಪ್ರವೀಣನಾದ ವಿದುರನ ಮೂಲದವರು ಮೇದರು. ವಿದುರ ಎಂದರೆ ಬಿದಿರು ಎಂದು ಮೇದರು ಹೇಳುತ್ತಾರೆ. ಬಿದಿರು ಮೇದರ ವೃತ್ತಿಯ ಮುಖ್ಯ ಕಚ್ಚಾವಸ್ತುವಾಗಿದೆ. ವಿದುರ ಮತ್ತು ಬಿದಿರು ಪದಗಳು ಧ್ವನಿಸಾಮ್ಯವನ್ನು ಹೊಂದಿದ್ದು ಹೋಲಿಕೆಯನ್ನು ಕಾಣುತ್ತೇವೆ. ಆದ್ದರಿಂದಲೇ ಮೇದರು ತಾವು ವಿದುರನ ವಂಶಕ್ಕೆ ಸೇರಿದವರೆಂದು ಹೇಳುತ್ತಾರೆ. ಆದರೆ, ಇದಕ್ಕೆ ಅವಲೋಕಿಸಿದ ಯಾವ ಗ್ರಂಥದಲ್ಲಿಯೂ ಹೆಚ್ಚಿನ ವಿವರಣೆ ಕಂಡುಬರುವುದಿಲ್ಲ.

ಪುರಾಣ ಎರಡು: ಮೇದರ ಮೂಲ ಕುರಿತಂತೆ ಮತ್ತೊಂದು ಕಥೆ ಹೀಗಿದೆ: ಗಿರಿಜಾಕಲ್ಯಾಣದ ನಂತರ ಪಾರ್ವತಿ ಒಮ್ಮೆ ಗೌರಿ ವ್ರತವನ್ನು ಮಾಡಿ ದೇವತಾ ಮುತ್ತೈದೆಯರಿಗೆ ಬಾಗಿನ ಕೊಡಬೇಕೆಂದು ಬಯಸಿದಳು. ಬಾಗಿನ ಕೊಡಲು ಪಾರ್ವತಿಗೆ ಮೊರ ಬೇಕಾಗಿತ್ತು. ಮೊರ ಎಲ್ಲಿಯೂ ದೊರೆಯದೇ ಹೋದಾಗ ಪಾರ್ವತಿ ಶಿವನನ್ನು ಕೇಳಿದಳು. ಶಿವನು ತನ್ನ ವಾಹನವಾದ ನಂದಿಗೆ ಬಿದಿರಿನಿಂದ ಮೊರ ಹೆಣೆಯುವ ಕವರಿಗ (ಗವರಿಗ)ನನ್ನು ಸೃಷ್ಟಿಸಲು ಹೇಳಿದ. ಆಗ ವೃಷಭ ಮೆಲುಕು ಹಾಕಲು ಮೇದರ ಪೂರ್ವಿಕ ಹುಟ್ಟುತ್ತಾನೆ. ಪಾರ್ವತಿಯ ಕೋರಿಕೆಯನ್ನು ನಂದಿ ಮೇದನಿಗೆ ತಿಳಿಸಿದ. ಮೇದನು ಶಿವ ಮತ್ತು ನಂದಿಯರ ಆಜ್ಞೆಯಂತೆ ಶಿವನ ಶಂಕರಾಭರಣದೊಂದಿಗೆ ಭೂಲೋಕಕ್ಕೆ ಬಂದನು.

ಒಂದು ಬೆಟ್ಟದಲ್ಲಿ ತಾನು ತಂದ ಶಿವನ ಕೊರಳಿನ ಹಾವನ್ನು ತಲೆಕೆಳಗಾಗಿ ನೆಟ್ಟನು. ಹಾವು ಬಿದಿರಾಗಿ ಬೆಳೆಯುತ್ತಾ ಒಂದು ಹತ್ತಾಗಿ, ಹತ್ತು ನೂರಾಗಿ, ಬಿದಿರಿನ ಮೆಳೆಗಳು ಬೆಳೆದುನಿಂತವು. ಮೇದನು ತನ್ನ ಕುಶಲತೆಯಿಂದ ಬಿದಿರನ್ನು ಸವರಿ ಹದವಾಗಿ ಸೀಳಿ ಸುಂದರವಾದ ಮೊರವನ್ನು ಮಾಡಿ ಪಾರ್ವತಿಗೆ ಅರ್ಪಿಸಿದ. ಮೇದ ಪುನಃ ಭೂಲೋಕಕ್ಕೆ ಬಂದು ಬಿದಿರಿನ ಮೆಳೆಗಳಿದ್ದ ಬೆಟ್ಟದಲ್ಲಿ ತನ್ನ ಚಪಕಾರಕ ವೃತ್ತಿಯಲ್ಲಿ ಮುಂದುವರಿದನು. ಇವನ ವಂಶಜರೇ ತಾವು ಎಂದು ಮೇದರು ಹೇಳುವರು. ಅಂತೆಯೇ ಬಿದಿರಿನ ಬುಡ ಹಾವಿನ ತಲೆಯನ್ನು ಮತ್ತು ತುದಿ ಹಾವಿನ ಬಾಲವನ್ನು ಹೋಲುತ್ತದೆ ಎಂದು ಮೇದರು ಬಿದಿರನ್ನು ತೋರಿಸಿ ಈ ಕಥೆಯನ್ನು ಸಮರ್ಥಿಸಿಕೊಳ್ಳುತ್ತಾರೆ.

ಪುರಾಣ ಮೂರು : ಮೇದರು ತಾವು ಮಹೇಂದ್ರ ಪರ್ವತದಿಂದ ಬಂದ ಶಿವಗಣದ ವಂಶಜರು ಎನ್ನುವುದಕ್ಕೆ ಇನ್ನೊಂದು ಸೃಷ್ಟಿಪುರಾಣ ಹೀಗಿದೆ. ಶಿವನ ಮಾವನಾದ ದಕ್ಷನು, ಒಂದು ಮಹಾಯಜ್ಞವನ್ನು ಮಾಡಲು ಸಕಲ ಸಿದ್ಧತೆಯನ್ನು ಮಾಡಿಕೊಂಡಿದ್ದನು. ದಕ್ಷನು ತನ್ನ ಯಜ್ಞಕ್ಕೆ ಅಳಿಯನಾದ ಶಿವನನ್ನು ಕರೆಯಲು ಕೈಲಾಸಕ್ಕೆ ಬಂದನು. ಅಲ್ಲಿ ಶಿವನನ್ನು ಕಾಣುತ್ತಲೇ ಶಿವನಿಗೆ ಎರಡೂ ಕೈಗಳನ್ನೆತ್ತಿ ನಮಸ್ಕರಿಸಿದ. ಧ್ಯಾನಮಗ್ನನಾದ ಶಿವನು ಇದನ್ನು ಗಮನಿಸಲಿಲ್ಲ. ಮಾವನಾದ ನಾನು ಮಾಡಿದ ನಮಸ್ಕಾರಕ್ಕೆ ಪ್ರತಿ ನಮಸ್ಕಾರವನ್ನು ಶಿವನು ಮಾಡಲಿಲ್ಲ ಎಂದು ಮಹಾ ಕೋಪದಿಂದ ದಕ್ಷನು ತನ್ನ ತಾಣಕ್ಕೆ ಮರಳಿದ. ನಾನು ಮಾಡುವ ಈ ಮಹಾಯಜ್ಞಕ್ಕೆ ಶಿವನಾಗಲಿ, ಅವನ ಸತಿ-ಸುತರಾಗಲೀ, ಯಾರೇ ಬಂದರೂ ಅವರನ್ನು ಸತ್ಕರಿಸಿ ಗೌರವ ಕೊಡಬೇಡಿರಿ ಎಂದು ಕಟ್ಟಪ್ಪಣೆ ವಿಧಿಸಿದ. ಕೆಲವೇ ದಿವಸಗಳಲ್ಲಿ ದಕ್ಷನ ಮಹಾಯಜ್ಞ ಆರಂಭವಾಯಿತು.

ಅತ್ತ ಕೈಲಾಸದಲ್ಲಿ ಪಾರ್ವತಿಯು ಶಿವನು ಬೇಡವೆಂದು ಎಷ್ಟು ಹೇಳಿದರೂ ಲೆಕ್ಕಿಸದೆ ಗಣಪತಿಯೊಡನೆ ತಂದೆಯ ಮನೆಗೆ ಬರುತ್ತಾಳೆ. ಯಜ್ಞ ಮಂಟಪದಲ್ಲಿ ಪಾರ್ವತಿಯನ್ನು ಯಾರೂ ಸತ್ಕರಿಸಿ ಗೌರವಿಸಲಿಲ್ಲ. ಈ ಅಪಮಾನವನ್ನು ಸಹಿಸದೆ ಪಾರ್ವತಿಯು ದುಃಖದಿಂದ ಕಣ್ಣೀರಿಟ್ಟಳು. ಜಗಜ್ಜನನಿಯಾದ ಪಾರ್ವತಿಯು ದುಃಖಿಸುವುದನ್ನು ಕಂಡು ಭೂಮಿಯು ಬಾಯಿಬಿಟ್ಟಿತು. ಕ್ಷಣದಲ್ಲಿಯೇ ಪಾರ್ವತಿಯು ಭೂಮಿಯ ಕಂದಕದಲ್ಲಿ ಹಾರಿ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ.

ಮುಂದೊಂದು ಕಾಲದಲ್ಲಿ ಪಾರ್ವತಿಯು ಹಿಮವಂತರಾಜನ ಮಗಳಾಗಿ ಜನಿಸಿದಳು. ಆಗ ಶಿವನು ಅಲ್ಲಿಗೆ ಬಂದು ಪಾರ್ವತಿಯ ಜನ್ಮ ವೃತ್ತಾಂತವನ್ನು ತಿಳಿಸಿ ಪುನಃ ಅವಳನ್ನೇ ಮದುವೆಯಾಗುತ್ತಾನೆ. ಹೀಗೆಯೇ, ಒಂದು ದಿವಸ ಶಿವಪಾರ್ವತಿಯರು ಆನಂದದಿಂದ ಕುಳಿತಿದ್ದರು. ಪಾರ್ವತಿಯು ಶಿವನನ್ನು ತಮ್ಮ ಗಿರಿಜಾಕಲ್ಯಾಣದ ವೃತ್ತಾಂತಕ್ಕೆ ಕಾರಣ ಕೇಳಿದಳು. ಆಗ ಶಿವನು ನೀನು ನನ್ನ ಆಜ್ಞೆಯನ್ನು ಮೀರಿ ತವರು ಮನೆಗೆ ಹೋದೆ. ನಿನ್ನ ತವರು ಮನೆಯ ಮೇಲಿನ ಅತಿಯಾದ ವ್ಯಾಮೋಹವೇ ಇದಕ್ಕೆ ಕಾರಣವೆಂದು ಹೇಳಿದನು. ನಿನಗಿರುವ ತವರಿನ ಮೇಲಿನ ವ್ಯಾಮೋಹ ಹೊರಟು ಹೋಗಲು ವ್ರತವನ್ನು ಮಾಡಿ ಮುತ್ತೈದೆಯರಿಗೆ ಮೊರದಲ್ಲಿ ಬಾಗಿನ ಕೊಡಬೇಕೆಂದು ತಿಳಿಸಿದ. ಅದಕ್ಕೆ

ಪಾರ್ವತಿಯು ವ್ರತವನ್ನು ಮಾಡಿ ಬಾಗಿನ ಕೊಡಲು ಚಿನ್ನದ ಮೊರಗಳನ್ನು ಮಾಡಿಸುತ್ತಾಳೆ. ಚಿನ್ನದ ಮೊರಕ್ಕೆ ಮೂಲೆ ಹೆಣಿಗೆ ಮತ್ತು ಕಟ್ಟು ಇರುವುದಿಲ್ಲ ಆದ್ದರಿಂದ ಅವು ಬಾಗಿನ ಕೊಡಲು ಶ್ರೇಷ್ಠವಲ್ಲ ಎಂದು ನಾರದ ಸೂಚಿಸುತ್ತಾನೆ. ಹೆಣಿಗೆ ಮತ್ತು ಕಟ್ಟು ಇಲ್ಲದ ಮೊರ ಸಿಗದೆ ಪಾರ್ವತಿಯು ಕಂಗಾಲಾದಳು. ಆಗ ನಾರದನ ಸಲಹೆಯಂತೆ ಶಿವನಲ್ಲಿ ಮೊರೆ ಹೊಕ್ಕಳು. ಶಿವನು ತನ್ನ ಕೊರಳಿನ ಶಂಕರಾಭರಣವನ್ನು ತೆಗೆದು ಭೂಲೋಕಕ್ಕೆ ಎಸೆದನು. ಭೂಮಿಯಕಡೆ ತಲೆಕೆಳಗಾಗಿ ಬಂದ ನಾಗಸರ್ಪವು ಮಹೇಂದ್ರ ಪರ್ವತದಲ್ಲಿ ನೆಟ್ಟು ಬಿದಿರಿನ ಮರವಾಗಿ ಬೆಳೆಯಿತು. ಶಿವನ ಆಜ್ಞೆಯಂತೆ ಗಣಪತಿಯು ಗಣಸಮೂಹದೊಂದಿಗೆ ಭೂಲೋಕದ ಮಹೇಂದ್ರ ಪರ್ವತಕ್ಕೆ ಮಾನವ ರೂಪದಲ್ಲಿ ಆಗಮಿಸಿದರು. ಅಲ್ಲಿ ಗಣಗಳ ಜೊತೆಗೂಡಿ ಶಿವನು ಕೊಟ್ಟ ತ್ರಿಶೂಲ ಮತ್ತು ಗದೆಗಳನ್ನು ಕತ್ತಿ ಕೊರಡು, ಒಂಬುಗಳನ್ನಾಗಿ ಬಳಸಿ ಬಿದಿರಿನಿಂದ ಹೆಣಿಗೆ ಮತ್ತು ಕಟ್ಟು ಹಾಕಿ, ಮೂಲೆ ತಿರುವಿದ ಮೊರ ಹೆಣೆದು ಪಾರ್ವತಿಗೆ ಕೊಡುತ್ತಾರೆ. ಗಣಪತಿಯು ಗಣಸಮೂಹದೊಂದಿಗೆ ಬಿದಿರಿನ ಕಸುಬಾದ ಚಿಪಕಾರಕ ವೃತ್ತಿಯಲ್ಲಿಯೇ ಮುಂದುವರಿಯುತ್ತಾರೆ. ಮುಂದೆ ಈ ಗಣಸಮೂಹ ಗಂಧರ್ವ ಕನ್ಯೆಯರನ್ನು ಮದುವೆಯಾಗಿ ಮಕ್ಕಳನ್ನು ಸಹ ಪಡೆಯುತ್ತಾರೆ.

ಕೆಲವು ಸಂವತ್ಸರಗಳ ನಂತರ ಶಿವನು ತನ್ನ ಗಣಸಮೂಹಗಳನ್ನು ಹಿಂತಿರುಗಿ ಕೈಲಾಸಕ್ಕೆ ಕರೆಸಿಕೊಳ್ಳುತ್ತಾನೆ. ಈ ಗಣಸಮೂಹ ತಮ್ಮ ಸತಿಸುತರನ್ನು ಜೊತೆಯಲ್ಲಿ ಕೈಲಾಸಕ್ಕೆ ಕರೆದುಕೊಂಡು ಹೋಗದಾದರು. ನೀವುಗಳು ಇಲ್ಲಿಯೇ ಇದ್ದು ಈ ಚಿಪಕಾರಕವೃತ್ತಿಯನ್ನೇ ಕುಲಕಸುಬಾಗಿಸಿಕೊಂಡು ಜೀವನ ಸಾಗಿಸಿರಿ ಎಂದು ಗಣ ಸಮೂಹವು ತಮ್ಮ ಸತಿಸುತರಿಗೆ ಹೇಳಿದರು. ಶಿವನ ವಂಶಜರಾದ ನೀವು ಮಹೇಂದ್ರಾಚಲದ ಮಹೇಂದ್ರರು. ಭೂಮಿಯ ಮೇಲಿನ ಬಿದಿರು ನಿಮ್ಮ ಸ್ವತ್ತು . ನಿಮ್ಮ ಕುಶಲತೆಯಿಂದ ತಯಾರಿಸುವ ಬಿದಿರಿನ ವಸ್ತುಗಳು ಪೂಜಾರ್ಹವೂ ಮತ್ತು ಅನೇಕ ಮಂಗಳ ಕಾರ್ಯದಲ್ಲಿ ಬಳಸುವಂತಾಗಲಿ ಎಂದು ಹೇಳಿ ಸಮಸ್ತ ಗಣಸಮೂಹವು ಕೈಲಾಸಕ್ಕೆ ತೆರಳಿತು.

ಅಂತೆಯೇ ಮೇದರು ಭೂಮಿಯ ಮೇಲಿನ ಬಿದಿರು ನಮ್ಮ ಸ್ವತ್ತು ಮತ್ತು ನಾವು ಶಿವನ ವಂಶಜರು ಎಂದು ಹೇಳುತ್ತಾರೆ. ಈ ಕಥೆಯಲ್ಲಿ ಈ ಸಮುದಾಯದ ಕುಲಕಸುಬಿನ ಮೂಲ ಮತ್ತು ಅದರ ಆವಿಷ್ಕಾರದ ಮಾತೃ ಸಂಸ್ಕೃತಿಯನ್ನು ಇಲ್ಲಿ ಗಮನಿಸಬಹುದು. ಈ ಕಥೆ ಬಿದಿರಿನ ಮಾಲೀಕತ್ವವನ್ನು ಸಹ ಹೇಳುತ್ತದೆ. ಅಲ್ಲದೇ ಇಂತಹ ಕಥೆಗಳು ಇವರ ಕಸುಬಿನ ಜನ್ಮವೃತ್ತಾಂತದ ಜೊತೆಗೆ ಕೌಶಲ್ಯದ ಮೌಲ್ಯವನ್ನು ರೂಪಿಸಿ ನಂಬಿಸುತ್ತವೆ. ಕಾರಣ ಈಗಲೂ ಸಹ ಮೇದರು ಮೊರಗಳನ್ನು ಹೆಣೆಯುವಾಗ ಮೊರದ ಮೂಲೆಯನ್ನು ತಿರುವುವಾಗ ಮತ್ತು ಅದರ ಅಂಚಿಗೆ ಕಟ್ಟು ಹಾಕುವಾಗ ತುಂಬಾ ಎಚ್ಚರ ವಹಿಸುತ್ತಾರೆ. ಕೊಳ್ಳುವ ಗ್ರಾಹಕರು ಸಹ, ಇದನ್ನು ಗಮನಿಸಿ ಮೊರವನ್ನು ಕೊಳ್ಳುತ್ತಾರೆ.

ಪ್ರಸ್ತುತ ಪುರಾಣದಿಂದ ಪುರಷ, ಸ್ತ್ರೀಯ ಮೇಲಿನ ತನ್ನ ಅಧಿಕಾರವನ್ನು ಇನ್ನಷ್ಟು ಬಲಗೊಳಿಸಲು ರೂಪಿಸಿದ ಸನ್ನಿವೇಶವಿದು. ಮತ್ತು ಇಲ್ಲಿ ಬಳಸಿದ ಮಾತುಗಳು ಸ್ತ್ರೀತನದ ಪೂರ್ಣತೆಯ ನಂಬಿಕೆಗಳಿಗೆ ಗಟ್ಟಿತನವನ್ನು ಕೊಡುತ್ತವೆ. ಈಗಲೂ ಸ್ತ್ರೀವಾದಿಗಳು ಇದನ್ನು ಸಮರ್ಥಿಸಿಕೊಳ್ಳುತ್ತಾರೆ.

ಪುರಾಣ ನಾಲ್ಕು: ಕುಲಕಸುಬಾದ ಬಿದಿರಿನ ಕೆಲಸವನ್ನು ಆಶ್ರಯಿಸಿದ ಮೇದರು ಎಂದೂ ಶ್ರೀಮಂತರಾಗುವುದಿಲ್ಲ, ಆದರೆ, ಇವರು ಕುಲಕಸುಬನ್ನು ನಂಬಿದರೆ, ಊಟ ಮತ್ತು ಬಟ್ಟೆಗೆ ಕೊರತೆ ಆಗುವುದಿಲ್ಲ ಎಂದು ಇವರ ನಂಬಿಕೆ. ಈ ಕುರಿತಾಗಿ ಒಂದು ಕಥೆ ಹೀಗಿದೆ. ಬಾಗಿನ ಕೊಡಲು ಪಾರ್ವತಿಗೆ ಬೇಕಾದ ಬಿದಿರಿನ ಮೊರ ಹೆಣೆದು ಕೊಡಲು ಗಣಸಮೂಹ ಮಹೇಂದ್ರ ಪರ್ವತಕ್ಕೆ ಬರುತ್ತಾರೆ. ಬಂದ ಕೆಲಸ ಮುಗಿದ ನಂತರ ಇವರು ಬಿದಿರಿನ ಕೆಲಸವನ್ನೇ ಕಸುಬಾಗಿಸಿಕೊಂಡು ಭೂಮಿಯ ಮೇಲೆ ಸುಖವಾಗಿದ್ದರು. ಇವರಲ್ಲಿ ಇನ್ನೂ ಕೆಲವರು, ಮದ್ಯ, ಮಾಂಸ ಭಕ್ಷಿಸುತ್ತಾ ಅತಿಸುಖಿಗಳಾಗಿದ್ದರು. ಕೆಲವು ವರ್ಷಗಳ ನಂತರ ಇವರನ್ನು ನೋಡಿಕೊಂಡು ಹೋಗಲು ಶಿವನು ಮಾರುವೇಷದಲ್ಲಿ ಭೂಲೋಕಕ್ಕೆ ಬರುತ್ತಾನೆ. ಜಂಗಮ ವೇಷಧಾರಿಯಾದ ಶಿವನನ್ನು ಮೇದರು ಯಾರೂ ಗುರುತಿಸುವುದಿಲ್ಲ. ಸೋಜಿಗನಾದ ಶಿವನು, ನಾನು ನಿಮ್ಮ ಶಿವ ಬಂದಿದ್ದೇನೆ ಕೈಲಾಸಕ್ಕೆ ಹೋಗೋಣ ನಡೆಯಿರಿ ಎಂದನು. ಅವರಲ್ಲಿ ಕೆಲವರು ಶಿವನ ಕರೆಗೆ ಒಗೊಟ್ಟು ಹೊರಟು ನಿಂತರು. ಇಲ್ಲಿಯೇ ನಾವು ಸುಖವಾಗಿದ್ದೇವೆ ಆದ್ದರಿಂದ ನಾವು ಕೈಲಾಸಕ್ಕೆ ಬರುವುದಿಲ್ಲ ಎಂದು ಕೆಲವರು ಹೇಳಿದರು. ಈ ಮಾತು ಕೇಳಿ ಶಿವನಿಗೆ ಕೋಪ ಬರುತ್ತದೆ. ನನ್ನಂತೆಯೇ ಸಾತ್ವಿಕರಾಗಿದ್ದು ನನ್ನ ಹಿಂದೆ ಕೈಲಾಸಕ್ಕೆ ಹೊರಟು ನಿಂತ ನೀವು ಮಾತ್ರ ನನ್ನ ಮಕ್ಕಳು. ಮದ್ಯ, ಮಾಂಸ ಕುಡಿದು ತಿಂದು ತಾಮಸಿಗರಾದ ಅವರು ಗೌರಿಯ ಮಕ್ಕಳು. ಅವರಿಗೆ ಈ ಭೂಮಿಯ ಮೇಲೆ ಕುಲಕಸುಬು ಒಂದೇ ಗತಿಯಾಗಲಿ, ಅವರಿಗೆ ಹಿಡಿಗೂಳು ಮಾತ್ರ ದೊರೆಯುವಂತಾಗಲಿ ಎಂದು ಶಪಿಸಿದನು. ಆದ್ದರಿಂದ ಕುಲಕಸುಬನ್ನೇ ಆಶ್ರಯಿಸಿದ ಮೇದರು ಶ್ರೀಮಂತರಾಗುವುದಿಲ್ಲ ಎಂದು ಮೇದರು ನಂಬಿ ಹೇಳುತ್ತಾರೆ.

ಪ್ರಸ್ತುತ ಕಥೆಯು ಈ ಸಮುದಾಯದವರನ್ನು ತಾವು ಬಡವರು ಎನ್ನುವ ಮಾನಸಿಕ ಸಿದ್ಧತೆಗೆ ಒಪ್ಪಿಸುತ್ತದೆ. ಒಂದು ವೇಳೆ ಇವರು ಕುಲಕಸುಬಿನಿಂದ ತಮ್ಮ ಖರ್ಚು ನೀಗಿಸಿ ಅಲ್ಪ-ಸ್ವಲ್ಪ ಹಣವನ್ನು ಉಳಿತಾಯ ಮಾಡುವ ಮನಸ್ಸು ಮಾಡಿದರೂ ಸಹ ನಾವೆಂದೂ ಶ್ರೀಮಂತರಾಗುವುದಿಲ್ಲವಲ್ಲ? ಎನ್ನುವ ಭ್ರಮೆ ಇವರನ್ನು ಅಧಿಕ ಖರ್ಚಿಗೆ ದಾರಿಮಾಡಿ ಆರ್ಥಿಕ ಅಸಮಾನತೆಗೆ ಮತ್ತಷ್ಟು ಪುಷ್ಟಿನೀಡುತ್ತದೆ.

ಪುರಾಣ ಐದು: ಒಮ್ಮೆ ಶಿವಪಾರ್ವತಿಯರು ನಂದಿಯ ಮೇಲೆ ಭೂಮಾರ್ಗವಾಗಿ ಹೊರಟಿದ್ದರು. ಆಗ ಭೂಲೋಕದಲ್ಲಿ ಭೀಕರ ಕ್ಷಾಮ ಬಂದಿತ್ತು. ಮೇದರಿಗೆ ಕಸುಬು ಮಾಡಲು ಬಿದಿರು ಸಿಗದಾಯಿತು. ಆಹಾರದ ಅಭಾವದಿಂದ ಎಳೆಬಿದಿರು ತಂದು ಬೇಯಿಸಿ ತಿನ್ನುತ್ತಿರುತ್ತಾರೆ. ನನ್ನ ಮಕ್ಕಳಾದ ಗೌರಿಗರಿಗೆ ಈ ಗತಿ ಬರಬಾರದಿತ್ತೆಂದು ಪಾರ್ವತಿಯು ದುಃಖಿಸುತ್ತಾಳೆ. ಇವರಿಗೆ ಏನಾದರೂ ದಾರಿ ತೋರಿಸಬೇಕೆಂದು ಶಿವನಲ್ಲಿ ಮೊರೆ ಇಡುತ್ತಾಳೆ. ಆಗ

ಶಿವನು ಪಾರ್ವತಿಯೊಂದಿಗೆ ಮೇದರ ಮುಂದೆ ಪ್ರತ್ಯಕ್ಷನಾದ. ಮಕ್ಕಳೇ ನಿಮಗೆ ಏನು ಬೇಕು ಕೇಳಿ ನಿಮಗೊಂದು ವರ ಕೊಡುತ್ತೇನೆ ಎಂದನು. ಆಗ ಮೇದರು ದೇವಾ ನಮಗೆ ಕಸುಬು ಮಾಡಲು ಹಸಿಬಿದಿರು ಸಿಗದಾಗಿದೆ, ಹೊಟ್ಟೆಗೆ ಒಂದು ಗುಟುಕು ಗಂಜಿಗೂ ಗತಿ ಇಲ್ಲದಾಗಿದೆ, ಅದನ್ನು ಕರುಣಿಸಿದರೆ ಸಾಕು ಎಂದು ಬೇಡಿಕೊಂಡರು. ಆಗ ಶಿವನು ತಥಾಸ್ತು ಇನ್ನು ಮುಂದೆ ಈ ಭೂಮಿಯ ಮೇಲೆ ನಿಮಗೆ ಹಸಿಬಿದಿರು ಮತ್ತು ಬಿಸಿಗಂಜಿಗೆ ಕೊರತೆ ಆಗದಂತೆ ವರ ಕೊಟ್ಟಿರುವೆ ಎಂದು ಹೇಳಿ ಶಿವ ಪಾರ್ವತಿಯರು ಅದೃಶ್ಯರಾದರು. ಶಿವನು ಭೂಮಿಯ ಮೇಲೆ ಪ್ರತ್ಯಕ್ಷನಾದ ಪ್ರದೇಶವೇ ಈಗಿನ ಆಂಧ್ರಪ್ರದೇಶದ ಸೀಕಾಕುಲಂ ಜಿಲ್ಲೆಯ ಮಹೇಂದ್ರ ಪರ್ವತ. ಈಗಲೂ ಅಲ್ಲಿ ಹಳೆಯ ದೊಡ್ಡಬೆಟ್ಟದಲ್ಲಿ ಒಂದು ಪುರಾತನ ಶಿವಾಲಯ ಇದೆ. ಈ ಮಹೇಂದ್ರ ಪರ್ವತದಿಂದ ನಾವು ಬಂದವರಾದ್ದರಿಂದ ನಮ್ಮನ್ನು ಮಹೇಂದ್ರರು, ಮಹೇಂದರು, ಮೇಂದರು, ಮೇದರು, ಮೇದ, ಎಂದು ಉಚ್ಚಾರಣೆಯಲ್ಲಿ ಆದ ಬದಲಾವಣೆಯನ್ನು ಈ ಸಮುದಾಯದ ಹಿರಿಯರು ಮತ್ತು ಅನುಭವಿಗಳಾದ ಪ್ರೊಫೆಸರ್ ಬಿ.ಆರ್. ಸುರುಪುರ ಅವರು ಹೇಳುವರು. ಈ ಕುರಿತಂತೆ 1954 ರಲ್ಲಿ ಗುಂತಕಲ್ಲಿನಲ್ಲಿ ಅಖಿಲ ಭಾರತ ಪ್ರಥಮ ಮೇದರ ಸಮ್ಮೇಳನ ನಡೆಯಿತು. ಇದರ ಅಧ್ಯಕ್ಷತೆಯನ್ನು ಬೆಳಗಾವಿಯ ತೆಲಿಗಿಳಿ ಭೀಮಪ್ಪನವರು ವಹಿಸಿಕೊಂಡಿದ್ದರು. ಪ್ರಸ್ತುತ ಸಮಾವೇಶವಲ್ಲಿ ಒಂದು ಗೊತ್ತುವಳಿಯನ್ನು ಜಾರಿಗೊಳಿಸಲಾಯಿತು. "ಮಹೇಂದ್ರ ಪರ್ವತದಿಂದ ಬಂದ ಶಿವ ಪಾರ್ವತಿಯರ ಮಕ್ಕಳಾದ ನಾವು ಇನ್ನು ಮುಂದೆ ನಮ್ಮನ್ನು ಮಹೇಂದ್ರರು ಎಂದು ಹೇಳಬೇಕು". ಎಂದು ಒಂದು ಗೊತ್ತುವಳಿಯನ್ನು ಜಾರಿ ಮಾಡಿದುದಾಗಿ ಬಿ.ಆರ್.ಸುರುಪುರ ಅವರು ಹೇಳುತ್ತಾರೆ.

ಈ ಕಥೆಗೆ ಪೂರಕವೆಂಬಂತೆ ಕುಲಕಸುಬನ್ನೇ ಅವಲಂಬಿಸಿದ ಮೇದರು ನಿರ್ಗತಿಕರಾಗಿರುವುದಿಲ್ಲ. ನೀವು ಏಕೆ ಕುಲಕಸುಬನ್ನೇ ಅವಲಂಬಿಸಿದ್ದೀರಿ ? ದುಡಿದು ತಿನ್ನಲು ಈ ದೇಶದಲ್ಲಿ ಬೇಕಾದಷ್ಟು ಅವಕಾಶಗಳಿವೆ ಎಂದು ಪ್ರಶ್ನಿಸಿದರೆ , ನಮ್ಮ ಕಸುಬಿನಿಂದ ನಮಗೆ ನಿತ್ಯ ಅವಶ್ಯಕತೆಗಳಿಗೆ ಕೊರತೆ ಆಗುವುದಿಲ್ಲ, ಈ ಕಸುಬನ್ನು ಆಶ್ರಯಿಸಿದ ಮೇದರಿಗೆ ವರ್ಷಾನುಕಾಲ ಹಸಿಬಿದಿರು ಮತ್ತು ಬಿಸಿಗಂಜಿಗೆ ಕೊರತೆ ಆಗುವುದಿಲ್ಲ ಹಾಗಂತ ದೇವರು ನಮಗೆ ವರ ಕೊಟ್ಟಿದ್ದಾನೆ, ಎಂದು ಹೇಳುತ್ತಾರೆ.

ವರ್ಷದ ಕೆಲವು ಕಾಲದಲ್ಲಿ ಮಾತ್ರ ಕಟಾವಿಗೆ ಬಂದು ವರ್ಷ ಪೂರ್ತಿ ಇವರಿಗೆ ಕಸುಬಿಗೆ ಬೇಕಾಗುವ ಇಂತಹ ಕೆಲವು ಋತುಮಾನದಲ್ಲಿ ಮಾತ್ರ ಸಿಗುವ ಕಚ್ಚಾವಸ್ತುಗಳ ಪೂರೈಕೆಯ ಬಗ್ಗೆ ಈ ಕಥೆ ಇವರಲ್ಲಿ ವಿಶ್ವಾಸ ಹುಟ್ಟಿಸುತ್ತದೆ. ಒಂದು ವೇಳೆ ಇವರಿಗೆ ಸಮಯಾನುಸಾರವಾಗಿ ಬಿದಿರು ದೊರಕದೇ ಹೋದಾಗ ಬಿದಿರು ಸಿಗುವ ಪ್ರದೇಶವನ್ನು ಹುಡುಕಿ ಪಡೆಯಬೇಕು ಎನ್ನುವ ಛಲ ಮತ್ತು ಆತ್ಮವಿಶ್ವಾಸವನ್ನು ಈ ಕಥೆಯು ಹುಟ್ಟಿಸುತ್ತದೆ. ಈ ಹುಡುಕಾಟವೇ ಇವರನ್ನು ಮತ್ತೆ ವಲಸೆಗೆ ದಾರಿಮಾಡಿ ಕೊಡುತ್ತದೆ. ಇಂತಹ ಕಚ್ಚಾಪದಾರ್ಥವನ್ನು ಆಧರಿಸಿದ ಅನೇಕ ಉತ್ಪಾದನೆಯ ಘಟಕಗಳು ಪ್ರಸ್ತುತ ಸಂದರ್ಭದಲ್ಲಿ ತಮ್ಮದೇ ಆದ ಅನುಕೂಲ ಮಾರ್ಗಗಳಿಂದ ಅವುಗಳನ್ನು ಸಂಪಾದಿಸಿ

ಬಳಸುವುದು ಆಧುನಿಕ ವಾಣಿಜ್ಯದಲ್ಲಿ ಅನಿವಾರ್ಯ. ಈ ಕೌಶಲ್ಯ ಮೇದ ಬುಡಕಟ್ಟು ಸಮುದಾಯದಲ್ಲಿರುವುದು ಇವರ ವಿಶಿಷ್ಟತೆ.

ಪುರಾಣ ಆರು: ಮೇದರು ತಾವು ದೈಹಿಕವಾಗಿ ಕಬ್ಬಿಣದಷ್ಟೇ ಗಟ್ಟಿಗರು ಎಂದು ಹೇಳುತ್ತಾರೆ. ನಮ್ಮ ದೈಹಿಕ ಗಟ್ಟಿತನಕ್ಕೆ ಕಾರಣವೆಂದರೆ ನಮ್ಮ ಪೂರ್ವಜರು ಕೈಲಾಸದ ಕಬ್ಬಿಣದ ಕಡಲೆಯಿಂದ ಹುಟ್ಟಿ ಬಂದವರು ಎಂದು ತಮ್ಮ ಹಿನ್ನೆಲೆಯನ್ನು ಕುರಿತಾಗಿ ಈ ಕಥೆಯನ್ನು ಹೇಳುತ್ತಾರೆ.

ಒಮ್ಮೆ ಶಿವನು ತನ್ನ ಸನ್ನಿಧಿಯಲ್ಲಿ ಶಿವಗಣಗಳೊಂದಿಗೆ ಆನಂದಮಯನಾಗಿ ಕುಳಿತಿರುತ್ತಾನೆ. ಶಿವನ ವಾಹನವಾದ ನಂದಿಯು ಕಡಲೆಯನ್ನು ತಿಂದು ಮೆಲುಕು ಹಾಕುತ್ತಿದ್ದ. ಅದೇ ಸಮಯಕ್ಕೆ ಪಾರ್ವತಿಯು ತನಗೆ ಬಾಗಿನ ಕೊಡಲು ಮೊರ ಬೇಕಾಗಿದೆ ಎಂದು ಶಿವನಲ್ಲಿ ಬೇಡುತ್ತಾಳೆ. ತಕ್ಷಣವೇ ಶಿವನು ಚಪಕಾರಕ ವೃತ್ತಿಯಿಂದ ಮೊರವನ್ನು ತಯಾರಿಸ ಬಲ್ಲ ಒರ್ವ ಗಟ್ಟಿಪುರುಷನನ್ನು ಸೃಷ್ಟಿಸಲು ನಂದಿಗೆ ಹೇಳಿದನು. ನಂದಿಯು ಕಬಿಬ್ಬಿಣದ ಕಡಲೆಯಿಂದ ಮೆಲುಕುಹಾಕಲು ನಂದಿಯ ಬಾಯಿಂದ ಕಬ್ಬಿಣದ ಕಡಲೆಯೊಂದು ಜಾರಿಬಿದ್ದು ಅದರಿಂದ ಕಬ್ಬಿಣದಷ್ಟೇ ಗಟ್ಟಿಗನಾದ ಒಬ್ಬ ವ್ಯಕ್ತಿಯು ಜನಿಸುತ್ತಾನೆ. ನಂದಿಯ ಬಾಯಿಯಿಂದ ಜನಿಸಿದ ಗಟ್ಟಿ ತನದ ಮೈಕಟ್ಟು ಹೊಂದಿದ ಈ ಪುರುಷನಿಗೆ ಶಿವ ತನ್ನ ತ್ರಿಶೂಲ ಮತ್ತು ಗದೆಗಳನ್ನು ಕೊಟ್ಟು ನೀನು ಭೂಲೋಕಕ್ಕೆ ಹೋಗಿ ಬಿದಿರಿನಿಂದ ಪಾರ್ವತಿಗೆ ಬೇಕಾದ ಮೊರವನ್ನು ತಯಾರಿಸು ಎಂದು ಆಜ್ಞೆ ಮಾಡಿದನು. ಶಿವನ ಅಪ್ಪಣೆಯಂತೆ ಮೇದರ ಮೂಲ ಪುರುಷ ಮಹೇಂದ್ರ ಪರ್ವತಕ್ಕೆ ಬಂದ. ತನ್ನ ಕುಶಲತೆಯಿಂದ ಬಿದಿರನ್ನು ಹದಗೊಳಿಸಿ ಸುಂದರವಾದ ಮೊರವನ್ನು ತಯಾರಿಸಿದ. ಪಾರ್ವತಿಯು ಇದೇ ಮೊರವನ್ನು ದೇವತಾ ಮುತ್ತೈದೆಯರಿಗೆ ಬಾಗಿನ ಕೊಡಲು ಉಪಯೋಗಿಸಿದಳು. ಬಾಗಿನದ ಮೊರವನ್ನು ಕಂಡ ದೇವತೆಗಳು ಹರ್ಷಿತರಾಗಿ ಮೊರವನ್ನು ತಯಾರಿಸಿದವರು ಯಾರು? ಎಂದು ಕೇಳುತ್ತಾರೆ. ಮೇದನ ಕುಶಲತೆಯನ್ನು ಮೆಚ್ಚಿ ದೇವತೆಗಳು ಮುತ್ತು ರತ್ನಗಳನ್ನು ಕೊಟ್ಟರು. ಅವುಗಳ ಬೆಲೆಯನ್ನು ಅರಿಯದ ಈ ಮೇದನು ಅವುಗಳನ್ನು ಅಲ್ಲಿಯೇ ಬಿಟ್ಟು ಹೋಗುತ್ತಾನೆ. ಇದರಿಂದ ಕೋಪಗೊಂಡ ದೇವತೆಗಳು ಇವನ ವಂಶಜರಿಗೆ ತಮ್ಮ ಕಸುಬಿನ ಪ್ರತಿಫಲದಿಂದ ಸಿರಿಸಂಪತ್ತು ದೊರೆಯದಾಗಲಿ, ಇವರಿಗೆ ಹಿಡಿಗೂಳು ಮಾತ್ರ ಗತಿಯಾಗಲಿ ಎಂದು ಶಪಿಸಿದರು. ಆದ್ದರಿಂದ ನಾವು ಸಿರಿವಂತರಾಗುವುದಿಲ್ಲ ಆದರೆ ದುಡಿದು ತಿನ್ನಲು ಆರೋಗ್ಯಯುತವಾದ ಗಟ್ಟಿತನದ ಮೈಕಟ್ಟು ಹೊಂದಿರುವುದಾಗಿ ಹೆಮ್ಮೆಯಿಂದ ಹೇಳುವರು. ಇವುಗಳಲ್ಲದೆ ಮೇದ ಸಮುದಾಯದ ಕಸುಬು ಮತ್ತು ಆಚರಣೆಗಳನ್ನು ಕುರಿತಂತೆ ಇನ್ನೂ ಕೆಲವು ಚಿಕ್ಕ ಪುಟ್ಟ ಕಥೆಗಳು ಪ್ರಚಲಿತದಲ್ಲಿರುವುದಾಗಿ ತಿಳಿದು ಬರುತ್ತವೆ.

"ಪುರಾಣಗಳ ಪ್ರಧಾನ ಉದ್ದೇಶವೆಂದರೆ ಪ್ರಕೃತಿಯಲ್ಲೋ ,ಸಮಾಜದಲ್ಲೋ, ಸ್ಥಾಪಿತವಾದ ಕಟ್ಟು ಕಟ್ಟಳೆಗಳನ್ನು ಸ್ಥಿರಗೊಳಿಸುವುದು, ನಂಬಿಕೆಗಳನ್ನು ದೃಢಪಡಿಸುವುದು, ದೇವದೇವತೆಗಳ ಉಪಾಸನೆಯ ಸಮರ್ಪಕತೆ

ಸಾರ್ಥಕತೆಗಳನ್ನು ಸಮರ್ಥಿಸುವುದು ಹಾಗೂ, ಸಾಂಪ್ರದಾಯಕ ವ್ಯವಸ್ಥೆ ವರ್ತನೆಗಳನ್ನು ಅಲೌಕಿಕ ಆದರ್ಶ ಮತ್ತು ದಂಡನೆಗಳ ಮೂಲಕ ಸುಗಮವಾಗಿ ಕಾಪಾಡುವುದು."[8]

ಇಂತಹ ಸೃಷ್ಟಿ ಪುರಾಣಗಳು ಮೇದರಂತಹ ಬುಡಕಟ್ಟು ಸಮುದಾಯಕ್ಕೆ ತಾನು ನೆಚ್ಚಿದ ಕಸುಬು, ನಂಬಿ ಆರಾಧಿಸುವ ದೈವ, ಆಚರಿಸುವ ಧರ್ಮ, ತಾನು ನಂಬಿದಂತಹ ತತ್ವಗಳಿಗೆ ಒಂದು ಸಮರ್ಥನೆಯನ್ನು ಕೊಡುತ್ತವೆ. ಜೀವನ-ಬದುಕು-ಕಸುಬು-ಸಮುದಾಯ-ಸಂಬಂಧಿಕರೊಂದಿಗಿನ ಭೌತಿಕ ಮತ್ತು ಭಾವನಾತ್ಮಕ ಸಂಬಂಧವನ್ನು ಜೀವಂತಗೊಳಿಸುತ್ತದೆ.

(ವಕ್ತೃಗಳು : ವೈ.ಕೆ.ಹಳಪೇಟೆ ಹುಬ್ಬಳ್ಳಿ, ಪ್ರೊ:ಬಿ.ಆರ್.ಸುರುಪುರ ಗುಲ್ಬರ್ಗ. ಮೇದರ ರಾಮಣ್ಣ ಹ.ಬೊ.ಹಳ್ಳಿ.)

ಅಡಿಟಿಪ್ಪಣಿಗಳು

1. ಡಾ.ನಂ. ತಪಸ್ವಿ ಕುಮಾರ್ . ಸಂಸ್ಕೃತಿ ವಿಕಾಸ. ಪುಟ 166. ಚೇತನ ಬುಕ್ ಹೌಸ್ , ಅಂಜನಾದ್ರಿ, ಮೈಸೂರು - 570024.
2. ಅದೇ . ಪುಟ : 176.
3. ಡಾ.ಹಿ.ಚಿ.ಬೋರಲಿಂಗಯ್ಯ. ಬುಡಕಟ್ಟು ದೈವಾರಾಧನೆ. ಪುಟ.19,20. ನಿರ್ದೇಶಕರು ಪ ಸಾರಾಂಗ. ಕನ್ನಡ ವಿಶ್ವವಿದಾಯಲಯ -ಹಂಪಿ.
4. ಅದೇ. ಪುಟ 8.
5. ಎ.ಎಸ್. ಪ್ರಭಾಕರ. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು. ಪುಟ. 12 ನಿರ್ದೇಶಕರ, ಪ್ರಸಾರಾಂಗ, ಕನ್ನಡ.ವಿಶ್ವವಿದ್ಯಾಲಯ - ಹಂಪಿ. 2000
6. ಡಾ. ಕೆ.ಎಂ.ಮೈತ್ರಿ. ಬುಡಕಟ್ಟು ಕುಲಕಸಬುಗಳು.ಪುಟ.183,184 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ -ಹಂಪಿ.2002
7. ತೀ.ನಂ.ಶಂಕರನಾರಾಯಣ. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು.ಪುಟ.53.
8. ಗಂಗಾಧರ ದೈವಜ್ಞ. ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ.ಪುಟ. 2 ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ - ಹಂಪಿ. 2000

ಅಧ್ಯಾಯ - ಎರಡು

ಮೇದರ ಜೀವನ ಕ್ರಮ ಮತ್ತು ಆಚರಣೆಗಳು (ವಾರ್ಷಿಕ ಆವರ್ತನ, ಆಚರಣೆಗಳು)

2.1 ಜನನ ಮತ್ತು ಬಾಣಂತನ

2.2 ನಾಮಕರಣ

2.3 ಜವಳ

2.4 ಋತುಮತಿ

2.5 ಜಾತಿ ಸಂಸ್ಕಾರ

2.6 ಮದುವೆ

2.7 ಸೀಮಂತ

2.8 ಸಾವು-ಸಂಸ್ಕಾರ

2.9 ನಂಬಿಕೆ-ನಿಷೇಧ-ಚಿಕಿತ್ಸೆ

ಪೀಠಿಕೆ :

ಪ್ರಸ್ತುತ ಅಧ್ಯಯನದಲ್ಲಿ ಮೇದರ ಸಾಮಾಜಿಕ ಮತ್ತು ಕೌಟುಂಬಿಕ ಜೀವನ ಕ್ರಮವನ್ನು ಕುರಿತು ಸಂಕ್ಷಿಪ್ತ ಪರಿಚಯ ನೀಡಲಾಗಿದೆ. ಯಾವುದೇ ಸಮುದಾಯದ ಸಂಸ್ಕೃತಿ ಅಧ್ಯಯನದಲ್ಲಿ ಹುಟ್ಟಿನಿಂದ ಸಾವಿನವರೆಗಿರುವ ಸಂಪ್ರದಾಯ, ಆಚಾರ-ವಿಚಾರ, ನಂಬಿಕೆ-ನಿಷೇಧ ಹಾಗೂ ಅವರದೇ ಆದ ವೈದ್ಯಕೀಯ ಪದ್ಧತಿ ಇರುವುದನ್ನು ಕಾಣುತ್ತೇವೆ. ಮೇದರು ಇದಕ್ಕೆ ಹೊರತಾಗಿಲ್ಲ. ಮೂಲತಃ ಬುಡಕಟ್ಟು ಸಮುದಾಯವಾದ ಇವರು ಕಾಡುವಾಸಿಗಳಾಗಿದ್ದು ಅನಿವಾರ್ಯಕಾರಣಗಳಿಂದ ಇಂದು ನಾಡನ್ನು ಆಶ್ರಯಿಸಿ ಬದುಕುತ್ತಿದ್ದಾರೆ. ಆದರೆ, ಅವರ ಕುಲಕಸುಬಾದ ಚಪಕಾರಕ ವೃತ್ತಿಯನ್ನು ಅವಲಂಬಿಸಿರುವ ಮೇದರು ತಮ್ಮ ಆಚರಣೆಗಳಲ್ಲಿ ಅನನ್ಯತೆಯನ್ನು ರೂಢಿಸಿಕೊಂಡಿರುವುದನ್ನು ಗುರುತಿಸಲಾಗಿದೆ.

2.1 ಜನನ ಮತ್ತು ಬಾಣಂತನ :

ವಂಶಾಭಿವೃದ್ಧಿ ಭೂಮಿಯ ಮೇಲೆ ಅಸ್ತಿತ್ವದಲ್ಲಿರುವ ಪ್ರತಿಯೊಂದು ಜೀವಿ ಮತ್ತು ಸಸ್ಯಗಳ ಪ್ರಾಕೃತಿಕ ಮತ್ತು ಜೈವಿಕ ಕ್ರಿಯೆ. ಜೀವಿಯ ಸೃಷ್ಟಿಯು ಮಾನವನಿಗೆ ಆಶ್ಚರ್ಯವನ್ನುಂಟುಮಾಡಿತು. ಆಗ ಅವನು ಈ ಕುರಿತು ಅನೇಕ ನಂಬಿಕೆಗಳನ್ನು ಒಪ್ಪಿಕೊಂಡು ಆಚರಣೆಗಳ ರೂಪದಲ್ಲಿ ರೂಢಿಸಿಕೊಂಡನು. ಈಗಲೂ ಎಲ್ಲಾ ಸಮುದಾಯಗಳಲ್ಲಿ ಜನನ ಕುರಿತಾದ ಅನೇಕ ನಂಬಿಕೆ ಮತ್ತು ಆಚರಣೆಗಳು ಜೀವಂತವಾಗಿವೆ. ಈ ಆಚರಣೆಗಳು ಬಾಹ್ಯದಲ್ಲಿ ಏಕರೀತಿಯಾಗಿ ಕಂಡರೂ ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುವುದನ್ನು ಗಮನಿಸಬಹುದು. ಬುಡಕಟ್ಟು ಸಮುದಾಯಗಳಲ್ಲಿ ಇತರೆ ಸಮುದಾಯಗಳಲ್ಲಿ ಇರುವಂತೆ ಜನನ ಸಂಸ್ಕಾರಗಳಿವೆ. ಆದರೆ, ಬುಡಕಟ್ಟು ಸಮುದಾಯದಲ್ಲಿ ಜನನ ಕುರಿತಾದ ಆಚರಣೆಗಳು ವಿಶಿಷ್ಟವಾಗಿವೆ. ಮೇದ ಬುಡಕಟ್ಟು ಸಮುದಾಯಗಳಲ್ಲಿ ಹುಟ್ಟಿಗೆ ಸಂಬಂಧಿಸಿದ ಆಚರಣೆಗಳು ಹೆಣ್ಣಿನ ತಿಂಗಳ ಮುಟ್ಟಿನ ದಿನದಿಂದಲೇ ಪ್ರಾರಂಭವಾಗುತ್ತವೆ. ತಿಂಗಳ ಮುಟ್ಟು ಮತ್ತು ಋತುಮತಿ ಹಾಗೂ ಹುಟ್ಟಿನ ಸಂದರ್ಭದ ಆಚರಣೆಗಳನ್ನು ಸೂತಕ, ಮೈಲಿಗೆ ಅಥವಾ ಹೊಲಿ ಎಂದು ಕರೆಯುತ್ತಾರೆ. "ಹೆರಿಗೆ ಸಂದರ್ಭದಲ್ಲಿ ಆಚರಿಸುವ ಮೈಲಿಗೆ ಮಾನವನ ಹುಟ್ಟಿಗೆ ಸಂಬಂಧಿಸಿದ ಮೊದಲ ಮೈಲಿಗೆ. ಹೆರಿಗೆ, ಋತುಮತಿ, ತಿಂಗಳು ಮುಟ್ಟಿನ ಸಂದರ್ಭದಲ್ಲಿ ಆಚರಿಸುವ ಸೂತಕವನ್ನು ಮೈಲಿಗೆ ಎಂದು ಕರೆಯುವುದು ಹೆಚ್ಚು ಸೂಕ್ತ ಎನಿಸುತ್ತದೆ. ಸೂತಕಕ್ಕೆ ಹೊಲಿ ಮತ್ತು ಮೈಲಿಗೆ ಎಂಬ ಅರ್ಥಗಳಿಂದ ಬಳಸಲ್ಪಡುತ್ತವೆ. ಸತ್ತ ದಿನದಿಂದ, ದಿನಕರ್ಮಗಳು ಮುಗಿಯುವವರೆಗಿನ ಅವಧಿಯನ್ನು ಮಾತ್ರ ಸೂತಕದ ಕಾಲ ಎಂದು ಕರೆಯಬೇಕು ಎಂಬುದು ನನ್ನಅಭಿಪ್ರಾಯ. ಸೂತಕ, ಶೋಕ ಸೂಚಕವಾಗಿರುತ್ತದೆ. ಮೈಲಿಗೆ ಅಥವಾ ಹೊಲಿ ಎನ್ನುವುದು ಸಂತೋಷ ಸೂಚಕವಾಗಿರುತ್ತದೆ. ಮಗು ಜನಿಸುವುದು, ಹೆಣ್ಣು ಋತುಮತಿಯಾಗುವುದು ಯಾವ ಸಮುದಾಯಕ್ಕೆ ದುಃಖವಾಗುತ್ತದೆ?"[1] ಮೇಲಿನ ಹೇಳಿಕೆಯು ಸಮಂಜಸವಾಗಿದೆ. ಏಕೆಂದರೆ ಮಾನವನ ಜೀವನದುದ್ದಕ್ಕೂ ತನ್ನ ಕಲ್ಪನೆ ಮತ್ತು ಯೋಚನೆಯನ್ನು ಮೀರಿ ನಡೆಯುವ

ಇಂತಹ ಪ್ರಕೃತಿ ಸಹಜ ಜೈವಿಕ ಘಟನೆಗಳೆಲ್ಲವೂ ಅಶುಭ, ಅಮಂಗಲ ಮತ್ತು ಅಸಂತೋಷವಂತೂ ಅಲ್ಲ. ಆದ್ದರಿಂದ ಇವೆಲ್ಲವನ್ನೂ ಇಡಿಯಾಗಿ ಸೂತಕ ಎನ್ನುವುದು ಸರಿಯಲ್ಲ. ಸಂತೋಷ ಸೂಚಕ ಹೊಲಿ ಅಥವಾ ಮೈಲಿಗೆಯ ಆಚರಣೆಗಳು ಈ ಸಮುದಾಯದ ಸಾಮಾಜಿಕ ಲಿಂಗಗೌರವ ಮತ್ತು ವ್ಯಕ್ತಿಗತ ಪೂರ್ಣತೆಯನ್ನು ತಂದುಕೊಡುತ್ತವೆ. ಈ ಕುರಿತು ಕಾಲ-ಸಂದರ್ಭಗಳಲ್ಲಿ ಸಮುದಾಯದ ಕಸುಬು ಮತ್ತು ಬಳಕೆಯ ವಸ್ತುಗಳನ್ನು ಆಧರಿಸಿದ ಒಗಟು ಮತ್ತು ಗಾದೆಗಳು ಹುಟ್ಟುತ್ತವೆ. ಇಂತಹ ಗಾದೆ ಮತ್ತು ಒಗಟುಗಳು ಅವರ ನಂಬಿಕೆ ಮತ್ತು ಆಚರಣೆಗಳಿಗೆ ಗಟ್ಟಿತನವನ್ನು ತಂದು ಕೊಡುತ್ತವೆ. ಇವು ಇವರ ಒಡಲಾಳದ ಸಂತೋಷ, ದುಃಖ, ಅಸಮಾನತೆ, ಅಪೂರ್ಣತೆಯನ್ನು ತೋರಿಸಿಕೊಡುತ್ತವೆ. ಅಂತೆಯೇ ಮೇದರಲ್ಲಿ ಮುಟ್ಟಾಗದವಳ ಹೊಟ್ಯಾಗ ಒಂಬು-ಬೊಂಬು ಆಡಿಸಿದರೂ ಇಲಿ-ಹೆಗ್ಗಣ ಕೂಡ ಹುಟ್ಟುವುದಿಲ್ಲ ಎನ್ನುವ ಗಾದೆ ಪ್ರಚಲಿತದಲ್ಲಿದೆ. ಮೇದರಲ್ಲಿ ಹುಟ್ಟಿಗೆ ಸಂಬಂಧಿಸಿದ ಆಚರಣೆಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಮದುವೆಯಾಗಿ ಸೋಬಾನ ಕಾರ್ಯ ಮುಗಿದ ನಂತರ ಮನೆಯ ಹಿರಿಯ ಹೆಂಗಸರು ಅವಳ ತಿಂಗಳ ಮುಟ್ಟಿನ ಆವರ್ತನೆಯನ್ನು ಗಮನಿಸುತ್ತಿರುತ್ತಾರೆ. ವರ್ಷಾರುತಿಂಗಳ ಕಾಲ ಗರ್ಭ ನಿಲ್ಲದಿದ್ದರೆ, ಶಾಸ್ತ್ರ ಕೇಳಿಸಿ ಯಂತ್ರೋಪಚಾರ ಮಾಡಿಸುವರು. ಇತ್ತೀಚಿನ ದಿನಗಳಲ್ಲಿ ವೈದ್ಯರ ಸಲಹೆ ಪಡೆಯುವರು. ಕೆಲವರು ಮನೆಯ ದೇವರಿಗೆ ಹರಕೆ ಹೊತ್ತು ಮುಡುಪು ಕಟ್ಟುವರು. ಹೆಣ್ಣು ಮಕ್ಕಳಿಗೆ ಮುಟ್ಟು ನಿಂತ ತಕ್ಷಣ ಭಾರವಾದ ಕೆಲಸವನ್ನು ಮಾಡಿಸುವುದಿಲ್ಲ. ಮೇದರು ತಮ್ಮ ಕುಲಕಸುಬಿಗೆ ಸಂಬಂಧಿಸಿದಂತೆ ಗಟ್ಟಿಬಿದಿರು ಕಡಿಯುವುದು, ಗಳಹೊರುವುದು ಮತ್ತು ಏಣಿ ಬಡಿಯುವಂತಹ ಕಷ್ಟದ ಕೆಲಸಗಳಿಗೆ ಹಚ್ಚುವುದಿಲ್ಲ. ಗರ್ಭಿಣಿಯ ಸುರಕ್ಷತೆಯ ದೃಷ್ಟಿಯಿಂದ ಮುಂಜಾಗ್ರತೆ ಕ್ರಮವಾಗಿ ಊಟ ಮತ್ತು ತಿನಿಸುಗಳಲ್ಲಿ ಕೆಲವನ್ನು ನಿಷೇಧಿಸುತ್ತಾರೆ. ಎಳ್ಳು, ಹಸಿಕೊಬ್ಬರಿ, ಕುಂಬಳಕಾಯಿ, ಬಾಳೆ ಹಣ್ಣು , ಹಲಸು ಮತ್ತು ಪಪ್ಪಾಯಿ ಹಣ್ಣುಗಳನ್ನು ತಿನ್ನಲು ಕೊಡುವುದಿಲ್ಲ. ಜೊತೆಗೆ ಗಿಣ್ಣು ಮತ್ತು ಹೋತನ(ಗಂಡು ಮೇಕೆ) ಮಾಂಸವನ್ನು ಸಹ ಕೊಡುವುದಿಲ್ಲ. ಐದು ತಿಂಗಳವರೆಗೆ ಹಳ್ಳ ಮತ್ತು ನದಿ ದಾಟಿಸುವುದಿಲ್ಲ. ಉಡಿ ಅಕ್ಕಿ(ಒಡಲಕ್ಕಿ) ಹಾಕಿಸುವುದಿಲ್ಲ. ಕಂಕಣ ಕಟ್ಟಿಕೊಂಡು ಮದುವೆಯ ಕಾರ್ಯದಲ್ಲಿ ಭಾಗವಹಿಸುವುದು ಸಹ ನಿಷಿದ್ಧ. ಬಸುರಿಯಾದ ಹೆಂಗಸು ತನ್ನ ಸೀಮಂತಕಾರ್ಯಕ್ಕೆ ಮುಂಚೆ ಋತುಮತಿ ಆದವಳಿಗೆ ನೀರು ಹಾಕುವುದಿಲ್ಲ. ಶವ ಸಂಸ್ಕಾರದ ಸಂದರ್ಭದಲ್ಲಿ ಸ್ಮಶಾನಕ್ಕೆ ಹೋಗುವಂತಿಲ್ಲ ಆದರೆ, ಆಕೆಯ ಗಂಡ ಶವಸಂಸ್ಕಾರದಲ್ಲಿ ಭಾಗವಹಿಸಿದರೂ ಹೆಣಕ್ಕೆ ಹೆಗಲುಕೊಡಬಾರದು. ಮೇದರು ಈ ಎಲ್ಲಾ ಮುಂಜಾಗ್ರತೆಗಳನ್ನು ಜನನಕ್ಕೆ ಮುನ್ನವೇ ಪಾಲಿಸುವುದು ಕಂಡುಬರುತ್ತದೆ.

ಇವುಗಳಿಗೆ ಕಾರಣ ಹಿಂದೆ ಇದ್ದ ಸಾರಿಗೆ ಮತ್ತು ವೈದ್ಯಕೀಯ ವ್ಯವಸ್ಥೆಯ ಅನಾನುಕೂಲತೆಗಳು. ಇತರೆ ಸಮುದಾಯಗಳಂತೆ ಮೇದರಲ್ಲಿ ಚೊಚ್ಚಲ ಹೆರಿಗೆಯನ್ನು ತವರು ಮನೆಯಲ್ಲಿಯೇ ಮಾಡಿಸುವುದು ರೂಢಿಯಲ್ಲಿದೆ.

ಎರಡನೆಯ ಹೆರಿಗೆಯನ್ನು ಸಹ ತವರು ಮನೆಯಲ್ಲಿ ಮಾಡಿಸಿದರೆ ಮೂರನೆಯದನ್ನು ಮಾತ್ರ ತವರು ಮನೆಯಲ್ಲಿ ಮಾಡಿಸುವುದಿಲ್ಲ.

2.1.1 ಜನನ :

ಹೆರಿಗೆ ಸೂಚಕದ ಅಳುಬೇನೆ ಪ್ರಾರಂಭ ಆಗುತ್ತಿದ್ದಂತೆಯೇ ಹಿರಿಯರ ಕಾಲಿಗೆ ನಮಸ್ಕಾರ ಮಾಡಿಸುತ್ತಾರೆ. ಇದು ಒಂದು ರೀತಿಯಲ್ಲಿ ರಕ್ತಸಂಬಂಧಿಕರು ಗರ್ಭಿಣಿ ಹೆಂಗಸಿಗೆ ಹೆರಿಗೆಯನ್ನು ಎದುರಿಸಲು ಕೊಡುವ ಧೈರ್ಯ ಮತ್ತು ಸಾಂತ್ವನವಾಗಿದೆ. ನಡುವಿಗೆ ಎಣ್ಣೆ -ನೀರು ಕಾಯಿಸಿ ಹಾಕುತ್ತಾರೆ. ಸಮುದಾಯದ ಇಲ್ಲವೇ ಅನ್ಯ ಸಮುದಾಯದ ಮಹಿಳೆ ಸೂಲಗಿತ್ತಿಯಾಗಿ ಕಾರ್ಯನಿರ್ವಹಿಸುತ್ತಾಳೆ. ಹೆರಿಗೆ ಆಗಿ ಕೂಸು ಹೊರಬೀಳುತ್ತಲೇ, ಸೂಲಗಿತ್ತಿಯು ಕೂಸು ತಿರುವಿ ಹಾಕಿ ಕೂಸಿನ ಹೊಕ್ಕಳ ಹುರಿ ಕೊಯ್ಯುವಳು. ಮಗು ಗಂಡಾಗಿದ್ದರೆ ಕಂಚಿನ ತಟ್ಟೆಬಾರಿಸಿ ಸೂಚನೆ ಕೊಡುತ್ತಾರೆ. ಮಗು ಹೆಣ್ಣಾಗಿದ್ದರೆ ದಾಡಿ, ಮೀಸೆ ಹಾಗೂ ಪುರುಷರಿಗೆ ರೋಮ ಬರುವ ದೇಹದ ಭಾಗಗಳಿಗೆ ಮಾಸದದ್ರವವನ್ನು ಹಚ್ಚುವರು. ಮಗುವಿನ ಅಳ್ಳಿಪರಿ, ಎದೆ, ಜನನಾಂಗ ಮತ್ತು ಅಂಗಾಲಿಗೆ ಚುಟಗೆ ಹಾಕುತ್ತಾರೆ. ಮಗುವನ್ನು ಬಿಸಿನೀರಿನಿಂದ ಸ್ನಾನಮಾಡಿಸಿ ಬಿದಿರಿನ ಮೊರದಲ್ಲಿ ಹಾಕಿಕೊಂಡು ತಟ್ಟೆಯನ್ನು ಬಾರಿಸುತ್ತಾ ಹೊರಸಿನಮೇಲೆ (ಹಗ್ಗದ ಮಂಚ) ಮಲಗಿಸುತ್ತಾರೆ. ಮೂರು ದಿನಗಳ ತನಕ ಮಗುವಿಗೆ ಜೇನು ತುಪ್ಪ ಅಥವಾ ಅರಳೆಣ್ಣೆ-ಬೆಲ್ಲ ಬೆರಸಿ ಚೀಪಿಸುತ್ತಾರೆ. ಇದರಿಂದ ಮಡಿ (ಜನಿಸಿದ ಮಗು ಮಾಡುವ ಮೊದಲ ಭೇದಿ) ಚೆನ್ನಾಗಿ ಹೊರಬರುತ್ತದೆ. ಮೂರು ದಿನಗಳವರೆಗೆ ಮಗುವಿಗೆ ಎದೆಹಾಲು ಕುಡಿಸುವುದಿಲ್ಲ. ಏಕೆಂದರೆ, ಗೀಬದ ಹಾಲನ್ನು ಕುಡಿಸಿದರೆ ಮಗುವಿಗೆ ಭೇದಿಯಾಗುತ್ತದೆ ಎಂಬುದು ಇವರ ನಂಬಿಕೆ.

ಈ ನಂಬಿಕೆ ಅವೈಜ್ಞಾನಿಕ. ಹೆರಿಗೆಯಾದ ತಾಯಿಯ ಎದೆಯ ಮೊದಲಹಾಲನ್ನು ಗೀಬದ ಹಾಲು ಎಂದು ಕರೆಯಲಾಗುತ್ತದೆ. ಈ ಹಾಲು ಮಗುವಿನ ಪ್ರಾಥಮಿಕ ಹಂತದಲ್ಲಿ ಅವಶ್ಯವಾಗಿ ಬೇಕಾದ ಎಲ್ಲಾ ಪೋಷಕಾಂಶಗಳಾದ ಪ್ರೋಟೀನ್ ಮತ್ತು ದೇಹಕ್ಕೆ ಬೇಕಾದ ಇತರೆ ಪ್ರಮುಖ ಪೋಷಕಾಂಶಗಳನ್ನು ಮತ್ತು ರೋಗ ನಿರೋಧಕ ಶಕ್ತಿಯನ್ನು ಒಳಗೊಂಡಿರುತ್ತದೆ. ಮಗುವನ್ನು ಉಸಿರಾಟದ ಸೋಂಕು, ಮತ್ತು ಭೇದಿ ರೋಗದಿಂದ ಸಂರಕ್ಷಿಸುತ್ತದೆ. ಕಾರಣ ನುರಿತ ತಜ್ಞ ವೈದ್ಯರು ಹೆರಿಗೆಯ ಮರುಕ್ಷಣ ಸಾಧ್ಯವಾದಷ್ಟು ಬೇಗ ಮಗುವಿಗೆ ಎದೆಯ ಹಾಲು ಕುಡಿಸಬೇಕು ಎಂದು ಹೇಳುವರು: Dr.k .Park says that, "the first milk of the mother is called 'colostrum' is the most suitable food for the baby during baby's early period because, it contains high concentration of protein, and other nutrient the body needs ; it is also rich in Anti-infective factors, which protect the baby against respiratory infections and diarrhoeal diseases''[2]

2.1.2 ಬಾಣಂತನ :

ಹೆರಿಗೆಯಾದ ತಕ್ಷಣ ಬಾಣಂತಿಗೆ ಬಿಸಿನೀರಿನಿಂದ ಸ್ನಾನ ಮಾಡಿಸಿ ನಡುವಿಗೆ ನಡುಪಟ್ಟಿ ಕಟ್ಟಿ ಹೊರಸಿನ ಮೇಲೆ ಕಾಲು ಮೇಲೆಕಾಲು ಹಾಕಿ ಮಲಗಿಸುವರು. ಮೂರು ದಿನದವರೆಗೆ ಗಂಜಿಯನ್ನು ಮಾತ್ರ ಊಟಕ್ಕೆ ಕೊಡುವರು. ಮಗುವಿನ ಮಾಸವನ್ನು ಒಂದು ಮಣ್ಣಿನ ಮಡಿಕೆಯಲ್ಲಿ ಹಾಕಿ ಮುಚ್ಚಳ ಮುಚ್ಚಿ ಮನೆಯ ಹೊರಗೆ ಬಲಭಾಗದಲ್ಲಿ ಗುಂಡಿತೆಗೆದು ಹುಗಿದು ಪೂಜೆಮಾಡುವರು. ಈ ಗುಂಡಿಯನ್ನು ಯಾರೂ ತುಳಿಯದಂತೆ ಮತ್ತು ನಾಯಿ ಕೆದರದಂತೆ ಅದರ ಮೇಲೊಂದು ಚಿಕ್ಕ ಬಂಡೆ ಇರಿಸುತ್ತಾರೆ. ಮಗುವಿನ ಜನನದ ಸುದ್ದಿಯನ್ನು ಬೀಗರಿಗೆ ಸೋದರಮಾವನ ಮೂಲಕ ತಿಳಿಸುತ್ತಾರೆ. ಸುದ್ದಿ ತಂದವರಿಗೆ ಖುಷಿಗಾಗಿ ಬಟ್ಟೆ, ಬಂಗಾರವನ್ನು ಕೊಡುವ ಪದ್ಧತಿ ಇವರಲ್ಲಿ ಕಂಡು ಬರುತ್ತದೆ.

ಹೆರಿಗೆ ಆದ ಮೂರನೆಯ ದಿನದಂದು ಮೇದರಲ್ಲಿ ಒಂದು ವಿಶೇಷ ಆಚರಣೆ ರೂಢಿಯಲ್ಲಿದೆ. ಅಂದು ಬೆಳಗ್ಗೆ ಬಾಣಂತಿಗೆ ಬೇವು ಹಚ್ಚಿ ತಲೆಸ್ನಾನಮಾಡಿಸಿ ಬೆಂಕಿಕಾಯಿಸುತ್ತಾರೆ. (ಬೇವು: ಅರಿಶಿಣ-ಬೆಳ್ಳುಳ್ಳಿ, ಲವಂಗ-ವಾಯಿವಾಡಂಗ, ಹಿಪ್ಪಲಿ-ಮೋಡಿ,ಬಜೆ-ಮೆಂತೆ, ಉಪ್ಪು ಹಾಕಿ ತಯಾರಿಸಿದ ಲೇಹ.) ಇದೇ ದಿನದಿಂದ ಬಾಣಂತಿಗೆ ಬೆಳಗ್ಗೆ ಹಾಗೂ ಸಂಜೆ, ಕೊಬ್ಬರಿ-ಖಾರ ಕೊಡುವರು. ಮೂರನೆಯ ದಿನದಿಂದ ಮಾಂಸದ ಊಟ ಕೊಡುವುದು ವಾಡಿಕೆ. ಕುರಿಯ ಬೋಟಿಯನ್ನು ತಂದು ಸೂಪ್ ತಯಾರಿಸಿ ಕುಡಿಯಲು ಕೊಡುವರು. ಬೋಟಿಯ ಸಾರು ಅನ್ನ, ಅಭ್ಯಾಸವಿದ್ದರೆ ಮದ್ಯವನ್ನು ಕುಡಿಯಲು ಕೊಡುತ್ತಾರೆ. ನಂಜಿನ ತರಕಾರಿಗಳಾದ ಬದನೆಕಾಯಿ, ಹಸಿಮೆಣಸಿನಕಾಯಿ, ಗೆಣಸು ಮತ್ತು ಕುಂಬಳಕಾಯಿ ಕೊಡುವುದಿಲ್ಲ. ಹೆರಿಗೆಯ ಸಂದರ್ಭದಲ್ಲಿ ಅತಿಯಾದ ರಕ್ತಸ್ರಾವದಿಂದಾಗಿ ನಿಶ್ಯಕ್ತಿ ಉಂಟಾಗಿರುತ್ತದೆ, ಅದ್ದರಿಂದ ಪೌಷ್ಟಿಕವಾದ ಆಹಾರವನ್ನು ಕೊಡುವರು. ಅಂದರೆ ಹೆರಿಗೆಯ ನಂತರ ಮಗುವಿಗೆ ಮೊಲೆಯುಣಿಸುವ ಮಹಿಳೆಗೆ ವೈದ್ಯ ಶಾಸ್ತ್ರದ ಅನುಪಾತದ ಪ್ರಕಾರ 2400-2500ಕಿಲೋ ಕ್ಯಾಲರೀಸ್ ಶಕ್ತಿಯ ಆಹಾರವನ್ನು ಕೊಡಬೇಕಾಗುತ್ತದೆ. ಈ ಪರಿಕಲ್ಪನೆ ನಮ್ಮ ಬುಡಕಟ್ಟು ಸಮುದಾಯದಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವುದು ಕಂಡುಬರುತ್ತದೆ. ಇತ್ತೀಚಿಗೆ ಬಾಣಂತಿಗೆ ಹೆರಿಗೆಯಾದ ಮಾರನೆಯ ದಿನದಿಂದ ಮನೆಯಲ್ಲಿ ಎಲ್ಲರಿಗೂ ಮಾಡಿದ ಸಹಜ ಅಡುಗೆಯನ್ನು ಊಟಕ್ಕೆ ಕೊಡುವುದು ಅನಿವಾರ್ಯವಾಗಿದೆ. ಮೂರನೆಯ ದಿನ ಸಾಯಂಕಾಲ ನೀರಲ ಪೂಜೆಗೆ ಅಣಿ ಮಾಡುತ್ತಾರೆ.

ಆ ದಿವಸ ಬೆಳಗ್ಗೆ ಬಜೆಯನ್ನು ಚಿಕ್ಕ-ಚಿಕ್ಕ ತುಂಡುಗಳಾಗಿ ಕತ್ತರಿಸಿ ನೆನೆ ಹಾಕುವರು. ಸಾಯಂಕಾಲ ಹೊರಸಿನ ಕೆಳಗೆ ಸ್ವಲ್ಪ ಅಕ್ಕಿ ಹಾಕಿ ಅದರ ಮೇಲೆ ನೀರು ತುಂಬಿದ ತಂಬಿಗೆ (ಚಂಬು) ಇಡುವರು. ತಂಬಿಗೆಯ ಮುಂದೆ ಒಂದು ಗುಂಡು ಕಲ್ಲು ಇರಿಸುತ್ತಾರೆ. ತುಂಬಿದ ತಂಬಿಗೆ ಚಟಗೆಮ್ಮನ ಸಂಕೇತವಾದರೆ, ಗುಂಡುಕಲ್ಲು ಭರ್ಮಪ್ಪ ದೇವರ ಸಂಕೇತವಾಗಿದೆ. ಒಂದು ಬಟ್ಟಲಲ್ಲಿ ಹಾಲುತುಪ್ಪ ಇರಿಸಿ, ಬಿದಿರು ಸೀಳುವ ಒಂಬಿನ ಮೇಲೆ ಬೆಳ್ಳುಳ್ಳಿ-ಲವಂಗ-ವೀಳ್ಯದೆಲೆಯತೊಟ್ಟು

ಈ ಮೂರನ್ನು ತೇದು ಕಾಡಿಗೆ ತಯಾರಿಸುವರು. ಮಗುವಿನ ಸೋದರತ್ತೆ ಬಜೆಕಂಕಣ ತಯಾರಿಸಿ ಬಾಣಂತಿ-ಮಗುವಿಗೆ ಮತ್ತು ಹೊರಸಿನ ನಾಲ್ಕು ಕಾಲುಗಳಿಗೆ ಕಟ್ಟುವಳು. ಮಗುವಿನ ಹಣೆಗೆ ಕಾಡಿಗೆ ಹಚ್ಚಿ ಭರ್ಮಪ್ಪನ ಮುಂದೆ ಮಲಗಿಸುತ್ತಾರೆ. ಹಾಗೆಯೇ ಬಂದವರೆಲ್ಲ ಕಾಡಿಗಿ ಹಚ್ಚಿಕೊಂಡು ಬಜೆಕಂಕಣ ಕಟ್ಟಿಕೊಳ್ಳುವರು. ಸೋದರ ಅತ್ತೆ ಭರ್ಮಪ್ಪನ ಪೂಜೆ ಮಾಡಿದ ಬಳಿಕ, ಹೊರಗಡೆ ಹುಗಿದಿರುವ ಮಾಸದ ಚಟಗೆಗೂ ಪೂಜೆ ಮಾಡುವಳು. ಬಾಣಂತಿಯು ಚಟಗೆಮ್ಮ ಮತ್ತು ಭರ್ಮಪ್ಪ ದೇವರಿಗೆ ನಮಸ್ಕಾರ ಮಾಡಿ, ಬಲಗೈಯ ಐದು ಬೆರಳಿನಿಂದ ಮೂರು ಸಾರಿ ಲೋಬಾನದ ಬೆಂಕಿಗೆ ಮತ್ತು ಇಲಿಕಿಯ(ಅಗ್ಗಿಷ್ಟಿಕೆ) ಬೆಂಕಿಗೆ ಹಾಲುತುಪ್ಪ ಚಿಮುಕಿಸಿ ತುಪ್ಪದ ದಾರಿ ತೊಗೊಂಡು ಹಾಲಿನ ದಾರಿಯನ್ನು ಕೊಡು ಎಂದು ಬೇಡುವಳು. ಬಂದಿರುವ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಮಂಡಕ್ಕಿ-ಕೊಬ್ಬರಿ ಫಲಾಹಾರ ಕೊಡುವರು. ರಾತ್ರಿ ಮಲಗುವ ಮುನ್ನ ಭರ್ಮಪ್ಪ ಮತ್ತು ಚಟಗೆಮ್ಮನನ್ನು ಕಬ್ಬಿಣದ ಪುಟ್ಟಿಯಿಂದ ಮುಚ್ಚುತ್ತಾರೆ. ಮಗುವಿನ ತಲೆಯ ಪಕ್ಕದಲ್ಲಿ ಪಾಟಿ ಮತ್ತು ಬಳಪ ಮತ್ತು ವೀಳ್ಯದೆಲೆ ಹಾಗೂ ಕಾಡಿಗೆಯನ್ನು ಇರಿಸುವರು. ಆ ದಿನರಾತ್ರಿ ಇದಿಮುಂಡೆ ಅಥವಾ ಚಟಗೆಮ್ಮ ಮಗುವಿನ ಹಣೆಬರಹ ಬರೆಯುತ್ತಾಳೆ ಎಂದು ಇವರು ನಂಬುತ್ತಾರೆ. ಇದಿಷ್ಟು ಮೂರನೆದಿನದ ನೀರಲ ಪೂಜೆಯ ಆಚರಣೆಯಾಗಿರುತ್ತದೆ.

ಗಂಗೆಪೂಜೆಗೆ ಹೋಗಿ ಬರುವ ತನಕ ಬಾಣಂತಿಯು ತಣ್ಣೀರು ಮುಟ್ಟುವುದಿಲ್ಲ. ಬಯಲು ಕಡೆ ಹೋಗುವಾಗ, ಮುಸುಕು ಹಾಕಿಕೊಂಡು ಕೈಯಲ್ಲಿ ಲಿಂಬೆ ಹಣ್ಣು ಮತ್ತು ಒಂಬು ಹಿಡಿದುಕೊಂಡು ಹೋಗುವಳು. ತಿಂಗಳ ಪರ್ಯಂತ ಮಗುವಿಗೆ ಪ್ರತಿ ದಿವಸ ಸ್ನಾನ ಮಾಡಿಸಿದ ತಕ್ಷಣ ನೆತ್ತಿಗೆ ಅರಿಶಿಣ ಪುಡಿಹಾಕಿ ವೀಳ್ಯದೆಲೆ ಇಟ್ಟು ಕುಲಾಯಿ ಕಟ್ಟುತ್ತಾರೆ. ಬಾಣಂತಿಗೆ ಹತ್ತಿ-ಬೆಳ್ಳುಳ್ಳಿ ಜಜ್ಜಿ ಕಿವಿಯಲ್ಲಿಡುವರು. ಒಂಬತ್ತು ಅಥವಾ ಹನ್ನೊಂದನೆ ದಿನ ಹೊಲಿ ತೆಗೆಯುತ್ತಾರೆ. ಆ ದಿನ ಮನೆ ಸಾರಿಸಿ ಗೋಮೂತ್ರವನ್ನು ಚಿಮುಕಿಸುವರು. ಅಲ್ಲಿಯತನಕ ಇವರು ದೇವರ ಪೂಜೆಯನ್ನು ಮಾಡಿರುವುದಿಲ್ಲ. ಆ ದಿನ ದೇವರುಗಳನ್ನು ಒಂದು ಪುಟ್ಟಿಯಲ್ಲಿ ತುಂಬಿಕೊಂಡು ಗಂಗೆಗೆ ಮುಟ್ಟಿಸಿಕೊಂಡು ಬಂದು ಪೂಜೆ ಸಲ್ಲಿಸುತ್ತಾರೆ. ಈ ನಡುವೆ ಉದುರಿದ ಮಗುವಿನ ಹೊಕ್ಕಳು ಬಳ್ಳಿಯನ್ನು ಬಟ್ಟೆಯಲ್ಲಿ ಕಟ್ಟಿ ನದಿ ಇಲ್ಲವೆ ಹಳ್ಳಕ್ಕೆ ಬಿಡುವರು. ಹೆರಿಗೆ ಕುರಿತಂತೆ ಈ ಹಿಂದೆ, ಹೆರಿಗೆ ಮಾಡಿಸಲು ಪ್ರತ್ಯೇಕ ಗುಡಿಸಲು ನಿರ್ಮಿಸುತ್ತಿದ್ದರೆಂದು ತಿಳಿದುಬರುತ್ತದೆ. ಆದರೆ, ಈ ಪದ್ಧತಿಯು ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವುದಿಲ್ಲ.

2.1.3 ಗಂಗೆಪೂಜೆ (ಗಂಗೆಗೆ ಹೋಗಿ ಬರುವುದು) :

ಕರ್ನಾಟಕದ ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಗಂಗೆಯನ್ನು ದೇವತೆ ಎಂದು ಧಾರ್ಮಿಕ ಮತ್ತು ಸಾಮಾಜಿಕ ಆಚರಣೆ ಸಂದರ್ಭದಲ್ಲಿ ಪೂಜಿಸುವರು. ಬುಡಕಟ್ಟು ಸಮುದಾಯಗಳ ಅನೇಕ ಮಂಗಲ ಮತ್ತು ಶುಭ ಸಂದರ್ಭಗಳಲ್ಲಿ ಗಂಗೆಗೆ ಅಗ್ರಸ್ಥಾನ. ಗಂಗೆ ಪವಿತ್ರವಾದ್ದರಿಂದ ಮೈಲಿಗೆ ಆದವಳು ಹೊಲಿ ತೆಗಿಯುವ ತನಕ ಗಂಗೆಯನ್ನು ಮುಟ್ಟಬಾರದು ಎಂಬ ನಿಷಿದ್ಧ ಸಹಜವಾಗಿದೆ. ಗಂಗೆಯ ಪೂಜೆಯಂತಹ ವಿಶೇಷ ಆಚರಣೆಯಿಂದ

ಮೈಲಿಗೆ ಆದವಳು ಮತ್ತೆ ಮೋಕ್ಷ ಸ್ಥಿತಿಗೆ ಬರುತ್ತಾಳೆ ಎಂಬ ನಂಬಿಕೆಯನ್ನು ಮುಂದಿಟ್ಟು ಆಕೆಗೆ ದೈಹಿಕ ವಿಶ್ರಾಂತಿಯನ್ನು ನೀಡಲು ಈ ಆಚರಣೆ ರೂಢಿಗೆ ಬಂದಿರುವ ಸಾಧ್ಯತೆಗಳಿವೆ. ಹೀಗಾಗಿ ಹೆರಿಗೆಯಿಂದ ಮೈಲಿಗೆ ಆದ ಹೆಣ್ಣು ಗಂಗೆಗೆ ಹೋಗಿಬರುವುದರ ಮೂಲಕ ಮೋಕ್ಷಸ್ಥಿತಿಗೆ ಮರಳುವ ನಂಬಿಕೆ ಆಚರಣೆಯಾಗಿ ಮುಂದುವರಿದಿದೆ. ಮೇದರಲ್ಲಿ ಹೆರಿಗೆಯಾದ ಹನ್ನೊಂದು ಅಥವಾ ಹದಿನಾರನೇ ದಿನ ಇಲ್ಲವೇ, ತಿಂಗಳು ತುಂಬುವ ಮುನ್ನ ಬಾಣಂತಿಯು ಗಂಗೆಗೆ ಹೋಗಿ ಬರುತ್ತಾಳೆ. ಆದಿನ ಗಂಗೆಗೆ ಹೋಗಿ ಬರುವುದಕ್ಕಾಗಿ, ಓಣಿಯ ಹೆಂಗಸರನ್ನು ಕರೆದು ಬರುತ್ತಾರೆ. ಹೆಂಗಸರು ಮತ್ತು ಮಕ್ಕಳು ಪೂಜಾ ಸಾಮಗ್ರಿಯೊಂದಿಗೆ ಗಂಗೆಗೆ ಹೋಗಲು ಸಿದ್ದರಾಗುವರು. ಬಾಣಂತಿಯ ಕಂಕುಳಲ್ಲಿ ಒಂದು ಚಿಕ್ಕ ಕೊಡ ಅಥವಾ ಬಿಂದಿಗೆ ಕೊಟ್ಟಿರುತ್ತಾರೆ. ಉಡಿಯಲ್ಲಿ ಅರಿಶಿಣ ಹಚ್ಚಿದ ಹತ್ತಿಕಾಳು, ಬೇವಿನ ಸೊಪ್ಪು ಮತ್ತು ಜೋಳ ತುಂಬಿರುತ್ತಾರೆ. ಬಾಣಂತಿಯು ಅವುಗಳನ್ನು ದಾರಿಯ ಉದ್ದಕ್ಕೂ ಚಲ್ಲುತ್ತಾ ನಡೆಯುವಳು. ಇವಳನ್ನು ಉಳಿದ ಹೆಂಗಸರು ಹಿಂಬಾಲಿಸುವರು. ಮುಂದೆ ಮಕ್ಕಳು ಕುಣಿದು ಕುಪ್ಪಳಿಸುತ್ತಾ ಸಾಗಿರುತ್ತಾರೆ. ಈ ಸಂದರ್ಭದಲ್ಲಿ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಮಕ್ಕಳು ವಿಶೇಷ ಹಾಡೊಂದನ್ನು ಹಾಡುತ್ತಾ ಹೋಗುವುದಾಗಿ ಗುಲ್ಬರ್ಗದ ವಕ್ತೃಗಳಾದ ಪ್ರೊ: ಬಿ. ಆರ್. ಸುರುಪುರ ಅವರು ಈ ಹಾಡಿನ ನುಡಿಯನ್ನು ಹೀಗೆ ಹೇಳುವರು :

ಗಂಗಮ್ಮ ತೇರೋ ಬಿಂದಿಗ್ಯಾಗ ಬೇರೋ. . .

ಗಂಗಮ್ಮ ತೇರೋ ಬಿಂದಿಗ್ಯಾಗ ಬೇರೋ. . .

ಈ ರೀತಿಯಾಗಿ ದಿಬ್ಬಣದೊಂದಿಗೆ ಹೊರಟ ಎಲ್ಲರೂ ಗಂಗೆಯ (ಬಾವಿ) ಹತ್ತಿರ ಬರುತ್ತಾರೆ. ಇತ್ತೀಚಿನ ದಿನಗಳಲ್ಲಿ ಬಾವಿಯ ಸ್ಥಾನದಲ್ಲಿ ಬೀದಿಯನಲ್ಲಿ ಇಲ್ಲವೇ ಮಿನಿಟ್ಯಾಂಕ್ ಬಳಸುವುದು ಅನಿವಾರ್ಯವಾಗಿದೆ. ಮುತ್ತೈದೆಯರು ಕಟ್ಟೆಯನ್ನು ಮಡಿ ಮಾಡುವರು. ಬಾಣಂತಿಯು ಹೊತ್ತು ತಂದ ಕೊಡದಲ್ಲಿ ನೀರು ತುಂಬಿ ಇರಿಸುವರು. ಮಡಿಮಾಡಿದ ಸ್ಥಳದಲ್ಲಿ ಐದು ಮರಳಿನ ರಾಶಿಯನ್ನು ಮಾಡಿ ಅಂಗನೂಲು (ಐದೆಳೆದಾರ)ಹಾಕಿ ಪೂಜಿಸುತ್ತಾರೆ. ಕಾಯಿ ಒಡೆದು ಮುತ್ತೈದೆಯರು ಅಂಗನೂಲು ಹಾಕಿಕೊಂಡು ವೀಳ್ಯದ ಜೊತೆ ಬಾಳೆಹಣ್ಣು-ಕೊಬ್ಬರಿಯ ಉಡಿ ತುಂಬಿಸಿಕೊಳ್ಳುವರು. ನಂತರ ಬಾಣಂತಿಯು ಗಂಗಮ್ಮನನ್ನು ಪೂಜಿಸಿ ಅನ್ನಬೆಲ್ಲ ಎಡೆ ಮಾಡುತ್ತಾಳೆ. ಗಂಗೆಗೆ ಹಾಲು ತುಪ್ಪ ಹಾಕಿ ತುಪ್ಪದ ದಾರಿ ತೊಗೊಂಡು ನೀರಿನ ದಾರಿಯನ್ನು ಕೊಡು ಎಂದು ಬೇಡುವಳು. ಈ ಬೇಡಿಕೆ ಅಂದಿನಿಂದ ಮೈಲಿಗೆ ಆದವಳು ನೀರನ್ನು (ಗಂಗೆ) ಮುಟ್ಟಲು ಪಡೆದ ಅಧಿಕೃತ ಪರವಾನಿಗೆಯಾಗಿದೆ. ನಂತರ ಮರಳಿನ ರಾಶಿ ಮತ್ತು ವೀಳ್ಯವನ್ನು ಗಂಗೆಗೆ ಹಾಕಿ ಬಾಣಂತಿಯ ತಲೆಯ ಮೇಲೆ ಬಿಂದಿಗೆ ಹೊರಿಸಿಕೊಂಡು ಬರುತ್ತಾರೆ. ಮನೆಯ ಹತ್ತಿರ ಬಂದ ತಕ್ಷಣ, ಬಿಂದಿಗೆಯಲ್ಲಿ ವೀಳ್ಯ ಬಿಟ್ಟು ಬಿಂದಿಗೆಯನ್ನು ಒಳಗೆ ತೆಗೆದುಕೊಂಡು ಹೋಗುವರು. ಜೊತೆಯಲ್ಲಿ ಬಂದ ಮಕ್ಕಳಿಗೆ ಕೊಬ್ಬರಿ-ಮಂಡಕ್ಕಿ ಫಲಾಹಾರ ಕೊಡುತ್ತಾರೆ. ಬಿ.ಆರ್. ಸುರುಪುರ ಅವರು ಹೇಳುವಂತೆ, ಗುಲ್ಬರ್ಗಮತ್ತು

ರಾಯಚೂರು ಜಿಲ್ಲೆಗಳಲ್ಲಿ ಮಕ್ಕಳಿಗೆ ಉಪ್ಪು ಒಳ್ಳೆಣ್ಣೆ ಕಲಸಿದ ಸಂಗ್ಟಿಯನ್ನು ತಿನ್ನಲು ಕೊಡುವುದು ರೂಢಿಯಲ್ಲಿರುವುದು ತಿಳಿದುಬರುತ್ತದೆ.

2. 2 ನಾಮಕರಣ :

ಎಲ್ಲಾ ಸಮುದಾಯಗಳಲ್ಲಿ ಇರುವಂತೆ ಮೇದರಲ್ಲಿಯೂ ಮಗುವನ್ನು ತೊಟ್ಟಿಲಲ್ಲಿ ಹಾಕುವ ಸಂಪ್ರದಾಯವಿದೆ. ಈ ಕಾರ್ಯವನ್ನು ತೊಟ್ಟಿಲಕಾರ್ಯ ಅಥವಾ ನಾಮಕರಣ ಎಂದು ಕರೆಯುತ್ತಾರೆ. ಮೇದರಲ್ಲಿ ತೊಟ್ಟಿಲ ಕಾರ್ಯವು ಎರಡು ಸಾರಿ ನಡೆಯುವುದು ಒಂದು ವಿಶೇಷವಾಗಿದೆ . ಮೊದಲನೆಯದು ಸಾಂಕೇತಿಕವಾಗಿ ಹೆರಿಗೆಯಾದ ಹದಿನಾರನೇ ದಿನ ಅಥವಾ ತಿಂಗಳು ತುಂಬುವ ಮುನ್ನ ತವರು ಮನೆಯಲ್ಲಿ ನಡೆಯುತ್ತದೆ . ಎರಡನೆಯದು ತಾಯಿ ಮತ್ತು ಮಗುವನ್ನು ಗಂಡನ ಮನೆಗೆ ಕರೆದು ಕೊಂಡು ಹೋದ ದಿನ (ತೊಟ್ಟಿಲು-ಬಟ್ಟಲು ಬರುವ ದಿನ) ನಡೆಯುವ ಕಾರ್ಯ.

ಮೊದಲನೆಯದು ಹೆರಿಗೆ ಆಗಿ ಒಂಬತ್ತು , ಹನ್ನೊಂದು ಅಥವಾ ಹದಿನಾರನೇ ದಿನ ಮುಸ್ಸಂಜೆಯಲ್ಲಿ ಈ ಕಾರ್ಯ ಮಾಡುವರು. ಮಗುವನ್ನು ತೊಟ್ಟಿಲಲ್ಲಿ ಹಾಕುವ ಈ ಕಾರ್ಯಕ್ಕೆ ಸಮುದಾಯದ ಹಾಗೂ ನೆರೆಹೊರೆಯವರನ್ನು ಆಹ್ವಾನಿಸುವರು. ಮೇದರ ಪದ್ಧತಿಯಂತೆ ಮಗುವಿನ ತೊಟ್ಟಿಲನ್ನು ಸೋದರ ಮಾವ ಸಿಂಗರಿಸುವನು. ತೊಟ್ಟಿಲು ಪೂಜೆ ಮಾಡಿ ಒಂದು ತೆಂಗಿನ ಕಾಯಿಯನ್ನು ಒಡೆದು ಮತ್ತೊಂದು ಕಾಯಿಯನ್ನು ತೊಟ್ಟಿಲ ಕೆಳಗೆ ಉರುಳಿ ಬಿಡುತ್ತಾನೆ. ಹೆಣ್ಣುಮಕ್ಕಳೆಲ್ಲ ಸೇರಿ ಮಗುವಿಗೆ ಹೊಸಬಟ್ಟೆ ಉಡಿಸಿ ತೊಟ್ಟಿಲಲ್ಲಿ ಹಾಕುವರು. ಮಗುವಿನ ಕಾಲು ಕೆಳಗೆ ಹೇಲು ಗುಗ್ಗರಿಯ ಚಿಕ್ಕ ಚಿಕ್ಕ ಗಂಟುಗಳನ್ನು ಇಡುವರು. (ಹೇಲು ಗುಗ್ಗರಿಯ ಗಂಟು: ನೆನೆಸಿದ ಕಡಲೆಕಾಳು ಮತ್ತು ಮಂಡಕ್ಕಿಯನ್ನು ಬಟ್ಟೆಯಲ್ಲಿ ಕಟ್ಟಿದ ಚಿಕ್ಕ-ಚಿಕ್ಕ ಗಂಟುಗಳು.) ಸೋದರ ಮಾವ ಮಗುವಿನ ಕಿವಿಯಲ್ಲಿ ಕುರ್ರಾಡಿ, ಒಂದುಬಾರಿಗೆ ಒಂದು ಗಂಟು ಬಾಯಿಯಿಂದ ಕಚ್ಚಿ ತರಬೇಕು. ಕುರ್ರಾಡುವಾಗ ಮೊದಲು ಮನೆದೇವರ ಹೆಸರು ನಂತರ ಕುಲದೇವರ ಹೆಸರು, ಕೊನೆಗೆ ಅವರು ಕರೆಯುವ ಹೆಸರು ಹೇಳುತ್ತಾನೆ. ಪ್ರತಿ ಬಾರಿಯೂ ಹೆಸರಿಡುವಾಗ ಸುತ್ತಲೂ ನಿಂತ ಹೆಂಗಳೆಯರು ಗುದ್ದು ಹಾಕುವರು. ಕೊನೆಯ ಬಾರಿ ಇವನು ಕುರ್ರಾಡಿ, ಅಲ್ಲಿಟ್ಟಿರುವ ಚಾಜಾ(ಕಾಣಿಕೆ, ದಕ್ಷಿಣೆ) ತೆಗೆದುಕೊಂಡು ಹೋಗುತ್ತಾನೆ. ಬಂದ ಹೆಂಗಸರೆಲ್ಲ ಬಾಣಂತಿಗೆ ಅರಿಶಿಣ-ಕುಂಕುಮ ಹಚ್ಚಿ ವೀಳ್ಯ ಕೊಡುತ್ತಾರೆ. ಬಂದವರಿಗೆ ಸಿಹಿ ಊಟ ಅಥವಾ ವೀಳ್ಯ ಮರ್ಯಾದೆ ಮಾಡುವರು. ಈ ಕಾರ್ಯಕ್ಕೆ ಮುಂಚೆ ಮಗುವಿನ ತಂದೆ ಶಾಸ್ತ್ರ ಕೇಳಿಸಿ, ದೋಷ ಬಂದಿದ್ದರೆ ನಿವಾರಣೆ ಮಾಡಿಸಿ ಮಗುವಿನ ಮುಖವನ್ನು ನೋಡುವನು. ಮೇದರು ಈ ಕಾರ್ಯ ಮುಗಿಯುವವರೆಗೆ ಮಗುವಿನ ತಲೆಯನ್ನು ಬಾಚಣಿಕೆಯಿಂದ ಬಾಚಿರುವುದಿಲ್ಲ. ಇದಕ್ಕೆ ಕಾರಣ ಮಗುವಿನ ತಲೆಯ ಸೂಕ್ಷ್ಮ ಭಾಗವಾದ ಅಳ್ಳೆತ್ತಿಗೆ ತೊಂದರೆ ಆಗದಿರಲೆಂದು ಸಮಂಜಸವಾದ ಇಂತಹ ಸಂಪ್ರದಾಯ ಹುಟ್ಟಿಕೊಂಡಿರಬೇಕು.

ತೊಟ್ಟಿಲಕಾರ್ಯ ಕುರಿತಂತೆ ಎರಡನೆಕಾರ್ಯವು ಗಂಡನ ಮನೆಯಲ್ಲಿ ನಡೆಯುತ್ತದೆ. ಗಂಡನ ಮನೆಯಲ್ಲಿ ಪದ್ಧತಿ ಇದ್ದರೆ ಮಾತ್ರ ಈ ಕಾರ್ಯ ಮಾಡುವರು. ಚೊಚ್ಚಲು ಮಗುವಾಗಿದ್ದರೆ ಈ ಕಾರ್ಯವನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಾರೆ. ಹೆರಿಗೆಯಾಗಿ ಮೂರು, ಐದು ಇಲ್ಲವೇ ಒಂಬತ್ತನೆಯ ತಿಂಗಳಲ್ಲಿ ಗಂಡನ ಮನೆಯವರು ಸೊಸೆ ಮತ್ತು ಮಗುವನ್ನು ಕರೆದುಕೊಂಡು ಹೋಗುವರು. ಇದಕ್ಕೆ ತೊಟ್ಲ-ಬಟ್ಲ ಬರುವುದು ಎನ್ನುತ್ತಾರೆ. ಆ ದಿನ ತಾಯಿ-ಮಗುವಿಗೆ ತವರು ಮನೆಯವರು ಹೊಸ ಬಟ್ಟೆ ಉಡಿಸಿ ಉಡಿ ಅಕ್ಕಿ ಹಾಕುವರು. ಮಗುವಿನ ಸೋದರ ಮಾವ ತೊಟ್ಟಿಲನ್ನು ಹೊತ್ತುಕೊಂಡು ನಡೆಯುವನು. ದಾರಿಯಲ್ಲಿ ನದಿ, ಹಳ್ಳ, ಕೆರೆ, ಅಡ್ಡ ಬಂದರೆ, ವೀಳ್ಯ ಬಿಡುತ್ತಾರೆ. ಬೀಗರ ಮನೆಯಲ್ಲಿ ತೊಟ್ಟಿಲನ್ನು ಪೂಜಿಸಿ ಅದನ್ನು ಹೊತ್ತು ತಂದ ಮಗುವಿನ ಸೋದರ ಮಾವನಿಗೆ ಉಡುಗೊರೆ ಮರ್ಯಾದೆ ಮಾಡುವರು. ಅದೇ ದಿನ ಸಂಜೆಯ ಹೊತ್ತು ತೊಟ್ಟಿಲುಕಾರ್ಯ ಮಾಡಿ ಮಗುವಿಗೆ ಹೆಸರಿಡುತ್ತಾರೆ. ಇಲ್ಲಿ ತೊಟ್ಟಿಲು ಕಾರ್ಯವನ್ನು ಮಗುವಿನ ಸೋದರತ್ತೆಯವರು ನಡೆಸುವರು. ಸಿಂಗರಿಸಿದ ತೊಟ್ಟಿಲಲ್ಲಿ ಮಗುವನ್ನು ಮಲಗಿಸಿ ಮಗುವಿನ ಕಾಲು ಬುಡದಲ್ಲಿ ಹೇಲು ಗುಗ್ಗರಿಯ ಗಂಟು ಇರಿಸುತ್ತಾರೆ. ಸೋದರತ್ತೆ ಹೆಸರಿಟ್ಟು ಕುರ‍್ರಾಡಿ ಒಂದೊಂದು ಗಂಟನ್ನು ಬಾಯಿಯಿಂದ ಕಚ್ಚಿ ತರುವಳು. ಇಲ್ಲಿ ಹೆಸರಿಡುವ ಪ್ರಕಾರದಲ್ಲಿ ಸ್ವಲ್ಪ ಬದಲಾವಣೆ ಕಂಡು ಬರುತ್ತದೆ. ಅಂದರೆ ಸೋದರತ್ತೆಯವರು ಮೊದಲು ಮಗುವಿನ ಕಿವಿಯಲ್ಲಿ ಕ್ಯಾತಯ್ಯ ನಿಮ್ಮಪ್ಪಾ ಅಡವಿಗೆ ಬದಿರು ಕಡಿಯಾಕ ಹೋಗ್ಯಾನ ಬುತ್ತಿ ಒಯ್ಯಿ ಬಾರೋ ಕುಟ್ಟಟ್ಟೆ ಕುರ್‌ರ್‌ರ್... ಎಂದು ಕುರ‍್ರಾಡುತ್ತಾರೆ. ಇಲ್ಲಿಯೂ ಕೂಡ ಹೆಸರಿಟ್ಟವರ ಬೆನ್ನಿಗೆ ಶಭಾಷ್ ಗಿರಿಯ ಗುದ್ದು ಬೀಳುತ್ತವೆ. ಹೆಸರಿಟ್ಟವರಿಗೆ ತಮ್ಮ ಯೋಗ್ಯತೆಗೆ ತಕ್ಕಂತೆ ಬಟ್ಟೆ-ಬಂಗಾರದ ಮರ್ಯಾದೆ ಮಾಡುವರು. ಬಂದವರೆಲ್ಲ ತಾಯಿ-ಮಗುವಿಗೆ ಅರಿಶಿಣ ಕುಂಕುಮ ಹಚ್ಚಿ ಉಡುಗೊರೆ ಕೊಟ್ಟು ಆರತಿ ಮಾಡುವರು. ಈ ಸಂದರ್ಭದಲ್ಲಿ ಕೆಲವರು ಅಳಿಯನಿಗೆ ಉಡುಗೊರೆ ಕೊಡುವ ಪದ್ಧತಿಯು ಕಂಡು ಬರುತ್ತದೆ. ಬಂದವರಿಗೆ ಊಟ-ಉಪಚಾರ ನಡೆಯುತ್ತದೆ. ಕೊನೆಗೆ ತಾಯಿ-ಮಗುವಿಗೆ ದೃಷ್ಟಿ ತೆಗೆಯುವರು. ಇಂತಹ ತೊಟ್ಟಿಲು ಕಾರ್ಯದ ಸಂದರ್ಭದಲ್ಲಿ ಸಂಪ್ರದಾಯದ ಹಾಡುಗಳನ್ನು ಹಾಡುವರು. ಈ ಹಾಡುಗಳಲ್ಲಿ ತಾಯಿ ಮಗುವನ್ನು ಆರೈಕೆ ಮಾಡುವ ರೀತಿ ಮತ್ತು ಮಗುವಿನ ಮೇಲಿನ ಮಮಕಾರದ ಹೊಗಳಿಕೆ, ಹಾಸ್ಯ ಮತ್ತು ಬುಡಕಟ್ಟು ದೇವರುಗಳ ನೆನಹುಗಳನ್ನೊಳಗೊಂಡಿರುತ್ತದೆ. ಈ ಹಾಡಿನ ಕೆಲವು ತುಣುಕುಗಳು ಹೀಗಿವೆ:

★ ಕುಂಚಿಗಿ ಕುಲಾಯಿ ಗೊಂಚಲ ಬಿಡಿಮುತ್ತು
ಶ್ರಿಂಗಾರ ಶ್ರೀ ಕೃಷ್ಣಗೆ ಚಂದಾಗಿ ತೊಡಿಸೀರೆ ಜೋ. . . .ಜೋ. . . .
ಉತ್ತತ್ತಿ ಬಾದಾಮಿ ತೇದು ಬಟ್ಟಲು ತುಂಬಿ
ಹದಮಾಡಿ ಕುಡಿಸಿದರೇ ಹಟಮಾಡಿ ಅಳುತಾನೇ ಜೋ. . . . ಜೋ.. . . . .

★ ತೊಟ್ಟೀಲು ಇರುವುದು ಕೈಲಾಸದಲ್ಲಿ
ಹನ್ನೆರಡು ಎಸಳೀನ ಹಾಸಿಗೆಯಲ್ಲಿ

ಚಿನ್ಮಯ ಮಹಾಲಿಂಗ ಮಲಗಿದ್ದಾನಲ್ಲಿ

ನೀವು ಕನ್ಯೆಮುತ್ತೈದೆಯರು ಕೈ ಬೀಸಿ ತೂಗಿ ಜೋ.....ಜೋ. . . .

(ಈ ಸಂದರ್ಭದ ಹೆಚ್ಚಿನ ಹಾಡುಗಳನ್ನು ಅನುಬಂಧದಲ್ಲಿ ನೋಡಿ.)

ಈ ಕಾರ್ಯ ಮುಗಿದ ಮಾರನೆಯ ದಿನ ಬಂದಿರುವ ಬೀಗರಿಗೆ ಮದ್ಯ-ಮಾಂಸದ ಊಟ-ಉಪಚಾರ ನಡೆಯುತ್ತದೆ. ಮೂರು ತಿಂಗಳು ಇಲ್ಲವೇ ವರ್ಷ ತುಂಬುವುದರೊಳಗೆ ತಾಯಿ-ಮಗು ತವರಿಗೆ ಹೋಗಿ ಹುಟ್ಟಿದ ಕೋಣೆಯನ್ನು ನೋಡಿ ಬರುವ ಪದ್ಧತಿ ಮೇದರಲ್ಲಿ ದೆ.

2.3 ಜವಳ :

ಜವಳ ಎಂದರೆ ಹುಟ್ಟಿದ ಮಗುವಿನ ತಲೆಯ ಕೂದಲನ್ನು ಪ್ರಥಮ ಬಾರಿಗೆ ಕತ್ತರಿಸುವ ಒಂದು ಪದ್ಧತಿಯಾಗಿದೆ. ಈ ಪದ್ಧತಿಯು ಅನೇಕ ಬುಡಕಟ್ಟು ಮತ್ತು ಇತರೆ ಸಮುದಾಯಗಳಲ್ಲಿ ಕಂಡುಬರುತ್ತವೆ. ಮೇದರಲ್ಲಿ ಈ ಪದ್ಧತಿಯು ಭಿನ್ನವಾಗಿರುವುದನ್ನು ಗಮನಿಸಬಹುದು. ಮೇದರು ಮಗುವಿನ ಜವಳ ಕಾರ್ಯವನ್ನು ಹೆಚ್ಚಾಗಿ ತಮ್ಮ ಮನೆಯ ದೇವರ ಕ್ಷೇತ್ರದಲ್ಲಿ ನೆರವೇರಿಸುತ್ತಾರೆ. ಕೆಲವರು ಮನೆದೇವರು ಅಥವಾ ಕುಲದೇವರಿಗೆ ಜವಳ ಕೊಡುವುದಾಗಿ ಹರಕೆ ಹೊತ್ತಿರುವರು. ಇದರಿಂದ ಮಗುವಿಗೆ ದೇವರ ಕಾಟ ಇರುವುದಿಲ್ಲ ಎಂದು ನಂಬುತ್ತಾರೆ. ಈ ಕಾರ್ಯವನ್ನು ಶಾಸ್ತ್ರ ಕೇಳಿ ಒಂದು ಶುಭ ದಿನದಂದು ಮಾಡುತ್ತಾರೆ. ಜವಳಕಾರ್ಯ ಮೇದರಲ್ಲಿ ಎರಡು ರೀತಿಯಲ್ಲಿ ನಡೆಯುವುದು. ಒಂದು ಎಲಿಗತ್ರಿ ಮುಟ್ಟಿಸುವುದು, ಎರಡನೆಯದು ಜವಳಕಾರ್ಯ.

2.3.ಅ) ಎಲಿಗತ್ರಿ ಮುಟ್ಟಿಸುವುದು :

ಎಲಿಗತ್ರಿ ಮುಟ್ಟಿಸುವುದು ಎಂದರೆ ಮಗು ಜನಿಸಿದ 3,5,7,9 ಅಥವಾ 12 ತಿಂಗಳು ತುಂಬುವುದರೊಳಗೆ ಈ ಕಾರ್ಯ ಮಾಡುತ್ತಾರೆ. ದೇವರ ವಾರದ ದಿನ ಮಗುವಿಗೆ ತವರಿನವರು, ಇಲ್ಲವೇ ಬೀಗರಾದವರು ಹೊಸಬಟ್ಟೆ ಉಡಿಸಿ ಆಂಜನೆಯ ಇಲ್ಲವೇ ಮಲೆಮ್ಮ ಅಥವಾ ಆ ಪ್ರದೇಶದ ನಡವಳಿಯ ದೇವಾಸ್ಥಾನಕ್ಕೆ ಕರೆದುಕೊಂಡು ಹೋಗುವರು. ದೇವರ ಎದುರಿಗೆ ತಾಯಿ ಮಗುವನ್ನು ಎತ್ತಿಕೊಂಡು ಕೂಡುತ್ತಾಳೆ. ಪೂಜಾರಿಯು ದೇವರಿಗೆ ಪೂಜಿಸಲ್ಲಿಸಿದನಂತರ ಮಗುವಿನ ತಲೆಗೆ ಅರಿಶಿಣ ಕುಂಕುಮ ಹಚ್ಚಿ ಪೂಜಿಸುತ್ತಾನೆ. ವೀಳ್ಯದ ಎಲೆಯನ್ನು ನೇರಕ್ಕೆ ಎರಡು ಭಾಗಗಳಾಗಿ ಸೀಳಿ ಕತ್ತರಿಯ ಬಾಹುಗಳಂತೆ ಹಿಡಿದು ಮಗುವಿನ ತಲೆಯ ಕೂದಲನ್ನು ಸಾಂಕೇತಿಕವಾಗಿ ತಲೆಯ ಮುಂಭಾಗ, ಬಲ ಮತ್ತು ಎಡ ಭಾಗಗಳಲ್ಲಿ ಕತ್ತರಿಸಿದಂತೆ ಮಾಡಿ ಒಂದಿಷ್ಟು ಕೂದಲುಗಳನ್ನು ಕಿತ್ತುಕೊಳ್ಳುವನು. ಕೂದಲು ಮತ್ತು ಎಲೆಯ ಕತ್ತರಿ ಬಾಹುಗಳನ್ನು ಇನ್ನೊಂದು ಎಲೆಯಲ್ಲಿ ಹಾಕಿ ಮುದುಡಿ ತಾಯಿಯ ಕೈಯಲ್ಲಿ ಕೊಡುತ್ತಾನೆ. ಬಂದವರೆಲ್ಲ ತಾಯಿ ಮಗುವಿಗೆ ಅಕ್ಕಿಕಾಳು ಹಾಕಿ ಆರತಿಮಾಡಿ ಮಗುವಿಗೆ ಉಡುಗೊರೆ ಕೊಡುವರು. ಪೂಜಾರಿಗೆ ಉಲ್ಪಿ ಮತ್ತು ದಕ್ಷಿಣೆ ಕೊಡುತ್ತಾರೆ. ವಾರದ ದಿವಸ ಮಗುವಿನ ಸೋದರಮಾವ ಅಥವಾ ಮಾವನಾದವನು

ಮಗುವಿನ ಕೂದಲನ್ನು ಕತ್ತರಿಸುವನು .ನಂತರ ಮಗುವಿನ ತಲೆಗೆ ಹಾಲು-ತುಪ್ಪ ಎರೆದು ಸ್ನಾನ ಮಾಡಿಸುವರು . ಕತ್ತರಿಸಿದ ಕೂದಲನ್ನು ಹಳ್ಳ ಅಥವಾ ನದಿಯಲ್ಲಿ ಬಿಡುವರು.

2.3.ಆ) ಜವಳ ಕಾರ್ಯ :

ಜವಳ ಕಾರ್ಯದ ಮತ್ತೊಂದು ಕ್ರಮ ಬಂಧು-ಬಳಗದೊಂದಿಗೆ ಮನೆದೇವರಿಗೆ ಹೋಗಿ ಹರಕೆ ಒಪ್ಪಿಸುವುದು. ಆ ದಿನ ತಾಯಿ-ಮಗುವಿಗೆ ಸ್ನಾನಮಾಡಿಸಿ, ಹೊಸಬಟ್ಟೆ ಉಡಿಸಿ, ದೇವರ ಎದುರಿಗೆ ಕಂಬಳಿಯ ಗದ್ದುಗೆಯ ಮೇಲೆ ತಾಯಿಮಗು ಮತ್ತು ಪದ್ಧತಿ ಇದ್ದರೆ ತಂದೆಯನ್ನು ಸಹ ಕೂಡಿಸುತ್ತಾರೆ. ದೇವರ ಪೂಜೆ ಸಲ್ಲಿಸಿ ಪೂಜಾರಿಯು ಮಗುವಿನ ತಲೆ ಕೂದಲನ್ನು ಕತ್ತರಿಯಿಂದ ತಲೆಮುಂಭಾಗ, ಎಡಭಾಗ ಮತ್ತು -ಬಲಭಾಗದ ಕೂದಲನ್ನು ಸ್ವಲ್ಪ ಕತ್ತರಿಸಿ ತೆಗೆಯುವನು. ಕೆಲವರು ಪೂರ್ತಿ ಕೂದಲನ್ನು ಕತ್ತರಿಸುವರು. ತವರಿನ ಕಡೆಯವರು ಮೊದಲು ತಂದೆ-ತಾಯಿ-ಮಗುವಿಗೆ ಹೊಸಬಟ್ಟೆ ಉಡುಗೊರೆ ಕೊಟ್ಟು ಆರತಿ ಮಾಡುತ್ತಾರೆ. ಬಂದವರೆಲ್ಲ ಆರತಿ ಮಾಡಿ ಉಡುಗೊರೆ ಕೊಡುವರು. ಪದ್ಧತಿ ಇದ್ದರೆ ದೇವರಿಗೆ ಕುರಿ ಅಥವಾ ಕೋಳಿಯನ್ನು ಹರಕೆ ಒಪ್ಪಿಸಿ, ಬಂದವರಿಗೆ ಊಟೋಪಚಾರ ಮಾಡುವರು.

2.3.1 ಮಗುವಿನ ಪಾಲನೆ ಪೋಷಣೆ ಕುರಿತಂತೆ ವಿಶೇಷ ಆಚರಣೆಗಳು :

ಮೇದ ಸಮುದಯದಲ್ಲಿ ಹುಟ್ಟಿನ ಸಂದರ್ಭದ ಆಚರಣೆಗಳನ್ನು ಗಮನಿಸುವಾಗ ಮಗುವಿನ ಪಾಲನೆ ಮತ್ತು ಪೋಷಣೆ ಕುರಿತಂತೆ ಕೆಲವು ವಿಶೇಷ ಆಚರಣೆಗಳು ಕಂಡು ಬರುತ್ತವೆ. ಇವುಗಳನ್ನು ಕುರಿತಾದ ವಿಶ್ಲೇಷಣೆಯನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

2.3.1.ಅ) ಬಾಲಗ್ರಹ ದೋಷ ಅಥವಾ ಬಲಿಗೊಂಬಿ ಮಾಡಿಸುವುದು :

ಬಾಲಗ್ರಹ ದೋಷ ಎನ್ನುವುದು ಮಕ್ಕಳಿಗೆ ವರ್ಷ ತುಂಬುವುದಕ್ಕೆ ಮೊದಲು ಬರುವ ಒಂದು ರೀತಿಯ ಭೂತಚೇಷ್ಟೆ. ಮಗುವಿನ ಮೇಲೆ ಭೂತದ ಕಣ್ಣು ಬಿದ್ದರೆ ಈ ದೋಷ ತಗುಲುತ್ತವೆ ಎಂದು ಇವರ ನಂಬಿಕೆ. ಈದೋಷ ತಗುಲಿದ ಮಗುವಿನಲ್ಲಿ ಕೆಲವು ಲಕ್ಷಣಗಳು ಕಂಡು ಬರುತ್ತವೆ. ಮಗುವು ನಿದ್ರೆಯಲ್ಲಿ ಬೆಚ್ಚಿ ಬೀಳುವುದು, ಮೈ ಸೆಟೆಸುವುದು, ಮುಷ್ಟಿಯನ್ನು ಬಿಗಿಯಾಗಿ ಹಿಡಿದು ನಡುಗುತ್ತಾ ಚೀರುವುದು. ಮಗುವಿನ ಮುಖಕಳೆಗುಂದಿ ಕಿರಿ-ಕಿರಿ ಮಾಡುತ್ತದೆ. ಇಂತಹ ಲಕ್ಷಣ ಇರುವ ಮಗುವಿಗೆ ಬಾಲಗ್ರಹ ದೋಷ ತಗುಲಿದೆ ಎಂದು ಅನುಭವಸ್ಥ ಹಿರಿಯ ಮಹಿಳೆಯರು ಗುರುತಿಸುತ್ತಾರೆ. ನಿರ್ದಿಷ್ಟವಾರ, ಅಮವಾಸ್ಯೆ ಮತ್ತು ಹುಣ್ಣಿಮೆಯ ದಿನದಂದು ಈ ದೋಷನಿವಾರಣೆಯನ್ನು ಮಾಡಿಸುವರು. ಅಂದು ಸಂಜೆಯ ಹೊತ್ತಿನಲ್ಲಿ ಊರಹೊರಗಿನ ಕೆರೆ-ಹಳ್ಳ-ಸ್ಮಶಾನದ ಮಣ್ಣನ್ನು ತರುತ್ತಾರೆ. ಆ ಮಣ್ಣಿನಿಂದ ಪೂತನಿ ಗೊಂಬೆಯನ್ನು ಮಾಡಿ ಮುಕ್ಕಾದ ಮಣ್ಣಿನ ಮುಚ್ಚಳದಲ್ಲಿಡುವರು. ಪೂತನಿಗೆ ಹಳದಿ ಬಣ್ಣದ ಬಟ್ಟೆ ಉಡಿಸಿ ಕೈಯಲ್ಲಿ ಕೆಂಪು ಬಣ್ಣದ ಬಾವುಟವನ್ನು ಹಿಡಿಸುವರು. ಐದು ಬಗೆಯ

ಧಾನ್ಯಗಳನ್ನು ಪೂತನಿಯ ಮುಂದೆ ಹಾಕಿ ಅರಿಶಿಣ-ಕುಂಕುಮದಿಂದ ರಂಗ ಹಾಕುವರು. ಒಂದು ಒಳಸೆರೆ ಮತ್ತು ಒಂದು ಹೊರಸೆರೆ ಅಕ್ಕಿ ತೆಗೆದುಕೊಂಡು ಅನ್ನ ಮಾಡಿ ಮೂರು ಅನ್ನದ ಮುಟಗಿಯನ್ನು (ಮೂರು ಮುಷ್ಟಿ ಅನ್ನದ ಮುದ್ದೆ)ಎಡೆ ಮಾಡುವರು. ಅನ್ನದ ಹಣತಿಯಲ್ಲಿ ದೀಪ ಹಚ್ಚಿಟ್ಟು ಪೂತನಿಯ ಮೇಲೆ ಅರಿಶಿಣ ಕುಂಕುಮ ಚಲ್ಲಿ , ಐದು ಬಗೆಯ ಹೂವು ಮುಡಿಸುವರು. ಮುಂದೆ ಎರಡು ಒಣ ಮೆಣಸಿನ ಕಾಯಿ ನಿಂಬೆ ಹಣ್ಣು ಇರಿಸಿ ಗಂಧದ ಕಡ್ಡಿ ಹಚ್ಚಿಡುವರು. ಈ ಅಲಂಕೃತ ಪೂತನಿಯ ಮುಚ್ಚಳವನ್ನು ವಯೋವೃದ್ಧರೊಬ್ಬರು ತೆಗೆದು ಕೊಂಡು ಬಾಲ ಗ್ರಹ ದೋಷ ತಗುಲಿದ ಮಗುವಿನ ಮುಖದ ಮೇಲೆ ಮೂರು ಸಾರಿ ಇಳಿ ತೆಗೆಯುತ್ತಾರೆ. ಎಡಗೈಯಲ್ಲಿ ಪೂತನಿಯನ್ನು , ಬಲಗೈಯಲ್ಲಿ ಕುಡುಗೋಲು ಹಿಡಿದು ಗ್ರಹದ ದಿಕ್ಕನ್ನು ಹಿಡಿದು ಊರಾಚೆ ಬರುವರು. ಕಳ್ಳಿ, ಆಲ, ಹತ್ತಿ ಇಲ್ಲವೇ ಹೊನ್ನಾಂಬರಿಯ ಗಿಡದ ಕೆಳಗೆ ಗ್ರಹದ ದಿಕ್ಕಿಗೆ ಮುಖಮಾಡಿ ಪೂತನಿಯನ್ನು ಇಡುವರು. ಪೂತನಿಯ ಮುಂದೆ ಮೂರುಸಾರಿ ಕುಡುಗೋಲಿನಿಂದ ನೆಲವನ್ನು ಕಡಿದು, ಮೂರು ಸಾರಿ ಉಗಿದು ತಿರುಗಿ ನೋಡದೇ ಮನೆಗೆ ಹಿಂದಿರುಗುವರು. ಸ್ವಲ್ಪ ಹೊತ್ತು ಹೊರಗಡೆ ಕುಳಿತಿದ್ದು ನಂತರ ಕೈಕಾಲು ಮುಖ ತೊಳೆದು ಒಳಗೆ ನಡೆಯುತ್ತಾರೆ. ಇದೇ ಕ್ರಮವನ್ನು ಬಾಣಂತಿಗೆ ಗ್ರಹ ತಗುಲಿದಾಗ ಸಹ ಮಾಡುವರು. ಈ ಆಚರಣೆಯು ಬಳ್ಳಾರಿ, ಜಿಲ್ಲೆಯಲ್ಲಲ್ಲದೆ ರಾಯಚೂರು, ಗುಲ್ಬರ್ಗ ಜಿಲ್ಲೆಗಳಲ್ಲಿಯೂ ಇರುವುದಾಗಿ ತಿಳಿದುಬಂದಿರುತ್ತದೆ .

2.3.1. ಆ) ಮುಡ್ತಾಸು ಮುರಿಸುವುದು :

ಮುಡ್ತಾಸು ಮಕ್ಕಳಿಗೆ ಬರುವ ಒಂದು ಬಗೆಯ ದೋಷ. ಇಂತಹ ದೋಷಗಳು ಅಸೌಖ್ಯವಾದ ಸನ್ನಿವೇಶಗಳಿಂದ ಮಕ್ಕಳಿಗೆ ಬರುತ್ತವೆ ಎಂದು ಇವರ ನಂಬಿಕೆ. ಮುಡ್ತಾಸುಗಳಲ್ಲಿ ಎರಡು ಬಗೆ. ಮುಟ್ಟು ಮಡ್ತಾಸು ಮತ್ತು ಕುಣಿ ಮುಡ್ತಾಸು.

ಮುಟ್ಟು ಮುಡ್ತಾಸು:- ಮುಟ್ಟು ಮುಡ್ತಾಸು ಮುಟ್ಟಿನ ದೋಷದಿಂದ ತಗುಲುತ್ತದೆ. ಬೇರೆ ಹೆಂಗಸರು ತಿಂಗಳು ಮುಟ್ಟಾದಾಗ ಮಗುವನ್ನು ಮುಟ್ಟುವುದರಿಂದ ಈ ದೋಷ ತಗುಲುತ್ತದೆ. ಮತ್ತು ಋತುಮತಿಯಾದವಳು ಮಗುವನ್ನು ಮುಟ್ಟಿದರೆ ಇಲ್ಲವೇ ಅಂತಹವರ ಮನೆಗೆ ಮಗುವನ್ನು ಕರೆದುಕೊಂಡು ಹೋದರೆ ಮಗುವಿಗೆ ಈ ದೋಷ ತಗುಲುವುದು. ಮಗುವಿಗೆ ಮುಡ್ತಾಸು ಆಗಿರುವುದನ್ನು ಸಮುದಾಯದ ಅನುಭವಸ್ಥ ಹಿರಿಯ ಹೆಂಗಸರು ಮಗುವಿನ ಕೆಲವು ಲಕ್ಷಣಗಳನ್ನು ನೋಡಿ ಗುರುತಿಸುತ್ತಾರೆ. ಈ ದೋಷ ತಗುಲಿದಾಗ ಮಗು ಪದೇಪದೇ ನೀರಭೇದಿ ಮಾಡಿಕೊಳ್ಳುತ್ತದೆ. ಭೇದಿಯು ಒಡೆದಂತಿದ್ದು ದುರ್ವಾಸನೆಯಿಂದ ಕೂಡಿರುತ್ತದೆ. ಅಳ್ಳಿಪರಿ(ಪಕ್ಕೆಯ ಇಕ್ಕೆಡೆಗಳು) ಬಡಿತ ಜೋರಾಗಿದ್ದು ನೆತ್ತಿ (ಅಳ್ಳಿತ್ತಿ) ಬಗಿದುಕೊಂಡು ಮಗುವು ನಿಶ್ಯಕ್ತಿಯಿಂದ ಕಳಾಹೀನವಾಗಿರುತ್ತದೆ. ಇಂತಹ ಲಕ್ಷಣ ಇರುವ ಮಗುವಿಗೆ ಮುಡ್ತಾಸು ಆಗಿದೆ ಎಂದು ಇವರು ಗುರುತಿಸುವರು.

ಮುಟ್ಟು ಮುಡ್ತಾಸನ್ನು ಎರಡು ವಿಧದಲ್ಲಿ ನಿವಾರಿಸುತ್ತಾರೆ(ಮುರಿಸುತ್ತಾರೆ). ಈಗಾಗಲೇ ಹೇಳಿರುವಂತೆ ನಿರ್ದಿಷ್ಟ ದಿನಗಳಂದು ಇದರ ನಿವಾರಣೆ ಮಾಡಿಸುವರು. ಆ ದಿವಸ ಮುಸ್ಸಂಜೆಯ ಸಮಯ ಮಗವನ್ನು ಹೊಸ್ತಿಲ ಮೇಲೆ ಕೂಡಿಸುವರು. ಹಿರಿಯರು ಹಾಗಲ ಅಥವಾ ವಿಷಕವಡಿಯ ಕಾಯಿಯ ಸೊಪ್ಪನ್ನು ಮಾತನಾಡದೇ ತಂದು ಅದರ ರಸವನ್ನು ಮಗುವಿನ ನೆತ್ತಿ, ಕಂಕುಳು ಮತ್ತು ಅಂಗಾಲಿಗೆ ಹಚ್ಚುತ್ತಾರೆ. ಈ ರೀತಿಯಾಗಿ ಐದುವಾರ ಹಚ್ಚುವರು. ಇನ್ನೊಂದು ವಿಧಾನ ಎಂದರೆ, ಮುಡ್ತಾಸು ಮುರಿಸುವವರ ಹತ್ತಿರ ನಿರ್ದಿಷ್ಟ ದಿನದಂದು ಮಗುವನ್ನು ಕರೆದು ಕೊಂಡು ಹೋಗಿ, ಅವರಿಂದ ಮಗುವಿಗೆ ಔಷಧಿ ಅಥವಾ ದಾರ ಹಾಕಿಸುವರು (ಎಳೆ ಹಾಕಿಸುವುದು). ಮುಡ್ತಾಸು ಮುರಿಸಿ ಬರುವಾಗ ಮಗುವಿನ ಬಟ್ಟೆಯನ್ನು ಕಳಚದೆ ಹರಿದು ಹಸಿರು ಮುಳ್ಳಿನ ಗಿಡದ ಮೇಲೆ ಹಾಕಿ ಬರಬೇಕು.

ಕುಣಿ ಮುಡ್ತಾಸು:- ಇದು ಮತ್ತೊಂದು ಬಗೆಯ ಮುಡ್ತಾಸು. ಈ ಮುಡ್ತಾಸು ಶವಸಂಸ್ಕಾರದ ತಪ್ಪು ಆಚರಣೆಯಿಂದ ತಗುಲುತ್ತದೆ. ಅಂದರೆ, ಶವಸಂಸ್ಕಾರಕ್ಕೆಂದು ಸ್ಮಶಾನಕ್ಕೆ ಹೋಗಿ ಬಂದವರು, ತಕ್ಷಣ ಮಗುವನ್ನು ಅಥವಾ ಗರ್ಭಿಣಿ ಸ್ತ್ರೀಯನ್ನು ಮುಟ್ಟುವುದರಿಂದ ಮಗುವಿಗೆ ಈ ದೋಷ ತಗುಲುತ್ತದೆ. ಇಂತಹ ಮುಡ್ತಾಸು ತಗುಲಿದ ಮಗುವಿನ ಲಕ್ಷಣಗಳು ಹೀಗಿರುತ್ತವೆ. ಮಗು ದಿನೇದಿನೇ, ನಿಶ್ಶಕ್ತಿಯಿಂದ ಕ್ಷೀಣಿಸುವುದು. ಮೈಚರ್ಮ ಸುಕ್ಕುಗಟ್ಟಿ ಕಳಾಹೀನವಾಗುತ್ತದೆ. ಮಗು ಸ್ವತಃ ನಿಂತುಕೊಳ್ಳಲು ಅಥವಾ ಕುಳಿತು ಕೊಳ್ಳಲು ಅಸಮರ್ಥವಾಗಿ ಕೊನೆಗೆ ಬದುಕಿ ಉಳಿಯುವುದೇ ಅನುಮಾನವಾಗುತ್ತದೆ. ಇಂತಹ ಕುಣಿ ಮುಡ್ತಾಸನ್ನು ವಿಚಿತ್ರವಾದ ಆಚರಣೆಯ ಮೂಲಕ ಮುರಿಸುವ ಪದ್ಧತಿಯು ಮೇದರಲ್ಲಿ ಕಂಡು ಬರುತ್ತದೆ.

ಕುಣಿ ಮುಡ್ತಾಸು ಮುರಿಸಲು ಭಾನುವಾರ ಮತ್ತು ಅಮಾವಾಸ್ಯೆ ಸೂಕ್ತವಾದ ದಿನಗಳು. ಆ ದಿನ ಮನೆಯ ಹಿತ್ತಲಲ್ಲಿ ಒಂದು ಚಿಕ್ಕ ಗುಂಡಿಯನ್ನು ತೆಗೆಯುತ್ತಾರೆ. ಅದರಲ್ಲಿ ಸಿಪ್ಪೆತೆಂಗಿನಕಾಯಿ ಒಂದನ್ನು ಇಡುವರು. ಮಗುವಿಗೆ ತಿರುಗಾಮುರುಗಾ ಬಟ್ಟೆಯನ್ನು ತೊಡಿಸಿ ಕಾಯಿಯ ಮೇಲೆ ಕೂಡಿಸುವರು. ಇಂಬರಿಕೆಯಿಂದ ಮಗುವಿನ ತಲೆಯ ಮೇಲೆ ನೀರು ಸುರಿಯುವರು. ಈ ನೀರು ಗುಂಡಿಯಲ್ಲಿಯೇ ನಿಲ್ಲಬೇಕು. ನಂತರ ಮಗುವಿನ ಬಟ್ಟೆಯನ್ನು ಹರಿದು ಕಾಯಿಯಮೇಲೆ ಹಾಕಿ, ಮಗುವುನ್ನು ಎತ್ತಿಕೊಂಡು ಹೋಗಿ ದೇವರ ಗುಡಿಯಲ್ಲಿ ದೀಪ ಹಚ್ಚಿ ಬರುತ್ತಾರೆ. ಅಷ್ಟರಲ್ಲಿ ಈ ಗುಂಡಿಗೆ ಪೂಜೆಸಲ್ಲಿಸಿ ಮುಚ್ಚುವರು. ಗುಂಡಿಯ ಮೇಲೆ ಒಂದು ಚಿಕ್ಕ ಮಣ್ಣಿನ ಗುಡ್ಡೆಯನ್ನು ಮಾಡಿ, ಅದರ ಸುತ್ತ ಮುಳ್ಳಿನ ಬೇಲಿ ನಿರ್ಮಿಸುವರು. ಇಲ್ಲಿಗೆ ಕುಣಿ ಮುಡ್ತಾಸು ಮುರಿಸುವ ಕಾರ್ಯ ಮುಗಿಯುತ್ತದೆ .

ಮುಡ್ತಾಸು ಮುರಿಸಿದವರಿಗೆ ಯೋಗ್ಯತೆಗೆ ತಕ್ಕಂತೆ ಚಾಜಾ ಕೊಡುತ್ತಾರೆ. ಮೇದರು ಇಲ್ಲವೇ ಅನ್ಯಸಮುದಾಯದ ಅನುಭವಸ್ಥರಿಂದ ಇಂತಹ ಮುಡ್ತಾಸು ಮುರಿಸುವರು. ಇಲ್ಲಿ ಮುಡ್ತಾಸು ತಗುಲಿ ಸಾಯುವ ಸ್ಥಿತಿಯಲ್ಲಿದ್ದ ಮಗು ಸತ್ತಿರುವುದೆಂಬ ಭಾವನೆಯಿಂದ ಶವಸಂಸ್ಕಾರ ಮಾಡಿದ ರೀತಿಯಲ್ಲೇ ಕುಣಿಮುಡ್ತಾಸು ಮುರಿಸುವ ಪದ್ಧತಿಯು ಇದಾಗಿದೆ.

2.3.1.ಇ) ಬೆನ್ನುಸುಳಿ ಸುಡುವುದು :

ಬೆನ್ನು ಸುಳಿ ಎಂದರೆ ಮಕ್ಕಳ ಬೆನ್ನ ಮೇಲೆ ಕಂಡು ಬರುವ ರೋಮಗಳ ಸುಳಿ ಅಥವಾ ಚಕ್ರ. ಈ ರೀತಿಯ ಸುಳಿಗಳು ಮಕ್ಕಳ ಬೆನ್ನ ಮೇಲೆ ಇರುವುದು ಅವಲಕ್ಷಣ, ಇಂತಹ ಮಗುವಿನ ನಂತರ ಜನಿಸಿದ ಮಕ್ಕಳು ಬದುಕಿ ಉಳಿಯುವುದಿಲ್ಲ ಎಂಬುದು ಇವರ ನಂಬಿಕೆ. ಮಕ್ಕಳಿಗೆ ಬೆನ್ನ ಮೇಲೆ ಸುಳಿ ಇರುವುದನ್ನು ಸಮುದಾಯದ ಹಿರಿಯರು ಗಮನಿಸಿ ಖಾತ್ರಿ ಮಾಡಿಕೊಳ್ಳುವರು. ಒಂದು ನಿರ್ದಿಷ್ಟ ವಾರದ ದಿನ ಬೆನ್ನು ಸುಳಿ ಸುಡಿಸುವುದುಂಟು. ಆ ದಿನ ಸಾಯಂಕಾಲ ಮಗುವಿನ ಕೈಕಾಲುಮುಖ ತೊಳೆದು ಸೂರ್ಯನ ಕಡೆ ಮುಖ ಮಾಡಿ ಕೂಡಿಸುತ್ತಾರೆ. ಸೋದರ ಮಾವ ಮಗುವಿನ ಬೆನ್ನಿಗೆ ಪೂಜೆ ಸಲ್ಲಿಸಿ ಗಂಧದ ಕಡ್ಡಿ ಅಥವಾ ಬೇವಿನ ಕಡ್ಡಿಗೆ ಬೆಂಕಿ ಹಚ್ಚಿಕೊಂಡು ಮೂರು ಸಾರಿ ಸೂಕ್ಷ್ಮವಾಗಿ ಬೆನ್ನು ಸುಳಿಯನ್ನು ಸುಡುತ್ತಾನೆ. ಮಗುವಿನಿಂದ ಮಾವನಿಗೆ ನಮಸ್ಕಾರ ಮಾಡಿಸಿ ದಕ್ಷಿಣೆ ಕೊಡಿಸುವರು. ಮಾವ ವೀಳ್ಯ ಮತ್ತು ದಕ್ಷಿಣೆಯನ್ನು ತೆಗೆದುಕೊಂಡು ಮುಂದೆ ಹೆಣ್ಣು ಮಗು ಹುಟ್ಟಿದರೆ ನನಗೇ ಕೊಡಬೇಕೆಂದು ತಮಾಷೆ ಮಾಡುವನು. ಈ ರೀತಿ ಬೆನ್ನು ಸುಳಿ ಇರುವುದನ್ನು ಹೆರಿಗೆಯ ತಕ್ಷಣ ಸೂಲಗಿತ್ತಿಯು ಗಮನಿಸಿದ್ದರೆ, ಆಗಲೇ ಚುಟಗಿ ಹಾಕುವಾಗ ಈ ನಿಯಮ ಮಾಡುವಳು. ಇಂತಹ ಆಚರಣೆಗಳ ಜೊತೆಗೆ ಮಗುವಿಗೆ ಹುಟ್ಟುತ್ತಲೇ ಹಲ್ಲು ಬಂದಿದ್ದರೆ, ಮತ್ತು ಬಾಯಿ ಮೇಲಾಗಿ ಹುಟ್ಟಿದರೆ, ಮಗುವು ಹುಟ್ಟುವಾಗ ಹೊಕ್ಕಳ ಬಳ್ಳಿಯನ್ನು ಕೊರಳಿಗೆ ಸುತ್ತಿ ಕೊಂಡು ಹುಟ್ಟಿದರೆ, ಅಲ್ಲದೇ ಮಗುವಿಗೆ ಹಲ್ಲು ಬರುವಾಗ ಮೊದಲು ಮೇಲಿನ ಹಲ್ಲು ಬಂದರೆ, ಶುಭ ಸೂಚಕ ಅಲ್ಲ ಎಂದು ಮೇದರು ನಂಬುತ್ತಾರೆ. ಇವುಗಳ ನಿವಾರಣೆ (ಮುರ್ತಾಯ) ಮಾಡಲು ಅನೇಕ ಕ್ರಮಗಳಿವೆ.

2.4 ಋತುಮತಿ :

ಮೇದ ಬುಡಕಟ್ಟು ಸಮುದಾಯದ ಹೆಣ್ಣು ಮಕ್ಕಳು ಜನಾಂಗಿಕ ವಂಶ ವಾಹಿನಿಯ ಆಧಾರದ ಮೇಲೆ 11-12 ವರ್ಷದ ಮೇಲ್ಪಟ್ಟು ಋತುಮತಿ ಆಗುವುದು ಸಾಮಾನ್ಯ. ಹೆಣ್ಣುಮಗು ಬೆಳೆಯುತ್ತಾ 10,11ನೇ ವರ್ಷದಿಂದ ದೇಹದ ಹೆಣ್ತನದ ಭಾಗಗಳಲ್ಲಿ ಬದಲಾವಣೆಗಳು ಕಂಡು ಬರುತ್ತವೆ. ಇದು ಪ್ರಾಕೃತಿಕ ಮತ್ತು ಜೈವಿಕ ಸಹಜಕ್ರಿಯೆ. ಪ್ರಕೃತಿಯ ನಿಯಮದಂತೆ ಭೂಮಿಯ ಮೇಲಿನ ಎಲ್ಲಾ ಜೀವಿಗಳಲ್ಲಿಯೂ ಈ ರೀತಿಯ ದೈಹಿಕ ಬದಲಾವಣೆ ಅನಿವಾರ್ಯ. ವೈದ್ಯ ಶಾಸ್ತ್ರದ ಪ್ರಕಾರ XX ಕ್ರೋಮೋಜೋಮುಗಳಲ್ಲಿರುವ ವಂಶವಾಹಿನಿಯ ಕೊಡುವಿಕೆಯಲ್ಲಿಯೇ ಹೆಣ್ಣು ಮಗುವಿನ ಋತುಸ್ರಾವದ ಕಾಲಮಿತಿ ನಿರ್ಧಾರವಾಗಿರುತ್ತದೆ. ಹೆಣ್ಣು ಹುಡುಗಿಯರಲ್ಲಿ ಆದ ಈ ಬದಲಾವಣೆಗಳನ್ನು ಸಮುದಾಯದ ಹಿರಿಯ ಮಹಿಳೆಯರು ಗಮನಿಸುವರು. ಅವಳನ್ನು ಈ ಸಮಯದಲ್ಲಿ ಪರ ಊರುಗಳಿಗೆ ಜಾತ್ರೆ, ಉತ್ಸವ, ಮತ್ತು ಹಬ್ಬ-ಹರಿದಿನಗಳಿಗೆ ಕಳುಹಿಸುವುದಿಲ್ಲ. ಏಕೆಂದರೆ, ಋತುಮತಿಯಿಂದ ಮೈಲಿಗೆ ಅಥವಾ ಹೊಲಿ ತಟ್ಟುತ್ತದೆ ಎಂದು ಅನೇಕ ಬುಡಕಟ್ಟು ಸಮುದಾಯಗಳಲ್ಲಿರುವ ನಂಬಿಕೆ. ಇದಕ್ಕೆ ಮೇದ ಬುಡಕಟ್ಟು ಕೂಡ ಹೊರತಾಗಿಲ್ಲ. ಋತುಮತಿ ಆಗುವುದು ಪ್ರತಿಯೊಂದು ಹೆಣ್ಣಿನ ಹೆಣ್ತನದ ಸಾರ್ಥಕತೆಯ ಒಂದು

ಮೈಲುಗಲ್ಲು. ಅಲ್ಲದೇ ತಾಯ್ತನದ ಅರ್ಹತೆಗೆ ಸಿದ್ಧತೆಯ ಘಟ್ಟ "ಒಮ್ಮೆ ಹೆಣ್ಣು ಋತುಮತಿಯಾದ ಮೇಲೆ ಮಧ್ಯ ವಯಸ್ಸಿನಲ್ಲಿ ಆಕೆಯ ಋತುಚಕ್ರ ಸ್ಥಗಿತಗೊಳ್ಳುವವರೆಗಿನ ಘಟ್ಟವನ್ನು ಫಲವಂತಿಕೆಯ ಕಾಲ ಎಂದು ಗುರುತಿಸಲಾಗುವುದು. ಹೆಣ್ಣು ಋತುಮತಿಯಾಗಿ ತನ್ನ ಬದುಕಿನಲ್ಲಿ ಮೊಟ್ಟ ಮೊದಲ ಬಾರಿಗೆ ಜೈವಿಕ ಬದಲಾವಣೆ ಆಗಿರುವುದನ್ನು ಅನುಭವಿಸುತ್ತಾಳೆ."[3] ಪ್ರಸ್ತುತ ಹೇಳಿಕೆಯು ಸಮಂಜಸವಾಗಿದೆ. ಏಕೆಂದರೆ ವೈದ್ಯಶಾಸ್ತ್ರದನ್ವಯ ಮಗುವಿನ 1ರಿಂದ12ನೇ ವಯಸ್ಸಿನ ವರೆಗಿನ ಘಟ್ಟವನ್ನು ಶೈಶವಾವಸ್ಥೆ, (childhood stage) ಮತ್ತು 12ರಿಂದ 45ನೇ ವಯಸ್ಸಿನ ವರೆಗಿನ ಘಟ್ಟವನ್ನು ಫಲವಂತಿಕೆಯ ಘಟ್ಟ ಎಂತಲೂ (Reproductive Stage), ಮತ್ತು 45ರ ಮೇಲ್ಪಟ್ಟ ಘಟ್ಟವನ್ನು ಸ್ತ್ರೀತ್ವಮುಕ್ತಾಯದ ಹಂತ ವೆಂತಲೂ(Menupause Stage) ಕರೆಯಲಾಗುವುದು. ವೈದ್ಯಕೀಯ ದೃಷ್ಟಿಯ ಪ್ರಕಾರ ಯಾವುದೇ ಹೆಣ್ಣು ಮಗು 16ನೇ ವಯಸ್ಸಿನೊಳಗೆ ಋತುಮತಿ ಆಗಲೇ ಬೇಕು. ಋತುಮತಿಯಾಗುವುದನ್ನು ಪುಷ್ಪವತಿಯಾಗುವುದು, ಮೈನೆರೆಯುವುದು, ದೊಡ್ಡಾಕ್ಕಿ ಆಗುವುದು, ಹಿರಿಮನುಷ್ಯಳಾಗುವುದು ಇನ್ನುಮುಂತಾಗಿ ಕರೆಯುವರು. ಈ ಸಂದರ್ಭದಲ್ಲಿ ಋತುಮತಿಯಾದ ಹೆಣ್ಣಿಗೆ ಮೇದ ಬುಡಕಟ್ಟು ಸಮುದಾಯದಲ್ಲಿ ಅನೇಕ ಆಚರಣೆಗಳನ್ನು ನೆರವೇರಿಸುವುದು ಕಂಡು ಬರುತ್ತವೆ. ಹೆಣ್ಣು ಋತುಮತಿ ಆಗುವುದರಿಂದ ಆ ಕುಟುಂಬಕ್ಕೆ ಮೈಲಿಗೆ ಬರುತ್ತದೆ ಎಂಬ ನಂಬಿಕೆ ಇವರಲ್ಲಿದೆ. ಇಂತಹ ನಂಬಿಕೆಯ ಜೊತೆಗೆ ಋತುಮತಿಯಾದ ಸಂದರ್ಭದಲ್ಲಿ ಹೆಣ್ಣಿನ ಫಲವಂತಿಕೆಯ ಸಂಕೇತದ ಅನೇಕ ಆಚರಣೆಗಳು ಮೇದ ಬುಡಕಟ್ಟು ಸಮುದಾಯದಲ್ಲಿವೆ.

ಹೆಣ್ಣು ಮಗು ಋತುಮತಿಯಾದದ್ದು ತಿಳಿದ ತಕ್ಷಣ, ಅವಳನ್ನು ಮನೆಯಲ್ಲಿ ಒಂದು ಕಡೆ ಕೂಡಿಸುವರು. ಅದೇ ದಿನ ಸಾಯಂಕಾಲ ಸಮುದಾಯದ ಕೆಲವು ಮಹಿಳೆಯರು ಶಾಸ್ತ್ರ ಕೇಳಲು ಹೋಗುತ್ತಾರೆ. ಶಾಸ್ತ್ರದಲ್ಲಿ ಹೆಸರಿನಮೇಲೆ ಬಲ ಬಂದವರು ಮೈನೆರೆದವಳನ್ನು ಮೊದಲು ಮುಟ್ಟಿ ತಲೆಯ ಮೇಲೆ ಹಾಲು-ತುಪ್ಪ ಹಾಕಿ ಅರಿಶಿಣ ಹಚ್ಚಿ ನೀರು ಹಾಕುವಳು. ನಂತರ ಉಳಿದ ಮಹಿಳೆಯರು ಸಹ ಋತುವಾದವಳನ್ನು ಮುಟ್ಟವಂತೆ ನೀರು ಹಾಕುವರು. ಋತುವಾದವಳ ತಾಯಿಯೇ ಮುಟ್ಟಿ ನೀರು ಎರೆಯುವುದಾದರೆ ಶಾಸ್ತ್ರ ಕೇಳಿಸುವುದಿಲ್ಲ. ಹಳೆಯ ಬಟ್ಟೆ ಅಥವಾ ಮಡಿವಾಳರು ಕೊಟ್ಟ ಬಟ್ಟೆಯನ್ನು ಉಡಿಸುತ್ತಾರೆ. ಅವಳನ್ನು ಕಂಬಳಿಯ ಮೇಲೆ ಪೂರ್ವಕ್ಕೆ ಇಲ್ಲವೇ ದಕ್ಷಿಣಕ್ಕೆ ಮುಖಮಾಡಿ ಕೂಡಿಸಿ, ಮುಟ್ಟಿ ಎರೆದವಳು ಹುಡುಗಿಯ ಎರಡೂ ಅಂಗೈಗಳಿಗೆ ಅರಿಶಿಣ ಹಚ್ಚುತ್ತಾಳೆ. ಅವಳ ಕೈ ಹಿಡಿದು ಹಿಂಬರಿಗೆಯಿಂದಲೇ ಗೋಡೆಗೆ ಮೂರು ಸಾರೆ ಹಸ್ತದ ಗುರುತು ಮೂಡುವಂತೆ ಚಟ್ಟು ಇಡಿಸುತ್ತಾಳೆ. ಊಟಕ್ಕೆ ಮೂರು ದಿನಗಳವರೆಗೆ ಸಜ್ಜಕ, ಶ್ಯಾವಿಗೆ, ಅನ್ನ-ಬೆಲ್ಲ ಮಾತ್ರ ಕೊಡುವರು. ಐದನೆಯ ದಿನದಿಂದ ಕೊಬ್ಬರಿ-ಖಾರ ಕೊಡುತ್ತಾರೆ. ಈ ಸಂದರ್ಭದಲ್ಲಿ ಹೆಣ್ಣು ಮಗುವಿಗೆ ಪೌಷ್ಟಿಕವಾದ ಆಹಾರವನ್ನೇ ಉಣಬಡಿಸುವರು. ಏಕೆಂದರೆ ಋತುಸ್ರಾವದಿಂದ ನಿಶ್ಯಕ್ತಿಯಾಗಿ ಮಗುವಿನ ಬೆಳವಣಿಗೆಗೆ ಅಡೆತಡೆಗಳು ಆಗಬಾರದು ಎಂಬುದು ಇದರ ಉದ್ದೇಶ. ಬಂಧುಗಳು ಮತ್ತು ಬೇಕಾದವರು ಪ್ರತಿದಿನ ಬಗೆಬಗೆಯ ಊಟ ತಂದು ಕೊಡುತ್ತಾರೆ. ಆದರೆ, ಗಂಗೆಗೆ

ಹೋಗಿಬರುವತನಕ ಮಾಂಸದ ಊಟ ಮಾತ್ರ ಕೊಡುವುದಿಲ್ಲ. ಐದು ದಿನದವರೆಗೆ ಪ್ರತ್ಯೇಕ ಕೋಣೆಯಲ್ಲಿ ಅಥವಾ ಜಾಗದಲ್ಲಿ ಕೂಡಿಸಿರುವರು. ಐದನೆಯ ದಿನ ಮನೆ ಸಾರಿಸಿ (ಮಡಿ) ಗೋಮೂತ್ರ ಚಿಮುಕಿಸಿ ಹೊಲಿ ಕಳೆಯುವರು. ಪದ್ಧತಿ ಇದ್ದವರು ಒಂಬತ್ತು ಇಲ್ಲವೇ ಹನ್ನೊಂದು ದಿನಗಳವರೆಗೆ ಮೈನೆರೆದವಳನ್ನು ಅಲಂಕಾರ ಮಾಡಿ ಕೂಡಿಸಿ, ಓಣಿಯ ಹೆಂಗಸರನ್ನು ಕರೆದು ಆರತಿ ಮಾಡಿಸುವರು. ಹೆಣ್ಣು ಮಗು ಮೈ ನೆರೆಯುವುದು ಒಂದು ರೀತಿಯಲ್ಲಿ ಸಂತೋಷ ಮತ್ತು ದುಃಖ ಸಂಗತಿ. ಈ ಸಂದರ್ಭದಲ್ಲಿ ಮನಸ್ಸಿನ ಒಳ ಇಂಗಿತವನ್ನು ಬಿಂಬಿಸುವ ಸಂಪ್ರದಾಯದ ಹಾಡುಗಳು ಹೀಗೆ ಹೊರ ಹೊಮ್ಮುತ್ತವೆ :

- ಮೈನೆರೆತೆ ಮೈನೆರೆತೆ ಏನುಂಡು ಮೈನೆರೆತೆ
  ಹಾಲುಬಾನುಂಡು ಮೈನೆರೆತೆ ಸೋಬಾನವೇ . . . .
  ಹಾಲುಬಾನ ಉಂಡು ಮೈನೆರೆತೆ ಎನ್ನ ಮಗಳೇ
  ಇಂದು ನಮ್ಮನೆಗೆ ಎರವಾದೆ ಸೋಬಾನವೇ . . . .

ಹೀಗೆ ಮಗಳು ಮೈನೆರೆತು ತವರು ಮನೆಗೆ ಎರವಾದಳೆಂಬ ತಾಯ್ತನದ ನೋವು ಈ ಹಾಡಿನ ಉದ್ದಕ್ಕೂ ಕೇಳಬರುತ್ತದೆ. ಇಲ್ಲಿ ಈ ಮೈನೆರೆತ ಮಗುವಿಗೆ ಬಾಲ್ಯ ವಿವಾಹ ವಾಗಿದೆ. ಈಗ ಅವಳು ಮೈ ನೆರೆತುದರಿಂದ ಗಂಡನ ಮನೆಗೆ ಕಳುಹಿಸಿ ಕೊಡಬೇಕಾಯಿತು ಎನ್ನುವ ಸಂಗತಿ ಗೊತ್ತಾಗುತ್ತದೆ. ಮತ್ತು ಹೆಣ್ಣುಮಗು ಮೈನೆರೆತಳೆಂದರೆ ಅವಳು ಮದುವೆ ಅರ್ಹತೆಯನ್ನು ಪಡೆದಳು ಎನ್ನುವ ಒಪ್ಪಿಗೆಯ ಜೊತೆಗೆ ಕೌಟುಂಬಿಕ ಜವಾಬ್ದಾರಿ ಮತ್ತು ಸಂಬಂಧದ ಅಗಲಿಕೆಯ ಅನಿವಾರ್ಯತೆ ಇಲ್ಲಿ ಇಂತಹ ಜನಪದ ಹಾಡುಗಳ ಹುಟ್ಟಿಗೆ ಕಾರಣವಾಗಿದೆ.

★ ಗಿತ್ತೇನೆ ನನ್ನ ಮಗಳೇ ಮತ್ತೆಲ್ಲಿ ಕುಳಿತಾಳೆ
ಸುತ್ತಾಲೋಡ್ಯಾವೆ ಮಳೆ ಮೋಡ ಸೋಬಾನವೇ. . .
ಸುತ್ತಾಲು ಓಡ್ಯಾವೆ ಮಳೆಮೋಡ ಅವರಪ್ಪ
ಮುತ್ತಿನ ಡೇರಿ ಹೊಡಿಸ್ಯಾನೆ ಸೋಬಾನವೇ. . .

★ ಏರಿಯಾ ಯೇ ಮ್ಯಾಲೆ ಬೋರಂಬದದಿಯಾನೆ
ಆರು ಸಾವಿರದ ಎಲೆ ದೋಟ ಸೋಬಾನವೇ. . . .
ಅರನೇ ಸಾವಿರದ ಎಲೆದೋಟಾದಾಗ
ಅವರ ಮಾವ ಕೇಳ್ಯಾನ ಹೊಸ ಸುದ್ದಿ ಸೋಬಾನವೇ. . .
ಹೊಸ ಸುದ್ದಿ ಕೇಳ್ಯಾನೆ ಹುಸಿ ನಗೆ ನಕ್ಕಾನೆ
ಎಸಳಾಮಲ್ಲಿಗೆ ಕೋಸ್ಯಾನೆ ಸೋಬಾನವೇ. . .

ಎಸಳೇನ ಮಲ್ಲಿಗೆ ಕೋಸಿ ದಂಡಿಯಾ ಕಟ್ಸೀ

ಸೊಸೆ ಇದ್ದ ಮನಿಗೆ ಕಳುಸ್ಯಾನೇ ಸೋಬಾನವೇ.. .

(ಹೆಚ್ಚಿನದನ್ನು ಅನುಬಂಧದಲ್ಲಿ ನೋಡಿರಿ)

ಇಲ್ಲಿ ಹೆಣ್ಣು ಋತುಮತಿಯಾಗಿರುವುದು ಅವಳ ಮಾವನಿಗೆ ಸಂತೋಷವಾಗಿದೆ. ಮತ್ತು ಅವನು ಆ ಸುದ್ದಿಯನ್ನು ಕೇಳುತ್ತಿದ್ದಂತೆ ಹೂವಿನದಂಡಿಯನ್ನು ಕಳುಹಿಸುವ ಸಂಭ್ರಮ ವಿಶೇಷವಾದದ್ದು. ಇದು ಈತನ ಒಂದು ಬಗೆಯ ಸಂತಸ. ಇದೇರೀತಿಯಾಗಿ ಋತುಮತಿಯಾದ ಸಂದರ್ಭದಲ್ಲಿ ಸಂತೋಷವಾಗುವ ಸಂದರ್ಭಗಳನ್ನು ಒಳಗೊಂಡಂತಹ ಸಂಪ್ರದಾಯದ ಗೀತೆಗಳು ಸಹ ಕಂಡು ಬರುತ್ತವೆ.

2.4.1 ವಸುಗೆ ತರುವ ಮತ್ತು ಹಸಿರು ಗಿಡ ಮುಟ್ಟಿಸುವ ಶಾಸ್ತ್ರ:

ಋತುಮತಿಯಾಗಿ ಒಂಬತ್ತು ಅಥವಾ ಹನ್ನೊಂದನೇ ದಿನ ಸೋದರಮಾವನ ಕಡೆಯವರು ಅಥವಾ ತಾಯಿಯ ತವರಿನವರು ವಸುಗೆ ತರುತ್ತಾರೆ. ವಸುಗೆ ಎಂದರೆ, ಋತುಮತಿ ಆದವಳಿಗೆ ತಂದು ಕೊಡುವ ಉಡುಗೊರೆ, ಮಂಗಳ ಸೂಚಕವಸ್ತುಗಳು ಮತ್ತು ತಿಂಡಿತಿನಿಸುಗಳು. ಮೇದರಲ್ಲಿ ಈ ವಸುಗೆ ತರುವ ಪದ್ಧತಿಯನ್ನು ಬಹಳ ಸಡಗರದಿಂದ ಮಾಡುವರು. ಆ ದಿನ ಸಾಯಂಕಾಲ ಋತುಮತಿ ಆದವಳಿಗೆ ಸ್ನಾನ ಮಾಡಿಸಿ ಅಲಂಕಾರ ಮಾಡಿ ಕೂಡಿಸುತ್ತಾರೆ. ಸೋದರ ಮಾವನ ಕಡೆಯವರು ದೇವಸ್ಥಾನದಿಂದ ಮೇಳದ ಸಮೇತ ವಸುಗೆ ತೆಗೆದುಕೊಂಡು ಬರುವರು. ಸೋದರ ಮಾವ ಹೆಗಲ ಮೇಲೆ ಕಂಬಳಿ ಹಾಕಿಕೊಂಡು ದಿಬ್ಬಣದ ಮುಂದೆ ಬರುವನು. ಆತನ ಜೊತೆಗೆ ಮಹಿಳೆಯರೆಲ್ಲ ಹಣ್ಣು, ತರಕಾರಿ, ಬಗೆಬಗೆಯ ಸಿಹಿ ತಿಂಡಿ-ತಿನಿಸು, ಉಡಿಯಕ್ಕಿ ಸಾಮಗ್ರಿ, ಬಟ್ಟೆ ಮತ್ತು ಉಡುಗೊರೆಗಳನ್ನು ತರುವರು. ತಂದ ಸಾಮಗ್ರಿಗಳನ್ನು ಓರಣವಾಗಿಡುವರು.(ಒಂದನೆ ಛಾಯಾಚಿತ್ರವನ್ನು ನೋಡಿರಿ). ಹೂವಿನದಂಡೆ ಹಾಕಿ, ಅರಿಶಿಣ-ಕುಂಕುಮ ಹಚ್ಚಿ, ಉಡಿತುಂಬಿ, ತಂದ ಉಡುಗೊರೆ ಕೊಟ್ಟು ಕಳಸ ಬೆಳಗುತ್ತಾರೆ. ನಂತರ ಬಂಧುಬಳಗದವರೆಲ್ಲ ವಸುಗೆ ಕೊಡುವರು. ಬಂದವರಿಗೆ ವೀಳ್ಯ ಮರ್ಯಾದೆ ಇಲ್ಲವೇ ಊಟೋಪಚಾರ ಮಾಡುವರು. ಸೋದರತ್ತೆಯವರು ಹುಡುಗಿಗೆ ಬಗೆ ಬಗೆಯ ತರಕಾರಿಗಳನ್ನು ತೋರಿಸಿ ತಮಾಷೆ ಮಾಡುತ್ತಾರೆ. ಅದೇ ದಿವಸ ಸೋದರ ಮಾವ ಬಸಿರಿಗಿಡದ ಹಸಿರು ಟೊಂಗೆಯನ್ನು ತಂದಿರಿಸಿರುತ್ತಾನೆ. ರಾತ್ರಿ ವಸುಗೆ ಕಾರ್ಯ ಮುಗಿದ ನಂತರ ಸೋದರ ಮಾವ ಇವಳಿಗೆ ಕಂಬಳಿಯ ಮುಸುಕು ಹಾಕಿಸಿಕೊಂಡು ಹಸಿರುಗಿಡದ ಹತ್ತಿರಕ್ಕೆ ಕರೆದುಕೊಂಡು ಬರುತ್ತಾನೆ. ಗಿಡಕ್ಕೆ ಪೂಜೆಮಾಡಿ ನಮಸ್ಕರಿಸಿ, ಅವಳ ಕೈಹಿಡಿದು ಮೂರುಸಾರಿ ಗಿಡಕ್ಕೆ ಮುಟ್ಟಿಸುತ್ತಾನೆ. (ಎರಡನೆಯ ಛಾಯಾಚಿತ್ರವನ್ನು ನೋಡಿರಿ)

ಹಸಿರು ಪರಿಪಕ್ವತೆಯ ಸಂಕೇತ. ಪ್ರಕೃತಿದತ್ತವಾಗಿ ಮೈನೆರೆತವಳು ಪ್ರಾಕೃತಿಕ ಪಕ್ವತೆಯ ಜೊತೆಗೆ ಒಂದಾಗುವಿಕೆಯ ಸಂಕೇತವೇ ಈ ಪದ್ಧತಿಗೆ ಇನ್ನೊಂದು ಕಾರಣವಾಗಿದೆ. ನಂತರ ಅವಳ ಕೈ ಹಿಡಿದು ಮನೆಯ ಬಾಗಿಲವರೆಗೆ

ಕರೆದುಕೊಂಡು ಹೋಗಿ ಬಿಡುತ್ತಾನೆ. ಮಾರನೆಯ ದಿನ, ಇವಳನ್ನು ಗಂಗೆಗೆ ಕರೆದುಕೊಂಡು ಹೋಗಿ ಬರುತ್ತಾರೆ. ಬಂದ ನೆಂಟರಿಗೆ ಆ ದಿನ ಮಾಂಸದ ಊಟ ಮಾಡಿಸುವರು. ಕೆಲವು ಪ್ರದೇಶದಲ್ಲಿ ಋತುಮತಿಯಾದ ಹುಡುಗಿಯ ಸೋದರಮಾವನಿಗೆ ಅಥವಾ ಭಾವೀ ಗಂಡನಿಗೆ ಋತುಮತಿಯಾದ ಸುದ್ದಿ ತಿಳಿದ ಕೂಡಲೇ ಬಣ್ಣ ಹಾಕುವ ಪದ್ಧತಿಯು ರೂಢಿಯಲ್ಲಿದೆ. ''ಕನ್ನಡದ ಮೇದರಲ್ಲಿ ಮೈನೆರೆತಾಗ ಸೋದರ ಮಾವ ಬಿದಿರಿನ ಗುಡಿಸಲು ಮಾಡುತ್ತಾನೆ. ಓರ್ವಳೇ ಎದ್ದು ಮಲಗಿ ಮಾಡುವಷ್ಟು ಸಣ್ಣ ಗುಡಿಸಲು ಕಟ್ಟುತ್ತಾನೆ. 11ನೇ ದಿವಸದವರೆಗೆ ಅವಳಿಗೆ ಊಟ ಉಪಚಾರ ಎಲ್ಲವೂ ಗುಡಿಸಲಿನಲ್ಲಿಯೇ ನಡೆಯ ಬೇಕಾಗುತ್ತದೆ. ತೆಲುಗು ಮೇದರಲ್ಲಿ ನೆರೆದಹುಡುಗಿ 7ದಿನಗಳ ಕಾಲ ಹಸಿಸೊಪ್ಪಿನಿಂದ ಮಾಡಿದ ಗುಡ್ಲಲ್ಲಿ ಇರಬೇಕಾಗುತ್ತದೆ. 7ನೇ ದಿವಸ ಅವಳಿಗೆ ಶುದ್ಧ ಸ್ನಾನ ಮಾಡಿಸುತ್ತಾರೆ.''[4] ಆದರೆ ಈ ಪದ್ಧತಿಯು ನನ್ನ ಅಧ್ಯಯನ ಕ್ಷೇತ್ರದ ವ್ಯಾಪ್ತಿಯಲ್ಲಿ ಕಂಡುಬಂದಿಲ್ಲ.

2.5 ಜಾತಿ ಸಂಸ್ಕಾರ :

ಭೂಮಿಯ ಮೇಲೆ ವಾಸಿಸುವ ಯಾವುದೇ ಪ್ರದೇಶದ ಜನರು ತಾವು ಬದುಕಿ ಬೆಳೆದ ಮತ್ತು ಬೆಳೆಯುತ್ತಿರುವ ಪ್ರದೇಶದ ಸಮುದಾಯ ಒಂದ ಸಂಸ್ಕಾರಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಇಂತಹ ಸಂಸ್ಕಾರಗಳು ಆಯಾ ಸಮುದಾಯದ ಕಟ್ಟಾ ಸಂಪ್ರದಾಯಗಳು ಮತ್ತು ಆಚರಣೆಗಳೆಂದರೆ ತಪ್ಪಾಗುವುದಿಲ್ಲ. ಇಂತಹ ಸಂಸ್ಕಾರಗಳು ಶಿಷ್ಟ ಸಮುದಾಯಗಳಲ್ಲಿ ಬಹಳ ಅಬ್ಬರವಾಗಿ ಕಂಡರೆ, ಬುಡಕಟ್ಟು ಸಮುದಾಯಗಳಲ್ಲಿ ಹಾಗೆ ಕಾಣುವುದಿಲ್ಲ. ಈ ಸಂಸ್ಕಾರಗಳು ಅವರ ಜಾತಿ, ಧರ್ಮ ಆಧಾರಿತ ಪೂಜಿಸುವ ದೇವರು ಇಲ್ಲವೇ ಮನೆಯದೇವರು ಅಥವಾ ಕುಲದೇವರ ಗುರುತುಗಳಾಗಿರುತ್ತವೆ. ಅವು ಬ್ರಾಹ್ಮಣನು ಧರಿಸಿದ ಜನಿವಾರ ಅಥವಾ ಶೈವರು ಧರಿಸಿದ ಇಷ್ಟಲಿಂಗ ಇರಬಹುದು. ಇಂತಹ ಸಂಸ್ಕಾರಗಳು ಅನೇಕ ಬುಡಕಟ್ಟು ಸಮುದಾಯಗಳಲ್ಲಿಯೂ ಇವೆ. ಅದೇ ರೀತಿ ನನ್ನ ಅಧ್ಯಯನದಲ್ಲಿ ಕಂಡುಕೊಂಡಂತೆ ಮೇದ ಬುಡಕಟ್ಟು ಸಮುದಾಯಗಳಲ್ಲಿ ಜಾತಿ ಸಂಸ್ಕಾರಗಳು ರೂಢಿಯಲ್ಲಿರುವುದನ್ನು ಇಲ್ಲಿ ಉಲ್ಲೇಖಿಸುತ್ತೇನೆ. ಕೆಲವು ಪ್ರದೇಶದ ಮೇದರು ಗಂಡು ಮಕ್ಕಳಿಗೆ ಮದುವೆಗೆ ಮೊದಲು ಮುದ್ರೆ ಹಾಕಿಸುವ ಪದ್ಧತಿಯು ಇದೆ. ಈ ಸಮುದಾಯದವರು ಹೆಚ್ಚಾಗಿ ಆಂಜನೇಯಸ್ವಾಮಿ ಇಲ್ಲವೇ ವೆಂಕಟೇಶ್ವರ ದೇವರ ಹೆಸರಿನಲ್ಲಿ ಮುದ್ರೆ ಹಾಕಿಸುವರು. ಕೆಲವರಂತೂ ಮುದ್ರೆ ಹಾಕಿಸದೇ ಅವರಿಗೆ ಮದುವೆಯನ್ನು ಮಾಡುವುದಿಲ್ಲ. ಅಂದರೆ ಇಲ್ಲಿ ಮುದ್ರೆ ಮದುವೆಗೆ ಅರ್ಹತಾ ಸಂಸ್ಕಾರವೆಂದು ಇವರ ನಂಬಿಕೆ.

ಮುದ್ರೆ ಹಾಕಿಸುವ ದಿನ ಮುದ್ರೆ ಹೊರುವವರನ್ನು ಸ್ನಾನ ಮಾಡಿಸಿ ಹೊಸ ಬಟ್ಟೆ ಉಡಿಸಿಕೊಂಡು ಮೇಳದ ಜೊತೆಗೆ ಸಕಲ ಸಿದ್ಧತೆಯೊಂದಿಗೆ ದೇವಸ್ಥಾನಕ್ಕೆ ಬರುವರು. ಅವರಿಗೆ ಈ ಸಂದರ್ಭದಲ್ಲಿ ಮೇಲಂಗಿ ತೊಡಿಸಿರುವುದಿಲ್ಲ. ದೇವಸ್ಥಾನದಲ್ಲಿ ಮುದ್ರೆ ಹಾಕಿಸಿಕೊಳ್ಳುವವರನ್ನು ಕರಿಕಂಬಳಿ ಗದ್ದುಗೆಯ ಮೇಲೆ ಸಾಲಾಗಿ ಕೂಡಿಸುತ್ತಾರೆ. ಪೂಜಾರಿ ದೇವರಿಗೆ ಪೂಜೆ ಸಲ್ಲಿಸಿ, ಮುದ್ರೆಗೆಂದು ಮೀಸಲಾದ ಮುದ್ರೆಯ ಲೋಹದ ಸಿಕ್ಕಾಗಳನ್ನು ಬೆಂಕಿಯಲ್ಲಿ ಕಾಯಿಸಲು

ಹಾಕುತ್ತಾನೆ. ಅವು ಒಂದು ಹದಕ್ಕೆ ಕಾದ ನಂತರ ಮೊದಲು ಕಾದಮುದ್ರೆಯ ಸಿಕ್ಕಾವನ್ನು ವೀಳ್ಯದ ಎಲೆಯ ಮೇಲೆ ಒತ್ತಿ ನಂತರ ಮುದ್ರೆ ಹೊರುವವರ ಎರಡೂ ಮುಂಬುಜಕ್ಕೆ ಮುದ್ರೆ ಹಾಕುವನು. ಆ ಗಾಯದ ಮೇಲೆ ಬಸ್ಮವನ್ನು ನೀರಿನಲ್ಲಿಕಲಸಿ ಹಚ್ಚುತ್ತಾರೆ. ಚಿಕ್ಕ ಮಕ್ಕಳಿದ್ದರೆ ಸಿಕ್ಕಾದ ಕಾಯುವಿಕೆಯ ಪ್ರಮಾಣ ಕಡಿಮೆ ಇರುತ್ತದೆ. ಇಲ್ಲವಾದರೆ ಭುಜದ ಮೇಲೆ ವೀಳ್ಯದ ಎಲೆ ಇರಿಸಿ ಅದರ ಮೇಲೆ ಮುದ್ರೆ ಹಾಕುವನು. ಇದನ್ನು ಎಲೆಮುದ್ರೆ ಎಂದು ಕರೆಯುತ್ತಾರೆ. ನಂತರ ಪೂಜಾರಿ ಅವರ ಕೈಗೆ ಗೋಪಾಳ ಮತ್ತು ಬೆತ್ತ ಕೊಟ್ಟು ಮೂರು ಬುದ್ದಿ ಮಾತು ಹೇಳುವನು. ಒಂದು: ಗುರು ಹಿರಿಯರಿಗೆ ಅಂಜಿ ನಡೆಯ ಬೇಕು. ಎರಡು: ತಂದೆ ತಾಯಿಗಳನ್ನು ನೋಡಿ ಕೊಳ್ಳಬೇಕು ಮೂರು : ಹಸಿದು ಬಂದವರಿಗೆ ಊಟ ಹಾಕಬೇಕು, ಬಿಸಿಲಲ್ಲಿದ್ದವರನ್ನು ನೆರಳಿಗೆ ಕರೆಯಬೇಕು. ಬಂದವರು ಮುದ್ರೆಸಂಸ್ಕಾರಕ್ಕೆ ಒಳಗಾದವರಿಗೆ ವಿಭೂತಿ ಕುಂಕುಮ ಹಚ್ಚಿ ಕಳಸ ಬೆಳಗಿ ಮುಯ್ಯಿ ಮಾಡುತ್ತಾರೆ. ಅಂದಿನಿಂದ ಮುದ್ರೆ ಹೊತ್ತವರು ದೇವರ ವಾರದ ದಿವಸ ವ್ರತವನ್ನು ಪಾಲಿಸಬೇಕು.

ಮೇದರಲ್ಲಿ ಇನ್ನೊಂದು ರೀತಿಯ ಜಾತಿಯ ಸಂಸ್ಕಾರ ಕಂಡು ಬರುತ್ತದೆ, ಅದೇಂದರೆ ಕೆಲವು ಪ್ರದೇಶದ ಮೇದರು ಲಿಂಗ ಧರಿಸಿರುವರು ಮತ್ತು ಈಗಲೂ ಧರಿಸುತ್ತಿರುವರು. ಇದು ಮೇದರ ಮಹಾ ಪುರಷನಾದ ಶರಣ ಕೇತಯ್ಯನ ಪ್ರಭಾವ ವೆಂತಲೂ ಮತ್ತು ಇತರೆ ಸಮುದಾಯಗಳ ಪ್ರಭಾವವೆಂತಲೂ ತಿಳಿಯಬಹುದು.

ನಾನು ನನ್ನ ಕ್ಷೇತ್ರ ಕಾರ್ಯದಲ್ಲಿ ಗಮನಿಸಿದಂತೆ ಇವರು ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಖುದ್ದಾಗಿ ಎಲ್ಲರಿಗೂ ವಿಭೂತಿ ಕುಂಕುಮವನ್ನು ಹಚ್ಚುವುದು ಕಂಡುಬರುತ್ತದೆ. ಇದು ಇವರ ಜಾತಿಸಂಸ್ಕಾರದ ಒಂದು ಆಚಾರ ವೆಂದು ಇಲ್ಲಿ ಭಾವಿಸಿದೆ. ಸ್ತ್ರಿಯರಿಗೆ ಹಚ್ಚೆ ಹಾಕಿಸುವ ಪದ್ದತಿ ಇವರಲ್ಲಿದೆ. ಕೆಲವರು ಹಣೆಗೆ ಮಾತ್ರ ಹಚ್ಚೆ ಹಾಕಿಸಿ ಕೊಂಡರೆ, ಮತ್ತೆ ಕೆಲವರು ಕೈಯ ಮೇಲೆ ಹೂವು ಬಳ್ಳಿ, ಆಂಜನೇಯ ಮತ್ತು ತಮಗೆ ಪ್ರಿಯವಾದವರ, ಇಲ್ಲವೇ ತಮ್ಮ ಹೆಸರನ್ನು ಸಹ ಹಾಕಿಸಿಕೊಳ್ಳುತ್ತಾರೆ.

2.6. ಮದುವೆ :

ಮದುವೆಯ ಮೂಲ ಉದ್ದೇಶ ಸಂತಾನೋತ್ಪತ್ತಿ, ಭಾರತದ ಯಾವುದೇ ಕುಟುಂಬವ್ಯವಸ್ಥೆಯಲ್ಲಿ ಮದುವೆಗೆ ಪ್ರಮುಖವಾದ ಸ್ಥಾನವಿರುವುದು ಕಂಡುಬರುತ್ತದೆ. ಮದುವೆಯ ಮೂಲಕ ಗಂಡು ಹೆಣ್ಣುಗಳ ನಡುವೆ ಹೊಸದೊಂದು ಭಾವನಾತ್ಮಕ ಸಂಬಂಧ ಏರ್ಪಡುವುದು.ಈ ಸಂಬಂಧ ಈರ್ವರ ಲೈಂಗಿಕ ಅಗತ್ಯಗಳನ್ನು ಪೂರೈಸುವಲ್ಲಿ ಸಹಕಾರಿಯಾಗಿದೆ. ಇದರ ಜೊತೆಗೆ ಎರಡು ಕುಟುಂಬಗಳ ಸಂಬಂಧ ವಿಕಸನಗೊಂಡು ಸಮಾಜದಲ್ಲಿ ಹೆಚ್ಚಿನ ಗೌರವ ಲಭಿಸುವುದು ಮತ್ತು ಮದುವೆಯ ನಂತರ ಗಂಡು ಹೆಣ್ಣಿನಲ್ಲಿ ಹಿಂದೆಂದೂ ಅನುಭವಿಸಿರದ ದೈಹಿಕ ಮತ್ತು ಮಾನಸಿಕ ಸಂತೃಪ್ತಿಯ ಹೊಸದೊಂದು ಅನುಭವವಾಗುತ್ತದೆ. ಇದರಿಂದ ನಮ್ಮದೇಯಾದ ಪ್ರತ್ಯೇಕ ಕುಟುಂಬದ ಕಲ್ಪನೆ ಚಿಗುರೊಡೆಯುತ್ತದೆ. ಸುಖ-ದುಃಖ ಹಂಚಿಕೊಳ್ಳುವಿಕೆ ಇಲ್ಲಿ ಮಹತ್ತರ ಪಾತ್ರವಹಿಸಿ ಮಾನವಿಕ ಸಂಬಂಧದ ಅರಿವು

ಹೆಪ್ಪಾಗಿ ನಿಲ್ಲುತ್ತದೆ. ಅಂತೆಯೇ ಪ್ರೇಮಿಗಳು ಮದುವೆಯ ಮುನ್ನ ಮತ್ತೆ ಕೆಲವೊಮ್ಮೆ ಮದುವೆಯ ನಂತರ ಏಕನಿರ್ಧಾರ ತೆಗೆದುಕೊಂಡು ಒಟ್ಟಿಗೆ ಜಯ ಅಪಜಯಗಳನ್ನು ಸ್ವೀಕರಿಸಿ, ಬದುಕುವ ಮತ್ತು ಸಾಯುವ ನಿರ್ಧಾರವನ್ನು ತೆಗೆದುಕೊಂಡ ಘಟನೆಗಳು ಹಲವು. ಇದಕ್ಕೆ ಮದುವೆ ಬಗ್ಗೆ ಭಾರತೀಯರಲ್ಲಿರುವ ಸಂಸ್ಕಾರಗಳು ಕಾರಣವೆನ್ನಬಹುದು. ವಿಶೇಷವಾಗಿ ಹಿಂದುಗಳಿಗೆ ಮದುವೆಯ ಆಚಾರ ವಿಚಾರ ಸಂಪ್ರದಾಯಗಳು ಮತ್ತು ಗೃಹಸ್ಥಾಶ್ರಮದ ಬಗ್ಗೆ ಇರುವ ಅಪಾರವಾದ ನಂಬಿಕೆ ಮತ್ತು ಸಾಕ್ಷಾತ್ಕಾರಗಳು ಕಾರಣವಾಗಿವೆ.

ಆದಿಮಾನವ ಪಶು ಪಕ್ಷಿಗಳಂತೆ ಮುಕ್ತ ಲೈಂಗಿಕ ಕ್ರಿಯೆಯಲ್ಲಿ ತೊಡಗಿ ತನಗರಿವಿಲ್ಲದಂತೆ ಸೃಷ್ಟಿಯ ಕ್ರಿಯೆಯಲ್ಲಿ ತೊಡಗಿದ್ದನು. ಇಂತಹ ಜೀವನಕ್ಕೆ ವಿದಾಯ ಹೇಳಿ ಹಂತ ಹಂತವಾಗಿ ಬೆಳೆಯುತ್ತಾ ಬಂದು ನಾಗರಿಕತೆಯ ಆವಿಷ್ಕಾರದ ಜೊತೆಗೆ ಕುಟುಂಬ, ಸಮುದಾಯ, ಸಮಾಜ, ಸಂಸ್ಕೃತಿಗಳ ಅರಿವು ಮೂಡಿಸಿಕೊಂಡು ಬೆಳೆದುನಿಂತ. ಇದರಿಂದ ಮನುಷ್ಯನ ಇಚ್ಛೆ, ಬಯಕೆ ಪೂರೈಕೆಯ ಬಗ್ಗೆ ಜೀವನದಲ್ಲಿ ಗಂಡು ಹೆಣ್ಣುಗಳ ಸಂಬಂಧದ ಅರಿವು ಹೊಸ ರೂಪವೊಂದನ್ನು ಕೊಡುತ್ತದೆ. ಗಂಡು ಹೆಣ್ಣುಗಳ ಕೂಡುವಿಕೆಗೆ ಅರ್ಥವೊಂದನ್ನು ಕಂಡುಕೊಂಡ ಮಾನವ ಸಮಾಜ, ಸಮುದಾಯ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮದುವೆಯ ಮಹತ್ವವನ್ನು ಅರಿತನು. ಮದುವೆಯ ಸಂಪ್ರದಾಯಗಳು ಈತನ ಜೊತೆಯಲ್ಲೇ ಪ್ರಾಚೀನ ಕಾಲದಿಂದ ಇಲ್ಲಿಯತನಕ ಬೆಳೆಯುತ್ತಾ ಬಂದಿವೆ. ಈ ಸಂಪ್ರದಾಯಗಳಲ್ಲಿ ಕೆಲವೊಂದು ಜೀವಂತವಾಗಿ ಯಥಾಸ್ಥಿತಿಯಲ್ಲಿದ್ದರೆ, ಇನ್ನೂ ಕೆಲವು ಪರಿವರ್ತನೆಗೊಂಡಿರುವುದನ್ನು ಕಾಣುತ್ತೇವೆ. ಇದಕ್ಕೆಲ್ಲಾ ಬುಡಕಟ್ಟಿಗರಿಗೆ ತಮ್ಮ ಸಂಪ್ರದಾಯಗಳ ಮೇಲಿರುವ ಗಟ್ಟಿತನದ ನಂಬಿಕೆ ಕಾರಣವಾಗಿದೆ. ಪ್ರತಿಯೊಂದು ಬುಡಕಟ್ಟಿನಲ್ಲಿ ತನ್ನದೇಯಾದ ಮದುವೆಯ ಸಂಪ್ರದಾಯ ಮತ್ತು ಆಚರಣೆಗಳು ಕಂಡುಬರುತ್ತವೆ. ಇಂತಹ ಸಂಪ್ರದಾಯ ಮತ್ತು ಆಚರಣೆಗಳಲ್ಲಿ ಪ್ರಾದೇಶಿಕ ಪ್ರಭಾವದಿಂದಾಗಿ ಸ್ವಲ್ಪ ಬದಲಾವಣೆ ಕಂಡು ಬಂದರೂ, ಮೂಲ ಸಂಸ್ಕೃತಿಯ ಧಾತು ಎದ್ದು ಕಾಣುತ್ತದೆ. ಇದಕ್ಕೆ ಮೇದ ಬುಡಕಟ್ಟು ಸಮುದಾಯವು ಕೂಡ ಹೊರತಾಗಿಲ್ಲ.

2.6.1 ಹೆಣ್ಣು ಆಯ್ಕೆ ಮಾಡುವುದು :

ಅನೇಕ ಬುಡಕಟ್ಟು ಸಮುದಾಯಗಳಲ್ಲಿ ತಮ್ಮದೇ ಆದ ಪ್ರಾಚೀನ ರೀತಿಯಲ್ಲಿ ಹೆಣ್ಣನ್ನು ಆಯ್ಕೆ ಮಾಡುವ ಪದ್ಧತಿ ಕಂಡು ಬರುತ್ತದೆ. ಕಾಲ ಬದಲಾದಂತೆ ಮದುವೆಗೆ ಹೆಣ್ಣಿನ ಆಯ್ಕೆಯ ಪದ್ಧತಿಯಲ್ಲಿಯೂ ಬದಲಾವಣೆ ಕಂಡು ಬಂತು. ವಿಶೇಷವಾಗಿ ಬಳ್ಳಾರಿಗೆ ಹೊಂದಿಕೊಂಡಂತೆ, ಗುಲ್ಬರ್ಗ, ರಾಯಚೂರು, ಚಿತ್ರದುರ್ಗ, ದಾವಣಗೆರೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿಯ ಹೆಣ್ಣು ಆಯ್ಕೆಯ ಪದ್ಧತಿ ಹೀಗಿದೆ:

ಮನೆಯ ಹಿರಿಯರು ತಮ್ಮ ಸಮುದಾಯದ ಯಜಮಾನರ ಜೊತೆಗೆ ಹೆಣ್ಣಿರುವ ಮನೆಗೆ ಕನ್ಯಾನೋಡಲು ಹೋಗುವರು. ಕನ್ಯೆ ನೋಡಲು ಹೋದವರು, ಶಾಸ್ತ್ರಕ್ಕೆ, ಹಣ್ಣು-ಕಾಯಿ ಉಡಿ ತುಂಬುತ್ತಾರೆ. ಇತರೆ ಸಮುದಾಯಗಳಂತೆ ಇವರು ಹೆಣ್ಣನ್ನು ಕೈ, ಕಾಲು, ಹಸ್ತ ರೇಖೆ, ಹಣೆಯ ಸುಳಿ ಇವುಗಳನ್ನು ಪರೀಕ್ಷಿಸುವುದಿಲ್ಲ;

ಜೊತೆಗೆ ಬಂದ ಹೆಣ್ಣು ಮಕ್ಕಳು, ಒಳಗೆ ಹೋಗಿ ಕನ್ಯೆಯು ಅಂಗವಿಕಲಳಲ್ಲ ಎನ್ನುವುದನ್ನು ಖಾತ್ರಿ ಮಾಡಿಕೊಳ್ಳುತ್ತಾರೆ. ಕನ್ಯೆ ತಮಗೆ ಮನಸ್ಸಿಗೆ ಬಂದರೆ, ಗಂಡಿನ ಮನೆತನ ನೋಡಲು ಬರುವುದಕ್ಕೆ ಹೇಳುವರು. ಒಂದು ನಿರ್ದಿಷ್ಟ ದಿನದಂದು ಹೆಣ್ಣಿನ ಕಡೆಯವರು ಗಂಡಿನ ಮನೆತನ ನೋಡಲು ಬರುತ್ತಾರೆ. ಇಬ್ಬರ ಒಪ್ಪಿಗೆ ಆದರೆ ಮಾತುಕತೆಗೆ ಮುಂದಾಗುತ್ತಾರೆ. ಇಲ್ಲಿ ಮಧ್ಯಸ್ಥಿಕೆಯನ್ನು ಸಮುದಾಯದ ಹಿರಿಯ ವ್ಯಕ್ತಿ ವಹಿಸುವನು. ಹಿರಿಯರ ಸಮ್ಮುಖದಲ್ಲಿ ಹೆಣ್ಣು ಮತ್ತು ಗಂಡಿನ ಬೀಗರ ನಡುವೆ ತೆರ ಮತ್ತು ವರದಕ್ಷಿಣೆ ಕುರಿತಂತೆ ಮಾತುಕತೆಯಾಡುವರು. ಇವರಲ್ಲಿ ಹಿಂದೆ ಹೆಣ್ಣಿಗೆ ತೆರ ಕೊಡುವುದು ಎಷ್ಟು ಪ್ರಮುಖವಾಗಿತ್ತೋ ಈಗಲೂ ಕೂಡ ವರದಕ್ಷಿಣೆ ಪದ್ಧತಿಯು ಅಷ್ಟೇ ಪ್ರಮುಖವಾಗಿದೆ. ಮಾತುಕತೆಯು ಮುರಿದು ಬಿದ್ದರೆ, ಹೆಣ್ಣಿನ ಕಡೆಯವರು ಊಟಮಾಡದೇ ಹಿಂತಿರುಗಿ ಹೋಗುವರು. ಮಾತುಕತೆ ಒಪ್ಪಿಗೆ ಆದರೆ, ಗಂಡಿನ ಮನೆಯಲ್ಲಿ ಸಿಹಿ ಊಟವಾಗುತ್ತದೆ. ಇಲ್ಲಿಗೆ ಬೀಗತನ ಕುದುರಿದಂತೆ, ನಿಶ್ಚಿತಾರ್ಥದ ದಿನವನ್ನು ಗೊತ್ತು ಪಡಿಸುವರು.

2.6.2 ಕನ್ಯೆನಿಶ್ಚಿತಾರ್ಥ :

ಮೇದರಲ್ಲಿ ಕನ್ಯೆನಿಶ್ಚಿತಾರ್ಥವು ಮದುವೆ ಪ್ರಾರಂಭದ ಒಂದು ಪ್ರಮುಖವಾದ ಆಚರಣೆ. ಕನ್ಯಾ ನಿಶ್ಚಿತಾರ್ಥವು ಇವರಲ್ಲಿ ಹೆಣ್ಣಿನ ಮನೆಯ ಮುಂದೆ ನಡೆಯುತ್ತದೆ. ಇದಕ್ಕೆ ಶಾಸ್ತ್ರಕೇಳಿಸಿ ಒಳ್ಳೆಯ ದಿವಸ, ಸಮಯವನ್ನು ಗೊತ್ತು ಪಡಿಸುವರು. ನಿಶ್ಚಿತಾರ್ಥವು ಆ ಊರಿನ ಮೇದ ಸಮುದಾಯದ ಯಜಮಾನರ ಸಮ್ಮುಖದಲ್ಲಿ ನಡೆಯುತ್ತದೆ. ಕುಲ ಬಾಂಧವರೆಲ್ಲರೂ ಹೆಣ್ಣಿನ ಮನೆಯ ಮುಂದೆ ಕುಳಿತುಕೊಳ್ಳುತ್ತಾರೆ. ಮಧ್ಯದಲ್ಲಿ ವೀಳ್ಯಶಾಸ್ತ್ರದ ಕಾರ್ಯಕ್ರಮ ಈ ಸಮುದಾಯದ ನಾಯಕ ಬೆಡಗು ಮತ್ತು ಗೌಡರ ಬೆಡಗಿನ ಹಿರಿಯರ ಸಮ್ಮುಖದಲ್ಲಿ ನಡೆಸುವರು. ಮೊದಲು ನಾಯಕ ಬೆಡಗಿನ ಹಿರಿಯ ಕರಿಯ ಕಂಬಳಿಯ ಗದ್ದುಗೆ ಹಾಕುತ್ತಾನೆ. ಅದರ ಮೇಲೆ ಗೌಡರ ಬೆಡಗಿನ ಮುಖ್ಯಸ್ಥ ಮತ್ತು ತಾನು ಎದುರು ಬದುರಾಗಿ ಕುಳಿತು ಕೊಳ್ಳುವರು. ಹೆಣ್ಣು ಮತ್ತು ಗಂಡಿನ ಕಡೆಯವರು ಕಳಸ ಉಡಿ ಸಾಮಗ್ರಿ ಮತ್ತು ಪೂಜಾ ಸಾಮಗ್ರಿಗಳ ಜೊತೆಗೆ, ಪ್ರತ್ಯೇಕವಾಗಿ ಬಂದು ಕಂಬಳಿಯ ಮೇಲೆ ಕುಳಿತು ಕೊಳ್ಳುತ್ತಾರೆ. ಗಂಡಿನ ಕಡೆಯವರು ಹೆಣ್ಣಿಗೆ ತಾವು ಹಾಕುವ ಆಭರಣಗಳು, ಸೀರೆ ಮತ್ತು ವೀಳ್ಯವನ್ನು ಜೊತೆಯಲ್ಲಿ ತಂದಿರಿಸುವರು. ಸಮುದಾಯದ ಯಜಮಾನ ಎದ್ದು ನಿಂತು ಯಾವ ಬೆಡಗಿನ ಹೆಣ್ಣನ್ನು ಯಾವ ಬೆಡಗಿನವರಿಗೆ ಕೊಡಲಾಗಿದೆ ಎಂದು ದೈವಕ್ಕೆ ಹೇಳುತ್ತಾನೆ. ಇವರ ಒಪ್ಪಿಗೆಯನ್ನು ಗೌಡ ಮತ್ತು ನಾಯಕ ಬೆಡಗಿನವರ ಮುಖಾಂತರ ಹೇಳಿಸುತ್ತಾನೆ. ದೈವದ ಒಪ್ಪಿಗೆ ಪಡೆದು ದೈವಕ್ಕೆ ಸಲ್ಲಬೇಕಾದ ದೈವದ ಕಾಣಿಕೆಯನ್ನು ಪಡೆದು ನಂತರ ವೀಳ್ಯ ಹೊಡೆಯಲು ಹೇಳುವನು. ಪರಸ್ಪರ ಬೀಗರು ದೈವದ ಸಮ್ಮುಖದಲ್ಲಿ ವೀಳ್ಯ ಬದಲಿಸಿಕೊಂಡು ಪದ್ಧತಿ ಇದ್ದರೆ ಗಂಡಿನ ಜೊತೆಯಲ್ಲಿ ಕನ್ಯೆಯನ್ನು ಕೂಡಿಸಿ ಆರತಿ ಮಾಡುತ್ತಾರೆ. ಈ ನಡುವೆ ಒಬ್ಬನು ಬಂದು, ಕುಲಬಾಂಧವರಿಗೆಲ್ಲ ವಿಭೂತಿ ಕುಂಕುಮ ಹಚ್ಚಿ ಕಂಕಣ ಕಟ್ಟುತ್ತಾನೆ.

ನಿಶ್ಚಿತಾರ್ಥ ಕಾರ್ಯ ಪ್ರದೇಶಾನುಸಾರ, ಜಂಗಮ ಇಲ್ಲವೇ ಬ್ರಾಹ್ಮಣನ ಪೌರೋಹಿತ್ಯದಲ್ಲಿ ನಡೆಯುತ್ತದೆ. ಸಾಧ್ಯವಾದರೆ ಅದೇ ದಿನ ಮದುವೆಯ ದಿನಾಂಕವನ್ನು ಗೊತ್ತುಪಡಿಸುವರು.

2.6.3 ಲಗ್ನ ಕಟ್ಟುವ ಶಾಸ್ತ್ರ :

ಮೇದರಲ್ಲಿ ಲಗ್ನ ಕಟ್ಟುವ ಶಾಸ್ತ್ರ ಎಂದು ಪ್ರತ್ಯೇಕವಾದ ಒಂದು ಆಚರಣೆ ಇದೆ. ಶಾಸ್ತ್ರ ಕೇಳಿಸಿ ಧಾರಾಮುಹೂರ್ತದ ಮುಂಚಿನ ಮೂರನೆಯ ಅಥವಾ ಐದನೆಯ ದಿನದಂದು ಇವರು ಲಗ್ನ ಕಟ್ಟಿಸುತ್ತಾರೆ. ಮದುವೆಯು ಯಾರ ಮನೆಯಲ್ಲಿ ನಡೆಯುವುದೋ ಆ ಮನೆಯಲ್ಲಿ ಲಗ್ನ ಕಟ್ಟಿಸುವರು. ಮೇದರಲ್ಲಿ ಹೆಚ್ಚಾಗಿ ಮದುವೆಯು ಹೆಣ್ಣಿನ ಮನೆಯ ಮುಂದೆ ನಡೆಯುತ್ತದೆ. ಗಂಡಿನ ಕಡೆಯವರು ಮೊದಲೇ ಬಂದು ಒಂದು ಪ್ರತ್ಯೇಕ ಮನೆಯಲ್ಲಿ ತಂಗಿರುತ್ತಾರೆ. ಲಗ್ನ ಕಟ್ಟಿಸುವ ದಿನ ಪಡಸಾಲೆಯಲ್ಲಿ ಪೂರ್ವ ಅಥವಾ ದಕ್ಷಿಣಕ್ಕೆ ಮುಖಮಾಡಿ ಕೂಡುವಂತೆ ಕರಿಕಂಬಳಿಯನ್ನು ಕರಿಮುಂದೆ ಮಾಡಿ ಹಾಸುವರು. ಸುತ್ತಲೂ ದೈವದವರು ಮತ್ತು ಸಮುದಾಯದ ಮಹಿಳೆಯರು ಕೂಡುವರು. ಗಂಡು ಮತ್ತು ಹೆಣ್ಣಿನ ಕಡೆಯ ಮುತ್ತೈದೆಯರು ಪ್ರತ್ಯೇಕವಾಗಿ ಕಳಸ, ಉಲ್ಪಿ ಮತ್ತು ಪೂಜಾಸಾಮಗ್ರಿಗಳೊಂದಿಗೆ ಬರುವರು. ಪುರೋಹಿತ ಕಂಬಳಿಯ ಮೇಲೆ ಪೂಜಾ ಸಾಮಗ್ರಿ ಮತ್ತು ಉಡಿ ಅಕ್ಕಿ ಸಾಮಾನುಗಳನ್ನು ಜೋಡಿಸಿ ಇರಿಸುವನು. ಮಹಿಳೆಯರಿಗೆ ಅರಿಶಿಣ ಕುಂಕುಮ ಮತ್ತು ಪುರುಷರಿಗೆ ವಿಭೂತಿ ಕುಂಕುಮ ಹಚ್ಚುತ್ತಾರೆ. ಅರಿಶಿಣ ಬಲ, ಎಣ್ಣೆಬಲ ಮತ್ತು ಸುರಿಗಿಗೆ ಕೂಡುವವರ ಹೆಸರಿನಬಲ ಹಾಗೂ ಮಾಂಗಲ್ಯ ಧಾರಣೆಯ ಸಮಯದ ಶಾಸ್ತ್ರ ಕೇಳಿಸುವರು. ಪುರೋಹಿತ ಇವೆಲ್ಲವನ್ನು ಒಂದೊಂದು ಪ್ರತ್ಯೇಕವಾದ ಹಾಳೆಯಲ್ಲಿ ಬರೆದು, ಕಂಬಳಿಯ ಮೇಲೆ ಹೆಣ್ಣು ಗಂಡಿನ ಎರಡು ಕಳಸಗಳನ್ನಿರಿಸಿ ಅವುಗಳ ಮುಂದೆ ಈ ಕಾಗದಗಳನ್ನು ಇಡುತ್ತಾನೆ. ಕಾಗದದ ಮೇಲೆ ಉಡಿಸಾಮಗ್ರಿಗಳನ್ನಿರಿಸಿ, ಪುರೋಹಿತ ಲಗ್ನ ಕಟ್ಟಿಸುವ ಪೂಜೆಮಾಡುತ್ತಾನೆ.ಎಲ್ಲರೂ ಅಕ್ಷತೆ ಹಾಕುತ್ತಾರೆ. ಪುರೋಹಿತ ದೈವದ ಸಮ್ಮುಖದಲ್ಲಿ ಈ ಪತ್ರಗಳನ್ನು ಓದುವನು. ಎರಡು ಪ್ರತ್ಯೇಕ ಕೆಂಪು ವಸ್ತ್ರದಲ್ಲಿ ಈ ಪತ್ರಗಳನ್ನಿಟ್ಟು ಉಡಿಸಾಮಗ್ರಿ ಇರಿಸಿ ಗಂಟು ಕಟ್ಟುತ್ತಾನೆ. ಎರಡೂ ಗಂಟುಗಳನ್ನು ಕಂಬಳಿಯ ಮೇಲಿರಿಸಿ ಮತ್ತೊಮ್ಮೆ ಪೂಜೆ ಮಾಡುವನು. ಎಲ್ಲರೂ ಅಕ್ಷತೆ ಹಾಕಿ ಕಳಸ ಬೆಳಗುವರು. ದೈವದ ಸಮ್ಮುಖದಲ್ಲಿ ಗಂಡು ಮತ್ತು ಹೆಣ್ಣಿನ ಕಡೆಯ ಯಜಮಾನರಿಗೆ ಈ ಲಗ್ನಕಟ್ಟಿದ ಲಗ್ನಕ್ಕಿಯ ಗಂಟುಗಳನ್ನು ಕೊಡುವನು. ಇವುಗಳನ್ನು ಅವರು ತಮ್ಮ ಮನೆಯ ದೇವರ ಜಗುಲಿಯ ಮೇಲಿರಿಸುತ್ತಾರೆ. ಮಾಂಗಲ್ಯ ಧಾರಣೆಯ ದಿವಸ ಅವರು ಈ ಎರಡೂ ಗಂಟುಗಳನ್ನು ತರಬೇಕು. ಹೆಣ್ಣಿನ ತಂದೆ ಅಥವಾ ಅವರ ಕಡೆಯ ಯಜಮಾನ ಸೇರಿದ ದೈವಕ್ಕೆ ದೈವದ ದುಡ್ಡುಕೊಟ್ಟು ಮದುವೆಯನ್ನು ನಡೆಸಿಕೊಡಬೇಕೆಂದು ಕೇಳುವನು. ಕೊನೆಗೆ ಎಲ್ಲರಿಗೂ ಚಹ ಫಲಹಾರ ಮತ್ತು ವೀಳ್ಯ ಮರ್ಯಾದೆ ಮಾಡುತ್ತಾರೆ. ಇಲ್ಲಿಗೆ ಲಗ್ನ ಕಟ್ಟಿಸುವ ಶಾಸ್ತ್ರಮುಗಿಯುತ್ತದೆ.

2.6.4 ಮದುವೆ ಹಂದರ (ಚಪ್ಪರ) :

ಮೇದರಲ್ಲಿ ಮದುವೆಯನ್ನು ಹೆಣ್ಣಿನ ಮನೆಯ ಮುಂದೆ ಮಾಡುವುದು ಸಾಮಾನ್ಯ. ಮದುವೆಯ ಹಿಂದಿನ ದಿನ ಸಮುದಾಯದ ದೈವಸ್ಥರೆಲ್ಲಸೇರಿ ಮದುವೆಯ ಮನೆಯ ಮುಂದೆ ಹಂದರ ಹಾಕುವರು. ಮೊದಲು ಆಯದ ಪ್ರಕಾರ ಹಂದರದ ಉದ್ದ ಅಗಲವನ್ನು ಅಳತೆ ಮಾಡಿ ಗುರುತಿಸುವರು. ಹನ್ನೆರಡು ಕಂಬದ ಹಂದರ ಇವರಿಗೆ ಶ್ರೇಷ್ಠ. ಆದರೆ ಇತ್ತೀಚಿನ ದಿನಗಳಲ್ಲಿ ಅನುಕೂಲಕ್ಕೆ ತಕ್ಕಂತೆ ಎಂಟು, ಹತ್ತು ಕಂಬದ ಹಂದರ ಹಾಕುತ್ತಾರೆ. ಕಂಬ ಹೂಳುವ, ಕುಣಿ ತೆಗೆದು ಮೊದಲು ಹಂದರದ ಮೂಲ ಕಂಬದ ಪೂಜೆ ಮಾಡುವರು. ಮನೆಯ ಬಲ ಭಾಗದ ಒಂದು ಕುಣಿಯಲ್ಲಿ ಹಾಲು ತುಪ್ಪ ಹಾಕಿ ಕಂಬದ ಜೊತೆ ಒಂದು ಬಿದಿರು ಇರಿಸಿ ಹುಗಿಯುತ್ತಾರೆ. ಉಳಿದ ಎಲ್ಲಾ ಕಂಬಗಳನ್ನು ನಂತರ ಹುಗಿಯುವರು. ನಂತರ ಮದುಮಗ ಅಥವಾ ಮದುಮಗಳ ಸೋದರ ಮಾವ ಹಂದರದ ಕಂಬವನ್ನು ಪೂಜಿಸಿ ಅನ್ನ-ಬೆಲ್ಲ-ಹಾಲು-ತುಪ್ಪ ಎಡೆ ಮಾಡುವನು. ಪದ್ಧತಿ ಇದ್ದರೆ, ಸೋದರ ಮಾವ ಮನೆಗೆ ಜೋರು ಬಟ್ಟು ಚಟ್ಟು ಇಡುತ್ತಾನೆ. ಜೋರು ಬಟ್ಟು ಚಟ್ಟು ಇಡುವುದು ಬಹುತೇಕವಾಗಿ ಮದುವೆ ಮನೆ ಎಂದು ಗುರುತಿಸುವುದಕ್ಕಾಗಿ ಇರಬಹುದು. ದೈವದವರು ಹಂದರದ ಮೇಲ್ಹಾವಣಿಗೆ ಬಿದಿರಿನ ತಟ್ಟಿ ಹಾಕುತ್ತಾರೆ. ಚಾಪೆಯ ಮೇಲೆ ತೆಂಗಿನ ಗರಿ ಮತ್ತು ಈ ಹಸಿರು ತಪ್ಪಲ (ಸೊಪ್ಪು) ಹಾಕಿ ಮೂಲ ಕಂಬಕ್ಕೆ ಹಸಿರು-ಹಾಲು ಗಿಡ ಕಟ್ಟುತ್ತಾರೆ. ನಂತರ ಉಡಿ ಸಾಮಾನು ಕಟ್ಟಿ ಮತ್ತೊಮ್ಮೆ ಹಂದರದ ಕಂಬವನ್ನು ಪೂಜಿಸಿ ಹಂದರದ ಮಧ್ಯಭಾಗದಲ್ಲಿ ಮೇಲೆ ಅಂತರಗಾಯಿ ಕಟ್ಟುವರು. ಜೊತೆಗೆ ಒಂದು ಚಿಕ್ಕ ಕಂದೀಲು (ಲಾಟೀನು) ತೂಗುಹಾಕುವರು. ಅಂತರಗಾಯಿ ಶುಭದ ಸೂಚನೆಯಾದರೆ ಕಂದೀಲು ಬೆಳಕಿಗೋಸ್ಕರವಾಗಿದೆ. ಕೊನೆಗೆ ಹಂದರ ಹಾಕಿದವರಿಗೆ ಮತ್ತು ಚಟ್ಟು ಇಟ್ಟವರಿಗೆ ಚಾಜಾ ಕೊಡುವರು. ಮಾಂಗಲ್ಯ ಧಾರಣೆಯಾದ ಐದನೆಯ ದಿನ ಹಂದರ ತಿರುವಿ ಹಾಕುತ್ತಾರೆ. ಒಂಬತ್ತನೆಯ ದಿನ ಹಂದರವನ್ನು ಬಿಚ್ಚುತ್ತಾರೆ.

ಅದೇ ದಿನ ಒಳಕಲ್ಲು, ಬೀಸುವಕಲ್ಲು, ಶಾವಿಗೆಯ ಮಣೆಯನ್ನು ಪೂಜೆ ಸಂಪ್ರದಾಯದ ಹಾಡು ಹಾಡುತ್ತಾ ಗೋಧಿ ಕುಟ್ಟುತ್ತಾರೆ.ಅದೇ ದಿನ ಸಾಯಂಕಾಲ ಮದುಮಗಳಿಗೆ ಹಸಿರು ಬಳೆ ಹಾಕಿಸುವರು. ಬಳೆಗಾರನಿಗೆ ಕೂಡ ಚಾಜಾ ಕೊಡುತ್ತಾರೆ. ಆಯಾಕಾರ ಚಮ್ಮಾರರಿದ್ದರೆ, ಮದುಮಕ್ಕಳಿಗೆ ಪಾದರಕ್ಷೆಗಳನ್ನು ತಂದು ಹಂದರ ಕೆಳಗೆ ಪೂಜಿಸಿ ಧಾನ್ಯ ಪಡೆದು ಅವುಗಳನ್ನು ಅವರಿಗೆ ಕೊಡುತ್ತಾರೆ.

2.6.5 ಬೀಗರನ್ನು ಎದುರುಗೊಳ್ಳುವುದು :

ಬೀಗರನ್ನು ಎದುರುಗೊಳ್ಳುವ ಪದ್ಧತಿಯು ಮೇದರಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಬೀಗರು ಮೊದಲೇ ಬಂದು ಒಂದು ಪ್ರತ್ಯೇಕ ಮನೆಯಲ್ಲಿ ತಂಗಿರುತ್ತಾರೆ. ಎದುರುಗೊಳ್ಳುವ ಸಮಯಕ್ಕೆ ಬೀಗರೆಲ್ಲ ಹತ್ತಿರದ ದೇವಸ್ಥಾನದಲ್ಲಿ ಕುಳಿತಿರುವರು. ಬೀಗರನ್ನು ಎದುರುಗೊಳ್ಳಲು ಮಹಿಳೆಯರು ಮಕ್ಕಳನ್ನು ಸೇರಿದಂತೆ ಹಿರಿಯರು ಸಹ ಬರುತ್ತಾರೆ.

ಗಂಡು ಹುಡುಗರು ಹೆಂಗಸರ ಉಡುಗೆಗಳನ್ನು ಧರಿಸಿ, ಅಣಕು ಸಾಮಗ್ರಿಗಳನ್ನು ಹಿಡಿದು ಮೇಳದ ಸಮೇತ ಕೇಕೆ ಹಾಕುತ್ತಾ ಸಂತೋಷದಿಂದ ಬೀಗರಿದ್ದ ದೇವಸ್ಥಾನಕ್ಕೆ ಬರುತ್ತಾರೆ.ಬೀಗರಲ್ಲಿ ಕೆಲವು ಗಂಡಸರನ್ನು (ಸಹೋದರ ಬೆಡಗಿನವರನ್ನು ಬಿಟ್ಟು) ಕಂಬಳಿಯ ಮೇಲೆ ಕೂಡಿಸುವರು. ಅವರ ಎದುರಿಗೆ, ಸೋಗು ಹಾಕಿದ ಹುಡುಗರು ಕೂಡುತ್ತಾರೆ. ಮೊದಲು ಬೀಗರ ಕಡೆಯವರನ್ನು ತಮಾಷೆ ಮಾಡುತ್ತಾ ಮುಖ ತೊಳೆದು, ವಿಭೂತಿ ಕುಂಕುಮ ಹಚ್ಚಿ ಪೂಜಿಸುವರು. ಅವರು ತಂದ ಅಣಕುಸಾಮಗ್ರಿಗಳನ್ನು ಹೆಸರಿಸುತ್ತಾ ಅವರಿಗೆ ಕೊಡುಗೆಯಾಗಿ ನೀಡುವರು. ತರಕಾರಿಯಿಂದ ಅಲಂಕರಿಸಿದ ಹಾರ, ಚಿಬ್ಬಲಿಯ ಕೊಡೆ, ಚೋಕಿಯ ಕನ್ನಡಿ, ಸೇರು, ಬೀಸುವಕಲ್ಲು ಗೂಟ, ಬೆಂಡಿನ ಚಾಳೀಸು, ಬ್ಯಾಟರಿ, ಬಂಡಿ, ಬಳೆ, ಬೇವಿನ ಕಾಯಿ, ಕುರಿ ಇಕ್ಕೆ ಮತ್ತು ಮಂಡಕ್ಕಿಯಿಂದ ತಯಾರಿಸಿದ ಆಭರಣಗಳು ಇಲ್ಲಿ ಪ್ರಮುಖವಾಗಿವೆ. ನಂತರ ಬೀಗರ ಕಡೆಯವರು ಸಹ ಸೋಗಿನವರನ್ನು ಪೂಜಿಸಿ, ಕಳಸ ಬೆಳಗುತ್ತಾರೆ. ಈ ಸಮಯದಲ್ಲಿ ಪರಸ್ಪರರು ತಮಾಷೆ ಮಾಡಿ ನಕ್ಕು ನಲಿಯುತ್ತಾರೆ. ಈ ಸಂದರ್ಭದಲ್ಲಿ ಮೇದ ಮಹಿಳೆಯರು ಬೀಗರನ್ನು ಕುರಿತು ಸಂಪ್ರದಾಯದ ಹಾಡು ಹಾಡುವರು. ಈ ಹಾಡುಗಳು ತಮಾಷೆಯಿಂದ ಕೂಡಿದ್ದು, ಹಾಸ್ಯ ಪ್ರಮುಖವಾಗಿ ಎದ್ದು ಕಾಣುತ್ತದೆ.ಇವುಗಳಲ್ಲಿ ಕೆಲವು ನುಡಿ ತುಣುಕುಗಳು ಹೀಗಿವೆ:

ಹುಳ್ಳೀಯ ಬಿತ್ತ್ಯಾರೆ, ಹುಳ್ಳೀಯಾ ಬೆಳೆದಾರೆ
ಹುಳ್ಳೀಗೆ ನೀರು ಹರೀಸ್ಯಾರೆ ಸೋಬಾನವೇ . . . .
ಹುಳ್ಳೀಗೆ ನೀರು ಹರಿಸ್ಯಾರೆ ಬೊಂಬಾಯಿಯ
ಮಳ್ಳೀರು ಬಂದಾರೆ ಮದುವೇಗೆ ಸೋಬಾನವೇ. . . .

ಹೀಗೆ, ಈ ಹಾಡು ಬೆಳೆಯುತ್ತಾ ಮದುವೆಗೆಯಾರ್‍ಯಾರು ಎಂಥವರು, ಬಂದಿದ್ದಾರೆಂದು ಅವರನ್ನು ವ್ಯಂಗ್ಯವಾಗಿ ಹಾಸ್ಯಿಸುವುದು ಕಂಡುಬರುತ್ತದೆ.

ಸರಕ್ಕಾ ಸರಿತಲ್ಲಾ ಬೀಗರ ಸ್ವರೂಪ ತಿಳತಲ್ಲ
ಒಂಟಿ ಬರುತಾವಂತ ಎಂಟು ಬಣಾವೀಯ ಕೊಂಡೆ
ಒಂಟೆಲ್ಲಿ ನಿಮ್ಮ ದಳವೆಲ್ಲಿ
ಒಂಟೆಲ್ಲಿ ನಿಮ್ಮ ದಳವೆಲ್ಲಿ ಅವರಣ್ಣ
ಕುಂಟೋರಿಮ್ಯಾಲೆ ಬರುತಾನೆ . . .ಸರಕ್ಕಾಸರಿತಲ್ಲ . . .

ಎಂದು ಇವರು ಹಾಡುವ ಪದದಲ್ಲಿ ಬೀಗರ ಸಿರಿತನ ಮತ್ತು ಗುಣವನ್ನು ಅಳೆಯುವ ಹಾಸ್ಯ ಕಂಡುಬರುತ್ತದೆ.ನಂತರ ಎಲ್ಲರೂ ವಿನೋದದಿಂದ ಮೇಳದ ಸಮೇತ ಬಂದು ಬೀಗರ ಮನೆ ಪ್ರವೇಶಿಸುತ್ತಾರೆ. ಬೀಗರಿಗೆ ಊಟೋಪಚಾರ ನಡೆಯುತ್ತದೆ.ಬೆಳಗಿನ ಜಾವ ಮದುಮಕ್ಕಳ ಶಾಸ್ತ್ರ ಮಾಡುವರು.

2.6.6 ಮದುಮಕ್ಕಳ ಶಾಸ್ತ್ರ :

ಮೇದರು ಮದುವೆಯ ದಿವಸ ಬೆಳಗಿನಜಾವದಲ್ಲಿ ಮದುಮಕ್ಕಳ ಶಾಸ್ತ್ರ ಮಾಡುತ್ತಾರೆ. ಆ ಸಮಯದಲ್ಲಿ ಮದುಮಗಳನ್ನು ಕಂಬಳಿಯ ಮೇಲೆ ಕೂಡಿಸಿ , ಸಾಲಾವಳಿ ಬಂದ ಮುತ್ತೈದೆಯರು ಮೊದಲು ತಲೆಗೆ ಎಣ್ಣೆ ಹಾಕಿ ಅರಿಶಿಣ ಹಚ್ಚುತ್ತಾರೆ. ನಂತರ ಉಳಿದ ಮುತ್ತೈದೆಯರು ಮತ್ತು ಬಂಧುಗಳು ಅರಿಶಿನ ಹಚ್ಚಿ ಶಾಸಕ್ಕಿ ಇಟ್ಟು ಕಳಸ ಬೆಳಗುವರು. ನಂತರ ಹಂದರದ ಮಧ್ಯದಲ್ಲಿ ಮಣೆಯ ಇಟ್ಟು ಮದುಮಗಳನ್ನು ಕೂಡಿಸಿ ತಲೆಗೆ ಬಿಸಿನೀರು ಹಾಕುತ್ತಾರೆ. ಬಟ್ಟೆಯನ್ನು ಬಿಡಿಸದೇ ಹಾಗೆಯೇ ಒದ್ದೆ ಬಟ್ಟೆಯಿಂದ ಮತ್ತೆ ಕರೆ ತಂದು ಕಂಬಳಿಯ ಮೇಲೆ ಕೂಡಿಸಿ ಎಲ್ಲರೂ ಅರಿಶಿಣ ಹಚ್ಚಿ ಕಳಸ ಬೆಳಗುವರು. ಇದೇ ರೀತಿಯಾಗಿ ಐದು ಸಾರಿ ಅರಿಶಿಣ ಹಚ್ಚಿ ನೀರು ಹಾಕುತ್ತಾರೆ. ಐದನೆಯ ಸಾರಿಗೆ ಬಟ್ಟೆ ಬಿಡಿಸಿ ಅರಿಶಿಣ ಬಣ್ಣದ ಸೀರೆ ಕುಪ್ಪಸ ಉಡಿಸುತ್ತಾರೆ. ಇದೇ ರೀತಿಯಲ್ಲಿ ಮದುಮಗನ ಮನೆಯಲ್ಲಿಯೂ ನಡೆಯುವುದು. ಈ ಸಂದರ್ಭದಲ್ಲಿ ಕಂಡು ಬರುವ ವಿಶೇಷತೆ ಎಂದರೆ ಐದು ಬಾರಿ ಮದುಮಕ್ಕಳನ್ನು ಮಾಡುವುದು, ಮತ್ತು ಎಲ್ಲರೂ ಒಬ್ಬರಿಗೊಬ್ಬರು ಅರಿಶಿಣ ಹಚ್ಚುತ್ತಾ ನೀರಾಟ ಆಡುವುದು. ಬೆಳಗಾಗುತ್ತಾ ಬಂದಂತೆ ನೀರಾಟ ನಿಲ್ಲಿಸಿ, ಎಲ್ಲರೂ ಬಟ್ಟೆ ಬದಲಿಸಿಕೊಂಡು ಗಂಗೆಪೂಜೆಗೆ ಹೋಗುವ ಸಿದ್ದತೆಯನ್ನು ಮಾಡಿ ಕೊಳ್ಳುವರು. ಕೆಲವು ಕಡೆ ಈ ಶಾಸ್ತ್ರಕ್ಕೆ ಎಣ್ಣೆಯ ಶಾಸ್ತ್ರಮತ್ತು ಮದಲಿಂಗನ ಸ್ನಾನ ಎಂದು ಕರೆಯುತ್ತಾರೆ.

2.6.7 ಗಂಗೆ ತರುವುದು :

ಈ ಮೊದಲು ಹೇಳಿದಂತೆ ಅನೇಕ ಬುಡಕಟ್ಟು ಸಮುದಾಯಗಳ ಮದುವೆಯಂತಹ ಮಂಗಲ ಕಾರ್ಯಗಳಲ್ಲಿ ಗಂಗೆಗೆ ಅಗ್ರ ಸ್ಥಾನ ಮತ್ತು ಪೂಜೆ ಸಲ್ಲುತ್ತದೆ. ಮೇದರು ಧಾರೆ ಮುಹೂರ್ತದ ದಿನ ಬೆಳಗಿನ ಜಾವ ಮದುಮಕ್ಕಳನ್ನು ಮಾಡುವ ಶಾಸ್ತ್ರಮುಗಿದ ನಂತರ ಗಂಗೆ ತರುವ ಶಾಸ್ತ್ರವನ್ನು ಮಾಡುತ್ತಾರೆ. ಹೆಣ್ಣು ಮತ್ತು ಗಂಡಿನ ಕಡೆಯ ಐದು ಮಂದಿ ಮುತ್ತೈದೆಯರು ಕಂಕಣ ಕಟ್ಟಕೊಂಡು ಗಂಗೆಗೆ ಹೊರಡುವರು. ಸುರಿಗಿಯ ನಾಲ್ಕು ಮಗಿಗಳನ್ನು(ಮಣ್ಣಿನ ಚಿಕ್ಕ ಗಡಿಗೆ) ಮತ್ತು ಐರಾಣಿಯ ದೊಡ್ಡ ಮಗಿಯನ್ನು ತೆಗೆದುಕೊಂಡು ವಾದ್ಯಗಳ ಸಮೇತ ಗಂಗೆಯ ಹತ್ತಿರ ಬರುತ್ತಾರೆ. (ಬಾವಿ, ನಲ್ಲಿ) ನೆಲವನ್ನು ಮಡಿ ಮಾಡಿ ಕರಿಮುಂದೆ ಮಾಡಿ ಕಂಬಳಿಯನ್ನು ಹಾಸಿ ಅದರ ಮೇಲೆ ಐರಾಣಿಯ ಬಿಂದಿಗೆ ಮತ್ತು ಮಗಿಗಳನ್ನು ಇಡುತ್ತಾರೆ. ಮಧ್ಯದಲ್ಲಿ ಐರಾಣಿಯ ಬಿಂದಿಗೆ ಮತ್ತು ಅದರ ಎಡ ಬಲಕ್ಕೆ ಎರಡು ಸುರಿಗಿಯ ಮಗಿಗಳನ್ನು ಇರಿಸಿ, ಪ್ರತಿಯೊಂದು ಮಗಿಯಲ್ಲಿಯೂ ಬಿದಿರಿನ ದಬ್ಬೆಗೆ ಕಂಕಣ ಸುತ್ತಿ ಮಡಿಕೆಯಲ್ಲಿ ಇಡುವರು. ಇವುಗಳ ಮುಂದೆ ಐದು ಮರಳು ರಾಶಿ ಮಾಡಿ ಐದು ವೀಳ್ಯ ಇಟ್ಟು, ಅದರ ಮುಂದೆ ಐದು ಹೋಳಿಗೆಯ ತುಂಬಿದ ಎಡೆ ಮಾಡುವರು. ಎಲ್ಲರೂ ಕಂಕಣ ಕಟ್ಟಿ ಕೊಂಡು, ಅಂಗನೂಲು ಹಾಕಿ ಪೂಜೆ ಮಾಡಿ ಕಾಯಿ ಒಡೆಯುವರು. ಮೊದಲು, ಸುರಿಗೆಯಲ್ಲಿ ಕೂಡುವ ಮಹಿಳೆಗೆ ಒಡೆದ ತೆಂಗಿನಕಾಯಿಯ ತಲೆ ಬಟ್ಟಲದೊಂದಿಗೆ ಉಡಿತುಂಬಿ ದಂಡೆ ಹಾಕಿ, ಐರಾಣಿ ಬಿಂದಿಗಿಯನ್ನು ತಲೆಯ ಮೇಲೆ ಹೊರಿಸುತ್ತಾರೆ. ನಂತರ ನಾಲ್ಕು ಜನ

ಮುತ್ತೈದೆಯರು ಉಡಿ ತುಂಬಿಕೊಂಡು ಉಳಿದ ನಾಲ್ಕು ಸುರಿಗಿಯ ಮಗಿಗಳನ್ನು ತೆಗೆದುಕೊಳ್ಳುವರು. ಎಲ್ಲರೂ ದಿಬ್ಬಣದೊಂದಿಗೆ ಮದುವೆ ನಡೆಯುವ ಮನೆಯ ಮುಂದಿನ ಹಂದರಕ್ಕೆ ಬರುವರು. ಈ ನಡುವೆ ಐರಾಣಿ ಬಂದಿಗೆ ಹೊತ್ತವಳಿಗೆ ದೇವರು ಬಂದರೆ, ನಿಂಬೇ ಹಣ್ಣು ಇಳಿತೆಗೆದು ಶಾಂತಿ ಮಾಡುತ್ತಾರೆ. ಐರಾಣಿ ಬಂದಿಗೆಯನ್ನು ಪೂಜೆ ಮಾಡಿ ಅದರಲ್ಲಿ ವೀಳ್ಯ ಬಟ್ಟು ತೆಗೆದುಕೊಂಡು ಹೋಗಿ ದೇವರ ಮನೆಯಲ್ಲಿ ಇರಿಸುವರು.

2.6.8 ಸುರಿಗಿ :

ಸುರಿಗಿಯು ಅನೇಕ ಸಮುದಾಯಗಳಲ್ಲಿ ಮದುವೆಯ ಸಂದರ್ಭದಲ್ಲಿ ಮಾಡುವ ಒಂದು ಶಾಸ್ತ್ರ. ಇದು ಕ್ರಮ ಬದ್ಧವಾಗಿ ಮದುವೆಯಾಗುವವರನ್ನು ಸ್ನಾನ ಮಾಡಿಸುವ ವಿಧಾನ. ಮೇದರಲ್ಲಿ ಸುರಿಗೆ ಪದ್ಧತಿ ಇದೆ. ಇವರು ಗಂಗೆ ಯಿಂದ ತಂದ ಉಳಿದ ನಾಲ್ಕು ಸುರಿಗೆಯ ಮಗಿಗಳನ್ನು ಹಂದರದಲ್ಲಿ ಚೌಕಾಕಾರವಾಗಿ ಮೂಲೆಗೊಂದರಂತೆ ಇಡುವರು. ಮುತ್ತೈದೆಯರು ಒಂದೊಂದು ಮಗಿ ಹಿಡಿದುಕೊಂಡು ಕುಳಿತು ಕೊಳ್ಳುತ್ತಾರೆ. (ಆರನೇ ಛಾಯಾಚಿತ್ರವನ್ನು ನೋಡಿರಿ) ಮೂಲ ಹಂದರದ ಕಂಬದ ಮಗಿಯಿಂದ ಸುರಿಗಿ ಮಗಿಯನ್ನು ಬಲಕ್ಕೆ ಮಾಡಿಕೊಂಡು ಐದು ಸುತ್ತು ದಾರವನ್ನು ಸುತ್ತುವರು. ಸುರಿಗಿಯ ಮಧ್ಯದಲ್ಲಿ ಒನಕೆ ಇಲ್ಲವೇ ಶ್ಯಾವಿಗೆಯ ಮಣೆ ಹಾಕುತ್ತಾರೆ. ಮಣೆಯಮೇಲೆ ಮದುಮಗಳು ಮತ್ತು ಸುರಿಗಿಗೆ ಕೂಡುವವಳು (ವತ್ತಿಗೆ ಕುಂತವಳು)ಕೂಡುತ್ತಾರೆ. ಇಬ್ಬರಿಗೂ ತಲೆಗೆ ಎಣ್ಣೆ ನೀರು ಹಾಕಿ, ಸೋಪು, ಸೀಗೆಕಾಯಿ ಪುಡಿ ಹಚ್ಚಿ ಸುರಿಗಿ ಎರೆಯುತ್ತಾರೆ. ಇಬ್ಬರಿಗೂ ಹೊಸ ಬಟ್ಟೆಯನ್ನು ಉಡಿಸಿ ವಿಭೂತಿ ಕುಂಕುಮ ಹಚ್ಚಿ, ದಂಡಿಯನ್ನು ಹಾಕಿ, ಕಳಸ ಬೆಳಗುವರು. ಪರಸ್ಪರ ಮದುಮಗಳು ಮತ್ತು ವತ್ತಿಗೆ ಕುಳಿತವಳ ಮೂಲಕ ಮುತ್ತಿನ ನೀರು ಎತುತ್ತಾರೆ. ಮುತ್ತಿನ ನೀರು ಎತುವಾಗ ಮುತ್ತೈದೆಯರೆಲ್ಲ ಜೈಜೈಜೈ ಎಂದು ಜೈಕಾರ ಹಾಕುತ್ತಾರೆ.(ಐದನೇಛಾಯಾಚಿತ್ರವನ್ನು ನೋಡಿರಿ) ಓಕುಳಿಯ ನಿವಾಳಿಯನ್ನು ತೆಗೆದು, ಸುರಿಗಿಯ ದಾರವನ್ನು ಜೈಜೈಜೈ ಎನ್ನುತ್ತಾ ಎತ್ತಿ ಎರಡು ಮಡುಪು ಮಡಿಚಿ ಬಳೆಯ ಆಕಾರದಲ್ಲಿ ಸುತ್ತಿ ದೇವರ ಮನೆಗೆ ಒಯ್ಯುವರು. ಇದೇ ರೀತಿಯಾಗಿ ಮದುಮಗನ ಮನೆಯಮುಂದೆಯೂ ಸುರಿಗಿಯ ನೀರು ಹಾಕುತ್ತಾರೆ. ಸುರಿಗಿಯನ್ನು ಎರೆಯುವಾಗ ಸುರಿಗಿಯ ನಡುವೆ ಮತ್ತು ಹತ್ತಿರಕ್ಕೆ ಅಪಶಕುನ ಸೂಚಕ ಪ್ರಾಣಿಗಳಾದ ಬೆಕ್ಕು, ನಾಯಿ, ಹಂದಿ ಬರದಂತೆ ಕಾಯುವರು. ವಿಧವೆ, ವಿದುರ ಮತ್ತು ದೇಹದ ಅಂಗ ಊನವಾದವರು (ಮೂಳ) ಸುರಿಗಿಯನ್ನು ಮುಟ್ಟುವುದಿಲ್ಲ. ಸುರಿಗಿಯಲ್ಲಿ ಇವರ ಅನನ್ಯತೆ ಎಂದರೆ ನಾಯಕರಂತಹ ಬುಡಕಟ್ಟು ಸಮುದಾಯದವರ ಸುರಿಗಿಗಿಂತ ಮೇದರಲ್ಲಿ ಸುರಿಗಿಯು ಭಿನ್ನ ವಾಗಿರುತ್ತದೆ. ನಾಯಕರ ಸಮುದಾಯದವರು ಸುರಿಗಿಯಲ್ಲಿ ವಧು-ವರರನ್ನು ಒಂದೇ ಹಂದರದಲ್ಲಿ ಜೊತೆಗೆ ಕೂಡಿಸಿ ಎರೆಯುತ್ತಾರೆ. ಆದರೆ ಮೇದರು ವಧು ವರರನ್ನು ಪ್ರತ್ಯೇಕವಾಗಿ ಅವರವರ ಮನೆಯ ಹಂದರದಲ್ಲಿ ಎರೆಯುವುದು ರೂಢಿಯಲ್ಲಿದೆ. ಇಂತಹ ಪದ್ಧತಿ ಇತರೆ ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುವುದು ವಿರಳ. ಇದು ಇವರ ಅನನ್ಯತೆ.

2.6.9 ಐರಾಣಿ ಏರಿಸುವುದು ಮತ್ತು ಭೂಮ :

ಮೇದರಲ್ಲಿ ಐರಾಣಿ ಏರಿಸುವ ಒಂದು ಆಚರಣೆ ಜಾರಿಯಲ್ಲಿದೆ. ಈ ಆಚರಣೆಯ ಪದ್ಧತಿಯು ಅವರ ಮನೆತನದ ಬೆಡಗು ಆಧಾರವಾಗಿರುತ್ತದೆ. ಕೆಲವು ಬೆಡಗಿನವರು ಐರಾಣಿ ಏರಿಸುವುದಿಲ್ಲ . ಸುರಿಗಿ ಮುಗಿದ ತಕ್ಷಣ ಐರಾಣಿ ಏರಿಸುವ ಕಾರ್ಯಕ್ರಮ ಆರಂಭವಾಗುತ್ತದೆ. ಐರಾಣಿ ಪದ್ದತಿ ಇರುವ ಸೋದರ ಬೆಡಗಿನವರು ದೇವರ ಮನೆಯಲ್ಲಿ ಸೇರುತ್ತಾರೆ. (ಹೊರಗೆ ಕೊಟ್ಟ ಹೆಣ್ಣು ಮಕ್ಕಳನ್ನು ಬಿಟ್ಟು) ದೇವರ ಮನೆಯ ಜಗುಲಿಗೆ ತಾಗಿಕೊಂಡಂತೆ ಮೂಲೆಯಲ್ಲಿ ಅಕ್ಕಿ ಹಾಕಿ ಅದರ ಮೇಲೆ ಐರಾಣಿ ಬಿಂದಿಗೆಯನ್ನು ಇಡುತ್ತಾರೆ. ಎಡಕ್ಕೆ ಬಲಕ್ಕೆ ಸುರಿಗಿಯ ಮಗಿಗಳನ್ನು ಇರಿಸುವರು . ಮುಚ್ಚಳದ ಮೇಲೆ ಕಲಸಿದ ಹಸಿಹಿಟ್ಟನ್ನು ಇರಿಸಿ, ಹಿಟ್ಟಿನಮೇಲೆ ಹಣತೆಯಲ್ಲಿ ದೀಪ ಹಚ್ಚಿ ಇಡುವರು. ಸುರಿಗಿಯ ದಾರದ ಒಂದು ತುದಿಯನ್ನು ಬಿಂದಿಗೆಯ ಪಕ್ಕದ ಗೋಡೆಗೆ ಮಳೆ ಬಡಿದು ಅದಕ್ಕೆ ಸುತ್ತಿ , ಇನ್ನೊಂದು ತುದಿಯನ್ನು ಸುಳಿ ಸುತ್ತಿ ಐರಾಣಿಯ ಮಗಿಯಲ್ಲಿ ಇಳಿಬಿಡುತ್ತಾರೆ. ಈ ದಾರಕ್ಕೆ ಕಂಕಣದ ಚಿತ್ತವನ್ನು ತಾಗಿಸಿ ನಿಲ್ಲಿಸುವರು. ಇದರ ಮುಂದೆ ಮದುಮಗಳನ್ನು ಸೇರಿದಂತೆ ಐದು ಜನ ಮುತ್ತೈದೆಯರು ಕಂಕಣ ಕಟ್ಟಿ ಕೊಂಡು ಕುಳಿತುಕೊಳ್ಳುವರು. ಇವರು ಕುಲಕಸುಬು ಮಾಡುವ ಒಂಬಿಗೆ ಎಲೆಕಂಕಣ ಸುತ್ತಿ ರುತ್ತಾರೆ. ಐರಾಣಿಗೆ ಪೂಜೆಯನ್ನು ಮಾಡಿ ಈ ಐದೂ ಜನ ಒಂಬನ್ನು ಹಿಡಿದುಕೊಂಡು ದೇವರ ಹೆಸರು ಹೇಳುತ್ತಾ ಐರಾಣಿಯ ಹಣತೆಯ ಎಣ್ಣೆಯಲ್ಲಿ ಇದನ್ನು ಅದ್ದಿ, ಮನೆಯ ದೇವರ ಹೆಸರು, ಕುಲ ದೇವರ ಹೆಸರು ಹೇಳುತ್ತಾ ಐರಾಣಿಯ ಬಿಂದಿಗೆಗೆ ಮುಟ್ಟಿಸುವರು. ಇದೇ ರೀತಿಯಲ್ಲಿ ಐದುಸಾರೆ ಮುಂದುವರಿಸಿ ನಂತರ ಪಕ್ಕಕ್ಕೆ ಒಂಬನ್ನು ನಿಲ್ಲಿಸಿ ಎಲ್ಲರೂ ನಮಸ್ಕರಿಸುವರು. (ಏಳನೇ ಛಾಯಾಚಿತ್ರವನ್ನು ನೋಡಿರಿ) ಮುಂದಿನ ಕಾರ್ಯವೇ ಭೂಮ ತೂಗಿಸುವುದು.

ಐರಾಣಿಯ ಮುಂದೆ ತುಂಬಿದ ಹೋಳಿಗೆಯ ಎಡೆ ಮಾಡಿ ಮುಚ್ಚಿ ಇಡುತ್ತಾರೆ. ಭೂಮದ ಎಡೆಗೆ ಪೂಜೆ ಮಾಡಿ ಎಲ್ಲರೂ ಅದನ್ನು ಮಾತನಾಡದಂತೆ ಮತ್ತು ಏನೂ ಶಬ್ದ ಮಾಡದಂತೆ ಊಟ ಮಾಡಿ, ಭೂಮದ ಎಡೆ ಮತ್ತು ಕೊಬ್ಬರಿ ಎಲ್ಲವನ್ನೂ ತಿಂದು ಎಲೆ ಅಡಿಕೆಯನ್ನು ಹಾಕಿಕೊಂಡು ತಟ್ಟೆಯನ್ನುಬಾರಿಸಿ ಹೊರಗೆ ಬರುವರು. ಈ ಐರಾಣಿ ದೀಪವನ್ನು ನಾಗೋಲಿ (ನಾಗವಲ್ಲಿ ಶಾಸ್ತ್ರ) ಮುಗಿದ ನಂತರ,ಇದೇ ಕ್ರಮದಿಂದ ಐರಾಣಿಯ ದೀಪವನ್ನು ಇಳಿಸುತ್ತಾರೆ. ಸುರಿಗಿಯ ಉಡಿಯನ್ನು ಒಡೆದು ಹಂಚಿಕೊಂಡು ಸುರಿಗಿಯ ಮಗಿಯನ್ನು ಯಾರಿಗೂ ಕಾಣದಂತೆ ಕೊಂಡೊಯ್ಯುವರು. ಇಲ್ಲಿ ಐರಾಣಿಯ ದೀಪವನ್ನಾಗಲೀ ಭೂಮವನ್ನಾಗಲೀ ಅನ್ಯ ಬೆಡಗಿನವರು ನೋಡುವುದಿಲ್ಲ. ಐರಾಣಿ ಏರಿಸುವ ಪದ್ದತಿಯು ಈ ಬುಡಕಟ್ಟು ಸಮುದಾಯದ ಅನನ್ಯತೆ.

2.6.10 ಎಣ್ಣೆ ಬಂಗಾರದ ಹೆಡಿಗೆ :

ಇದು ಮೇದ ಸಮುದಾಯದಲ್ಲಿ ಮದುವೆಯ ಸಂದರ್ಭದಲ್ಲಿ ಧಾರೆಮುಹೂರ್ತದ ಕೆಲವು ಗಂಟೆಗಳ ಮುಂಚೆ ಗಂಡಿನ ಮನೆಯಿಂದ ಹೆಣ್ಣಿನ ಮನೆಗೆ ತರುವ ಮಂಗಲ ದ್ರವ್ಯಗಳ ಪುಟ್ಟಿ . ಇದನ್ನು ಪ್ರಾದೇಶಿಕವಾಗಿ ಎಣ್ಣೆ

ಬಂಗಾರದ ಹೆಡಿಗೆ, ಎಣ್ಣೆ ಅರಿಶಿಣದ ಹೆಡಿಗೆ, ತಾಳಿಯ ಪುಟ್ಟಿ ಎನ್ನುವರು. ಇವರೇ ತಯಾರಿಸಿದ ಒಂದು ಶುದ್ಧವಾದ ಬಿದಿರಿನ ಪುಟ್ಟಿಯಲ್ಲಿ ಬಾಳೆದೆಲೆ ಹಾಕಿ, ಅದರಲ್ಲಿ ಐದು ಟೆಂಗಿನ ಕಾಯಿ, ಐದುಬೆಲ್ಲದಚ್ಚು, ಐದುಸೇರು ಅಕ್ಕಿ, ಐದು ಹಸಿರು ಬಳೆ, ಬೆಂಡೋಲೆ, ಕರಿಮಣಿ, ಬಳೆ, ಅರಿಶಿಣ ಕುಂಕುಮ, ಬಾಳೆ ಹಣ್ಣು ಮತ್ತು ಒಳ್ಳೆಣ್ಣೆ, ವೀಳ್ಯ, ಇವೆಲ್ಲವನ್ನೂ ಒಂದು ಅರಿಶಿಣ ಬಟ್ಟೆಯಲ್ಲಿ ಕಟ್ಟಿ ಪುಟ್ಟಿಯಲ್ಲಿ ಇಟ್ಟಿರುತ್ತಾರೆ. ಇದರ ಜೊತೆಗೆ ಮದುಮಗಳ ಅರಿಶಿಣ ಬಣ್ಣದ ಸೀರೆಯನ್ನು ಮತ್ತು ಉಡಿ ಅಕ್ಕಿಯ ಗಂಟನ್ನು ಇಟ್ಟುಕೊಂಡು, ಗಂಡಿನ ಕಡೆಯ ಯಜಮಾನರು ಮುತ್ತೈದೆಯರೊಂದಿಗೆ ತಲೆಯ ಮೇಲೆ ಹೊತ್ತು ಕೊಂಡು ವಾದ್ಯ ಸಮೇತ ಹೆಣ್ಣಿನ ಮನೆಗೆ ತಂದು ಒಪ್ಪಿಸುತ್ತಾರೆ. ಹೆಣ್ಣಿನ ಕಡೆಯವರು ಈ ಹೆಡಿಗೆಯನ್ನು ಪೂಜೆ ಮಾಡಿ ತೆಗೆದುಕೊಂಡು ಬಂದವರಿಗೆ ವೀಳ್ಯ ಮರ್ಯಾದೆಯನ್ನು ಮಾಡುವರು. ಕೆಲವು ಪ್ರದೇಶಗಳಲ್ಲಿ ಧಾರೆಗೆ ಮುನ್ನ ಲಗ್ನ ಕಟ್ಟುವಶಾಸ್ತ್ರ ಮತ್ತು ಹಾಲುಗಳ್ಳಿಯ ಶಾಸ್ತ್ರವನ್ನು ಮಾಡುವರು. ಇತ್ತೀಚೆಗೆ ಈ ಶಾಸ್ತ್ರಗಳನ್ನು ಕೈ ಬಿಟ್ಟಿರುವರು. ಹೆಣ್ಣಿನ ಕಡೆಯ ಯಜಮಾನರು ಮತ್ತು ಬಂಧು ಬಳಗದವರೆಲ್ಲ ವಾದ್ಯ ಸಮೇತ ವರನನ್ನು ಕರೆಯಲು ಹೋಗುತ್ತಾರೆ. ಹೆಣ್ಣಿನ ಕಡೆಯ ಬೀಗರು ವರನ ಮನೆಯ ಹತ್ತಿರಕ್ಕೆ ಬಂದ ತಕ್ಷಣ ಗಂಡಿನವರು ಬಂದವರಿಗೆ ಒಂದೊಂದು ಟವೆಲ್ (ಶಾಲು) ಹಾಕಿ ಮರ್ಯಾದೆಯನ್ನು ಮಾಡುತ್ತಾರೆ. ವಾದ್ಯದ ಸಮೇತ ವರ ಮತ್ತು ಬೀಗರನ್ನು ಮದುವೆಯ ಮಂಟಪಕ್ಕೆ ಕರೆತರುತ್ತಾರೆ.

2.6.11 ಧಾರೆಮುಹೂರ್ತ :

ಧಾರೆಮುಹೂರ್ತದ ಸ್ವಲ್ಪ ಹೊತ್ತಿಗೆ ಮುಂಚೆ ಹೆಣ್ಣಿನ ಮನೆಯವರು ಮದುಮಗಳನ್ನು ಅಲಂಕರಿಸಿಕೊಂಡು ಮಂಗಲದ್ರವ್ಯಗಳೊಂದಿಗೆ ಮುತ್ತೈದೆಯರೆಲ್ಲ ಸೇರಿ ಮದುವೆಯ ಎಣ್ಣೆ ಬಂಗಾರದ ಹೆಡಿಗೆ ತೆಗೆದು ಕೊಂಡು ವಾದ್ಯ ಸಮೇತ ಮದುವೆಯ ಮಂಟಪಕ್ಕೆ ಬರುವರು. ಅರಿಶಿಣ ಬಣ್ಣದ ಬಟ್ಟೆ ಧರಿಸಿದ ಮದುಮಗಳನ್ನು ಹುಡಗಿಯ ಸೋದರ ಮಾವ ಮದುವೆ ಮಂಟಪಕ್ಕೆ ಕರೆತರುತ್ತಾನೆ.ಮದುವೆಮಂಟಪದಲ್ಲಿ ಕಂಬಳಿಯನ್ನು ಹಾಸಿ ಅದರ ಮೇಲೆ ಅಕ್ಕಿಯನ್ನು ಸುರುವಿರುತ್ತಾರೆ. ಮದುವೆಯ ಪೌರೋಹಿತ್ಯ ವಹಿಸುವ (ಜಂಗಮ, ಬ್ರಾಹ್ಮಣ) ಧಾರೆ ಮುಹೂರ್ತದ ಎಲ್ಲಾ ಮಂಗಲ ಸಾಮಗ್ರಿ ಮತ್ತು ದ್ರವ್ಯಗಳನ್ನು ಕಂಬಳಿಯ ಮೇಲೆ ಹೊಂದಿಸುತ್ತಾನೆ. ಲಗ್ನ ಕಟ್ಟಿಸಿದ ಗಂಟುಗಳನ್ನು ಬಿಚ್ಚಿ ಮಂಗಲ ದ್ರವ್ಯಗಳ ಜೊತೆ ಇರಿಸುವನು. ವಧು-ವರರನ್ನು ಜೊತೆಗೆ ಕೂಡಿಸಿ ಗಂಗೆಯ ಕಲಶ ಪ್ರತಿಷ್ಠಾಪನೆ ಮಾಡಿ, ಗಂಗೆಯ ಪೂಜೆ ಮಾಡಿಸುತ್ತಾನೆ. ಮದುಮಕ್ಕಳಿಗೆ ಅಡ್ಡಲಾಗಿ ಒಂದು ಬಿಳಿಯ ಮುಸುಕು ಹಿಡಿದಿರುತ್ತಾರೆ. ವಧು-ವರರಿಂದ ಪರಸ್ಪರರ ತಲೆಯ ಮೇಲೆ ಅಕ್ಕಿ, ಜೀರಿಗೆ, ಬೆಲ್ಲ ಹಾಕಿಸುವನು. ಮಾಂಗಲ್ಯ ಪೂಜೆ ಮಾಡಿಸಿ, ಫಲ ದಾನ ಕೊಡಿಸುತ್ತಾನೆ. ತರುವಾಯ ಮಾಂಗಲ್ಯದ ಮಂಗಲದ್ರವ್ಯದ ತಟ್ಟೆಯನ್ನು ಹಿರಿಯ ಮುತ್ತೈದೆಯರೆಲ್ಲ ಮುಟ್ಟಿ ಆಶೀರ್ವದಿಸುತ್ತಾರೆ. ವಧು ವರರಿಗೆ ಪರಸ್ಪರ ಅರಿಶಿಣ ಕಂಕಣಕಟ್ಟಿಸಿ, ಮಂತ್ರ ಹೇಳಿ ಮಾಂಗಲ್ಯ ಧಾರಣೆಯನ್ನು ಮಾಡಿಸುತ್ತಾನೆ. ಇವರ ಮಾಂಗಲ್ಯವು ಕರಿಯ ಮಣಿಯ ಜೊತೆಗೆ ಪೋಣಿಸಿದ ಒಂದು (ಇಲ್ಲವೆ ಎರಡು) ಚಿನ್ನದ

ತಾಳಿಯಾಗಿರುತ್ತದೆ. ನಂತರ ಗಂಡಿನಿಂದ ತಾಳಿ, ಮೂಗುತಿಯ ಪೂಜೆಯನ್ನು ಮಾಡಿಸಿ ಹಾಲು ತುಪ್ಪದಲ್ಲಿ ಮುತ್ತು ಹುಡುಕಿಸುವನು. ಹೆಣ್ಣಿನ ಕಡೆಯವರು ಹೆಣ್ಣನ್ನು ಧಾರೆ ಎರೆದುಕೊಡುವರು(ಎಂಟನೇ ಛಾಯಾಚಿತ್ರವನ್ನು ನೋಡಿರಿ). ತದನಂತರ ಬ್ರಹ್ಮ ಗಂಟುಹಾಕಿ ಫಲ ದಾನ, ಸಪ್ತಪದಿ ಮತ್ತು ಅರುಂಧತಿ ದರ್ಶನ ಹಾಗೂ ಪೂಜೆಯನ್ನು ಮಾಡಿಸುತ್ತಾರೆ. ಇದರೊಂದಿಗೆ ಮದುವೆಯ ಮಂಗಳಕರ ಪ್ರಮುಖ ಘಟ್ಟ ಮುಗಿಯುತ್ತದೆ.

2.6.12 ಕಾಲುತೊಳೆಯುವ ಕಾರ್ಯಕ್ರಮ :

ಧಾರೆಮುಹೂರ್ತದ ದಿನ ಸಾಯಂಕಾಲ ಮದುಮಕ್ಕಳನ್ನು ದೇವಸ್ಥಾನಕ್ಕೆ ಕರೆದೊಯ್ದು ಅರ್ಚನೆ ಮಾಡಿಸಿಕೊಂಡು ಹೆಣ್ಣಿನ ಮನೆಗೆ ಕರೆತರುತ್ತಾರೆ.ಈ ಸಂದರ್ಭದಲ್ಲಿ ವರನ ಸಹೋದರಿಯರು ನವದಂಪತಿಗಳ ಕಾಲು ತೊಳೆಯುವರು. ಹೊಸ್ತಿಲಿಯ ಮೇಲೆ ಒಂದು ತಟ್ಟೆಯನ್ನಿಟ್ಟು ಅದರಲ್ಲಿ ಗಂಡಿನ ಬಲಗಾಲು ಮತ್ತು ಹೆಣ್ಣಿನ ಎಡಗಾಲನ್ನು ಇರಿಸಿ ಪಾದ ಪೂಜೆಯನ್ನು ಮಾಡಿ ನಮಗೆ ಹೆಣ್ಣು ಕೊಡು ಎಂದು ನವದಂಪತಿಗಳನ್ನು ಕೇಳುವರು.ಈ ಕುರಿತು ವಿನೋದದ ಮಾತುಕತೆ ಕೂಡ ನಡೆಯುತ್ತದೆ ಮತ್ತು ಅನೇಕ ಸಂಪ್ರದಾಯದ ಹಾಡುಗಳನ್ನು ಹಾಡುತ್ತಾರೆ. ಅದರ ಕೆಲವು ತುಣುಕು ಇಲ್ಲಿವೆ.

ಕಾಲ ತೊಳೆಯನು ಬನ್ನೀರೇ

ಅಣ್ಣಾನ ಪಾದ ತೊಳೆಯನು ಬನ್ನೀರೆ,

ಕಾಲ ತೊಳೆಯನು ಬಾರೇ ಮೇಲ ಮುಸುಗೀನ ಶ್ಯಾಣಿ

ವಾಲಿ ಹೊನ್ನಾಳ ಕೇಳಿ ಎಲ್ಲಾ ಕಾಲ ತೊಳೆಯನು ಬನ್ನೀರೇ

ಅಣ್ಣಾನ ಪಾದ ತೊಳೆಯನು ಬನ್ನೀರೇ. . . . .

ಒಂಟಿ ಐದಾವಣ್ಣಾ ಒಂಟಿ ಮರಿಐದಾವ

ಕುಂತಾಡ ಮಗಳಾ ಕೋಡನಮಗಾ

ಕಾಲ ತೊಳೆಯನು ಬನ್ನೀರೇ ಅಣ್ಣಾನ ಪಾದ ತೊಳೆಯನು ಬನ್ನೀರೇ . . . . .

(ಹೆಚ್ಚಿನದನ್ನು ಅನುಬಂಧದಲ್ಲಿ ನೀಡಲಾಗಿದೆ) ಹೀಗೆಯೇ ಈರ್ವರ ನಡುವೆ ಮಾತುಕತೆ ಈ ಹಾಡಿನ ರೂಪದಲ್ಲಿ ಮುಂದುವರಿದು ಕೊನೆಗೆ ಸಹೋದರನು ತಂಗಿಗೆ ಹೆಣ್ಣು ಕೊಡುವುದಾಗಿ ಮಾತು ಕೊಡುತ್ತಾನೆ. ಇಲ್ಲಿ ಸಹೋದರತ್ವದ ಸಂಬಂಧದ ಭಾವಿ ಬದುಕಿನಲ್ಲಿ ಮುಂದುವರಿಯುವ ಆಶ್ವಾಸನೆಗಳು ಕಂಡುಬರುತ್ತದೆ.

2.6.13 ನಾಗೋಲಿ ಶಾಸ್ತ್ರ (ನಾಗವಲ್ಲಿ ನೀರು) :

ಧಾರೆ ಮುಹೂರ್ತದ ಮಾರನೆಯ ದಿನ ಮೇದರು ನಾಗೋಲಿ ಶಾಸ್ತ್ರ ಮಾಡುತ್ತಾರೆ. ಇದನ್ನು ಪ್ರಾದೇಶಿಕವಾಗಿ ನಾಗವಲ್ಲಿ ನೀರು ಎಂತಲೂ ಕೂಡ ಕರೆಯುವರು. ಆ ದಿನ ಬೆಳಗ್ಗೆ ನವದಂಪತಿಗಳನ್ನು ಹಂದರದಲ್ಲಿ ಶ್ಯಾವಿಗೆಯ

ಮಣೆಯ ಮೇಲೆ ಕೂಡಿಸಿ, ಸುತ್ತಲೂ ನಾಲ್ಕು ದಿಕ್ಕಿಗೆ ನಾಲ್ಕು ಕೊಡಗಳನ್ನಿಟ್ಟು ಸಾಗೋಲಿ ಸುರಿಗಿ ಸುತ್ತುತ್ತಾರೆ. ಅಷ್ಟರಲ್ಲಿಯೇ ಹೆಣ್ಣಿನ ತಮ್ಮ ಕ್ಷೌರಿಕನಾಗಿ ವೇಷ ಹಾಕಿ ಕೊಂಡು ಬಂದು ಮಾವನಿಗೆ ವಿನೋದಕ್ಕಾಗಿ ಅಣಕು ಕ್ಷೌರ ಮಾಡುತ್ತಾನೆ. ಮತ್ತು ಮಡಿವಾಳನಾಗಿ ಬಂದು ಇವರು ಹಿಂದಿನ ದಿನ ಬಿಟ್ಟಿದ್ದ ಅರಿಶಿಣ ಬಟ್ಟೆಗಳನ್ನು ಮಡಿಮಾಡಿಕೊಂಡು ತಂದಿರುವುದಾಗಿ ಹೇಳಿ ಬಾಜಾ ಪಡೆಯುತ್ತಾನೆ. ನಂತರ ಎಲ್ಲರೂ ಸೇರಿ ನವ ದಂಪತಿಗಳಿಗೆ ಅರಿಶಿಣ ಹಚ್ಚಿ ನೀರೆರೆಯುವರು. ಇದೇ ಸಮಯದಲ್ಲಿ ಎಲ್ಲರೂ ಪರಸ್ಪರ ಅರಿಶಿಣ ಹಚ್ಚಿ ತಮಾಷೆಯ ಆಟವನ್ನು ಆಡುತ್ತಾರೆ. ಕೊನೆಗೆ ನವದಂಪತಿಗಳಿಗೆ ಪರಸ್ಪರ ಆರಿಶಿಣ ಹಚ್ಚಿಸಿ ಆರತಿ ಮಾಡುವರು. ಎಲ್ಲರೂ ನೀರು ಹಾಕಿ ಅರಿಶಿಣ ಕುಂಕುಮ ಹಚ್ಚಿ ಕಳಸ ಬೆಳಗಿ ನಿವಾಳಿ ತೆಗೆದು ದೃಷ್ಟಿಯ ಬೊಟ್ಟು ಇಡುತ್ತಾರೆ. ಸುರಿಗಿಯ ದಾರದಿಂದ ಹಂದರದ ಮೂಲ ಕಂಬಕ್ಕೆ ತೊಟ್ಟಿಲು ಕಟ್ಟಿ ಒಂದು ಮಗುವಿನ ಗೊಂಬೆಯನ್ನು ಅದರಲ್ಲಿ ಹಾಕಿ ಗಂಡ ಹೆಂಡತಿಯರಿಂದ ಮಗುವಿನ ಆಟ ಆಡಿಸುವರು. ಇಲ್ಲಿ ನವ ದಂಪತಿಗಳೀರ್ವರ ನಡುವೆ ಕೆಲವು ವಿನೋದದ ಮಾತುಗಳನ್ನಾಡಿಸುತ್ತಾರೆ. ಅವು ಹೀಗಿವೆ.

ಹೆಂಡತಿ :-ರೀ ಕೂಸು ಅಳತೈತಿ, ನಾನು ಅಡಿಗೆ ಮಾಡಬೇಕು ಎತಿಗ್ಯಾಳ್ರೀ

(ಗಂಡ ಮಗುವನ್ನು ಎತ್ತಿ ಕೊಳ್ಳುವನು)

ಗಂಡ :- ಓ, ಏನೇ ನಾನು ಕಾಡಿಗೆ ಬಿದರು ತರಾಕೋಕಿನಿ, ಕೂಸು ಕರ್‍ಯಾ ಬಾರೇ. . .

(ಹೆಂಡತಿ ಮಗುವನ್ನು ಎತ್ತಿಕೊಳ್ಳುವಳು)

ಹೆಂಡತಿ :- ರೀ ನಾನು ಬಿದ್ರ ಓಳು ಸೀಳಬೇಕು, ಮಗುವನ್ನು ಎತ್ತಿಕೊಳೀ್ರ.

(ಗಂಡ ಕೂಸನ್ನು ಎತ್ತಿಕೊಳ್ಳುವನು)

ಗಂಡ :- ಏನೇ ನಾನು ಏಣಿ ಬಡೀಬೇಕು ಮಗು ಅಳಕ ಹತ್ತೈತಿ ಸುಮ್ನಾ ಇರ್‍ಸು.

ಹೆಂಡತಿ :- ಅಯ್ಯಯ್ಯಾ ನಾನೇನ್ಮಾಡ್ಲಿ ಅಲ್ಲೇ ನಿಮ್ಮವ್ವನ ಕೈಯಾಗ ಕೊಟ್ಟು ಹೋಗ್ರಿ.

ಹೀಗೆ ವಿನೋದದ ಆಟವಾಡಿದ ನಂತರ ನವ ದಂಪತಿಗಳನ್ನು ಮನೆಯ ಒಳಗೆ ಕರೆದುಕೊಂಡು ಹೋಗುತ್ತಾರೆ. ಈಗಲೂ ಮತ್ತೆ ಕಾಲುತೊಳೆಯುವ ಕಾರ್ಯ ನಡೆಯತ್ತದೆ. ಈ ಸಂದರ್ಭದಲ್ಲಿ ಕಾಲನ್ನು ಹೆಂಡತಿಯ ತಮ್ಮ ತೊಳೆಯುತ್ತಾನೆ.ಮತ್ತೆ ಸಮುದಾಯದ ಸಂಪ್ರದಾಯದ ಹಾಡು ಮತ್ತು ವಿನೋದದ ಹೆಣ್ಣು ಕೇಳುವ ಮಾತುಗಳು ಕೇಳಿ ಬರುತ್ತವೆ. ನಂತರ ಸಂಬಂಧಪಟ್ಟ ಬೆಡಗಿನವರು ಐರಾಣಿ ಇಳಿಸಿ ಪದ್ದತಿಯಂತೆ ಸುರಿಗಿ ಉಡಿಯನ್ನು ತುಂಬಿಸಿಕೊಂಡು ಗೌಪ್ಯವಾಗಿ ಸುರಿಗಿಯ ಮಗಿಯನ್ನು ತೆಗೆದುಕೊಂಡು ಮರೆಯಾಗುವರು. ಸೊಸೆ ಒಂದು ಒಳ್ಳೆಯ ದಿನ ಹೊಸಮನೆಗಿತ್ತಿಯಾಗಿ ಹೋಗಿ ಬರುತ್ತಾಳೆ. ಒಂಬತ್ತು, ಹದಿನಾರನೇ ದಿವಸ ಇಲ್ಲವೇ ಮೂರನೇ ತಿಂಗಳು ತುಂಬುತ್ತಲೇ ಪದ್ಧತಿಯ ಪ್ರಕಾರ ಸೋಬನ ಕಾರ್ಯ ಮಾಡಿ ಕೊಡುತ್ತಾರೆ. ಪದ್ದತಿ ಇದ್ದವರು ಮದುವೆಯ ಅರಿಶಿಣ ಬಟ್ಟೆಗಳನ್ನು ಮನೆಯ ದೇವರ ಕ್ಷೇತ್ರಗಳಲ್ಲಿ ಬಿಟ್ಟು ಬರುವರು.

2.7 ಸೀಮಂತ :

ಹೆಣ್ಣು ಹೆಣ್ಣುತನದ ಪೂರ್ಣತೆಯನ್ನು ಮಗುವನ್ನು ಹೆರುವುದರ ಮೂಲಕ ಹೊಂದುತ್ತಾಳೆಂದು ಅನೇಕ ಬುಡಕಟ್ಟು ಸಮುದಾಯಗಳ ನಂಬಿಕೆ. ಈ ನಂಬಿಕೆಗೆ ಶಿಷ್ಟ ಸಮುದಾಯಗಳು ಸಹ ಹೊರತಾಗಿಲ್ಲ. ಈ ಹಿನ್ನೆಲೆಯಲ್ಲಿ ಹೊಸತಾಗಿ ಮದುವೆಯಾದ ಯಾವುದೇ ದಂಪತಿಗಳಿಗೆ ಹಿರಿಯರು ದೀರ್ಘಸುಮಂಗಲಿಯಾಗಿ ಬಾಳು ಎಂದು ಹರಸುವುದರ ಜೊತೆಗೆ ಅಷ್ಟ ಪುತ್ರ ಸೌಭಾಗ್ಯವತೀಭವ ಎಂದು ಹರಸುವರು. ಇದರಿಂದ ಮದುವೆ ಮೂಲ ಉದ್ದೇಶ ವಂಶಾಭಿವೃದ್ಧಿ ಎಂದು ತಿಳಿದುಬರುತ್ತದೆ. ಮೇದರು ಪ್ರಾರಂಭದಿಂದಲೇ ಗರ್ಭಿಣಿಯ ಬಗ್ಗೆ ಹೆಚ್ಚಿನ ಗಮನ ಹರಿಸುವರು. ಆದ್ದರಿಂದ ಗರ್ಭವತಿ ಆಗಿರುವುದು ಖಾತ್ರಿ ಆದನಂತರ ಬಯಕೆಯನ್ನು ತೀರಿಸುವ ಪದ್ಧತಿ ಇದೆ. ಚೊಚ್ಚಲು ಗರ್ಭಿಣಿಯರ ಬಯಕೆಯನ್ನು ತೀರಿಸದಿದ್ದರೆ, ಹುಟ್ಟುವ ಮಗು ಅನೇಕ ತೊಂದರೆಯನ್ನು ಎದರಿಸಬೇಕಾಗುತ್ತದೆ ಎಂದು ನಂಬಿದ್ದಾರೆ. ಇಲ್ಲಿ ಗರ್ಭಿಣಿಯ ಬಯಕೆ ಮತ್ತು ಅದನ್ನು ತೀರಿಸುವಿಕೆ ಬರೀ ತಿಂದುಉಣ್ಣುವುದು ಮಾತ್ರ ಆಗಿರದೇ, ಅವರ ಆದಾಯದ ಸ್ಥಿತಿಗೆ ಅನುಗುಣವಾಗಿ ವಿಭಿನ್ನವಾಗಿರುವುದು. ಚೊಚ್ಚಲು ಹೆರಿಗೆ ತವರು ಮನೆಯಲ್ಲಿಯೇ ಆಗಬೇಕೆಂಬುದು ಈ ಸಮಾಜದಲ್ಲಿ ಬೆಳೆದು ಬಂದ ಒಂದು ಪ್ರಾಚೀನ ವ್ಯವಸ್ಥೆ. ಇವಕ್ಕೆ ಹೆಣ್ಣಿನ ತವರಿನ ಬಂಧುಗಳೊಂದಿಗಿರುವ ಬಹು ಬೇಗನೇ ಮರೆಯಲಾಗದ ಸಂಬಂಧವೇ ಕಾರಣ. ಹೆರಿಗೆಗೆ ತವರಿಗೆ ಹೋಗುವ ಸಂಭ್ರಮ ಸಮಾಜದ ಪ್ರತಿಯೊಂದು ಸಮುದಾಯದ ಹೆಣ್ಣಿನ ಬಹುದಿನಗಳ ಕನಸಾಗಿರುತ್ತದೆ. ಈ ಕನಸು ಸೀಮಂತ ಕಾರ್ಯದಂತಹ ಆಚರಣೆಯ ಮೂಲಕ ನೆರವೇರುತ್ತದೆ. ಮೇದರು ಸೀಮಂತ ಕಾರ್ಯವನ್ನು ಅವರ ಆರ್ಥಿಕ ಸ್ಥಿತಿಗನುಗುಣವಾಗಿ ಮಾಡುತ್ತಾರೆ. ಸಾಮಾನ್ಯವಾಗಿ ಗರ್ಭಿಣಿಗೆ ಐದು, ಏಳು, ಎಂಟು ಮತ್ತು ಒಂಬತ್ತು ತಿಂಗಳು ತುಂಬುವ ಮುನ್ನ ಸೀಮಂತ ಕಾರ್ಯ ಮಾಡುವರು. ಸೀಮಂತ ಕಾರ್ಯ ಪ್ರತಿಯೊಂದು ಹೆಣ್ಣಿನ ಜೀವನದ ಹೆಣ್ತನದ ಪೂರ್ಣತೆಯನ್ನು ಮೆರೆಸುತ್ತದೆ.

ಸೀಮಂತ ಕಾರ್ಯದ ದಿನ ಹೆಣ್ಣಿನ ತವರು ಮನೆಯವರು ಅವರ ಯೋಗ್ಯಾನುಸಾರ ಸಕಲ ಸಿದ್ಧತೆಯೊಂದಿಗೆ ಬರುತ್ತಾರೆ. ಬೆಳಗಿನಹೊತ್ತು ಗರ್ಭಿಣಿಗೆ ಮತ್ತು ಮುತ್ತೈದೆಯರಿಗೆ ಬಳೆಹಾಕಿಸುವ ಶಾಸ್ತ್ರಮಾಡಿ, ತವರು ಮನೆಯವರು ತಂದ ಬಯಕೆಯ ಬುತ್ತಿಯ ತಿನಿಸುಗಳನ್ನು ಬೇಕಾದವರಿಗೆ ಹಂಚುವರು. ಮಧ್ಯಾಹ್ನ ಅಥವಾ ಮುಸ್ಸಂಜೆಗೆ ಗರ್ಭಿಣಿ ಹೆಂಗಸನ್ನು ಸ್ನಾನ ಮಾಡಿಸಿ ತವರಿನವರು ತಂದ ಸೀರೆಯನ್ನು ಉಡಿಸಿ ಅಲಂಕಾರ ಮಾಡಿ ಹೂವಿನದಂಡಿ, ಅಂಗನೂಲು ಹಾಕಿ, ಕಂಕಣ ಕಟ್ಟಿ ಕೂಡಿಸುತ್ತಾರೆ. ಪದ್ಧತಿ ಇದ್ದರೆ ಜೊತೆಗೆ ಗಂಡನನ್ನು ಸಹ ಕೂಡಿಸುವರು. ಓಣಿಯ ಹೆಂಗಸರನ್ನೆಲ್ಲ ಕರೆಯುವರು. ಮೊದಲು ತವರಿನ ಕಡೆಯವರು ಗರ್ಭಿಣಿ ಹೆಂಗಸಿಗೆ ಉಡಿ ತುಂಬಿ ಶಾಸಕ್ಕಿ ಇಟ್ಟು ಆರತಿ ಮಾಡಿ, ಸಾಧ್ಯವಾದರೆ ಬಟ್ಟೆ-ಬಂಗಾರವನ್ನು ಉಡುಗೊರೆಯಾಗಿ ಕೊಡುವರು. ನಂತರ ಬಂದಂತಹ ಬಂಧು ಮಿತ್ರರು ಅರಿಶಿಣ ಕುಂಕುಮ ಹಚ್ಚಿ ಕಣ,ಸೀರೆ, ಇಲ್ಲವೇ ಬೇರೆ ಉಡುಗೊರೆ ಕೊಟ್ಟು ಆರತಿ ಮಾಡುತ್ತಾರೆ. ಈ ಸಂದರ್ಭದಲ್ಲಿ

ಸಂದರ್ಭೋಚಿತ ಸಂಪ್ರದಾಯದ ಹಾಡುಗಳನ್ನು ಹಾಡುತ್ತಾರೆ. ಅವುಗಳ ಕೆಲವು ನುಡಿಯ ತುಣುಕುಗಳನ್ನು ಇಲ್ಲಿ ಗಮನಿಸಬಹುದು:

- ಬಾಲೆ ನಮ್ಮ ಮಗಳು ಬಸುರಾದಳೆಂದೂ
  ಬಯಕೆಯ ಬುತ್ತೀಯ ತಂದೇವು ಇಂದು.
  ಬಾರಮ್ಮಾ ಬಾ ಮಗಳೇ ಊಟಾವ ಮಾಡು
  ಹಿಂಗಾಬಾಲಾನ ಬಯಕೇಯ ಬೇಗದಲಿ ತಿನ್ನೇ ಜೋ. . . .ಜೋ . . . .
- ಎಳ್ಳು ಹಚ್ಚಿದ ಸಜ್ಜಿಯ ರೊಟ್ಟಿ ಎಳೆಯ ಮುಳ್ಳಗಾಯಿ ಪಲ್ಲೆ
  ಹೊಳೆಯಾ ದಂಡೇಲಿ ಕುತುಗಂಡುಣ್ಣಂಗಾಗ್ಯಾವರೀ
  ಬಾಲಾನ ಬಯ ಕೀಲೀ ಬಗುಸಂಗಾಗ್ಯಾವರೀ
  ಹಸಿರು ಕಡ್ಡಿಯ ಸೀರೆಯನುಟ್ಟು ಹಸನವೆರಡು ವಂಕಿಯನಿಟ್ಟು
  ಬಿಸಲೀಗೆ ತೋಳು ಮಾಡಿ ನಡಿಯಂಗಾಗ್ಯಾವರೀ
  ಬಾಲಾನ ಬಯಾಕಿಲೇ ಬಗುಸಂಗಾಗ್ಯಾವರೀ.

(ಹೆಚ್ಚಿನವನ್ನು ಅನುಬಂಧದಲ್ಲಿ ನೀಡಲಾಗಿದೆ)

ಹೀಗೆ ಉಣ್ಣುವ, ಉಡುವ ಮತ್ತು ತೊಡುವ ಕುರಿತಂತೆ ಸೀಮಂತ ಕಾರ್ಯದಲ್ಲಿ ಇಂತಹ ಅನೇಕ ಸಂಪ್ರದಾಯದ ಹಾಡುಗಳನ್ನು ಹಾಡುವುದು ದೇಶೀಯ ಮತ್ತು ಸಮುದಾಯದ ಸಂಸ್ಕೃತಿಯ ಹಿರಿಮೆಯನ್ನು ಮೆರೆಸುತ್ತದೆ. ನಂತರ ಬಂದವರಿಗೆಲ್ಲ ವೀಳ್ಯ ಮರ್ಯಾದೆ ಇಲ್ಲವೇ ಊಟವನ್ನು ಸಹ ಮಾಡಿಸುತ್ತಾರೆ. ಕೊನೆಗೆ ಓರ್ವ ಮುತ್ತೈದೆ ಎಲೆಯನ್ನು ಸುಟ್ಟು ದೃಷ್ಟಿಯ ಬೊಟ್ಟು ಇಡುತ್ತಾಳೆ. ಕೊನೆಗೆ ಉಡಿ ಅಕ್ಕಿ ಸಡಿಲಿಸಿ ನಿವಾಳಿ ತೆಗೆಯುವರು. ಸೀಮಂತ ಕಾರ್ಯದ ಸಂಪೂರ್ಣ ಖರ್ಚು ತವರಿನವರೇ ಭರಿಸುವುದು ಮೇದರಲ್ಲಿ ಕಂಡು ಬರುತ್ತದೆ. ಮಾರನೆಯ ದಿವಸ ಗರ್ಭಿಣಿಯನ್ನು ಹೆರಿಗೆಗೆ ತವರಿಗೆ ಕರೆದುಕೊಂಡು ಹೋಗುತ್ತಾರೆ. ದಿನ ತುಂಬಿರದಿದ್ದರೆ, ನಾಲ್ಕು ದಿನ ಇದ್ದು ಮತ್ತೆ ಗಂಡನ ಮನೆಗೆ ಹಿಂತಿರುಗುವಳು. ದಿವಸ ತುಂಬಿದ ನಂತರ ಹೆರಿಗೆಗೆ ತವರಿಗೆ ಹೋಗುತ್ತಾಳೆ.

"ಕೆಲವು ಪ್ರದೇಶದಲ್ಲಿ ಈ ದಿವಸ ಗಂಡ ಹೆಂಡಿರನ್ನು ಮಣಿ ಹಾಕಿ ಕೂಡ್ರಿಸುತ್ತಾರೆ. ಮಣೆಯ ಮೇಲೆ ಹೊಸ ಬಟ್ಟೆ ಹಾಕಿರುತ್ತಾರೆ. ಆದಿನ ಮಲೆನಾಡ ಪ್ರದೇಶದ ಮೇದರು ಹಾಲಿನ ಹಿಟ್ಟು ತಮುಟ, ತಂಬಿಟ್ಟು, ಉಂಡಿಯನ್ನು ಮಾತ್ರ ಕೊಡುತ್ತಾರೆ."[5] ಇದರಿಂದ ಇವರು ಆಚರಿಸುವ ಸೀಮಂತ ಕಾರ್ಯದಲ್ಲಿ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಈ ಎಲ್ಲಾ ಆಚರಣೆಗಳು ವಿರಳವಾಗಿವೆ. ಬಸುರಿಗೆ ತವರಿನವರು ತಂದ ಸೀರೆ ಉಡಿಸಿ ದೇವಸ್ಥಾನಕ್ಕೆ

ಕರೆದುಕೊಂಡು ಹೋಗಿ ಬಂದು ಮಾರನೆಯ ದಿವಸ ಹೆರಿಗೆಗೆ ತವರಿಗೆ ಕರೆದುಕೊಂಡು ಹೋಗುವುದು ಕಂಡುಬರುತ್ತದೆ.

2.8 ಸಾವು- ಸಂಸ್ಕಾರ :

ಭೂಮಿಯ ಮೇಲೆ ಜನ್ಮತಾಳಿದ ಎಲ್ಲಾ ಜೀವಿಗಳಿಗೆ ಹುಟ್ಟು ಎಷ್ಟು ಮುಖ್ಯವೋ ಸಾವು ಕೂಡ ಅಷ್ಟೇ ಅನಿವಾರ್ಯ ವಾಗಿದೆ. ಪ್ರಾಚೀನ ಕಾಲದಿಂದಲೂ ಮಾನವ ಸಾವಿನ ಭೀಕರತೆಗೆ ಹೆದರಿದ್ದಾನೆ. ಸಾವಿನಾಚೆಯನ್ನು ಕುರಿತು ಚಿಂತಿಸುತ್ತಿರುವನು. ಸಾವಿಗೆ ದೇಹ ಮತ್ತು ಆತ್ಮವೆಂಬ ಎರಡು ಪ್ರತ್ಯೇಕ ಕಲ್ಪನೆಗಳ ಮೇಲೆ ಸಾಕ್ಷಾತ್ಕಾರ ಮತ್ತು ಪುನರ್‌ಜನ್ಮದ ಅರ್ಥ ಕಲ್ಪಿಸಿದ್ದಾನೆ. ಇದಕ್ಕೆ ತಾನು ನಂಬಿದ ನೆಲೆಗಟ್ಟುಗಳ ಮೇಲೆ ಉತ್ತರವನ್ನು ಕಂಡುಕೊಂಡು ಸಮಾಧಾನ ಪಟ್ಟುಕೊಳ್ಳುವನು. ಮಾನವನ ಜೀವಿತದ ಅವಧಿಯಲ್ಲಿ ಎದುರಾಗುವ ಅನೇಕ ಭೌತಿಕ, ಜೈವಿಕ, ಮತ್ತು ನೈಸರ್ಗಿಕ ಬದಲಾವಣೆಗಳಿಗೆ ತನ್ನದೇ ಆದ ಆಚಾರ ಮತ್ತು ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿದ್ದಾನೆ. ಇಂತಹ ಆಚರಣೆಗಳು ಸಮುದಾಯದಿಂದ ಸಮುದಾಯದಕ್ಕೆ ಮತ್ತು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿರುತ್ತವೆ. ವಿಶೇಷವಾಗಿ ಬುಡಕಟ್ಟು ಸಮುದಾಯಗಳಲ್ಲಿ ಸಾವಿನ ಸಂದರ್ಭದ ಆಚರಣೆಗಳು ತನ್ನ ಮೂಲತನವನ್ನು ಉಳಿಸಿಕೊಂಡು ಬಂದಿವೆ. ಬುಡಕಟ್ಟಿಗರು, ಸಾವಿನ ಸಂದರ್ಭದ ಆಚರಣೆಗಳನ್ನು ಇತರೆ ಆಚರಣೆಗಳಿಗಿಂತ ಕಟ್ಟು ನಿಟ್ಟಾಗಿ ಪಾಲಿಸುತ್ತಾರೆ. ಸತ್ತ ವ್ಯಕ್ತಿಯ ದೇಹವನ್ನು ಭೌತಿಕವಾಗಿ ನಾಶಮಾಡುವಾಗ ಅದಕ್ಕೆ ಸಲ್ಲಿಸುವ ಗೌರವವೇ ಅಂತಿಮ ಸಂಸ್ಕಾರ. ಮತ್ತು ಈ ಸಂದರ್ಭದ ಕ್ರಿಯೆಗಳೇ ದೇಹ ಸಂಸ್ಕಾರದ ಆಚರಣೆಗಳಾಗಿವೆ. ದೇಹ ಸಂಸ್ಕಾರದ ನಂತರ ಮೃತನ ಆತ್ಮ ಶಾಂತಿಗಾಗಿ ಉತ್ತರ ಕ್ರಿಯೆಗಳನ್ನು ಆಚರಿಸುತ್ತಾರೆ. ಸಾವಿನ ನಂತರ ಸಾಕ್ಷಾತ್ಕಾರ, ಭೂತ, ಪ್ರೇತ ಮತ್ತು ದೆವ್ವಗಳ ಬಗ್ಗೆ ಇವರಿಗೆ ಇರುವ ನಂಬಿಕೆಗಳು ಇವರ ಆಚರಣೆಗಳಿಂದ ತಿಳಿದು ಬರುತ್ತವೆ. ಮೇದರು ಮೃತನ ದೇಹವನ್ನು ಭೌತಿಕವಾಗಿ ನಾಶಮಾಡಲು ಹೂಳುವರು. ವಿಶೇಷ ಸಂದರ್ಭದಲ್ಲಿ ಮಾತ್ರ ಸುಡುತ್ತಾರೆ. ಮೇದರ ಸಾವಿನ ಸಂದರ್ಭದ ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ ಸ್ವಲ್ಪ ಭಿನ್ನವಾಗಿ ಕಂಡು ಬಂದರೂ ಸಹ ಏಕರೂಪತೆಯ ಹೋಲಿಕೆ ಕಂಡು ಬರುತ್ತದೆ. ಇಲ್ಲಿ ಈ ಸಂದರ್ಭದ ಆಚರಣೆಗಳನ್ನು ಕುರಿತಂತೆ ಬಳ್ಳಾರಿ, ಗುಲ್ಬರ್ಗ, ಕೊಪ್ಪಳ, ರಾಯಚೂರು, ದಾವಣಗೆರೆ ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿ ವೀಕ್ಷಿಸಿ ಮತ್ತು ಕೆಲವುಸಾರಿ ವಕ್ತೃಗಳಿಂದ ಮಾಹಿತಿ ತಿಳಿದು ವಿಷಯವನ್ನು ಇಲ್ಲಿ ಹೇಳಲಾಗಿದೆ.

ಮೇದರು ಸಾವಿನ ಹಾಸಿಗೆಯಲ್ಲಿ ಮಲಗಿರುವ ವ್ಯಕ್ತಿಯ ಸಾವನ್ನು ನಿರೀಕ್ಷಿಸಿ ಹೊರಗೆ ಹಾಕುವುದಿಲ್ಲ. ಏಕೆಂದರೆ ಇತರೆ ಕೆಲವು ಬುಡಕಟ್ಟು ಸಮುದಾಯಗಳಲ್ಲಿ ಸಾವನ್ನು ನಿರೀಕ್ಷಿಸಿ ವ್ಯಕ್ತಿಯ ದೇಹವನ್ನು ಹೊರಗೆ ಹಾಕುವರು. ಸಾಯುತ್ತಿರುವ ವ್ಯಕ್ತಿಯ ಬಾಯಿಗೆ ಬಂಧುಗಳು ನೀರು ಬಿಡುವರು. ವ್ಯಕ್ತಿಯು ಸತ್ತ ತಕ್ಷಣ, ಬೀಗರಾದವರು ಇಲ್ಲವೇ ಬೀಗರ ಬೆಡಗಿನವರು ಬಂದು, ಹೆಣದ ಮೈ ತೊಳೆದು ಪಂಚೆ ಉಡಿಸಿ, ಅಂಗಿಯನ್ನು ತಿರುವಿ(ಉಲ್ಟಾ) ಉಡಿಸಿ

ಸಿಪಾಯಿ ಕಟ್ಟಿಗೆ ಯಿಂದ ಗುಂಟಿಗೆ ಬಡಿದು ಕೂಡಿಸುತ್ತಾರೆ. ಬಾಯಿಯಲ್ಲಿ ತಾಂಬೂಲ ಕುಟ್ಟಿಟ್ಟು ಸಾಧ್ಯವಾದರೆ, ಸ್ವಾಮಿಯನ್ನು ಕರೆಯಿಸಿ ಪೂಜೆ ಮಾಡಿಸುತ್ತಾರೆ. ಇಲ್ಲವಾದರೆ ತಾವೇ ಯಾರಾದರೊಬ್ಬರು ಪೂಜೆ ಮಾಡುವರು. ಇಲ್ಲಿ ಹೆಣಕ್ಕೆ ಪೂಜೆ ಸಲ್ಲಿಸುವಾಗ ಕೆಲವು ಪ್ರದೇಶಗಳಲ್ಲಿ ಎಡಗೈಯಿಂದ ಪೂಜೆ ಮಾಡುವ ಪದ್ಧತಿಯು ಕಂಡು ಬರುತ್ತದೆ. ಮರಣದ ಸುದ್ದಿಯನ್ನು ನಿಗದಿತ ಬೆಡಗಿನ ವ್ಯಕ್ತಿಗಳೇ ಇತರರಿಗೆ ತಿಳಿಸುವ ಪದ್ಧತಿ ಇವರಲ್ಲಿ ಇಲ್ಲ. ಯಾರಾದರೂ ಈ ಸುದ್ದಿಯನ್ನು ತಿಳಿಸಬಹುದು . ದೂರದ ಊರಿನವರಿಗೆ ಸುದ್ದಿ ತಿಳಿಸುವಾಗ ಪತ್ರದ ನಾಲ್ಕು ಮೂಲೆಗಳಿಗೆ ಕಪ್ಪು ಮಸಿ ಬಳಿದು ಪತ್ರ ಹಾಕುತ್ತಾರೆ. ಮರಣ ಹೊಂದಿದ ವ್ಯಕ್ತಿಯ ಹೆಂಡತಿ ಬದುಕಿದ್ದರೆ, ಮುತ್ತೈದೆತನದ ಅಂತಿಮ ಕ್ರಿಯೆಗಳನ್ನು ಮಾಡುವರು. ತವರು ಮನೆಯವರು ರಂಡೆ ಸೀರೆಯನ್ನು ಮತ್ತು ಉಡಕ್ಕಿ ಸಾಮಾನು ತಂದು, ಹೆಂಡತಿಗೆ ತವರಿನ ಸೀರೆಯನ್ನು ಉಡಿಸಿ ಹೆಣದ ಎಡಗಡೆಗೆ ಕೂಡಿಸುವರು. ಕಂಕಣ ಕಟ್ಟಿ , ದಂಡಿ ಮತ್ತು ಉಡಿ ಅಕ್ಕಿ ಹಾಕಿ, ಅರಿಸಿಣ ಕುಂಕುಮ ಹಚ್ಚಿ ಐದು ಮಂದಿ ಮುತ್ತೈದೆಯರು ಕಳಸ ಬೆಳಗುತ್ತಾರೆ. ಇದು ಇವಳ ಮುತ್ತೈದೆತನದ ಕೊನೆಯ ಮಂಗಲ ಕಾರ್ಯವಾಗಿದೆ. ಈ ಸಂದರ್ಭದಲ್ಲಿ ಹೆಂಡತಿ ಆದವಳು ತವರಿನವರಿಗೆ ವೀಳ್ಯ ಕೊಟ್ಟು ಋಣ ಮುಟ್ಟಿತು ನೋಡ್ರಿ, ಎಂದು ಹೇಳುತ್ತಾಳೆ. ಕೆಲವು ಪ್ರದೇಶಗಳಲ್ಲಿ ಹೆಣ್ಣಿನ ಸಹೋದರ ಬೆಡಗಿನವರೆಲ್ಲ ಅವಳಿಗೆ ತವರಿನ ಕೊನೆಯ ಸೀರೆಯನ್ನು ತರುವ ಪದ್ಧತಿ ಇದೆ. ಪ್ರದೇಶಾನುಸಾರ, ವಾದ್ಯ ಇಲ್ಲವೇ ಹಲಗೆ ಬಾರಿಸುತ್ತಾರೆ. ಶವಸಂಸ್ಕಾರಕ್ಕೆ ಬಂದವರು ಶವಕ್ಕೆ ಕಾಯಿ ಹೊಡೆದು ಪೂಜಿಸುವರು. ಶವಕ್ಕೆ ಅಂತಿಮ ಪೂಜೆಸಲ್ಲಿಸಿ, ಸಿದಿಗಿಯಲ್ಲಿ ಮಲಗಿಸಿ ಇಲ್ಲವೇ ಕೈವಲ್ಲೆಯಲ್ಲಿ ಕೂಡಿಸಿಕೊಂಡು ಸ್ಮಶಾನಕ್ಕೆ ಹೊತ್ತೊಯ್ಯುತ್ತಾರೆ. ಹೆಣ ಹೊರುವ ಸಿದಿಗಿ ಅಥವಾ ಕೈವಲ್ಲೆಯನ್ನು ಬೀಗರ ಬೆಡಗಿನ ಡಿಪ್ಪೋದಿಂದಲೇ ಬಿದಿರು ತಂದು ಬೀಗರೇ ತಯಾರಿಸುವರು. ಮರಣ ಹೊಂದಿದ ವ್ಯಕ್ತಿ ಗುರುಭೋದ ತೆಗೆದುಕೊಂಡಿದ್ದರೆ ಸ್ವಾಮಿಗಳಿಂದಲೇ ಅಂತಿಮ ಪೂಜೆ ಮಾಡಿಸಿ ಕೈವಲ್ಲೆಯಲ್ಲಿ ಹೊತ್ತೊಯ್ಯುತ್ತಾರೆ. ಇವರಿಗೆ ಕ್ರಿಯಾ ಸಮಾಧಿ ಮಾಡುತ್ತಾರೆ. (ಕ್ರಿಯಾ ಸಮಾದಿ; ವಿಭೂತಿಯಿಂದಲೇ ಶವವನ್ನು ಹೂಳುವುದು.) ಇಲ್ಲವಾದರೆ ಅಂತಿಮ ಪೂಜೆಯನ್ನು ಋಣ ಕೊಡುವ ಹಿರಿಯಮಗ ಇಲ್ಲವೇ ಕೊನೆಯ ಮಗ ಪೂಜಿಸುತ್ತಾನೆ.ಶವಕ್ಕೆ ಅಂತಿಮ ಪೂಜೆಯನ್ನು ಸಲ್ಲಿಸಿದ ತಕ್ಷಣ ಬೀಗರಾದವರು ಶವವನ್ನು ತಂದು ಸಿದಿಗಿಯ ಮೇಲೆ ಮಲಗಿಸಿ ಒಂದು ಹೊಸಬಟ್ಟೆಯನ್ನು ಹೊದಿಸಿ ಕಟ್ಟುತ್ತಾರೆ. ಹೂವಿನ ಮಾಲೆಗಳನ್ನು ಶವದ ಮೇಲೆ ಹಾಕಿಕೊಂಡು ಮೊದಲು ಬೀಗರಾದವರು ಶವಕ್ಕೆ ಹೆಗಲು ಕೊಡುತ್ತಾರೆ. ಸ್ವಲ್ಪ ದೂರ ಹೋದ ಕೂಡಲೇ ಮತ್ತೆ ಬೇರೆಯವರು ಹೆಣಕ್ಕೆ ಹೆಗಲು ಕೊಡುವರು. ಓರ್ವನು ಹೆಣದ ಮುಂದೆ ಉಪ್ಪು ಮೆಣಸಿನ ಕಾಯಿ ಮೊರದಲ್ಲಿ ಹಾಕಿಕೊಂಡು ಹೊರಟಿರುತ್ತಾನೆ. ಇವನ ಹಿಂದೆ ಮೇಳದವರು ಮತ್ತು ಜನ ಹೊರಟಿರುತ್ತಾರೆ. ಋಣ ಕೊಡುವ ವ್ಯಕ್ತಿ ಹೆಣದ ಮುಂದೆ ಒಂದು ಮಗಿಯಲ್ಲಿ ನೀರು ಮತ್ತು ಮಣ್ಣಿನ ಮುಚ್ಚಳದಲ್ಲಿ ಬುತ್ತಿ (ಅನ್ನ, ಮೊಸರು) ಹಿಡಿದು ನಡೆಯುತ್ತಾನೆ. ಹೆಣದ ಹಿಂದೆ ಒಬ್ಬ ವಿಧವೆ ಉಡಿಯಲ್ಲಿ ನವಣೆ, ಮಂಡಕ್ಕಿ, ವೀಳ್ಯದ ಎಲೆಗಳನ್ನು ಕಟ್ಟಿ ಕೊಂಡು ಚಲ್ಲುತ್ತಾ ಸಾಗುವಳು. ನಡುಗಡ್ಡೆಯಲ್ಲಿ ಹೆಣವನ್ನು ಕೆಳಗಿಳಿಸಿ, ಋಣಕೊಡುವ ವ್ಯಕ್ತಿ ಹೆಣವನ್ನು ಮೂರು ಸಾರೆ ಎಡಸುತ್ತು ಹಾಕಿ ಬುತ್ತಿಯ ಮುಚ್ಚಳವನ್ನು ಹೆಣದ ತಲೆದಿಂಬಿಗೆ

ಬೋರಲುಹಾಕಿ ಎಡಗಾಲಿನಿಂದ ತುಳಿಯುತ್ತಾನೆ. ಇಲ್ಲಿ ಹೆಣದ ಬಾಯಿಗೆ ಎಳ್ಳು, ನೀರು, ದುಡ್ಡು ಹಾಕುವ ಪದ್ಧತಿ ಈ ಸಮುದಾಯದಲ್ಲಿ ಕಂಡು ಬರುವುದಿಲ್ಲ. ಮತ್ತೆ ಮೊದಲು ಹೆಗಲುಗೊಟ್ಟ ಬೀಗರ ಕಡೆಯವರೇ ಹಿಂದೆ-ಮುಂದಾಗಿ, ಎಡ-ಬಲ ಬದಲಿಸಿ ಹೆಣವನ್ನು ಹೊತ್ತುಸಾಗುತ್ತಾರೆ.ಇಲ್ಲಿಂದ ಬೇರೆಯವರು ಹೆಣವನ್ನು ಹೊರುವಂತಿಲ್ಲ. ಸ್ಮಶಾನದವರೆಗೆ ಇವರೇ ಹೊತ್ತು ಸಾಗಬೇಕು. ಮೊದಲೇ ಸಿದ್ದಪಡಿಸಿದ ಹೆಣ ಹೂಳುವ ಗುಂಡಿಯ ಹತ್ತಿರ ತಂದು ಗುಂಡಿಯ ಎಡ ಭಾಗಕ್ಕೆ ಹೆಣವನ್ನು ಇಳಿಸಿ, ಹೆಣವನ್ನು ಹೊತ್ತು ತಂದ ಸಿದಿಗಿಯನ್ನು ಬೋರಲು ಎಸೆಯುತ್ತಾರೆ. ಹೆಣಕ್ಕೆ ಮತ್ತೊಮ್ಮೆ ಪೂಜೆ ಸಲ್ಲಿಸಿ, ಎಲ್ಲರೂ ಹೊನ್ನಾಂಬರಿ ಹೂವು ಅಥವಾ ಲೆಕ್ಕೆಪತ್ರಿ ಇಲ್ಲವೇ ಹೂವು ಪತ್ರಿಯನ್ನು ಹೆಣಕ್ಕೆ ಹಾಕುವರು. ಋಣ ಕೊಟ್ಟವನು ನೀರಿನ ಬಿಂದಿಗೆಯನ್ನು ಹೆಗಲ ಮೇಲೆ ಹೊತ್ತು, ಹೆಣವನ್ನು ಬಲಕ್ಕೆ ಮಾಡಿಕೊಂಡು ಮೂರು ಸುತ್ತು ಪ್ರದಕ್ಷಿಣೆ ಹಾಕುವನು. ಬೀಗರಾದವರು ಸುತ್ತಿಗೊಂದರಂತೆ ಬಿಂದಿಗೆಗೆ ಮೂರು ರಂಧ್ರ ಹಾಕುತ್ತಾರೆ.ಮೂರನೆಯ ಬಾರಿ ಬಿಂದಿಗೆಯನ್ನು ಹಿಂಬರಿಕೆಯಿಂದ ಕೈಬಿಟ್ಟು ಹೆಣದ ಕಾಲುದೆಸೆಯಲ್ಲಿ ಬಂದು ಕೂಡುತ್ತಾನೆ. ಹಿರಿಯರಾದವರು ಹೆಣಕ್ಕೆ ಸುತ್ತಿದ ರುಮಾಲನ್ನು (ಪೇಟವನ್ನು) ತೆಗೆದುಕೊಂಡು ಋಣ ಕೊಟ್ಟವನ ತಲೆಯ ಮೇಲಿಟ್ಟು, ಇನ್ನು ಮುಂದೆ ಈ ಮನೆಯ ಸಂಪೂರ್ಣ ಜವಾಬ್ದಾರಿ ನಿನ್ನದೇ, ಎಲ್ಲವನ್ನು ಸಹಿಸಿಕೊಂಡು ಹೋಗು ಎಂದು ಮಾರ್ಗದರ್ಶನ ನೀಡುತ್ತಾರೆ. ಇದು ಒಂದು ರೀತಿಯಲ್ಲಿ ಹಿಂದೂ ಅವಿಭಕ್ತ ಕುಟುಂಬದ ಪದ್ಧತಿಯ ಪ್ರಕಾರ ಕುಟುಂಬದ ಮುಂದಿನ ಯಜಮಾನಿಕೆಯ ಜವಾಬ್ದಾರಿಯನ್ನು ಹೊರಿಸುವಿಕೆಯಾಗಿದೆ.

ಸ್ಮಶಾನ ವೈರಾಗ್ಯದಿಂದಾಗಿ ಮನುಷ್ಯ ಇಂತಹ ಸಂದರ್ಭದಲ್ಲಿ ಏನೆಲ್ಲ ಕಷ್ಟ ಸಂಕಟ, ಮರೆತು ಕುಟುಂಬದ ಭಾವೈಕ್ಯತೆಗೆ ಮುಂದಾಗುತ್ತಾನೆ. ಈ ಜವಾಬ್ದಾರಿಯನ್ನು ಹೋರುವ ಮಾತು ಕೊಟ್ಟ ನಂತರ ಈತನು ತಿರುಗಿ ನೋಡದೇ ಮನೆಗೆ ಬಂದು ಸ್ನಾನ ಮಾಡಿ, ಮನೆಯ ಬಾಗಿಲಲ್ಲಿ ಹಣತೆಯಲ್ಲಿ ದೀಪ ಹಚ್ಚಿಡುತ್ತಾನೆ. ಇತ್ತ ಸ್ಮಶಾನದಲ್ಲಿ ಹೆಣ ಹೊತ್ತವರು ಗುಂಡಿಯಲ್ಲಿ ಹೆಣವನ್ನು ಇಳಿಸಿ ಅಂಗಾತ ಮಲಗಿಸುತ್ತಾರೆ. (ಮೃತನು ಮದುವೆಯಾಗಿದ್ದರೆ, ಅಂಗಾತ ಮಲಗಿಸುತ್ತಾರೆ, ಇಲ್ಲವೇ ಕಿರುಕೋಣೆಯಲ್ಲಿ ಕೂಡ್ರಿಸಿ ಸಿಪಾಯಿ ಕಟ್ಟಿಗೆಯಿಂದ ಗುಂಟಿಗೆ ಬಡಿಯುತ್ತಾರೆ.) ಸತ್ತವನು ವಿದುರನಾಗಿದ್ದರೆ ಮಗ್ಗುಲು ಮಲಗಿಸುತ್ತಾರೆ. ಮದುವೆ ಆಗದವರಾಗಿದ್ದರೆ, ಬೋರಲು ಮಲಗಿಸುವರು. ಬಾಣಂತಿಯಾಗಿದ್ದರೆ, ಎಡಗಾಲಿನ ಹಿಂಬಡಿಯ ನರ ಕತ್ತರಿಸಿ ಮಲಗಿಸುವರು. ಹೆಣಕ್ಕೆ ಈ ಸಂದರ್ಭದಲ್ಲಿ ಮತ್ತೆ ಎಡಗೈಯಿಂದ ಪೂಜಿಸಿ, ಮುತ್ತೈದೆಯರು ಆಚೆಗೆ ಹೋಗಲು ಸೂಚನೆಕೊಟ್ಟು ಮೃತನ ಹೆಂಡತಿಯ ಮಂಗಲ ದ್ರವ್ಯಗಳನ್ನು ಹೆಣದ ಮೇಲೆ ತೆಗೆಯುತ್ತಾರೆ. (ಈ ಕಾರ್ಯವನ್ನು ವಿಧವೆಯರು ಮಾಡುತ್ತಾರೆ.) ರಂಡೆತನ ಹೊಂದಿದ ವಿಧವೆಗೆ ತವರಿನವರು ಉಡಿಸಿದ ಹೊಸ ಸೀರೆಯನ್ನು ಬಿಡಿಸಿ, ಬೇರೆ ಸೀರೆಯನ್ನು ಉಡಿಸಿಕೊಂಡು ಮುಖ ಮುಚ್ಚಿಸಿ ಕೊಂಡು ವಿಧವೆಯರು ಮನೆಗೆ ಕರೆದುಕೊಂಡು ಹೋಗುವರು. ಕೆಲವು ಪ್ರದೇಶಗಳಲ್ಲಿ ಹೆಣದ ಮೈ ಮೇಲಿನ ಬಟ್ಟೆಗಳನ್ನು ಹರಿದು ದಿಗಂಬರ ಮಾಡಿ, ಮೇಲೆ ಹೂವು ತೊಪ್ಪಲ ಹಾಕಿ, ಮಣ್ಣು ಹಾಕುತ್ತಾರೆ. ಸಲಕಿಯಿಂದ ಮಣ್ಣು ಹಾಕುವಾಗ ಮಣ್ಣನ್ನು ಎರಡೂ ಕಾಲು ಸಂದಿನಿಂದ ತೆಗ್ಗಿಗೆ ಎಳೆಯುವುದಿಲ್ಲ. ನಂತರ ಎಲ್ಲರೂ ಹೆಣದ ಮೇಲೆ

ಮೂರು ಬೊಗಸೆ ಮಣ್ಣು ಹಾಕಿ ಮಣ್ಣಿನ ರುಣ ಮುಟ್ಟಿಸಿ ಮನೆಗೆ ಹಿಂದಿರುಗುವರು.ಬೀಗರಾದವರು ಮೃತನ ಮನೆಗೆ ಬಂದು ದೀಪ ನೋಡಿ ವಿಷಬಾಯಿಯನ್ನು ತೊಳೆಸಿ ಸಂಜೆಯ ದೀಪವನ್ನು ನೋಡದೇ ಮತ್ತು ಸೂಚನೆಯನ್ನು ಕೊಡದೇ ಹೊರಟು ಹೋಗುತ್ತಾರೆ. ಇದ್ದ ಊರಿನ ಬೀಗರ ಬೆಡಗಿನವರು ಅಥವಾ ಬೀಗರು ಆ ದಿವಸದ ಊಟ ತಿಂಡಿಯ ವ್ಯವಸ್ಥೆಯನ್ನು ಮಾಡುತ್ತಾರೆ.

2.8.1ಮೂರಿಂಡಿಕೂಳು(ಮೂರುದಿನದ ಕಾರ್ಯ ಮತ್ತು ಹೊಲಿ ತೆಗೆಯುವುದು):

ಸತ್ತ ಮೂರನೆಯ ದಿವಸ ಋಣ ಕೊಟ್ಟವನು ಕ್ಷೌರಿಕನನ್ನು ಕರೆಯಿಸಿ ಯಾರಿಗೂ ಕಾಣಿಸದಂತೆ ತಲೆ ಬೋಳಿಸಿಕೊಳ್ಳುತ್ತಾನೆ. ಋಣ ಕೊಟ್ಟ ಕೂದಲನ್ನು ಸಾಯಂಕಾಲ ಸ್ಮಶಾನಕ್ಕೆ ತೆಗೆದುಕೊಂಡು ಹೋಗಲು ತೆಗೆದಿರಿಸುತ್ತಾರೆ. ಅಂದಿನಿಂದ ಋಣ ಕೊಟ್ಟವನು ಹೊಲಿ ತೆಗೆಯುವ ತನಕ ಮನೆಯಿಂದ ಹೊರಗೆ ಹೋಗುವುದಿಲ್ಲ. ಅದೇ ದಿವಸ ಮೃತನು ಪ್ರಾಣ ಬಿಟ್ಟ ಜಾಗದಲ್ಲಿ ಒಂದು ಕೋಳಿಯನ್ನು ಕೊಯ್ದು ಅದರ ರಕ್ತವನ್ನು ನೆಲಕ್ಕೆ ಬಿಡುವರು. ಕೋಳಿಯ ಮಾಂಸದ ಜೊತೆಗೆ ಇನ್ನೊಂದಿಷ್ಟು ಮಾಂಸವನ್ನು ತಂದು ಅಡುಗೆ ಮಾಡುವರು. ಕೆಲವು ಪ್ರದೇಶಗಳಲ್ಲಿ ಈ ಸಂದರ್ಭದಲ್ಲಿ ಕುರಿಯ ಬಲಿಯನ್ನು ಕೊಡುವರು ಮತ್ತು ಪ್ರಾಣ ಬಿಟ್ಟ ಜಾಗದಲ್ಲಿ ಕುರಿ-ಕೋಳಿಯ ರಕ್ತವನ್ನು ಗುಂಡಿ ತೆಗೆದು ಮುಚ್ಚುವರು. ಇದರಿಂದ ಹೋದ ಪ್ರಾಣಕ್ಕೆ ಪ್ರಾಣಿಯ ಬಲಿ ಕೊಡುವುದು ಈ ಸಮುದಾಯದ ವಿಶಿಷ್ಟತೆ. ನಂತರ ಪ್ರಾಣ ಬಿಟ್ಟ ಜಾಗದಲ್ಲಿ ಸಗಣಿಯಿಂದ ನೆಲ ಸಾರಿಸಿ ಮಡಿ ಮಾಡುತ್ತಾರೆ. ಆ ಜಾಗದಲ್ಲಿ ಮೃತನು ಇಷ್ಟಪಡುವ ಮತ್ತು ಉಪಯೋಗಿಸಿದ ಮತ್ತು ಉಪಭೋಗಿಸುತ್ತಿದ್ದ ಎಲ್ಲಾ ತಿನಿಸು, ಊಟ, ಮತ್ತು ಹವ್ಯಾಸಿ (ಚಟ) ವಸ್ತುಗಳನ್ನು ಎಡೆಗೆ ಇಟ್ಟು ಪೂಜಿಸುವರು. ಸಾಯಂಕಾಲ ಕುಲ ಕಸುಬಿನಿಂದ ತಯಾರಿಸಿದ ಬಿದಿರಿನ ಪುಟ್ಟಿಯಲ್ಲಿ ಎಡೆ ಮತ್ತು ಪೂಜೆ ಸಾಮಗ್ರಿಗಳೊಂದಿಗೆ ಸ್ಮಶಾನಕ್ಕೆ ಹೋಗಿ, ಅಲ್ಲಿ ತಳಿಗೆ ಎಲೆಯಲ್ಲಿ ಮೂರು ಎಡೆಮಾಡಿ ಹೆಣದ ಗುಡ್ಡಿಯ (ಸಮಾಧಿಯ) ತಲೆ, ಪಾದ, ಮತ್ತು ಹೊಟ್ಟೆಯ ಭಾಗದಲ್ಲಿ ಒಂದೊಂದು ಎಡೆ ಇಟ್ಟು ಪೂಜೆ ಮಾಡುವರು. ಋಣ ಕೊಟ್ಟವನು ತೆಗೆಸಿದ ತಲೆಯ ಕೂದಲನ್ನು ಒಂದು ಪೊಟ್ಟಣ ಕಟ್ಟಿ ಗೋರಿಯ ತಲೆಯ ದಿಂಬಿಗೆ ಇರಿಸುತ್ತಾರೆ. ಎಲ್ಲರೂ ನಮಸ್ಕಾರ ಮಾಡಿ ಸ್ವಲ್ಪ ದೂರ ಹೋಗಿ, ಕಾಗೆ ಎಡೆ ಮುಟ್ಟುವುದನ್ನು ಗಮನಿಸುವರು. ಯಾವ ಪ್ರಾಣಿ ಪಕ್ಷಿ ಯಾವ ಭಾಗದ ಎಡೆಯನ್ನು ತಿನ್ನುವುದೋ, ಅದರ ಮೇಲೆ ಮೃತನ ಸಾವಿನ ಕಾರಣವನ್ನು ಮತ್ತು ಪುನರ್‌ಜನ್ಮ ಹಾಗೂ ಸಾಕ್ಷಾತ್ಕಾರವನ್ನು ನಿರ್ಧರಿಸಿ ಕೊಳ್ಳುತ್ತಾರೆ. ಸ್ಮಶಾನದಿಂದ ಹಿಂದಿರುಗಿ ಬಂದ ನಂತರ ಕುಲಬಾಂಧವರನ್ನು ಊಟಕ್ಕೆ ಆಹ್ವಾನಿಸುತ್ತಾರೆ. ಆದರೆ, ಈ ಊಟವನ್ನು ಮಾಡಲಿಕ್ಕೆ ಹೆಚ್ಚಾಗಿ ಯಾರೂ ಬರುವುದು ರೂಢಿಯಲ್ಲಿಲ್ಲ. ಒಂದು ವೇಳೆ ಹೆಣವನ್ನು ಸುಟ್ಟಿದ್ದರೆ, ಅದೇ ದಿವಸ ಅಸ್ತಿ ಮತ್ತು ಬೂದಿಯನ್ನು ನದಿಗೆ ಕಾಣಿಸುವರು.

2.8.2 ಒಂಬತ್ತನೆಯ ದಿನದ ಕಾರ್ಯ:

ಕುಟುಂಬದಲ್ಲಿ ಯಾವುದೇ ವ್ಯಕ್ತಿಯ ಸಾವಿನಿಂದ ಇವರಿಗೆ ಹೊಲಿ ಬರುವುದೆಂದು ಮೇದರ ನಂಬಿಕೆ. ಈ ಹೊಲಿ ಸಹೋದರ ಬೆಡಗಿನವರಿಗೂ ಸಹ ಬರುವುದು. ಈ ಅಶುಭ ಸೂಚಕ ಹೊಲಿಯ ಸಂದರ್ಭದಲ್ಲಿ ಯಾವುದೇ ಧಾರ್ಮಿಕ, ಸಾಂಸ್ಕೃತಿಕ ಮತ್ತು ಮಂಗಲ ಕಾರ್ಯಗಳನ್ನು ಇವರು ಮಾಡುವುದಿಲ್ಲ. ಇಂತಹ ಕಾರ್ಯದಲ್ಲಿ ಇವರು ಭಾಗವಹಿಸುವುದಿಲ್ಲ. ಸತ್ತ ಒಂಬತ್ತನೇ ದಿವಸ ಮೇದರು ಮನೆಯನ್ನು ಸಾರಿಸಿ ಗೋಮೂತ್ರ ಚಿಮುಕಿಸಿ ಹೊಲಿ ತೆಗೆಯುವರು. ಅದೇದಿವಸ ದೇವರನ್ನು ಗಂಗೆಗೆ ತೆಗೆದುಕೊಂಡು ಹೋಗಿ ತೊಳೆದು ಪೂಜಿಸಿಕೊಂಡು ಬರುತ್ತಾರೆ. ಹಿಂದಿರುಗಿ ಬರುವಾಗ ಋಣ ಕೊಟ್ಟವನ ಹೆಂಡತಿಯ ತಲೆಯ ಮೇಲೆ ತುಂಬಿದ ಕೊಡ ಹೊರಿಸಿಕೊಂಡು ಬರುವರು. ಈ ಸಂದರ್ಭದಲ್ಲಿ ಕೊಡ ಹೊತ್ತವರ ಮೈಮೇಲೆ ದೆವ್ವ ಬರುವುದು, ಹಾಗೊಂದು ವೇಳೆ ದೆವ್ವ ಬಂದರೆ ಶಾಂತಿ ಮಾಡುತ್ತಾರೆ. ಈ ದಿನದ ಕಾರ್ಯ ಮುಗಿಯುವವರೆಗೆ ಸಾವಿನ ಮನೆಯವರು ದೇವರ ಪೂಜೆಯನ್ನು ಮಾಡುವುದಿಲ್ಲ. ಅದೇ ದಿವಸ ಗಂಡ ಸತ್ತವಳಿಗೆ ಬಳಗದ ಬಳೆಹಾಕಿಸಿ ಎಲ್ಲರ ಆಕೆಯ ಮುಖವನ್ನು ನೋಡುವರು. ಅಲ್ಲಿಯವರೆಗೆ ಈ ಹೆಂಗಸನ್ನು ಪ್ರತ್ಯೇಕ ಕೋಣೆಯಲ್ಲಿರಿಸಿರುತ್ತಾರೆ. ಈಕೆಯ ಊಟೋಪಚಾರವನ್ನು ಗಂಡ ಸತ್ತವರೇ ನೋಡಿಕೊಳ್ಳುವರು. ಸಾವಿನ ಸೂತಕದ ಸಂದರ್ಭದಲ್ಲಿ ಹೊಲಿ ತೆಗೆಯುವ ತನಕ ಮನೆಯ ಉಳಿದ ಹೆಂಗಸರು ಸಹ ಹಣೆಗೆ ಕುಂಕುಮ ಹಚ್ಚಿಕೊಳ್ಳುವುದಿಲ್ಲ. ಈ ಪದ್ಧತಿಯು ಸಮುದಾಯದ ಕೆಲವು ಪ್ರದೇಶದಲ್ಲಿ ಮಾತ್ರ ಕಂಡುಬರುತ್ತದೆ. ಸತ್ತ ಒಂಬತ್ತನೆಯ ದಿವಸ ಮೇದರು ಸಿಹಿ ಮತ್ತು ಮಾಂಸದ ಊಟ ಎರಡನ್ನೂ ಮಾಡಿಸುತ್ತಾರೆ. ಆ ದಿನ ಸಾಯಂಕಾಲ ಮನೆಯಲ್ಲಿ ಹೊಸಬಟ್ಟೆಯನ್ನು ಏರಿಸಿ (ಅರ್ಪಿಸಿ) ಪೂಜೆಯನ್ನು ಮಾಡಿ ಎಲ್ಲರೂ ಲೋಬಾನವನ್ನು ಹಾಕುವರು. ನಂತರ ಅದೇ ದಿನ ಸ್ಮಶಾನಕ್ಕೆ ಹೋಗಿ ಪೂಜೆ ಮಾಡಿ ಎಡೆಕೊಟ್ಟು ಬರುತ್ತಾರೆ. (ನಾಲ್ಕನೆ ಛಾಯಾಚಿತ್ರವನ್ನು ನೋಡಿರಿ.) ಬೀಗರು ಮತ್ತು ಬಂದ ನೆಂಟರು ಋಣ ಕೊಟ್ಟವನಿಗೆ ಹೊಸ ಬಟ್ಟೆಯನ್ನು ಕೊಡುವರು. ಅಂದು ಕುರಿಯೊಂದನ್ನು ಕಡಿದು ಕುಲಬಾಂಧವರಿಗೆ ಶವ ಸಂಸ್ಕಾರದಲ್ಲಿ ಪಾಲ್ಗೊಂಡವರಿಗೆ ಊಟಕ್ಕೆ ಹಾಕುವರು. ಈ ಕಾರ್ಯಕ್ರಮವನ್ನು ಪ್ರದೇಶ ಮತ್ತು ಅನುಕೂಲಕ್ಕೆ ತಕ್ಕಂತೆ ಹನ್ನೆರಡು ಮತ್ತು ಹದಿನಾರನೇದಿನ ಮಾಡುತ್ತಾರೆ. ವರ್ಷದ ತಿಥಿಯನ್ನು ಪ್ರತಿವರ್ಷ ಅದೇ ನಕ್ಷತ್ರದ ದಿವಸ ಕೆಲವರು ಮಾಡುವರು. ಮತ್ತೆ ಕೆಲವರು ಯುಗಾದಿ ಮತ್ತು ಪಂಚಮಿಯ ಹಬ್ಬದಲ್ಲಿ ಹಿರಿಯರಿಗೆ ಹೊಸಬಟ್ಟೆ ಏರಿಸಿ ಎಡೆಹಾಕುತ್ತಾರೆ. ಸಂಸ್ಕಾರದ ಸಂದರ್ಭದ ನಂಬಿಕೆ ಮತ್ತು ನಿಷೇಧಗಳನ್ನು ಪ್ರತ್ಯೇಕವಾಗಿ ಹೇಳಲಾಗಿದೆ.

2.9 ನಂಬಿಕೆ-ನಿಷೇಧ-ಚಿಕಿತ್ಸೆ:

ಮೇದರು ತಮ್ಮ ನಿತ್ಯದ ಸಾಮಾಜಿಕ, ಧಾರ್ಮಿಕ, ಮತ್ತು ವೃತ್ತಿ-ವ್ಯವಹಾರಿಕ ಜೀವನದಲ್ಲಿ ಅನೇಕ ನಂಬಿಕೆಗಳನ್ನು ಹೊಂದಿದ್ದಾರೆ.ನಂಬಿಕೆಗಳಿಂದ ಒಂದು ಸಮುದಾಯದ ಜನ ತಮ್ಮ ಜೀವನದ ಮೌಲ್ಯಗಳನ್ನು ಸೃಷ್ಟಿಸಿಕೊಳ್ಳುತ್ತಾರೆ.

ಅಂತೆಯೇ ಆಧುನಿಕ ಯುಗದಲ್ಲಿ ಕೂಡ ಇಂತಹ ನಂಬಿಕೆಗಳು ನೆಲೆ ನಿಂತಿವೆ. ''ಧರ್ಮಗಳು ಸಾಕಷ್ಟು ಪ್ರಾಚೀನವಾದವು. ಆಧುನಿಕ ವಿಜ್ಞಾನ ನೂತನವಾದುದು. ಹೀಗಾಗಿ ವಿಜ್ಞಾನ ಬಿಡಿಸಬೇಕಾದ ಎಷ್ಟೋ ಜಟಿಲ ಸಮಸ್ಯೆಗಳಿವೆ. ಹಾಗೆಂದು ಆ ಎಲ್ಲ ಸಮಸ್ಯೆಗಳಿಗೂ ಧರ್ಮಗಳು ಪರಿಹಾರ ಒದಗಿಸಲಾರವು ಎಂಬುದು ಸತ್ಯವೆ. ಇವೆರಡರ ನೆರವನ್ನು ಪಡೆದು ಮಾನವನು ಇನ್ನಷ್ಟು ಮತ್ತಷ್ಟು ಸುಖವಾಗಿ ಬದುಕುವ ಕನಸುಕಾಣುತ್ತ ಬದುಕುತ್ತಾನೆ. ಆ ಕನಸು ನನಸಾಗುವುದು ಆತನ ನಂಬಿಕೆ ಮತ್ತು ಭರವಸೆಗಳನ್ನು ಅವಲಂಬಿಸಿದೆ ಎನ್ನ ಬಹುದು'' [6]. ಕಾರಣ ಬುಡಕಟ್ಟು ಸಮುದಾಯದ ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗ ಆ ಸಮುದಾಯದ ನಂಬಿಕೆಗಳನ್ನು ಇಲ್ಲಿ ಗಮನಿಸಲಾಗಿದೆ. ಅಧ್ಯಯನದ ದೃಷ್ಟಿಯಿಂದ ಮೇದರ ನಂಬಿಕೆಗಳನ್ನು ಎರಡು ವಿಧದಲ್ಲಿ ವಿಂಗಡಿಸಲಾಗಿದೆ. ಒಂದು ಇವರ ಸಂಸ್ಕೃತಿಗೆ ಸಂಬಂಧಿಸಿದ ನಂಬಿಕೆ ಮತ್ತು ನಿಷೇಧಗಳು ಹಾಗೂ ಇವರ ಕುಲಕಸುಬಿಗೆ ಸಂಬಂಧಿಸಿದ ನಂಬಿಕೆ ಮತ್ತು ನಿಷೇಧಗಳು.

2.9.1 ಸಂಸ್ಕೃತಿಗೆ ಸಂಬಂಧಿಸಿದ ನಂಬಿಕೆ ಮತ್ತು ನಿಷೇಧಗಳು :

★ ಶಿವನ ವಾಹನವಾದ ನಂದಿಯು ಮೆಲುಕು ಹಾಕಿದಾಗ ಮೇದರ ಪೂರ್ವಿಕ ಹುಟ್ಟಿದ.

★ ಬಿದಿರು ಕಡಿದು ಪಾರ್ವತಿಗೆ ಬೇಕಾದ ಮೊರ ತಯಾರಿಸಲು ನಾವು ಭೂಮಿಯ ಮೇಲೆ ಹುಟ್ಟಿದೆವು. ಆದಕ್ಕಾಗಿ ಶಕ್ತಿ ಪೂಜೆ ಮಾಡುತ್ತೇವೆ.

★ ಸಿವಗಣ ಹಾಗೂ ಗಂಧರ್ವ ಕನ್ಯೆಯರು ನಮ್ಮ ಕುಲದ ಮೂಲ ಪುರುಷರು.

★ ಪರಮೇಶ್ವರನ ಆಜ್ಞೆಯಂತೆ ಚಪಕಾರಕ ವೃತ್ತಿಯನ್ನು ಮಾಡಲು ನಾವು ಭೂಮಿಯ ಮೇಲೆ ನೆಲೆಸಿದೆವು.

★ ಬಿದಿರು ಎಂದರೆ ಮಲೆ,ಬಿದಿರಿಂದಲೇ ನಮ್ಮ ಜೀವನ ಆದ್ದರಿಂದಲೇ ನಮ್ಮ ಕುಲದೇವತೆ ಮಲೆಮ್ಮ.

★ ಹಬ್ಬದ ದಿವಸ ಮಲೆಮ್ಮನಿಗೆ ಬಲಿ ಕೊಡುತ್ತಾರೆ. ಚೌಡಮ್ಮನಿಗೆ ಸಿಹಿ ಎಡೆ ಕೊಡುತ್ತಾರೆ.

★ ಶಕ್ತಿಯ ಆರಾಧನೆಯಿಂದ ಮಾಟಾ ಮಂತ್ರಗಳು ತಟ್ಟುವುದಿಲ್ಲ.

★ ಮಲೆಮ್ಮ, ಕೋಲಾರಮ್ಮ , ಸುಂಕಲಮ್ಮ, ಗುಳ್ಳಲಮ್ಮ ದೇವರನ್ನು ಪೂಜಿಸಿದರೆ ಕಾಡಿನಲ್ಲಿ ದುಷ್ಟ ಪ್ರಾಣಿಗಳು ಕಾಡುವುದಿಲ್ಲ.

★ ಕುಲದೇವತೆಗೆ ಎಷ್ಟೇ ಕುರಿ ಬಲಿ ಕೊಟ್ಟರೂ ಒಂದು ಕೋಳಿ ಬಲಿಯನ್ನು ಕೊಡಲೇಬೇಕು.

★ ಬಲಿ ಕೊಟ್ಟ ಪ್ರಾಣಿಯ ರಕ್ತವನ್ನು ದೇವತೆಯ ಮುಂದೆ ಗುಂಡಿ ತೆಗೆದು ಹೂಳಬೇಕು. ಇದರಿಂದ ಭೂತಾಯಿ ಸಂತೃಪ್ತಳಾಗುತ್ತಾಳೆ.

★ ಕರಿಸೀರೆ ಮಾರೆಮ್ಮನಿಗೆ ಎಂಟು ಕಾಲಿನ ಮುಕ್ಕಾಗದ ಕುರಿ ಬಲಿ ಕೊಡಬೇಕು.

★ ದೀಪಾವಳಿಯ ದಿವಸ ಮಲೆಮ್ಮನ ಹೆಸರಿನಲ್ಲಿ ಬಾಗೀನ ಕೊಡುತ್ತಾರೆ. ಇದರಿಂದ ಮುತ್ತೈದತನ ಹೆಚ್ಚುತ್ತದೆ .

★ ಬಿಡಿದಿವಸಗಳಲ್ಲಿ ದೇವರಿಗೆ ಎಷ್ಟೇ ಕೋಳಿಯ ಬಲಿ ಕೊಟ್ಟರೂ ಅದರ ತಲೆಯನ್ನು ದೇವರ ಮರಕ್ಕೆ ಕಟ್ಟಬೇಕು.

★ ಮನೆಯ ಒಳಗೆ ಗುಂಡಿ ತೆಗೆದು ಬೆಂಕಿ ಉರಿಸಿದರೆ , ಅಮ್ಮನು ತೊಂದರೆ ಕೊಡುವುದಿಲ್ಲ.

★ ಮನೆಯ ಹೊರಗಡೆ ಗುಂಡಿ ತೆಗೆದು ಬೆಂಕಿ ಉರಿಸಿದರೆ, ಅದು ದೇವರಗುಂಡಿ ಎಂದು ಭೂತ ಪ್ರೇತಗಳು ಓಡಿಹೋಗುತ್ತವೆ.

★ ತಿರುಪತಿ ಒಕ್ಕಲಿನವರು, ದಾಸಯ್ಯನವರಿಗೆ ಎಡೆಇಟ್ಟರೆ, ಸ್ವರ್ಗ ಪ್ರಾಪ್ತಿಯಾಗುತ್ತದೆ.

★ ಮಗುವು ಹುಟ್ಟದ ಮೂರನೆಯ ದಿವಸ ಚಟಗೆಮ್ಮ ಮಗುವಿನ ಹಣೆ ಬರಹ ಬರೆಯುತ್ತಾಳೆ .

★ ನಿದ್ರಿಸುತ್ತಿರುವ ಮಗುವನ್ನು ಶೃಂಗರಿಸಬಾರದು. ಶಿವನ ಸೇವೆಯನ್ನು ಮಾಡಲು ಹೋದ ಜೀವಕ್ಕೆ ಪರಪಾಟಾಗುತ್ತದೆ.

★ ಮುಟ್ಟಾದ ಅಪರಿಚಿತ ಮಹಿಳೆಯರ ಕೈಯಲ್ಲಿ ಅಳ್ಳನೆತ್ತಿ ಕೂಡದ ಮಗುವನ್ನು ಕೊಡಬಾರದು. ಮುಡ್ತಾಸು ಆಗುತ್ತದೆ.

★ ಮಗುವನ್ನು ಬಂಜೆಯರ ಕೈಯಲ್ಲಿ ಕೊಡ ಬಾರದು.

★ ಮಗುವನ್ನು ದುರುಗುಟ್ಟ ನೋಡಿದರೆ ದೃಷ್ಟಿ ಆಗುತ್ತದೆ. ಯಾರಾದರೂ ಹಾಗೆ ನೋಡಿದರೆ ಮುಖದ ಮೇಲೆ ಮೂರು ಸಾರಿ ಉಗುಳಬೇಕು.

★ ಬಂಜೆಯರು ಮತ್ತು ಕೆಟ್ಟ ಕಣ್ಣಿನವರ ಎದುರಿಗೆ ಮೊಲೆ ಉಣಿಸಬಾರದು.

★ ಸಂಜೆಯ ಹೊತ್ತು ಮಗುವನ್ನು ಬೀದಿಗೆ ಕರೆತರಬಾರದು. ಭೂತಗಳು ಕಾಡುತ್ತವೆ.

★ ಹಲ್ಲು ಬರುವಾಗ ಮಗುವಿನ ಕೊರಳಲ್ಲಿ ಹಲ್ಲಿನ ಪಟ್ಟ ಮತ್ತು ಹಬ್ಬಿ ಹುಳುವನ್ನು ಕಟ್ಟುತ್ತಾರೆ.

★ ಮಕ್ಕಳು ಇಲ್ಲದವರು ಮಗುವಿನ ಹೊಕ್ಕಳು ಬಳ್ಳಿಯನ್ನು ತಿಂದರೆ, ಮಕ್ಕಳಾಗುತ್ತವೆ.

★ ಮನೆಯಲ್ಲಿ ಮಕ್ಕಳಿಗೆ ಕೆಮ್ಮು ಜಾಸ್ತಿ ಆದರೆ, ಕೆಮ್ಮಮ್ಮನ ಹೆಸರಿನಲ್ಲಿ ಅಮ್ಮನ ಗುಡಿಯಲ್ಲಿ ಉಪ್ಪು ಹಾಕಿ ಬರುತ್ತಾರೆ.

★ ಹೆರಿಗೆಯ ನೋವು ಪ್ರಾರಂಭವಾದ ತಕ್ಷಣ ಮನೆಯಲ್ಲಿ ಬೀಸುವ ಕಲ್ಲು ಇದ್ದರೆ, ಅವುಗಳನ್ನು ಬಿಡಿಸಿ ಇಡುವರು.

★ ಬೇಗನೆ ಹೆರಿಗೆಯಾಗಲು, ನಿಂಬೆ ಹಣ್ಣು, ಕೋಳಿ ಮೊಟ್ಟೆ ಮತ್ತು ತೆಂಗಿನ ಕಾಯಿಯನ್ನು ಇಳಿತೆಗೆದು ಮೂರು ದಾರಿ ಸೇರುವಲ್ಲಿ ಹಾಕಬೇಕು.

★ ಹೆರಿಗೆ ತೊಂದರೆ ಆದರೆ ಊರ ಹೊರಗಿನ ಉಗುಳು ಮಾರಿಯ ಕಲ್ಲು ಬೋರಲು ಹಾಕಿ ಬರಬೇಕು.

★ ಏಳು ಎಂಟನೆ ತಿಂಗಳಲ್ಲಿ ಹೆರಿಗೆ ಆಗಬಾರದು.

★ ಮಂಗಳವಾರ, ಶುಕ್ರವಾರ, ಅಮವಾಸ್ಯೆ, ಹುಣ್ಣಿಮೆಯ ದಿನ ಹೆಣ್ಣು ಮಗುವು ಜನಿಸಿದರೆ ಶುಭ.

★ ಬುಧವಾರ ಹೆಣ್ಣುಮಗುಜನಿಸಿದರೆ,ಗಂಗಮ್ಮ ಎಂದು ಹೆಸರಿಡಬೇಕು.

★ ಅಮಾವಾಸ್ಯೆಯದಿವಸ ಗಂಡು ಮಗು ಜನಿಸಿದರೆ, ಶುಭ, ಹುಣ್ಣಿಮೆಯ ದಿವಸ ಗಂಡು ಮಗು ಜನಿಸಿದರೆ ಅಶುಭ.

★ ಹೆರಿಗೆ ಆದಾಗ ಮನೆಯ ಬಾಗಿಲಿಗೆ ಅಂಕೋಲದಗಿಡ ಕಟ್ಟಬೇಕು . ಇದರಿಂದ ಬಾಣಂತಿ ಮಗುವಿಗೆ ಭೂತ ಕಾಟ ಇರುವುದಿಲ್ಲ.

★ ಮುಸ್ಸಂಜೆಯಲ್ಲಿ ತುಂಬು ಗರ್ಭಿಣಿಯರು ಹೊರಗೆ ಬರಬಾರದು. ಭೂತಗಳು ಸಂಚರಿಸುತ್ತವೆ.

★ ಗರ್ಭಿಣಿ ಹೆಂಗಸು ರಾತ್ರಿ ಬೆಳದಿಂಗಳಲ್ಲಿ ಹೊರಗೆ ಮಲಗ ಬಾರದು. ಹಕ್ಕಿಯ ನೆರಳು ಬೀಳುತ್ತದೆ.

★ ಅಮಾವಾಸ್ಯೆ , ಹುಣ್ಣಿಮೆ ಮತ್ತು ಗ್ರಹಣ ಕಾಲದಲ್ಲಿ ಗರ್ಭಿಣಿ ಹೆಂಗಸು ಹೊರಗೆ ಸಂಚರಿಸಬಾರದು.

★ ಋತುಮತಿ ಆದಾಗ, ಆ ಹುಡುಗಿಯು ಬಯಲು ಕಡೆ ಹೋಗಬೇಕಾದರೆ, ಕೈಯಲ್ಲಿ ಲಿಂಬೆಹಣ್ಣು ಚುಚ್ಚಿದ ಒಂಬು ಹಿಡಿದು ಮುಸುಕು ಹಾಕಿ ಕೊಂಡು ಹೋಗಬೇಕು.

★ ಮುಟ್ಟಿನ ಬಟ್ಟೆಯನ್ನು ಗಂಡಸರು ಮುಟ್ಟಬಾರದು. ಋತುಮತಿ ಆದವಳು ಅರಿಶಿಣ ಮೈಲಿಗೆಯನ್ನು ತೆಗೆಯುವ ತನಕ,ಮೈಲಿಗೆಯ ಗುಡಿಸಲಲ್ಲಿ , ಇಲ್ಲವೇ ಪ್ರತ್ಯೇಕ ಕೋಣೆಯಲ್ಲಿ ಇರಬೇಕು.

★ ಕನ್ಯೆಯನ್ನು ನೋಡಲು ಮೊದಲಬಾರಿಗೆ ವರನು ಮನೆಗೆ ಬಂದಾಗ ಕನ್ಯೆಯು ಮುಟ್ಟಾಗಿದ್ದರೆ ಅಶುಭ.

★ ಅರಿಶಿಣ ಬಟ್ಟೆಯನ್ನು ಧರಿಸುವುದರಿಂದ, ಮೈಗೆ ನಂಜು ತಾಗುವುದಿಲ್ಲ.

★ ಮನೆಯಲ್ಲಿ ಕೆಂಜಿಗಿ ಮತ್ತು ಕೆಂಪಿರಿಬಿ ಜಾಸ್ತಿ ಆದರೆ, ಅಮ್ಮನ ಗುಡಿಗೆ ಎಣ್ಣೆ ಬತ್ತಿಯನ್ನು ಕೊಡಬೇಕು.

★ ಸಾವಿನ ಸೂತಕದ ಸಂದರ್ಭದಲ್ಲಿ ಕುಲಕಸುಬು ಮತ್ತು ಶುಭ ಕಾರ್ಯ ಮಾಡಬಾರದು.

★ ಅಮವಾಸ್ಯೆ ಹುಣ್ಣಿಮೆ, ಮಂಗಳವಾರ, ಸೋಮವಾರ, ಮದುವೆ ಆಗಬಾರದು.

★ ಮದುವೆ ಹಂದರಕ್ಕೆ, ಹಸಿರು ಬಿದಿರನ್ನೇ ಕಟ್ಟಬೇಕು. ಮತ್ತು 12 ಕಂಬಗಳ ಹಂದರವೇ ಶ್ರೇಷ್ಠ.

★ ಭೂಮ ಮತ್ತು ಐರಾಣಿ ದೀಪವನ್ನು ಅನ್ಯ ಬೆಡಗಿನವರು ನೋಡಬಾರದು.

★ ಶುಭ ಕಾರ್ಯದಲ್ಲಿ ಛತ್ರಿ , ಕನ್ನಡಿ, ಬಿದಿರು, ಬುಟ್ಟಿ, ಹಣ್ಣು -ಹೂವು, ಹಾಗೂ ದೀಪ ಎದುರಿಗೆ ಬಂದರೆ, ಶುಭ. ಹೆಣ, ವಿಧವೆ, ಖಾಲಿಕೊಡ ಎದುರಿಗೆ ಬಂದರೆ ಅಶುಭ.

★ ಮನೆಯ ಸೂತಕ ಹೋಗಲು, ದೇವರ ತೀರ್ಥ ಮತ್ತು ಪುಣ್ಯಾಹ ಮಾಡಿಸಬೇಕು.

★ ಹೀನ ಸುಳಿ, ಮೆಳ್ಳಗಣ್ಣು ,ಉಗ್ಗು ಇದ್ದ ಹೆಣ್ಣನ್ನು ಮದುವೆ ಆಗಬಾರದು.

★ ಊಟ ಮಾಡುವ ತಟ್ಟೆಯಲ್ಲಿ ನೊಣ ಬಿದ್ದರೆ, ಶೀಘ್ರದಲ್ಲಿಯೇ ಮಾಂಸದ ಊಟ ದೊರೆಯುತ್ತದೆ.

★ ಅಮ್ಮ ಕಾಣಿಸಿಕೊಂಡಾಗ ಹಳ್ಳ ನದಿ ದಾಟಿ ಹೋಗಬಾರದು. ಹೋದರೆ ಅಮ್ಮ ಮುನಿಸಿಕೊಳ್ಳುತ್ತಾಳೆ.

★ ಸತ್ತವರಿಗೆ ಸರಿಯಾಗಿ ಕ್ರಿಯೆ ಮಾಡದಿದ್ದರೆ ಅವರ ಆತ್ಮ ಅಳುತ್ತಿರುತ್ತದೆ. ಇದರಿಂದ ಮನೆತನಕ್ಕೆ ಕೇಡು ಬರುತ್ತದೆ.

★ ಸಾವಿನಿಂದ ಸೂತಕ ಅಥವಾ ಹೊಲಿ ಬಂದ ಸಂದರ್ಭದಲ್ಲಿ ಇವರು ಯಾವುದೇ ಮಂಗಳ ಕಾರ್ಯದಲ್ಲಿ ಭಾಗ ವಹಿಸುವುದಿಲ್ಲ ವರ್ಷ ತುಂಬುವುದರಳೊಗೆ ಮದುವೆ , ಹೊಸ ಮನೆ ಕಟ್ಟಬಾರದು.

★ ರಂಡೆತನ ತೆಗೆದವಳ ಮುಖವನ್ನು ಒಂಬತ್ತುದಿನಗಳ ವರೆಗೆ ಮುತ್ತೈದೆಯರು ನೋಡಬಾರದು.

★ ಋಣ ಕೊಟ್ಟವನು ಮುಂಡ ಕೊಟ್ಟ ನಂತರ ಹೊಲೆ ತೆಗೆಯುವ ತನಕ ಹೊರಗೆ ಹೋಗಬಾರದು.

★ ಹೆಂಡತಿ ಗರ್ಭವತಿ ಇದ್ದರೆ ಋಣ ಕೊಡಬಾರದು.

★ ಬಾಣಂತಿ, ತೊನ್ನು ಇದ್ದವರು, ಮತ್ತು ಜೋಗಮ್ಮನವರು ಸತ್ತರೆ ಅವರ ಹೆಣವನ್ನು ಸುಡ ಬೇಕು.

★ ಸತ್ತದೋಷ ಬಂದಿದ್ದರೆ, ಮನೆಯನ್ನು ಬಿಟ್ಟು ಬಾಗಿಲಿಗೆ ಮುಳ್ಳು ಹಚ್ಚುತ್ತಾರೆ.

★ ಶುಭ, ಅಶುಭ, ಮತ್ತು ಶುಭ-ಶುಭ, ಅಶುಭ-ಅಶುಭ ಸೂಚಕ ಕೂಡುಹೊಲೆಗಳು ಬಂದರೆ, ಪ್ರತ್ಯೇಕವಾಗಿಯೇ ಹೊಲಿ ತೆಗೆಯಬೇಕು.

★ ಮದುವೆ ಆಗದ ಯುವಕರು ಸತ್ತರೆ, ಬೋರಲು ಹುಗಿಯಬೇಕು.

★ ಬಾಣಂತಿ, ಮತ್ತು , ಇಲ್ಲವೇ ಯುವಕರು ಸತ್ತರೆ, ದೆವ್ವ ಆಗಬಹುದು ಎಂದು ಹಿಮ್ಮಡಿಯ ನರ ಕತ್ತರಿಸುತ್ತಾರೆ.

★ ಕುಲದೇವತೆಯ ಹಬ್ಬದ ದಿವಸ ಮತ್ತು ಮನೆಯಲ್ಲಿ ಅಮ್ಮ ಕಾಣಿಸಿಕೊಂಡಾಗ ಗಂಡ -ಹೆಂಡತಿ ಕೂಡಬಾರದು.

★ ಗೌರಿ ಪೂಜೆಯ ದಿವಸ, ಕುಲದ ಹೆಂಗಸರಿಗೆ ಗೌರಿ ಮೊರದ ಬಾಗಿನ ಕೊಡಬಾರದು.

★ ಎಳಚೆ ಹಬ್ಬದ ದಿವಸ ಮಲೆಯಮ್ಮನ ಹೆಸರಿನಲ್ಲಿ ಹರಕೆ ಹೊತ್ತು ಅರಿಶಿಣ ಬಟ್ಟೆಯಲ್ಲಿ ಮುಡುಪು ಕಟ್ಟಿ ಇಡಬೇಕು.

2.9.2 ವೃತ್ತಿ, ಕುಲಕಸುಬು ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದ ನಂಬಿಕೆ ಮತ್ತು ನಿಷೇಧಗಳು :

★ ಶಿವನ ಕಂಠಾಭರಣವಾದ ಹಾವು ಬಿದಿರಾಗಿದೆ.

★ ಹೂವು ಬಿಟ್ಟ ಬಿದಿರು ಜೀವ ಬಿಟ್ಟಂತೆ.

★ ಬೆಳದಿಂಗಳಲ್ಲಿ ಬಿದಿರು ಕಡಿದರೆ ಹುಳು ಹಿಡಿಯುತ್ತವೆ.

★ ಕಾಡಿನಲ್ಲಿ ಬಿದಿರು ಕಡಿಯುವಾಗ ಹತಾರಗಳನ್ನು (ಕತ್ತಿ, ಮಚ್ಚು, ಕೊಡ್ಲಿ) ಪೂಜೆ ಮಾಡಿ ಕಡಿಯಬೇಕು.

★ ವರ್ಷದಲ್ಲಿ ಮೊದಲನೆಯ ಬಾರಿ ಬಿದಿರುಕಡಿಯುವಾಗ ಕಾಡ ದೇವತೆಗೆ ಬಲಿ ಕೊಟ್ಟು ಬಿದಿರು ಕಡಿಯಬೇಕು.

★ ಮೇದರಿಗೆ ಬಿದಿರು ಬೊಂಬಿನ ಮನೆಯೇ ಶ್ರೇಷ್ಠ.

★ ಕಾಡು ದೇವತೆಯನ್ನು ನೆನೆದು ಬಿದಿರು ಕಡಿದರೆ ಕಾಡು ಪ್ರಾಣಿಗಳು ತೊಂದರೆ ಕೊಡುವುದಿಲ್ಲ.

★ ಕುಂದ್ರಾ, ಮಂಗಳವಾರ ಕುಲಕಸುಬು ಮಾಡಬಾರದು.

★ ಬಿದಿರು ಮಳೆ ಯಲ್ಲಿ ಹಾವುಗಳು ಸೇರುವುದಿಲ್ಲ. ಏಕೆಂದರೆ ಸರ್ಪಗಳೇ ಬಿದಿರಾಗಿವೆ.

★ ಎಳೆ ಬೊಂಬು-ಬಿದಿರು ಕಡಿದರೆ ಸಂತಾನಕ್ಕೆ ಧಕ್ಕೆ ಆಗುತ್ತದೆ.

★ ಪ್ರತಿ ನಿತ್ಯ ಮಲ್ಲಾಳಮ್ಮನನ್ನು ನೆನೆದು ಪೂಜಿಸಿದರೆ, ಬಿದಿರು ವ್ಯಾಪಾರದಲ್ಲಿ ನಷ್ಟ ಭಯ ವಿರುವುದಿಲ್ಲ.

2.9.3 ಬುಡಕಟ್ಟು ಚಿಕಿತ್ಸೆ :

ಭೂಮಿಯ ಮೇಲೆ ವಾಸಿಸುವ ಯಾವುದೇ, ಪ್ರಾಣಿ ಸಂಕುಲ ಮತ್ತು ಮಾನವ ಸಮುದಾಯ ತಮ್ಮ ಭೌತಿಕ ದೇಹದ

ಸ್ವಸ್ಥತೆಯನ್ನು ಬಯಸುತ್ತಾನೆ. ಇದರ ಉದ್ದೇಶ ಆರೋಗ್ಯ. ಆರೋಗ್ಯ ಎಂದರೆ W.H.O. ಅವರ ಪ್ರಕಾರ ರೋಗ ದಿಂದ ಮುಕ್ತನಾಗಿರುವುದಷ್ಟೇ ಅಲ್ಲ, ಭೌತಿಕವಾಗಿ, ಮಾನಸಿಕವಾಗಿ,ಮತ್ತು ಸಾಮಾಜಿಕವಾಗಿ ಸ್ವಸ್ಥನಾಗಿರುವುದು. ಪರಿಸರದಲ್ಲಿಯ ಸ್ವಲ್ಪ ಬದಲಾವಣೆಯೂ ಕೂಡ ಇಲ್ಲಿ ಅನಾರೋಗ್ಯಕ್ಕೆ ಕಾರಣವಾಗುತ್ತದೆ. (Health :- W.H.O. World Health Organisation defines health "A State of physical, mental, and social well being, not merely free from disease or illness". Dr.K.Park. Preventive and Social medicine.published by m\s Banaridas Bhanot 1167 prem nagar, Jabalpur , 482001 India.[7].

"There should be an equillibrium between man and his environment or surroundings. Maladjustment (improper) to his environment is itself is disease" Dr. Vishwnath.M Bellary.[8] ಎದುರಾದ ಭೌತಿಕ ದೇಹದ ಬಾಹ್ಯ ತೊಂದರೆಗಳಿಗೆ ಸ್ವ -ಚಿಕಿತ್ಸೆಯನ್ನು ಆದಿಕಾಲದಿಂದಲೂ ಕಂಡುಕೊಂಡ. ಆದಿಮಾನವ ಕಂಡುಕೊಂಡ ಸ್ವ ಚಿಕಿತ್ಸೆಗಳೇ ಅಂದಿನ ಮತ್ತು ಬುಡಕಟ್ಟು ಚಿಕಿತ್ಸೆಗಳೆಂದರೆ ತಪ್ಪಾಗಲಿಕ್ಕಿಲ್ಲ. ಚಿಕಿತ್ಸೆ ಎಂದರೆ ಕಾಯಿಲೆ ಮತ್ತು ರೋಗರುಜಿನಗಳ ನಿಯಂತ್ರಣ ಮತ್ತು ಅವುಗಳಿಂದ ನಮ್ಮ ಸಂರಕ್ಷಣೆಯ ಪ್ರಕ್ರಿಯೆ ಎಂದು ವೈದ್ಯ ವಿದ್ವಾಂಸರು ಹೇಳುತ್ತಾರೆ. (Prevention and curing of the disease. Or modalities and intervention to arrest the disease process.[8] ವೈದ್ಯ ಅನಾದಿಕಾಲದಿಂದಲೂ ಮಾನವ ತನ್ನ ದೈಹಿಕ ರೋಗರುಜಿನಗಳಿಗೆ ಸಸ್ಯಗಳ ಸಹಾಯ ಪಡೆಯುತ್ತಲೇ ಔಷಧಿಯನ್ನು ಕಂಡುಕೊಂಡು ಅವುಗಳನ್ನು ಬಳಸುತ್ತಾ ಬಂದಿದ್ದಾನೆ. ಔಷಧ ಎಂದರೆ: Medicine :- Asper the pharmacology medicine means medicine isa medicament either liquid or solid either taken internally or externally which is used to cure the disease, or to lessen the sufferings[8]. ಮಾನವ ತನ್ನ ರೋಗ ನಿವಾರಣೆಗಾಗಿ ಉಪಲಬ್ಧವಿದ್ದ ಸಸ್ಯಗಳಲ್ಲಿಯೇ ಪರಿಹಾರ ಕಂಡುಕೊಂಡ. ಅವುಗಳಿಗಾಗಿ ಹರಸುತ್ತಾ ಎಲ್ಲಿಯೂ ಹೋಗಲಿಲ್ಲ. ತನ್ನ ಸುತ್ತ ಇದ್ದ ಗಿಡ,ಬಳ್ಳಿ, ತಪ್ಪಲು, ತೊಗಟೆ, ಕಾಯಿ, ಬೀಜಗಳನ್ನೇ ಚಿಕಿತ್ಸೆಗೆ ಬಳಸಿದ. ಇದು ಇಂದಿನವರೆಗೂ ನಡೆದು ಬಂದು ನಮಗೆ ಗೊತ್ತಾಗದ ಹಾಗೆಯೇ ನಮ್ಮಿಂದಲೇ ಬಳಸಲ್ಪಡುತ್ತವೆ. ಅಂತೆಯೇ ಇಂದಿಗೂ ಕೂಡ ಸಸ್ಯ ವೈದ್ಯರಲ್ಲಿ ಗಿಡ ಮೂಲಿಕೆಗಳೇ ಪ್ರಧಾನವಾಗಿವೆ. ಸಸ್ಯ ವೈದ್ಯರಲ್ಲಿ ಪ್ರಾದೇಶಿಕ ಪ್ರಾಧಾನ್ಯತೆ ಎದ್ದು ಕಾಣುತ್ತದೆ. ಸ್ವಾನುಭವ ಸಾರ್ವತ್ರಿಕ ಪ್ರಯೋಜನಕ್ಕೆ ಹರಿದು ಬಂತು.[9] (ವಿಸಿಪ್ಪ ಜಾನಪದ ಪುಟ.182. ಸಂಪಾದಕರು ಡಾ. ಹೆಚ್. ಜೆ.ಲಕ್ಕಪ್ಪ ಗೌಡ.).

ಮೇದರು ಇದಕ್ಕೆ ಹೊರತಾಗಿಲ್ಲ . ಕಾಡಿನೊಡನೆ ನಂಟು ಹೊಂದಿದ ಈ ಸಮುದಾಯ ಕಸುಬು ನಿರತರಾದಾಗ ಮತ್ತು ನಿತ್ಯ ಜೀವನದಲ್ಲಿ ಎದುರಾಗುವ ಅನೇಕ ರೋಗರುಜಿನಗಳಿಗೆ ಲಭ್ಯವಿರುವ ಸಸ್ಯಗಳನ್ನೇ ಔಷಧಿಯಾಗಿ ಬಳಸಿದರು. ಈಗಲೂ ಇವರಲ್ಲಿ ಕೆಲವು ಕಡೆ ಸ್ವ-ವೈದ್ಯ ಪದ್ಧತಿ ರೂಢಿಯಲ್ಲಿ ಕಂಡುಬರುತ್ತದೆ. ಕ್ರಿ.ಪೂ. ದಲ್ಲಿ

ಹಿಪೊಕ್ರಟಸ್ ನಂತಹ ಮಹಾನ್ ವಿದ್ವಾಂಸರು ಪ್ರಪಂಚಕ್ಕೆ ನೀಡಿದ ಕೊಡುಗೆ ಅಪಾರ. ಇವರು ಶಸ್ತ್ರಚಿಕಿತ್ಸಾರಹಿತ ಚಿಕಿತ್ಸೆಯ ವಿಧಾನವನ್ನು ಮತ್ತು ಪದ್ಧತಿಯನ್ನು ವೈದ್ಯಕೀಯ ರಂಗಕ್ಕೆ ಪರಿಚಯಿಸಿ ಆವಿಷ್ಕಾರಗೊಳಿಸಿದರು. ಇಂತವರ ಚಿಕಿತ್ಸೆಯ ಪದ್ಧತಿಯಲ್ಲಿ ಬದಲಾವಣೆ ಇದ್ದರೂ ಸಹ ಮೂಲ ಔಷಧಿಯ ನೀತಿಯ ತತ್ವ ಒಂದೇಆಗಿದೆ. ಅಂತಹ ತತ್ವಗಳು ಅನೇಕ ಬುಡಕಟ್ಟು ಚಿಕಿತ್ಸೆಗಳಲ್ಲಿ ಇದ್ದವು. ಇವರ ಸಮಕಾಲೀನ ವಿದ್ವಾಂಸರಾದ ಶುಶ್ರುತ ಅವರು ಮಾನವ ಕುಲಕ್ಕೆ ವೈದ್ಯಕೀಯ ರಂಗದಿಂದ ನೀಡಿದ ಮಹಾನ್ ಗ್ರಂಥ ಶುಶ್ರುತ ಸಂಹಿತೆ. ಇವರು ಕಂಡು ಹಿಡಿದ ಅರವಳಿಕೆಯ ಕೌಶಲ್ಯ ಶಸ್ತ್ರಚಿಕಿತ್ಸೆಗೆ ಅನುಕೂಲವಾಯಿತು. ಅರವಳಿಕೆಯ ಮೂಲ ಪರಿಕಲ್ಪನೆ ಬುಡಕಟ್ಟಿಗರದಾಗಿದೆ. ಇಲ್ಲಿ ನಾನು ಮೇದ ಬುಡಕಟ್ಟು ಚಿಕಿತ್ಸೆಯಲ್ಲಿರುವ ಮೂಲ ಔಷಧಿಯ ಮೌಲ್ಯ ಆಧುನಿಕ ಚಿಕಿತ್ಸೆಯಲ್ಲಿ ಹೇಗೆ ಅಡಕವಾಗಿದೆ ಎನ್ನುವುದರ ಕುರಿತು ಉಲ್ಲೇಖಿಸುತ್ತೇನೆ. ಇಂದಿಗೂ ಇಂತಹ ಕೆಲವು ಚಿಕಿತ್ಸೆಗಳು ಜೀವಂತವಾಗಿದ್ದು ಅನನ್ಯವಾಗಿವೆ. ಮತ್ತು ಅವುಗಳ ಹೊಸ ಆವಿಷ್ಕಾರಗಳು ಮಾತ್ರ ಸಾರ್ವತ್ರಿಕವಾಗಿವೆ. ಇಲ್ಲಿ ಇವರ ಚಿಕಿತ್ಸೆಗಳನ್ನು ಮತ್ತು ಅವುಗಳಲ್ಲಿರುವ ಆಧುನಿಕ ವೈದ್ಯಕೀಯ ಔಷಧೀಯ ಮೌಲ್ಯಗಳನ್ನು ಕುರಿತು ಹೇಳಲಾಗಿದೆ.

★ ಮೇದರು ಮಗುವಿಗೆ ಅಮ್ಮ ಕಾಣಿಸಿಕೊಂಡಾಗ ಬಹಳ ಕಟ್ಟುನಿಟ್ಟಾಗಿ ಕೆಲವು ಆಚರಣೆಗಳನ್ನು ಪಾಲಿಸುತ್ತಾರೆ. ಅಂದರೆ ಅಮ್ಮ ಕಾಣಿಸಿಕೊಂಡ ಮೊದಲ ಐದು ದಿವಸ ಮಗುವನ್ನು ಬೇರೆಯವರ ಸಂಪರ್ಕದಿಂದ ದೂರವಿರಿಸಿ ಮಡಿಯಲ್ಲಿರಿಸುವರು. ಈ ಸಮಯದಲ್ಲಿ ನೀರಿಗೆ ಬೇವಿನ ಸೊಪ್ಪು ಹಾಕಿ ಸ್ನಾನ ಮಾಡಿಸುವರು. ಅಮ್ಮನನ್ನು ಕಳುವಿಕೆ ಮಾಡುವವರೆಗೆ ಹೊರಗಡೆ ಕಳುಹಿಸುವುದಿಲ್ಲ. ಈ ಆಚರಣೆ ಮತ್ತು ಚಿಕಿತ್ಸೆಯನ್ನು ವೈದ್ಯಕೀಯ ದೃಷ್ಟಿಯಿಂದ ನೋಡಲಾಗಿ ಅಮ್ಮ (Chiken pox, Small pox, and Measles) ವೈರಸ್‌ನಿಂದ ಬರುವ ಒಂದು ಸಾಂಕ್ರಾಮಿಕ ರೋಗ (Communicable disease). ಈ ರೋಗದ ವೈರಾಣು ಮಗುವಿನ ದೇಹವನ್ನು ಪ್ರವೇಶಿಸಿ 1ರಿಂದ 10ನೇ ದಿನದ ವರೆಗೆ ತನ್ನ ವಂಶಾಭಿವೃದ್ಧಿಯನ್ನು ಮಾಡುತ್ತವೆ. ಇದನ್ನು (Incubation peiod) ಎಂದು ಕರೆಯುತ್ತಾರೆ. 10ರಿಂದ 16ನೇ ದಿನದವರೆಗಿನ ಕಾಲವನ್ನು (Isolation period) ರೋಗ ಲಕ್ಷಣಗಳು ಕಾಣಿಸಿಕೊಳ್ಳುವ ಮತ್ತು ರೋಗ ಹರಡುವ ಕಾಲದ ಅವಧಿಯಾಗಿದೆ. ಈ ಅವಧಿಯಲ್ಲಿ ಮಗುವಿನ ರೋಗ ಇತರರಿಗೆ ಬೇಗನೇ ಹರಡುತ್ತದೆ. ನಂತರದ ಅವಧಿಯನ್ನು (resolving stage) ರೋಗ ಇಳಿಮುಖದ ಕಾಲಾವಧಿ ಆಗಿರುತ್ತದೆ. ಇಲ್ಲಿ ಬುಡಕಟ್ಟು ಸಮುದಾಯದವರು ಎರಡನೆಯ ಅವಧಿಯಲ್ಲಿ ಮಗುವನ್ನು ಮಡಿ ಎಂಬ ಸಾಂಪ್ರದಾಯಿಕ ಆಚರಣೆಯ ಮೂಲಕ ಮಗುವನ್ನು ಪ್ರತ್ಯೇಕವಾಗಿರಿಸಿ ರೋಗ ಹರಡದಂತೆ ತಡೆಗಟ್ಟುತ್ತಾರೆ. ಮತ್ತು ಬೇವಿನ ಸೊಪ್ಪಿನಂತಹ (Antibacterial) ಗಿಡಮೂಲಿಕೆಯನ್ನು ಉಪಯೋಗಿಸಿತ್ತಾರೆ. ಇದು ಇವರ ಬಡಕಟ್ಟು ಚಿಕಿತ್ಸೆಯ ಸಾಂಪ್ರದಾಯಿಕ ವೈಶಿಷ್ಟತೆ. ಇಲ್ಲಿ, ಈ ಆಚರಣೆಗೆ ವೈದ್ಯಕೀಯ ಕಾರಣಗಳು ಕಂಡುಬರುತ್ತವೆ.

★ ಬುಡಕಟ್ಟಿಗರು ತಮ್ಮ ಅನೇಕ ಬುಡಕಟ್ಟು ಚಿಕಿತ್ಸೆಯಲ್ಲಿ ಅರಿಶಿಣ, ಈರುಳ್ಳಿ, ಬೆಳ್ಳುಳ್ಳಿ, ಲಿಂಬೆಹಣ್ಣು ಬಳಸುವುದು ಕಂಡುಬರುತ್ತದೆ. ಆಧುನಿಕ ಚಿಕಿತ್ಸೆಯಲ್ಲಿ ಇವುಗಳಲ್ಲಿರುವ ಔಷಧ ಗುಣವನ್ನೇ ಆವಿಷ್ಕಾರಗೊಳಿಸಿ ಬಳಸುತ್ತಾರೆ.

ಅರಿಶಿಣದಲ್ಲಿ (Antiseptic and Anti bacterial, and Antiviral.) ಇರುವುದರಿಂದ ಇದನ್ನು ಗಾಯ, ಋತು, ಹೆರಿಗೆಮತ್ತು ಅನೇಕ ಮಂಗಲ ಕಾರ್ಯದಲ್ಲಿ ಬಳಸುವರು. ಈರುಳ್ಳಿ ಮತ್ತು ಲಿಂಬೆಯಲ್ಲಿ (Acidity, Digestive juice and citric acid.) ಎನ್ನುವ ಆ್ಯಸಿಡಿಟ ತೊಂದರೆಯನ್ನು ನಿವಾರಿಸುವ ಗುಣ ಇದೆ.

★ಮೇದರು ಕುಲಕಸುಬಿನಲ್ಲಿ ನಿರತರಾದಾಗ ಅಕಸ್ಮಾತ್ ಗಾಯವಾದರೆ, ಹಸಿರು ಬಿದಿರಿನ ತಿಳಲು ಮತ್ತು ಹಸಿರು ಎಲೆಯ ರಸವನ್ನು ಹಚ್ಚುತ್ತಾರೆ. ಇದರ ಔಷಧಿಯ ಗುಣ ಎಂದರೆ (Antiseptic) ಕೆಲವು ಹಸಿರು ಎಲೆ ಮತ್ತು ತಿಳಲುಗಳಲ್ಲಿ ರೋಗಾಣು ನಿಯಂತ್ರಣ ಗುಣ ಇದೆ.

★ ಮೇದರು ಮೂಳೆಮುರಿತಕ್ಕೆ ಮೊಟ್ಟೆ ಮತ್ತು ಗಿಡದ ತೊಪ್ಪಲು ಕಲಸಿ ಹಚ್ಚಿ ಬಿದಿರಿನ ಕಡ್ಡಿಗಳನ್ನು ಸುತ್ತಲೂ ಇಟ್ಟು ಕಟ್ಟು ಕಟ್ಟುತ್ತಾರೆ. ಈ ಚಿಕಿತ್ಸೆಯ ಆಧುನಿಕ ಮಹತ್ವವನ್ನು ತಿಳಿಯಲಾಗಿ, ಮೊಟ್ಟೆ ಮತ್ತು ಗಿಡದ ತೊಪ್ಪಲಗಳ ಮಿಶ್ರಣ ಆಧುನಿಕ ಪ್ಲಾಸ್ಟರ್ ಆಫ್ ಪ್ಯಾರಿಸ್(plaster of paris) ನ ಬದಲಿಯಾಗಿದ್ದರೆ, ಬಿದಿರುಗಳ ಬಳಕೆ (Immobalization of the part.) ಮುರಿತಕ್ಕೊಳಗಾದ ದೇಹದ ಭಾಗವನ್ನು ಚಲನೆ ಮುಕ್ತಗೊಳಿಸುವುದಾಗಿದೆ .

★ ಮೇದರು ಮತ್ತು ಕೆಲವು ಬುಡಕಟ್ಟಿಗರು ರಕ್ತದೊತ್ತಡದಿಂದ ನರಳುವವರಿಗೆ ರಾವುಳ ಸಸ್ಯವನ್ನು ಜಜ್ಜಿ ಹಚ್ಚುತ್ತಾರೆ. ಇಲ್ಲಿ ಈ ಸಸ್ಯ (Snake root.) ಎನ್ನುವ ಒಂದು ಜಾತಿಯ ಸಸ್ಯವಾಗಿದ್ದು ಇತ್ತೀಚಿಗೆ ರಕ್ತದೊತ್ತಡದಿಂದ ಬಳಲುವ ರೋಗಿಗೆ ಬಳಸುವ (Reserpine) ಔಷಧಿಯ ಗುಣವನ್ನು ಹೊಂದಿದೆ.

★ ಇವರು ಹಾವು ಕಚ್ಚಿದಾಗ ಬೇವಿನ ಸೊಪ್ಪು ತಿನ್ನಲು ಕೊಡುವುದರ ಕಾರಣ ಇದರಲ್ಲಿ ರಕ್ತ ಶುದ್ಧೀಕರಣದ ಸತ್ವವಿದೆ.

★ ಅನೇಕ ಬುಡಕಟ್ಟು ಸಮುದಾಯಗಳು ಕಲ್ಮಶ ರಕ್ತವನ್ನು ದೇಹದಿಂದ ಹೊರತೆಗೆಯಲು ಜಿಗಣೆಗಳನ್ನು ಬಳಸುತ್ತಾರೆ, ವೈದ್ಯಕಿಯ ರಂಗಕ್ಕೆ ಶಸ್ತ್ರ ಚಿಕಿತ್ಸೆಯಲ್ಲಿ ಅರವಳಿಕೆಯ ಕೌಶಲ್ಯವನ್ನು ಪರಿಚಯಿಸಿದ ಡಾ.ಶುಶೃತ ಅವರು ತಮ್ಮ ಪ್ರಯೋಗಾಲಯಗಳಲ್ಲಿ ವೈತ್ಯಗಾತ್ರದ ಜಿಗಣೆಗಳನ್ನು ಸಾಕಿದ್ದು ಕಂಡುಬರುತ್ತದೆ.

★ಆದಿಮಾನವ ಬೇಟೆಯ ಸಂದರ್ಭದಲ್ಲಿ ಬಲಾಢ್ಯ ಪ್ರಾಣಿಗಳನ್ನು ಹಿಡಿಯುವಾಗ ತಮ್ಮ ಬಾಣದ ತುದಿಗೆ ಗಿಡಮೂಲಿಕೆಯಿಂದ ತಯಾರಿಸಿದ ಕ್ಯೂರರೆಯನ್ನು ಲೇಪಿಸುತ್ತಿದ್ದ. ಇದು ಆ ಪ್ರಾಣಿಗಳನ್ನು ಅರವಳಿಕೆ ಸ್ಥಿತಿಗೆ ತರುತ್ತಿತ್ತು . ಮತ್ತು ಮಾನವನ ದೇಹಕ್ಕೆ ನೋವು ಸಹಿಸಲಾರದ ದೊಡ್ಡ ಗಾಯವಾದರೆ ಇದೇ ಔಷಧಿಯನ್ನು ಹಚ್ಚುತ್ತಿದ್ದರು. ಈ ಕ್ಯೂರರೆಯ ಹೊಸ ಆವಿಷ್ಕಾರವೇ ಆಧುನಿಕ (Muscle Relaxants) ಮಾಂಸ ಖಂಡಗಳ ವಿಶ್ರಾಂತಿ ತಂತ್ರ. ಆಧುನಿಕ ವೈದ್ಯಕೀಯ ರಂಗದ ಶಸ್ತ್ರಚಿಕಿತ್ಸೆಯಲ್ಲಿ ಮಾನವನ ದೇಹದ ನಿರ್ದಿಷ್ಟ ಮಾಂಸ ಖಂಡಗಳನ್ನು ನಿಶ್ಚಲಗೊಳಿಸಲು ಮತ್ತು ಅಸಾಧಾರಣ ನೋವು ತಡೆಯಲು (succinylecholin) ಟಿಬುಕ್ಯುರಾರಿನ್ (Tobucurarine) ನಂತಹ ಔಷಧಿಗಳನ್ನು ಬಳಸುತ್ತಾರೆ. ಇದರ ಮಾತೃಮೂಲದ ಹತ್ತಾರು ಔಷಧಿಗಳನ್ನು ಬಳಸಲಾಗುತ್ತದೆ. ಇಂತಹ ಹಲವಾರು ತಂತ್ರಗಳು ಬುಡಕಟ್ಟು ಚಿಕಿತ್ಸೆಯ ಮೂಲದಿಂದ ಹೊಸ ಆವಿಷ್ಕಾರ ಪಡೆದು

ಆಧುನಿಕ ರಂಗದಲ್ಲಿ ಬಳಕೆಯಾಗುತ್ತಿರುವುದು ಹಲವು ಬುಡಕಟ್ಟು ಚಿಕಿತ್ಸೆಯ ನಂಬಿಕೆ ಮತ್ತು ಅಳವಡಿಕೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಈ ರೀತಿಯ ಇವರ ಚಿಕಿತ್ಸೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು.

- ಕಾಡಿನಲ್ಲಿ ಗಾಯವಾದರೆ ಕೆಲವು ಸಾರೆ ಮೊಲದ ಪಿಚ್ಚಿಗೆ (ಇಕ್ಕಿ) ಸುಣ್ಣ ಸೇರಿಸಿ ಹಚ್ಚುತ್ತಾರೆ.
- ಬಿದಿರಿನ ತಪ್ಪಲ ರಸಕ್ಕೆ ತಂಬಾಕು ಸೇರಿಸಿ ಗಾಯಕ್ಕೆ ಹಚ್ಚುತ್ತಾರೆ.
- ಗೋಣು (ಕತ್ತು) ಉಳುಕಿದರೆ, ರಾತ್ರಿ ಮಲಗುವಾಗ ನಯವಾದ ದಪ್ಪನೆಯ ಬೊಂಬಿನ ತುಂಡು ಕತ್ತಿನ ಕೆಳಗೆ ಇರಿಸಿ ಕೊಂಡು ಮಲಗುತ್ತಾರೆ.
- ಚಿಕ್ಕ ಮಕ್ಕಳಿಗೆ ಮುಡಾತ್ತು ಆದರೆ ಹಾಗಲುಕಾಯಿ ಇಲ್ಲವೇ ವಿಷ ಕವಡಿಯ ಎಲೆಯ ರಸವನ್ನು ವಾರದ ದಿವಸ ನೆತ್ತಿಗೆ ಹಿಂಡಿ ಕಂಕುಳು ಮತ್ತು ಅಂಗಾಲಿಗೆ ಹಚ್ಚುತ್ತಾರೆ.
- ಚಿಕ್ಕ ಮಕ್ಕಳಿಗೆ ನೆಗಡಿ, ಕೆಮ್ಮು ಆದರೆ ನೆತ್ತಿಗೆ ಅರಿಶಿಣ ಬತ್ತಿ ಹಾಕಿ, ಕೊರಳಿಗೆ ಬೆಳ್ಳುಳ್ಳಿ ಸರ ಕಟ್ಟುತ್ತಾರೆ.
- ಮಂಗ ಬಾವು (ಗಳಗಂಡ) ಕಾಣಿಸಿಕೊಂಡಾಗ, ಬೆಲ್ಲ ಮತ್ತು ಸುಣ್ಣ ಸವರಿ. ಕಟ್ಟಾಣಿಮರದ ಕಡ್ಡಿಯಿಂದ ಪಟ್ಟಿ ಕಟಾಣಿ ಮಾಡಿ ಕೊರಳಲ್ಲಿ ಹಾಕುತ್ತಾರೆ.
-ಕಣ್ಣಿನಲ್ಲಿ ಅರ್ಚ (ಬಿಳಿಯ ಚುಕ್ಕೆ) ಆದರೆ, ಕಾಚಿ ಕಡ್ಡಿಗೆ ಜೇಂಕಿ ಹಚ್ಚಿ ನಿವಾಳಿ ತೆಗೆದು ಅರ್ಚ ತೆಗೆಯುತ್ತಾರೆ.
- ಕುರುವಿಗೆ ಮದ್ದುಗಣಿಕೆ ಎಲೆ ಮತ್ತು ಔಡಲ ಎಣ್ಣೆಯ ಕಾವು ಹಾಕುತ್ತಾರೆ.
- ಹುಣ್ಣು ಅಥವಾ ಕುರುವಾದರೆ ಅವರ ಮೇಲೆ ಜಿಗಣೆಯನ್ನು ಹಿಡಿಸಿ ಕೆಟ್ಟ ರಕ್ತವನ್ನು ಹೊರಗೆ ತೆಗೆಯುತ್ತಿದ್ದರು.
- ದೊಡ್ಡವರಿಗೆ ಅರೆ-ತಲೆಯ ನೋವು ಬಂದರೆ, ಹಣೆಗೆ ಕೇರುಬೀಜದ ಎಣ್ಣೆ ಹಾಕುತ್ತಾರೆ.
- ನೀರುಬೇಧಿ ಆದರೆ ಕಾಲ್ಬುಳಿ ತೆಗೆದು ರಂಜು ಹಾಕುತ್ತಾರೆ.
- ಚಿಕ್ಕ ಮಗುವಿಗೆ ಮೈಬಿಸಿಯಾದರೆ ಗುಟ್ಟಿ ಹಾಕುತ್ತಾರೆ.
- ಹಾವು ಕಚ್ಚಿದರೆ ಕಚ್ಚಿದ ಮೇಲ್ಭಾಗದಲ್ಲಿ ಕಟ್ಟು ಕಟ್ಟಿ ಬೇವಿನ ಸೊಪ್ಪು ತಿನಿಸುತ್ತಾರೆ.
-ದೊಡ್ಡವರಿಗೆ ಕೀವು ಮಿಶ್ರಿತ ಬೇಧಿ ಆದರೆ ತೊಟ್ಟಿಲು ಬಳ್ಳಿಯ ಕಾಂಡವನ್ನು ನೀರಿನಲ್ಲಿ ತೇದು ಗಂಧ ಮಾಡಿ ಕುಡಿಸುತ್ತಾರೆ.

ಅಥವಾ ದಾಳಿಂಬೆ ಕಾಯಿಯ ತೊಗಟೆಯ ಗಂಧ ಮಾಡಿ ಕುಡಿಸುತ್ತಾರೆ.

-ಹುಟ್ಟಿದ ಮಗು ಸರಿಯಾಗಿ ಮೂತ್ರ ಮಾಡದಿದ್ದರೆ ಅಂಗೈ ಮತ್ತು ಅಂಗಾಲಿಗೆ ಕೇರು ಹಾಕುತ್ತಾರೆ.
-ಗಂಡುಮಲಿ ಹುಣ್ಣು ಆದರೆ, ನಡು ಕಿವಿಗೆ ರಂಧ್ರಮಾಡಿ ತಾಮ್ರದ ಮುರುವು ಹಾಕಿಸುತ್ತಾರೆ.
- ಕಣ್ಣು ನೋವು ಬಂದರೆ, ಕಣ್ಣಾರಿಬೀಜವನ್ನು ಹಿತ್ತಾಳೆಯ ತಟ್ಟೆಯ ಮೇಲೆ ಬಿಸಿ ಮಾಡಿ ಅರೆದು ಪುಡಿಯನ್ನು ಕಣ್ಣಲ್ಲಿ ಹಾಕುತ್ತಾರೆ.

- ಮಕ್ಕಳಿಗೆ ಅಮ್ಮ ಕಾಣಿಸಿಕೊಂಡಾಗ ನೀರಿನಲ್ಲಿ ಬೇವಿನ ಸೊಪ್ಪು ಹಾಕಿ ಸ್ನಾನ ಮಾಡಿಸುತ್ತಾರೆ .ಐದನೇ ದಿವಸ ಹಣ್ಣು ಹೂವು ಕೊಡುವವರೆಗೆ ಮಗುವನ್ನು ಮಡಿಯಲ್ಲಿರಿಸುತ್ತಾರೆ. ಮತ್ತು ಹೊರಗೆ ಕಳುಹಿಸುವುದಿಲ್ಲ.

- ಮಕ್ಕಳಿಗೆ ಬಾಯಿ ಬಸುಳೆ ಆದರೆ , ಕರಿಮೇಕೆಯ ಹಾಲು ಬಾಯಿಲ್ಲಿ ಹಿಂಡಿ ಬಾಯಿಗೆ ರಾಗಿಯ ಹಿಟ್ಟು ಹಚ್ಚುತ್ತಾರೆ.

-ಗರ್ಭಪಾತ ಆದರೆ(ಅಲೆ ಉಳಿದರೆ) ಹಳೆ ನವಣೆ ಅಕ್ಕಿಯ ಅನ್ನ ಬ್ಯಾಳಿಯ ಕಟ್ಟು ಕೊಡುತ್ತಾರೆ.

- ಇಸುಬಿಗೆ ಕತ್ತಿಲದ್ದಿಯ ತೈಲ ಮಾಡಿ ಹಚ್ಚುತ್ತಾರೆ.

- ಕಜ್ಜಿ ಆದರೆ, ತೆಂಗಿನ ಚಿಪ್ಪಿನ ಎಣ್ಣೆ ತೆಗೆದು ಹಚ್ಚುತ್ತಾರೆ. ಅಥವಾ ಎಮ್ಮೆ ಸೆಗಣಿ ಹಚ್ಚಿ ಸ್ನಾನ ಮಾಡಿಸುತ್ತಾರೆ.

-ಹೆರಿಗೆಗೆ ಮುಂಚೆ ಅಳು ಬೇನೆ ಆರಂಭವಾದ ತಕ್ಷಣ, ಕರಿಬೇವು ಜೀರಿಗಿ, ಕೊತ್ತಂಬರಿ, ಉಪ್ಪು, ತುಪ್ಪದಿಂದ ಕಷಾಯ ಮಾಡಿ ಕುಡಿಸುತ್ತಾರೆ.

-ಮಕ್ಕಳ ಹೊಕ್ಕಳಬಳ್ಳಿ ಕತ್ತರಿಸಿದ ನಂತರ ಗಾಯವಾಗದಿರಲೆಂದು ಅರಿಶಿಣ ಹಚ್ಚುತ್ತಾರೆ.

- ಹುಟ್ಟಿದ ಮಗುವಿಗೆ ನೆಗಡಿ ಆದರೆ, ವೀಳ್ಯದ ಎಲೆಯನ್ನು ಬಿಸಿ ಮಾಡಿ ನೆತ್ತಿಗೆ ಹಾಕುತ್ತಾರೆ.

- ಹೆರಿಗೆ ಆದ ಐದನೆಯ ದಿವಸ ನಡುನೋವು ಬಾರದಿರಲೆಂದು ಕೋಳಿರಸ ಮಾಡಿ ಕುಡಿಸುತ್ತಾರೆ.

-ಹೆರಿಗೆ ಆದಾಗ ಭಟ್ಟ ಸರಿಯಬಾರದು ಎಂಬು ನಡುವಿಗೆ ನಡುಪಟ್ಟಿಯನ್ನು ಕಟ್ಟುತ್ತಾರೆ. ಕುರಿಯ ಭಟ್ಟಿಯ(ಬೋಟ) ಸಾರು ಮತ್ತು ಪಲ್ಲೆ ಮಾಡಿ ಕೊಡುತ್ತಾರೆ.

- ಮಗುವಿಗೆ ಸರಿಯಾಗಿ ಭೇದಿ ಆಗದಿದ್ದರೆ, ಅರಳೆಣ್ಣೆ ಅಥವಾ ಜೇನು ತುಪ್ಪ ಚೀಪಿಸುತ್ತಾರೆ.

-ಮಕ್ಕಳಿಗೆ ಮೂವಳ್ಳಿ ರೋಗ (ಮೂರು ಅಳ್ಳಿಪರಿ ಬಡಿಯುವ ರೋಗ) ಬಂದರೆ, ಹಸಿರು ಬಳೆ ಬಿಸಿಮಾಡಿ ಸೂಲಗಿತ್ತಿಯು ಸುಳಿ-ಸಂದು ಸುಡುತ್ತಾಳೆ.

-ಹೆರಿಗೆ ಆದಾಗ ಬಾಣಂತಿಗೆ ಮೊಲೆ ಹಾಲು ಕಡಿಮೆ ಆದರೆ, ಮೆಂತೆ ಚಟ್ನಿ, ಮೆಂತೆ ಸಾರು, ಮತ್ತು ಊಟದ ಜೊತೆ ಹಾಲು ಕೊಡುತ್ತಾರೆ.

-ಹೆರಿಗೆಯ ನಂತರ ಮಗು ಸತ್ತು ಮೊಲೆ ಹಾಲು ಜಾಸ್ತಿ ಇದ್ದರೆ ಮೊಲೆಗೆ ದುಂಡು ಮಲ್ಲಿಗೆಯ ಮೊಗ್ಗು ಇಟ್ಟು ಕಟ್ಟುತ್ತಾರೆ -ಹೆರಿಗೆಯ ನಂತರ ಅಧಿಕ ರಕ್ತಸ್ರಾವ ಆಗುತ್ತಿದ್ದರೆ, ಬಿಳಿದಾಸವಾಳದ ಹೂವು ತಿನಿಸುತ್ತಾರೆ.

- ಮಗು ಅಜೀರ್ಣದಿಂದ ವಾಂತಿ ಮಾಡಿ ಕೊಂಡರೆ, ಅಜಿವಾನ ಬಜೆಯಗುಟ್ಟಿ ಹಾಕುತ್ತಾರೆ.

- ಬಾಣಂತಿಗೆ ಮೈ ತಿಂಡಿ ಬಂದರೆ ಬೇವು ಹಚ್ಚಿ ಸ್ನಾನ ಮಾಡಿಸುತ್ತಾರೆ.

ಅಡಿ ಟಿಪ್ಪಣಿಗಳು :

1.ಗಂಗಾಧರದೈವಜ್ಞ. ಬುಡಕಟ್ಟು ಸಮಾಜ ಹುಟ್ಟು - ಸಾವಿನ ನಡುವೆ. ಪುಟ .27. ನಿರ್ದೇಶಕರು , ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ -ಹಂಪಿ.2000 .

2. Dr.K.Park. Preventive and Social medicine page.no351.published by m\s Banaridas Bhanot 1167 prem nagar, Jabalpur , 482001 India.

3.ಗಂಗಾಧರದೈವಜ್ಞ. ಬುಡಕಟ್ಟು ಸಮಾಜ ಹುಟ್ಟು-ಸಾವಿನ ನಡುವೆ. ಪುಟ . 42.ನಿರ್ದೇಶಕರು, ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ -ಹಂಪಿ. 2000.

4. ಡಾ.ಹೆಚ್.ಜೆ..ಲಕ್ಕಪ್ಪಗೌಡ . ಕರ್ನಾಟಕ ಬುಡಕಟ್ಟುಗಳು ಸಂಪುಟ : 2. ಪುಟ.21,22. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ . ಬೆಂಗಳೂರು -1998.

5. ಅದೇ (4ನೇ) . ಪುಟ : 20.

6. ಡಾ.ಸಂ.ತಪಸ್ವಿ ಕುಮರ್. ಸಂಸ್ಕೃತಿ ವಿಕಾಸ. ಪುಟ. 146. ಚೇತನ ಅಂಜನಾದ್ರಿ, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು .2000.

7. Dr.K.Park. Preventive and Social medicine.published by m\s Banaridas Bhanot 1167 prem nagar, Jabalpur , 482001 India .

8. Dr. Vishwnath.M . . VIMS . Bellary .

9. ಡಾ.ಹೆಚ್.ಜೆ..ಲಕ್ಕಪ್ಪಗೌಡ . ಕರ್ನಾಟಕ ಬುಡಕಟ್ಟುಗಳು ಸಂಪುಟ : 2. ಪುಟ.182. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ . ಬೆಂಗಳೂರು -1998.


ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ



1. ಋತುಮತಿ



2. ಸೋದರ ಮಾವ ಹಸಿರುಗಿಡ ಮುಟ್ಟಿಸುವುದು



3. ದಸರಾ ಹಬ್ಬದಲ್ಲಿ ಅಖಂಡ ಪೂಜೆ




4 ಋಣ ಕೊಟ್ಟವರು 9-16ನೇ ದಿವಸದ ಆಚರಣೆಯಲ್ಲಿ



5. ಮುತ್ತಿನ ನೀರು ಎತ್ತುವುದು



6. ಸುರಿಗಿ



7. ಐರೇಣಿ ದೀಪ ಏರಿಸಿರುವುದು



8. ಧಾರೆ ಎರೆಯುವುದು

ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ

ಅಧ್ಯಾಯ - ಮೂರು

ಮೇದರ ಸಾಮಾಜಿಕ ವ್ಯವಸ್ಥೆ ಮತ್ತು ಧಾರ್ಮಿಕ ಆಚರಣೆಗಳು

3.1 ಪ್ರಸಾರ-ನೆಲೆಗಳು ಮತ್ತು ಜನಸಂಖ್ಯೆ

3.2 ಕೌಟುಂಬಿಕ ವ್ಯವಸ್ಥೆ ಮತ್ತು ನ್ಯಾಯ ನಿರ್ಣಯ

3.3 ಮೇದರ ಕುಲದ ಚಿಹ್ನೆ, ಬೆಡಗು ಮತ್ತು ಗೋತ್ರಗಳು

3.4 ವಸತಿ ಮತ್ತು ಆಹಾರ ಪದ್ಧತಿ

3.5 ಹಬ್ಬಗಳು ಮತ್ತು ಧಾರ್ಮಿಕಆಚರಣೆಗಳು

3.6 ಪವಾಡ ಪುರುಷರು ಮತ್ತು ಸಾಂಸ್ಕೃತಿಕ 456ವೀರರು

3.1 ಪ್ರಸಾರ-ನೆಲೆಗಳು ಮತ್ತು ಜನಸಂಖ್ಯೆ:

ಹಿಂದೆ ಮೇದರು ತಮ್ಮ ಕಸುಬಿಗೆ ಬೇಕಾದ ಕಚ್ಚಾಸಾಮಗ್ರಿ ದೊರೆಯುವ ಪ್ರದೇಶವನ್ನೇ ವಾಸದ ನೆಲೆಗಳಾಗಿ ಆಯ್ಕೆಮಾಡಿಕೊಳ್ಳುತ್ತಿದ್ದರು. ಅವು ಬಹುತೇಕ ಬೆಟ್ಟಗುಡ್ಡ ಪ್ರದೇಶಗಳಾಗಿರುತ್ತಿದ್ದವು. ಈ ಪ್ರದೇಶಗಳು ದಟ್ಟವಾದ ಕಾಡುಗಳಿಂದ ಆವೃತವಾಗಿರದೇ ವಿಸ್ತೃತವಾದ ತಪ್ಪಲು ಪ್ರದೇಶದಲ್ಲಿ ಹೇರಳವಾಗಿ ಬಿದಿರು ಬೆಳೆಯುವ ಪ್ರದೇಶಗಳಾಗಿರುತ್ತಿದ್ದವು. ಕರ್ನಾಟಕದಲ್ಲಿ ಇವು ಮಲೆನಾಡು ಮತ್ತು ಪಶ್ಚಿಮಘಟ್ಟಗಳ ಪ್ರದೇಶಗಳಾಗಿವೆ. ಮಲೆನಾಡು ಪ್ರದೇಶಗಳಲ್ಲಿ ನದಿತೀರದ ವಾಸಯೋಗ್ಯವಾದ ಪ್ರದೇಶಗಳನ್ನು ಇವರು ಆಯ್ಕೆಮಾಡಿಕೊಳ್ಳುತ್ತಿದ್ದರು. ಆಗುಂಬೆ ಬೆಟ್ಟಪರಿಸರ, ವಳಕುಂಜದ ಬೆಟ್ಟ, ಧರ್ಮಸ್ಥಳದಿಂದ ಬಲ್ಲಾಳರಾಯನ ದುರ್ಗ ಬೆಟ್ಟಸಾಲುಗಳಲ್ಲಿ ಮತ್ತು ಕುದುರೆ ಮುಖ ಅಲ್ಲದೇ ಇಡಗುಂಜಿ ಹೊರನಾಡು, ಶೃಂಗೇರಿ, ಕಳಸ, ಸೇರಿದಂತೆ, ಸಿರಿಸಿ, ದಾಂಡೇಲಿ, ಅಲ್ಲದೇ ಇನ್ನೂ ಅನೇಕ ಕಡೆಗಳಲ್ಲಿ ಮೇದರು ವಾಸಿಸುತ್ತಿದ್ದರು. ಮೇದರು, ತಮ್ಮ ಕಸುಬಿನ ವಾಣಿಜ್ಯ ವಿಸ್ತರಣೆಗೆ ತಮ್ಮ ಸಮುದಾಯದವರ ಹೆಚ್ಚು ಸಾಂದ್ರತೆ ಇಲ್ಲದ ಪ್ರದೇಶಗಳಿಗೆ ವಲಸೆ ಬಂದು ಜೀವಿಸುತ್ತಿದ್ದಾರೆ.

ಒಂದು ಕಾಲದಲ್ಲಿ ಮೇದರು ಕರ್ನಾಟಕಕ್ಕೆ, ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಿಂದ ವಲಸೆಬಂದು ನೆಲೆಸಿದ್ದಾರೆಂದು ತಿಳಿದುಬರುತ್ತದೆ. ಹೀಗೆ ವಲಸೆ ಬಂದ ಮೇದರು ತಮ್ಮ ಅನುಕೂಲಕ್ಕೆ ತಕ್ಕಂತೆ ಕರ್ನಾಟಕವಾದ್ಯಂತ ನೆಲಸಿದರು. ಭೌಗೋಳಿಕವಾಗಿ ತಮಗೆ ಅನುಕೂಲಕರವಾದ ಆಯಕಟ್ಟಿನ ಪ್ರದೇಶಗಳನ್ನು ಇವರು ಆಯ್ಕೆಮಾಡಿಕೊಂಡರು. ಇವರು ತಮ್ಮ ನೆಲೆಯನ್ನು ಆಯ್ಕೆ ಮಾಡುವಾಗ ವರ್ತಮಾನದ ಜೀವನಕ್ಕೆ ಪೂರಕವಾದುದನ್ನು ಕುರಿತಂತೆ ತಮ್ಮ ಮೂಲ ನೆಲೆಗಳಿಗೆ ಆದಷ್ಟು ಭೌಗೋಳಿಕವಾಗಿ ಹತ್ತಿರ ಇರುವಂತಹ ಪ್ರದೇಶಗಳನ್ನು ಆಯ್ಕೆಮಾಡಿಕೊಂಡರು. ಏಕೆಂದರೆ ಇವರು ತಮ್ಮ ರಕ್ತಸಂಬಂಧ ಮತ್ತು ಆ ಪ್ರದೇಶದ ಸಮುದಾಯದ ಸಂಬಂಧವನ್ನು ಬೇಗನೆ ಕಳೆದುಕೊಳ್ಳಲು ಅಸಾಧ್ಯ. ಸಂದರ್ಭಾನುಸಾರ ಇವರು ತಮ್ಮ ಮೂಲಪ್ರದೇಶಗಳಿಗೆ ಹೋಗಿ ಬರುವುದುಂಟು. ಕರ್ನಾಟಕದಲ್ಲಿ ಇವರ ನೆಲೆಗಳನ್ನು ಕುರಿತಾಗಿ "ಸೇಲಂ ಮತ್ತು ಪಲ್ಲಿ ಮೇದರು, ತೆಲುಗು ಮೇದರುಗಳು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗಾ. ಸಾಗರ, ರಾಯಚೂರುಗಳಲ್ಲಿ ಹೆಚ್ಚಾಗಿದ್ದಾರೆ. ಕನ್ನಡ ಮೇದರು ಶಿವಮೊಗ್ಗ, ಹಾಸನ, ತುಮಕೂರು, ತಿಪಟೂರು, ಅರಸೀಕೆರೆ, ಚೆನ್ನಗಿರಿ, ಸಾಗರ, ಶಿಕಾರಿಪುರ, ಚೆಳ್ಳಕೆರೆ, ಚಿತ್ರದುರ್ಗ, ಅಯನೂರು ಮುಂತಾದ ಪೇಟೆಗಳಲ್ಲಿ ಚಿಕ್ಕಮಗಳೂರು ಹಾಗೂ ಹಳ್ಳಿಗಾಡುಗಳಲ್ಲಿಯೂ ನೆಲೆಸಿದ್ದಾರೆ. 1901ರಲ್ಲಿ ಸಿಗುವ ಮಾಹಿತಿಯಂತೆ ಮೇದರು, ಹಿಂದೆ ಶಿವಮೊಗ್ಗ, ಕಡೂರು ಮತ್ತು ಮೈಸೂರಿನ ಹಳ್ಳಿಗಳಲ್ಲಿ ಹೆಚ್ಚು ನೆಲೆಸಿದ್ದರು. ಆದರೆ ಈಗ ಕರ್ನಾಟಕದ ಬಹುತೇಕ ಪೇಟೆಗಳಲ್ಲಿ ಇವರ ನೆಲೆಯನ್ನು ಕಾಣಬಹುದಾಗಿದೆ. ಲಕ್ಕವಳ್ಳಿ, ಅಜ್ಜಂಪುರ, ನರಸಿಂಹರಾಜಪುರದ ಹಳ್ಳಿಗಳಲ್ಲೂ ಇವರು ಇದ್ದಾರೆ.

ಆಲ್ದೂರು, ರಾಣಿಬೆನ್ನೂರು, ಹಿತ್ಲೂರು, ಹುಣಸೀಕೊಪ್ಪ ಕೊಪ್ಪ ಉಡುಗಣಿ, ಶಿರಾಳಕೊಪ್ಪ ಇಡಗೋಡು, ಗಾಂಧಿನಗರ, ಇಟ್ಟಿಗೆಹಳ್ಳಿ, ತಿಮ್ಲಾಪುರ, ಚೆನ್ನಪಟ್ನ, ಕೋಲಾರ, ಮುಳುಬಾಗಿಲು,ಚಿಂತಾಮಣಿ, ಶಿಡ್ಲಘಟ್ಟ ಗೌರಿಬಿದನೂರು, ಬಂಗಾರಪೇಟೆ, ದೇಗನಿಕೋಟೆ, ಮಾಲೂರು, ಮದ್ದೂರು, ಹೊಸಪೇಟೆ, ಕುಣಿಗಲ್, ಗುಬ್ಬಿಮಾರಂಡಳ್ಳಿ, ಅತ್ತಿಬೈಲು, ಹೊನ್ನಾಳಿ, ಮಲೆಬೆನ್ನೂರು, ಹರಿಹರ ದಾವಣಗೆರೆ, ಹೊಸಪೇಟೆ, ಬಳ್ಳಾರಿ, ಗಂಗಾವತಿ, ಕಂಪ್ಲಿ, ಕೊಟ್ಟೂರು, ಹರಪನಹಳ್ಳಿ, ಹಿರೇಕೆರೂರು, ಹಗರಿಬೊಮ್ಮನಹಳ್ಳಿ, ಸೊರಬನಗಳ್ಳಿ, ಸೊಂಡೂರು, ಕೊಪ್ಪಳ, ಶಿರಾಳಕೊಪ್ಪಹಾವೇರಿ ತ್ಯಾಗರ್ತಿ, ಜಟೆ,ಮಳಗೆ, ಹಿರೆಏಳಗೋಳು, ಚಂದ್ರಗುತ್ತಿ ಕಾನಗೋಡು, ಬಂಕಾಪುರ, ಸಿಗ್ಗಾವ್, ಲಕ್ಷ್ಮೇಶ್ವರ,ಬ್ಯಾಡಗಿ, ಮಲೆಬೆನ್ನೂರು. ಈ ಪ್ರದೇಶಗಳಲ್ಲಿ ಮತ್ತು ಹಳ್ಳಿಗಾಡುಗಳಲ್ಲಿ ಮೇದರ ನೆಲೆಗಳನ್ನು ಕಾಣಬಹುದು. 1901ರ ಜನಗಣತಿಯ ಪ್ರಕಾರ ಇವರ ಜನಸಂಖ್ಯೆ ಕರ್ನಾಟಕದಲ್ಲಿ 5774 ಆಗಿತ್ತು ಇವರಲ್ಲಿ 2887 ಪುರುಷರು ಹಾಗೂ ಇಷ್ಟೇ ಸಂಖ್ಯೆಯ ಸ್ತ್ರೀಯರಿದ್ದರೆಂದು ವರದಿ ಮಾಡಲಾಗಿದೆ. 1971ರಲ್ಲಿ ಕೊಡಗು ಜಿಲ್ಲೆಯಲ್ಲಿ ಕೇವಲ 325 ಜನರು ಮಾತ್ರ ಇದ್ದರು. ಈಗ ಬೇರೆ ಕಡೆಗಳಿಂದ ಬಂದು ನೆಲಸಿದವರೂ ಸೇರಿದಂತೆ 1981ರ ಜನಗಣತಿಯಪ್ರಕಾರ 1860ಜನರು ಈ ಜಿಲ್ಲೆಯಲ್ಲಿ ವಾಸಿಸುತ್ತಿದ್ದಾರೆ. ಇವರಲ್ಲಿ 64%. ಪಟ್ಟಣಗಳಲ್ಲಿ ವಾಸಮಾಡಿದರೆ 56% ಜನರು ಹಳ್ಳಿಪ್ರದೇಶಗಳಲ್ಲಿ ನೆಲೆಸಿರುತ್ತಾರೆ.[1] 1991ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಮೇದರ ಜನಸಂಖ್ಯೆ 31064 ಇದೆ. ಇವರಲ್ಲಿ 13405 ಜನರು ಗ್ರಾಮಾಂತರ ಪ್ರದೇಶದಲ್ಲಿ ಮತ್ತು 17659ಜನ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿರುವುದಾಗಿ ತಿಳಿದು ಬಂದಿದೆ. ಇದರಲ್ಲಿ 15859 ಪುರುಷರು ಮತ್ತು 15205 ಜನ ಮಹಿಳೆಯರು ಇರುವುದು ಕಂಡುಬರುತ್ತವೆ. ಪ್ರಸ್ತುತ ನನ್ನ ಕಾರ್ಯಕ್ಷೇತ್ರದ ಜನಗಣತಿಯ ಪ್ರಕಾರ ದಿನಾಂಕ 1.1.2003 ರಂದು ಬಳ್ಳಾರಿ ಜಿಲ್ಲೆಯ ಮೇದರ ಜನಸಂಖ್ಯೆ 3036 ಇದ್ದು ಇದರಲ್ಲಿ 1559 ಪುರುಷರು ಮತ್ತು 1477 ಮಹಿಳೆಯರು ಇರುವುದು ತಿಳಿದುಬಂದಿದೆ.

3.1.1 ಬಳ್ಳಾರಿ ಜಿಲ್ಲೆಯ ಜನಸಂಖ್ಯೆ ಮಾಹಿತಿ ಮತ್ತು ಪ್ರಸಾರ ನೆಲೆಗಳು :

ನನ್ನ ಅಧ್ಯಯನದ ಭೌಗೋಳಿಕ ವ್ಯಾಪ್ತಿ ಬಳ್ಳಾರಿ ಜಿಲ್ಲೆ. ಆದ್ದರಿಂದ ಮೇದರ ನೆಲೆಗಳನ್ನು ಬಳ್ಳಾರಿ ಜಿಲ್ಲೆಗೆ ಸಂಬಂಧ ಪಟ್ಟಂತೆ ನಾನು ನನ್ನ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯ ಅಂಕಿಅಂಶಗಳ ಪ್ರಕಾರ ವಿವರಣೆಯನ್ನು ಕೋಷ್ಟಕದ ಮೂಲಕ ಹೇಳಿದ್ದೇನೆ. ಬಳ್ಳಾರಿ ಜಿಲ್ಲೆಯಲ್ಲಿ ಮೇದರು ಕೆಲವುಕಡೆ ಪ್ರತ್ಯೇಕವಾದ ಓಣಿಯಲ್ಲಿ ನೆಲೆಸಿರುವುದು ಕಂಡು ಬರುತ್ತದೆ. ಮತ್ತು ಕೆಲವುಕಡೆ ಇತರೆ ಬುಡಕಟ್ಟು ಇಲ್ಲವೇ ಹಿಂದುಳಿದ ವರ್ಗಗಳ ಜೊತೆಯಲ್ಲಿ ನೆಲಸಿರುವುದು ಕಂಡುಬರುವುದುಂಟು. ಬಳ್ಳಾರಿ ಜಿಲ್ಲೆಯಾದ್ಯಂತ ಒಟ್ಟು 525 ಕುಟುಂಬಗಳು ನೆಲಸಿರುವುದು ಕಂಡುಬಂದಿದೆ. ಈ ಮಾಹಿತಿಯ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ ಮೇದರು ಎಲ್ಲಾ ತಾಲೂಕುಗಳಲ್ಲಿ ನೆಲಸಿರುವರು. ಬಳ್ಳಾರಿ ಜಿಲ್ಲಾಕೇಂದ್ರ ಹಾಗೂ ಹೊಸಪೇಟೆ ಕೇಂದ್ರ ಪ್ರದೇಶಗಳಲ್ಲಿ ಇವರು ಅಧಿಕ ಸಂಖ್ಯೆಯಲ್ಲಿದ್ದಾರೆ. ತಾಲೂಕವಾರು ಇವರ ನೆಲೆಗಳನ್ನು

ಹೇಳುವುದಾದರೆ, ಬಳ್ಳಾರಿ ತಾಲೂಕಿನ ಎಮ್ಮಿಗನೂರು, ಬಳ್ಳಾರಿ, ಕುಡುತಿನಿ, ಕುರುಗೋಡು, ರುದ್ರಪಾದ, ಮತ್ತು ಶ್ರೀಧರಗಡ್ಡೆಗಳಲ್ಲಿ ನೆಲಸಿದ್ದು, ಈ ತಾಲೂಕಿನ ಒಟ್ಟು ಜನಸಂಖ್ಯೆ **1159** ಇದ್ದು, ಇದರಲ್ಲಿ **543** ಮಹಿಳೆಯರು ಮತ್ತು **616** ಪುರುಷರು ಇದ್ದಾರೆ. ಜಿಲ್ಲೆಯಲ್ಲಿಯೇ ಬಳ್ಳಾರಿ ತಾಲೂಕ ಅತಿ ಹೆಚ್ಚುಸಾಕ್ಷರ ಅಂದರೆ 73.89% ಹೊಂದಿದೆ. ಅತೀ ಕಡಿಮೆ ಸಾಕ್ಷರತೆ ಪ್ರಮಾಣವನ್ನು ಶಿರುಗುಪ್ಪ ತಾಲೂಕು 51.37% ಹೊಂದಿದೆ. ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಬೆಣ್ಣೆಕಲ್ಲು, ದಶಮಾಪುರ, ಹಗರಿಬೊಮ್ಮನಹಳ್ಳಿ, ಹಂಪಸಾಗರ, ತಂಬ್ರಹಳ್ಳಿಗಳಲ್ಲಿ ನೆಲೆಸಿದ್ದಾರೆ. ಈ ತಾಲೂಕಿನ ಒಟ್ಟು ಜನಸಂಖ್ಯೆ **171** ಇದ್ದು ಇದರಲ್ಲಿ **87** ಮಹಿಳೆಯರು ಮತ್ತು **84** ಪುರುಷರು ಇದ್ದಾರೆ. ಹೊಸಪೇಟೆ ತಾಲೂಕಿನ ಅನಂತಶಯನಗುಡಿ, ದಣಾಪುರ, ಗರಗ, ಹಾರುವನಹಳ್ಳಿ, ಹೊಸಪೇಟೆ, ಮರಿಯಮ್ಮನಹಳ್ಳಿ, ನಾಗೇನಹಳ್ಳಿ, ಕಂಪ್ಲಿ ಮತ್ತು ಕಮಲಾಪುರಗಳಲ್ಲಿ ನೆಲೆಸಿದ್ದಾರೆ. ಈ ತಾಲೂಕಿನ ಒಟ್ಟು ಜನಸಂಖ್ಯೆ **872** ಇದೆ. ಇದರಲ್ಲಿ **436** ಮಹಿಳೆಯರು ಮತ್ತು **436** ಪುರುಷರು ಇದ್ದಾರೆ. ಹೂವಿನ ಹಡಗಲಿ ತಾಲೂಕಿನ ಇಟಗಿ, ಹೂವಿನಹಡಗಲಿ, ಹೊಳಲು, ಮಾಗಳ, ಮುದೆನೂರು, ಮೈಲಾರ, ಸೋಗಿಯಲ್ಲಿ ನೆಲೆಸಿದ್ದಾರೆ. ಈ ತಾಲೂಕಿನ ಒಟ್ಟು ಜನಸಂಖ್ಯೆ **230** ಇದೆ. ಇದರಲ್ಲಿ **117** ಮಹಿಳೆಯರು ಮತ್ತು **113** ಪುರುಷರಾಗಿದ್ದಾರೆ. ಸಿರುಗುಪ್ಪ ತಾಲೂಕಿನ ಸಿರಿಗೇರಿ, ಸಿರಗುಪ್ಪಾ, ತೆಕ್ಕಲಕೋಟೆಗಳಲ್ಲಿ ನೆಲೆಸಿದ್ದಾರೆ. ಈ ತಾಲೂಕಿನ ಒಟ್ಟು ಜನಸಂಖ್ಯೆ **138** ಇರುವುದು. ಇದರಲ್ಲಿ **73** ಮಹಿಳೆಯರು ಮತ್ತು **65** ಪುರುಷರು ಇದ್ದಾರೆ. ಸೊಂಡೂರು ತಾಲೂಕಿನ ಅಂಕಮ್ಮನಾಳು, ಬಂಡ್ರಿ, ಚೋರನೂರು, ಸುಶೀಲನಗರ, ಸೊಂಡೂರು, ತಾರಾನಗರ, ತೋರಣಗಲ್ಲುಗಳಲ್ಲಿ ನೆಲೆಸಿರುವರು. ಈ ತಾಲೂಕಿನ ಒಟ್ಟು ಜನಸಂಖ್ಯೆ **257** ಇದೆ. ಇದರಲ್ಲಿ **128** ಮಹಿಳೆಯರು ಮತ್ತು **129** ಪುರುಷರಿದ್ದಾರೆ. ಕೂಡ್ಲಿಗಿ ತಾಲೂಕಿನ ಅಪ್ಪಯ್ಯನಹಳ್ಳಿ, ಗುಡೆಕೋಟೆ, ಕೂಡ್ಲಿಗಿ, ಕೊಟ್ಟೂರು, ಮಹದೇವಪುರ, ರಾಯಪುರ, ಸಿಡೆಗಲ್ಲುಗಳಲ್ಲಿ ನೆಲೆಸಿರುವರು. ಈ ತಾಲೂಕಿನ ಒಟ್ಟು ಜನಸಂಖ್ಯೆ **209** ಇದ್ದು, ಇದರಲ್ಲಿ **93** ಮಹಿಳೆಯರು ಮತ್ತು **116** ಪುರುಷರಿದ್ದಾರೆ. ಬಳ್ಳಾರಿ ಜಿಲ್ಲೆಯ ಮೇದರ ಒಟ್ಟು ಜನಸಂಖ್ಯೆ **3036**. ಇದರಲ್ಲಿ **1477** ಮಹಿಳೆಯರು ಮತ್ತು **1559** ಪುರುಷರಿದ್ದಾರೆ. ಬಳ್ಳಾರಿಜಿಲ್ಲೆಯ ಬಳ್ಳಾರಿ ಪಟ್ಟಣದಲ್ಲಿ ಅಧಿಕ ಜನ ನೆಲೆಸಿದ್ದಾರೆ. ಇಲ್ಲಿ ಒಟ್ಟು 155 ಕುಟುಂಬಗಳ 953 ಜನ ನೆಲಸಿರುವರು. ಜಿಲ್ಲೆಯಲ್ಲಿಯೇ ಅತಿ ಕಡಿಮೆ ಅಂದರೆ ತಂಬರಹಳ್ಳಿ ಮತ್ತು ಸಿಡೇಗಲ್ಲು ಗ್ರಾಮಗಳಲ್ಲಿ ಒಂದೇ ಕುಟುಂಬ ನೆಲೆಸಿದ್ದು ಇಲ್ಲಿಯ ಜನಸಂಖ್ಯೆ 1 ಇರುವುದು. ಜಿಲ್ಲೆಯ ಮೇದ ಬುಡಕಟ್ಟು ಸಮುದಾಯದ ಈ ನನ್ನ ಅಧ್ಯಯನದಿಂದ ಬಳ್ಳಾರಿಯ ಜಿಲ್ಲೆಗೆ ಸಂಬಂಧಿಸಿದಂತೆ ಪ್ರತಿಯೊಂದು ತಾಲೂಕಿನ ಜನಸಂಖ್ಯೆಯ ಸಂಪೂರ್ಣ ಮಾಹಿತಿಯನ್ನು ಇಲ್ಲಿ ವಿವಿಧ ದೃಷ್ಟಿಕೋನದಿಂದ ಕೋಷ್ಟಕದ ಮೂಲಕ ಹೇಳಲಾಗಿದೆ. (ಒಂದರಿಂದ ನಾಲ್ಕನೇ ಕೋಷ್ಟಕಗಳನ್ನು ನೋಡಿರಿ) ತಾಲೂಕುವಾರು ಜನಸಂಖ್ಯೆಗೆ ಸಂಬಂಧಿಸಿದ ಹೆಚ್ಚಿನ ಕೋಷ್ಟಕಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಕೋಷ್ಟಕ - 1: ಬಳ್ಳಾರಿ ಜಿಲ್ಲೆಯ ಮೇದ ಸಮುದಾಯದ ತಾಲೂಕುವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಕೋಷ್ಟಕ

ಕ್ರ.ಸಂ	ಜಿಲ್ಲೆ	ತಾಲೂಕು	ಕುಟುಂಬಗಳು	ಜನ ಸಂಖ್ಯೆ		ಒಟ್ಟು
				ಗಂಡು	ಹೆಣ್ಣು	
1	ಬಳ್ಳಾರಿ	ಬಳ್ಳಾರಿ	199	616	543	1559
2	,,	ಹಗರಿಬೊಮ್ಮನಹಳ್ಳಿ	33	84	87	171
3	,,	ಹೂವಿನ ಹಡಗಲಿ	46	113	117	230
4	,,	ಹೊಸಪೇಟೆ	142	436	436	872
5	,,	ಕೂಡ್ಲಿಗಿ	38	116	93	209
6	,,	ಶಿರಗುಪ್ಪ	24	65	73	138
	,,	ಸೊಂಡೂರು	43	129	128	257
		ಒಟ್ಟು	525	1559	1477	3036

ಕೋಷ್ಟಕ - 2 : ಬಳ್ಳಾರಿ ಜಿಲ್ಲೆಯ ಮೇದ ಸಮುದಾಯದ ತಾಲೂಕುವಾರು ಸಾಕ್ಷರ ಅರ್ಹರು ಮತ್ತು ಸಾಕ್ಷರರ ಶೈಕ್ಷಣಿಕ ಮಾಹಿತಿ ಕೋಷ್ಟಕ

ಕ್ರ. ಸಂ.	ತಾಲೂಕು	ಕುಟುಂಬ ಸಂಖ್ಯೆ	ಒಟ್ಟು ಜನ ಸಂಖ್ಯೆ			0-6			ಸಾಕ್ಷರ ಅರ್ಹರು			ಸಾಕ್ಷರರು			ಶೇಕಡವಾರು
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	
1	ಬಳ್ಳಾರಿ	199	616	543	1559	71	73	144	545	470	1015	451	299	750	73.89
2	ಹಗರಿಬೊಮ್ಮನಹಳ್ಳಿ	33	84	87	171	08	12	20	76	75	151	61	48	109	72.19
3	ಹೂವಿನ ಹಡಗಲಿ	46	113	117	230	13	15	28	100	102	202	78	48	126	62.37
4	ಹೊಸಪೇಟೆ	142	436	436	872	67	63	130	369	373	742	281	201	482	64.95
5	ಕೂಡ್ಲಿಗಿ	38	116	93	209	16	07	23	100	86	186	78	43	121	65.05
6	ಶಿರಗುಪ್ಪ	24	65	73	138	11	18	29	54	55	109	31	25	56	51.37
7	ಸೊಂಡೂರು	43	129	128	257	22	31	53	107	97	204	78	42	120	58.82
	ಒಟ್ಟು	525	1559	1477	3036	208	219	427	1351	1258	2609	1058	706	1764	67.61

ಕೋಷ್ಟಕ- 3: ಬಳ್ಳಾರಿ ಜಿಲ್ಲೆಯ ಮೇದು ಸಮುದಾಯದ ಲಿಂಗವಾರು ವಯೋಗುಂಪು ಶೈಕ್ಷಣಿಕ ಮಾಹಿತಿ ಕೋಷ್ಟಕ.

ಕ್ರ ಸಂ	ತಾಲೂಕು	ಕುಟುಂಬ ಸಂಖ್ಯೆ	0-6		7-17		18-40		41-60		61-ಮೇಲ್ಪಟ್ಟ		ಒಟ್ಟು ಜನಸಂಖ್ಯೆ			ವಿದ್ಯಾರ್ಹತೆ 1-7		8-10		11-12		ಪದವಿ		ಸ್ನಾತಕ ಪದವಿ	
			ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಒಟ್ಟು	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
1	ಬಳ್ಳಾರಿ	199	71	73	156	119	264	242	94	86	31	23	616	543	1559	214	177	147	109	48	13	41	-	01	-
2	ಹ.ಬೊ.ಹಳ್ಳಿ	33	08	12	23	28	38	35	12	09	03	02	84	87	171	30	25	21	20	02	02	07	01	01	-
3	ಹೂವಿನ ಹಡಗಲಿ	46	13	15	30	31	50	43	14	19	06	09	113	117	230	49	27	20	14	06	01	04	01	-	-
4	ಹೊಸಪೇಟೆ	142	67	63	107	127	187	169	61	61	14	16	436	436	872	152	125	84	66	31	07	14	03	-	-
5	ಕೂಡ್ಲಿಗಿ	38	16	07	35	28	42	41	17	13	06	04	116	93	209	40	30	19	10	10	02	09	-	-	-
6	ಶಿರುಗುಪ್ಪ	24	11	18	11	13	31	28	10	14	02	-	65	73	138	17	19	11	06	02	-	01	-	-	-
7	ಸೊಂಡೂರು	43	22	31	33	27	51	56	18	11	05	03	129	128	157	46	28	21	14	06	-	05	-	-	-
	ಒಟ್ಟು	525	208	219	395	373	663	614	226	213	67	57	1559	1477	3036	548	435	223	293	104	27	81	05	02	-

ಕೋಷ್ಟಕ - 4: ಬಳ್ಳಾರಿ ಜಿಲ್ಲೆಯ ಮೇದು ಸಮುದಾಯದ ತಾಲೂಕುವಾರು ಮತ್ತು ಲಿಂಗವಾರು ವಯೋಗುಂಪು ಜನಸಂಖ್ಯೆ ಕೋಷ್ಟಕ.

ಕ್ರ. ಸಂ	ತಾಲೂಕು	ವಯೋ ಗುಂಪು																	
		0-14			15-29			30-44			45-59			60- ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಬಳ್ಳಾರಿ	185	160	345	197	178	375	126	106	232	67	58	125	41	41	82	616	543	1559
2	ಹಗರಿಬೊಮ್ಮನಹಳ್ಳಿ	28	33	61	24	25	49	18	21	39	10	05	15	04	03	07	84	87	171
3	ಹೂವಿನ ಹಡಗಲಿ	34	37	71	41	32	73	18	20	38	08	14	22	12	14	26	113	117	230
4	ಹೊಸಪೇಟೆ	150	155	305	128	117	245	85	88	173	50	52	102	23	24	47	436	436	872
5	ಕೂಡ್ಲಿಗಿ	40	24	64	34	29	63	21	24	45	14	12	26	07	04	11	116	93	209
6	ಶಿರಗುಪ್ಪ	19	28	47	23	19	42	11	12	23	05	11	16	07	03	10	65	73	138
7	ಸೊಂಡೂರು	46	53	99	40	33	73	22	29	51	14	08	22	07	05	12	129	128	257
	ಒಟ್ಟು ಜನ ಸಂಖ್ಯೆ	502	490	992	487	433	920	301	300	601	168	160	328	101	94	195	1559	1477	3036

3.2 ಕೌಟುಂಬಿಕ ವ್ಯವಸ್ಥೆ ಮತ್ತು ನ್ಯಾಯ ನಿರ್ಣಯ:

ಪೀಠಿಕೆ :

ಭಾರತದಲ್ಲಿ ನೆಲಸಿರುವ ವಿವಿಧ ಸಮುದಾಯದ ಕುಟುಂಬದ ವ್ಯವಸ್ಥೆ ಅವರ ಜಾತಿ ಮತ್ತು ಧರ್ಮದ ಸಾಮಾನ್ಯ ನಿಯಮಗಳ ಮೇಲೆ ರೂಪಗೊಂಡಿರುತ್ತದೆ. ಇಲ್ಲಿಯ ಎಲ್ಲಾ ಸಮುದಾಯಗಳ ಕುಟುಂಬಗಳನ್ನು ಅವಿಭಕ್ತ ಕುಟುಂಬಗಳು ಅಥವಾ ಹಿಂದೂ ಅವಿಭಕ್ತ ಕುಟುಂಬಗಳು (Hindu undivided family) ಎಂದು ಕರೆಯಲಾಗುತ್ತದೆ. ಮೇದರ ಕೌಟುಂಬಿಕ ವ್ಯವಸ್ಥೆಯನ್ನು ಕಾನೂನಿನ ದೃಷ್ಟಿಯಲ್ಲಿ ಈ ಸಮುದಾಯದ ಕುಟುಂಬ ಒಳಾಡಳಿತ ಮತ್ತು ಹೊರ ಸಮುದಾಯದೊಂದಿಗೆ ಹಾಗೂ ಸಮಾಜದೊಂದಿಗೆ ಇರುವ ಸಂಬಂಧವನ್ನು ಪರಿಗಣಿಸಲಾಗುವುದು. ಭಾರತದ ಹಿಂದೂ ಅವಿಭಕ್ತ ಕುಟುಂಬದ ಕಾನೂನಿನ ಮತ್ತು ವಾರಸುದಾರಿಕೆಯ ಪ್ರಕಾರ ಕರ್ನಾಟಕದಲ್ಲಿ ನೆಲಸಿರುವ ಮೇದರ ಕೌಟುಂಬಿಕ ಆಸ್ತಿಯ ವಾರಸುದಾರಿಕೆಯು ಮಿತಾಕ್ಷರ ಕುಟುಂಬದ ತತ್ವದಂತೆ ನಡೆಯುತ್ತದೆ. ಅಂತೆಯೇ ಹಿಂದು ಅವಿಭಕ್ತ ಕುಟುಂಬ ಮತ್ತು ಅದರ ಸದಸ್ಯರ ವಾರಸುದಾರಿಕೆಯನ್ನು ಕುರಿತಂತೆ, ಆದಾಯ ತೆರಿಗೆ ವಿದ್ವಾಂಸರು ಹೀಗೆ ಹೇಳುತ್ತಾರೆ. "As per the Hindu law a joint hindu family is one ,which consists of all persons linealy discendended from common ancestor including their wives and unmarried daughters(excluding married daughters). But, only one member cannot constitute a joint Hindu family To call it as family atleast there must be two or more persons wheather male or females. The members of the family who are entitled to demand their share on partition of the family are called **coparceners.** The Hindu coparcenary includes only such persons who acquire an interest in the joint family property. According to hindu law, joint hindu families are governed by the principal schools, namely, Dayabhaga and Mitakshara ". ಭಾರತೀಯ ಹಿಂದೂ ಕಾನೂನಿನನ್ವಯ ಹಿಂದು ಅವಿಭಕ್ತ ಕುಟುಂಬ ಎಂದರೆ ತಂದೆ,ತಾಯಿ, ಮಕ್ಕಳು ಮತ್ತು ಮದುವೆ ಆಗದ ಹೆಣ್ಣು ಮಕ್ಕಳಲ್ಲದೇ ಮದುವೆಯಾದ ಗಂಡುಮಕ್ಕಳ ಪತ್ನಿಯರು ಮತ್ತು ಮಕ್ಕಳು ಎಂದಾಗುತ್ತದೆ. ಕುಟುಂಬ ಎಂದರೆ ಗಂಡಾಗಲಿ ಹೆಣ್ಣಾಗಲಿ ಕನಿಷ್ಟಪಕ್ಷ ಇಬ್ಬರು ವ್ಯಕ್ತಿಗಳು ಇರಲೇಬೇಕು. ಕಾನೂನಿನ ಪ್ರಕಾರ ಈ ಕುಟುಂಬದ ಆಸ್ತಿಯಲ್ಲಿ ಪಾಲು ಪಡೆಯಲು ಅರ್ಹರಾದ ವ್ಯಕ್ತಿಯನ್ನು ವಾರಸುದಾರರು "coparceners"ಎಂದು ಕರೆಯಲಾಗುತ್ತದೆ. ಹಿಂದೂ ಕಾನೂನಿನ ಪ್ರಕಾರ ಹಿಂದು ಅವಿಭಕ್ತ ಕುಟುಂಬದಲ್ಲಿಯ ವಾರಸುದಾರಿಕೆ ಹಕ್ಕು ನಿರ್ಧಾರವನ್ನು ಮಿತಕ್ಷರ ಮತ್ತು ದಯಾಭಾಗ ಎಂಬ ಎರಡು ಕುಟುಂಬದ ತತ್ವದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ದಯಾಭಾಗ ಕುಟುಂಬದ ತತ್ವದ ಪ್ರಕಾರ ಆ ಕುಟುಂಬದಲ್ಲಿ ಜನಿಸಿದ ಪ್ರತಿಯೊಂದು ಗಂಡುಮಗುವು ತಂದೆಯ ಆಸ್ತಿಯಲ್ಲಿ ಹಕ್ಕನ್ನು ತಂದೆಯ ಮರಣದ ನಂತರ ಪಡೆಯುತ್ತಾನೆ. ಆದರೆ, ಮಿತಕ್ಷರ ಕುಟುಂಬದಲ್ಲಿ ಪ್ರತಿಯೊಂದು ಗಂಡು ಮಗುವು ತನ್ನ

ಜನನದ ಮರುಕ್ಷಣವೇ ತಂದೆಯ ಆಸ್ತಿಯಲ್ಲಿ ಹಕ್ಕನ್ನು ಪಡೆಯುವನು. ಕಾರಣ ಕರ್ನಾಟಕದಲ್ಲಿ ನೆಲೆಸಿರುವ ಮೇದರು ಮಿತಾಕ್ಷರಕುಟುಂಬದ ತತ್ವಕ್ಕೆ ಒಳಪಡುತ್ತಾರೆ. ಮೇದರ ಕುಟುಂಬದಲ್ಲಿ ಜನಿಸಿದ ಗಂಡು ಮಗುವು ತನ್ನ ಜನನದ ಮರುಕ್ಷಣದಿಂದಲೇ ತಂದೆಯ ಆಸ್ತಿಯಲ್ಲಿ ವಾರಸುದಾರಿಕೆಯ ಹಕ್ಕು ಪಡೆಯುತ್ತಾನೆ.

3.2.1ಕೌಟುಂಬಿಕ ವ್ಯವಸ್ಥೆ:

ಮೇದರ ವೈಯಕ್ತಿಕ ಕುಟುಂಬದ ಒಳಾಡಳಿತವನ್ನು ಕುರಿತಂತೆ ಹೇಳುವುದಾದರೆ, ಮೇದರ ಕುಟುಂಬಗಳು ಪುರುಷ ಪ್ರಧಾನ ಕುಟುಂಬಗಳು. ಮನೆಯಲ್ಲಿ ತಂದೆ ಅಥವಾ ಹಿರಿಯಮಗ ಮನೆಯ ಯಜಮಾನಿಕೆಯನ್ನು ಮಾಡುತ್ತಾನೆ. ಕುಟುಂಬದ ಹೊರನಿಯಂತ್ರಣವನ್ನು ಯಜಮಾನನೇ ಮಾಡುವನು. ಒಳವ್ಯವಸ್ಥೆಯಲ್ಲಿ ತಾಯಿಯ ಪಾತ್ರ ಪ್ರಮುಖವಾಗಿರುತ್ತದೆ. ಯಾವುದಾದರೂ, ಕೊಡು-ಕೊಳ್ಳುವುದು ಮತ್ತು ಕೌಟುಂಬಿಕ ನಿರ್ಧಾರವನ್ನು ತಂದೆ-ತಾಯಿ ಸೇರಿದಂತೆ ಮಕ್ಕಳ ಜೊತೆಗೂಡಿ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳುವರು. ಸಾಮಾನ್ಯವಾಗಿ ಇವರು ಗ್ರಾಮದ ಎಲ್ಲಾ ವರ್ಗದ ಜನರ ಜೊತೆ ಉತ್ತಮ ಸಂಬಂಧವನ್ನು ಹೊಂದಿರುವರು. ಹಾಗೂ ಅವರನ್ನು ಬಂಧುತ್ವದ ಗೌರವಸೂಚಕ ಭಾಷೆಯಿಂದ ಮಾತನಾಡಿಸುವರು. ಮನೆಯಲ್ಲಿ ಹಿರಿಯರಿಗೆ ಹೆಚ್ಚಿನ ಗೌರವವನ್ನು ಕೊಡುತ್ತಾರೆ. ಮನೆಯಲ್ಲಿ ಮಕ್ಕಳು ತಾಯಿಯ ನೀತಿಪಾಠವನ್ನು ಪಾಲಿಸುತ್ತಾರೆ. ಹೆಣ್ಣು ಹುಡುಗಿ ಋತು ಮತಿ ಆಗುತ್ತಿದ್ದಂತೆಯೇ ಅಡಿಗೆಯ ಮನೆಯ ಸಂಸ್ಕಾರ ಕಲಿಸುತ್ತಾರೆ. ತಮ್ಮ ಸಂಸ್ಕೃತಿ ಮತ್ತು ಪ್ರಾದೇಶಿಕ ಸಂಸ್ಕೃತಿಯನ್ನು ಸಹ ಮಕ್ಕಳಿಗೆ ಹತ್ತು-ಹನ್ನೆರಡನೇ ವರ್ಷದಿಂದಲೇ ಕಲಿಸುತ್ತಾರೆ. ಮೇದರ ಮಹಿಳೆಯರು ಮತ್ತು ಕನ್ಯೆಯರು ಪ್ರಾದೇಶಿಕವಾಗಿ ವರಮಹಾಲಕ್ಷ್ಮಿ, ವೈಭವ ಲಕ್ಷ್ಮಿ, ಸಂಕಷ್ಟಮಿ, ಮುಂತಾದ ವ್ರತಗಳನ್ನು ಆಚರಿಸುವರು. ಋತುಮತಿಯಾದ ಹುಡುಗಿಯರನ್ನು ಹೊರಗೆ ಕಳುಹಿಸುವಾಗ ಕೆಲವು ನಿರ್ಬಂಧಗಳನ್ನು ಪಾಲಿಸುತ್ತಾರೆ. ಮಕ್ಕಳು ಆಟವಾಡುವಾಗ ಮಲೆಮ್ಮನ ಜಾತ್ರೆ, ಕತ್ತಿ ಪೂಜೆ, ಡಿಪೋ ಮಾಲಿಕನಾಗಿ, ಬುಟ್ಟಿ -ಮೊರ-ಚಿಬ್ಬಲಿಯನ್ನು ತಲೆಯ ಮೇಲೆ ಹೊತ್ತು ಮಾರುವ ಮಾರಾಟಗಾರರಾಗಿ, ಅನುಕರಣೆಯ ಆಟವನ್ನು ಆಡುವುದು ಕಂಡು ಬರುತ್ತದೆ. ಇದು ಈ ಸಮುದಾಯದ ಮಕ್ಕಳಲ್ಲಿ ಅಪ್ರತ್ಯಕ್ಷವಾಗಿ ಮೂಡಿದ ಪಾರಂಪರಿಕ ಸಂಸ್ಕಾರ.

3.2.2 ನ್ಯಾಯ ನಿರ್ಣಯ:

ಮೇದರಲ್ಲಿ ಯಾವುದೇ ಕೌಟುಂಬಿಕ ಸಮಸ್ಯೆ ಬಂದರೆ ಅವುಗಳನ್ನು ತಮ್ಮೊಳಗೆ ಬಗೆಹರಿಸಿಕೊಳ್ಳುತ್ತಾರೆ. ಸಮುದಾಯದ ಸಮಸ್ಯೆ ಕುರಿತಂತೆ, ಇವರು ಸಮುದಾಯದ ಒಬ್ಬ ಹಿರಿಯ ಮುಖಂಡನನ್ನು ಜಾತಿಯ ಹಿರಿಯರೆಲ್ಲ ಸೇರಿ, ಆಯ್ಕೆಮಾಡುತ್ತಾರೆ. ಈತನನ್ನು ಯಜಮಾನ, ದೊಡ್ಡಮನುಷ್ಯ, ಬುದ್ಧಿವಂತ, ಪಟೇಲ, ಪ್ರೆಸಿಡೆಂಟ್, ಎಂದೆಲ್ಲಾ ಪ್ರದೇಶಾನುಸಾರವಾಗಿ ಕರೆಯುವರು. ಕೆಲವು ಪ್ರದೇಶಗಳಲ್ಲಿ ಐದುಮಂದಿ, ಇಲ್ಲವೇ ಮೂರುಜನ ಜಾತಿಯ ಮುಖಂಡರನ್ನಾಗಿ ಆಯ್ಕೆಮಾಡುತ್ತಾರೆ. ಸಮುದಾಯದ ವಿಷಯ ಕುರಿತಂತೆ ನಿರ್ಣಯ ಮಾಡುವಾಗ

ಜಾತಿಯವರೆಲ್ಲರೂ ತಮ್ಮ ಓಣಿಯ ಒಂದು ಸ್ಥಳದಲ್ಲಿ ಸೇರುವರು. ಕೆಲವು ಪ್ರದೇಶಗಳಲ್ಲಿ ಇದಕ್ಕಾಗಿ ಅಂಕಾಳಮ್ಮನ ಕಟ್ಟೆಯನ್ನು ಮಾಡಿದ್ದಾರೆ. ಜಾತಿಯ ಆಡಳಿತವನ್ನು ನಡೆಸುವವರು ಇವರೇ. ಸಮುದಾಯದ ಒಳಜಗಳಗಳನ್ನು ಇವರೇ ಬಗೆಹರಿಸುತ್ತಾರೆ. ಹಿಂದಿನ ಕಾಲದಲ್ಲಿ ಸಾಧ್ಯವಾದರೆ ತಪ್ಪಿತಸ್ಥರಿಗೆ ದಂಡ ವಿಧಿಸುತ್ತಿದ್ದರು. ಅಂದರೆ ಮೇದರು ಕಾಡಿನಲ್ಲಿ ತಮ್ಮ ಹಾಡಿಗಳಲ್ಲಿ ಜೀವಿಸುತ್ತಿದ್ದರು. ಯಾರಾದರೂ ಬೇರೆಯವರ ಹಾಡಿಯ ಬಿದಿರುಕಡಿದರೆ, ಪಂಚಾಯತಿ ಮಾಡಿ ತಪ್ಪು ದಂಡ ಕಟ್ಟಿಸುತ್ತಿದ್ದರು. ಆದರೆ, ಇತ್ತೀಚಿಗೆ ದಂಡ ವಿಧಿಸುವ ಪದ್ಧತಿ ಕಡಿಮೆಯಾಗಿದೆ. ಹಿಂದಿನ ಕಾಲದಲ್ಲಿ ಜಾತಿಯಿಂದ ಬಹಿಷ್ಕಾರಹಾಕುವ ಪದ್ಧತಿಯು ಈಗಲೂ ಈ ಸಮುದಾಯದಲ್ಲಿ ಮುಂದುವರಿದಿದೆ. ಜಾತಿಬಹಿಷ್ಕಾರಕ್ಕೆ ಒಳಗಾದವರು ಸಮುದಾಯದ ಯಾವುದೇ ಕಾರ್ಯಕ್ರಮದಲ್ಲಿ ಎಲ್ಲರಂತೆ ಭಾಗವಹಿಸುವಂತಿಲ್ಲ. ಈ ಸಮುದಾಯದವರು ತಮ್ಮ ಜಾತಿಯ ಒಳಜಗಳಗಳ ಪಂಚಾಯಿತಿಯನ್ನು ಮಾಡುವಾಗ ಇತರೆ ಸಮುದಾಯದವರನ್ನು ಸೇರಿಸಿಕೊಳ್ಳುವುದಿಲ್ಲ. ಒಂದು ವೇಳೆ ಜಾತಿಯ ಒಳಜಗಳಗಳ ಪಂಚಾಯ್ತಿಯು ಬಗೆಹರಿಯದಿದ್ದರೆ, ಈ ಪಂಚಾಯ್ತಿಯನ್ನು ಸಮುದಾಯದ ತಾಲೂಕು ಮಟ್ಟದ ಇಲ್ಲವೇ ಜಿಲ್ಲಾ ಮಟ್ಟದ ಮುಖಂಡರಿಗೆ ಒಪ್ಪಿಸುತ್ತಾರೆ.

ಸಮುದಾಯದ ಯಾವುದೇ ಕಾರ್ಯಕ್ರಮಗಳು ಜಾತಿಯ ಮುಖಂಡರ ಸಮುಖದಲ್ಲಿಯೇ ನಡೆಯುತ್ತವೆ. ಹಬ್ಬ ಜಾತ್ರೆ, ಸಾವು, ಮುಂತಾದ ಅನೇಕ ಕಾರ್ಯಕ್ರಮಗಳನ್ನು ಮುಖಂಡರು ಸಮುದಾಯದವರ ಜೊತೆಗೂಡಿ ನಡೆಸುವರು. ಕುಲದೇವಿಯ ಹಬ್ಬ ಮತ್ತು ಜಾತ್ರೆಯಲ್ಲಿ ಗೌಡರಬೆಡಗಿನ ಕುಟುಂಬದವರ ಜೊತೆಗೆ ಜಾತಿಯ ಮುಖಂಡ ಪ್ರಮುಖಪಾತ್ರ ವಹಿಸುತ್ತಾನೆ. ಕುಲದೇವತೆಯ ಜಾತ್ರೆಯ ಪ್ರತಿಯೊಂದು ಕಾರ್ಯಕ್ರಮವು ಮುಖಂಡನ ಸಮ್ಮುಖದಲ್ಲಿ ನಡೆಯುತ್ತದೆ. ಜಾತಿಯ ಯಜಮಾನ ಸಮುದಾಯದ ಯುವಕರನ್ನು ಮತ್ತು ಯಜಮಾನರನ್ನು ನಿರ್ದಿಷ್ಟವಾದ ಕೆಲಸಗಳಿಗೆಂದು ನಿಯಮಿಸಿ ಅವರಿಗೆ ಜವಬ್ದಾರಿಯನ್ನು ವಹಿಸುವನು. ಕಾರ್ಯಕ್ರಮ ಮುಗಿದ ನಂತರ ಎಲ್ಲಾ ಲೆಕ್ಕಾಚಾರವನ್ನು ಎಲ್ಲರ ಸಮ್ಮುಖದಲ್ಲಿ ಮಾಡುತ್ತಾರೆ. ಮದುವೆಯಂತಹ ಮಂಗಲಕಾರ್ಯಗಳಲ್ಲಿ ದೈವದ ಪರವಾಗಿ ಜಾತಿಯ ಮುಖಂಡರು ಪರ ಊರಿನ ದೈವದವರ ಸಮ್ಮುಖದಲ್ಲಿ ಮಾತುಕತೆ ಮಾಡಿ ದೈವದ ಹಣವನ್ನು ಕಟ್ಟಿಸಿಕೊಳ್ಳುವರು. ಕನ್ಯೆ ನಿಶ್ಚಯ ಮಾಡುವಾಗ ಎರಡೂ ಕಡೆಯ ಮುಖಂಡರು ನಾಯಕ ಮತ್ತು ಗೌಡರ ಬೆಡಗಿನವರ ಸಮ್ಮುಖದಲ್ಲಿ ಬೀಗತನ ಮಾಡುತ್ತಾರೆ. ಬೀಗರ ಎರಡೂ ಕುಟುಂಬಗಳ ಬೆಡಗು, ಗೋತ್ರ, ಮತ್ತು ಕೊಡುಕೊಳ್ಳಿಯನ್ನು ಕುರಿತಂತೆ ಮತ್ತೊಮ್ಮೆ ವಿಚಾರಿಸಿ ಈರ್ವರ ಒಪ್ಪಿಗೆಯನ್ನು ಪಡೆದು ಮುಂದುವರೆಯುವರು. ಮೊದಲು ದೈವದ ಮುಖಂಡರಿಗೆ ವೀಳ್ಯವನ್ನು ಕೊಟ್ಟು ನಂತರ ಇತರರಿಗೆ ಕೊಡುವರು. ಇತ್ತೀಚಿಗೆ ಮದುವೆಯ ಸಂದರ್ಭದಲ್ಲಿ ದೈವದ ಊಟ ಹಾಕಿಸುವುದರ ಬದಲು ಇಂತಿಷ್ಟು ದುಡ್ಡು ಎಂದು ನಿಗದಿ ಮಾಡಿದ್ದಾರೆ. ಮದುವೆಯ ಸಂದರ್ಭದಲ್ಲಿ ಮದುವೆಯ ಹೆಣ್ಣು ಮತ್ತು ಗಂಡಿನ ಮನೆಯವರಿಗೆ ಮಂಗಲ ದ್ರವ್ಯಗಳನ್ನು ಮತ್ತು ಸಾಂಪ್ರದಾಯಿಕ ವಸ್ತುಗಳನ್ನು ಕೆಲವು ಪ್ರದೇಶಗಳಲ್ಲಿ ಮುಖಂಡನ ಸಮ್ಮುಖದಲ್ಲಿಯೇ ತಲುಪಿಸುವರು. ಮದುವೆಯ ನಂತರ ಈರ್ವರ

ನಡುವೆ ಬಂದ ಯಾವುದೇ ತರಹದ ವೈಮನಸ್ಸು ಮತ್ತು ಜಗಳಗಳನ್ನು ಎರಡೂ ದೈವದ ಸಮ್ಮುಖದಲ್ಲಿ ಜಾತಿಯ ಯಜಮಾನರು ತೀರ್ಮಾನಿಸುತ್ತಾರೆ. ದೈವದ ತೀರ್ಮಾನಕ್ಕೆ ಜಾತಿಯ ಸದಸ್ಯರು ತಲೆಬಾಗಬೇಕು.

ಇವರ ವಾಣಿಜ್ಯ ಮತ್ತು ಕುಲಕಸುಬಿಗೆ ಸಂಬಂಧಿಸಿದ ಯಾವುದೇ ಒಳಜಗಳಗಳನ್ನು ಸೂಕ್ಷ್ಮವಾಗಿ ಬಗೆಹರಿಸಿಕೊಳ್ಳುವರು. ಹೊರಗಿನವರಿಂದ ತೊಂದರೆ ಬಂದಾಗ ಜಾತಿಯವರೆಲ್ಲ ಒಂದಾಗಿ ಸಮಸ್ಯೆಗೆ ಪರಿಹಾರ ಕಂಡು ಕೊಳ್ಳುವರು. ಹೆಚ್ಚಾಗಿ ಇವರು ಜಗಳಗಳನ್ನು ರಾಜಿಯಿಂದಲೇ ಬಗೆಹರಿಸುವರು. ಕಾನೂನಿನ ಪ್ರಕಾರ ಯಾವುದೇ ರೀತಿಯ ಕೇಸು ಕಟ್ಟಳೆಗಳಿಗೆ ಹೋಗುವುದಿಲ್ಲ. ಈ ಹಿಂದೆ ಮೇದರಲ್ಲಿ ಬಾಲ್ಯ ವಿವಾಹ ಪದ್ದತಿ ಇರುವುದು ಕಂಡುಬರುತ್ತದೆ. ಆದರೆ ಇತ್ತೀಚೆಗೆ ಈ ಪದ್ದತಿಯು ಕಂಡುಬರುವುದು ಬಹಳ ಕಡಿಮೆಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಇಲ್ಲ. ಮೇದರಲ್ಲಿ ಮರು ವಿವಾಹದ ಪದ್ದತಿ ಜಾರಿಯಲ್ಲಿದೆ. ಹೆಂಡತಿ ಸತ್ತರೆ ಗಂಡ ಮತ್ತೆ ಶಾಸ್ತ್ರೋಕ್ತವಾಗಿ ಕನ್ಯೆಯನ್ನು ಮದುವೆಯಾಗಬಹುದು. ಕೆಲವು ಸಂದರ್ಭದಲ್ಲಿ ವಿಧವೆಯ ಜೊತೆಗೆ ಕೂಡಿಕೆ ಶಾಸ್ತ್ರವನ್ನು ಮಾಡಿಕೊಳ್ಳಬಹುದು. ಆದರೆ ಗಂಡ ಸತ್ತ ವಿಧವೆ ಶೋೕರ ವರನನ್ನು ಮದುವೆಯಾಗುವ ಹಾಗಿಲ್ಲ. ಈ ಸಮುದಾಯದಲ್ಲಿಯೂ ಕೂಡ ಸ್ತ್ರೀದೌರ್ಬಲ್ಯದ ಬಳಕೆ ಕಂಡುಬರುತ್ತದೆ. ಪುರುಷನು ತಾನು ತನಗೆ ಕೊಟ್ಟು ಕೊಂಡಿರುವ ಪ್ರಾಧಾನ್ಯತೆಯು ಇತರೆ ಕೆಲವು ಸಮುದಾಯಗಳಂತೆ ಇಲ್ಲಿಯೂ ತಾಂಡವವಾಡುತ್ತಲಿದೆ.

ಕೂಡಿಕೆಯ ಮದುವೆಯನ್ನು ಶೋೕರಾ ಮದುವೆಯಂತೆ ಮುತ್ತೈದೆಯರೆಲ್ಲ ಸೇರಿ ಮಾಡುವುದಿಲ್ಲ. ವಿಧವೆಯರು-ವಿದುರರು, ಮತ್ತು ಕೂಡಿಕೆ ಮದುವೆಯಾದವರು ಇಂತಹ ಮದುವೆಯಲ್ಲಿ ಭಾಗವಹಿಸುವರು. ಪ್ರದೇಶಾನುಸಾರ ಕೆಲವು ಕಡೆ ದೇವಸ್ಥಾನದಲ್ಲಿ, ಇಲ್ಲವೇ ಒಂದು ಪ್ರತ್ಯೇಕ ಕತ್ತಲು ಕೋಣೆಯಲ್ಲಿ ಕೂಡಿಕೆಯ ಶಾಸ್ತ್ರವನ್ನು ಮಾಡಿ ಮುಗಿಸುತ್ತಾರೆ. ಕೂಡಿಕೆ ಮದುವೆಯಾದವರು ಯಾವುದೇ ಮಂಗಲ ಕಾರ್ಯದಲ್ಲಿ ಭಾಗವಹಿಸುವುದು ಇವರಲ್ಲಿ ನಿಷಿದ್ಧ. ಕೆಲವೊಂದು ಪ್ರದೇಶದಲ್ಲಿ ಇದರ ಮುಖಂಡತ್ವವನ್ನು ಜಾತಿಯ ಮುಖಂಡನೇ ವಹಿಸುವನು. ಸಾವಿನ ಸಂದರ್ಭದಲ್ಲಿ ಹೆಂಡತಿಯಿಂದ ಋಣದ ವೀಳ್ಯವನ್ನು ತವರಿನವರಿಗೆ ಸ್ಥಳೀಯ ಜಾತಿ ಮುಖಂಡನ ಸಮ್ಮುಖದಲ್ಲಿ ಕೊಡಿಸುವರು. ಹೆಣ ಹೊತ್ತವರ ಹೆಗಲು ಇಳಿಸುವ ಕಾರ್ಯಕ್ರಮ ಸಹ ಮುಖಂಡನ ಸಮ್ಮುಖದಲ್ಲಿ ನಡೆಯುತ್ತದೆ. ಸ್ಮಶಾನದಲ್ಲಿ ಮಗನಿಗೆ ತಂದೆಯ ಯಜಮಾನಿಕೆಯ ಪೇಟವನ್ನು ಮುಖಂಡನೇ ಇರಿಸುತ್ತಾನೆ. ಮೇದರ ಅವಿಭಕ್ತ ಕುಟುಂಬಗಳು ವಿಭಜನೆಯಾಗುವ ಸಂದರ್ಭದಲ್ಲಿ (ಆಸ್ತಿ ಹಂಚಿಕೆಯಲ್ಲಿ) ನ್ಯಾಯ ನಿರ್ಣಯವನ್ನು ಸಾಧ್ಯವಾದರೆ ತಾವೇ ಬಗೆ ಹರಿಸಿಕೊಳ್ಳುವರು ದೈವ ಮತ್ತು ಜಾತಿಯ ಮುಖಂಡರ ಸಮ್ಮುಖದಲ್ಲಿ ಆಗುವುದಾದರೆ, ವೃದ್ಧ ತಂದೆ-ತಾಯಿ, ಮತ್ತು ಅವಲಂಬಿತರ ಜೀವನೋಪಾಯವನ್ನು ಗಮನದಲ್ಲಿರಿಸಿಕೊಂಡು ಪಂಚಾಯಿತಿ ಮಾಡುತ್ತಾರೆ. ಮಕ್ಕಳಾದವರು ವಯಸ್ಸಾದ ತಂದೆ-ತಾಯಿಯರನ್ನು ಸಾಕಿಸಲುಹುವುದು ಒಂದು ಸಾಮಾಜಿಕ ಜವಾಬ್ದಾರಿಯಾಗಿರುತ್ತದೆ. ಕೆಲವೊಮ್ಮೆ ಇವರಿಗೆ ಜೀವನೋಪಾಯಕ್ಕೆ ಇಂತಿಷ್ಟು ದುಡ್ಡು ಕೊಡಬೇಕೆಂದು ತೀರ್ಮಾನ ನೀಡುವರು. ಹೀಗೆ ವಿವಿಧ ಸಂದರ್ಭಗಳಲ್ಲಿ ಮೇದ ಬುಡಕಟ್ಟು ಸಮುದಾಯದ ಕೌಟುಂಬಿಕ ವ್ಯವಸ್ಥೆ ಮತ್ತು ನ್ಯಾಯ

ನಿರ್ಣಯವು ಇರುವುದಾಗಿ ಸಮುದಾಯದ ಹಿರಿಯರು ಹೇಳುವರು. ಅಸಹಾಯಕ ಮತ್ತು ಅಸಾಧ್ಯವಾದ ಸಂದರ್ಭದಲ್ಲಿ ಮಾತ್ರ ಇವರು ಕಾನೂನಿನ ಮೊರೆ ಹೋಗುತ್ತಾರೆ. ಹೆಚ್ಚಾಗಿ ಪ್ರತಿಯೊಂದು ಗ್ರಾಮದ ದೈವಕ್ಕೆ ಸಂಬಂಧ ಪಟ್ಟ ಹಿರಿಯರಿಗೆ ಮತ್ತು ಯಜಮಾನರಿಗೆ ಜಾತಿಯ ಎಲ್ಲಾ ವಯಸ್ಸಿನ ಮತ್ತು ಎಲ್ಲಾ ವರ್ಗದ ಜನರು ಸಹಕಾರ ಕೊಡುವರು. ಅಲ್ಲದೇ, ಜಾತಿಯ ಸಾಮಾಜಿಕ ನಿರ್ವಹಣೆಯಲ್ಲಿ ಪ್ರತಿಯೊಬ್ಬರ ಸಹಕಾರ ಇದ್ದು ಸುಲಲಿತವಾಗಿ ನಡೆಯುತ್ತದೆ ಎಂದು ಸಮುದಾಯದ ಮುಖಂಡರು ಹೇಳುತ್ತಾರೆ.

3.3 ಮೇದರ ಕುಲದ ಚಿಹ್ನೆ , ಬೆಡಗು ಮತ್ತು ಗೋತ್ರಗಳು:

3.3.1 ಕುಲದ ಚಿಹ್ನೆ:

ಪ್ರಾಚೀನಕಾಲದಲ್ಲಿ ಮಾನವ ನಿಸರ್ಗದ ಅನೇಕ ಪ್ರಾಣಿ ಪ್ರಪಂಚದಲ್ಲಿ ತಾನೂ ಒಬ್ಬನಾಗಿದ್ದ. ತನ್ನವರೊಂದಿಗೆ ಗುಂಪುಗಳಲ್ಲಿ ವಾಸಿಸುವಾಗ ತಮ್ಮ ಗುಂಪನ್ನು ಗುರುತಿಸಿಕೊಳ್ಳಲು ಪ್ರಯತ್ನಿಸಿದ. ತಾನು ನೆಲೆಸಿರುವ ಪ್ರದೇಶದಲ್ಲಿ ತಮ್ಮ ಗುಂಪಿನಿಂದ ಆಕರ್ಷಿತವಾಗಿ, ತಮ್ಮ ಮೇಲೆ ವಿಶೇಷವಾಗಿ ಪ್ರಭಾವಬೀರಿದ ಬೆಟ್ಟ-ಗುಡ್ಡ, ಗಿಡ-ಮರ, ಪ್ರಾಣಿ-ಪಕ್ಷಿಗಳನ್ನು ತಮ್ಮ ಗುಂಪಿನ ಗುರುತಿನ ಸಂಕೇತಗಳಾಗಿ ಬಳಸಿಕೊಂಡ. ಈ ಗುಂಪನ್ನು ಅದೇ ಗುರುತಿನಿಂದ ಕರೆಯುವುದು ವಾಡಿಕೆಯಾಯಿತು. ಮುಂದೆ ಈ ಸಂಕೇತಗಳೇ ಇವರ ಕುಲದ ಚಿಹ್ನೆಗಳಾಗಿರಬೇಕು. ಕುಲದ ಚಿಹ್ನೆ ಎಂದರೆ, ಇಂಗ್ಲೀಷ್‌ನಲ್ಲಿ Totem ಎಂದು ಕರೆಯುತ್ತಾರೆ. Totem ಎಂದರೆ ಕುಲದ ಚಿಹ್ನೆ ಅಥವಾ ಸಂಕೇತ ಎಂದು ಅರ್ಥ. ಜೆ. ಲಾಂಗ್ ಅವರು ಇದನ್ನು ಮೊದಲ ಬಾರಿಗೆ ಇಂಗ್ಲೀಷ್ ಭಾಷೆಗೆ ಪರಿಚಯಿಸಿದರು. ಭಾರತೀಯರು ಕುಲದ ಚಿಹ್ನೆ ಎಂಬ ಪದವನ್ನು ಪ್ರಾಕೃತಿಕವಾದ ಸಚೇತನ ಹಾಗೂ ಅಚೇತನ ರೂಪದ ಪ್ರಾಣಿ, ಸಸ್ಯ ಮತ್ತು ವಸ್ತುಗಳು ಎಂದು ನಂಬಿದರು. ಹಾಗಾಗಿ ಅನೇಕ ಸಮುದಾಯದವರು ತಮ್ಮದೇ ಆದ ಜಾತಿಯ ಮತ್ತು ಕುಟುಂಬದ ಚಿಹ್ನೆಗಳನ್ನು ಹೊಂದಿದ್ದು,ಅವು ತಮ್ಮವು ಎಂಬಂತೆ ಬಳಸುತ್ತಾ ಬಂದರು. ಅನೇಕ ಬುಡಕಟ್ಟು ಸಮುದಾಯಗಳೂ ಸಹ ಇಂತಹ ತಮ್ಮ ಕುಲದ ಮತ್ತು ಕುಟುಂಬದ ಚಿಹ್ನೆಗಳನ್ನು ಹೊಂದಿರುವುದು ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಇಂತಹ ಜಾತಿಯ ಚಿಹ್ನೆಗಳ ಬಳಕೆ ಕಡಿಮೆಯಾಗಿದೆ. ಆದರೆ ಸಂಪೂರ್ಣವಾಗಿ ನಿಂತು ಹೋಗಿಲ್ಲ. ಭಾರತದ ಅನೇಕ ಬುಡಕಟ್ಟು ಸಮುದಾಯಗಳು ತಮ್ಮ ಕುಲಗಳಿಗೆ ಸಂಬಂಧಿಸಿದ ಚಿಹ್ನೆಗಳನ್ನು ಗೌರವಿಸಿ ಆ ಸಂಕೇತಗಳನ್ನು ಆರಾಧಿಸುವ ಪದ್ಧತಿಯನ್ನು Totemmism ಎನ್ನಲಾಯಿತು "ಆದರೆ, ಟೋಟಮಿಸಂ (Totemmism) ಎಂಬುವುದನ್ನು ಕೆಲವರು ಕುಲದೇವತಾರಾಧನೆ ಎಂದು ತಪ್ಪಾಗಿ ಭಾವಿಸಿಕೊಂಡಿದ್ದಾರೆ. ಆಯಾ ಕುಲಸ್ಥರು ನಂಬಿಕೊಂಡುಬಂದ ಯಾವುದೇ ಪ್ರಾಣಿಯೋ ಟೋಟೆಮಿಸಂ ಸಸ್ಯವೋ ಆಗಿರುತ್ತದೆಯೇ ಹೊರತು, ಅವರ ಕುಲದೇವತೆಯಾದ ಒಂದು ಸಾಂಪ್ರದಾಯಿಕ ನಿರ್ಧಿಷ್ಟ ದೇವರ ಪೂಜೆ, ಆರಾಧನೆ ಆಗಿರುವುದಿಲ್ಲ. ಕುಲಚಿಹ್ನಾರಾಧನೆ ಸರ್ವ ಸಾಮಾನ್ಯವಾಗಿ ಒಂದು ಬಾಂಧವ್ಯಾಧಾರಿತ ಪದ್ಧತಿ."[2] ಮೇಲಿನ ಹೇಳಿಕೆಯಂತೆ, ಕುಲದ ಚಿಹ್ನೆಯು ಒಂದು ಸಮುದಾಯದ

ಪೂಜಿಸುವ ದೇವರಂತೂ ಅಲ್ಲ. ಕುಲದ ಚಿಹ್ನೆಯು ಯಾವ ಒಬ್ಬ ಏಕವ್ಯಕ್ತಿ ವ್ಯಕ್ತಿಯ ವೈಯಕ್ತಿಕ ಸ್ವತ್ತಾಗಿರುವುದಿಲ್ಲ. ಇದು ಒಂದು ಇಡೀ ಪ್ರಾಣಿ ಸಮುದಾಯಕ್ಕೆ ಅನ್ವಯಿಸುತ್ತದೆ. ಇಂತಹ ಕುಲದ ಚಿಹ್ನೆಯನ್ನು ವಂಶಪಾರಂಪರಿಕವಾಗಿ ಪಡೆದು ಅದರ ವಾರಸುದಾರರಾಗಿರುತ್ತಾರೆ. ತಮ್ಮ ಕುಲದ ಚಿಹ್ನೆ ಅಥವಾ ಸಂಕೇತವನ್ನು ಹಬ್ಬ-ಹರಿದಿನದಂತಹ ವಿಶೇಷ ಸಂದರ್ಭಗಳಲ್ಲಿ ಅನುಕರುಣೆಯನ್ನು ಮಾಡಿ ಬಳಕೆ ಮಾಡುವರು. ತಮ್ಮ ಕುಲದ ಚಿಹ್ನೆಯ ವಿಶಿಷ್ಟ ನೃತ್ಯ, ಆಟ ಮತ್ತು ವರ್ತನೆಗಳನ್ನು ಪ್ರದರ್ಶಿಸಿ,ಅವುಗಳಿಗೆ ಅವರು ಗೌರವವನ್ನು ಸಲ್ಲಿಸುವ ಪದ್ಧತಿ ಯಿದೆ. ಕುಲದ ಚಿಹ್ನೆಗಳು ಅವುಗಳನ್ನು ಅಳವಡಿಸಿಕೊಂಡು ಆಚರಿಸುವವರಿಗೆ ವರವಾದರೆ, ಇವರ ವೈರಿಗಳಿಗೆ ಮಾರಕವಾಗಿರುತ್ತವೆ. ಇಂತಹ ಕುಲದ ಚಿಹ್ನೆಯಾಧಾರಿತ ಸಾಂಸ್ಕೃತಿಕ ಚಟುವಟಿಕೆಗಳು ಇಂದಿಗೂ ಕೆಲವು ಪ್ರದೇಶಗಳಲ್ಲಿ ಕಂಡು ಬರುತ್ತವೆ.

ಭಾರತದಲ್ಲಿಯ ಅನೇಕ ಸಮುದಾಯಗಳಿಗೆ ಆಯಾ ಕುಲದ ಪ್ರತ್ಯೇಕವಾದ ಕುಲ ಚಿಹ್ನೆಗಳಿರುವುದು ತಿಳಿದು ಬರುತ್ತದೆ.

ಇವರು ತಮ್ಮ ಕುಲದ ಚಿಹ್ನೆಗಳನ್ನು ಅನಾವಶ್ಯಕವಾಗಿ ನಾಶ ಮಾಡುವುದಾಗಲಿ ಮತ್ತು ಬಳಕೆಮಾಡುವುದಾಗಲಿ ಮಾಡುವುದಿಲ್ಲ. ಕುಲದ ಚಿಹ್ನೆಗೆ ಇವರು ಸದಾ ನಿಷ್ಠರಾಗಿರುವರು. ಅನೇಕ ಮಂಗಲ ಕಾರ್ಯಗಳಲ್ಲಿ ಇವುಗಳ ಬಳಕೆ ಕಡ್ಡಾಯವಾಗಿರುತ್ತದೆ . ಕೆಲವರಂತೂ, ಅವುಗಳ ಆಕೃತಿ-ಚಿತ್ರಗಳನ್ನು ತಮ್ಮ ವಾಸಸ್ಥಾನಗಳಲ್ಲಿ ಘನತೆಗಾಗಿ ಮತ್ತು ಮನೆಯ ಸಂಕೇತವಾಗಿ ಹಾಕಿರುವರು. ಇನ್ನೂ ಕೆಲವರು ಕುಲದ ಚಿಹ್ನೆಗಳ ಚಿತ್ರಗಳನ್ನು ಬೆನ್ನು, ಕೈ ಮತ್ತು ದೇಹದ ಕೆಲವು ಭಾಗಗಳ ಮೇಲೆ ಹಚ್ಚೆ ಹಾಕಿಸಿಕೊಂಡಿರುತ್ತಾರೆ.

ನಗರೀಕರಣ ಜೀವನದಲ್ಲಿ ಆಧುನಿಕ ಮಾನವನಿಗೆ ತನ್ನ ಕುಲದ ಸಂಕೇತ ಮತ್ತು ಚಿಹ್ನೆಗಳ ಮೇಲಿನ ಪಾರಂಪರಿಕ ನಂಬಿಗೆಕೆ ಕಡಿಮೆಯಾಗುತ್ತಲಿವೆ. ಇದಕ್ಕೆ ಕಾರಣ ಅವುಗಳ ಬಳಕೆ ಕಡಿಮೆಯಾಗಿರುವುದಾಗಿದೆ. ಆದರೆ, ಅವು ಎಲ್ಲೋ ಒಂದು ಕಡೆ ಬಳಕೆಯಾಗುತ್ತಿರುವುದು ಕಂಡುಬರುತ್ತದೆ. ಅಂದರೆ, ಇತ್ತೀಚಿಗೆ ಕೆಲವು ಸಮುದಾಯಗಳ ಒಂದು ಗುಂಪಿನ ಕುಲದ ಚಿಹ್ನೆಯ ಆಧುನಿಕ ಶೈಲಿಯ ''ಸ್ಟಿಕರ್‌ಗಳು'' ಬಂದಿದ್ದು ಅವುಗಳನ್ನು ಏಕೆ ಬಳಕೆ ಮಾಡುತ್ತೇವೆ ಎನ್ನುವುದರ ಕುರಿತು ಯೋಚಿಸದೇ ಬಳಸುವರು. ಕೆಲವು ಸಾರೆ ಇಂತಹ ಚಿಹ್ನೆಗಳು ತಮಗೆ ಗೊತ್ತಾಗಿಯೋ ಮತ್ತು ಗೊತ್ತಾಗದ ಹಾಗೆ ಬಳಕೆಯಾಗಿರುವುದು ಇವರ ಪೂರ್ವ ಸಂಸ್ಕಾರದ ಅವ್ಯಕ್ತ ಪ್ರತಿಫಲ ಆಗಿರುತ್ತದೆ. ಅವುಗಳೆಂದರೆ, ವಿರುದ್ಧ ದಿಕ್ಕಿಗೆ ಮುಖ ಮಾಡಿರುವ ಜೋಡು ಕತ್ತಿ ಗುರಾಣಿ , ಡಾಲ್ ಮತ್ತು ಕತ್ತಿ, ಕೆಲವು ರಾಶಿಯ ಚಿಹ್ನೆಗಳು, ಸಿಂಹ, ಹುಲಿ, ಪಾರಿವಾಳ ಮುಂತಾದವು. ಇಂತಹ ಕುಲದ ಚಿಹ್ನೆಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಹೆಸರಿಟ್ಟು ಕರೆಯುವುದುಂಟು.

'' ಮೇದ ಸಮುದಾಯದ ಸೇಲಂ ಮತ್ತು ಕನ್ನಡದ ಮೇದರ ಕೆಲವು ಕುಲದ ಚಿಹ್ನೆಗಳು ಹೀಗಿವೆ. ಪರ್ವತ. ಪುತ್ತ (ಹುತ್ತ), ಬೆಟ್ಟ , ಹಾವು, ಕೊಂಡಿ (ಬೆಟ್ಟ), ಜವಾದಿ (ಪುನಗು ಬೆಕ್ಕು), ನಂದಿಕಟ್ಟು (ಎತ್ತಿನ ಮುಖ), ಕಂದಿ ಕಟ್ಟು (ಬೇಳೆ ಸಾರು , ಕೊಟ್ಟ ಕೊಂಡ (ಹೊಸ ಮಡಿಕೆ), ಪೊರಟೆ (ಹಕ್ಕಿ), ನವುಲ್(ಎಳ್ಳು), ಸೆನಗ ಪಾತ್ರ (ಕಡ್ಲಿ

ಬೇಳೆ), ಸದ ಚಂದ), ನೀಲ (ನೀಲಿ ಹರಳ), ಸಿರಿಗಿರಿ (ಬೆಟ್ಟ), ಕಸಿಗಿರಿ (ಬೆಟ್ಟ), ಪತ್ತು (ಗಂಡು), ನಾಗಿನ್ನದು (ಹಾವು), ಪಿಲೀಕ್ಯಾಟ್, ಕೋಬ ."[3] ಬಳ್ಳಾರಿ ಜಿಲ್ಲೆಯಲ್ಲಿ ಕೆಲವು ಗ್ರಾಮದ ಹಿರಿಯರು ಮಾತ್ರ ತಮ್ಮ ಕುಲದ ಚಿಹ್ನೆಯನ್ನು ಹೇಳುತ್ತಾರೆ.

3.3.2 ಮೇದರ ಕುಲಗಳು:

ಮೇದರು ಕರ್ನಾಟಕಕ್ಕೆ ಹಲವು ಪ್ರದೇಶಗಳಿಂದ ವಲಸೆ ಬಂದಿದ್ದಾರೆ. ಇತ್ತಿತ್ತಲಾಗಿ ಇಲ್ಲಿಂದ ಬೇರೆ ಕಡೆಗೆ ವಲಸೆ ಹೋಗಿರುವುದು ಸಹ ಕಂಡು ಬರುತ್ತದೆ. ಕಾರಣ ಇವರ ಕುಲ ಸಂಬಂಧಗಳು ಸಹ ಆಯಾಪ್ರದೇಶಾನುಸಾರದ ಕುಲ ಸಂಬಂಧಗಳೇ ಆಗಿರುತ್ತವೆ. ಇಲ್ಲಿ ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯ ಪ್ರಕಾರ ಮೇದರ ಕುಲ ಮತ್ತು ಬೆಡಗುಗಳನ್ನು ಕುರಿತು ಹೇಳುತ್ತಿದ್ದೇನೆ :

ಬೆಳ್ಳಿಕುಲ : - ಬೆಳ್ಳಿ ಕುಲದ ಮಹಿಳೆಯರು ಬೆಳ್ಳಿ ಕಾಲುಂಗುರ ಮತ್ತು ಬೆಳ್ಳಿಯ ಬಳೆಗಳನ್ನು ಧರಿಸುವುದಿಲ್ಲ.

ನಾಗರ ಕುಲ :- ನಾಗರ ಕುಲದವರು ಇತರೆ ಕುಲಗಳಿಗಿಂತ ತಾವೇ ಶ್ರೇಷ್ಠ ಕುಲದವರು ಎಂದು ಹೇಳುತ್ತಾರೆ. ಇವರು ಹಾವುಗಳನ್ನು ಆರಾಧಿಸುವರು. ಹಾವುಗಳನ್ನು ಕೊಂದರೆ ಸರ್ಪಹತ್ಯ ದೋಷ ಬರುತ್ತದೆ ಎಂದು ಇವರು ನಂಬಿದ್ದಾರೆ. ಮೇದರ ಕುಲಕಸುಬಿನ ಬಿದಿರು ಶಂಕರನ ಕಂಠಾಭರಣದ ಮೂಲರೂಪವಾಗಿರುವುದರಿಂದ ಇವರು ತಮ್ಮನ್ನು ಶ್ರೇಷ್ಠ ಕುಲದವರೆಂದು ಹೇಳುವರು.

ಆಲಕುಲ: - ಆಲಕುಲದವರಿಗೆ ಆಲದಮರ ಅವರ ಕುಲದ ಚಿಹ್ನೆಯಾಗಿದೆ. ಮೇದರು ಅರೆ ಅಲೆಮಾರಿಗಳಾದ್ದರಿಂದ ಇವರು ಕಾಲಾನುಸಾರ ವಲಸೆ ಹೋಗುವುದು ಅನಿವಾರ್ಯ. ವಲಸೆಯ ಮಾರ್ಗದ ಮಧ್ಯದಲ್ಲಿ ಈ ಕುಲದವರು ಕೆಲವು ಕಾಲ ಬೃಹದಾಕಾರವಾಗಿ ಬೆಳೆದು ನಿಂತ ಆಲದಮರದ ಕೆಳಗೆ ಬೀಡುಬಿಟ್ಟರು. ಅಲ್ಲಿಯೇ ತಮ್ಮ ಕುಲಕಸುಬು ಮುಂದುವರಿಸಿ ಕೆಲಕಾಲ ತಂಗಿದ್ದರು. ಕಾರಣ ಇವರನ್ನು ಆಲಕುಲದವರೆಂದು ಕರೆದಿರಬೇಕು. ಆಲದ ಮರದ ನಂಟು ಅನೇಕ ಬುಡಕಟ್ಟು ಸಮುದಾಯಗಳ ಜೊತೆ ಇದ್ದೇ ಇದೆ. ಇವರ ಮದುವೆ, ಹಬ್ಬದಂತಹ ಅನೇಕ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಆಲದ ತಪ್ಪಲ ಮತ್ತು ದಿಂಡುಗಳನ್ನು ಬಳಸುವರು.

ಸಂಪಿಗೆ ಕುಲ: - ಸಂಪಿಗೆಯ ಹೂವು ಅದರ ಮಧುರವಾದ ವಾಸನೆ ಮತ್ತು ಸುಂದರವಾದ ಆಕಾರದಿಂದ ಹೆಚ್ಚು ಆಕರ್ಷಿತ. ಇದರ ಹೂವುಗಳನ್ನು ಸದಾಕಾಲ ಅಲ್ಲದಿದ್ದರೂ, ಕೆಲವೊಂದು ವಿಶೇಷ ಪೂಜಾ ಸಂದರ್ಭಗಳಲ್ಲಿ ಕಡ್ಡಾಯವಾಗಿ ಬಳಸುತ್ತಾರೆ. ಬಹುತೇಕವಾಗಿ ಮೇದರು ಒಂದು ಸಮಯದಲ್ಲಿ ಸಂಪಿಗೆಯ ಮರವನ್ನು ಆಶ್ರಯಿಸಿರಬೇಕು.ಕಾರಣ ಇವರಿಗೆ ಸಂಪಿಗೆ ಕುಲದವರು ಎಂದು ಹೆಸರು ಬಂದಿರಬೇಕು.

ಕಾರೆ ಕುಲ: - ಕಾರೆ ಒಂದು ಜಾತಿಯ ಮುಳ್ಳಿನ ಕಂಟಿ ಅಥವಾ ಪೊದೆ. ಕಾರೆಯು ಬಯಲುಸೀಮೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದರ ಹಣ್ಣುಗಳು ಮತ್ತು ದೋರೆಯ ಟೆಂಗು ಕಾಯಿಗಳು ತಿನ್ನಲು ರುಚಿಯಾಗಿರುತ್ತವೆ. ಹೆಚ್ಚಾಗಿ ಈ

ಗಿಡವನ್ನು ಬುಡಕಟ್ಟು ಸಮುದಾಯಗಳು ಕಡಿದು ತಮ್ಮ ಆಡಿಗಳಸುತ್ತ ಬೇಲಿ ನಿರ್ಮಿಸುತ್ತಿದ್ದರು. ಈಗಲೂ ಸಹ ಅನೇಕ ಹಳ್ಳಿಗಳಲ್ಲಿ ಜಾನುವಾರುಗಳ ಸಾಕಣೆ-ರಕ್ಷಣೆಗಾಗಿ ಹಾಗೂ ಅವುಗಳ ಮೇವು ರಕ್ಷಣೆಗಾಗಿ ಹಿತ್ತಲುಗಳ ಸುತ್ತ ಕಾರಿಯ ಕಂಟಿಯನ್ನು ಕಡಿದು ತಂದು ಹಚ್ಚುವರು. ಮೇದರ ಒಂದು ಪಂಗಡದವರು ಒಮ್ಮೆ ಈ ಕಾರೆಕಂಟಿಯ ಪೊದೆಯ ಹತ್ತಿರ ಇಲ್ಲವೇ, ಪೊದೆಯಲ್ಲಿ ನೆಲಸಿರಬೇಕು ಹಾಗಾಗಿ ಇವರಿಗೆ ಕಾರೆಕುಲದವರು ಎಂದು ಹೆಸರು ಬಂದಿರಬಹುದು. ಕಾರೆ ಕುಲದವರು ಕಾರೆಯ ಕಂಟಿಯನ್ನು ಉರುವಲಾಗಿ ಬಳಸುವುದಿಲ್ಲ.

ಕುರುಬರ ಕುಲ: - ಕುರಿಸಾಕಾಣಿಕೆ ಒಂದುಕಾಲದಲ್ಲಿ ಇವರ ಮೂಲ ಕಸುಬಾಗಿರಬೇಕು. ಹಾಗಾಗಿ ಇವರಿಗೆ ಕುರುಬ ಕುಲದವರೆಂದು ಹೆಸರು ಬಂದಿದೆ.

ಬಂಡಿಕಾರ ಮೇದರು : - ಇವರು ಬಂಡಿಯನ್ನು ಬಳಕೆ ಮಾಡಿರುವುದರಿಂದ ಅಥವಾ ಬಂಡೆಯ ಮೇಲೆ ಕೆಲಕಾಲ ಬೀಡು ಬಿಟ್ಟಿರುವುದರಿಂದ ಇವರನ್ನು ಬಂಡಿಕಾರ ಮೇದರು ಎಂದು ಹೆಸರಿಸಿರಬೇಕು. ಬಂಡಿಕಾರ ಮೇದರು ತಮ್ಮ ಹಿರಿಯರ ಯಜಮಾನ್ಯದ ಆಧಾರದ ಮೇಲೆ ನಾಲ್ಕು ಗುಂಪಿನ ಬೀಡುಗಳನ್ನಾಗಿಸಿ ಕೊಂಡಿರುವರು. ಅವುಗಳು ಎಂದರೆ ನಾಯಕನ ಬೀಡು, ಗೌಡನಬೀಡು, ಮಸಣ್ಣದ ಬೀಡು ಮತ್ತು ರತ್ನದ ಬೀಡು. ಇಂತಹ ಕುಲಗಳಲ್ಲದೆ, ಮೇದರಲ್ಲಿ ಮಾದೇರಕುಲ, ಕುಕ್ಕಿಕುಲ, ಗೌಡರಕುಲ, ನಾಯಕರ ಕುಲ, ಈಶ್ವರ ಕುಲ ಮತ್ತು ವಿಷ್ಣುಕುಲದವರು ಸಹ ಕಂಡುಬರುತ್ತಾರೆ.

3.3.3 ಬೆಡಗು-ಗೋತ್ರ:

ಬೆಡಗು ಅಥವಾ ಗೋತ್ರಗಳು ವಿಶೇಷವಾಗಿ ಭಾರತದ ಅನೇಕ ಸಮುದಾಯಗಳಲ್ಲಿ ಕಂಡು ಬರುತ್ತವೆ. ಇಂತಹ ಬೆಡಗು ಅಥವಾ ಗೋತ್ರಗಳು ವೈವಾಹಿಕ ಸಂಬಂಧವನ್ನು ಬೆಳಸುವಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತವೆ. ಇವುಗಳಲ್ಲಿಯೇ ಶ್ರೇಷ್ಠ ಬೆಡಗು ಮತ್ತು ಸಾಮಾನ್ಯ ಬೆಡಗಿನವರೆಂದು ಗುರುತಿಸುವುದುಂಟು.ಕರ್ನಾಟಕದ ಅನೇಕ ಬುಡಕಟ್ಟು ಸಮುದಾಯಗಳು ತಮ್ಮ ಕುಲ, ಮತ್ತು ಕುಲದ ಚಿಹ್ನೆಗಳನ್ನು ನೆನಪಿಟ್ಟುಕೊಂಡು ವೈವಾಹಿಕ ಸಂಬಂಧದಲ್ಲಿ ಕಟ್ಟುನಿಟ್ಟಾಗಿ ಪಾಲಿಸುವುದು ಕಡಿಮೆಯಾಗಿದೆ. ಆದರೆ ಇವರು ತಮ್ಮ ಬೆಡಗುಗಳನ್ನು ಮಾತ್ರ ನೆನಪಿಟ್ಟುಕೊಂಡು ಈಗಲೂ ಸಹ ಬಹಳ ಕಟ್ಟುನಿಟ್ಟಾಗಿ ವೈವಾಹಿಕ ಸಂಬಂಧದಲ್ಲಿ ಬಳಸುತ್ತಾರೆ. ಇಂತಹ ಗೋತ್ರ ಅಥವಾ ಬೆಡಗುಗಳು ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಹೊಂದಿರುತ್ತವೆ. ವೈವಾಹಿಕ ಸಂಬಂಧವನ್ನು ಬೆಳಸುವಾಗ ಒಂದೇ ಬೆಡಗಿನವರು ಅಣ್ಣ ತಮ್ಮಂದಿರಾಗುತ್ತಾರೆಂದು ಇವರ ಕಟ್ಟುಪಾಡುಗಳು. ಕಾರಣ ಇವರು ತಮ್ಮವಲ್ಲದ ಬೆಡಗಿನವರೊಂದಿಗೆ ಸಂಬಂಧ ಬೆಳಸುತ್ತಾರೆ. ಬುಡಕಟ್ಟಿಗರ ಇಂತಹ ಕಲ್ಪನೆ ಮತ್ತು ಕಟ್ಟುಪಾಡುಗಳಿಗೆ ಜೀವಶಾಸ್ತ್ರದ ಪೂರಕವಾದ ಆಧಾರಗಳು ಪುಷ್ಟಿ ಕೊಡುತ್ತವೆ. ಜೀವ ಶಾಸ್ತ್ರದ ವಿದ್ವಾಂಸರ ಪ್ರಕಾರ ಸತತವಾದ, ಹತ್ತಿರದ ಅಥವಾ ಒಂದೇ ಬಳ್ಳಿಯ ನಡುವಿನ ವೈವಾಹಿಕ ಸಂಬಂಧ ಮುಂದಿನ ವಂಶದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಅಲ್ಪಾಯುಷ್ಯ, ಅನಾರೋಗ್ಯ, ಅಂಗಹೀನತೆ ಮತ್ತು

ಮಂದಬುದ್ಧಿಯ ಮಕ್ಕಳು ಜನಿಸುವರು. ಇದರಿಂದ ವಂಶವಾಹಿನಿಯ ಮೇಲೆ ಅನೇಕ ವಿಧವಾದ ಕೆಟ್ಟ ಪರಿಣಾಮಗಳು ಬೀರುತ್ತವೆ. ಬುಡಕಟ್ಟು ಸಮುದಾಯದ ಬೆಡಗುಗಳು ಆ ಕುಟುಂಬದ ಮೂಲವನ್ನು ಮತ್ತು ಕೆಲವುಸಾರೆ ಗಿಡ, ಪ್ರಾಣಿ, ಮತ್ತು ವಸ್ತುಗಳ ಹೆಸರುಗಳಾಗಿರುವವು. ಮೇದರಲ್ಲಿ ಕಂಡು ಬರುವ ಕೆಲವು ಬೆಡಗುಗಳನ್ನು ಇಲ್ಲಿ ಹೇಳಲಾಗಿದೆ. ಕೆಂಕವಾಲು, ದಮನೆವಾಲು, ಪೋಲಿ ಕುಂದಿರವಾಲು, ಬಾಗಿಲವಾಲು, ಪೋದಲವಾಲ, ವಾಸಂವಾಲು, ತಂಬಟವಾಲು, ಕಾಂಗೆವಾಲು, ಲಕ್ಕಮವಾಲು, ಕಾನಿಕಿರಮವಾಲು, ಹೆರೆಕಂಕಾಲು, ನೆಲಕೆಂಕವಾಲು, ಮೇದರವಾಲು, ಕೋಲೆವಾಲು, ದೇಲಕೋಸಿ, ನಲಕೋಸಿ, ಸಿಲೇವಾಲು, ಪೊಂಬೀಡಿವಾಲು, ಉರೇವಾಲು, ಕಂಚಂವಾಲು, ಪುಟಪರಿದಿವಾಲು, ತಂಬೆವಾಲು, ಕಣೆಗರವಾಲು, ತಮನಾವಾಲು, ಹನುಮಂತ(ಕಪಿದೇವ), ಪುಲಿ-ಹುಲಿ, ತೆಂಬಲ್ಲು(ನೀರು), ಅವಿಸ(ಗಿಡ), ರೇಲ(ಗಿಡ), ಶೇಷಾಯಿ(ಸರ್ಪ), ಜೊಂಬಾದ್ಯೆ (ಮೀನು), ವಿನಾಯಕ (ಗಣಪತಿ), ಕಾಶಿಮುದುಗ, ಕೋವಿ(ಕೋಗಿಲೆ), ಸೋನೆವಾಡ,ಹತ್ತಿವಾರ್, ಎಲ್‌ವಲ್‌ವಾಡ್, ಸೂರ್‌ನಯನವಾರ್, ರೇಪಲವಾರು, ಕಂಕಂವಾರ್, ಸೆರೆವಾಟ, ವಿಮಲ್‌ವಾರ್, ಚಲ್ಲಿವೀರವಾಡು, ಪದಿವಾರ ಮುಂತಾದವುಗಳು.(ಆಧಾರ ಕರ್ನಾಟಕದ ಬುಡಕಟ್ಟು ಸಂಪುಟ - 2.ಡಾ. ಹೆಚ್.ಜೆ.ಲಕ್ಕಪ್ಪಗೌಡ. ಪುಟ. 6,7).

ನನ್ನ ಅಧ್ಯಯನದ ಭೌಗೋಳಿಕ ವ್ಯಾಪ್ತಿಯಾದ ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವ ಮೇದರು ತಮ್ಮ ಕುಲದ ಚಿಹ್ನೆ ಮತ್ತು ಕುಲವನ್ನು ಯಾರೂ ನಿಖರವಾಗಿ ಹೇಳಿಲ್ಲ. ಆದರೆ, ಅವರ ಬೆಡಗು ಮಾತ್ರ ನಿಖರವಾಗಿ ಹೇಳಿದ್ದಾರೆ. ಅವುಗಳೆಂದರೆ, ನಾಯಕರು, ಮಾದೇಶರು,ಗೌಡ್ರು, ಮಳೆಗಲ್ಲರು, ಹಾಲ್ದಾರು, ಮುಸುಗಿನವರು, ಮುಂತಾಮವುಗಳು. ನನ್ನ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಬಳ್ಳಾರಿಜಿಲ್ಲೆಯಲ್ಲಿ ನೆಲಸಿರುವ ಪ್ರತಿಯೊಂದು ಮೇದ ಸಮುದಾಯದ ಕುಟುಂಬದ ಜನಸಂಖ್ಯೆ, ಬೆಡಗು, ಮನೆದೇವರನ್ನು, ದಾಖಲಿಸಿ ಹೇಳಿದ್ದೇನೆ. ಬಳ್ಳಾರಿಜಿಲ್ಲೆಯ ಮೇದರು ಕರ್ನಾಟಕದ ಎಲ್ಲಾ ಜಿಲ್ಲೆಯ ಮೇದರ ಜೊತೆಯಲ್ಲಿ ವೈವಾಹಿಕ ಸಂಬಂಧವನ್ನು ಬೆಳಸಿರುವುದು ಕಂಡುಬರುತ್ತದೆ. ಅಲ್ಲದೇ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳ ಜೊತೆಗೆ ಕೂಡ ವೈವಾಹಿಕ ಸಂಬಂಧ ಬೆಳಸಿರುವುದು ಕಂಡುಬರುತ್ತದೆ.ಇದರಿಂದ ಇವರೆಲ್ಲಾ ಒಂದೇ ಸಮುದಾಯಕ್ಕೆ ಸಂಬಂಧಪಟ್ಟವರಾಗಿದ್ದು ಸಮಾನಾರ್ಥಕೊಡುವ ಬೇರೆ, ಬೇರೆ ಪದಗಳಿಂದ ಪ್ರದೇಶಾನುಸಾರ ಇವರನ್ನು ಕರೆಯಲಾಗುತ್ತದೆ. ಕಾರಣ ಇವರೆಲ್ಲರಿಗೂ ಸರಕಾರದ ಏಕರೀತಿಯ ಮೀಸಲಾತಿ ಸೌಲಭ್ಯಗಳನ್ನು ಕೊಡುವುದು ಅವಶ್ಯವಾಗಿದೆ.

3.4.ವಸತಿ ಮತ್ತು ಆಹಾರ ಪದ್ಧತಿ:

3.4.1ವಸತಿ:

ಮನುಷ್ಯನ ಮೂಲಭೂತ ಆವಶ್ಯಕತೆಗಳಾದ ಗಾಳಿ, ಆಹಾರ, ನೀರು, ಬಟ್ಟೆಯಂತೆ ವಸತಿ ಸಹ ಒಂದು. ಆದಿಮ ಮಾನವ ತನ್ನ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ ತನ್ನವರೊಂದಿಗೆ ಒಂದು ಕಡೆ ನೆಲೆನಿಂತ. ತಾನು ತನ್ನವರು, ಮತ್ತು

ತನ್ನವುಗಳನ್ನು ಅನ್ಯರಿಂದ ರಕ್ಷಿಸಿಕೊಳ್ಳುವುದು ಅವಶ್ಯವಾಯಿತು. ಮೊದಮೊದಲು ಗವಿ, ಪೊಟರೆಗಳಲ್ಲಿ ರಕ್ಷಣೆಯನ್ನು ಪಡೆಯುತ್ತಿದ್ದ. ತನ್ನ ಬೌದ್ಧಿಕ ಮತ್ತು ಭೌತಿಕ ಬೆಳವಣಿಗೆಯಿಂದ ರಕ್ಷಣೆಯಲ್ಲಿಯ ಕೊರತೆಗಳನ್ನು ಕಂಡುಕೊಂಡ. ನಿಸರ್ಗ ನಿರ್ಮಿತ ರಕ್ಷಣಾತಾಣಗಳನ್ನು ಬಿಟ್ಟುಬಿಟ್ಟ, ತನ್ನನ್ನು ನಿಸರ್ಗದ ವಿಕೋಪದಿಂದಲೂ ಮತ್ತು ಕಾಡು ಪ್ರಾಣಿಗಳಿಂದಲೂ ರಕ್ಷಿಸಿಕೊಳ್ಳಲು ಪಕ್ಷಿಗಳ ಅನುಕರಣೆಯಿಂದ ಆಯಕಟ್ಟಿನ ಪ್ರದೇಶಗಳಲ್ಲಿ ತನ್ನ ತಾಣಗಳನ್ನು ನಿರ್ಮಿಸಿಕೊಂಡ. ನದಿತೀರಗಳು, ಬೆಟ್ಟದ ಬುಡಗಳು ಮತ್ತೆ ಕೆಲವೊಮ್ಮೆ ಗುಂಪು ಮರಗಳ ಮೇಲೆ ಕೂಡ ಈತನ ನೆಲೆಯ ತಾಣಗಳಾದವು. ತಾನು ವಾಸಿಸುವ ತಾಣಗಳಲ್ಲಿ ತನ್ನ ಅನುಕೂಲದ ಕೊರತೆ ಕಂಡಾಗಲೆಲ್ಲ ಹೊಸ ಹೊಸ ಆವಿಷ್ಕಾರಗಳಿಂದ ವಸತಿ ನಿರ್ಮಾಣದ ತಂತ್ರಗಳನ್ನು ಅಳವಡಿಸಿ ನಿರ್ಮಿಸಿಕೊಂಡ. ವಸತಿಯ ನಿರ್ಮಾಣಕ್ಕಾಗಿ ಕಾಡಿನಲ್ಲಿ ಸಹಜವಾಗಿ ಲಭ್ಯವಿರುವ ಬಿದಿರು, ಕಾಂಡ, ಗೆಲ್ಲೆ, ಹಸಿರು ತಪ್ಪಲು, ಬಳ್ಳಿ, ನಾರು, ಬೇರುಗಳನ್ನು ಬಳಸುತ್ತಿದ್ದ. ಕಾಲಾಂತರದಲ್ಲಿ ಮಾನವ ಗ್ರಾಮ ಜೀವನಕ್ಕೆ ಕಾಲಿರಿಸಿದಾಗ ಈತನ ವಸತಿಯ ನಿರ್ಮಾಣದ ಕೌಶಲ್ಯ ಒಂದು ಹೊಸ ಆಕಾರವನ್ನು ಪಡೆಯಿತು. ಆಯಕಟ್ಟಿನ ಸ್ಥಳಗಳಲ್ಲಿ ನಾಡು ಕಟ್ಟುವಾಗ ತನ್ನ ವಾಸ ಸ್ಥಾನವನ್ನು ತನ್ನ ಇಷ್ಟಾರ್ಥಗಳ ಅನುಕೂಲಕ್ಕೆ ತಕ್ಕಂತೆನಿರ್ಮಿಸುವ ಕೌಶಲ್ಯವನ್ನು ಮೈಗೂಡಿಸಿಕೊಂಡ. ಇಂತಹ ವಾಸಸ್ಥಾನಗಳ ಹಿಂದೆ ಆ ವ್ಯಕ್ತಿಯ ಸಮುದಾಯದ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳ ಸಂಸ್ಕಾರವಿರುತ್ತಿತ್ತು. ವಸತಿಯ ಆವಶ್ಯಕತೆಗಳು ಮತ್ತು ಅಲ್ಲಿರುವ ಎಲ್ಲಾ ಅನುಕೂಲತೆಗಳ ಉದ್ದೇಶ ಒಂದೇಯಾಗಿರುತ್ತವೆ. ಆದರೆ,ವಿನ್ಯಾಸ ಮತ್ತು ಆಕಾರಗಳಲ್ಲಿ ಸಾಕಷ್ಟು ಭಿನ್ನವಾಗಿರುತ್ತವೆ. ಇವು ಆ ವ್ಯಕ್ತಿಯ ಅಭಿರುಚಿಯನ್ನು ಬಿಂಬಿಸುತ್ತವೆ. ಆಧುನಿಕ ಯುಗದಲ್ಲಿಕೂಡ ಆಯ-ವಾಸ್ತುವನ್ನು ಆಧರಿಸಿ ನಿರ್ಮಿಸುವ ಮನೆಗಳಲ್ಲಿ ಉದ್ದೇಶ ಒಂದೇಯಾಗಿದ್ದರೂ, ವಿನ್ಯಾಸದಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣಬಹುದು. ಇದಕ್ಕೆ ಅವರ ಸಂಸ್ಕಾರ, ಮತ್ತು ನಂಬಿದವರ ನಂಬಿಕೆಗಳ ಸತ್ಯವೇ ಕಾರಣವಾಗಿರುತ್ತದೆ. ಇದಕ್ಕೆ ಹೊರತಲ್ಲದ ಮೇದ ಬುಡಕಟ್ಟು ಸಮುದಾಯದವರು ತಾವು ನಿರ್ಮಿಸುವ ವಾಸಸ್ಥಳಗಳಿಗೆ ತಮ್ಮದೇಯಾದ ಸಾಂಸ್ಕೃತಿಕ ವಿಶೇಷ ಆಕಾರಗಳನ್ನು ಕೊಟ್ಟಿರುವರು. ವಿಶೇಷವಾಗಿ ಕುಲಕಸುಬನ್ನು ಆಶ್ರಯಿಸಿರುವ ಬುಡಕಟ್ಟು ಸಮುದಾಯಗಳು ತಮ್ಮ ಕುಲಕಸುಬಿಗೆ ತಕ್ಕ ಅನುಕೂಲತೆಗಳನ್ನು ವಾಸಸ್ಥಳದಲ್ಲಿ ಅಳವಡಿಸಿಕೊಂಡಿರುವುದು ಕಂಡು ಬರುತ್ತದೆ. ಇಂದಿನ ಇವರ ವಾಸಸ್ಥಳ ಕುರಿತಂತೆ ಇಲ್ಲಿ ಕೆಲವು ಅಂಶಗಳನ್ನು ಹೀಗೆ ಹೇಳಬಹುದು.

ಮೇದರು ತಮ್ಮ ಮನೆಯನ್ನು ಕಟ್ಟುವ ಸಂದರ್ಭದಲ್ಲಿ ಸ್ಥಳದ ಆಯ್ಕೆಯಲ್ಲಿ ಕೆಲವು ಕಟ್ಟುಪಾಡುಗಳನ್ನು ಬಹಳ ಗಟ್ಟಿಯಾಗಿ ಪಾಲಿಸುವರು. ಇವರು ಮನೆಕಟ್ಟಲು ಶುದ್ಧವಾದ ಮತ್ತು ಶ್ರೇಷ್ಠವಾದ ಸ್ಥಳವನ್ನು ಆಯ್ಕೆ ಮಾಡುತ್ತಾರೆ. ಅಂದರೆ ಮೂರು ಮೂಲೆಯ ಮತ್ತು ಐಮೂಲೆಯ, ಸ್ಮಶಾನದ ಹತ್ತಿರದ, ಜಾಗವನ್ನು ಇವರು ಇಷ್ಟಪಡುವುದಿಲ್ಲ. ಆಯತ ಇಲ್ಲವೇ ಚೌಕಾಕಾರದ ಜಾಗವನ್ನು ಇವರು ಆಯ್ಕೆಮಾಡುತ್ತಾರೆ. ಹಳೆಯ ಮನೆ ಮತ್ತು ಹಾಳುಬಿದ್ದಜಾಗವನ್ನು ಕೊಳ್ಳುವಾಗ ಜಾತಿಯ ಅನುಭವಸ್ಥ ಹಿರಿಯರ ಸಲಹೆ ಪಡೆಯುವರು. ಆ ಪ್ರದೇಶದಲ್ಲಿ ಭೂತ, ಪ್ರೇತ, ಗಾಳಿದೋಷಗಳಿದ್ದರೆ, ಶಾಸ್ತ್ರ ಕೇಳಿಸಿ ಸರಿಬಂದರೆ ಮಾತ್ರ ಕೊಂಡುಕೊಳ್ಳುತ್ತಾರೆ. ಸಾಮಾನ್ಯವಾಗಿ ಇವರು ಮನೆಯ

ಆಯವನ್ನು ಅಡಿಗಳಲ್ಲಿ ಇಲ್ಲವೇ ಮನೆಯ ಯಜಮಾನನ ಮೊಳದ ಅಳತೆಯನ್ನು ಸ್ಥಳದ ಅನುಕೂಲತೆಗೆ ತಕ್ಕಂತೆ ನಿರ್ಧರಿಸುವರು. ಭೂಮಿ ಪೂಜೆಯನ್ನು ಒಳ್ಳೆಯ ದಿವಸ ಮಾಡುತ್ತಾರೆ.

ಇವರು ವಾಸದ ಮನೆಯನ್ನು ಕಟ್ಟುವಾಗ ತಮ್ಮ ಆರ್ಥಿಕ ಸಾಮರ್ಥ್ಯವನ್ನು ಗಮನದಲ್ಲಿ ಇರಿಸಿಕೊಂಡಿರುವರು. ಅನೇಕ ಸಾರೆ, ಇವರ ವಾಸಸ್ಥಾನ, ಕುಲಕಸುಬು ಮಾಡುವುದು, ಮತ್ತು ಡಿಪೋ ನಡೆಸುವುದು, ಎಲ್ಲವೂ ಒಂದೇ ಸೂರಿನ ಕೆಳಗೆ ನಿರ್ಮಾಣವಾಗಬೇಕಾಗಿರುತ್ತದೆ.ಇಂತಹ ಸಂದರ್ಭದಲ್ಲಿ ಮನೆಯ ಮುಂದೆ ಇಲ್ಲವೇ ಪಕ್ಕಕ್ಕೆ ಬಂಬು, ಬಿದಿರು ಇತ್ಯಾದಿಗಳನ್ನು ಶೇಖರಿಸಲು ಸಾಕಷ್ಟು ಜಾಗ ಬಿಡುತ್ತಾರೆ. ಅಲ್ಲಿಯೇ ಮನೆಯ ಮುಂಭಾಗ (ಪಡಶಾಲೆ) ಇವರ ಕುಲ ಕಸುಬು ಮಾಡುವ ಜಾಗವಾಗಿರುತ್ತದೆ. ಒಂದು ವೇಳೆ ಜಾಗ ಕಿರಿದಾಗಿದ್ದರೆ, ವಿಶ್ರಾಂತಿ, ಕುಲಕಸುಬು, ತಯಾರಿಸಿದ ವಸ್ತುಗಳ ಸಂಗ್ರಹಣೆಗೆ, ಇನ್ನೆಲ್ಲ ಉದ್ದೇಶಗಳ ಬಳಕೆಗೆ ಇದೊಂದು ಪಡಸಾಲೆಯೇ ಇವರಿಗೆ ಆಶ್ರಯವಾಗಿರುತ್ತದೆ. ಮೇದರು ತಮ್ಮ ವಾಸಸ್ಥಳಗಳನ್ನು ಬೀದಿಯ ಪಕ್ಕಕ್ಕೆ ಹೊಂದಿಕೊಂಡಂತೆ ನಿರ್ಮಿಸಲು ಇಷ್ಟಪಡುತ್ತಾರೆ. ಇವರು ಮನೆಕಟ್ಟಲು ಬಳಸಬಹುದಾದ ಪರಿಕರಗಳು ಹತ್ತು ಹಲವುಗಳಿದ್ದರೂ ಸಹ ಹೆಚ್ಚಾಗಿ ಬಿದಿರು ಮತ್ತು ಬಂಬನ್ನೇ ಬಳಸುವರು. ಕೆಲವು ಸಾರೆ ಕಡುಬಡವರು ತಮ್ಮ ಮನೆಯನ್ನು ನೂರಕ್ಕೆ ನೂರರಷ್ಟು ಬಿದಿರಿನಿಂದಲೇ ಒಂದೇ ದಿನದಲ್ಲಿ ತಯಾರಿಸಿಕೊಳ್ಳುವರು. ಅನುಕೂಲಕ್ಕೆ ತಕ್ಕಂತೆ ಸುತ್ತಲೂ 7,9,11,ಬಂಬುಗಳನ್ನು ಹುಗಿದು ಸುತ್ತಲೂ ಬಿದಿರಿನ ತಟ್ಟ (ಚಾಪೆ)ಕಟ್ಟುತ್ತಾರೆ. ಮೇಲ್ಛಾವಣೆಗೆ ಸಹ ಅಡ್ಡ ಬಂಬು ಹಾಕಿ ಬಿದಿರಿನ ಗೆಲ್ಲುಗಳನ್ನು ಅಳತೆಗೆ ತಕ್ಕಂತೆ ಹೊಂದಿಸಿ ನಾರು ಇಲ್ಲವೇ ಬಿದಿರಿನ ಸಿಪ್ಪೆಗಳಿಂದಕಟ್ಟುವರು. ಅದರ ಮೇಲೆ ಬಿದಿರಿನ ಚಾಪೆ ಹಾಕಿ, ಸಾಧ್ಯವಾದರೆ ದಿಂಡು ಕಟ್ಟಿ ಹುಲ್ಲು ಹಸೆ ತೊಪ್ಪಲವನ್ನು ಹೊದಿಸಿ ತೆಂಗಿನ ಗರಿಹಾಕಿ ಮೇಲೆ ಬಿದಿರು ಹಾಕಿ ಕಟ್ಟುವರು. ಮುಂಭಾಗದಲ್ಲಿ ಬಾಗಿಲಿರುವ ಬಿದಿರಿನ ತಟ್ಟೆಯನ್ನು ಕಟ್ಟಿ, ಬಂಬಿನ ಬಾಗಿಲತೋಳು ಮತ್ತು ಹೊಸ್ತಿಲು ಇರಿಸುತ್ತಾರೆ. ಬಿದಿರಿನ ಕದಬಡಿದು ಬಾಗಿಲಿಗೆ ಇರಿಸುವರು. ಸಾಧ್ಯವಾದರೆ ಹೊರ ಮೈಗೆ ಇನ್ನಷ್ಟು ತಟ್ಟಿ ಕಟ್ಟಿ ಮೇಲೆ ಮಣ್ಣು ಮೆತ್ತುವರು. ಅದರ ಮೇಲೆ ಸಗಣಿರಾಡಿ ಇಲ್ಲವೇ ಸುಣ್ಣ ಬಳಿಯುತ್ತಾರೆ . ಒಳಗಡೆ ನೀರು ಬಾರದಂತೆ ಸುತ್ತಲೂ ಮಣ್ಣು ಏರಿಸುವರು. ಈಗ ಮೇದರ ಬಿದಿರಿನ ಚಪ್ಪರದಮನೆ ರಡಿಯಾದಂತೆ. ಒಂದು ಒಳ್ಳೆಯ ದಿವಸ ನೋಡಿ ಬೆಳಗಿನ ಜಾವ ಒಂದು ತುಂಬಿದ ಕೊಡ ತಂದಿರಿಸಿ, ಹಾಲುಉಕ್ಕಿಸಿ ದೇವರ ಪೂಜೆ ಮಾಡುತ್ತಾರೆ. ಕುಲಕಸುಬನ್ನು ಅಲ್ಲಿಯೇ ಗುಡಿಸಲಿನ ಮುಂದೆ, ಇಲ್ಲವೇ ಒಳಾಂಗಣದಲ್ಲಿ ಮಾಡುವರು.

ಅನೇಕ ಸಾರೆ, ಬೀದಿಯ ಮರದ ನೆರಳು ಇಲ್ಲವೇ ಪಕ್ಕದ ಮಹಡಿಯ ನೆರಳು ಇವರು ಕುಲಕಸುಬಿನ ಜಾಗವಾಗುತ್ತದೆ. ಹೀಗೆ ಮೇದರು ತಮ್ಮ ವಾಸಕ್ಕೆ ಅನೇಕ ರೀತಿಯ ಗುಡಿಸಲು, ಹಂಚಿನ ಮನೆ, ತಟ್ಟಿಯ ಮನೆಗಳನ್ನು ನಿರ್ಮಿಸಿಕೊಳ್ಳುವರು. ಅದರಲ್ಲಿಯೇ ದೇವರ ಜಗುಲಿ, ಅಡಿಗೆಯ ಮನೆ, ಇತ್ಯಾದಿಗಳನ್ನು ಅನುಕೂಲಕ್ಕೆ ತಕ್ಕಂತೆ ಪ್ರತ್ಯೇಕಿಸಿಕೊಳ್ಳುತ್ತಾರೆ. ಮೇದರ ಮನೆ ಮತ್ತು ಒಣಗಳನ್ನು ಬಹಳ ಸುಲಭವಾಗಿ ಇವರ ಮನೆಯ

ಹೊರನೋಟದಿಂದಲೇ ಗುರುತಿಸಬಹುದು. ಮೇದರ ಓಣಿಯ ಮತ್ತು ಮನೆಯ ವಿಭಿನ್ನ ವರ್ಗದವರ ಮನೆಯ ಹೊರಾಂಗಣದ ಮತ್ತು ಒಳಾಂಗಣದ ಛಾಯಾ ಚಿತ್ರಗಳು ಇವರ ವಾಸಸ್ಥಾನದ ಸಮಸ್ಯೆಗಳ ಒಳಹರಿವನ್ನು ಬಿಂಬಿಸುತ್ತವೆ. (ಕಸುಬು ನಿರತರಾದ ಮೇದರನ್ನು ನಾಲ್ಕನೇ ಅಧ್ಯಾಯದ ಒಂದು, ಮೂರು, ಮತ್ತು ಐದನೆ ಛಾಯಾಚಿತ್ರದಲ್ಲಿಗಮನಿಸಿರಿ)

ಇತ್ತೀಚೆಗೆ ಇವರು ಬಿದಿರಿನ ಮನೆಯಿಂದ ಆರ್‌ಸಿಸಿಯ ಮಹಡಿಯ ಮನೆಯನ್ನು ಸಹ ತಮ್ಮ ಸ್ಥಿತಿಗೆ ತಕ್ಕಂತೆ ಕಟ್ಟಿಸುತ್ತಾರೆ. ಆಯ-ಶಾಸ್ತ್ರ ಮತ್ತು ವಾಸ್ತುವನ್ನು ಸಹ ಇವರಲ್ಲಿ ಕೆಲವರು ನಂಬುತ್ತಾರೆ. ಅಡುಗೆಯ ಮನೆ, ದೇವರಮನೆ, ಮಲಗುವ ಮನೆ, ಮತ್ತು ಮೈಲಿಗೆಯ ಕೋಣೆಗಳನ್ನು ಪ್ರತ್ಯೇಕಿಸಿ ಕಟ್ಟಿಸುವರು. ಗೃಹಪ್ರವೇಶವನ್ನು ಜಂಗಮ ಇಲ್ಲವೇ ಬ್ರಾಹ್ಮಣರ ಪೌರೋಹಿತ್ಯದಲ್ಲಿ ಮಾಡುತ್ತಾರೆ. ಮನೆಗೆ ಬಲಿ ಕೊಟ್ಟು ಶಾಂತಿ ಮಾಡಿಸುವರು. ಗೃಹ ಪ್ರವೇಶಕ್ಕೆ ಬಂದ ನೆಂಟರಿಗೆ ಮತ್ತು ಅಕ್ಕ-ತಂಗಿಯರಿಗೆ ಹೊಸಬಟ್ಟೆ ಕೊಡುತ್ತಾರೆ. ಕೆಲವು ಕಡೆ ಬಂದವರು ಮನೆ ಕಟ್ಟಿಸಿದವರಿಗೆ ಬಟ್ಟೆಯ ಮರ್ಯಾದೆಯನ್ನು ಸಹ ಮಾಡುತ್ತಾರೆ. ಹೊಸ ಮನೆಯ ಒಳಬಾಗಿಲಲ್ಲಿ ಅಂತ್ರಗಾಯಿ ಮತ್ತು ದತ್ತೂರಿಗಿಡ ಕಟ್ಟುವರು. ಮನೆಯ ಹೊರಗೆ ದೃಷ್ಟಿ ತಾಗದಿರಲೆಂದು ಕುಂಬಳಕಾಯಿ, ಭೂತದ ಚಿತ್ರವನ್ನು ತೂಗುಹಾಕುವರು. ಹಿಂದೆ ಮೇದರು ಕಾಡು ಇಲ್ಲವೇ ಕಾಡಂಚಿನಲ್ಲಿ ವಾಸಿಸುವಾಗ ನೀರಿನ ಅನುಕೂಲತೆ ಇರುವ ಕಡೆ ತಮ್ಮ ಹಾಡಿಗಳನ್ನು ಕಟ್ಟುತ್ತಿದ್ದರು. ತಮ್ಮ ಹಾಡಿಯ ಕಾಡಿನ ಮೇರೆಯನ್ನು ಬಿದಿರಿನ ಮೆಳೆಗಳಿಂದ ನಿರ್ಧರಿಸುತ್ತಿದ್ದರು. ಅನ್ಯರು ತಮ್ಮ ಹಾಡಿಯ ದೇವರಿರುವ ಸ್ಥಳಗಳಿಗೆ ಬಾರದಂತೆ ಕಟ್ಟುಪಾಡುಗಳನ್ನು ವಿಧಿಸುತ್ತಿದ್ದರು. ಅವರವರ ಹಾಡಿಯ ರಕ್ಷಣೆಗೆಂದು ಹಾಡಿಯ ದೇವತೆಯನ್ನು ಎತ್ತರವಾದ ಸ್ಥಳದಲ್ಲಿ ಕೂಡಿಸುತ್ತಿದ್ದರು. ಪ್ರಸ್ತುತ ಮೇದರು ಹಳ್ಳಿ ಮತ್ತು ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ನೆಲೆಸಿರುವುದರಿಂದ ಈ ಹಾಡಿಯ ಕಟ್ಟಾಚಾರಗಳು ಕಂಡುಬರುವುದಿಲ್ಲ.

3.4.2 ಆಹಾರ ಪದ್ಧತಿ:

" ಮನುಷ್ಯನ ಜೀವಿತದ ಸಂದರ್ಭದಲ್ಲಿ ಆತನ ಆಹಾರದ ಬಗೆಗೆ ಸೂಕ್ಷ್ಮ ಅವಲೋಕನ ಮಾಡಿದಾಗ ಅಪಾರವಾದ ವ್ಯತ್ಯಾಸವನ್ನು ಕಾಣುತ್ತೇವೆ. ಉಳಿದ ಜೀವಿಗಳಂತೆ ಆದಿಯಿಂದಲೂ ಒಂದೇ ತೆರನ ಆಹಾರವನ್ನು ಸೇವಿಸದೆ, ತಿನ್ನಲು ಯೋಗ್ಯವಾದ ಬಗೆಬಗೆಯ ಆಹಾರವನ್ನು ಅವನು ಕಂಡುಕೊಂಡಿದ್ದಾನೆ. ಇದು ಈತನ ಅನ್ವೇಷಣೆಯ ಮನೋಭಾವದಿಂದ ಸಾಧ್ಯವಾಗಿದೆ. ಆಯಾ ಪ್ರದೇಶದ ಮಣ್ಣಿನ ಗುಣ, ಮಳೆ, ಹವಾಗುಣ ಮತ್ತು ಭೌಗೋಳಿಕ ಹಿನ್ನೆಲೆಯನ್ನು ಆಧರಿಸಿ ಬೆಳೆಯುವ ಬೆಳೆಗಳು ಭಿನ್ನವಾಗಿರುತ್ತವೆ. ಅದರಂತೆ ಅಲ್ಲಿನ ಜನರ ಆಹಾರ ಪದ್ಧತಿಯೂ ಬೇರೆಯೇ ಆಗಿರುತ್ತದೆ." [4] ಡಾ.ಕೇಶವನ್‌ಪ್ರಸಾದ್ ಅವರು ಹೇಳುವ ಹಾಗೆ ಮೇದ ಸಮುದಾಯದ ಅಹಾರ ಪದ್ಧತಿಯಲ್ಲಿ ತಮ್ಮದೇ ಆದ ವಿಶಿಷ್ಟವಾದ ಆಹಾರ ಪದ್ಧತಿಯು ಕಂಡು ಬರದಿದ್ದರೂ ಸಹ,ಇವರು ನೆಲೆಸಿರುವ ಪ್ರದೇಶಾನುಸಾರ ಆಯಾ ಪ್ರದೇಶದ ಸಾಮಾನ್ಯವಾದ ಎಲ್ಲಾ ಆಹಾರವನ್ನು ಉಪಯೋಗಿಸುತ್ತಾರೆ.ಇವರು

ಸಸ್ಯಾಹಾರ ಮತ್ತು ಮಾಂಸಾಹಾರ ಎರಡನ್ನೂ ಉಪಯೋಗಿಸುತ್ತಾರೆ. ವರ್ಷದಲ್ಲಿ ಹಿಂದುಗಳು ಆಚರಿಸುವ ಯುಗಾದಿಯಿಂದ ಶಿವರಾತ್ರಿಯವರೆಗಿನ ಎಲ್ಲಾ ಹಬ್ಬಗಳನ್ನು ಆಚರಿಸುವರು. ಹಬ್ಬದ ದಿನ ಪ್ರದೇಶಾನುಸಾರ ಹಬ್ಬದ ಅಡಿಗೆ ತಯಾರಿಸುವರು. ಪ್ರತಿ ಹಬ್ಬದ ಮಾರನೆಯ ದಿನ ಕರಿ ಮಾಡುತ್ತಾರೆ. ಕರಿಯ ದಿನ ಮಾಂಸದ ವಿಶೇಷ ಅಡುಗೆ ಮಾಡುತ್ತಾರೆ. ಇವರು ಅಕ್ಕಿ, ಗೋಧಿ, ರಾಗಿ, ಜೋಳ, ಮುಂತಾದ ಎಲ್ಲಾ ವಿಧದ ದವಸ ಧಾನ್ಯಗಳನ್ನು ಬಳಸುವರು. ಪ್ರದೇಶಾನುಸಾರ ರೊಟ್ಟಿ , ಚಪಾತಿ, ಮುದ್ದೆ ಸಂಕ್ಟಿ , ಅನ್ನ, ಊಟಮಾಡುತ್ತಾರೆ. ವಿಶೇಷ ದಿನಗಳಲ್ಲಿ ಹೋಳಿಗೆ, ಹುಗ್ಗಿ ಶ್ಯಾವಿಗಿ, ಗೌಲಿ, ಸೌತಿಬೀಜ, ಕಸಿಹುಗ್ಗಿ, ಮಡಿಗಡುಬು ಬೆಲ್ಲದಬ್ಯಾಳಿ, ಮುಂತಾದ ಸಿಹಿ ಊಟ ಮಾಡುವರು. ಜೊತೆಗೆ ಮಾಂಸ ಆಹಾರದಲ್ಲಿ ಕೆಲವು ಪ್ರಾಣಿಗಳನ್ನು ಮಾತ್ರ ತಿನ್ನುತ್ತಾರೆ. ಅಂದರೆ, ಕೋಳಿ, ಕುರಿ, ಮೇಕೆ, ಮೀನು, ಮೊಲ, ಜಿಂಕೆ, ಬುರ್ಲಿ, ಕೊರವಂಜಿ, ಬಾತುಕೋಳಿ, ಕೌಜುಗದ ಮಾಂಸವನ್ನು ಪ್ರದೇಶಾನುಸಾರ ತಿನ್ನುತ್ತಾರೆ. ಕೆಲವು ಪ್ರದೇಶಗಳಲ್ಲಿ ಮಾತ್ರ ಬೇಟೆಯ ಮಿಕ, (ಹಂದಿ) ಉಡ, ಆಮೆ, ಮುಂತಾದುವುಗಳನ್ನು ತಿನ್ನುವರು. ಬಳ್ಳಾರಿ ಜಿಲ್ಲೆಯ ಮೇದರು, ಕೋಳಿ ಮತ್ತು ಮೀನು ಹಾಗೂ ಕುರಿಯ ಮಾಂಸವನ್ನು ಉಪಯೋಗಿಸುತ್ತಾರೆ. ಮಾಂಸದ ಅಡುಗೆಯಲ್ಲಿ ಮಸಾಲೆ ಸಾರು, ತಂದೂರಿ, ಕೈಮಾ, ಹಸಿಮೆಣಸಿನ ಮಸಾಲೆ ಮತ್ತು ಒಣ ಕಾರದ ಮಸಾಲೆ ಸಾರು, ತಲೆ-ಕಾಲು ಮತ್ತು ಕಳ್ಳು ಪಚ್ಚಿಯ ಅಡುಗೆಯನ್ನು ಬೇರೆಯೇ ಮಾಡುತ್ತಾರೆ. ಕೆಲವುಸಾರೆ ಉಳಿದ ಮಾಂಸವನ್ನು ಪಾಕು ಮಾಡಿ ಅರಿಶಿಣ ಉಪ್ಪು ಹಾಕಿ ಉಕ್ಕರಲ ಇಟ್ಟು ಮಾರನೆಯ ದಿವಸ ಉಪಯೋಗಿಸುತ್ತಾರೆ. ಇವರಲ್ಲಿ ಮಾಂಸದ ಸೆಳ್ಳಿ (ಕೊರೆ ಬಾಡು) ತಯಾರಿಸುವ ಪದ್ಧತಿಯು ಕಂಡುಬರುವುದಿಲ್ಲ. ಇವರು ಮಾಂಸದ ಜೊತೆಗೆ ಪ್ರದೇಶಾನುಸಾರ ರೊಟ್ಟಿ, ಚಪಾತಿ , ಪರೋಟ, ಅನ್ನ, ಸಂಕ್ಟಿ ಮುದ್ದೆ, ಪಲಾವು, ಮಸಾಲೆ ಅನ್ನ, ಬಿರಾನಿ ಅನ್ನ , ಮಾಡುತ್ತಾರೆ. ಮಕ್ಕಳಿಗೆ, ಬಾಣಂತಿಗೆ, ಮತ್ತು ಕಾಯಿಲೆಯಿಂದ ಬಳಲುವವರಿಗೆ ಮಾಂಸದ ವಿಶೇಷ ಭಾಗಗಳನ್ನು ಉಪಯೋಗಿಸಿ ಪಲ್ಯ ತಯಾರಿಸಿ ಇಲ್ಲವೇ ಕರಿದು ತಿನಿಸುತ್ತಾರೆ. ಕೋಳಿ, ಬಾತುಕೋಳಿ, ಕೌಜ್ಗ, ಬುರ್ಲಿ ಮುಂತಾದ ಪಕ್ಷಿಗಳ ಮಾಂಸವನ್ನು ಅನುಭವಸ್ತರೇ ಕೋಯ್ದು ತುಂಡು ಮಾಡುತ್ತಾರೆ. ತುಂಡು ಮಾಡುವಾಗ ಕೋಳಿಯ ಸುಟ್ಟ ಚರ್ಮವನ್ನು ಮಕ್ಕಳಿಗೆ ತಿನ್ನಲು ಕೊಡುತ್ತಾರೆ. ಕಲೀಜವನ್ನು ಉಪ್ಪು ಹಚ್ಚಿ ಬೆಂಕಿಯಲ್ಲಿ ಸುಟ್ಟು ತಿನ್ನಿಸುವರು. ಕುರಿಯ ಭಟ್ಟಿಯ ಸಾರು ಮಾಡಿ ಬಾಣಂತಿಯರಿಗೆ ಕೊಡುವರು. ಕುರಿಯ ತಲೆ-ಕಾಲು ಸುಟ್ಟು ತುಂಡು ಮಾಡುವಾಗ ಮಕ್ಕಳಿಗೆ ಅದರ ಸುಟ್ಟ ಕಿವಿ ಮತ್ತು ಚರ್ಮವನ್ನು ತಿನಿಸುವರು. ಮಾಂಸದ ಊಟ ಮಾಡುವಾಗ ಮಕ್ಕಳಿಗೆ ಮುಖ್ಯವಾದ ಭಾಗಗಳನ್ನು ಆಯ್ದು ತಿನ್ನಿಸುತ್ತಾರೆ. ಕಲೀಜ, ಜೋಟಿ, ಮೃದ್ವಸ್ಥಿ ಎಲುಬಿನ ಒಳ ಭಾಗದ ಗಿಣ್ಣು, ನೆಣ, ಮುಂತಾದವುಗಳು ಮಕ್ಕಳಿಗೆ ತುಂಬಾ ಇಷ್ಟ, ಅನೇಕ ಸಾರೆ ಅಡಿಗೆ ತಡವಾದರೆ ಮಾಂಸದ ತುಂಡುಗಳನ್ನು ಬಿದಿರಿನ ಕಡ್ಡಿಗೆ ಚುಚ್ಚಿ ಉಪ್ಪು-ಕಾರ ಹಚ್ಚಿ ಬೆಂಕಿಯಲ್ಲಿ ಸುಟ್ಟು ಮಕ್ಕಳಿಗೆ ತಿನ್ನಲು ಕೊಡುತ್ತಾರೆ. ಮೇದರಲ್ಲಿ ಕೆಲವರು ಮುಲ್ಲ ಚೂರಿ ಹಾಕಿದ ಪ್ರಾಣಿಯ ಮಾಂಸವನ್ನು ಮಾತ್ರ ತಿನ್ನುತ್ತಾರೆ. ಇವರು ಅಮಾವಾಸ್ಯೆ, ಹುಣ್ಣಿಮೆ, ಮತ್ತು ವಾರದ ಕೆಲವು ದಿವಸ(ಮನೆದೇವರ ವಾರದ ದಿವಸ) ಮಾಂಸದ ಊಟವನ್ನು ಮಾಡುವುದಿಲ್ಲ.

ಸಸ್ಯ ಹಾರಕ್ಕೆ ಸಂಬಂಧಿಸಿದಂತೆ ಇವರು ಪ್ರದೇಶಾನುಸಾರ ಎಲ್ಲಾ ವಿಧವಾದ ಊಟವನ್ನು ಮಾಡುತ್ತಾರೆ. ಉಪ್ಪಿನ ಕಾಯಿ, ಹಪ್ಪಳ, ಸಂಡಿಗೆ, ಮಜ್ಜಿಗೆಯ ಮೆಣಸಿನಕಾಯಿ, ಗೌಲಿ, ಸೌತೆ ಬೀಜ, ಶ್ಯಾವಿಗೆ, ಮುಂತಾದುವುಗಳನ್ನು ಮುಂಗಡವಾಗಿ ಹೆಂಗಸರು ತಯಾರಿಸಿ ಇಟ್ಟು ಕೊಳ್ಳುತ್ತಾರೆ. ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ಬಿದಿರಿನ ಕಳಲೆ ಉಪ್ಪಿನಕಾಯಿಯನ್ನು ತಯಾರಿಸಿ ಉಪಯೋಗಿಸುತ್ತಾರೆ. ಸಿಕ್ಕರೆ ಬಿದಿರಕ್ಕಿ, ಬಿದಿರುಪ್ಪನ್ನು ಸಹ ಬಳಸುವರು. ಮೇದರ ಈ ಆಹಾರ ಪದ್ಧತಿಯನ್ನು ನಾನು ಬಳ್ಳಾರಿ, ಕೊಪ್ಪಳ, ದಾವಣಗೆರೆ, ರಾಯಚೂರು, ಗುಲ್ಬರ್ಗ ಜಿಲ್ಲೆಗಳನ್ನು ಗಮನದಲ್ಲಿರಿಸಿಕೊಂಡು ಹೇಳಿದ್ದೇನೆ. ಬೇರೆ ಪ್ರದೇಶಗಳಲ್ಲಿ ಇವರ ಆಹಾರಪದ್ಧತಿಯಲ್ಲಿ ವ್ಯತ್ಯಾಸ ಕಾಣಬಹುದು.

3.5 ಹಬ್ಬಗಳು ಮತ್ತು ಧಾರ್ಮಿಕ ಕೇಂದ್ರಗಳು:

ಪೀಠಿಕೆ: ಭಾರತವು ವಿವಿಧ ಧರ್ಮ-ಮತ್ತು ಜಾತಿಗಳ ಮಹಾ ಸಂಗಮ ಕ್ಷೇತ್ರ. ಈ ದೇಶದಲ್ಲಿ ಪ್ರತಿನಿತ್ಯವೂ ಒಂದಲ್ಲ ಒಂದು ಜಾತಿಯ ಅಥವಾ ಧರ್ಮದ ಹಬ್ಬ ಮತ್ತು ಆಚರಣೆಗಳು ನಡೆದಿರುತ್ತವೆ. ಇಂತಹ ಹಬ್ಬ ಮತ್ತು ಆಚರಣೆಗಳಿಗೆ ಮುಖಾಮುಖಿಯಾದ ಇನ್ನೊಂದು ಜಾತಿ ಅಥವಾ ಧರ್ಮ, ಇದರ ಪ್ರಭಾವದಿಂದ ತನ್ನದಲ್ಲವನ್ನು ಸ್ವೀಕರಿಸುವ ಮತ್ತು ನಿರಾಕರಿಸುವ ಸಂಸ್ಕಾರಕ್ಕೆ ಒಳಗಾಗಿರುತ್ತದೆ. ಇದು ಒಂದು ಸಂಸ್ಕೃತಿಯ ಜೀವಂತಿಕೆಗೆ ಪುಷ್ಠಿಕೊಡುವುದು. ತಮ್ಮ ಪಾರಂಪರಿಕ ಸಾಂಸ್ಕೃತಿಕ ಮೌಲ್ಯಗಳನ್ನು ಕಟ್ಟಿ ಬೆಳಸಿ, ಕಾಪಾಡುವ ಮತ್ತು ಮುಂದುವರೆಸಿಕೊಂಡು ಹೋಗುವ ಎದೆಗಾರಿಕೆಯು ಅನೇಕ ಬುಡಕಟ್ಟು ಸಮುದಾಯಗಳಿಗೆ ಆದಿಮಕಾಲದಿಂದಲೂ ಬಳುವಳಿಯಾಗಿ ಬಂದಿದೆ. ಇಂತಹ ಸಂಸ್ಕಾರ ಮತ್ತು ತನ್ನ ಸಂಸ್ಕೃತಿಯ ರಕ್ಷಣೆಗಳಿಗೆ ಹಬ್ಬದ ಆಚರಣೆಗಳು ಪುನಃಶ್ಚೇತನ ತಂದು ಕೊಡುತ್ತಾ ಪುನರ್ ಮನನಕ್ಕೆ ದಾರಿ ಮಾಡಿಕೊಡುತ್ತವೆ. ಏಕೆಂದರೆ ಯಾವುದೇ ಒಂದು ಆಚರಣೆಯನ್ನು ವಿನಾಕಾರಣ ಕೈಬಿಡುವ ಮತ್ತು ಹೊಸತಾಗಿ ಸೇರಿಸಿಕೊಳ್ಳುವುದು ಸುಲಭಸಾಧ್ಯವಲ್ಲ. ಅನ್ಯರ ಪ್ರಭಾವಕ್ಕೆ ಒಳಗಾಗಿ ತನ್ನ ಮೂಲತನವ ಬದಲಾವಣೆಯ ರಾಜೀಸೂತ್ರಕ್ಕೆ ಅಷ್ಟೊಂದು ಸುಲಭವಾಗಿ ಯಾವುದೇ ಸಮುದಾಯ ಕೊರಳು ಕೊಡಲಾರದು. ಇದೆಲ್ಲದಕ್ಕೂ ಕಾರಣ ಅವರು ಆಚರಿಸುವ ಹಬ್ಬ ಮತ್ತು ಧಾರ್ಮಿಕ ಆಚರಣೆಗಳಲ್ಲಿ ತಪ್ಪಾದರೆ ಪಾಪಕ್ಕೆ ಗುರಿಯಾಗುತ್ತೇವೆಂಬ ನಂಬಿಕೆ, ಮತ್ತು ನಮ್ಮನ್ನು ರಕ್ಷಿಸುವ ದೇವರು ಮುನಿಸಿಕೊಳ್ಳುತ್ತಾನೆಂಬ ಹೆದರಿಕೆ. ಏಕೆಂದರೆ, ನಮ್ಮ ಕಲ್ಪನೆಗೂ ನಿಲುಕಲಾರದ ಮತ್ತು ಈ ಜಗತ್ತಿನ ಸಕಲ ಜೀವ ಜಂತುಗಳನ್ನು ಕಾಪಾಡುವ ಮತ್ತು ನಿಯಂತ್ರಿಸುವ ಶಕ್ತಿಯ ಬಗ್ಗೆ ನಮಗಿರುವ ಅಪಾರವಾದ ನಂಬಿಕೆ. ಆ ಶಕ್ತಿಯೇ ದೇವರೆಂದು ನಮ್ಮ ನಂಬಿಕೆಯಾಗಿದೆ.ದೇವರನ್ನು ನಮ್ಮ ಅನೇಕ ಹಬ್ಬ ಮತ್ತು ಆಚರಣೆಗಳಲ್ಲಿ ವಿಶೇಷವಾಗಿ ಪೂಜಿಸಿ ಶಾಂತ ಗೊಳಿಸುತ್ತೇವೆ.ಇದೆಲ್ಲದರ ಮೂಲ ಉದ್ದೇಶ ನಮಗೆ ಎದುರಾಗುವ ಅನೇಕ ಕಷ್ಟ ಕಾರ್ಪಣ್ಯಗಳನ್ನು ದೂರ ಮಾಡಿ ನಮ್ಮನ್ನು ಗಂಡಾಂತರಗಳಿಂದ ಪಾರುಮಾಡಿ ರಕ್ಷಿಸಿ ಕಾಪಾಡಬೇಕೆನ್ನುವುದು. ಆ ಕಾರಣಕ್ಕಾಗಿ ಅಗೋಚರ ಶಕ್ತಿಯ ಪರಿಕಲ್ಪನೆಯು ಮಾನವನಲ್ಲಿ ಬೆಳೆದು ಬಂತು. ತನಗೆ ಅರ್ಥವಾಗದ ಮತ್ತು ಅಗಾಧವಾಗಿ ಕಂಡ ಪ್ರಾಣಿ-ಪಕ್ಷಿಗಿಡ-ಮರ, ಕಲ್ಲು-ಬಂಡೆ, ಬೆಟ್ಟ - ಗುಡ್ಡ ಗಳನ್ನು

ದೇವರೆಂದು ಪೂಜಿಸುತ್ತಾ ಬಂದ. ಇದಕ್ಕೆ ಸಾಲದೆಂಬಂತೆ ತನ್ನ ಕಲ್ಪನೆಗೆ ತಕ್ಕಂತೆ ದೇವರ ಭೌತಿಕ ಆಕಾರವನ್ನು ಸೃಷ್ಟಿಸಿಕೊಂಡು ಆರಾಧಿಸ ತೊಡಗಿದ. ಹೀಗೆ ಮನುಷ್ಯ ದೇವರನ್ನು ಕಲ್ಪಿಸಿಕೊಂಡುದರ ಕುರಿತಾಗಿ ಡಾ. ಹಿ. ಚಿ.ಬೋರಲಿಂಗಯ್ಯ ಅವರು ಹೀಗೆ ಹೇಳುತ್ತಾರೆ."ಮನುಷ್ಯ ಎರಡು ಕಾರಣಕ್ಕಾಗಿ ದೇವರನ್ನು ಕಲ್ಪಿಸಿಕೊಂಡ ಎಂಬ ವಾದಗಳಿವೆ. ಪ್ರಕೃತಿಯ ಎಲ್ಲ ವೈಚಿತ್ರ್ಯಗಳನ್ನು, ಬಿಡಿಸಲಾರದ ನಿಗೂಢಗಳನ್ನು ಗಮನಿಸಿದ ಆದಿಮ ಮನುಷ್ಯ ತನ್ನನ್ನು ಮೀರಿದ ಅಗೋಚರ ಶಕ್ತಿಯೊಂದಿದೆ, ಎಂದು ನಂಬಿದ. ಆ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನ್ನ ಒಳ್ಳೆಯದನ್ನು ಸಾಧಿಸಿಕೊಳ್ಳಬೇಕು ಎಂಬುದು ಅವನ ಉದ್ದೇಶವಾಯಿತು. ಯಾಕೆಂದರೆ ನಿಸರ್ಗದ ಒಡಲಲ್ಲಿ ಬಾಳುತ್ತಿದ್ದ ಅವನಿಗೆ ಸಹಜವಾಗಿಯೇ ನೂರೆಂಟು ಕಂಟಕಗಳು ಎದುರಾಗುತ್ತಿದ್ದವು. ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನಗೆ ಒದಗುವ ಕಂಟಕಗಳಿಂದ ಪಾರಾಗ ಬೇಕು ಎಂಬುದು ಅವನ ತರ್ಕವಾಗಿತ್ತು. ಹೀಗಾಗಿ ಆರಂಭದಲ್ಲಿ ಅವನ ದೇವರ ಕಲ್ಪನೆಯ ಹಿಂದೆ ತಾನು ದೇವರ ಕೃಪೆಯಿಂದ ದೊಡ್ಡವನಾಗಬೇಕು, ಸಂಪಾದಿಸಬೇಕು ಎಂಬ ಸ್ವಾರ್ಥಕ್ಕಿಂತ, ತನಗೆ ಒದಗುವ ಕಷ್ಟಗಳಿಂದ ಪಾರಾಗಬೇಕು ಎಂಬ ಸಹಜ ಉದ್ದೇಶವಿತ್ತು. ಆದ್ದರಿಂದ ಈ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಬಗೆ ಹೇಗೆ? ಅವನು ಎರಡು ರೀತಿಯಲ್ಲಿ ದೈವವನ್ನು ಅಥವಾ ಶಕ್ತಿಯನ್ನು ಗೆಲ್ಲುವ ಪ್ರಯತ್ನ ಮಾಡಿದ.

1.ಮಾಟದ ಮೂಲಕ ನಿಯಂತ್ರಿಸುವುದು.

2. ಆರಾಧನೆಯ ಮೂಲಕ ಒಲಿಸಿಕೊಳ್ಳುವುದು."[5]

ಇವರು ಹೇಳುವ ಹಾಗೆ ಆರಾಧನೆಯ ಮೂಲಕ ದೇವರನ್ನು ಒಲಿಸಿಕೊಳ್ಳುವ ಪ್ರಯತ್ನ ನಮ್ಮ ಅನೇಕ ಬುಡಕಟ್ಟು ಸಮುದಾಯಗಳನ್ನು ಹಬ್ಬಗಳ ಆಚರಣೆಯಲ್ಲಿ ತೊಡಗಿಸಿರಬೇಕು. ಅಂತೆಯೇ ಮೇದ ಬುಡಕಟ್ಟು ಸಮುದಾಯ ಅಂತಹ ಅನೇಕ ಹಬ್ಬ ಮತ್ತು ಧಾರ್ಮಿಕ ಆಚರಣೆಗಳನ್ನು ರೂಢಿಯಲ್ಲಿ ತಂದಿದೆ. ಅವುಗಳಲ್ಲಿ ಕೆಲವನ್ನು ಉಲ್ಲೇಖಿಸುತ್ತಿರುವೆ.

ಮೇದರು ಈಗ ತಾವಿರುವ ಸ್ಥಳಗಳಿಗೆ ವಲಸೆ ಬಂದು ನೆಲಸಿರುವುದಾಗಿ ಕಂಡು ಬರುತ್ತದೆ. ಹೀಗೆ ಇವರು ಒಂದು ಪ್ರದೇಶದಿಂದ ವಲಸೆ ಬರುವಾಗ ತಮ್ಮ ಜೊತೆಗೆ ತಾವು ಆರಾಧಿಸುತ್ತಿದ್ದ ದೇವರುಗಳನ್ನು ಸಹ ಕರೆತಂದರು. ಕಾಲಾನುಸಾರ ತಮ್ಮ ದೇವರುಗಳ ಜೊತೆಗೆ ಪ್ರಾದೇಶಿಕವಾಗಿ ಪ್ರಭಾವವಿರುವ ದೇವರುಗಳನ್ನು ಸಹ ಪೂರ್ವ ದೇವರುಗಳ ಜೊತೆಗೆ ಪೂಜಿಸತೊಡಗಿದರು. ಬಹುತೇಕವಾಗಿ ಕನ್ನಡದ ಮೇದರು ಕರ್ನಾಟಕದಲ್ಲಿ ತೋಪಯ್ಯ, ತಿಮ್ಮಪ್ಪ, ಓಂಕಾರಪ್ಪ, ಸಿದ್ದಪ್ಪಾಜಿ, ಲಕ್ಷ್ಮಿದೇವಿ, ಕೊಂಗಳ್ಳಿಮಲ್ಲಿಕಾರ್ಜುನ, ಮಾರಿಯಮ್ಮ, ಚೌಡಮ್ಮ, ಕುಕ್ಕಡದಮ್ಮ, ಲಕ್ಕಮ್ಮ, ದುರ್ಗಮ್ಮ, ಏಳುಮಕ್ಕಳತಾಯಮ್ಮ, ಮಲೆಮ್ಮ, ಅಲ್ಲದೇ ಇನ್ನೂ ಅನೇಕ ದೇವರುಗಳನ್ನು ಪೂಜಿಸುವುದು ಕಂಡುಬರುತ್ತದೆ. ಮಲೆಮ್ಮ ಚೌಡಮ್ಮ ಮೇದರ ಕುಲದೇವರುಗಳಾಗಿದ್ದು, ಇಡೀ ಸಮುದಾಯದ ದೇವರಾಗಿದ್ದಾರೆ.

ಇದರ ಜೊತೆಗೆ ಇತರೆ ದೇವರುಗಳು ಅವರವರ ಕುಟುಂಬಕ್ಕೆ ಮಾತ್ರ ಸೀಮಿತವಾಗಿರುತ್ತವೆ. ಇವರು ಆರಾಧಿಸುವ ಕೆಲವು ದೇವರ ಹಬ್ಬ ಮತ್ತು ಜಾತ್ರೆಯನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

ಮಂಡ್ಯ ಜಿಲ್ಲೆಯ ಕೆಲವು ಮೇದರು ಮಳವಳ್ಳಿ ತಾಲೂಕಿನ ಮುತ್ತೆತ್ತರಾಯನಿಗೆ ನಡೆದುಕೊಳ್ಳುತ್ತಾರೆ. ಮೈಸೂರು ಜಿಲ್ಲೆಯನ್ನು ಸೇರಿದಂತೆ, ಮೈಸೂರಿನ ಸುತ್ತ ಮುತ್ತಲಿನವರ ಮನೆದೇವರು ಚಾಮುಂಡೇಶ್ವರಿ. ಅದರಂತೆ ಇಲ್ಲಿನ ಮೇದರು ಸಹ ಚಾಮುಂಡೇಶ್ವರಿಯನ್ನು ತಮ್ಮ ಮನೆ ದೇವರೆಂದು ಪೂಜಿಸುತ್ತಾರೆ. ವಿಶೇಷವಾಗಿ ಪ್ರತಿವರ್ಷ ಶಿಶಿರ ಋತುವಿನಲ್ಲಿ ನಡೆಯುವ ಅಮ್ಮನ ವಿಶೇಷ ಪೂಜೆಯಲ್ಲಿ ಪಾಲ್ಗೊಳ್ಳುವರು. ರಥೋತ್ಸವದ ಸಂದರ್ಭದಲ್ಲಿ ಚಪ್ಪರಹಾಕಿ, ಮೂರ್ತಕಂಬವನ್ನು ಪ್ರತಿಷ್ಠಾಪಿಸುತ್ತಾರೆ. ಕನ್ಯೆಯರು ಹೊಂಬಾಳೆಯ ಕುಂಬ, ಕಳಸವನ್ನು ವಿಶೇಷವಾಗಿ ತರುವರು. ಚಾಮುಂಡಿಯು ರಥವನ್ನು ಏರಿದ ನಂತರ ರಥೋತ್ಸವವು ಜರುಗುತ್ತದೆ. ಈ ಸಂದರ್ಭದಲ್ಲಿ ಇವರು ದೇವಿಗೆ ಕುರಿ ಬಲಿಯನ್ನು ಕೊಟ್ಟು ಅದರ ತಲೆ-ಕಾಲುಗಳನ್ನು ದೇವಿಯ ಮುಂದೆ ಹುಗಿಯುವರು. ದೇವರಿಗೆ ಬಲಿ ಕೊಟ್ಟ ಪ್ರಾಣಿಯ ರಕ್ತದ ಹುಲುಸು ಅದೇ ದಿವಸ ರಾತ್ರಿ ಚಲ್ಲುತ್ತಾರೆ. ಚಿಕ್ಕಮಂಗಳೂರು ಜಿಲ್ಲೆಯ ಕೆಲವು ಪ್ರದೇಶದ ಮೇದರು ಆಂಜನೆಯಸ್ವಾಮಿ, ದೇವೀರಮ್ಮ, ಮಲೆಮ್ಮ, ಚೌಡಮ್ಮ, ಮೈಲಾರಲಿಂಗ, ಹುಲಿಕುಂಠರಾಯ ಮುಂತಾದ ದೇವರನ್ನು ಪೂಜಿಸುತ್ತಾರೆ. ಸೇಲಂ ಕಡೆಯಿಂದ ಬಂದು ನೆಲೆಸಿದ ತೆಲುಗು ಮೇದರು ಪರಾಶಕ್ತಿ ದೇವತೆ, ಎಲ್ಲಮ್ಮ, ಮುನೇಶ್ವರ, ವೆಂಕಟರಮಣ, ಆದಿಶಕ್ತಿ-ಯಲ್ಲಮ್ಮ, ಚೌಡಮ್ಮ, ಮತ್ತು ಭೂತರಾಯನನ್ನು ಪೂಜಿಸುವರು. ಆದಿಶಕ್ತಿ ಯಲ್ಲಮ್ಮನಿಗೆ ವಿಶೇಷ ಪೂಜೆಯನ್ನು ಮೂರು ದಿನಗಳ ಕಾಲ ನಡೆಸುತ್ತಾರೆ. ಯಲ್ಲಮ್ಮನಿಗೆ ಹನ್ನೆರಡು ದಿನಿಸಿನ ಅಡಿಗೆಯ ಎಡೆ ಹಾಕಿ ಊಟ ಮಾಡುತ್ತಾರೆ. ಕೆಲವರು ಹರಕೆ ಹೊತ್ತಿದ್ದರೆ ಕುರಿ ಮತ್ತು ಕೋಳಿಯ ಬಲಿಯನ್ನು ಕೊಡುವರು. ತರಿಕೇರಿಯ ಸುತ್ತಮುತ್ತಲ ಮೇದರು ಕೊಲ್ಲಾಪುರದಿಂದ ಬಂದ ಕೊಲ್ಲಾರಮ್ಮನನ್ನು ಮತ್ತು ಕಡೂರು ತಾಲೂಕಿನಿಂದ ಬಂದ ಅಂತರಗಟ್ಟೆಮ್ಮನನ್ನು ಪೂಜಿಸುತ್ತಾರೆ. ಜೊತೆಗೆ, ಸ್ಥಳೀಯ ದೇವತೆಯಾದ ಗುಳ್ಯಮ್ಮನನ್ನು ಪೂಜಿಸುವರು.

ನನ್ನ ಅಧ್ಯಯನದ ಭೌಗೋಳಿಕ ವ್ಯಾಪ್ತಿಯಾದ ಬಳ್ಳಾರಿಜಿಲ್ಲೆಯ ಮೇದರ ಮನೆದೇವರು ಇಲ್ಲಿ ಪ್ರಾದೇಶಿಕವಾಗಿ ಪ್ರಸಿದ್ಧವಿರುವ ದೇವರುಗಳಾಗಿವೆ. ಬಳ್ಳಾರಿ ತಾಲೂಕಿನ ಮೇದರು: ಈದೆಮ್ಮ-ಜಮ್ಮಲಮ್ಮ, ಗುಡ್ಡದ ಎಲ್ಲಮ್ಮ, ಮೈಲಾರಲಿಂಗಪ್ಪ, ಗಾಳೆಮ್ಮ, ಯಲ್ಲಮ್ಮ, ಆಂಜನೇಯ, ಹುಲಿಗೆಮ್ಮ, ಕುಮಾರಸ್ವಾಮಿ, ಗುಡ್ಡದತಿಮ್ಮಪ್ಪ ಹುಲಿಕುಂಟರಾಯ ನನ್ನು ಪೂಜಿಸುತ್ತಾರೆ.ಹಗರಿಬೊಮ್ಮನಹಳ್ಳಿಯ ತಾಲೂಕಿನ ಮೇದರು: ವೀರಭದ್ರೇಶ್ವರ, ಉಚ್ಚೆಂಗೆಮ್ಮ, ಆಂಜನೇಯ, ಮೈಲಾರಲಿಂಗ, ಗುಡ್ಡದ ತಿಮ್ಮಪ್ಪ ಬೆಟ್ಟದ ಮಲ್ಲಣ್ಣ, ಗೋಣಿಬಸಪ್ಪ ಹುಲಿಗೆಮ್ಮ, ಗವಿಸಿದ್ದೇಶ ದೇವರುಗಳನ್ನು ಪೂಜಿಸುತ್ತಾರೆ. ಹೂವಿನಹಡಗಲಿ ತಾಲೂಕಿನ ಮೇದರು: ಹುಲಿಗೆಮ್ಮ, ಹನುಮಂತರಾಯ, ಮೈಲಾರಲಿಂಗ, ತಿರುಪತಿ ವೆಂಕಟೇಶ, ಕೊಟ್ಟೂರೇಶ್ವರ, ಉಚ್ಚೆಂಗೆಮ್ಮ, ವೀರಭದ್ರೇಶ್ವರ, ಕರಿಸೀರಿ ದೇವರು, ಯಲ್ಲಮ್ಮ, ಮೈಲೆಮ್ಮ; ನಾಣಿಕೇರಿ ಆಂಜನೇಯ, ಗವಿಸಿದ್ದೇಶ, ಮುಸಲವಾಡದ ವೀರಣ್ಣ, ಸಿಂಗಟಾಲೂರು ವೀರಣ್ಣ , ಕೂಲಹಳ್ಳಿ ಗೋಣಿಬಸವೇಶ್ವರ, ಹೊಸಕೇರಿ ವೀರಣ್ಣ , ದೇವರುಗಳನ್ನು ಪೂಜಿಸುತ್ತಾರೆ. ಹೊಸಪೇಟೆ

ತಾಲೂಕಿನ ಮೇದರು: ಹುಲಿಕುಂಟೇಶ್ವರ, ಕನಕರಾಯ, ನಾಣಿಕೇರಿ ಆಂಜನೇಯ, ಮೈಲಾರ ಲಿಂಗಪ್ಪ, ಉಚ್ಚಂಗೆಮ್ಮ, ಭರ್ಮದೇವರು, ಹುಲಿಗೆಮ್ಮ, ಗುಡ್ಡದ ತಿಮ್ಮಪ, ಕೊಟ್ರೇಶ, ಗೋಣಿಬಸಪ್ಪ ನೇಮಕಲ್ಲ ಆಂಜನೇಯ, ಎಲ್ಲಮ್ಮ, ಕನಗಿರಿ ಹನುಮಪ್ಪ, ನಂದಿಪುರ ದೊಡ್ಡಬಸವೇಶ್ವರ, ಕುರುಗೋಡು ದೊಡ್ಡಬಸವೇಶ್ವರ, ಗವಿಸಿದ್ದೇಶ, ಕೂಲಹಳ್ಳಿ ಗೋಣಿಬಸವೇಶ, ಕೊಟ್ರೇಶ, ದೇವರುಗಳನ್ನು ಪೂಜಿಸುತ್ತಾರೆ. ಕೂಡ್ಲಿಗಿ ತಾಲೂಕಿನ ಮೇದರು : ಬೊಮ್ಮಗಟ್ಟ ಹುಲಿಕುಂಟೇಶ್ವರ,(ಹುಲಿಕುಂಟರಾಯ), ಹುಲಿಗೆಮ್ಮ, ಆಂಜನೇಯ, ಗೋಣಿಬಸವೇಶ್ವರ, ಕುರುಗೋಡು ದೊಡ್ಡಬಸವೇಶ, ನರಸಿಂಹಸ್ವಾಮಿ, ಮೈಲಾರಲಿಂಗಪ್ಪ, ಉಚ್ಚಂಗೆಮ್ಮ, ದೇವರುಗಳನ್ನು ಪೂಜಿಸುತ್ತಾರೆ. ಸಿರುಗುಪ್ಪ ತಾಲೂಕಿನ ಮೇದರು: ರಾಜಮುರಿ,(ಆಂದ್ರ ರಾಜಮುರಿ), ಆದ್ವಾನಿಲಕ್ಷ್ಮಮ್ಮ, ರಾಮಪುರ ನರಸಿಂಹ, ಹುಲಿಕುಂಟವೀರಣ್ಣ, ಹುಲಿಗೆಮ್ಮ, ಮಹದೇಶ್ವರ, ಹುರ್ಳ್ಯಂದಿವೀರಣ್ಣ ತಾಯಮ್ಮ, ಯಲ್ಲಮ್ಮ, ನ್ಯಾಮಕಲ್ಲ ಆಂಜನೇಯ, ಗುಡ್ಡದ ಮಲ್ಲಯ್ಯ, ತಿರುಪತಿ ತಿಮ್ಮಪ್ಪ, ಮಲೆಮ್ಮ ದೇವರುಗಳನ್ನು ಪೂಜಿಸುತ್ತಾರೆ. ಸೊಂಡೂರು ತಾಲೂಕಿನ ಮೇದರು: ಗುಡ್ಡದಮಲ್ಲಯ್ಯ, ಆಂಜನೇಯ, ಗುಡ್ಡದ ತಿಮ್ಮಪ್ಪ ಮೈಲಾರ ಲಿಂಗಪ್ಪ, ಹುಲಿಕುಂಟರಾಯ, ಹನುಮಂತರಾಯ, ಹುಲಿಗೆಮ್ಮ, ವೆಂಕಟೇಶ್ವರ, ಕೊಲ್ಲಾರಮ್ಮ, ನಾಣಿಕೇರಿ ಆಂಜನೇಯ, ದೇವರುಗಳನ್ನು ಪೂಜಿಸುತ್ತಾರೆ. ಬಳ್ಳಾರಿಜಿಲ್ಲೆಯ ಕೆಲವು ಹಬ್ಬ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಇಲ್ಲಿ ವಿಶೇಷವಾಗಿ ಗಮನಿಸಿ ಪ್ರಸ್ತಾಪಿಸುತ್ತಿದ್ದೇನೆ :

3.5.1 ಕತ್ತಿ ಹಬ್ಬ (ಯಳಬಿ ಹಬ್ಬ):

ಯಳಬಿ ಹಬ್ಬವನ್ನು ಸಾಮಾನ್ಯವಾಗಿ ಮೇದರು ತಮ್ಮಕುಲ ಕಸುಬಿಗೆ ಸಂಬಂಧಿಸಿದಂತೆ ಆಚರಿಸುತ್ತಾರೆ. ವರ್ಷ ಪೂರ್ತಿ ಬೆಳೆದುನಿಂತ ಬಂಬು ಮತ್ತು ಬಿದಿರುಗಳನ್ನು ನವಂಬರ್ ಮತ್ತು ಡಿಸೆಂಬರ್ ತಿಂಗಳುಗಳಿಂದ ಕಟಾವು ಮಾಡುವರು. ಈ ಕಟಾವಿಗೆ ಮುಂಚೆ ಮೇದರು ಈ ಹಬ್ಬವನ್ನು ಆಚರಿಸುತ್ತಾರೆ. ಯಳಬಿ ಹಬ್ಬದ ದಿವಸ ಮೇದ ಸಮುದಾಯದವರೆಲ್ಲ ತಮ್ಮ ಕುಲಕಸುಬಿಗೆ ಬಳಸುವ ಕತ್ತಿ ಮತ್ತು ಒಂಬುಗಳಿಗೆ ತಮ್ಮ ಗುರುತು ಮಾಡಿ ಜಾತಿಯ ಯಜಮಾನನ ಮನೆಯಲ್ಲಿ ತಂದು ಇಡುತ್ತಾರೆ. ಜಾತಿಯ ಯಜಮಾನ ಬಿದಿರಿನ ಜೊತೆಗೆ ಎಲ್ಲರೂ ತಂದಿರಿಸಿರುವ ಕತ್ತಿ ಮತ್ತು ಒಂಬುಗಳನ್ನಿಟ್ಟು ಪೂಜೆ ಮಾಡುವನು. (ಎರಡನೇ ಛಾಯಾಚಿತ್ರವನ್ನು ಗಮನಿಸಿರಿ) ಈ ಪೂಜೆಯ ಹೊತ್ತಿಗೆ ಸಮುದಾಯದ ಎಲ್ಲಾ ಮೇದರು ಬರುವರು. ಕುಂಬಳಕಾಯಿ ಮತ್ತು ತೆಂಗಿನಕಾಯಿಯನ್ನು ಹೊಡೆದು ಒಂದು ಕೋಳಿಯನ್ನು ಬಲಿಕೊಟ್ಟು ಮಂಗಳಾರತಿ ಮಾಡುವರು. ಆ ದಿವಸ ಇಡೀರಾತ್ರಿ ಭಜನೆ ಮಾಡುತ್ತಾ ಜಾಗರಣೆ ಮಾಡುತ್ತಾರೆ. ಮಾರನೆಯ ದಿವಸ ಎಲ್ಲರೂ ಯಜಮಾನನ ಒಪ್ಪಿಗೆಯನ್ನು ಪಡೆದು ತಮ್ಮ ಕತ್ತಿಗಳನ್ನು ಮನೆಗೆ ಕೊಂಡೊಯ್ಯುತ್ತಾರೆ. ಎಲ್ಲರೂ ಒಟ್ಟಿಗೆ ಸೇರಿ ಕಾಡಿಗೆ ಹೋಗಿ ಅಲ್ಲಿ ಮತ್ತೊಮ್ಮೆ ಕಾಡುದೇವತೆಯನ್ನು ಪೂಜೆಮಾಡಿ ಮನೆದೇವರು, ಕುಲದೇವರು, ಕಾಡುದೇವರನ್ನು ನೆನೆದು ಬಿದಿರು ಕಡಿದು ತರುತ್ತಾರೆ. ಈ ಪದ್ಧತಿಯು ಹಿಂದೆ ಮೇದರು

ಮುಕ್ತವಾಗಿ ಅರಣ್ಯದಲ್ಲಿ ಬಿದಿರು ಕಡಿಯುವ ಅವಕಾಶವಿದ್ದಾಗ ಆಚರಣೆಯಲ್ಲಿತ್ತು. ಇತ್ತೀಚಿಗೆ ಸರಕಾರದ ಬದಲಾದ ಅರಣ್ಯ ನೀತಿಯಿಂದಾಗಿ ಕತ್ತಿ ಹಬ್ಬ ಹೊಸ ತಿರುವು ಪಡೆದುಕೊಂಡು ಪ್ರತಿವರ್ಷ ಮೇದರು ಆಚರಿಸುವ ಮಲೆಮ್ಮನ ಜಾತ್ರೆಯ ಸಂದರ್ಭದಲ್ಲಿ ಜಾತ್ರೆಯ ಮೊದಲನೆಯ ದಿವಸ ಆಚರಿಸುತ್ತಾರೆ. ಮೇದರ ಒಂದು ನಂಬಿಕೆಯ ಪ್ರಕಾರ ಪ್ರತಿವರ್ಷ ಮೊದಲಬಾರಿಗೆ ಬಿದಿರು ಕಡಿಯುವಾಗ ಕಾಡುದೇವತೆಗೆ ಮತ್ತು ಊರ ದೇವತೆಯನ್ನು ಪೂಜಿಮಾಡಿ ಬಲಿ ಕೊಟ್ಟು ಬಿದಿರು ಕಡಿಯ ಬೇಕೆಂದು ನಂಬಿದ್ದಾರೆ. ಈ ನಂಬಿಕೆಯಿಂದಾಗಿ ಯಳಬಿ ಹಬ್ಬದ ಆಚರಣೆಯು ಜಾರಿಗೆ ಬಂದಿರಬಹುದು.

3.5.2 ಹಿರಿಯರ ಹಬ್ಬ:

ಮಾನವನ ಮರಣದ ನಂತರದ ಭೌತಿಕ ದೇಹಕ್ಕೆ ಗೌರವವನ್ನು ಸಲ್ಲಿಸಿ ಸಂಸ್ಕಾರ ಮಾಡುತ್ತಾರೆ. ಇದರ ಜೊತೆಗೆ ಮೇದರಿಗೆ ಮೃತನ ಆತ್ಮ ಸಂಬಂಧ ಕುರಿತಾಗಿ ಇವರಲ್ಲಿ ಅನೇಕ ಗಾಢವಾದ ನಂಬಿಕೆಗಳಿವೆ. ಮೃತರ ಆತ್ಮ ಶಾಂತಿಗಾಗಿ ಮತ್ತು ಅವರು ನಮ್ಮನ್ನು ಸಂರಕ್ಷಿಸಿ ಕಾಪಾಡಬೇಕು ಎನ್ನುವುದಕ್ಕಾಗಿ ಪ್ರತಿವರ್ಷ ಮಹಾನವಮಿಯಲ್ಲಿ ಮೇದರು ಹಿರಿಯರ ಹಬ್ಬವನ್ನು ಆಚರಿಸುತ್ತಾರೆ.ಈ ಹಬ್ಬವನ್ನು ಇವರು ಹಿರಿಯರಿಗೆ ಎಡೆಹಾಕುವುದು ಎಂದು ಕರೆಯುತ್ತಾರೆ. ಮಹಾನವಮಿಯ ದಿವಸ ಮಧ್ಯಾಹ್ನ ಸಿಹಿ ಅಡಿಗೆಯನ್ನು ಮಾಡಿ ದೇವರಿಗೆ ಎಡೆಹಾಕಿ ಊಟಮಾಡುವರು. ಸಾಯಂಕಾಲ ಹಿರಿಯರಿಗೆ ಎಡೆಹಾಕುವ ಕಾರ್ಯ ಮಾಡುತ್ತಾರೆ. ಅಂದು ಸಾಯಂಕಾಲ ದೇವರ ಮನೆಯನ್ನು ಮಡಿಮಾಡಿ, ದೇವರ ಜಗುಲಿಯ ಮುಂದೆ ಇಲ್ಲವೇ ಪಕ್ಕಕ್ಕೆ ಗೋಡೆಗೆ ಒಂದು ಮಣಿ ಇರಿಸಿ ಅದರ ಮೇಲೆ ಸ್ವಲ್ಪ ಅಕ್ಕಿಕಾಳು ಹಾಕಿ ಒಂದು ತುಂಬಿದ ಚೆರಿಗೆಯನ್ನು ಇಡುವರು. ಹಿರಿಯರಿಗೆ ಏರಿಸುವ ಬಟ್ಟೆಯನ್ನು ಬದ್ದಿಗೆ(ಶರಗು) ಮೇಲೆಮಾಡಿ ಮಡಿಚಿ, ದಾರದಿಂದ ಕಟ್ಟಿ ಚರಿಗೆಯ ಮುಂದೆ ಇರಿಸುತ್ತಾರೆ. ಮಾಂಸದ ವಿವಿಧ ಬಗೆಯ ಅಡಿಗೆಯನ್ನು ಮಾಡಿ ಈ ದಿವಸ ಎಡೆಮಾಡುತ್ತಾರೆ. ಮೃತರು ಉಪಯೋಗಿಸುತ್ತಿದ್ದ ಅವರಿಗೆ ಇಷ್ಟವಾದ ಕೆಲವು ತಿನಿಸು ಹವ್ಯಾಸದ ವಸ್ತುಗಳನ್ನು ಇಡುತ್ತಾರೆ(ಬೀಡಿ, ಸಿಗರೇಟು, ಮದ್ಯಪಾನ, ನಸ್ಯ ಎಲೆ-ಅಡಿಕೆ, ತಂಬಾಕು, ಮುಂತಾದವು). ವಿಶೇಷವಾಗಿ ಈ ದಿವಸ ಮೇದರು ಮಾಂಸದ ಕರಿಕಟ್ಟಿಗೆಯನ್ನು ಮಾಡಿ ಎಡೆಗೆ ಇಡುವರು. (ಕರಿಕಟಿಗೆ: ತೆಳ್ಳನೆಯ ಬಿದಿರಿಗೆ ಮಾಂಸದ ತುಂಡುಗಳನ್ನು ಚುಚ್ಚಿ ಪೋಣಿಸಿ ಖಾರ-ಉಪ್ಪು ಹಚ್ಚಿ ಬೆಂಕಿಯಲ್ಲಿ ಸುಟ್ಟಿರುವುದು) ಮನೆಯವರೆಲ್ಲ ಸೇರಿ ಪೂಜಿಸಿ ಲೋಬಾನ ಹಾಕುತ್ತಾರೆ. ಹೆಣ್ಣು ಮಗಳಾಗಿದ್ದರೆ ದಂಡೆ, ಮತ್ತು ಮಂಗಳದ್ರವ್ಯಗಳನ್ನು ಮುಡಿಸುವರು. ಮೃತರು ಉಪಯೋಗಿಸಿದ ಆಭರಣಗಳು ಇದ್ದರೆ, ಈ ದಿವಸ ಅವುಗಳನ್ನು ತೊಡಿಸುವರು. ಪೂಜೆ ಮುಗಿದ ನಂತರ ಮನೆಯವರೆಲ್ಲರೂ ದೇವರ ಮನೆಯನ್ನು ಬಿಟ್ಟು ಹೊರಗಡೆ ಬಂದು ಕೂಡುತ್ತಾರೆ. ಅಂದರೆ ಈ ಸಂದರ್ಭದಲ್ಲಿ ಹಿರಿಯರ ಆತ್ಮ ಬಂದು ಪೂಜೆಯನ್ನು ಸ್ವೀಕರಿಸುವುದು ಎಂದು ಇವರ ನಂಬಿಕೆ. ಹಿರಿಯರಿಗೆ ಹಾಕಿದ ಎಡೆಯನ್ನು

ಮನೆಯವರಿಗೆ ಮಾತ್ರ ಪ್ರಸಾದವೆಂದು ಕೊಡುತ್ತಾರೆ. ಮಾರನೆಯ ದಿವಸ ಹಿರಿಯರನ್ನು ಇಳಿಸಿ ತಂಬಿಗೆಯ ನೀರನ್ನು ಹೂವಿನ ಗಿಡಕ್ಕೆ ಹಾಕುವರು. ಮುತ್ತೈದೆಯರು ಹಿರಿಯರಿಗೆ ಏರಿಸಿದ ಬಟ್ಟೆಯನ್ನು ಮೊದಲು ಉಡುತ್ತಾರೆ.

ಗುಲ್ಬರ್ಗ ಜಿಲ್ಲೆಯ ಸುರಪುರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಹಿರಿಯರಿಗೆ ಎಡೆಹಾಕುವ ಈ ಹಬ್ಬವನ್ನು ಮಹಾಲಯ ಅಮಾವಾಸ್ಯೆಯ ಹಿಂದಿನ ದ್ವಾದಶಿಯಂದು ಆಚರಿಸುವುದಾಗಿ ಬಿ.ಆರ್. ಸುರುಪುರ ಅವರು ಹೇಳುತ್ತಾರೆ. ಈ ಹಬ್ಬವನ್ನು ಅವರು ಹಿರಿಯರಿಗೆ ಲೋಬಾನಹಾಕುವ ಹಬ್ಬ ಎನ್ನುವರು. ಆದರೆ ಆದಿನ ಸಾಯಂಕಾಲ ಓಣಿಯಮಂದಿಯನ್ನೆಲ್ಲ ಹಿರಿಯರಿಗೆ ಲೋಬಾನು ಹಾಕಲು ಕರೆಯುವರು. ಎಲ್ಲರೂ ಎಲ್ಲರಮನೆಗೆ ಹೋಗಿ ಪರಸ್ಪರರ ಮನೆಗಳಲ್ಲಿ ಲೋಬಾನು ಹಾಕುವರು. ಈ ದಿನ ಇವರು ಬೇಟೆ ಕೊಯ್ಯುತ್ತಾರೆ.

ಈ ಸಂದರ್ಭದಲ್ಲಿ ಮೇದರು ಹಿರಿಯರಿಗೆ ಕರಿ ಕಟ್ಟಿಗೆಯನ್ನು ಎಡೆಗೆ ಇರಿಸುವ ಪದ್ಧತಿಯನ್ನು ನೋಡಲಾಗಿ ಪ್ರಾಚೀನ ಕಾಲದಲ್ಲಿ ಪಾತ್ರೆಗಳನ್ನು ಬಳಸದೇ ಮಾಂಸವನ್ನು ಬೇಯಿಸಿ ತಿನ್ನುವ ಆದಿಮ ಸಂಸ್ಕಾರವನ್ನು ಇದು ಬಿಂಬಿಸುತ್ತದೆ. ಏಕೆಂದರೆ ಡಾ. ಕೆ. ಕೇಶವನ್‌ಪ್ರಸಾದ್ ಅವರು ಹೇಳುವ ಹಾಗೆ,'' ಯಾವುದೇ ಒಂದು ಸಂಪ್ರದಾಯ ರೂಢಿಗೆ ಬರಬೇಕಾದರೆ ಅದು ಆ ಸಮಾಜದ ಜನರ ಅಂದಿನ ಅನುಕೂಲತೆಯನ್ನು ಅವಲಂಬಿಸಿರುತ್ತದೆ. ಆದರೆ ಅದು ಮನವನ ಬೌದ್ಧಿಕ ಬೆಳವಣಿಗೆ, ಇತರೆ ಸಂಪ್ರದಾಯಗಳ ಪ್ರೇರಣೆ, ಪ್ರಭಾವ, ಕೀಳರಿಮೆ, ಆರ್ಥಿಕ ಸ್ಥಿತಿ-ಗತಿ ಇವೇ ಮುಂತಾದವುಗಳಿಂದ ಪ್ರಭಾವಿತವಾಗಿರುತ್ತದೆ. ಆದ್ದರಿಂದ ಅಡುಗೆಗೆ ಸಂಬಂಧಿಸಿದಂತೆಸಂಪ್ರದಾಯಗಳು ಅಸ್ತಿತ್ವದಲ್ಲಿ ಇರುವುದಾದರೆ ಅವುಗಳಲ್ಲಿ ಏನಾದರೂ ಒಂದು ಕಾರಣ ಅಥವಾ ಉದ್ದೇಶ ಇರುತ್ತದೆ.''[6] ಇವರ ಈ ಸಂಪ್ರದಾಯಕ್ಕೆ ಅಂದಿನ ಇವರ ಜೀವನಕ್ರಮ ಮತ್ತು ಸ್ಥಿತಿ ಕಾರಣವಾಗಿರಬೇಕು.ಆದರೆ, ಈ ರೀತಿಯ ಕರಿಕಟಿಗೆಯ ಎಡೆಯನ್ನು ನಾಯಕರಂತಹ ಇತರೆ ಬುಡಕಟ್ಟು ಸಮುದಾಯದವರು ಹಾಕುವುದಿಲ್ಲ. ಇದು ಇವರ ಅನನ್ಯತೆ. ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಹಿರಿಯರಿಗೆ ಎಡೆ ಹಾಕುವ ಹಬ್ಬವನ್ನು ದಸರಾ ಹಬ್ಬದ ಅಖಂಡ ಪೂಜೆಯ ದಿವಸ ಮತ್ತು ವಿಜಯ ದಶಮಿಯ ದಿವಸ ಆಚರಿಸುವುದು ಕಂಡು ಬರುತ್ತದೆ. ಅಂದರೆ ಹಿರಿಯರಿಗೆ ಯಾರ ಮನೆಯಲ್ಲಿ ಮಾಂಸದ ಅಡುಗೆಯ ಎಡೆ ಮಾಡುವ ಪದ್ಧತಿ ಇದೆಯೋ ಅವರು ವಿಜಯದಶಮಿಯ ದಿವಸ ಹಿರಿಯರಿಗೆ ಎಡೆಹಾಕುತ್ತಾರೆ. ಯಾರ ಮನೆಯಲ್ಲಿ ಹಿರಿಯರಿಗೆ ಸಿಹಿ ಅಡುಗೆಯನ್ನು ಎಡೆ ಮಾಡುವ ಪದ್ಧತಿ ಇದೆಯೋ ಅವರು ಅಖಂಡ ಪೂಜೆಯ ದಿವಸ ಹಿರಿಯರಿಗೆ ಸಿಹಿ ಅಡಿಗೆಯ ಎಡೆಯನ್ನು ಹಾಕುವ3.5.3 ದಸರಾ ಹಬ್ಬ:

ದಸರಾ ಹಬ್ಬದ ಸಂದರ್ಭದಲ್ಲಿ ಹಿಂದು ಸಂಪ್ರದಾಯದ ಅನೇಕ ಬುಡಕಟ್ಟು ಸಮುದಾಯದವರು ತಮ್ಮದೇಆದ ಪದ್ಧತಿಯ ಪ್ರಕಾರ ಈ ಹಬ್ಬವನ್ನು ಆಚರಿಸುತ್ತಾರೆ. ಸಾಮಾನ್ಯವಾಗಿ ಅಖಂಡ ಪೂಜೆಯ ದಿವಸ ಪ್ರತಿಯೊಬ್ಬ ಕಸುಬುದಾರರು, ಕುಶಲ ಕರ್ಮಿಗಳು, ವ್ಯಾಪಾರಿಗಳು, ಕೃಷಿಕರು ಮೊದಲಾಗಿ ತಮ್ಮ ವೃತ್ತಿಯಲ್ಲಿ ಬಳಸುವ ಸಾಮಗ್ರಿಗಳನ್ನು ಪೂಜಿಸುವುದು ವಾಡಿಕೆ. ಆದರೆ ಕೆಲವು ಬುಡಕಟ್ಟು ಸಮುದಾಯಗಳಲ್ಲಿ ಈ ಆಚರಣೆಯಲ್ಲಿ ಕೆಲವು

ವಿಶಿಷ್ಟತೆಗಳನ್ನು ಗಮನಿಸಬಹುದು. ಮೇದರು ಈ ದಿವಸ ದೇವರ ಜಗುಲಿಯ ಮೇಲೆ ಇಲ್ಲವೇ ಪಕ್ಕಕ್ಕೆ ಕತ್ತಿ ಕೊರಡು, ಒಂಬು ಮತ್ತು ಬಿದಿರುಗಳನ್ನು ಮಡಿನೀರಿನಿಂದ ತೊಳೆದು ಇರಿಸುತ್ತಾರೆ. ಮಾವಿನ ತೋರಣ ಕಟ್ಟಿ ಜೋಳ ಮತ್ತು ಗುರೆಳ್ಳಿನ ದಂಟುಗಳನ್ನು ಇರಿಸಿ ಸಿಂಗರಿಸುತ್ತಾರೆ. ಕಳಸ ತುಂಬಿ, ಪೂಜೆಯನ್ನು ಮಾಡಿ ಹೋಳಿಗಿ ಮತ್ತು ಹುಗ್ಗಿಯ ಎಡೆಯನ್ನು ಕೊಡುವರು.(ಅಧ್ಯಾಯ ಎರಡರಲ್ಲಿ ಮೂರನೆ ಛಾಯಾಚಿತ್ರವನ್ನು ಗಮನಿಸಿರಿ) ಡಿಪೋ ಇದ್ದರೆ, ಡಿಪೋದಲ್ಲಿರುವ ಬೊಂಬು, ಬಿದಿರು, ಕಡಪಾ, ಪೋಲ್ಸ್ ಹಂಚು, ಟೈಲ್ಸ್ ಮುಂತಾದವುಗಳನ್ನು ನೀರಿನಿಂದಮಡಿಮಾಡಿ ಹಸಿರು ತೋರಣಗಳಿಂದ ಅಲಂಕರಿಸಿ ಪೂಜೆಮಾಡಿ ಲೋಬಾನ ಹಾಕುತ್ತಾರೆ. ಪೂಜೆಗೆ ಪಕ್ಕದ ಡಿಪೋದವರನ್ನು ಮತ್ತು ಬೇಕಾದ ಬಂಧು ಮಿತ್ರರನ್ನು ಸಹ ಕರೆಯುತ್ತಾರೆ. ಯಾರ ಮನೆಯಲ್ಲಿ ಹಿರಿಯರಿಗೆ ಮಾಂಸದ ಎಡೆ ಹಾಕುವ ಪದ್ಧತಿ ಇರುವುದಿಲ್ಲವೋ ಅವರು ಇದೇದಿವಸ ಹಿರಿಯರಿಗೆ ಸಿಹಿ ಅಡುಗೆಯ ಎಡೆಹಾಕುತ್ತಾರೆ. ಮಾಂಸದ ಎಡೆಹಾಕುವ ಪದ್ಧತಿ ಇದ್ದವರು ಮಾರನೆಯದಿನ ಹಿರಿಯರಿಗೆ ಮಾಂಸದ ಎಡೆ ಹಾಕಿ ಪೂಜಿಸುವರು. ದಾಸಯ್ಯನ ಪದ್ಧತಿ ಇದ್ದವರು ಇದೇ ದಿನ ಮನೆಯಲ್ಲಿ ದಾಸೋಹ ನೀಡಿಸುತ್ತಾರೆ. ಮಾರನೆಯ ದಿವಸ ವಿಜಯ ದಶಮಿ. ಮನೆಯಲ್ಲಿ ಈ ದಿವಸ ಹೋಳಿಗೆ ಕಡುಬು ಮಾಡುವರು. ಮನೆಯಲ್ಲಿ ದೇವರಿಗೆ ಎಡೆಹಾಕಿ ಬನ್ನಿ ಮಹಾಕಾಳಿಗೆ ಉಡಿ ಮತ್ತು ಎಡೆಕೊಟ್ಟು ಬರುತ್ತಾರೆ. ಸಾಯಂಕಾಲ ಊರಿನ ಪದ್ಧತಿಯ ಪ್ರಕಾರ ಊರ ಸಮಾಜದ ಜೊತೆಗೆ ಬನ್ನಿ ಮುಡಿಯುವರು. ಮನೆಗೆ ಬಂದು ಮನೆಯ ದೇವರಿಗೆ ಮತ್ತು ಓಣಿಯಲ್ಲಿ ಮಲೆಮ್ಮನ ದೇವಸ್ಥಾನವಿದ್ದರೆ ಮಲೆಮ್ಮನಿಗೆ ಬನ್ನಿಯನ್ನು ಅರ್ಪಿಸಿ ಹಿರಿಯರಿಗೆ ಬನ್ನಿ ಕೊಟ್ಟು ನಮಸ್ಕರಿಸುವರು. ಕಿರಿಯರಿಂದ ಬನ್ನಿಯನ್ನು ಸ್ವೀಕರಿಸಿ ಕೆಲವರು ದುಡ್ಡು ಕೊಡುವರು. ಮಾರನೆಯ ದಿವಸ ಮಾಂಸದ ಅಡಿಗೆ ಮಾಡಿ ಕರಿ ಊಟ ಮಾಡುತ್ತಾರೆ.

3.5.4 ದೀಪಾವಳಿ ಹಬ್ಬ:

ಭಾರತದಲ್ಲಿ ವಿಶೇಷವಾಗಿ ಹಿಂದೂಗಳಿಗೆ ಮೂರು ಮುಖ್ಯ ಹಬ್ಬಗಳಲ್ಲಿ ದೀಪಾವಳಿ ಸಹ ಒಂದು. ದೀಪಾವಳಿಯ ಅಮಾವಾಸ್ಯೆಯ ದಿನ ಸಂಜೆ ಲಕ್ಷ್ಮೀಪೂಜೆಯನ್ನು ಬಹಳ ಸಡಗರದಿಂದ ಆಚರಿಸುತ್ತಾರೆ. ಆ ದಿವಸ ಲಕ್ಷ್ಮೀ ಪೂಜೆಯನ್ನು ಮಾಡಿದರೆ ಲಕ್ಷ್ಮಿ ಮನೆಗೆ ಬಂದು ನೆಲಸುತ್ತಾಳೆಂದು ಅನೇಕರಂತೆ ಇವರ ನಂಬಿಕೆ. ದಿಪಾವಳಿ ಹಬ್ಬದ ಲಕ್ಷ್ಮಿ ಪೂಜೆಯನ್ನು ಕುರಿತು ಇವರಲ್ಲಿ ಒಂದು ಕಥೆ ಪ್ರಚಲಿತದಲ್ಲಿದೆ.

ಒಮ್ಮೆ ಮೇದ ಸಮುದಾಯದ ಸ್ಥಿತಿವಾನ ಕುಟುಂಬದ ಒಂದು ಮನೆತನದವರಿಗೆ ಬಹಳ ಬಡತನ ಬಂದಿತು. ಕುಲ ಕಸುಬು ಬಿಟ್ಟು ಬೇರೆ ಕೆಲಸ ಮಾಡಲು ಹೊರಗೆ ಹೋಗದ ಮೇದಿನಿಯರಿಗೆ ತುಂಬಾ ತೊಂದರೆಯಾಯಿತು. ಹೀಗಿರುವಾಗ ಮನೆಯ ಯಜಮಾನ ಹಿರಿಯ ಸೊಸೆಯೊಡನೆ ಈ ಕುರಿತು ಚಿಂತೆ ಮಾಡ ತೊಡಗಿದ. ಹಿರಿಯ ಸೊಸೆಯು ತಾನು ಬರುವ ದೀಪಾವಳಿಯ ಅಮಾವಾಸ್ಯೆಯ ದಿವಸ ಚಿತ್ತಾನಕ್ಷತ್ರ ಬಂದಿರುವುದರಿಂದ ತಾನು ಆ ದಿವಸ ಲಕ್ಷ್ಮೀಪೂಜೆಯನ್ನು ಮಾಡುವುದಾಗಿ ಮನೆಯ ದೇವರು ಮತ್ತು ಲಕ್ಷ್ಮಿಯರ ಹೆಸರಿನಲ್ಲಿ ಮುಡುಪು ಕಟ್ಟಿಟ್ಟಳು.

ಅಮವಾಸ್ಯೆಯ ದಿನ ಮಧ್ಯರಾತ್ರಿ ಹನ್ನೆರೆಡುಗಂಟೆಗೆ ಊರುಕೇರಿಯ ಜನರೆಲ್ಲಾ ಮಲಗಿದ್ದರು.ಓಣಿಯ ಬೀದಿಗಳಲ್ಲದೇ ಎಲ್ಲರ ಮನೆಯಲ್ಲಿ ಕತ್ತಲಾವರಿಸಿತ್ತು. ಆಗ ಈ ಕುಟುಂಬದ ಹಿರಿಯ ಸೊಸೆ. ಮನೆಯನ್ನು ಮಡಿಮಾಡಿ ಪ್ರತಿಯೊಂದು ಕೋಣೆಯಲ್ಲಿ ಒಂದೊಂದು ಹಣತೆಯಲ್ಲಿ ದೀಪ ಹಚ್ಚಿಟ್ಟಳು. ದೇವರಮನೆಯಲ್ಲಿ ಲಕ್ಷ್ಮಿಯ ಪೂಜೆಯನ್ನು ಮಾಡಿ ದೇವರಿಗೆ ತುಂಬಿದ ಎಡೆ ಹಾಕಿ, ಮಂಗಳಾರತಿ ಮಾಡಿದಳು. ಊರಲ್ಲಿ ಇದೇ ಸಮಯಕ್ಕೆ ರಾಜ್ಯಲಕ್ಷ್ಮಿಯು ನಗರದಲ್ಲಿ ಸುತ್ತಾಡುತ್ತಿದ್ದಳು. ಊರಿನ ಪ್ರತಿಯೊಂದು ಮನೆಯಲ್ಲಿ ಕತ್ತಲಾವರಿಸಿರುವಾಗ ಇದೊಂದು ಮನೆಯಲ್ಲಿ ಮಾತ್ರ ಪೂರ್ಣ ಬೆಳಕಿದ್ದು ಸಕಲ ರೀತಿಯ ಪೂಜೆ ನಡೆದಿರುವುದನ್ನು ಕಂಡು ಲಕ್ಷ್ಮಿಯು ಬಂದು ಆ ಮನೆಯನ್ನು ಪ್ರವೇಶಿಸಿದಳು. ಹಿರಿಯ ಸೊಸೆಯ ಭಕ್ತಿಗೆ ಮೆಚ್ಚಿ ಆಕೆಯಿಂದ ಭಾಗಿನ ಪಡೆದು ಅದೃಶ್ಯಳಾದಳು. ಅಂದಿನಿಂದ ಇವರ ಮನೆತನದ ಆರ್ಥಿಕ ಸ್ಥಿತಿಯು ಸುಧಾರಿಸತೊಡಗಿತು. ದಿನೇ ದಿನೇ ಇವರ ಕಷ್ಟ ಕಾರ್ಪಣ್ಯಗಳೆಲ್ಲಾ ದೂರಾಗಿ ಇವರು ದೊಡ್ಡ ಶ್ರೀಮಂತರಾದರು. ಈ ಕಥೆಯ ಕಾರಣದಿಂದಲೋ ಏನೋ ಮೇದರು ದೀಪಾವಳಿಯ ಹಬ್ಬದ ದಿವಸ ಜಾತಿಯ ಮಹಿಳೆಯರಿಗೆ ಬಾಗೀ ಕೊಡುವರು.

ಪ್ರಸ್ತುತ ಮೇದರು ದೀಪಾವಳಿ ಹಬ್ಬದಲ್ಲಿ ಅಮವಾಸ್ಯೆಯ ದಿನ ಲಕ್ಷ್ಮೀಪೂಜೆಯನ್ನು ಮಾಡುತ್ತಾರೆ.ದೇವರ ಜಗುಲಿಯ ಮೇಲೆ ಒಂದು ತುಂಬಿದ ತಂಬಿಗೆಯ ಕಲಸವನ್ನು ಇಟ್ಟು ಅದರ ಮೇಲೆ ಹೊಸ ಸೀರೆ ಮತ್ತು ಕುಪ್ಪಸವನ್ನು ಹಾಕಿ, ಹೂವಿನ ದಂಡೆಯನ್ನು ಮತ್ತು ಸಾಧ್ಯವಾದರೆ ಚಿನ್ನದ ಮಂಗಲ ದ್ರವ್ಯಗಳನ್ನು ಹಾಕುತ್ತಾರೆ. ದೇವಿಯ ಮುಂದೆ ಅವರ ಸ್ಥಿತಿಗೆ ತಕ್ಕಂತೆ ದುಡ್ಡು ಇರಿಸಿ ತುಂಬಿದ ಉಡಿ ಮತ್ತು ಎಡೆ ಹಾಕುವರು. ಎಲ್ಲರೂ ದೇವಿಗೆ ಲೋಬಾನ ಹಾಕಿ ಮನೆಯಲ್ಲಿ ಸಿಹಿ ಊಟ ಮಾಡುತ್ತಾರೆ. ಕೆಲವರ ಮನೆಯಲ್ಲಿ ಇಡೀ ರಾತ್ರಿ ಜಾಗರಣೆ ಮಾಡಿ ದೀಪ ಕಾಯುವರು. ಇದೇ ದಿವಸ ಡಿಪೋ ಇದ್ದವರು ಡಿಪೋದಲ್ಲಿ ಲಕ್ಷ್ಮಿಯ ಫೋಟೋ ಇರಿಸಿ ಬೇಕಾದವರನ್ನು ಕರೆದು ಲಕ್ಷ್ಮಿಪೂಜೆ ಮಾಡುವರು. ಮಾರನೆಯ ದಿವಸ ಲಕ್ಷ್ಮಿಯನ್ನು ಇಳಿಸಿ ಎಡೆಯನ್ನು ಹಸುವಿಗೆ ತಿನಿಸುತ್ತಾರೆ. ಮನೆಯಲ್ಲಿ ಪೂಜೆ ಮಾಡಿ ಪಾಂಡವರ ಹಟ್ಟಿಯನ್ನು ಹಾಕುವರು. ಪ್ರತಿಯೊಂದು ಬಾಗಿಲಿಗೆ ಸಗಣಿಯಿಂದ ತಯಾರಿಸಿದ ಪಾಂಡವರ ಹಟ್ಟಿಯನ್ನು ಇರಿಸಿ ಅದರ ಸುತ್ತ ಮತ್ತು ಮನೆಯಲ್ಲಿ ಹೊನ್ನಾಂಬರಿಯ ಹೂವುಗಳನ್ನು ಚಲ್ಲುವರು. ಮಾರನೆಯ ದಿವಸ ಮಾಮೂಲಿಯಂತೆ ಕರಿ ಊಟ ಮಾಡುವರು.

3.5.5 ಯುಗಾದಿ ಹಬ್ಬ:

ಹಿಂದೂಗಳಿಗೆ ವರ್ಷದ ಬಹುದೊಡ್ಡ ಮತ್ತು ಸಡಗರದ ಹಬ್ಬಗಳಲ್ಲಿ ಈ ಯುಗಾದಿ ಹಬ್ಬಕೂಡ ಒಂದು. ಭಾರತೀಯ ಕಾಲಮಾನದ ಪ್ರಕಾರ ಹೊಸ ವರ್ಷದ ಆರಂಭ ಚೈತ್ರಶುದ್ಧ ಪಾಡ್ಯದಿಂದ ಆರಂಭಗೊಂಡು ಪಾಲ್ಗುಣ ಬಹುಳ ಚತುರ್ದಶಿಗೆ ಮುಕ್ತಾಯವಾಗುತ್ತದೆ.ಆದರೆ ಯಾವುದೇ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ಕಾಲ ಮತ್ತು ದಿವಸವನ್ನು ಚೈತ್ರ ಶುದ್ಧ ಪಾಡ್ಯದಿಂದಲೇ ಪರಿಗಣಿಸುತ್ತಾರೆ. ಈ ವರ್ಷಾರಂಭದ ಹಬ್ಬವೇ ಯುಗಾದಿ.

ಕರ್ನಾಟಕದಲ್ಲಿ ಯುಗಾದಿ ಹಬ್ಬದ ಆಚರಣೆಯು ಒಂದೇ ರೀತಿಯಲ್ಲಿ ಕಂಡುಬಂದರೂ ಸಹ ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಹೊಂದಿದೆ. ಅಲ್ಲದೇ ಅನೇಕ ಸಮುದಾಯಗಳ ಆಚರಣೆಯಲ್ಲಿ ವಿಭಿನ್ನತೆ ಕಂಡುಬರುತ್ತದೆ. ಹಲವು ಬುಡಕಟ್ಟು ಸಮುದಾಯದವರಂತೆ ಮೇದರೂ ಕೂಡ ಈ ಹಬ್ಬವನ್ನು ಮೂರು ದಿನಗಳ ಕಾಲ ಆಚರಿಸುತ್ತಾರೆ. ಯುಗಾದಿ ಅಮವಾಸ್ಯೆಯಾದ ಮಾರನೆಯ ದಿವಸ ಪಾಡ್ಯ, ಎರಡನೇ ದಿವಸ ಬಿದಿಗಿ ಮತ್ತು ಮೂರನೆಯ ದಿವಸ ತದಿಗಿಯ ಕರಿ. ಪಾಡ್ಯ ದಿವಸ ಮೇದರು ಮನೆಮಂದಿಯಲ್ಲಾ ಮೈಗೆ ಎಣ್ಣೆ ಹಚ್ಚಿಕೊಂಡು ನೀರಿನಲ್ಲಿ ಬೇವಿನ ಸೊಪ್ಪು ಹಾಕಿ ತಲೆಗೆ ಸ್ನಾನ ಮಾಡುವರು. ಆ ದಿವಸ ಎಲ್ಲರೂ ಹೊಸ ಬಟ್ಟೆಯನ್ನು ಧರಿಸುವರು. ಮನೆಯಲ್ಲಿ ಶ್ಯಾವಿಗಿ, ಬೇವು, ಮತ್ತು ಅನ್ನ ಸಾಂಬಾರು ಮಾಡುತ್ತಾರೆ.ಕೆಲವು ಪ್ರದೇಶಗಳಲ್ಲಿ ಮನೆಯವರೆಲ್ಲಾ ಪರಸ್ಪರ ಬೇವು ಬೆಲ್ಲ ಹಂಚುವರು. ಈ ದಿನ ಈ ಕಾಲದಲ್ಲಿ ಸಿಗುವ ಎಲ್ಲಾ ವಿಧದ ಹಣ್ಣುಗಳನ್ನು ಉಪಯೋಗಿಸಿ ಬೇವು ಮಾಡಿ ಕುಡಿಯುವರು. ಮಾರನೆಯ ದಿವಸ ಮನೆಯಲ್ಲಿ ಹೋಳಿಗೆ ಮಾಡಿ ದಾಸೋಹ ನೀಡಿಸುತ್ತಾರೆ. ಮತ್ತು ಕೆಲವರು ಹಿರಿಯರಿಗೆ ಎಡೆ ಹಾಕುವ ಪದ್ಧತಿ ಇದೆ. ಈ ದಿವಸ ಸಾಯಂಕಾಲ ಎಲ್ಲರೂ ಬಿದಿಗಿ ಚಂದ್ರನ ದರ್ಶನ ಮಾಡಿಕೊಂಡು ಹಿರಿಯರಿಗೆ ನಮಸ್ಕರಿಸುವರು. ಮಾರನೆಯ ದಿವಸ ಕರಿ.

ಯುಗಾದಿಯ ಕರಿ ಅನೇಕ ಬುಡಕಟ್ಟು ಸಮುದಾಯದವರಿಗೆ ಕರಿಯ ಹಬ್ಬಗಳಲ್ಲಿಯೇ ಬಹಳ ಪ್ರಮುಖವಾದ ಹಬ್ಬ. ಹಿಂದೆ ಈ ದಿವಸ ಕಾಡಿಗೆ ಬೇಟೆಯಾಡಲು ಬಹಳ ಸಡಗರ ಮತ್ತು ಗತ್ತಿನಿಂದ ಹೋಗುತ್ತಿದ್ದರು. ಈಗಲೂ ಕೆಲವು ಪ್ರದೇಶಗಳಲ್ಲಿ ಈ ದಿವಸ ಬೇಟೆಗೆ ಹೋಗುವ ಪದ್ಧತಿ ಕಂಡು ಬರುತ್ತದೆ. ಬಿ. ಆರ್. ಸುರಪುರ ಅವರು ಹೇಳುವ ಹಾಗೆ ಈ ದಿವಸ ಸುರಪುರ ಪ್ರದೇಶದಲ್ಲಿಯ ಕರಿ ಹಬ್ಬದ ವಿಶೇಷ ಆಚರಣೆಯನ್ನು ಇಲ್ಲಿ ಹೇಳಬೇಕಾಗುತ್ತದೆ. ಈ ದಿವಸ, ಮೇದರು, ನಾಯಕರು ಮತ್ತು ಕಬ್ಬಲಿಗರು ಸೇರಿಕೊಂಡು ಬೇಟೆಗೆ ಹೋಗುವರು. ಸಮಾನಾಸಕ್ತ ಸಮುದಾಯದವರೆಲ್ಲ ತಮ್ಮಲ್ಲಿ ಇರುವ ಹತಾರಗಳೊಂದಿಗೆ ಕಾಡಿಗೆಹೋಗಿ ಮೊಲ, ಚಿಗರಿ, ಅಡವಿಕೋಳಿ, ಮುಂತಾದಪ್ರಾಣಿಗಳನ್ನು ಬೇಟೆಯಾಡುವರು. ಹಿಂತಿರುಗಿ ಬರುವಾಗ ಬೇಟೆಯಾಡಿದ ಪ್ರಾಣಿಗಳನ್ನು ಬೇಟೆಯ ಕೋಲಿಗೆ ನೇತು ಹಾಕಿಕೊಂಡು ಬರುತ್ತಾರೆ.ಬೇಟೆಯಿಂದ ಬಂದ ಮಾಂಸವನ್ನು ಬೇಟೆಗಾರರೆಲ್ಲರೂ ಸಮನಾಗಿ ಪಾಲು ಹಾಕಿ ಹಂಚಿಕೊಳ್ಳುವರು. ಬೇಟೆಗೆ ಹೋಗುವಾಗ ಶಾಸ್ತ್ರ ಕೇಳಿಸಿ ಸೀಮೋಲ್ಲಂಘನೆಯನ್ನು ಶಾಸ್ತ್ರದ ಪ್ರಕಾರವೇ ಮಾಡುತ್ತಾರೆ. ಅಂದರೆ ಬೇಟೆಗೆ ಹೋಗುವಾಗ ಯಾವ ದಿಕ್ಕಿನ ಅಗಸೆಯ ಬಾಗಿಲಮೂಲಕ ಹೊರಗೆ ಹೋಗಿ ಹಿಂತಿರುಗಿ ಬರುವಾಗ ಯಾವ ದಿಕ್ಕಿನ ಅಗಸೆಯ ಮೂಲಕ ಊರೊಳಗೆ ಪ್ರವೇಶಿಸಬೇಕೆಂದು ಶಾಸ್ತ್ರ ಕೇಳಿಸಿ ಅದರ ಪ್ರಕಾರವೇ ನಡೆಯುವರು. ಅದೇ ದಿವಸ ಸಾಯಂಕಾಲ ಆಸಕ್ತ ಸಮುದಾಯದವರು ಹಿರಿಯರೂ ಸೇರಿದಂತೆ, ಊರ ಹೊರಗಿನ ಬಯಲಿನಲ್ಲಿ ಸೇರುತ್ತಾರೆ. ಅಲ್ಲಿ ಎಲ್ಲರೂ ವಯೋ ಮಾನಕ್ಕೆ ತಕ್ಕಂತೆ ಅನೇಕ ಗುಂಪುಗಳಾಗಿ ಪಣ ಚೆಂಡು ಇನ್ನೂ ಮುಂತಾದ ಆಟಗಳನ್ನು ಆಡುವರು. ಸಾಯಂಕಾಲ ಮನೆಗೆ ಹಿಂತಿರುಗಿದಾಗ ಮನೆಯಲ್ಲಿ ಹುಣಸೆ ಹಣ್ಣು

ಮತ್ತು ಈರುಳ್ಳಿಯಿಂದ ತಯಾರಿಸಿದ ಪಾನಕವನ್ನು ಕುಡಿಯಲು ಕೊಡುವರು. ಆದರೆ ಈ ಪದ್ಧತಿಯು ಬಳ್ಳಾರಿ ಜಿಲ್ಲೆಯಲ್ಲಿ ಕಂಡು ಬರುವುದಿಲ್ಲ.

3.5.6 ಮಿರುಗನ ಹಬ್ಬ:

ಕೆಲವು ಪ್ರದೇಶಗಳಲ್ಲಿ ಮೇದರು ಪ್ರತಿ ವರ್ಷ ಜೂನ್ 7ರಂದು, ಅಂದರೆ ಮೃಗಶಿರ ನಕ್ಷತ್ರ ಪ್ರವೇಶದ ದಿನದಂದು, ವಿಶೇಷ ಹಬ್ಬವನ್ನು ಆಚರಿಸುತ್ತಾರೆ. ಈ ದಿನ ಮೇದರು ಕನಿಷ್ಠಪಕ್ಷ ಒಂದು ಕೋಳಿಯನ್ನಾದರೂ ಬಲಿ ಕೊಟ್ಟು ದೇವರಿಗೆ ಕೋಳಿಯ ಮಾಂಸದ ಎಡೆ ಮಾಡುವರು. ಮಾಂಸವನ್ನು ತಿನ್ನದವರು ಈ ದಿವಸ ಇಂಗು ಮತ್ತು ಬೆಲ್ಲವನ್ನಾದರೂ ತಿನ್ನು ವ ಪದ್ಧತಿ ಇದೆ. ಬಹುತೇಕವಾಗಿ ಈ ಸಂಪ್ರದಾಯ ಮೂಡಿ ಬಂದಿರಲು ಕಾರಣವೆಂದರೆ, ಮೃಗಶಿರ ನಕ್ಷತ್ರ ಪ್ರವೇಶದ ದಿವಸದಿಂದ ಋತುಮಾನಗಳ ಬದಲಾವಣೆಯಿಂದ ಪ್ರಕೃತಿಯ ಮೇಲೆ ಆಗಬಹುದಾದ ಬದಲಾವಣೆಗೆ ಹೊಂದಿಕೊಳ್ಳಲು ಇದು ಪೂರ್ವ ಸಿದ್ಧತೆ ಇರಬೇಕು ಎನಿಸುತ್ತದೆ. ಈ ರೀತಿಯ ಆಚರಣೆಗಳು ಗುಲ್ಬರ್ಗ ಜಿಲ್ಲೆಯಲ್ಲಿ ಕಂಡುಬರುತ್ತದೆ. ಈ ಹಬ್ಬಗಳಲ್ಲದೇ ಮೇದರು, ಸಾರ್ವಜನಿಕ ಹಬ್ಬಗಳಾದ ಪಂಚಮಿ, ಕಾರಹುಣ್ಣಿಮೆ, ಭಾರತದ ಹುಣ್ಣಿಮೆ, ಓಳಿಹಬ್ಬ, ಮತ್ತು ಶಿವರಾತ್ರಿಯ ಹಬ್ಬಗಳನ್ನು ಆಚರಿಸುತ್ತಾರೆ. ಆಚರಣೆಯ ಪದ್ಧತಿಯಲ್ಲಿ ಪ್ರಾದೇಶಿಕ ಪ್ರಭಾವ ಕಂಡು ಬರುತ್ತದೆ.

3.5.7 ಹಗರಿಬೊಮ್ಮನಹಳ್ಳಿಯ ಮಲೆಮ್ಮನ ವಿಶೇಷ ಹಬ್ಬ:

ಹಗರಿಬೊಮ್ಮನಹಳ್ಳಿಯಲ್ಲಿ ಮೇದರು ತಮ್ಮ ಕುಲದೇವತೆಯಾದ ಮಲೆಮ್ಮ ದೇವಿಯ ವಿಶೇಷ ಹಬ್ಬವನ್ನು ಆಚರಿಸುವರು. ಈ ಕಾರಣದಿಂದ ಈ ಹಬ್ಬವನ್ನು ನನ್ನ ಕ್ಷೇತ್ರ ಕಾರ್ಯದಲ್ಲಿ ಖುದ್ದಾಗಿ ವೀಕ್ಷಿಸಿ ಇಲ್ಲಿ ಹೇಳುತ್ತಿದ್ದೇನೆ.

ಮೇದರು ಮಲೆಮ್ಮ ದೇವಿಯ ಹಬ್ಬವನ್ನು ಅವರ ಓಣಿಯಲ್ಲಿ ಮಲೆಮ್ಮನ ದೇವಸ್ಥಾನ ಇರುವಾಗ ಆಚರಿಸುವ ವಿಧಾನವನ್ನು ಪ್ರತ್ಯೇಕವಾಗಿ ಹೇಳಲಾಗುತ್ತದೆ. ಆದರೆ ಹಗರಿಬೊಮ್ಮನ ಹಳ್ಳಿಯಲ್ಲಿ ಮಲೆಮ್ಮ ದೇವಿಯ ದೇವಸ್ಥಾನ ಇಲ್ಲ. ಆದರೂ ಇವರು ತಮ್ಮ ಕುಲದೇವಿಯ ಹಬ್ಬವನ್ನು ಆಚರಿಸುವರು. ಇವರು ತಮ್ಮ ಕುಲದೇವಿಯ ಹಬ್ಬವನ್ನು ನವಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳೊಳಗೆ ಆಚರಿಸುವರು. ಹಬ್ಬ ಹದಿನೈದು ದಿವಸ ಇರುವಾಗಲೇ. ಜಾತಿಯ ಯಜಮಾನನ ಸಮ್ಮುಖದಲ್ಲಿ ಜಾತಿಯವರೆಲ್ಲಾ ಸೇರುತ್ತಾರೆ. ಹಬ್ಬದ ಅಂದಾಜು ಆಯ-ವ್ಯಯ ಪಟ್ಟಿಯನ್ನು ತಯಾರಿಸುವರು. ಜಾತ್ರೆಗೆ ಬೇಕಾಗುವ ಖರ್ಚು ಭರಿಸಲು ಮನೆಗೆ ಇಂತಿಷ್ಟು ಎಂದು ವಂತಿಗೆಯನ್ನು ನಿರ್ಧರಿಸುವರು. ಈ ಜಾತ್ರೆಯನ್ನು ಮೂರು ದಿನಗಳ ಕಾಲ ಅಂದರೆ, ಮಂಗಳವಾರ, ಬುಧವಾರ ಮತ್ತು ಗುರುವಾರ ಆಚರಿಸುತ್ತಾರೆ. ಹಬ್ಬದ ತಯಾರಿಯನ್ನು ಭಾನುವಾರದಿಂದಲೇ ಮನೆಗೊಬ್ಬರಂತೆ ದೇವರ ಚಾಕರಿ ಮಾಡಲು ಬರುತ್ತಾರೆ. ಮೇದರ ಓಣಿಯಲ್ಲಿ ತಮ್ಮದೇ ಆದ ಖಾಲಿ ಜಾಗವನ್ನು ಸ್ವಚ್ಛಗೊಳಿಸುತ್ತಾರೆ. ಮೊದಲು ತಾತ್ಕಾಲಿಕವಾಗಿ ದೇವಿಯ ದೇವಸ್ಥಾನ, ಮಂಟಪ, ಮತ್ತು ದೇವರನ್ನು ಸಹ ಇವರು ನಿರ್ಮಿಸುವರು. ಪ್ರತಿಯೊಂದು ಡಿಪೋದಿಂದ ಇಂತಿಷ್ಟು ಎಂದು ಬಿದಿರು

ಬೊಂಬುಗಳನ್ನು ತರುವರು. ದೇವಿ ಮಂಟಪದ ಹೊರ ವಲಯದ ವಿಸ್ತೀರ್ಣವನ್ನು ಚೌಕಾಕಾರವಾಗಿ ಗುರುತಿಸಿ ಭೂಮಿ ಪೂಜೆಯನ್ನು ಮಾಡಿ ಪೂರ್ವಕ್ಕೆ ಅಭಿಮುಖವಾಗುವಂತೆ ಬೊಂಬುಗಳನ್ನು ಹುಗಿದು ತಾತ್ಕಾಲಿಕ ದೇವಸ್ಥಾನವನ್ನು ನಿರ್ಮಿಸುತ್ತಾರೆ. ಸುತ್ತಲೂ ಚಾಪೆಯನ್ನು ಕಟ್ಟಿ ಮರೆಗೋಡೆಯನ್ನು ನಿರ್ಮಿಸುವರು. ಇದರ ಮಧ್ಯದಲ್ಲಿ ಎರಡು ಚಿಕ್ಕ ಚಿಕ್ಕ ಚೌಕಾಕಾರದ ಬಿದಿರಿನ ಮಂಟಪಗಳನ್ನು ಜಂಟಿಯಾಗಿ ಕಟ್ಟುವರು. ಇದರಲ್ಲಿ ಒಂದು ಮಲೆಮ್ಮದೇವಿಗೆ ಮತ್ತೊಂದು ಚೌಡಮ್ಮದೇವಿಗೆ. ಮಂಟಪ ಕಟ್ಟುವಾಗ ಮೊದಲು ನಾಲ್ಕು ಮೂಲೆಗೂ ನಾಲ್ಕು ಶುದ್ಧವಾದ ಬೊಂಬುಗಳನ್ನು ಹುಗಿದು ನಯವಾಗಿ ಸೀಳಿದ ಬಿದಿರಿನ ಕಡ್ಡಿಗಳಿಂದ ಎರಡೂ ಮಂಟಪಗಳ ಮೇಲೆ ಗೋಪುರವನ್ನು ಕಟ್ಟುವರು. ಸುತ್ತಲೂ ನಾಲ್ಕು ದಿಕ್ಕಿಗೆ ನಯವಾಗಿ ಹೆಣೆದ ಚಾಪೆಯನ್ನು ಕಟ್ಟಿ ಅದರ ಮೇಲೆ ಕೆಂಪು, ಹಸಿರು ಮತ್ತು ಬೆಳ್ಳಿ, ಬಂಗಾರದ ವರ್ಣದ ಮಿಂಚಿನ ಬಣ್ಣದ ಕಾಗದವನ್ನು ಹಚ್ಚುತ್ತಾರೆ.ಕತ್ತಿ ಪೂಜೆ ಮಾಡಲು ಅದಕ್ಕೆ ಹೊಂದಿ ಕೊಂಡಂತೆ ಹೊರವಲಯದ ಮಂಟಪದ ಗೋಡೆಗೆ ಈ ಎರಡೂ ಮಂಟಪದ ಗೋಡೆಯಿಂದ ಅಡ್ಡ ಬಿದಿರಿನ ಗೆಲ್ಲುಗಳನ್ನು ಕಟ್ಟುತ್ತಾರೆ. ಒಳಮಂಟಪದ ಪ್ರತಿಯೊಂದು ಕಂಬಕ್ಕೂ ಬಿದಿರಿನ ಹಸಿರೆಂಬೆಗಳನ್ನು ಕಟ್ಟಿ ಕೃತಕವಾದ ಬಿದಿರಿನ ಮೆಳೆಯನ್ನು ಇಲ್ಲಿ ನಿರ್ಮಿಸುತ್ತಾರೆ. ನೋಡುವವರಿಗೆ ಬಿದಿರಿನ ಮೆಳೆಯ ಮಧ್ಯದಲ್ಲಿಯೇ ಈ ಮಂಟಪ ಇರುಂತೆ ಕಾಣುತ್ತದೆ. ಇಡೀ ಮಂಟಪವನ್ನು ಹೂವು ಮತ್ತು ತಳಿರು ತೋರಣಗಳಿಂದ ಅಲಂಕರಿಸುವರು. ಮಂಟಪದ ಗರ್ಭಗುಡಿ ಮುಂದೆ ಬೊಂಬು ಮತ್ತು ಚಾಪೆಗಳನ್ನು ಉಪಯೋಗಿಸಿ ವಿಶಾಲವಾದ ಹಂದರವನ್ನು ಹಾಕುತ್ತಾರೆ. ಒಂದು ಕಡೆ ಅಡಿಗೆಮಾಡಲು ಪ್ರತ್ಯೇಕ ವ್ಯವಸ್ಥೆಮಾಡಿ, ಸುತ್ತಲೂ ತಟ್ಟಿಯನ್ನು ಕಟ್ಟುತ್ತಾರೆ. ಸಗಣಿಯ ರಾಡಿಯಿಂದ ಗರ್ಭಗುಡಿಯ ಒಳಗೆ ಮತ್ತು ಮುಂದುಗಡೆ ಬಳಿದು ಮಡಿಮಾಡುವರು. ಒಂದು ಕಡೆ ಸಭೆ ನಡೆಸಲು ವೇದಿಕೆ ನಿರ್ಮಾಣ ಮಾಡಿರುವರು.ಈಗ ಮಲೆಮ್ಮನ ಹಬ್ಬವನ್ನು ಮಾಡಲು ತಾತ್ಕಾಲಿಕ ದೇವಸ್ಥಾನ ನಿರ್ಮಾಣವಾಯಿತು. ಈ ಕೆಲಸವನ್ನು ಜಾತಿಯ ಬಾಂಧವರೆಲ್ಲಾ ಮನೆಗೊಬ್ಬರಂತೆ ಬಂದು ಅಮ್ಮನ ಸೇವೆಯನ್ನು ಹಂಚಿಕೊಂಡು ಕೆಲಸ ಮಾಡುವುದು ವಾಡಿಕೆ.

ಹಬ್ಬ ಮಂಗಳವಾರದಿಂದ ಪ್ರಾರಂಭವಾಗುತ್ತದೆ. ಮಂಗಳವಾರ ಸಾಯಂಕಾಲ ಮಲೆಮ್ಮನ ಪೂಜೆಯ ತಯಾರಿಯನ್ನು ಈ ಸಮುದಾಯದ ಹಿರಿಯ ಮತ್ತು ಅನುಭವಸ್ಥ ಮಹಿಳೆಯಾದ ಮಮ್ಮಾದೇವಿ (ಇವರು ಗಂಡನುಳ್ಳ ಜೋಗಮ್ಮ) ಸಮುದಾಯದ ಮಹಿಳೆಯರೊಂದಿಗೆ ಮಾಡುವರು. ಮಲೆಮ್ಮನ ಪೂಜೆಯನ್ನು ಗೌಡ್ರ ಬೆಡಗಿನ ದಂಪತಿಗಳು ವಹಿಸಿಕೊಳ್ಳುತ್ತಾರೆ. ಮೊದಲು ಎರಡು ತುಂಬಿದ ಕೊಡಗಳನ್ನು ತಂದು ವೀಳ್ಯೆದೆಲೆ ಮತ್ತು ತೆಂಗಿನಕಾಯಿಯನ್ನು ಇಟ್ಟು ಕುಂಬ ತಯಾರಿಸುತ್ತಾರೆ. ನೆಲಕ್ಕೆ ಸ್ವಲ್ಪ ಅಕ್ಕಿಕಾಳು ಹಾಕಿ ಎರಡೂ ಗರ್ಭ ಗುಡಿಯಲ್ಲಿ ಒಂದೊಂದು ಕುಂಬವನ್ನು ಇರಿಸುತ್ತಾರೆ. ಈ ಕುಂಬಕ್ಕೆ ಬಟ್ಟೆ, ದಂಡಿ, ಮತ್ತು ಮೂಗುತಿ, ತಾಳಿಯಂತಹ ಮಂಗಲ ದ್ರವ್ಯಗಳನ್ನು ಹಾಕುವರು.ಇಲ್ಲಿ ಇವರಿಗೆ ಈ ಎರಡು ಕುಂಬಗಳೇ ಮಲೆಮ್ಮ ಮತ್ತು ಚೌಡಮ್ಮರು.(ಒಂದನೇ ಛಾಯಾಚಿತ್ರವನ್ನು ನೋಡಿರಿ.) ಪಕ್ಕದಲ್ಲಿ ಅಡ್ಡಲಾಗಿ ಕಟ್ಟಿದ ಬಿದಿರಿನ ಬೆಲಗುಗಳಿಗೆ ಜಾತಿಯ ಪ್ರತಿಯೊಬ್ಬ

ಮನೆಯವರು ತಂದಿರಿಸಿದ ಕತ್ತಿ ಮತ್ತು ಒಂಬುಗಳನ್ನು ಇರಿಸುತ್ತಾರೆ. ಸಮುದಾಯದ ಮಹಿಳೆಯರೆಲ್ಲರೂ ಪೂಜೆಯ ಸಮಯಕ್ಕೆ ಎಡೆ, ಹಣ್ಣು, ಕಾಯಿ, ಪೂಜೆಯ ಸಾಮನುಗಳೊಂದಿಗೆ ಬರುವರು. ಮಹಿಳೆಯರೆಲ್ಲ ಎಲೆ ಕಂಕಣವನ್ನು ತಯಾರಿಸಿ ಎಲ್ಲರೂ ಕಂಕಣಕಟ್ಟಿಕೊಂಡು ಅಂಗನೂಲು ಹಾಕಿಕೊಳ್ಳುತ್ತಾರೆ. ಸಮುದಾಯದ ಗಂಡಸರು ವಿಭೂತಿ ಕುಂಕುಮನ್ನು ಹಚ್ಚಿಕೊಂಡು ಕಂಕಣ ಕಟ್ಟಿಕೊಳ್ಳುತ್ತಾರೆ. ಅಷ್ಟರಲ್ಲಿ ಗೌಡರ ಬೆಡಗಿನವರ ಮನೆಯಿಂದ ಮಲೆಮ್ಮನಿಗೆ ಮೊಸರನ್ನದ ಉಂಡೆ ಮತ್ತು ತುಂಬಿದ ಹೋಳಿಗೆ ಎಡೆಯನ್ನು ತರುವರು.ಗೌಡ್ರ ಬೆಡಗಿನ ಮೇದನು ದೇವರ ಮುಂದೆ ಎಡೆ ಮತ್ತು ಉಡಿ ಸಾಮಗ್ರಿಗಳನ್ನು ಇರಿಸಿ ಮಲೆಮ್ಮ ಮತ್ತು ಚೌಡಮಮ್ಮರ ಪೂಜೆಯನ್ನು ಮಾಡಿ ಸಮುದಾಯದವರು ತಂದಿರಿಸಿದ ಕತ್ತಿಗಳನ್ನು ಪೂಜಿಸಿ ಕುಂಬಳಕಾಯಿ ಬಲಿ ಕೊಡುವನು. ನೆರೆದವರೆಲ್ಲ ಮಲೆಮ್ಮ ಮತ್ತು ಕೇತೇಶ್ವರರ ಹೆಸರಿನಲ್ಲಿ ಉಘೋ ಹಾಕಿ, ಜೈಜೈಕಾರ ಹಾಕುತ್ತಾರೆ. ಜಾತಿಯವರು ತಂದಿರಿಸಿದ ತೆಂಗಿನ ಕಾಯಿಯನ್ನು ಪೂಜಾರಿಯು ಒಡೆದು ಎಡೆಮಾಡುವನು. (ಪೂಜೆ ಮುಗಿಸಿ ಮಲೆಮ್ಮ ಮತ್ತು ಚೌಡಮ್ಮ ದೇವಿಯರ ಮಂಟಪದ ಮುಂದೆ ನೆರೆದಿರುವ ಮೇದರ ಮೂರನೇ ಛಾಯಾಚಿತ್ರವನ್ನು ಗಮನಿಸಿರಿ) ನಂತರ ಎಲ್ಲರೂ ದೇವರಿಗೆ ಲೋಬಾನ ಹಾಕಿ, ಕೈಮುಗಿದು ತಮ್ಮ ಎಡೆಯ ತಟ್ಟೆಯನ್ನು ದೇವರಿಗೆ ನೈವೇದ್ಯ ಮಾಡಿ ಮನೆಗೆ ತೆಗದುಕೊಂಡು ಹೋಗುವರು. ಮನೆಯಲ್ಲಿ ಈ ದಿವಸ ಸಿಹಿ ಅಡಿಗೆ ಮಾಡಿರುತ್ತಾರೆ. ಈ ನಡುವೆ ಮಮ್ಮಾದೇವಿಯವರಿಗೆ ಮಲೆಮ್ಮ ಮೈಮೇಲೆ ಬರುತ್ತಾಳೆ. ಜಾತಿಯ ಹಿರಿಯರು ದೇವರನ್ನು ಹೇಳಿಕೆ ಕೇಳಿ, ಅಮ್ಮನ ಹೇಳಿಕೆಯನ್ನು ಪಾಲಿಸುತ್ತಾರೆ. ಇಡೀರಾತ್ರಿ ಜಾತಿಯವರೆಲ್ಲಾ ಭಜನೆ ಮುಂತಾದವುಗಳನ್ನು ಮಾಡಿ ಜಾಗರಣೆ ಮಾಡುವರು. ಬೆಳಗಿನ ಜಾವ ಸುಮಾರು ಮೂರು ನಾಲ್ಕು ಗಂಟೆಗೆ ದೇವಿಯ ಮುಂದೆ ಮುಲ್ಲಾನನ್ನು ಕರೆಯಿಸಿ ಚೂರಿಹಾಕಿಸುವುದರ ಮೂಲಕ ಜೋಡುಕುರಿ ಇಲ್ಲವೇ ಒಂದು ಕುರಿ ಮತ್ತು ಒಂದು ಕೋಳಿಯನ್ನು ಬಲಿ ಕೊಡುವರು. ಅದರ ರಕ್ತವನ್ನು ದೇವಿಯ ಮುಂದೆ ಕುಣಿತೆಗೆದು ಮುಚ್ಚುವರು. ಮಾರನೆಯ ದಿವಸ ದೇವಿಯಗೆ ಮೊದಲು ಮಾಂಸದ ಎಡೆ ಕೊಟ್ಟು ಮಂಗಳಾರತಿ ಮಾಡುತ್ತಾರೆ.

ವೇದಿಕೆಗೆ ಮೊದಲು ಸಮುದಾಯದ ಯಜಮಾನನನ್ನು ಕರೆದು ನಂತರ ಬಂದಂತಹ ಪರದೈವದವರನ್ನು ಮತ್ತು ಅತಿಥಿಗಳನ್ನು ಕರೆದು ಮಾಲಾರ್ಪಣೆ ಮಾಡಿಗೌರವಿಸುವರು. ಪರ ಊರಿನ ಮೇದ ಸಮುದಾಯದವರು ಮತ್ತು ಅತಿಥಿಗಳು ಮಾತನಾಡಿದ ನಂತರ ಕೇತಯ್ಯನ ವಚನಗಳನ್ನು ಕಲಾವಿದರಿಂದ ಹಾಡಿಸಿ ಸಭೆಯನ್ನು ಮುಗಿಸುತ್ತಾರೆ. ಸಮುದಾಯದವರೆಲ್ಲ ಬಂದವರೊಂದಿಗೆ ಸಾಮೂಹಿಕವಾಗಿ ಮಾಂಸದ ಊಟ ಮಾಡುತ್ತಾರೆ. ಮಾರನೆಯ ದಿವಸ ದೇವಿಯನ್ನು ಇಳಿಸುವರು. ಮತ್ತೊಮ್ಮೆ ಪೂಜೆ ಸಲ್ಲಿಸಿ, ದೇವಿಗೆ ಇರಿಸಿದ ಕಾಯಿ ಮತ್ತು ಪೂಜೆಯಲ್ಲಿ ಅಲಂಕಾರ ಮಾಡಿದ ಹೂವು ಉಡಿಸಾಮಾನು ಮುಂತಾದವುಗಳನ್ನು ತೆಗೆದುಕೊಂಡು ಮಲೆಮ್ಮನನ್ನು ಗಂಗೆಗೆ ಕಳಿಸಿಬರಲು ಹೋಗುವರು. ನದಿಗೆ ಬಂದು ಅಲ್ಲಿ ಮಳಲು ಗುಂಪಿಯನ್ನು ಮಾಡಿ ಎಲ್ಲಾ ಪೂಜಾ ವಸ್ತುಗಳನ್ನು ಇರಿಸಿ ಪೂಜೆ ಮಾಡುತ್ತಾರೆ. ಎಡೆಮಾಡಿ ಕೊನೆಗೆ ಮಲೆಮ್ಮ ಮತ್ತು ಚೌಡಮ್ಮನ ಕುಂಬಗಳಿಗೆ ಇರಿಸಿದ ಕಾಯಿಯನ್ನು ವೀಳ್ಯದ ಮೇಲಿರಿಸಿ ಗಂಗೆಗೆ ತೇಲಿ ಬಿಟ್ಟು ಉಘೋ ಹಾಕುತ್ತಾರೆ. ಎಲ್ಲರೂ ಕೈಮುಗಿದು ಮನೆಗೆ ಮರಳುತ್ತಾರೆ. ಸಾಯಂಕಾಲ

ತಾತ್ಕಾಲಿಕವಾಗಿ ನಿರ್ಮಿಸಿದ ದೇವಿಯ ಗುಡಿಯನ್ನು ಮತ್ತೆ ಕಿತ್ತು ತೆಗೆಯುತ್ತಾರೆ. ಮನೆಗೊಂದೊಂದು ಬಿದಿರನ್ನು ಅಮ್ಮನಪ್ರಸಾದವೆಂದು ಕೊಂಡೊಯ್ಯುವರು.ಇಲ್ಲಿ ಮೇದರು ತಮ್ಮ ಕುಲದೇವತೆಯ ದೇವಸ್ಥಾನವಿಲ್ಲದ ಸಂದರ್ಭದಲ್ಲಿ ಸಹ ಮಲೆಮ್ಮನ ಹಬ್ಬವನ್ನು ಆಚರಿಸುವುದು ವಿಶಿಷ್ಟ ಮತ್ತು ಅನನ್ಯವಾಗಿದೆ. 3.5.8 ಮಲೆಮ್ಮನ ಹಬ್ಬ :

ಮಲೆ ಎಂದರೆ ಬೆಟ್ಟ ಗುಡ್ಡ ಎಂದು ನಿಘಂಟು ರಚನೆ ಕಾರರು ಅರ್ಥೈಸುತ್ತಾರೆ. ಇನ್ನೊಂದು ಅರ್ಥದಲ್ಲಿ ಮಲೆ ಎಂದರೆ ಒತ್ತಾಗಿ ಬೆಳೆದ ಕಾಡು ಬೆಟ್ಟಗಳಶ್ರೇಣಿ ಎಂದು ಹೇಳಬಹುದು. ಮಲೆಮ್ಮ ಎಂದರೆ ವನದೇವತೆ. ಅಥವಾ ಕಾಡುದೇವತೆ ಎಂದು ಅರ್ಥವಾಗುವುದು. ಮೇದರ ಕುಲದೇವತೆ ಮಲೆಮ್ಮನನ್ನು ಪ್ರದೇಶಾನುಸಾರ ಮಲಿಯಮ್ಮ, ಮಲ್ಲೆಮ್ಮ ಎಂದು ಸಹ ಕರೆಯುತ್ತಾರೆ. ಕಾಡಿನಲ್ಲಿ ಮಾನವನ ಯಾವುದೇ ಆರ್ಥಿಕ ಚಟುವಟಿಕೆಗಳಿಲ್ಲದೇ ಸಹಜವಾಗಿ ಉತ್ಪನ್ನವಾಗುವ ಬಿದಿರು ಮೇದರ ಕಸುಬಿನ ಕಚ್ಚಾವಸ್ತು. ಇವರ ಬದುಕಿಗೆ ದಾರಿದೀವಿಗೆಯಾದ ಬಿದಿರು ಬೆಳೆಯುವ ಕಾಡನ್ನೇ ಇವರು ತಮ್ಮ ಕುಲದೇವತೆ ಎಂದು ಪೂಜಿಸುತ್ತಾ ಬಂದಿರಬೇಕು. ಮಲೆಮ್ಮನನ್ನು ಕುರಿತಾದ ಯಾವುದೇ ಸೃಷ್ಟಿಯ ಪುರಾಣ ಮತ್ತು ಕಥೆಗಳು ಕಂಡುಬರುವುದಿಲ್ಲ. ಮಲೆಮ್ಮ ದೇವಿಮೂರ್ತಿಯ ರೂಪ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ಕಂಡುಬರುತ್ತದೆ. ಕೆಲವು ಕಡೆಗಳಲ್ಲಿ ಮಲೆಮ್ಮ ಬೆಣಚು ಗುಂಡುಕಲ್ಲುಗಳ ರೂಪದಲ್ಲಿದ್ದರೆ ಮತ್ತೆ ಕೆಲವು ಕಡೆಗಳಲ್ಲಿ ಕಲಶ ರೂಪದಲ್ಲಿದ್ದಾಳೆ. ಹಲವು ಕಡೆ ಶಿಲಾರೂಪದ ದೇವಿಯಾಗಿದ್ದಾಳೆ. (ಅಲಂಕಾರಗೊಂಡ ಶಿಲಾಮೂರ್ತಿಮಲೆಮ್ಮನನ್ನು ಮುಖಪುಟದ ಛಾಯಚಿತ್ರದಲ್ಲಿ ಗಮನಿಸಿರಿ) ಇನ್ನೂ ಕೆಲವು ಕಡೆಗಳಲ್ಲಿ ಕಟ್ಟೆಗೆಯ ಗ್ರಾಮದೇವತೆಯಂತೆ ರೂಪತಾಳಿ ನಿಂತಿದ್ದಾಳೆ. ಮಲೆಮ್ಮನ ದೇವಸ್ಥಾನ ಮೇದರ ಓಣಿಗಳಲ್ಲಿಯೇ ಇರುವುದು ಕಂಡುಬರುತ್ತದೆ. ಮತ್ತೆ ಕೆಲವು ಕಡೆ ಬೇವು, ಹಾಲದ ಮರದ ಕೆಳಗೆ ಕಟ್ಟೆಯಮೇಲೆ ಮಲೆಮ್ಮದೇವಿಯನ್ನು ಸ್ಥಾಪಿಸಿರುವುದು ಕಂಡು ಬರುತ್ತದೆ.

ಮೇದರು ಈ ಮಲೆಯಮ್ಮನ ಹಬ್ಬ ಅಥವಾ ಜಾತ್ರೆಯನ್ನು ಪ್ರಾದೇಶಿಕವಾಗಿ ಅನುಕೂಲಕ್ಕೆ ತಕ್ಕಂತೆ ಆಶ್ವೀಜ ಬಹುಳ ದಿಂದ ಪಾಲ್ಗುಣ ಶುದ್ಧದ ವರೆಗೆ ಆಚರಿಸುತ್ತಾರೆ. ಮಲೆಮ್ಮ ನ ಹಬ್ಬವನ್ನು ಆಚರಿಸುವ ಪದ್ಧತಿಯು ಒಂದೇ ರೀತಿಯಾಗಿ ಕಂಡು ಬಂದರೂ ಸಹ ಪ್ರದೇಶದಿಂದ ಪ್ರದೇಶಕ್ಕೆ ಸ್ವಲ್ಪ ಭಿನ್ನವಾಗಿರುತ್ತದೆ. ಇಂತಹ ಕೆಲವು ಪ್ರದೇಶಗಳ ಮಲೆಮ್ಮನ ಹಬ್ಬವನ್ನು ಇಲ್ಲಿ ಗಮನಿಸಲಾಗಿದೆ. ಮೇದರು ತಾವು ನೆಲಸಿರುವ ಎಲ್ಲಾ ಗ್ರಾಮಗಳಲ್ಲಿ ಮಲೆಮ್ಮನ ಹಬ್ಬವನ್ನು ಆಚರಿಸುವುದಿಲ್ಲ. ಕೆಲವು ಸುತ್ತ ಮುತ್ತಲಿನ ಗ್ರಾಮದವರು ಸೇರಿ ಒಂದು ಕೇಂದ್ರ ಗ್ರಾಮದಲ್ಲಿ ದೇವಿಯ ಜಾತ್ರೆಯನ್ನು ಆಚರಿಸುವ ಸಂಪ್ರದಾಯ ಇವರದು. ಬಳ್ಳಾರಿ ಜಿಲ್ಲೆಯಲ್ಲಿ ಸಂಡೂರು ಗುಡ್ಡ ಬೆಟ್ಟಗಳಿಂದ ಆವೃತವಾದ ಪ್ರದೇಶ. ಸಂಡೂರಿನಲ್ಲಿ ಮೇದರ ಓಣಿಯ ಮಧ್ಯದಲ್ಲಿ ಮಲೆಮ್ಮ ದೇವಿಯ ಗುಡಿ ಇದೆ. ಗುಡಿಯುನ್ನು ಒಂದು ಬೇವಿನ ಮರಕ್ಕೆ ಹೊಂದಿಕೊಂಡಂತೆ ನಿರ್ಮಿಸಲಾಗಿದೆ. ಪಕ್ಕದಲ್ಲಿಯೇ ಅಂಕಲಮ್ಮನ ಕಟ್ಟೆಯನ್ನು ಮಾಡಿ ಅದರ ಮೇಲೆ ಅಂಕಲಮ್ಮ

(ಅಂಕಾಳಮ್ಮ)ದೇವಿಯನ್ನು ಸಹ ಸ್ಥಾಪಿಸಿ ಒಂದು ಚಿಕ್ಕ ಗುಡಿ ಕಟ್ಟಿದ್ದಾರೆ. ಪ್ರತಿ ದಿವಸ ಈ ದೇವಿಯ ಚಾಕರಿಯನ್ನು ಗೌಡ್ರ ಬೆಡಗಿನ ನಾಗಪ್ಪ ಮಾಡಿಕೊಂಡು ಬರುತ್ತಾನೆ.

ಮೇದರು ಮಲೆಮ್ಮನ ಜಾತ್ರೆಯನ್ನು ಮಾಡುವುದಕ್ಕೆ ಎಂಟು-ಹದಿನೈದು ದಿವಸಗಳ ಮುಂಚಿತವಾಗಿ ಎಲ್ಲರೂ ಅಂಕಲಮ್ಮನ ಗುಡಿಯ ಕಟ್ಟೆಯಮೇಲೆ ಸೇರುತ್ತಾರೆ. ಜಾತ್ರೆಯನ್ನು ಮಾಡುವುದರ ಕುರಿತಾಗಿ ಚರ್ಚೆಮಾಡಿ, ಈ ಕುರಿತು ಒಂದು ಅಂದಾಜು ಆಯವ್ಯಯ ಪಟ್ಟಿಯನ್ನು ಬಾಯಿಲೆಕ್ಕದಲ್ಲಿಯೇ ತಯಾರಿಸುತ್ತಾರೆ. ಖರ್ಚು ನಿಭಾಯಿಸಲು ತಲಾ ಒಂದೊಂದು ಕುಟುಂಬದವರಿಗೆ ಇಂತಿಷ್ಟು ಎಂದು ವಂತಿಗೆಯನ್ನು ನಿರ್ಧರಿಸುವರು. ಮಲೆಮ್ಮನ ಜಾತ್ರೆಯ ಪೂಜಾ ಕಾರ್ಯವನ್ನು ವಿಧಿವತ್ತಾಗಿ ನಡೆಸಿಕೊಂಡು ಹೋಗಬೇಕೆಂದು ತೀರ್ಮಾನಿಸಿ, ದೇವರ ಚಾಕರಿಯನ್ನು ಮಾಡುತ್ತಿರುವ ಗೌಡ್ರ ಬೆಡಗಿನ ಹಿರಿಯನಿಗೆ ವೀಳ್ಯ ಕೊಡುತ್ತಾರೆ. ಹಬ್ಬ ಮಂಗಳವಾರ ಮತ್ತು ಬುಧವಾರ ಎರಡು ದಿನ ನಡೆಯುತ್ತದೆ. ಹಬ್ಬದ ಸೋಮವಾರ ಮನೆಗೊಬ್ಬರಂತೆ ಬಂದು ದೇವಿಯ ಗುಡಿಯ ಮುಂದೆ ಮತ್ತು ಸುತ್ತ ಹಂದರ ಹಾಕಿ ವಿಶೇಷವಾಗಿ ಹಸಿ ಬಿದಿರಿನ ಮೆಳೆಯನ್ನು ಕಡಿದು ತಂದು ಪ್ರತಿಯೊಂದು ಕಂಬಕ್ಕೂ ಬಿದಿರಿನ ಹಸಿಯ ಹುಲ್ಲು ಮತ್ತು ಎಳೆಬಿದಿರುಗಳನ್ನು ಕಟ್ಟಿ ಸಿಂಗರಿಸುತ್ತಾರೆ. ಮಾರನೆಯ ದಿವಸ ಮಂಗಳವಾರ ಬೆಳಗಿನ ಜಾವದಲ್ಲಿ ಬ್ರಾಹ್ಮಣನನ್ನು ಕರೆಯಿಸಿ ದೈವದಪರವಾಗಿ ದೇವಿಗೆ ಅಭಿಷೇಕ ಮಾಡಿಸುವರು. ನಂತರ ಸಮುದಾಯದ ಪೂಜಾರಿ ದೇವಿಗೆ ಎಲೆಪೂಜೆ ಕಟ್ಟಿ, ಹೊಸ ಸೀರೆಉಡಿಸಿ ಬೆಳ್ಳಿಯ ಮುಖವಾಡವನ್ನಿರಿಸಿ ಅಲಂಕಾರದ ಪೂಜೆಯನ್ನುಮಾಡಿ ಮಂಗಳಾರತಿ ಮಾಡುತ್ತಾನೆ. ಈ ಪೂಜೆಯಲ್ಲಿ ಸಮುದಾಯದ ಪ್ರತಿಯೊಂದು ಕುಟುಂಬದವರು ಮಡಿ ಉಡಿಯಿಂದ ಬಂದು ಭಾಗವಹಿಸುವರು. ಈ ಸಮಯದಲ್ಲಿ ಸುತ್ತಮುತ್ತಲಿನ ಗ್ರಾಮದ ಸಮುದಾಯದವರು ಸಹ ಭಾಗವಹಿಸುವರು. ಆ ದಿನ ಮಧ್ಯಾಹ್ನ ಮನೆಯಲ್ಲಿ ಸಿಹಿ ಅಡಿಗೆ ಮಾಡಿ ದೇವರಿಗೆ ಎಡೆಕೊಡುವರು. ಹರಕೆ ಹೊತ್ತ ಕೆಲವರು ಈ ದಿನ ಕತ್ತಿಯ ಪೂಜೆ ಮುಗಿಯುವರೆಗೆ ಉಪವಾಸವಿರುವರು. ಸಾಯಂಕಾಲ ಪುನಃ ಮಲೆಮ್ಮನ ಪೂಜೆ ಮತ್ತು ಕತ್ತಿ ಪೂಜೆಯನ್ನು ಪದ್ಧತಿಯ ಪ್ರಕಾರ ಮಾಡುತ್ತಾರೆ. ಇಡೀ ರಾತ್ರಿ ಸಮುದಾಯದವರೆಲ್ಲ ದೇವಿಯ ಮುಂದೆ ಭಜನೆ ಮಾಡುತ್ತ ಜಾಗರಣೆ ಮಾಡುವರು. ಬೆಳಗ್ಗೆ ಎಲ್ಲರೂ ಸ್ನಾನಮಾಡಿ ಮಡಿಯಿಂದ ಜೋಗತಿಯರನ್ನು ಕರೆಯಿಸಿ ಜೋಗಪಂಕ್ತಿ ನೀಡಿಸುತ್ತಾರೆ. ನಂತರ ದೈವದವರಲ್ಲಾ ಸೇರಿ ಮೇಳದ ಸಮೇತ ಉಪ್ಪಾರ ಕೇರಿಯ ಮಲೆಮ್ಮನಿಗೆ ಪೂಜೆಮಾಡಿ ಉಡಿಕೊಟ್ಟು ಬಂದು, ಗ್ರಾಮದ ಎಲ್ಲಾ ದೇವತೆಗಳಿಗೆ ಉಡಿ ತುಂಬುವರು. ಮುಂಜಾನೆ ಹತ್ತು ಗಂಟೆಯ ಹೊತ್ತಿಗೆ ಮೊದಲೇ ಮೀಸಲಿರಿಸಿದ ಎರಡು ಕುರಿಗಳನ್ನು ದೇವಿಯ ಮುಂದೆ ಮುಲ್ಲಾನಿಂದ ಚೂರಿ ಹಾಕಿಸಿ ರಕ್ತವನ್ನು ದೇವಿಯ ಮುಂದೆ ಹುಗಿಯುತ್ತಾರೆ. ಬಲಿಕೊಟ್ಟ ಕುರಿಯ ಮಾಂಸವನ್ನು ಸಮುದಾಯದ ಮನೆಯವರಿಗೆ ಸಮನಾಗಿ ಹಂಚುವರು. ಆ ದಿವಸ ಮದ್ಯಪಾನದ ಜೊತೆಗೆ ಮಾಂಸದ ಊಟ ಮಾಡುವರು. ಮಾರನೆಯ ದಿವಸ ಗುರುವಾರ ದೇವರನ್ನು ಗಂಗೆಗೆ ಕಳುಹಿಸಿ ಬರುತ್ತಾರೆ. ಇಲ್ಲಿ ಇವರು ಕುಲದೇವತೆಯ ಹಬ್ಬದಂದು ಜೋಗತಿಯರಿಗೆ ಜೋಗಪಂಕ್ತಿಯನ್ನು ನೀಡಿಸುವುದು ಮತ್ತು ಗ್ರಾಮ ದೇವತೆಯರಿಗೆ ಉಡಿತುಂಬುವುದು ವಿಶೇಷವಾಗಿದೆ.

3.5.9 ಮಲೆಮ್ಮನಿಗೆ ಅಂಕುರ ಪೂಜೆ:

ಸೊಂಡೂರಿನಲ್ಲಿ ನಡೆಯುವ ಇನ್ನೊಂದು ವಿಶೇಷ ಹಬ್ಬ ಎಂದರೆ ದಸರಾ ಸಂದರ್ಭದಲ್ಲಿ ನಡೆಯುವ ಅಂಕುರ ಪೂಜೆ.(ಅಂಕುರ: ಬಿದಿರಿನ ಚಿಕ್ಕ ಬುಟ್ಟಿಗಳಲ್ಲಿ ಬೆಳೆಸಿದ ವಿವಿಧ ಧಾನ್ಯಗಳ ಮೊಳೆತ ಸಸಿಗಳು) ದಸರಾ ಹಬ್ಬಕ್ಕೆ ಎಂಟು-ಹತ್ತು ದಿವಸ ಮುಂಚಿತವಾಗಿ ಕುಲಬಾಂಧವರೆಲ್ಲ ಅಂಕಲಮ್ಮನ ಕಟ್ಟೆಯಮೇಲೆ ಸೇರಿ ಅಂಕುರ ಪೂಜೆಯನ್ನು ಮಾಡುವುದರ ಕುರಿತಾಗಿ ತೀರ್ಮಾನ ತೆಗೆದುಕೊಳುತ್ತಾರೆ. ಅದೇ ದಿವಸ ಮನೆಯಲ್ಲಿ ವಿವಿಧ ಧಾನ್ಯದ ಅಂಕುರಗಳನ್ನು ಮೊಳಕೆಗೆ ಹಾಕುವರು. ದೇವರ ಗುಡಿಗೆ ಸುಣ್ಣ-ಬಣ್ಣ ಬಳಿಸುವರು. ಅಖಂಡ ಪೂಜೆಯ ದಿವಸ ಸಮುದಾಯದ ಪೂಜಾರಿಯೇ ದೇವಿಯನ್ನು ಪೂಜೆಮಾಡಿ ಎಲೆಪೂಜೆಯನ್ನು ಕಟ್ಟುತ್ತಾನೆ. ಪ್ರತಿಯೊಂದು ಮನೆಯವರು ತಾವು ಬೆಳಸಿದ ಅಂಕುರಗಳ ಪುಟ್ಟಿಗಳನ್ನು ತಂದು ದೇವರ ಗುಡಿಯಲ್ಲಿ ಇಡುವರು. ಪೂಜಾರಿಯು ದೇವಿಗೆ ಹೊಸ ಸೀರೆ ಉಡಿಸಿ ದೇವಿಯ ಮಕರಂಬ(ಬೆಳ್ಳಿಯ ಮುಖವಾಡ)ಇರಿಸಿ ಅಂಕುರಗಳಿಂದ ಅಲಂಕರಿಸುತ್ತಾನೆ. ಸಮುದಾಯದವರೆಲ್ಲ ಬಂದ ನಂತರ ಮಂಗಳಾರತಿ ಮಾಡಿ ಪ್ರಸಾದ ವಿತರಿಸುವನು. ಎಲ್ಲರೂ ದೇವಿಗೆ ಅಂಕುರದಿಂದ ಆರತಿಮಾಡಿ ಹಣ್ಣುಕಾಯಿ ಮಾಡಿಸಿಕೊಂಡು ಹೋಗುತ್ತಾರೆ. ಮಾರನೆಯ ದಿವಸ ವಿಜಯ ದಶಮಿಯನ್ನು ಅವರವರ ಮನೆಯಲ್ಲಿ ಪದ್ಧತಿಯ ಪ್ರಕಾರ ಆಚರಿಸುತ್ತಾರೆ. ಮೂರನೆಯ ದಿವಸ ಸಮುದಾಯದ ಮಹಿಳೆಯರೆಲ್ಲ ಅಮ್ಮನಿಗೆ ಸಲ್ಲಿಸಿದ ಪೂಜೆ ಉಡಿ ಸಾಮಾನು ಹೂವು ಮುಂತಾದವುಗಳನ್ನು ಮತ್ತು ಅಂಕುರಗಳ ಪುಟ್ಟಿಯನ್ನು ಹೊತ್ತು ಕೊಂಡು ಉಧೋ ಹಾಕುತ್ತಾ ಹತ್ತಿರದ ನದಿ ಇಲ್ಲವೇ ಹಳ್ಳಕ್ಕೆ ಬರುವರು. ಅಲ್ಲಿ ಗಂಗಿಯ ಪೂಜೆಯನ್ನು ಮಾಡಿ ಎಡೆಮಾಡಿ ಜೋಡು ಕಾಯಿ ಒಡೆಯುವರು. ಎಲ್ಲರೂ ಉಡಿ ತುಂಬಿಕೊಂಡು ಗಂಗಮ್ಮನಿಗೆ ವೀಳ್ಯೆದೆಲೆಯಮೇಲೆ ದೀಪ ಹಚ್ಚಿ ನೀರಿನಲ್ಲಿ ತೇಲಿ ಬಿಡುತ್ತಾರೆ. ನಂತರ ಅಂಕುರ ಮತ್ತು ದೇವರ ಪೂಜೆಯ ವಸ್ತುಗಳನ್ನು ಗಂಗಮ್ಮನಿಗೆ ಬಿಟ್ಟು ಮನೆಗೆ ಮರಳುತ್ತಾರೆ.

ಇಂತಹ ಅಂಕುರಾರ್ಪಿತ ವಿಶೇಷವಾದ ಪೂಜೆ ಬಳ್ಳಾರಿಜಿಲ್ಲೆಯಲ್ಲಿ ಮತ್ತೆ ಬೇರೆಯ ಕಡೆ ಕಂಡು ಬರುವುದಿಲ್ಲ. ಈ ಪದ್ಧತಿಯ ಪೂಜೆಯನ್ನು ನೋಡಲಾಗಿ ಇದು ಬುಡಕಟ್ಟು ಸಮುದಾಯದ ವಿಧಿವತ್ತಾದ ಅನೇಕ ಪೂಜೆಗಳಲ್ಲಿ ವಿಶೇಷವಾದದ್ದೆಂದು ಕಂಡುಬರುತ್ತದೆ. ಇಂತಹ ಅಂಕುರಾರ್ಪಣೆಯು ಶಿಷ್ಟ ಸಮುದಾಯಗಳಲ್ಲಿ ಮಹಾಮಂಡಲ, ಚಂಡಿಯಾಗ, ಹೋಮ, ಹವನ, ಮಾಡುವಂತಹ ಸಂದರ್ಭದಲ್ಲಿ ಪುರೋಹಿತರು ದೇವರಿಗೆ ಅಂಕುರ ಅರ್ಪಣೆಯನ್ನು ಮಾಡುವುದು ಕಂಡುಬರುತ್ತದೆ. ಈ ಪದ್ಧತಿಯು ಶಿಷ್ಟ ಸಂಪ್ರದಾಯಗಳಲ್ಲಿಯೂ ಕಂಡು ಬರುವುದಾದರೆ ಇದು ಬುಡಕಟ್ಟುಸಂಸ್ಕೃತಿಯ ಪಾರಂಪರಿಕ ಮೂಲದ್ದಿರಲೇಬೇಕು.

ಈ ಊರಿನಲ್ಲಿ ಕುಲದೇವತೆಯ ಜಾತ್ರೆಗೆ ಸಂಬಂಧಿಸಿದಂತೆ ದೇವಿಯ ಅರ್ಚನೆ ಮತ್ತು ಚಾಕರಿಯನ್ನು ಮೇದ ಸಮುದಾಯದ ಗೌಡ್ರ, ಬೆಡಗಿನವರು ನಡೆಸಿಕೊಂಡು ಬಂದಿರುವುದು ಒಂದು ರೀತಿಯ ಪಾರಂಪರಿಕ ಕಟ್ಟಳೆಯಾಗಿದೆ.

ದೇವಿಯ ಜಾತ್ರೆಯಂತಹ ವಿಶೇಷ ಪೂಜಾ ಸಂದರ್ಭಗಳಲ್ಲಿ ಪೂಜಾರಿಯು ಉಪವಾಸ ಇರುತ್ತಾನೆ.ಇದು ದೇವರ ಪೂಜೆಯ ಮಾನಸಿಕ ಸಿದ್ದತೆಗೆ ಮತ್ತು ಏಕಾಗ್ರತೆಗೆ ದೈಹಿಕ ಸಿದ್ದತೆಯಾಗಿದೆ. ವಿಶೇಷ ಸಂದರ್ಭಗಳಲ್ಲಿ ಇವರು ಮತ್ತೆ ಪುರೋಹಿತರನ್ನು ಆಶ್ರಯಿಸುವುದು ಪುರೋಹಿತಶಾಹಿಯ ಹಿಡಿತದಿಂದ ಇವರು ಇನ್ನೂ ಸಂಪೂರ್ಣವಾಗಿ ಹೊರಬಾರದೇ ಇರುವುದು ಇಲ್ಲಿ ಗೋಚರವಾಗುತ್ತದೆ.

3.5.10 ಹೊಸಪೇಟೆಯ ಸಣ್ಣಕ್ಕಿ ವೀರಭದ್ರೇಶ್ವರ ಜಾತ್ರೆ:

ಹೊಸಪೇಟೆಯ ಪಟ್ಟಣದ ಮಧ್ಯದಲ್ಲಿ ಸಣ್ಣಕ್ಕಿ ವೀರಭದ್ರೇಶ್ವರ ದೇವಸ್ಥಾನವಿದೆ. ಈ ದೇವರಿಗೆ ಹೆಚ್ಚಾಗಿ ವೀರಶೈವ ಸಂಪ್ರದಾಯದವರು ನಡೆದುಕೊಳ್ಳುತ್ತಾರೆ. ಇದರ ಜೊತೆಗೆ ಇತರೆ ಸಮುದಾಯದವರು ಕೂಡ ನಡೆದುಕೊಳ್ಳುವುದು ಕಂಡು ಬರುತ್ತದೆ. ಸಣ್ಣಕ್ಕಿ ವೀರಭದ್ರಸ್ವಾಮಿಯ ಜಾತ್ರೆ ಪ್ರತಿವರ್ಷ ಚೈತ್ರಶುದ್ದದಲ್ಲಿ ನಡೆಯುತ್ತದೆ. ಈ ಜಾತ್ರೆ ಮೂರುದಿವಸಗಳ ಕಾಲ ನಡೆಯುವುದು. ಚೈತ್ರ ಶುದ್ದ ಪಾಡ್ಯದಂದು ವೀರಭದ್ರನ ಅಗ್ನಿಗೊಂಡ, ಮತ್ತು ಮಾರನೆಯ ದಿನ ರಥೋತ್ಸವ ಜರುಗುತ್ತದೆ. ಈ ಜಾತ್ರೆಯ ಸಂದರ್ಭದಲ್ಲಿ ವೀರಭದ್ರೇಶ್ವರನಿಗೆ ಹೊಸಪೇಟೆಯ ಮೇದ ಸಮುದಾಯದವರು ವಿಶೇಷ ಸೇವೆಯನ್ನು ಸಲ್ಲಿಸುತ್ತಾ ಬಂದಿರುವುದನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಚೈತ್ರ ಶುದ್ದ ಪಾಡ್ಯ ಒಂಬತ್ತು ದಿವಸ ಮುಂಚಿತ ವಾಗಿಯೇ ದೇವರ ರಥವನ್ನು ಹೊರಗೆ ತರುವರು. ಈ ರಥನ್ನು ರಥದ ಮನೆಯಿಂದ ಮೇದ ಸಮುದಾಯದ ಯುವಕರೇ ಹೊರಕ್ಕೆ ಎಳೆದು ತಂದು ನಿಲ್ಲಿಸುತ್ತಾರೆ. ನಂತರ ಜಾತ್ರೆಯ ಸಂದರ್ಭದಲ್ಲಿ ದೇವಸ್ಥಾನದ ಮುಂದೆ ಮತ್ತು ಅಗ್ನಿಗೊಂಡದ ಸುತ್ತ ಹಂದರ, ಪೆಂಡಾಲು ಹಾಕಿ ತಳಿರು ತೋರಣ ಗಳಿಂದ ಸಿಂಗರಿಸುವ ಕಾಯಕ ಇವರದೇ. ಊರಿನ ಪ್ರಮುಖ ಬೀದಿಗಳಲ್ಲಿ ಸ್ವಾಗತದ ಕಮಾನುಗಳನ್ನು ಸಹ ನಿರ್ಮಿಸುತ್ತಾರೆ.

ಪಾಡ್ಯದ ದಿವಸ ಮೇದರ ಯುವಕರೆಲ್ಲರೂ ಸೇರಿ ಅಗ್ನಿಕುಂಡವನ್ನು ನಿರ್ಮಿಸುವರು. ಸಾಯಂಕಾಲ ನಗರದ ಇನ್ನೊಂದು ಭಾಗದಲ್ಲಿರುವ ಸಣ್ಣಕ್ಕಿ ವೀರಭದ್ರನ ಪುರಾತನ ದೇವಾಲಯದಿಂದ ದೇವರ ಮೂರ್ತಿಯನ್ನು ರಥದಲ್ಲಿರಿಸಿಕೊಂಡು ಎಳೆದು ತರುತ್ತಾರೆ. ಈ ಹಿಂದೆ ಈ ದೇವರನ್ನು ಭಾರವಾದ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಹೊತ್ತು ತರುತ್ತಿದ್ದರು. ಈ ಸಂದರ್ಭದಲ್ಲಿ ಮೇದರು ಸಮವಸ್ತ್ರವನ್ನು ಧರಿಸಿರುವುದು ಮತ್ತು ಮಡಿವಸ್ತ್ರವನ್ನು ಹೆಗಲಮೇಲೆ ಹಾಕಿಕೊಂಡಿರುವುದು ಕಂಡುಬರುತ್ತದೆ. ಹೀಗೆ ಹೊರಟ ಸ್ವಾಮಿಯ ಉತ್ಸವವು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ಬಂದು ದೇವಸ್ಥಾನವನ್ನು ಸೇರುತ್ತದೆ. ಭಕ್ತರೆಲ್ಲರೂ ದೇವರಿಗೆ ಹಣ್ಣುಕಾಯಿ ಮಾಡಿಸುತ್ತಾರೆ. ಸಾಯಂಕಾಲ ವೀರಭದ್ರ ದೇವರ ಅಗ್ನಿಕುಂಡ ತುಳಿಯುವ ಕಾರ್ಯ ಆರಂಭವಾಗುತ್ತದೆ.

ದೇವರು ಅಗ್ನಿಕುಂಡ ತುಳಿಯುವ ಸಂದರ್ಭದಲ್ಲಿ ಇದರ ನಿಯಂತ್ರಣ ಸಹ ಮೇದರೇ ವಹಿಸಿಕೊಂಡಿರುತ್ತಾರೆ. ದೇವರು ಅಗ್ನಿ ಕುಂಡ ತುಳಿದ ನಂತರ ಹೊಂಡವನ್ನು ಮುಚ್ಚುವ ಕಾಯಕ ಸಹ ಮೇದರದೇ ಆಗಿರುತ್ತದೆ. ಮಾರನೆಯ ದಿವಸ ಚೈತ್ರ ಶುದ್ದ ಬಿದಿಗಿ, ವೀರಭದ್ರಸ್ವಾಮಿಯ ರಥೋತ್ಸವ. ರಥೋತ್ಸವಕ್ಕೆ ಮುಂಚೆ ಮೇದರ ಯುವಕರೆಲ್ಲರೂ

ರಥದ ಗಾಲಿಗೆ ಅರಿಶಿಣ, ಎಣ್ಣೆ ಮತ್ತು ಬಾಳೆಯ ಹಣ್ಣು ಹಚ್ಚಿ ತಿಕ್ಕುತ್ತಾರೆ. ನಂತರ ದೇವರು ರಥವನ್ನು ಏರುತ್ತಾನೆ. ಮೇದರ ಯುವಜಟ್ಟಿಗಳು ರಥದ ಗಾಲಿಗೆ ಸನ್ನೆಯನ್ನು ಹಾಕಲು ವೀರಾವೇಷದಿಂದ ಸಮವಸ್ತ್ರವನ್ನು ಉಟ್ಟು ಹಣೆಗೆ ವಿಭೂತಿ ಕುಂಕುಮ ಧರಿಸಿ ಯುವನಾಯಕನ ಮುಂದಾಳತ್ವದಲ್ಲಿ ಸನ್ನೆಯನ್ನು ಹೊತ್ತು ಕೇಕೆಹಾಕುತ್ತಾ ಸಕಲ ಮರ್ಯಾದೆಯೊಂದಿಗೆ ವಾದ್ಯಗಳಸಮೇತ ಬರುತ್ತಾರೆ. ಇವರನ್ನು ಬಿಟ್ಟರೆ ಅನ್ಯ ಸಮುದಾಯದವರು ರಥದ ಗಾಲಿಗೆ ಸನ್ನೆಯನ್ನು ಹಾಕುವುದಿಲ್ಲ. ರಥೋತ್ಸವ ಮುಗಿದು ಒಂಬತ್ತನೆಯ ದಿವಸ ಮತ್ತೆ ರಥವನ್ನು ಅದರ ಸ್ವಸ್ಥಾನಕ್ಕೆ ವಾಪಸು ಬಿಡುವುದು ಸಹ ಇವರ ಜವಾಬ್ದಾರಿಯೇ. ಪಾಡ್ಯವಾದ ಮೂರನೆಯ ದಿವಸ ಮತ್ತೆ ವೀರಭದ್ರ ದೇವರ ಮೂರ್ತಿಯನ್ನು ಹಳೆಯ ದೇವಸ್ಥಾನಕ್ಕೆ ಮೇದರು ಮೆರವಣಿಗೆಯೊಂದಿಗೆ ಮುಟ್ಟಿಸಿ ಬರುತ್ತಾರೆ.

ಈ ಜಾತ್ರೆಯಲ್ಲಿ ಕಂಡುಬರುವ ವಿಶೇಷತೆಯಂದರೆ, ಮೇದರನ್ನು ಭಾರವಾದ ಕೆಲಸಕ್ಕೆ ಬಳಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಈ ಜಾತ್ರೆಯ ಸಂದರ್ಭದಲ್ಲಿ ಇವರಿಗೆ, ಇವರು ಇಲ್ಲದೇ ಇಂಥಹ ಕೆಲವು ಕಾರ್ಯಕ್ರಮಗಳು ನಡೆಯುವುದೇ ಇಲ್ಲ ಎನ್ನುವಂತಹ ನಂಬಿಕೆ ಇವರಲ್ಲಿ ಪಾರಂಪರಿಕವಾಗಿ ಮೂಡಿ ಬೆಳೆದು ಬಂದಿದೆ. ಹಾಗಂತ ಇವರು ಜಾತ್ರೆಯಲ್ಲಿ ತಾವು ಮಾಡುವುದು ಇದೊಂದು ಸೇವಾ ಕಾರ್ಯ ಮತ್ತು ಈ ದೇವರಿಗೆ ನಾವು ನಮ್ಮ ಸಮುದಾಯದಿಂದ ಸಲ್ಲಿಸುವ ಭಕ್ತಿ ಎಂದು ಇವರು ನಂಬಿ ಹೇಳುತ್ತಾರೆ.

3.5.11 ಓಂಕಾರೇಶ್ವರ ಜಾತ್ರೆ:

ಹೊಸಪೇಟೆಯಲ್ಲಿ ನಡೆಯುವ ಇನ್ನೊಂದು ಪ್ರಮುಖವಾದ ಜಾತ್ರೆ ಎಂದರೆ, ಓಂಕಾರೇಶ್ವರ ಜಾತ್ರೆ. ಓಂಕಾರೇಶ್ವರ ದೇವಾಲಯವು ಹೊಸಪೇಟೆಯ ಹೊಸ ಮೇದರ ಓಣಿಯಲ್ಲಿ ಮುಖ್ಯ ರಸ್ತೆಗೆ ಹೊಂದಿ ಕೊಂಡಂತೆ ಇದೆ. ಈ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ ಶಿವಲಿಂಗವನ್ನು 1951 ರಲ್ಲಿ ಆಗಿನ ಮೇದ ಸಮುದಾಯದ ಹಿರಿಯರು ಕಾಶಿಯಿಂದ ತಂದರು. ಈ ದೇವಸ್ಥಾನದ ನಿರ್ಮಾಣ ಮತ್ತು ಕಲ್ಯಾಣ ಮಂಟಪದ ನಿರ್ಮಾಣದ ವೆಚ್ಚ ಎಲ್ಲವೂ ಮೇದ ಸಮುದಾಯದ ಪ್ರತಿಯೊಬ್ಬರ ಶ್ರಮದ ಪ್ರತಿಫಲವಾಗಿದೆ ಎಂದು ಇಲ್ಲಿಯ ಹಿರಿಯರು ಹೇಳುತ್ತಾರೆ.

ಪ್ರತಿ ವರ್ಷ ಓಂಕಾರೇಶ್ವರ ದೇವರ ಜಾತ್ರೆಯನ್ನು ಕಾರ್ತಿಕ ಮಾಸವಲ್ಲಿ ನಡೆಸುತ್ತಾರೆ. ಆ ದಿವಸ ಬೆಳಗ್ಗೆ ಮೇದ ಸಮುದಾಯದವರೆಲ್ಲ ಶುಚಿರ್ಭೂತರಾಗಿ ಮಹಿಳೆಯರು ಕಳಸಗಳೊಂದಿಗೆ ದೇವಸ್ಥಾನದ ಮುಂದೆ ಸೇರುವರು. ಓಂಕಾರೇಶ್ವರ ದೇವರ ಬೆಳ್ಳಿಯ ಮೂರ್ತಿಯನ್ನು ಕಟ್ಟಿಗೆಯ ಕೃತಕ ಲಿಂಗುವಿಗೆ ಇಟ್ಟು ಟ್ರ್ಯಾಕ್ಟರ್‌ನಲ್ಲಿ ಇರಿಸಿ ಹೂವಿನಿಂದ ಅಲಂಕರಿಸುತ್ತಾರೆ. ನಂತರ ಇದೇ ಸಮುದಾಯದ ನಾಸಿಖ್ ಬ್ಯಾಂಡ್ ಮತ್ತು ಸಕಲ ವಾದ್ಯಗಳೊಂದಿಗೆ, ಓಂಕಾರೇಶ್ವರ ದೇವರ ಮೆರವಣಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಸಾಗಿ ನಡೆಯುತ್ತದೆ. (ನಾಲ್ಕನೇ ಛಾಯಾಚಿತ್ರವನ್ನು ನೋಡಿ) ಮೆರವಣಿಗೆಯ ಮುಂದೆ ಮೇದ ಮಹಿಳೆಯರು ಕಳಸಗಳನ್ನು ಹಿಡಿದು ಸಾಗಿರುವುದು ಮೆರವಣಿಗೆಗೆ ಹೆಚ್ಚಿನ ಮೆರಗು ತಂದಿರುತ್ತದೆ. ಹೀಗೆ ಸಾಗಿದ ಓಂಕಾರೇಶ್ವರ ಉತ್ಸವವು ಊರಿನ ಪ್ರಮುಖ ಬೀದಿಗಳಲ್ಲಿ

ಹಾದು ಮಧ್ಯಾಹ್ನದ ಹೊತ್ತಿಗೆ ವಾಪಸು ದೇವಸ್ಥಾನಕ್ಕೆ ಬಂದು ತಲುಪುತ್ತದೆ. ದೇವರ ಮೂರ್ತಿಯನ್ನು ಮತ್ತೆ ದೇವಸ್ಥಾನದಲ್ಲಿ ಇರಿಸುತ್ತಾರೆ. ಮೊದಲು ಅಯ್ಯಗಳಿಗೆ ಊಟಮಾಡಿಸುವರು. ಬಂದ ಸಮುದಾಯದ ಪರದೈವದವರನ್ನು ಮತ್ತು ಆಹ್ವಾನಿತರನ್ನು ಪ್ರಸಾದಕ್ಕೆ ಕೂಡಿಸಿ ದೈವದ ಪರವಾಗಿ ಮಾಲಾರ್ಪಣೆಮಾಡಿ ಗೌರವಿಸುವರು. ಮೇದರು ತಾವು ಶಿವಗಣದ ವಂಶಜರಾದ್ದರಿಂದ ಶಿವನ ರೂಪವಾದ ಲಿಂಗುವನ್ನು ಅಂದರೆ ಓಂಕಾರೇಶ್ವರ ಲಿಂಗುವನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿರಬಹುದು.

3.5.12 ಮಲೆಮ್ಮನ ಜಾತ್ರೆ:

ಹೊಸಪೇಟೆಯಲ್ಲಿ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಬಲದಂಡೆಯ ಕಾಲುವೆಯ ದಂಡೆಗೆ ಮಲೆಮ್ಮ-ಚೌಡಮ್ಮ ದೇವಿಯರ ದೇವಸ್ಥಾನವಿದೆ. ಇದಕ್ಕೂ ಪೂರ್ವದಲ್ಲಿ ಈ ಸಮುದಾಯದವರು ಮಲೆಮ್ಮನ ಜಾತ್ರೆಯನ್ನು ಊರ ಹೊರಗಿನ ಸ್ಮಶಾನದಲ್ಲಿ ನಡೆಸುತಿದ್ದುದಾಗಿ ಇಲ್ಲಿಯ ಹಿರಿಯರು ಹೇಳುತ್ತಾರೆ. ನಂತರ ಕಾಲಾನುಕ್ರಮದಲ್ಲಿ ಈ ದೇವಸ್ಥಾನವನ್ನು ಸಮುದಾಯದವರೇ ದೇವಸ್ಥಾನವನ್ನು ನಿರ್ಮಿಸಿದ್ದಾರೆಂದು ತಿಳಿದುಬರುತ್ತದೆ.ದೇವಸ್ಥಾನವಲ್ಲಿ ಪ್ರತ್ಯೇಕವಾದ ಎರಡು ಗರ್ಭಗುಡಿಗಳಲ್ಲಿ ಮಲೆಮ್ಮ ಮತ್ತು ಚೌಡಮ್ಮ ದೇವಿಯರ ಶಿಲಾ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾರೆ. ಹೊರಗಡೆ ಬಲಿ ಪೀಠ, ಮತ್ತು ನಾಗ ಮೂರ್ತಿಗಳನ್ನು ಸ್ಥಾಪಿಸಿರುವುದು ಈ ದೇವಸ್ಥಾನದ ವಿಶೇಷತೆ. ಮಲೆಯಮ್ಮ ದೇವಿಜಾತ್ರೆಯನ್ನು ಇವರು ಎರಡು ವಿಧಗಳಲ್ಲಿ ನಡೆಸುತ್ತಾರೆ. ಅಂದರೆ ಪ್ರತಿ ವರ್ಷ ನಡೆಸುವ ಮಾಮೂಲಿಯ ಸಣ್ಣ ಜಾತ್ರೆಯಾದರೆ, ಪ್ರತಿ ಐದು ವರ್ಷಗಳಿಗೊಮ್ಮೆ ನಡೆಸುವ ವಿಶೇಷ ಜಾತ್ರೆ, ದೊಡ್ಡ ಜಾತ್ರೆ. ಇವರು ಸಹ ಜಾತ್ರೆಯ ಮೊದಲ ದಿವಸ ಮಂಗಳವಾರ ಯಥಾಪ್ರಕಾರ ದೇವಿಯ ಅಭಿಷೇಕ ಮತ್ತು ಕತ್ತಿಯ ಪೂಜೆಯನ್ನು ನೆರವೇರಿಸುವರು. ಮಾರನೆಯ ದಿವಸ ಮಾಮೂಲಿ ಜಾತ್ರೆಯಾಗಿದ್ದರೆ ಮಲೆಮ್ಮನಿಗೆ ಹೋಳಿಗೆ ಎಡೆಮಾಡುತ್ತಾರೆ. ಮತ್ತು ಚೌಡಮ್ಮನಿಗೆ ಒಂದು ಕೋಳಿಯನ್ನು ಬಲಿ ಕೊಡುತ್ತಾರೆ. ಆದರೆ ದೊಡ್ಡ ಜಾತ್ರೆಯ ದಿವಸ ಬೆಳಗಿನ ಜಾವದಲ್ಲಿ ಚೌಡಮ್ಮ ದೇವಿಯ ಮುಂದೆ ಬಲಿಪೀಠದ ಹತ್ತಿರ ಜೋಡು ಬ್ಯಾಟಗಳನ್ನು ಬಲಿಕೊಡುತ್ತಾರೆ. ಕುರಿಯ ರಕ್ತವನ್ನು ಅಲ್ಲಿಯೇ ಬಲಿ ಪೀಠದ ಮುಂದೆ ತಗ್ಗು ತೆಗೆದು ಹೂಳುತ್ತಾರೆ. ಇವರು ಮಾಡುವ ಒಂದು ವಿಶೇಷ ಕ್ರಮವೆಂದರೆ. ಬಲಿಕೊಟ್ಟ ಪ್ರಾಣಿಯ ಕಳ್ಳುಪಚ್ಚಿಯ ಹುಲುಸನ್ನ ತೆಗೆದು ಸಂಕ್ಟಿಯೊಂದಿಗೆ ಬೆರಸಿ ಚರುಗ ಚಲ್ಲುತ್ತಾರೆ. ಈ ಚರುಗ ಚಲ್ಲುವ ದೃಶ್ಯ ಭಯಾನಕವಾಗಿ ಮೂಲ ಬುಡಕಟ್ಟು ಆಚರಣೆಯ ದೃಶ್ಯವನ್ನು ಕಣ್ಮುಂದೆ ತರುತ್ತದೆ. ಸಮುದಾಯದ ಯುವಕರೆಲ್ಲರೂ ಕೈಯಲ್ಲಿ ಕೊಳ್ಳಿಯನ್ನು ಹಿಡಿದುಸಾಗುತ್ತಾರೆ. ದೇವಿಯ ಪೂಜಾರಿ ಹೊಸ ಲುಂಗಿಯನ್ನು ಉಟ್ಟುಕೊಂಡು ಚರುಗದ ಪುಟ್ಟಿಯನ್ನು ಹೊತ್ತು ಸಾಗುತ್ತಾನೆ. ಕೊಳ್ಳಿಯನ್ನು ಹಿಡಿದ ಯುವಕರೆಲ್ಲರೂ ಕೇಕೆ ಹಾಕುತ್ತಾ ದೇವಿಯನ್ನು ಬಲಕ್ಕೆ ಮಾಡಿಕೊಂಡು ಗುಡಿಸುತ್ತುವರು. ಜೊತೆಗೆ ಪೂಜಾರಿಯು ಹುಲುಸನ್ನು ಗುಡಿಯ ಸುತ್ತಲೂ ಚಲ್ಲುತ್ತಾ ಸಾಗುತ್ತಾನೆ. ಈ ಚರುಗ ಚಲ್ಲುವುದು ಮುಗಿಯುತ್ತಿದ್ದಂತೆಯೇ ಪೂಜಾರಿಗೆ ನಿವಾಳಿಯನ್ನು ತೆಗೆದು

ಶಾಂತಿ ಮಾಡುವರು. ನಂತರ ಬಲಿ ಕೊಟ್ಟ ಕುರಿಯ ಬಟ್ಟೆಯನ್ನು(ಬೊಟಿ) ಪ್ರಸಾದವೆಂದು ಕೊಡುತ್ತಾರೆ. ಕುರಿಯ ಮಾಂಸವನ್ನು ಪಾಲು ಮಾಡಿ ದೈವದ ಪರವಾಗಿ ಅಡಿಗೆ ಮಾಡಿ ಸಮುದಾಯದವರೆಲ್ಲ ಊಟಮಾಡುವರು. ಮಾರನೆಯ ದಿವಸ ದೇವಿಯನ್ನು ಗಂಗೆಗೆ ಕಳುಹಿಸಿ ಬರುತ್ತಾರೆ. ಹೊಸಪೇಟೆಯ ಮೇದರು ತಮ್ಮ ದೇವಿಯ ಜಾತ್ರೆಗೆ ಬೇಕಾಗುವ ಖರ್ಚನ್ನು ನೀಗಿಸಲು ಮಾಲು ಬಂದ ಸಂದರ್ಭದಲ್ಲಿ ಪ್ರತಿಯೊಂದು ಲಾರಿಗೆ ಇಂತಿಷ್ಟೆಂದು ತೆಗೆದಿರಿಸಿರುತ್ತಾರೆ.

3.6 ಪವಾಡ ಪುರುಷರು ಮತ್ತು ಸಾಂಸ್ಕೃತಿಕ ವೀರರು:

ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಆಗಿ ಹೋದ ವೀರರು ಮಹಾಪುರಷರಾಗಿ ಈ ಸಮುದಾಯದಲ್ಲಿ ಆರಾಧನೆಗೆ ಒಳಪಟ್ಟರು. ಇಲ್ಲಿ ಇವರು ಮಾಡಿದ ಮಾನವ ಅಸಾಧ್ಯದ ಸಾಧ್ಯತೆಗಳು ಇವರನ್ನು ಪವಾಡ ಪುರಷರನ್ನಾಗಿಯೂ ವೀರರನ್ನಾಗಿಯೂ ಒಪ್ಪಿಕೊಳ್ಳುವಂತೆ ಮಾಡಿತು. ಮೇದ ಬುಡಕಟ್ಟು ಸಮುದಾಯದಲ್ಲಿ ಕೂಡ ಇಂತಹ ಪವಾಡ ಪುರುಷರು ಮತ್ತು ಸಾಂಸ್ಕೃತಿಕ ವೀರರನ್ನು ಕಾಣುತ್ತೇವೆ.ಇವರು ಈ ಸಮುದಾಯದ ಸಂಸ್ಕೃತಿಯನ್ನು ಎತ್ತರಿಸಿ ಈ ಕುಲಕಸುಬಿನಲ್ಲಿ ಮಾನವಿಕ ಮೌಲ್ಯಗಳನ್ನು ಮೆರೆಸಿದವರು. ಇಂದಿಗೂ, ಈ ಮಹಾಪುರುಷರು ಈ ಸಮುದಾಯದ ಜನರ ಪೂಜಾರ್ಹರು. ಇಂತಹ ಕೆಲವು ಮಹಾಪುರುಷರನ್ನು ಇಲ್ಲಿ ಗಮನಿಸಲಾಗಿದೆ.

3.6.1 ಮೇದಾರ ಕೇತಯ್ಯಮತ್ತು ಅವರ ಪತ್ನಿ ಸಾತೆವ್ವೆ:

12ನೆಯ ಶತಮಾನದ ಸುಪ್ರಸಿದ್ಧ ವಚನಕಾರರಲ್ಲಿ ಮೇದಾರ ಕೇತಯ್ಯ ಕೂಡ ಒಬ್ಬರು.ಕೇತಯ್ಯ, ಕೇತಿದೇವ, ಕ್ಯಾತಯ್ಯ, ಕೇತಿತಂದೆ, ಎಂದೆಲ್ಲಾ ಈತನನ್ನು ಕರೆಯುತ್ತಾರೆ. ಅಂದರೆ, ಕೇದಾರಯ್ಯ > ಕೇತಾರಯ್ಯ > ಕೇತಯ್ಯ ಎಂದಾಗಿದ್ದಾನೆ. ಅನೇಕ ಗ್ರಂಥಗಳಲ್ಲಿ ಈತನನ್ನು ಮೇದಾರ ಕೇತಯ್ಯ, ಮೇದರ ಕೇತಯ್ಯ, ಮತ್ತು ಮೇದರ ಕ್ಯಾತಯ್ಯ ಎಂದು ಗುರುತಿಸಲಾಗಿದೆ. ಮೇದಾರ ಕೇತಯ್ಯನನ್ನು ಕುರಿತಾಗಿ 12ನೆಯ ಶತಮಾನದ ಶರಣ ಶರಣೆಯರ ಅನೇಕ ಪರಿಚಿತ ಗ್ರಂಥಗಳಲ್ಲಿ ಉಲ್ಲೇಖ ಕಂಡುಬರತ್ತದೆ. ಶಂಕರ ಲಿಂಗ ರಗಳೆ, ಅಮರ ಗಣಾಧೀಶ್ವರರ ಚರಿತ್ರೆಗಳು (ಡಾ.ಫ.ಗು. ಹಳಕಟ್ಟಿ), ಶರಣ ಲೀಲಾಮೃತ (ಚೆನ್ನಪ್ಪಕವಿ), ಸಿಂಗಿರಾಜ ಪುರಾಣ (ಸಿಂಗಿರಾಜ), ಶಿವತತ್ವ ಚಿಂತಾಮಣಿ, ಭೀಮ ಕವಿಯ ಬಸವ ಪುರಾಣ, ಮೇದಾರ ಕೇತಯ್ಯನ ವಚನಗಳು (ಎಸ್.ಎಸ್.ಭೂಸರಡ್ಡಿ) ಇನ್ನು ಮುಂತಾದ ಗ್ರಂಥಗಳಲ್ಲಿ ಕೇತಯ್ಯನ ಕುರಿತು ಪ್ರಸ್ತಾಪವಿದೆ. ಈತನ ಕಾಲ 1160 ಇರಬಹುದು ಎಂದು ಕವಿಚರಿತ್ರೆಕಾರರ ಅಭಿಪ್ರಾಯ. ಈತನ ಊರು, ಬೆಳಗಾಂವಿ ಜಿಲ್ಲೆಯ ಬೈಲು ಹೊಂಗಲ ತಾಲೂಕಿನ, ಬೇಲೂರು. ಕೇತಯ್ಯನ ಧರ್ಮಪತ್ನಿ ಸಾತೆವ್ವೆ, ಕೇತಯ್ಯನವರ ಬಾಲ್ಯವನ್ನು ಕುರಿತಾಗಿ ಹೆಚ್ಚಿನ ಮಾಹಿತಿಗಳು ಲಭ್ಯವಾಗಿಲ್ಲ.

ಮೇದಾರ ಕೇತಯ್ಯ ಬಸವಣ್ಣನವರ ಅನುಭವ ಮಂಟಪದಲ್ಲಿ ಅಗ್ರಸ್ಥಾನವನ್ನು ಪಡೆದಿದ್ದ. ಕೇತಯ್ಯ ತನ್ನ ನಿತ್ಯದ ಕಾಯಕವೇ ಕೈಲಾಸವೆಂದು ನಂಬಿ ನುಡಿದು ನಡೆದು ತೋರಿಸಿದವನು. ಕಾಯಕವೇ ಕೈಲಾಸವೆಂಬುದನ್ನು ವಚನ ಕಟ್ಟಿ

ಹಾಡಿದನು. ಕಲ್ಯಾಣದ ಕ್ರಾಂತಿಯ ನಂತರ ಶರಣ, ಶರಣೆಯರೆಲ್ಲ ದಿಕ್ಕಾಪಾಲಾದರು. ಈ ಸಂದರ್ಭದಲ್ಲಿ ಆ ಕಾಲದ ವಚನ ಸಾಹಿತ್ಯವನ್ನು ರಕ್ಷಣೆ ಮಾಡುವುದು ಒಂದು ಜವಾಬ್ದಾರಿಯಾಗಿತ್ತು. ಅಕ್ಕ ನಾಗಮ್ಮ, ಗಂಗಾಂಬಿಕೆ, ಮತ್ತು ನಾಗಲಾಂಬಿಕೆ, ಚನ್ನಬಸವಣ್ಣ, ಡೋಹರ ಕಕ್ಕಯ್ಯ, ಮುಂತಾದವರ ಜೊತೆ ಮೇದಾರ ಕೇತಯ್ಯ ವಚನ ಸಾಹಿತ್ಯವನ್ನು ರಕ್ಷಣೆ ಮಾಡಿದನೆಂದು ತಿಳಿದುಬರುತ್ತದೆ. ಈತನ ವಚನದ ಅಂಕಿತ "ಗೌರೇಶ್ವರ". ಅಂದರೆ,(ಗವರೆ)ಬುಟ್ಟಿ ಹೆಣೆಯುವವರು. ಮೇದಾರ ಕೇತಯ್ಯ ತನ್ನ ಮಡದಿ ಸಾತೆವ್ವನೊಂದಿಗೆ ದಿನನಿತ್ಯ ಕಾಡಿನಿಂದ ಒಂದು ಬಿದಿರು ಕಡಿದು ತಂದು ಅದರಿಂದ ಬುಟ್ಟಿಯನ್ನು ಮಾಡಿ ಮಾರಾಟ ಮಾಡುತ್ತಿದ್ದ. ಬಂದ ಹಣದಿಂದ ಪ್ರಸಾದವನ್ನು ಮಾಡಿ ಶರಣರಿಗೆ ದಾಸೋಹ ಮಾಡಿ ಉಣ ಬಡಿಸುತ್ತಿದ್ದರು.ಮಿಕ್ಕ ಪ್ರಸಾದವನ್ನು ಸತಿ ಸಾತೆವ್ವ ಮತ್ತು ಪುತ್ರ ಲಿಂಗಯ್ಯರೊಂದಿಗೆ ಸ್ವೀಕರಿಸಿ ಸಂತೃಪ್ತಿಯಿಂದ ಇದ್ದನು. ಪ್ರತಿ ದಿವಸ ಸಾಯಂಕಾಲ ಅನುಭವ ಸಮಂಟಪದಲ್ಲಿ ಶರಣರ ಜೊತೆ ಪಾಲ್ಗೊಳ್ಳುತ್ತಿದ್ದ. ಹೀಗೆ ಬಿದಿರಿನ ಕಸುಬಿನ ಕಾಯಕದೊಂದಿಗೆ ತನ್ನ ಅಧ್ಯಾತ್ಮಿಕ ಜೀವನವನ್ನು ಸಹ ಸಾಗಿಸುತ್ತಿದ್ದನು. ಕೇತಯ್ಯ ಬಿದಿರುನ ಮೆಳೆಯನ್ನು ಗೌರೀಶ್ವರರ ವಾಸಸ್ತಾನವೆಂದು ಭಾವಿಸಿದ್ದನು. ಬಿದಿರಿನ ತುದಿಗೆ ಒಂದು ಗಂಟೆಯನ್ನು ಕಟ್ಟಿದ್ದನು. ಹಕ್ಕಿ ಪಕ್ಷಿಗಳು ಗಿಡದಮೇಲೆ ಕುಳಿತಾಗಲೆಲ್ಲ ಈ ಗಂಟೆಗಳು ಬಾರಿಸುವುದನ್ನು ಕಂಡು ಪಕ್ಷಿ ಸಂಕುಲಗಳು ಸಹಿತ ಶಿವಧ್ಯಾನದಲ್ಲಿ ತೊಡಗಿವೆ ಎಂದು ಸಂತೋಷ ಪಡುತ್ತಿದ್ದನು. ಕೇತಯ್ಯನ ಜೀವನದಲ್ಲಿ ಅನೇಕ ಕಷ್ಟ ಕಾರ್ಪಣ್ಯಗಳು ಎದುರಾದವು. ಇವುಗಳಿಗೆಲ್ಲ ಈತ ನಂಬಿದ ತತ್ವಗಳಿಂದ ಪರಿಹಾರ ಕಂಡುಕೊಳ್ಳುತ್ತಿದ್ದನು. ಸಂದರ್ಭಾನುಸಾರ ಇವುಗಳ ಕುರಿತು ವಚನಗಳನ್ನು ರಚಿಸಿದ್ದಾನೆ. ಮಂಚಣ್ಣನು ಕೇತಯ್ಯನ ಭಕ್ತಿಯನ್ನು ಟೀಕಿಸುತ್ತಿದ್ದ. ನಿಮ್ಮ ಗೌರೀಶ್ವರನಿಗೆ ಗೋರಲೆಯ ಮನೆಯೇ ವಾಸಕ್ಕೆ ಇಷ್ಟವಾಯಿತೇನು ? ಎಂದು ವ್ಯಂಗ ನುಡಿಯುತಿದ್ದರು. ಕೇತಯ್ಯ ಬಿದಿರಿಗೆ ಕಟ್ಟಿದ ಗಂಟೆಯನ್ನು, ಪಕ್ಷಿಗಳು ಬಾರಿಸುವುದನ್ನು ತೋರಿಸುತ್ತಾನೆ. ಅದಕ್ಕೆ ಮಂಚಣ್ಣ ಅಪಹಾಸ್ಯ ಮಾಡಿದ.

ಒಂದು ದಿವಸ ಬಿಜ್ಜಳ ಮಹಾರಾಜನ ಮಗ ಸಿಂಘಣ್ಣ ಮತ್ತು ಮಂಚಣ್ಣನ ಮಗ ಮಹಾವೀರ ಬಿಲ್ಲುವಿದ್ಯಾ ಪ್ರಯೋಗ ನಡೆಸಿದ್ದರು. ಇನ್ನೊಂದು ಕಡೆಯಿಂದ ಮಂತ್ರಿ ಮಂಚಣ್ಣ ದೇವರಿಗೆಂದು ಬಿದಿರಿಗೆ ಕಟ್ಟಿದ ಗಂಟೆಯನ್ನು ಬಾರಿಸುತ್ತಿದ್ದ ಪಕ್ಷಿಗಳಿಗೆ ಗುರಿ ಇಟ್ಟಿದ್ದನು. ಮಂತ್ರಿಯ ಮಗನ ತಲೆಯ ಮೇಲಿನ ಹಣ್ಣಿಗೆ ಬಿಜ್ಜಳನ ಮಗ ಸಿಂಘಣ್ಣ ಗುರಿಯಿಟ್ಟಿದ್ದನು. ಮಂತ್ರಿಯ ಬಾಣ ಹಕ್ಕಿಗೆ ತಾಕಿತು. ಸಿಂಘಣ್ಣನ ಬಾಣ ಮಂಚಣ್ಣನ ಮಗನ ತಲೆಯನ್ನು ಉರುಳಿಸಿತ್ತು. ಹಕ್ಕಿಯ ತಲೆ ಮತ್ತು ಮಂತ್ರಿಮಗನ ತಲೆ ಒಟ್ಟಿಗೆ ನೆಲಕ್ಕುರುಳಿದವು. ಇದನ್ನು ದಿವ್ಯ ದೃಷ್ಟಿಯಿಂದ ನೋಡಿದ ಕೇತಯ್ಯ ದಿಗ್ಭ್ರಾಂತನಾದನು. ಆ ಕ್ಷಣದಲ್ಲಿಯೇ, ಕೇತಯ್ಯ ನಿಮ್ಮ ಮಗನಿಗೆ ಆಪತ್ತು ಒದಗಿದೆ ಬೇಗನೆ ಹೋಗಿರಿ ಎಂದು ಮಂತ್ರಿಮಂಚಣ್ಣನನ್ನು ಬೇಡಿಕೊಂಡ. ಅದಕ್ಕೆ ಮತ್ತೆ ಮಂಚಣ್ಣ ನಗೆಯಾಡಿದ. ಇಂತಹ ಸಂದರ್ಭದಲ್ಲಿ ಕೇತಯ್ಯ ಶಿವನ ನಾಟಕ ಲೀಲೆಯನ್ನು ಶಿವನೇ ಬಲ್ಲನು ಎಂದು ವಚನವನ್ನು ರಚಿಸಿ ಹಾಡುತ್ತಾನೆ . ಭಸ್ಮವನ್ನು ಶಿವನ ಹೆಸರು ಹೇಳಿ ಸತ್ತು ಬಿದ್ದ ಪಕ್ಷಿಗೆ ಕೇತಯ್ಯ ಹಚ್ಚಲು, ಪಕ್ಷಿಯು ಎದ್ದು ಹಾರಿ ಹೋಗುತ್ತದೆ. ಮಂಚಣ್ಣ ತನ್ನ ಮಗನ ಸಾವಿನ ಸುದ್ದಿಯನ್ನು

ತಿಳಿದು ಕಂಗಾಲಾಗುತ್ತಾನೆ. ಶರಣರನ್ನು ನಿಂದಿಸಿದ ಅವಿವೇಕಕ್ಕೆ ಪ್ರಾಯಶ್ಚಿತ್ತಪಟ್ಟು ಮಗನ ಶವದಸಮೇತ ಪತ್ನಿ ಪ್ರಭಾದೇವಿಯೊಡಗೂಡಿ ಅನುಭವ ಮಂಟಪಕ್ಕೆ ಬರುತ್ತಾನೆ. ಅನುಭವ ಮಂಟಪದಲ್ಲಿ ಎಲ್ಲಾ ಶರಣರ ಮುಂದೆ ತಮ್ಮ ಮಗನ ಪ್ರಾಣವನ್ನು ಉಳಿಸಿಕೊಡಿ ಎಂದು ಬೇಡಿದ. ಶರಣರ ಆದೇಶದಂತೆ ಮಗನ ಶವದ ಸಮೇತ ಕೇತಯ್ಯನಲ್ಲಿಗೆ ಮತ್ತೆ ವಾಪಾಸು ಬರುತ್ತಾರೆ. ಆಗ ಕೇತಯ್ಯನು ಹದಿಬದೆಯ ಮಡದಿ ಸಾತೆವ್ವನನ್ನು ಕರೆದು, ಮಂತ್ರಿ ಮಗನ ಪ್ರಾಣವನ್ನು ಉಳಿಸಲು ತಮ್ಮ ಮಗ ಲಿಂಗಣ್ಣನ ಪ್ರಾಣವನ್ನು ಕೊಡಬೇಕಾತುತ್ತದೆ ಇದಕ್ಕೆ ನಿನ್ನ ಒಪ್ಪಿಗೆ ಇದೆಯೇ ? ಎಂದು ಕೇಳಿದನು. ತಕ್ಷಣ ಕೇತಯ್ಯನ ಮಗ ಲಿಂಗಣ್ಣ ತನ್ನ ಪ್ರಾಣವನ್ನು ಕೊಡಲು ಸಿದ್ಧನಾದನು. ಮಂಚಣ್ಣನ ಮಡದಿ ಪ್ರಭಾವತಿದೇವಿಯು ಇದನ್ನು ಒಪ್ಪಲಿಲ್ಲ. ತಕ್ಷಣ ಲಿಂಗಣ್ಣನಿಗೆ ಶರಣರು ಜೈಕಾರ ಮಾಡಿ ಗೌರೀಶ್ವರನಿಗೆ ನಮಸ್ಕಾರ ಮಾಡಿದರು. ಆಗ ನಿಂಗಣ್ಣನ ಪ್ರಾಣ ಹಾರಿಹೋಯಿತು. ಮಂತ್ರಿಯಮಗ ಮಹಾವೀರ ಚೈತನ್ಯದಿಂದ ಎದ್ದು ನಿಂತನು. ಇತ್ತ ಈ ಸುದ್ದಿಯನ್ನು ತಿಳಿದು ಬಸವಣ್ಣ ಪ್ರಾಣ ಬಿಟ್ಟನು. ಕೂಡಲೇ ಮಡಿವಾಳಯ್ಯ "ಇವರೆಲ್ಲರ ಪ್ರಾಣ ಈ ಕ್ಷಣದಲ್ಲಿಯೇ ಮರಳದಿದ್ದರೆ ನಾನು ನನ್ನ ಶಿರವನ್ನು ಖಡ್ಗಕ್ಕೆ ಆಹುತಿ ಕೊಡುತ್ತೇನೆ "ಎಂದು ಪ್ರತಿಜ್ಞ ಮಾಡಿದನು. ಇದನ್ನು ಕಂಡು ಶಿವ ಅವರ ಪ್ರಾಣವನ್ನು ಹಿಂದಿರುಗಿಸಿದನು. ಮಂಚಣ್ಣನ ಮಡದಿ ಪ್ರಭಾವತಿದೇವಿ, ಮತ್ತು ಲಿಂಗಣ್ಣರು ಶರಣರಲ್ಲಿ ಶಿವ ದೀಕ್ಷೆಯನ್ನು ಪಡೆದರು. ಇಂತಹ ಸನ್ನಿವೇಶಗಳು ಕೇತಯ್ಯನ ಕಥೆಯಲ್ಲಿ ಸಾಕಷ್ಟು ಕಂಡುಬರುತ್ತವೆ. ಇದರಿಂದ ಕೋಪಗೊಂಡ ಮಂಚಣ್ಣ ಈ ಶರಣರಿಗೆ ಬುದ್ಧಿಯನ್ನು ಕಲಿಸ ಬೇಕೆಂದು, ಒಂದು ಉಪಾಯವನ್ನು ಹೂಡಿದ.

ಕಾರಾಗ್ರಹದಲ್ಲಿದ್ದ ಒಬ್ಬ ಧಡೂತಿಕಾಯದ ಕಳ್ಳನ ತಲೆಯನ್ನು ಬೋಳಿಸಿ, ಕಾವಿಯನ್ನು ತೊಡಿಸಿ, ಉರಿಲಿಂಗ ಪೆದ್ದ ಎಂದು ಹೆಸರಿಟ್ಟ. ಉರಿಲಿಂಗ ಪೆದ್ದನನ್ನು ಕೇತಯ್ಯನ ಮನೆಗೆ ದಾಸೋಹಕ್ಕೆ ಕಳಿಸಿದ. ದಾಸೋಹಕ್ಕೆ ಕುಳಿತಾಗ ತನ್ನ ಪಾಪವನ್ನೆಲ್ಲ ಸ್ವೀಕರಿಸಿ ಪುಣ್ಯವನ್ನು ಧಾರೆ ಎರೆದರೆ ಮಾತ್ರ ಪ್ರಸಾದ ಸ್ವೀಕರಿಸುವುದಾಗಿ ಉರಿಲಿಂಗ ಪೆದ್ದ ಹಠ ಹಿಡಿಯುತ್ತಾನೆ. ಆಗ ಕೇತಯ್ಯ ಅದಕ್ಕೆ ಒಪ್ಪಿ ತನ್ನ ಪುಣ್ಯವನ್ನು ಉರಿಲಿಂಗ ಪೆದ್ದನಿಗೆ ಧಾರೆಎರೆದ. ಕೇತಯ್ಯ: ತಾವಿನ್ನು ಶಿವಪೂಜೆಯನ್ನು ಮಾಡಿಕೊಂಡು ಪ್ರಸಾದ ಸ್ವೀಕರಿಸಬಹುದೆಂದು ಉರಿಲಿಂಗ ಪೆದ್ದನಿಗೆ ಹೇಳಿದ. ಈ ಕಳ್ಳ ತನ್ನ ಕತ್ತಿನಲ್ಲಿ ಕಟ್ಟಿಕೊಂಡಿದ್ದ ಕಲ್ಲನ್ನು ಕೇತಯ್ಯ ನೋಡಿದರೆ ಏನುಗತಿ ಎಂದು ಭಯದಿಂದ ಕೇತಯ್ಯನ ಆಜ್ಞೆಯಂತೆ ಬಿಚ್ಚಿ ನೋಡುತ್ತಾನೆ. ಅಲ್ಲಿದ್ದ ಕಲ್ಲು ಲಿಂಗವಾಗಿತ್ತು. ಇದನ್ನು ನೋಡಿದ ಕಳ್ಳ ಭಯದಿಂದ ನಿಜ ವೃತ್ತಾಂತವನ್ನು ಕೇತಯ್ಯನಿಗೆ ಹೇಳುತ್ತಾನೆ. ಮತ್ತು ಕೇತಯ್ಯನಿಂದ ಶಿವ ದೀಕ್ಷೆಯನ್ನು ಪಡೆದು ನಿಜವಾದ ಶರಣನಾಗುತ್ತಾನೆ.

ಕೇತಯ್ಯನ ಕಾಯಕ ನಿಷ್ಠೆಯನ್ನು ಕಂಡ ಶಿವನು ಇವರಿಗೆ ಸಹಾಯ ಮಾಡಲು ನಿರ್ಧರಿಸಿದ. ಒಂದು ದಿನ ಕೇತಯ್ಯ ಬಿದಿರು ತರಲು ಕಾಡಿಗೆ ಹೋದ. ಇತ್ತ ಶಿವನು ಬಸವಣ್ಣನ ವೇಷದಲ್ಲಿ, ಮುತ್ತು ರತ್ನಗಳ ಗಂಟನ್ನು ತೆಗೆದುಕೊಂಡು

ಕೇತಯ್ಯನ ಮನೆಯನ್ನು ಪ್ರವೇಶಿಸುತ್ತಾನೆ. ಈ ಸಂದರ್ಭವನ್ನು ಕುರಿತು ಕೋಲು ಪದವನ್ನು ಜನಪದೀಯರು ಹೀಗೆ ಹಾಡಿರುವರು.

ಬಂದ ಸಾಂಬನು ಮನೆಯೊಳೊನ್ನು ಸುರುವಿದಾ ।
ತಿರುಗಿ ಹೋದನು ತನ್ನ ನಿಜ ನಿವಾಸಕೆ । ಕೋಲು ಕೋಲಿನಾ ಮುತ್ತಿನ ಕೋಲು ಕೋಲಿನಾ ॥
ಇತ್ತ ಕ್ಯಾತನು ಒಂದು ಪಳಿಯ ಕಡೀದು ।
ಹೊರೆಯನ್ನು ಹೊತ್ತುಕೊಂಡು ಮನೆಗೆ ಬಂದನು ।
ಬಂದ ಮನೆಯೊಳು ಇಳುವಿದಾ ಹೊರೆಯನ್ನು ।
ಶರಣ ಕಂಡನು ಮನೆಯೊಳಿರುವ ಹೊನ್ನನು । ಕೋಲು ॥
ಹೊನ್ನು ಕಾಣುತಾ ಕೋಪವನ್ನು ತಾಳುತಾ ।
ಮಹಾ ಘಾತಕಿ ನೀನೆಂದು ನುಡಿದನಾಸತಿಗೆ ।
ಎಲೋ ಮಾನಿನಿ ನಿನ್ನ ಒಲವು ತಿಳಿಯದು ।
ಮಲವು ಮನೆಯಳು ಬಂದುದ್ದೇನು ಕಾರಣ । ಕೋಲು ॥
ರುದ್ರರೂಪದೀ ನುಡಿದ ವ್ಯಾಘ್ರನಂದದೀ।
ಸೀಗ್ರದಿಂದಲೀ ಪೇಳು ಎಂದ ಕ್ಯಾತನು ।
ಆಗ ಶರಣೀ ಪಾದಕೆರಗಿ ನುಡಿದಳು ।
ನಾಗಭೂಷಣಾ ಭಕ್ತ ಬಸವರಾಜನು । ಕೋಲು ॥
ಬಂದು ಮನೆಯಳು ದ್ರವ್ಯ ತಂದು ಸುರುವಿದಾ ।
ವಲ್ಲೆನೆಂದ ನುಡಿದ ನುಡಿ ಕೇಳಲಿಲ್ಲವನು ।
ಕೇಳಿದಾಕ್ಷಣಾ ಕೋಪತಾಳಿ ಕ್ಯಾತನು ।
ಹಾಳು ಮಾತನು ನುಡಿದ ಬಸವರಾಜಗೆ । ಕೋಲು ॥
ರ್‍ವಕ್ಕ ಹೆಚ್ಚಿತ್ತೇ ಅವಗೆ ಸೊಕ್ಕು ಬಂದಿತೇ ।
ಇಕ್ಕಿ ಪೋದನೇ ಹೊನ್ನು ಬಸವ ಮನೆಯೊಳು ।
ಹೊನ್ನು ಹೆಚ್ಚಾದರೆ ಬೆಂಕಿ ಹಚ್ಚುವನದಕೆ ।
ಅಚ್ಚ ಶರಣೆ ಹೊರಗಿದನು ಬಿಸುಟು ಎಂದನು । ಕೋಲು ॥
ನುಡಿದ ಮಾತಿಗೆ ಶರಣೆ ತಡವ ಮಾಡದೇ ।
ವಡನೆ ಹೊನ್ನನು ಹೊರಗ್ಗೆಳೆದು ಬಂದಳು ।

ಮಲವು ಸೋಂಕಿ... ಮೈಲಿಗಾಯಿತೀಮನೆ ।

ಎನಲು ಲಲನೆ ವಡನೆ ಸಾರಣೆ ಗೈದಳು । ಕೋಲು ॥

ಇಂತಹ ಕೇತಯ್ಯನ ಕೋಲಾಟದ ಪದಗಳು ಶಿವನನ್ನೇ ಸೋಲಿಸಿದ ಕೇತಯ್ಯನ ಕೀರ್ತಿಯನ್ನು ಎತ್ತಿ ತೋರಿಸುತ್ತವೆ. ಅವರು ಜೀವನದಲ್ಲಿ ಅಳವಡಿಸಿಕೊಂಡ ನೈತಿಕ ಮೌಲ್ಯಗಳು ಇವರ ಹಿರಿತನವನ್ನು ಬಿಂಬಿಸುತ್ತವೆ. ಕೇತಯ್ಯನ ಕೀರ್ತಿಯು ಅನುಭವ ಮಂಟಪ ಮತ್ತು ಪುರದೊಳಗಲ್ಲದೇ ಭೂಮಿಯ ಮೇಲೆ ಹೆಚ್ಚಾಗಿ ಬೆಳೆಯಿತು. ಹೀಗಿರಲು ಶಿವ ಪಾರ್ವತಿಯರು ಕೇತಯ್ಯನ ಈ ಕೀರ್ತಿಯನ್ನು ಹರಡಲು ಮತ್ತೆ ಒಂದು ಉಪಾಯವನ್ನು ಹೂಡಿದರು.

ಕೇತಯ್ಯನು ನಿತ್ಯದ ಕಾಯಕದಂತೆ ಬಿದಿರು ಕಡಿಯಲು ಕಾಡಿಗೆ ಹೋಗುತ್ತಾನೆ. ಕೇತಯ್ಯನು ಬಿದಿರು ಕಡಿಯಲು ಅದರಿಂದ ಮುತ್ತು ರತ್ನಗಳು ಸುರಿಯಲಾರಂಭಿಸುತ್ತವೆ. ಈ ಬಿದಿರಿಗೆ ಹುಳು ಹಿಡಿದಿದೆ ಎಂದು ಭಾವಿಸಿ ಕೇತಯ್ಯ ಮತ್ತೊಂದು ಮೆಳೆಗೆ ಹೋಗಿ ಬಿದಿರು ಕಡಿಯ ಹತ್ತಿದ. ಅಲ್ಲಿಯೂ ಇದೇರೀತಿಯಲ್ಲಿ ಮುತ್ತು ರತ್ನಗಳು ಸುರಿಯುತ್ತವೆ. ಹೀಗೆ ಹತ್ತಾರು ಮೆಳೆಗಳಲ್ಲಿಯ ಬಿದಿರು ಕಡಿಯಲು ಮುತ್ತು ರತ್ನಗಳು ಸುರಿಯುವುದು ಮುಂದುವರಿಯುತ್ತದೆ. ಕೊನೆಗೆ ಕೇತಯ್ಯ ಬಿದಿರಿನ ತುದಿಯನ್ನು ಹತ್ತಿ ಕಡಿಯ ತೊಡಗಿದ. ಜೋರಾಗಿ ಬೀಸಿದ ಗಾಳಿಯಿಂದಾಗಿಬಿದಿರು ಮುರಿದು ಕೆಳಗೆ ಬಿದ್ದ.ಬೀಳುತ್ತಲೇ ಮುರಿದ ಬಿದಿರು ಕೇತಯ್ಯನ ಬೆನ್ನಲ್ಲಿ ನಾಟಿ ಎದೆಯಲ್ಲಿ ಚಾಚಿಕೊಂಡಿತು. ಆಗ ಕೇತಯ್ಯ ನನ್ನ ನಿತ್ಯ ದಾಸೋಹದ ಕಾಯಕಕ್ಕೆ ಭಂಗವಾಗದಿರಲಿ ಅಲ್ಲಿಯವರೆಗೆ ನನ್ನ ಪ್ರಾಣವನ್ನು ಉಳಿಸು ಇಲ್ಲವಾದಲ್ಲಿ ನಿನಗೆ ಶರಣರಾಣೆ ಎಂದು ಶಿವನಿಗೆ ಆಣೆ ಇಡುತ್ತಾನೆ. ನಾಟಿಬಿದ್ದ ಬಿದಿರನ್ನು ಕತ್ತರಿಸಿ ಒಗೆದು, ಒಂದು ಬಿದಿರು ತೆಗೆದುಕೊಂಡು ಬಂದು ಕಾಯಕ ಮಾಡಿ, ಪೂಜೆ, ದಾಸೋಹ ವನ್ನು ಮಾಡುವನು. ಕೊನೆಗೆ ಹೆಂಡತಿಯನ್ನು ಕರೆದು ಎದೆಯಲ್ಲಿ ನಾಟಿದ ಬಿದಿರನ್ನು ಕೀಳಲು ಹೇಳುತ್ತಾನೆ. ಸಾತೆವ್ವ ಪತಿಯ ಆಜ್ಞೆಯನ್ನು ಪಾಲಿಸಿದಳು. ಕೂಡಲೇ ಕೇತಯ್ಯನ ಪ್ರಾಣಲಿಂಗ ಹಾರಿಹೋಯಿತು. ಈ ಸುದ್ದಿ ಕಲ್ಯಾಣದ ತುಂಬ ಹರಡಿತು. ಶರಣರೆಲ್ಲರೂ ಕೇತಯ್ಯನ ಮನೆಗೆ ಧಾವಿಸಿ ಬಂದರು. ಮಾಚಿದೇವನ ಸವಾಲಿಗೆ, ಬಸವಣ್ಣ ಪ್ರಾಣ ತ್ಯಾಗವನ್ನು ಮಡುತ್ತಾನೆ. ಕೇತಯ್ಯ-ಬಸವರ ಪ್ರಾಣ ಮರಳದಿದ್ದರೆ ಶಿವನನ್ನೇ ಕೈಬಿಡುವುದಾಗಿ ಶರಣರು ಸಾರಿ ನಿಂತರು. ಆಗ ಬಸವಣ್ಣ ಮತ್ತು ಕೇತಯ್ಯನವರ ಪ್ರಾಣ ಮರಳುತ್ತದೆ. ಇದನ್ನು ಕೋಲಾಟಪದದಲ್ಲಿ ದಾವಣಗೇರಿ ಜಿಲ್ಲೆಯ ವಿಠಲಾಪುರದ ಶರಣೆಯರಾದ ಶಾಂತಮ್ಮ ಮತ್ತು ಲಕ್ಷ್ಮೀದೇವಿಯರು ಬಹಳ ಇಂಪಾಗಿ ಹಾಡುತ್ತಾರೆ.

ಮತ್ತೊಂದು ಕಥೆಯಲ್ಲಿ ಕೇತಯ್ಯನ ಪವಾಡದಂತೆ ಒಮ್ಮೆ ಕೇತಯ್ಯ ಬಿದಿರು ಕಡಿಯುವಾಗ ಮುತ್ತು ರತ್ನಗಳು ಸುರಿಯುತ್ತವೆ. ಅವುಗಳನ್ನು ಕ್ರಿಮಿಗಳೆಂದು ಭಾವಿಸಿ, ಹುತ್ತದ ಮೇಲಿರುವ ಬಿದಿರಿಗೆ ಕ್ರಿಮಿಗಳು ಹತ್ತುವುದಿಲ್ಲ ಎಂಬ ಕಾರಣಕ್ಕೆ ಕೇತಯ್ಯ ಹುತ್ತದ ಮೇಲಿರುವ ಬಿದಿರನ್ನು ಕಡಿಯ ಹತ್ತಿದ. ಬಿದಿರು ಕಡಿಯುವಾಗ ಹುತ್ತದೊಳಗೆ ಅನೇಕ ವರ್ಷಗಳಿಂದ ತಪೋ ಮಗ್ನನಾಗಿದ್ದ ಋಷಿಯ ರುಂಡವು ಕತ್ತರಿಸಿ ಹೋಯಿತು. ಕೇತಯ್ಯ ಈ ಪ್ರಾಯಶ್ಚಿತ್ತಕ್ಕೆ ಶಿವನನ್ನು

ನೆನೆಯುತ್ತಾ ರೋದಿಸತೊಡಗಿದ. ಅಲ್ಲಿಯೇ ದೂರದಲ್ಲಿ ಬಿದಿರು ಸವರುತ್ತಿದ್ದ ಸತಿ ಸಾತೆವ್ವ ಕೇತಯ್ಯನ ಕೂಗು ಕೇಳಿ ಧಾವಿಸಿ ಬಂದಳು. ಈ ಪಾಪಕ್ಕೆ ಏನು ಪ್ರಾಯಶ್ಚಿತ್ತ ವೆಂದು ಕೇತಯ್ಯ ಸತಿ ಸಾತೆವ್ವನನ್ನು ಕೇಳಿದ. ಸತಿಶಿರೋಮಣಿ ಸಾತೆವ್ವ ಪ್ರಾಣಕ್ಕೆ ಪ್ರಾಣವೇ ಪ್ರಾಯಶ್ಚಿತ್ತ ಎಂದಳು. ಕೂಡಲೇ ಕೇತಯ್ಯ ತನ್ನ ತಲೆಯನ್ನು ಕತ್ತರಿಸಿಕೊಳ್ಳಲು ಮುಂದಾದನು. ಸಾತೆವ್ವ ಅದನ್ನು ತಡೆದು ನಿಲ್ಲಿಸುತ್ತಾಳೆ. ಪತಿಯ ಪರವಾಗಿ ತಾನು ತನ್ನ ಪ್ರಾಣವನ್ನು ಕೊಡಲು ಸಿದ್ಧಳಾದಳು. ತಕ್ಷಣವೇ ಶಿವಪಾರ್ವತಿಯರು ಪ್ರತ್ಯಕ್ಷವಾಗಿ ಇವರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋದರು. ಹೀಗೆ, ಮೇದಾರ ಕೇತಯ್ಯನ ಬಗ್ಗೆ ಅನೇಕ ಗ್ರಂಥಗಳಲ್ಲಿ ಈತನ ಪವಾಡ ಕುರಿತು ಉಲ್ಲೇಖಿಸಲಾಗಿದೆ. ಕೋಲಾಟದ ಪದದಲ್ಲಿಯಂತೂ ಎರಡುನೂರ ಎಪತ್ತೈದು ನುಡಿಗಳ ಕಥೆಯನ್ನು, ಕಣ್ಮುಂದೆ ಕಟ್ಟುವಂತೆ ಹಾಡುತ್ತಾರೆ. ಕೇತಯ್ಯನ ವಚನಗಳು ಮತ್ತು ಆತನ ಜೀವನವನ್ನು ಕುರಿತಂತೆ, ಅನೇಕ ವಿದ್ವಾಂಸರು ಹೀಗೆ ಅಭಿಪ್ರಾಯ ಪಡುತ್ತಾರೆ.

ತನ್ನ ಜೀವನದ ದಾಸೋಹಕ್ಕಾಗಿ ಕೇತಯ್ಯ ಹರಮುತದ ಹಾಡುಗಳ ಮರದೊಳಗೆ ಹೆಣೆ ಹೆಣೆದು ಕರಡಿಗೆಯ ತುಂಬಿ ಕಲ್ಯಾಣ ಪೇಟೆಯಲ್ಲಿ ಶರಣರಿಗೆ ಮಾರುತ್ತಾನೆ!. ಈ ಶರಣನ ಕರಸ್ಪರ್ಶಕ್ಕಾಗಿ ಕಾತರಿಸುತಿದ್ದವು ಎಂಬಂತೆ "ಅಡವಿಯೊಳ್ ಬಿದಿರು ಬಲು ಬೆಳೆದು ಕೇತಯ್ಯನಿಗೆ ಸಡಗರದಿ ತೂಗಿ ಕರೆವುದು ! "ಸರಿ ತೂಗಿ ಕರೆವ ಬಿದಿರು ತರುವುದು , ಬುಟ್ಟಿ ಹೆಣೆಯುವುದು, ಮಾರಿದಾಸೋಹ ನಡೆಸುವುದು . ಸತ್ಯ ಸತಿ ಸಾತೆವ್ವ ಪತಿಗೆ ತಕ್ಕ ಸತಿ. ಪತಿಗೆ ಕಾಯಕ ಮಾಡಿ ಬೇಸರವಿಲ್ಲ. ಸತಿಗೆ ದಾಸೋಹ ಮಾಡಿ ಬೇಸರವಿಲ್ಲ. ನೂರೊಂದು ಸಾವಿರದ ಭುವಿ ಜಂಗಮರು ಈ ದಾಸೋಹದಲ್ಲಿ ತೃಪ್ತಿ ಪಡುತ್ತಾರೆ. ಕೇತಯ್ಯನ ಕೀರ್ತಿ ಕಲ್ಯಾಣವನ್ನು ತುಂಬಿ ಹೊರಸೂಸಿ ಹರಿಯತೊಡಗುತ್ತದೆ. [7](ಡಾ. ಸಿದ್ದಯ್ಯ ಪುರಾಣಿಕ್.)

ತನ್ನ ಕಾಯಕದಲ್ಲಿಯೇ ಕೈಲಾಸವನ್ನು ಕಂಡ ಶಿವಯೋಗಿ. ಶಿವಯೋಗಿಗಿಂತಲೂ ಕಾಯಕವೇ ಮಿಗಿಲೆಂದು ಸಾರಿದವ. ಕಾಯಕ ದಾಸೋಹಕ್ಕೆ ಮಿಗಿಲಾದ ಸ್ಥಾನವನ್ನು ನೀಡಿದವ. ಆತನ ಕಾಯಕ ನಿಷ್ಠೆಯನ್ನು ಶಿವ ಮೆಚ್ಚಿಕೊಂಡು ಆತನನ್ನು ತಾನು ಸೋತು ಬದುಕಿಸಿದ. ಶಿವನಿಗಿಂತ ಶಿವಶರಣರೇ ಮಿಗಿಲೆಂದು ಹೇಳುವುದು ಇಂತಹ ಉದಾಹರಣೆಗಳಿಂದಲೇ. ಶಿವನಿಗಿಂತಲೂ ಶಿವ ಶರಣರು ಶ್ರೇಷ್ಠಎಂಬುದಕ್ಕೆ ಶರಣ ಮೇದರ ಕೇತಯ್ಯನ ಕಾಯಕನಿಷ್ಠ ಜೀವನವೇ ಸಾಕ್ಷಿ.[7] (ಡಾ. ವ್ಹಿ.ಜಿ.ಪೂಜಾರ್)

ಬಹಿರಂಗದಲ್ಲಿ ಬಿದಿರಿನ ಕಾಯಕ, ಅಂತರಂಗದಲ್ಲಿ ಅರಿವಿನ ಕಾಯಕ,ಬಹಿರಂಗವನ್ನು ಅಂತರಂಗವಲ್ಲಿ ಬೆರೆಸಿ, ಅಂತರಂಗದ ಬೆಳಕಿನಿಂದ ಬಹಿರಂಗವನ್ನು ಬೆಳಸಿ, ಬೆಳಕಿನ ಬದುಕನ್ನು ಬದುಕಿದವ ಮೇದಾರ ಕೇತಯ್ಯ. ಆ ಬೆಳಕಿನಲ್ಲಿಯೇ ಮಡದಿ ಸಾತೆವ್ವೆಯನ್ನು ಮುನ್ನಡಸಿಕೊಂಡು ಹೋದಂತ ಶರಣ ಸಂಸಾರಿಯಾತ. ಸಂಸಾರ ಮಾಡಿ ಸಂಸಾರದಿಂದ ಮೇಲೆದ್ದು ಬಂದ ಶಿವ ಶರಣ ಕೇತಯ್ಯ ಮಜ್ಜಿಗೆಯ ಮೇಲೆ ತೇಲುವ ಬೆಣ್ಣೆಯಾಗಿದ್ದಾನೆ.[7]

(ಬಾಗಿಯಲ್ಲಟ್ಟ ಪುಟ)

12ನೇ ಶತಮಾನದಲ್ಲಿ ಬಸವಾದಿ ಪ್ರಥಮರು ಸಾರಿದ ಕಾಯಕ ತತ್ವವನ್ನು ಎತ್ತಿ ಹಿಡಿದ ಶಿವಶರಣ ಶ್ರೇಷ್ಠರಲ್ಲಿ ಮೇದಾರ ಕೇತಯ್ಯನು ಒಬ್ಬನಾಗಿದ್ದಾನೆ. ಮೇದಾರ ಕೇತಯ್ಯ ಐತಿಹಾಸಿಕ ಚಾರಿತ್ರಿಕ ಶಿವಶರಣನೆಂಬುವುದರಲ್ಲಿ ಸಂದೇಹವಿಲ್ಲ.[7] (ಪ್ರೊ: ಎಸ್. ಎಸ್. ಭೂಸರಡ್ಡಿ.)

ಈ ರೀತಿಯಾಗಿ ಅನೇಕ ವಿದ್ವಾಂಸರು ಮೇದಾರ ಕೇತಯ್ಯನ ಕುರಿತು ಹೇಳಿದ್ದಾರೆ. ಮೇದಾರ ಕೇತಯ್ಯನು ತನ್ನ ವಚನಗಳಲ್ಲಿ ಮನುಷ್ಯ ಜೀವ ಶಾಶ್ವತವಲ್ಲ, ಅವನು ಅನುಸರಿಸುವ ಆದರ್ಶ ಶಾಶ್ವತ. ಆದರ್ಶದಲ್ಲಿ ಮಾನವೀಯತೆ ಇದೆ. ತಾತ್ವಿಕವಾದ ಹಿನ್ನೆಲೆ ಇದೆ. ಜೀವನದ ಮೌಲ್ಯವನ್ನು ಎತ್ತಿ ಹಿಡಿಯಲು ಮೇದಾರ ಕೇತಯ್ಯನವರು ಯತ್ನವನ್ನು ಮಾಡಿದ್ದಾರೆ. ತಮ್ಮ ಬದುಕಿಗೊಂದು ನಿರ್ದಿಷ್ಟವಾದ ಗುರಿಗಮನವನ್ನು ಕಂಡುಕೊಂಡು ತಮ್ಮ ಕಾಯಕದ ಮೂಲಕ ಆದರ್ಶಜೀವನವನ್ನು ನಡೆಸಿದರು. ವ್ಯಕ್ತಿ ಮತ್ತು ಸಮಾಜದ ಉದ್ಧಾರ ಕಾಯಕದಿಂದ ಮಾತ್ರ ಸಾಧ್ಯವೆಂಬುದನ್ನು ಅರಿತು ಅದನ್ನು ನಿಷ್ಠೆಯಿಂದ ನಡೆಸಿದ ನಿಜ ಶರಣರಾಗಿದ್ದಾರೆ ಎಂದು ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಸ್ವಾಮೀಜಿ ಚಿತ್ರದುರ್ಗ ಇವರು ನುಡಿದಿದ್ದಾರೆ.

3.6.2 ಮೇದಾರ ಚನ್ನಯ್ಯ:

ಮೇದಾರ ಚನ್ನಯ್ಯ ಈ ಸಮುದಾಯದ ಮತ್ತೊಬ್ಬ ವೀರ ಪುರುಷ. ಮೇದಾರ ಚನ್ನಯ್ಯ ತನ್ನ ಕಾಯಕದಿಂದ ಸಂಪಾದಿಸಿದ ಒಂದಿಷ್ಟು ಅಕ್ಕಿಯಿಂದ ಅನ್ನ ಮಾಡುತ್ತಿದ್ದ. ಬಂದ ಶಿವ ಶರಣರಿಗೆ ಮತ್ತು ದೀನ-ದಲಿತರಿಗೆ ಊಟಕ್ಕೆ ಹಾಕುತ್ತಿದ್ದ. ಹೀಗಿರುವಾಗ ಒಂದು ದಿವಸ ಪ್ರಸಾದವನ್ನು ತಯಾರಿಸಿ ಹೊರಗೆ ಬಂದು ನೋಡಲು, ದಾಸೋಹಕ್ಕೆ ಮನೆಯ ಹೊರಗೆ ಸಾವಿರಾರು ಜನ ನೆರದಿದ್ದರು. ಇದರಿಂದ ಭಯಗೊಂಡ ಮೇದಾರ ಚನ್ನಯ್ಯ ಸಕಲವೂ ಶಿವನಿಗೆ ಅರ್ಪಿತವಾಗಲಿ, ನನ್ನ ಜಯಾಪಜಯ ಕೀರ್ತಿ ನಿಂದನೆಗಳೆಲ್ಲಾ ನಿನಗೇ ಅರ್ಪಿತ ಎಂದು ಶಿವನಿಗೆ ಸಾಷ್ಟಾಂಗ ಹಾಕಿದ. ಇದ್ದ ಒಂದು ಮಡಿಕೆಯ ಅನ್ನವನ್ನು ಎಡೆ ಮಾಡಿದ. ಅಷ್ಟರಲ್ಲಿಯೇ ಬಂದ ಅತಿಥಿಗಳಿಗೆಲ್ಲಾ ಪ್ರಸಾದಕ್ಕೆ ದಾರಿಯಾಗಲಿ ಎಂದು ಬೇಡಿಕೊಂಡ. ಸ್ವಲ್ಪ - ಸ್ವಲ್ಪ ಜನರನ್ನೇ ಪ್ರಸಾದಕ್ಕೆ ಕರೆದು ಬಡಿಸಿದ. ಪವಾಡದ ಸದೃಶ್ಯವೆಂಬಂತೆ ಸಾವಿರಾರು ಜನು ಊಟ ಮಾಡಿಯೂ ಒಂದಿಷ್ಟು ಅನ್ನ ಉಳಿಯಿತು. ಇಂತಹ ಮಹಾಪುರುಷರು ದೇವರಲ್ಲಿ ಇರಿಸಿದ್ದ ಪೂರ್ಣಾರ್ಪಿತ ಭಾವನೆಯ ಭಕ್ತಿ ಇಂತಹ ಪವಾಡಗಳಿಗೆ ಶಕ್ತಿಯಾಗುತ್ತವೆ.ಯಾವುದೇ ಕಾಲದಲ್ಲಿಯ ಮಾನವನ ನಂಬಿಕೆ ಮತ್ತು ಶ್ರದ್ಧೆಯಿಂದ ಅಲ್ಪದರಿಂದಲೇ ಅಮೋಘವನ್ನು ಸಾಧಿಸ ಬಹುದು ಎನ್ನುವ ನುಡಿ ಸತ್ಯವಾಗುತ್ತದೆ.

3.6.3 ಮೇದಾರ ತೋಡಯ್ಯ:

ಮೇದಾರ ತೋಡಯ್ಯ ಮೇದಾರ ಚನ್ನಯ್ಯನ ಮೊಮ್ಮಗ. ಈತ ಕಾಯಕದ ಶ್ರೇಷ್ಠತೆಯನ್ನು ಮತ್ತು ಮಡಿವಂತಿಕೆಯ ಪಾವಿತ್ರತೆಯನ್ನು ಮೆರಸಿದನು. ತೋಡಯ್ಯ ಬದಿರಿನಿಂದ ಮರದ ಬುಟ್ಟಿಯನ್ನು ಹೆಣೆಯುವ ಮುನ್ನ

ಮತ್ತು ನಂತರ, ದಿನಕ್ಕೆ ಮೂರು ಬಾರಿ ಸ್ನಾನ ಮಾಡಿ ದೇವರನ್ನು ಪೂಜಿಸಿ, ಕಾಯಕ ಮಾಡುತ್ತಿದ್ದ. ಆ ಕಾಲದಲ್ಲಿ ಜನರ ಯಾವುದೇ ಸಾಮಾಜಿಕ ಮತ್ತು ಭೌತಿಕೆ ಸಮಸ್ಯೆಗಳಿಗೆ ಸಲಹೆ ಮತ್ತು ಚಿಕಿತ್ಸೆ ನೀಡುತ್ತಿದ್ದ. ತೋಡಯ್ಯ ಅಂದಿನ ಧನ್ವಂತರಿಯಾಗಿದ್ದ. ಒಮ್ಮೆ ಭಯಂಕರ ಕುಷ್ಟರೋಗದಿಂದ ನರಳುತ್ತಿದ್ದ ಒಬ್ಬ ಬ್ರಾಹ್ಮಣ ಕಳೆದು ಹೋದ ತನ್ನ ಕರುವನ್ನು ಹುಡುಕುತ್ತಾ ಬಂದ. ಆಕಸ್ಮಾತ್ತಾಗಿ ತೋಡಯ್ಯ ಸ್ನಾನಮಾಡಿ ನೀರು ತುಂಬಿದ ಬಚ್ಚಲು ಗುಂಡಿಯಲ್ಲಿ ಬಿದ್ದು ಬಿಟ್ಟ. ಮಾರನೆಯ ದಿನದಿಂದ ಆತನ ಕುಷ್ಟರೋಗವೆಲ್ಲ ಕಡಿಮೆಯಾಗುತ್ತಾ ಸಂಪೂರ್ಣವಾಗಿ ವಾಸಿಯಾಯಿತಂತೆ. ಅಂದಿನಿಂದ ತೋಡಯ್ಯ ಸ್ನಾನ ಮಾಡಿ ನಿಂತ ಬಚ್ಚಲಗುಂಡಿಯ ನೀರು ಅನೇಕ ಚರ್ಮ ರೋಗಗಳ ಚಿಕಿತ್ಸೆಗೆ ಔಷಧಿಯಾಯಿತು. ಈಗಲೂ ಸಹ ಮೇದರು ಕೆಲವು ಪ್ರದೇಶಗಳಲ್ಲಿ ಚರ್ಮ ರೋಗಕ್ಕೆ ತೋಡಯ್ಯನ ಹೆಸರಿನಲ್ಲಿ ದೇವರು ಮೈ ತೊಳೆದ ನೀರನ್ನು ಲೇಪಿಸಿಕೊಳ್ಳುತ್ತಾರೆ.

3.6.4 ಮುತ್ತು ಶಂಕರ ಮೇದ:

ಮೇದರಲ್ಲಿ ಇನ್ನೊಬ್ಬ ಮಹಾ ಪುರುಷನೆಂದರೆ, ಮುತ್ತು ಶಂಕರ ಮೇದ. ಈತ ಮೇದರ ಕುಲ ಕಸುಬನ್ನೇ ಆಶ್ರಯಿಸಿ ಬದುಕುತ್ತಿದ್ದ. ಈತನನ್ನು ಕಡು ಬಡತನ ಕಿತ್ತು ತಿನ್ನುತ್ತಿತ್ತು. ಮನೆಯಲ್ಲಿ ಗರ್ಭವತಿಯಾದ ಹೆಂಡತಿ ಬೇರೆ ಭಾರ ಈತನಿಗೆ. ಈತನಿಗೆ ಸಹಾಯ ಮಾಡಲೆಂದು ಶಿವನು ಇವನು ಕಡಿಯಲು ಹೊರಟ ಬಿದಿರಿನಲ್ಲಿ ವಜ್ರವನ್ನು ಸುರಿಸುತ್ತಾನೆ. ಇವುಗಳನ್ನು ಮುಟ್ಟದೇ ಮೇದನು ಮುಂದೆ ಹೊಗುತ್ತಾನೆ. ನಿನ್ನ ಮಾತನ್ನು ಕೇಳಿ ಅವನಿಗೆ ಸಹಾಯ ಮಾಡಲು ಹೋದ ನನಗೆ ಅಪಮಾನವಾಯಿತು ನೋಡು ಎಂದು ಶಿವನು ಪಾರ್ವತಿಗೆ ಕೋಪದಿಂದ ನುಡಿದನು. ಇನ್ನು ಮುಂದೆ ಇವರು ಕಡಿಯುವ ಬಿದಿರಿನಲ್ಲಿ ಉಳಗಳು ಸೇರಿಕೊಳ್ಳಲಿ ಎಂದು ಶಾಪ ಕೊಟ್ಟನು. ಪಾರ್ವತಿಯ ಪ್ರಾರ್ಥನೆಯಂತೆ ಮತ್ತೆ ಶಾಪ ವಿಮೋಚನೆಗೆ ಆ ಹುಳುಗಳು ಉಪ್ಪಾಗಲಿ ಮುಂದೆ ಆ ಬಿದಿರು ಬಿದಿರಕ್ಕಿ ಬಿಡಲಿ ಇವೆರಡೂ ಮೇದರಿಗೆ ಊಟಕ್ಕೆ ಲಭ್ಯವಾಗಲಿ ಎಂದು ಮರು ಶಾಪ ಕೊಡುತ್ತಾನೆ. ಈಗಲೂ ಕೆಲವು ಪ್ರದೇಶದಲ್ಲಿ ಮೇದರು ಬಿದಿರಕ್ಕಿ ಮತ್ತು ಬಿದಿರುಪ್ಪನ್ನು ಬಳಸುತ್ತಾರೆ.

3.6.5 ಹನುಮಯ್ಯ ಸ್ವಾಮೀಜಿಯವರು:

ಕೇತೇಶ್ವರ (ಹನುಮಯ್ಯ) ಸ್ವಾಮೀಜಿಯವರು ಚಿತ್ರ ದುರ್ಗಜಿಲ್ಲೆಯ ಸೊಲ್ಲಾಪುರ ಗ್ರಾಮದ ಮೇದರ ಕವರೆಪ್ಪ ಮತ್ತು ಮರಿಯಮ್ಮನವರ ಗರ್ಭದಲ್ಲಿ ಚೈತ್ರಶುದ್ಧ ಪಾಡ್ಯದಂದು ಜನಿಸಿದರು. ಇವರಿಗೆ ಹನುಮಂತಯ್ಯ ನೆಂದು ನಾಮಕರಣ ಮಾಡಿದರು. ಇವರು ಬಾಲ್ಯದಲ್ಲಿ ಹೆಚ್ಚಿನ ವಿದ್ಯಯನ್ನು ಕಲಿಯಲಿಲ್ಲ ತಂದೆ ತಾಯಿಯರೊಂದಿಗೆ ಕುಲಕಸುಬನ್ನೆ ಮಾಡುತ್ತಾ, ದನಕಾಯುತ್ತಿದ್ದರು. ಹೀಗಿರಲು ಒಮ್ಮೆ ಇವರ ಕನಸಿನಲ್ಲಿ ಗುರುಗಳು ದರ್ಶನ ಕೊಟ್ಟು ಮೈಸೂರಿನ ಹತ್ತಿರವಿರುವ ದೇವನೂರು ಮಠಕ್ಕೆ ಬರುವಂತೆ ಅಪ್ಪಣೆ ಮಾಡಿದರು. ಹನುಮಂತಪ್ಪನವರು ಗುರುಗಳ ಅಪ್ಪಣೆಯಂತೆ ಮೈಸೂರಿನ ಮಲ್ಲೇಶ್ವರ ಮಠಕ್ಕೆ ಬಂದರು. ಅಲ್ಲಿ ಕೆಲವು ದಿನಗಳ ಕಾಲ ಮಲ್ಲೇಶ್ವರ ಮಹಾಸ್ವಾಮಿಗಳ

ಸೇವೆಯನ್ನು ಮಾಡಿ, ಗುರುಗಳಿಂದ ಲಿಂಗ ಧೀಕ್ಷೆಯನ್ನು ಪಡೆದರು. ಗುರುವಿನ ಅಪ್ಪಣೆಯಂತೆ ಮೇದರ ಸಮುದಾಯದವರನ್ನು ಸನ್ಮಾರ್ಗದಲ್ಲಿ ನಡೆಸಲು ಅವರಿಗೆ ಸಂಸ್ಕಾರ ಕೊಡುತ್ತಾ ಸಂಚಾರ ಹೊರಟರು. ಅಲ್ಲಿಂದ ಶ್ರೀವಿರುಪಾಕ್ಷ ಒಡೆಯರ ಸನ್ನಿಧಾನದಲ್ಲಿ ಶ್ರೀಗಳವರಿಂದ ಬ್ರಹ್ಮೋಪದೇಶವನ್ನು ಪಡೆದು, ಗುರು ಕೇತೇಶ್ವರ ಸ್ವಾಮೀಜಿ ಎಂದು ನಾಮಾಂಕಿತ ಗೊಂಡರು.

ಗುರುವಿನಿಂದ ಮುದ್ರಿಕೆಯ ಪದಕ ಮತ್ತು ಬೆತ್ತದ ದಂಡವನ್ನು ಪಡೆದು ಮೇದರ ಕುಲ ಗುರುವಾಗಿ ಮೇದ ಸಮುದಾಯದ ಸಕಲ ಉದ್ಧಾರಕ್ಕಾಗಿ ದುಡಿಯಲು ಪಣತೊಟ್ಟು ಹೊರಟರು. ಈ ಸಂದರ್ಭದಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಠದ ಸ್ವಾಮಿಗಳಾದ ಶ್ರೀ ಕೆಂಪಯ್ಯ ಸ್ವಾಮಿಗಳು ಇವರಿಗೆ ಹುಬ್ಬಳ್ಳಿಯಲ್ಲಿ ಮಠ ಕಟ್ಟಿಕೊಂಡು ಇರಲು ನಿವೇಶನ ವ್ಯವಸ್ಥೆ ಮಾಡಿದರು. 1932ರಲ್ಲಿ ಹುಬ್ಬಳ್ಳಿಯ ಮೇದರ ಓಣಿಯಲ್ಲಿ ಮೇದರ ಸಹಕಾರ ದಿಂದ ಒಂದು ಮಠವನ್ನು ಕಟ್ಟಿಸಿದರು. 1936ರಲ್ಲಿ ಸ್ವಾಮಿಜಿಯವರು ಮೇದರ ಹುಡುಗನಾದ ಎಂಟು ವರ್ಷದ ಶಾಂತಪ್ಪ ಎನ್ನುವ ಬಾಲಕನನ್ನು ಗುರುಗಳ ಸೇವೆಗಾಗಿ ಮಠದಲ್ಲಿ ಇಟ್ಟು ಕೊಂಡರು. ಅಲ್ಲಿಂದ ಪ್ರತಿವರ್ಷ ಶಿವರಾತ್ರಿ, ವಿಜಯದಶಮಿ, ಹಾಗೂ ಬಸವಜಯಂತಿ ಮುಂತಾದ ಸಂದರ್ಭಗಳಲ್ಲಿ ಅನೇಕ ವಿಧವಾದ ಧಾರ್ಮಿಕ ಕಾರ್ಯಕ್ರಮವನ್ನು ಮಾಡತೊಡಗಿದರು. 1970 ರಲ್ಲಿ ಹುಬ್ಬಳ್ಳಿ ತಾಲೂಕಿನ ಒಂದು ಗ್ರಾಮದಲ್ಲಿ ಬ್ರಹ್ಮ ರಾಕ್ಷಸನ ಹಾವಳಿ ಹೆಚ್ಚಾಗಿರಲು ಗುರುಗಳು ಅಲ್ಲಿ ಅನುಷ್ಠಾನ ಮಾಡಿ ಜನರನ್ನು ರಾಕ್ಷಸನ ಕಾಟದಿಂದ ರಕ್ಷಿಸಿದರು. ಕೇತೇಶ್ವರ (ಹನುಮಂತಯ್ಯ) ಈ ಸಮುದಾಯದ ಜನರಿಗೆ ಗುರುವಾಗಿ, ಭವರೋಗ ವೈದ್ಯರಾಗಿ ಇವರನ್ನು ರಕ್ಷಿಸಿ ಕಾಪಾಡತೊಡಗಿದರು. ಎಲ್ಲೆಡೆ ಸಮುದಾಯದ ಅನೇಕ ಧಾರ್ಮಿಕ ಕಾರ್ಯ ಕ್ರಮಗಳನ್ನು ನಡೆಸಿ ಅವುಗಳಲ್ಲಿ ಭಾಗಿಯಾದರು. ಶ್ರೀಗಳವರು 1988ರ ಡಿಸೆಂಬರ್ ತಿಂಗಳಲ್ಲಿ ಲಿಂಗೈಕ್ಯರಾದರು. ಅಲ್ಲಿ ಗುರುಗಳ ಗದ್ದಿಗೆಯನ್ನು ನಿರ್ಮಿಸಲಗಿದೆ. 1999 ಮಠದ ಶಂಕುಸ್ಥಾಪನೆಯನ್ನು ಮಾಡಲಾಯಿತು. ಗುರುಗಳು ಲಿಂಗೈಕ್ಯರಾದ ನಂತರ ಅವರ ರೂಪದಲ್ಲಿಯೇ ಹಲವಾರುಕಡೆ ಜನರಿಗೆ ದರ್ಶನವನ್ನು ನೀಡಿದರು. ಈಗಲೂ ಸಹ ಹುಬ್ಬಳ್ಳಿಯಲ್ಲಿರುವ ಕೇತೇಶ್ವರರ ಗದ್ದುಗೆಗೆ ಜನರು ಭಕ್ತಿಯಿಂದ ನಡೆದು ಕೊಳ್ಳುತ್ತಾರೆ. ಅಲ್ಲಿಯ ಮಠಕ್ಕೆ ಸಮುದಾಯದ ಜನರು ಹೋಗಿ ಬರುತ್ತಾರೆ.(ವಕ್ತೃಗಳು : ಪ್ರೊ: ಬಿ.ಆರ್.ಸುರಪುರ ಗುಲ್ಬರ್ಗ. ವೈ.ಕೆ.ಹಳೆಪೇಟೆ,ಹುಬ್ಬಳ್ಳಿ, ಹುಲುಗಪ್ಪ ಮ್ಯಾದಾರ ಹೊಸಪೇಟೆ, ಮೇದರ ರಾಮಣ್ಣ ಹ.ಬೊ.ಹಳ್ಳಿ, ಮೇದರ ಹನುಮಂತಪ್ಪ ಹಡಗಲಿ. ಚಂದ್ರಮ್ಮ ಹೊಳಲು)

ಅಡಿಟಿಪ್ಪಣಿಗಳು :

1. ಡಾ. ಹೆಚ್.ಜೆ. ಲಕ್ಕಪ್ಪಗೌಡ. ಕರ್ನಾಟಕ ಬುಡಕಟ್ಟುಗಳು ಸಂಪುಟ ಎರಡು.ಪುಟ. 2.ಮತ್ತು 5. ಕಾರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು . 1998.
2. ಡಾ .ನಂ. ತಪಸ್ವಿಕುಮಾರ್ . ಸಂಸ್ಕೃತಿ ವಿಕಾಸ. ಪುಟ. 150. ಚೇತನಬುಕ್‌ಹೌಸ್, ಅಂಜನಾದ್ರಿ, ಮೈಸೂರು - 2000
3. ಡಾ. ಹೆಚ್.ಜೆ. ಲಕ್ಕಪ್ಪಗೌಡ. ಕರ್ನಾಟಕ ಬುಡಕಟ್ಟುಗಳು ಸಂಪುಟ ಎರಡು.ಪುಟ. 7. ಕಾರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಬೆಂಗಳೂರು.
4. ಡಾ. ಕೆ. ಕೇಶವನ್‌ಪ್ರಸಾದ್. ಕೊಳ್ಳೇಗಾಲ ಸುತ್ತಿನ ಜನಪದ ಊಟೋಪಚಾರಗಳು ಒಂದು ಅಧ್ಯಯನ. ಪುಟ. 162. ಪಿ ಎಚ್.ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ನಿಬಂಧ.
5. ಡಾ. ಹಿ. ಚಿ . ಬೋರಲಿಂಗಯ್ಯ. ಬುಡಕಟ್ಟುದೈವಾರಾಧನೆ. ಪುಟ. 10,11 ನಿರ್ದೇಶಕರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ - ಹಂಪಿ -2000.
6. ಡಾ.ಕೆ. ಕೇಶವನ್‌ಪ್ರಸಾದ್. ಕೊಳ್ಳೇಗಾಲ ಸುತ್ತಿನ ಜನಪದ ಊಟೋಪಚಾರಗಳು ಒಂದು ಅಧ್ಯಯನ. ಪುಟ. 80. ಪಿ ಎಚ್.ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ನಿಬಂಧ.
7. ಗೌರವ ಶಿವಶರಣ ಮೇದಾರ ಕೇತಯ್ಯ ಸ್ಮಾರಕ ಸಂಪುಟ. ಪುಟ: 9,19,28,27. ಸಂಪಾದಕರು : ಭೀಮಣ್ಣ ಬೊನ್ಹಾಳ್. ಗುಲ್ಬರ್ಗ.

ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ



1. ಮಲೆಮ್ಮ ಚೌಡಮ್ಮದೇವಿಯರ ಬಿದಿರಿನ ಮಂಟಪ



2. ಕತ್ತಿಯ ಪೂಜೆ



3. ಕುಲದೇವತೆಯ ಹಬ್ಬದಲ್ಲಿ ಮೇದರು



4. ಓಂಕಾರೇಶ್ವರ ಉತ್ಸವ ಮೂರ್ತಿ

ಭಾಗ : ಎರಡು. ವಾಣಿಜ್ಯ ಅಧ್ಯಯನ

ಅಧ್ಯಾಯ - ನಾಲ್ಕು

ಮೇದರ ಕುಲಕಸುಬು ಮತ್ತು ವಾಣಿಜ್ಯದ ಸ್ವರೂಪ

4.1 ಕುಲಕಸುಬು (ಬುಡಕಟ್ಟು ಕೈಗಾರಿಕೆ)

4.2 ತಯಾರಿಸುವ ವಸ್ತುಗಳ ವೈಶಿಷ್ಟತೆ

4.3 ಬಿದಿರು

4.4 ವಾಣಿಜ್ಯ

4.5 ಮೇದರ ಬುಡಕಟ್ಟು ವಾಣಿಜ್ಯ ಭಾಷೆ

4.1 ಕುಲಕಸುಬು (ಬುಡಕಟ್ಟು ಕೈಗಾರಿಕೆ)

4.1.1 ಪ್ರವೇಶಿಕೆ:

ಮಾನವ ತನ್ನ ಉಪಜೀವನಕ್ಕಾಗಿ ಒಂದಿಲ್ಲೊಂದು ಆರ್ಥಿಕ ಚಟುವಟಿಕೆಯಲ್ಲಿ ತೊಡಗಿರುವುದು ಅನಿವಾರ್ಯ. ಪ್ರಾಚೀನ ಕಾಲದಲ್ಲಿ ಆಹಾರ ಒಂದೇ ಇವನ ಪ್ರಮುಖ ಬಯಕೆಯಾಗಿತ್ತು. ಆ ಕಾಲದಲ್ಲಿ ಆಹಾರ ಸಂಗ್ರಹಣೆಯೇ ಮಾನವನ ಪ್ರಮುಖವಾದ ಚಟುವಟಿಕೆ. ಕಾಲಾಂತರದಲ್ಲಿ ಬಯಕೆಗಳು ಮಾನವನ ಬದುಕಿನ ಸ್ಥಿತಿ ಮತ್ತು ದಿಕ್ಕನ್ನು ಬದಲಿಸಿದವು. ಹೀಗಾಗಿ ಈತನು ಬದುಕಿಗೊಂದು ನೆಲೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ. ಈ ಪ್ರಯತ್ನ ಮಾನವನನ್ನು ಒಂದು ನಿರ್ದಿಷ್ಟ ಚಟುವಟಿಕೆಯಲ್ಲಿ ತೊಡಗುವಂತೆ ಪ್ರಚೋದಿಸಿತು. ಇದಕ್ಕೆ ತಾನು ನಂಬಿದ ದೇವರು, ದೈವ, ಸೃಷ್ಟಿಪುರಾಣಗಳು ರಕ್ಷೆಯಾಗಿ ನಿಂತು ಪುಷ್ಟಿಕೊಟ್ಟವು. ತಾನು ಆಶ್ರಯಿಸಿದ ಕಸುಬನ್ನು ತನ್ನದಾಗಿಸಿಕೊಂಡು ಅದರೊಡನೆ ತನ್ನ ಭೌತಿಕ ಮತ್ತು ಭಾವನಾತ್ಮಕ ಸಂಬಂಧವನ್ನು ಬೆಳಸಿ ಉಳಿಸಿಕೊಂಡುಬಂದ. ಈತನ ನಂಬಿಕೆಗಳು ಕಸುಬಿನ ಜೊತೆಗೆ ಕಟ್ಟಿಹಾಕಿದವು. ತಾನು ಆಶ್ರಯಿಸಿದ ಕಸುಬೇ, ತನಗೆ ರಕ್ಷೆ, ಸುರಕ್ಷೆ ಮತ್ತು ಅದರಿಂದಲೇ ತನಗೆ ಸಾಕ್ಷಾತ್ಕಾರವೆಂದು ನಂಬಿ ನಂಬಿಸಿದ. ಇಂತಹ ಕಸುಬುಗಳು ಕುಲ ಆಧಾರಿತ ಕಸುಬುಗಳಾಗಿದ್ದವು. ಅಂದರೆ, ಇಂತಹುದೇ ಕಸುಬನ್ನು ಮಾಡಲು ತಮ್ಮಪೂರ್ವಜರು ಭೂಮಿಯ ಮೇಲೆ ಜನ್ಮತಾಳಿದರು ಎಂಬ ಪುರಾಣಗಳು ಇವರ ನಂಬಿಕೆಗೆ ಮೌಲ್ಯಗಳನ್ನು ಒದಗಿಸುತ್ತವೆ. ಹಾಗಾಗಿ ಇವರು ತಮ್ಮ ಕುಲಕಸುಬಿನ ಬಗ್ಗೆ ಅನನ್ಯತೆಯನ್ನು ಮೆರೆಸುತ್ತಾರೆ.

4.1.2 ಬುಡಕಟ್ಟು ಕೈಗಾರಿಕೆ:

ಅನೇಕ ಬುಡಕಟ್ಟು ಕುಲಕಸುಬುದಾರರು ಮೂಲತಃ ಕಾಡನ್ನೇ ನಂಬಿದವರು. ಬದಲಾದ ಸರಕಾರದ ಅರಣ್ಯನೀತಿಯು ಈ ಜನರನ್ನು ಕೆಲವುಕಡೆ ಉಯಿಲೆಬ್ಬಿಸಿತು. ವಿಚಲಿತಗೊಂಡ ಕೆಲವು ಬುಡಕಟ್ಟಿಗರು ಕಾಡುಬಿಟ್ಟು ನಾಡು, ಕಾಡು ನಾಡುಗಳ ಮಧ್ಯೆ, ಕಾಡಂಚಿನಲ್ಲಿ ನೆಲೆಸಿದರು. ಕೆಲವರು ತಮ್ಮ ಮೂಲ ಕುಲಕಸುಬಿಗೆ ವಿರಾಮ ಹೇಳಿ, ಕೃಷಿ, ಕೃಷಿಕೂಲಿ, ಗಣಿಕೂಲಿ, ಮತ್ತು ಪಶುಪಾಲನೆಯಲ್ಲಿ ಮುಂದುವರಿದರು. ಆದರೆ, ಮೇದರಂತಹ ಕೆಲವು ಬುಡಕಟ್ಟಿಗರು ತಮ್ಮ ಕುಲಕಸುಬನ್ನೇ ಆಶ್ರಯಿಸಿಕೊಂಡು ಬದುಕುತ್ತಿರುವುದು ಸೋಜಿಗ. ಪ್ರಸ್ತುತ ನಗರೀಕರಣ, ಜಾಗತೀಕರಣ, ಪಾಶ್ಚಾತ್ಯೀಕರಣದಂತಹ ಆಧುನಿಕ ತಾಂತ್ರಿಕ ಯುಗದಲ್ಲಿ, ಇವರು ತಮ್ಮ ಕುಲಕಸುಬಿನೊಂದಿಗೆ ಮುಂದುವರೆದಿರುವುದಕ್ಕೆ ಬಲವಾದಕಾರಣ ಇರಲೇಬೇಕು. ಈ ಸಂದರ್ಭದಲ್ಲಿ ಇವರು ಆಧುನಿಕತೆಗೆ ಮುಖಾಮುಖಿಯಾದಾಗ ಇವರು ಎದುರಿಸುವ ಸಮಸ್ಯೆ, ಕಂಡುಕೊಂಡ ಪರಿಹಾರಗಳು ಮತ್ತು ಇವರ ಮುಂದಿನ ನಿರೀಕ್ಷೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಈ ಅಧ್ಯಯನದ್ದಾಗಿದೆ.

ಕಾಲಾಂತರದಲ್ಲಿ ನಗರವಾಸಿಗಳಾದ ಮೇದ ಬುಡಕಟ್ಟು ಸಮುದಾಯದವರು ಇಂದಿಗೂ ಸಹ ತಮ್ಮ ಕುಲಕಸುಬನ್ನೇ ಆಶ್ರಯಿಸಿರುವುದು ಖಚಿತ. ಮೇದರು ಆಶ್ರಯಿಸಿರುವ ಬಿದಿರಿನ ಕುಲಕಸುಬನ್ನು ಕೆಲವು ಪ್ರದೇಶಗಳಲ್ಲಿ ಇತರೆ ಸಮುದಾಯದವರು ಮಾಡುತ್ತಿದ್ದರೂ ಸಹ ಈ ಸಮುದಾಯದ ಬಹುತೇಕ ಕುಟುಂಬಗಳು ಕುಲಕಸುಬನ್ನೇ ಆಶ್ರಯಿಸಿರುವುದು ಇವರ ಅನನ್ಯತೆ. ನನ್ನ ಅಧ್ಯಯನದ ಭೌಗೋಳಿಕ ವ್ಯಾಪ್ತಿಯಾದ ಬಳ್ಳಾರಿ ಜಿಲ್ಲೆಯ 3036ಜನರ ಪೈಕಿ 46 ಜನರುನೌಕರಿಯಲ್ಲಿದ್ದು 323 ಜನರು ಇತರೆ ಕೆಲಸದಲ್ಲಿ ತೊಡಗಿದ್ದರೆ, 792 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಐದುವರ್ಷದೊಳಗಿನ ಮಕ್ಕಳು 318 ಇರುವರು. ಉಳಿದ 1557 ಜನ ಕುಲಕಸುಬನ್ನೇ ಆಶ್ರಯಿಸಿರುವುದು ಕಂಡುಬರುತ್ತದೆ. ಅಂದರೆ ಶೇಕಡಾ 80.84% ರಷ್ಟು ಜನ ಕುಲಕಸಬನ್ನೇ ಆಶ್ರಯಿಸಿರುವರು. (ಒಟ್ಟು 3036-792-318=1926.ಇದರಲ್ಲಿ 1557ಜನ ಕುಲಕಸುಬು ನಿರತರಾಗಿರುವರು 1557. ಉಳಿದ 369 ಜನ ನೌಕರಿ ಮತ್ತು ಇತರೆ ಕೆಲಸದಲ್ಲಿ ತೊಡಗಿರುವರು). ವಿಶೇಷವಾಗಿ ಮಹಿಳೆಯರು ಕುಲಕಸುಬನ್ನು ಬಿಟ್ಟರೆ ಬೇರೆ ಕೆಲಸಕ್ಕೆ ಹೋಗುವುದು ವಿರಳ. ನನ್ನ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಈಕುರಿತು ಮಾಹಿತಿಯನ್ನು ಅಂಕಿ ಅಂಶಗಳ ಸಮೇತ ಮುಂದಿನ ಪುಟದ ಕೋಷ್ಟಕದಲ್ಲಿ ಹೇಳಿದ್ದೇನೆ. ವಿವಿಧ ನಮೂನೆಯ ಕೋಷ್ಟಕಗಳನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ಹೇಳಿದೆ. ಮಹಿಳೆಯರು, ಮಕ್ಕಳು, ವಯೋವೃದ್ಧರು, ಅಂಗವಿಕಲರಾದಿಯಾಗಿ ತಮ್ಮ ಯೋಗ್ಯತೆಗೆ ತಕ್ಕಂತೆ ಕುಲಕಸುಬಿನಲ್ಲಿ ತೊಡಗಿರುತ್ತಾರೆ. ಈ ಸಮುದಾಯದ ಅನೇಕ ವಿದ್ಯಾವಂತರು, ನೌಕರರು, ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳು ತಮ್ಮ ಕುಲಕಸುಬು ಮಾಡುವುದು ತಮಗೆ ಹೆಮ್ಮೆ ಎನಿಸುತ್ತದೆ ಎನ್ನುವುದು ಸತ್ಯಸಂಗತಿ. ಇವರು ಕುಲಕಸುಬಿನಿಂದ ತಯಾರಿಸುವ ವಸ್ತುಗಳ ಉತ್ಪಾದನೆ ಮತ್ತು ಮಾರಾಟದ ಸಮಸ್ಯೆಯನ್ನು ಪ್ರತ್ಯೇಕವಾಗಿಯೇ ಹೇಳಲಾಗಿದೆ.

ಬಳ್ಳಾರಿಜಿಲ್ಲೆಯಂತಹ ಬಯಲುಸೀಮೆ ಪ್ರದೇಶದಲ್ಲಿ ಸಹ ಈ ಸಮುದಾಯದವರು ಕುಲಕಸುಬನ್ನೇ ಆಶ್ರಯಿಸಿರುವ ಇವರ ಅನಿವಾರ್ಯತೆ. ಈ ಅಧ್ಯಾಯದಲ್ಲಿ ಮೇದರು ತಯಾರಿಸುವ ವಿವಿಧ ವಸ್ತುಗಳು ಮತ್ತು ಅವುಗಳ ಪ್ರಾಮುಖ್ಯತೆಯನ್ನು ಕುರಿತು ಇಲ್ಲಿ ನಾನು ಹೇಳುವುದು ಉಚಿತ ವೆನಿಸುತ್ತದೆ. ಏಕೆಂದರೆ ಇವರು ಬಿದಿರಿನಿಂದ ತಯಾರಿಸುವ ಅನೇಕ ವಸ್ತುಗಳು ಎಲ್ಲಾ ಸಮುದಾಯದವರು ಒಂದಿಲ್ಲ ಒಂದು ಸಂದರ್ಭದಲ್ಲಿ ಬಳಸುವ ವಸ್ತುಗಳಾಗಿವೆ. ಮಗುವಿನ ಜನನದಿಂದಾದಿಯಾಗಿ ಮಸಣದವರೆಗಿನ ಅನೇಕ ಸಂದರ್ಭಗಳಲ್ಲಿ ಇವರು ತಯಾರಿಸಿದ ವಸ್ತುಗಳ ಬಳಕೆಯಾಗುತ್ತವೆ. ಇಷ್ಟೊಂದು ವಿಸ್ತೃತವಾದ ಬಳಕೆ, ಇತರೆ ಯಾವುದೇ ಬುಡಕಟ್ಟುಸಮುದಾಯ ತಯಾರಿಸುವ ವಸ್ತುಗಳಲ್ಲಿ ಕಂಡುಬರುವುದಿಲ್ಲ. ಇಂತಹ ವಸ್ತುಗಳು ಪ್ರಾದೇಶಿಕ ವೈಶಿಷ್ಟತೆಯನ್ನು ಬಳಕೆ ಮತ್ತು ಹೆಸರಿನಲ್ಲಿ ಕೂಡ ಹೊಂದಿರುತ್ತವೆ. ಆದರೆ ನಾನು ಬಳ್ಳಾರಿಜಿಲ್ಲೆಯನ್ನು ಅನುಲಕ್ಷಿಸಿ, ವಸ್ತುಗಳ ಕುರಿತು ಇಲ್ಲಿ ಹೇಳುತ್ತಿದ್ದೇನೆ.

ಕೋಷ್ಟಕ - 5 ಬಳ್ಳಾರಿ ಜಿಲ್ಲೆಯ ಮೇದ ಸಮುದಾಯದ ತಾಲೂಕುವಾರು ವೃತ್ತಿ ಮತ್ತು ಡಿಪೋ ಮಾಹಿತಿ ಕೋಷ್ಟಕ.

ಕ್ರ. ಸಂ	ತಾಲೂಕು	ಕುಟುಂಬ ಸಂಖ್ಯೆ	ಅಕ್ಷರಸ್ಥರು/ ಅನಕ್ಷರಸ್ಥರು						ವೃತ್ತಿ				ಒಟ್ಟು ಜನ ಸಂಖ್ಯೆ			
			ಗಂಡು		ಹೆಣ್ಣು		0-5 ಮಗು									
			ಅಕ್ಷರ ಸ್ಥರು	ಅನಕ್ಷರ ಸ್ಥರು	ಅಕ್ಷರ ಸ್ಥರು	ಅನಕ್ಷರ ಸ್ಥರು	ಗಂ	ಹೆ	ಕು ಕ	ನೌಕರಿ	ಇತರೆ	ಅಭ್ಯಾಸ	ಗಂ	ಹೆ	ಒಟ್ಟು	ಡಿಪೋ. ಸಂಖ್ಯೆ
1	ಬಳ್ಳಾರಿ	199	483	88	318	179	45	46	534	17	191	326	616	543	1559	50
2	ಹಗರಿಬೊಮ್ಮನಹಳ್ಳಿ	33	61	16	52	27	07	08	87	03	09	57	84	87	171	10
3	ಹೂವಿನ ಹಡಗಲಿ	46	80	24	46	58	09	13	118	06	36	48	113	117	230	13
4	ಹೊಸಪೇಟೆ	142	287	93	205	178	56	53	477	11	51	224	436	436	872	41
5	ಕೂಡ್ಲಿಗಿ	38	78	27	43	45	11	05	125	06	08	54	116	93	209	11
6	ಶಿರಗುಪ್ಪ	24	32	23	24	35	10	14	77	01	13	23	65	73	138	13
7	ಸೊಂಡೂರು	43	80	33	41	62	16	25	139	02	15	60	129	128	257	03
	ಒಟ್ಟು	525	1101	304	729	584	154	164	1557	46	323	792	1559	1477	3036	141

4.2. ಮೇದರು ತಯಾರಿಸುವ ವಸ್ತುಗಳ ತಯಾರಿಕೆಯ ವಿಧಾನ, ಸಾಂಸ್ಕೃತಿಕ ಮತ್ತು ಬಳಕೆಯ ವೈಶಿಷ್ಟತೆ ಹಾಗೂ ಇವುಗಳ ಅಂದಾಜು ಬೆಲೆ:

ಮೇದರು ತಮ್ಮ ಕುಲಕಸುಬಿನಲ್ಲಿ ತಯಾರಿಸುವ ವಿವಿಧ ವಸ್ತುಗಳು, ಮತ್ತು ಅವುಗಳನ್ನು ತಯಾರಿಸುವ ವಿಧಾನ ಹಾಗೂ ವಿವಿಧ ಸಂದರ್ಭಗಳಲ್ಲಿ ಅವುಗಳ ಬಳಕೆಯನ್ನು ಕುರಿತಾಗಿ, ಧಾರ್ಮಿಕ ಹಾಗೂ ಮಂಗಳ ಕಾರ್ಯಗಳಲ್ಲಿ ಬಳಸುವ ವಸ್ತುಗಳು, ಗೃಹಬಳಕೆ ಮತ್ತು ಅಲಂಕಾರಿಕ ಕರಕುಶಲ ವಸ್ತುಗಳು, ವ್ಯವಸಾಯದಲ್ಲಿ ಬಳಸುವ ವಸ್ತುಗಳು, ಮತ್ತು ಇತರೆ ವಸ್ತುಗಳೆಂದು ಇಲ್ಲಿ ಪ್ರತ್ಯೇಕಿಸಿ ವಿವರಿಸಲಾಗಿದೆ.

4.2.1 ಧಾರ್ಮಿಕ ಹಾಗೂ ಮಂಗಳ ಕಾರ್ಯಗಳಲ್ಲಿ ಬಳಸಲು ತಯಾರಿಸುವ ವಸ್ತುಗಳು:

ಪಡ್ಲಿಗಿ :- ಬಿದಿರಿನಿಂದ ತಟ್ಟೆಯಾಕಾರದಲ್ಲಿ ಇದನ್ನು ತಯಾರಿಸುತ್ತಾರೆ. ಮೊದಲು ಅದರ ಆಕಾರಕ್ಕೆ ತಕ್ಕಂತೆ ಬಿದಿರಿನ ಆಕಗಳನ್ನು ತಯಾರಿಸಿ ಚಕ್ರಾಕಾರವಾಗಿ ಹೊಂಟಿಸಿ ಕೊಂಡು ತೆಳುವಾದ ಓಳಿನಿಂದ ಸುತ್ತ ತಳ ಸುತ್ತಿಕೊಳ್ಳುತ್ತಾರೆ. ನಂತರ ಬಿದಿರು ಕಡ್ಡಿಗಳನ್ನು (ಬಳುವು)ನಯವಾಗಿ ಸೀಳಿ ಸವರಿ ಹೆಣೆಯುತ್ತಾರೆ. ತಳ ಮುಗಿಯುತ್ತಿದ್ದಂತೆ ಅದನ್ನು ಬಡಿದು ತಟ್ಟೆಯ ಗೋಡೆಯಂತೆಮಾಡಿ 3-4 ಇಂಚು ಎತ್ತರ ಗೋಡೆ ಸುತ್ತುತ್ತಾರೆ. ಇದರ ಅಂಚಿಗೆ ಕೆಂಪು ಬಣ್ಣ ಎದ್ದಿದ ಕಡ್ಡಿಗಳಿಂದ ಕಟ್ಟು ಇಟ್ಟು ಪೋಣಿಸುವರು. ಇಲ್ಲವೇ ನಂತರ ಬಣ್ಣ ಹಚ್ಚುತ್ತಾರೆ.ದಿಂಡನ್ನು ಬಣ್ಣ ಹಚ್ಚಿದ ಮೂರು ಬಳುವಿನಿಂದ ಹೆಣೆದು, ಹೆಚ್ಚಾದ ಆಕಗಳನ್ನು ಕಟ್ಟುಮಾಡಿ ಒಳಕ್ಕೆ ತಿರುವಿ ದಿಂಡಿನಲ್ಲಿ ಸಿಕ್ಕಿಸುತ್ತಾರೆ. ಪಡ್ಲಿಗೆಯ ಜೊತೆಗೆ ಎರಡು ಚಿಕ್ಕ ಚಿಕ್ಕ ಬಿದಿರಿನ ಬಟ್ಟಲುಗಳನ್ನು ಕೊಡುತ್ತಾರೆ. ಇದನ್ನು ಎಲ್ಲಮ್ಮ, ಹುಲಿಗೆಮ್ಮ, ಉಚ್ಚಂಗೆಮ್ಮ, ಕುಕ್ಕವಾಡದಮ್ಮನ ದೇವರು ಹೊತ್ತ ಜೋಗತಿಯರು ಬಳಸುತ್ತಾರೆ. ಈ ಪಡ್ಲಿಗಿಯನ್ನು ದೇವಿಯ ಒಕ್ಕಲಿನ ಭಕ್ತರು ಸಹ ವಿಶೇಷ ಸಂದರ್ಭದಲ್ಲಿ ಪೂಜಿಸುವರು. ಇದರ ಬೆಲೆ : 21 ರೂಪಾಯಿ ಇರುತ್ತದೆ.

ಗೋಪಾಳ :- ಇದು ಸಿಲಿಂಡರಾಕೃತಿಯ ಒಂದು ಪುಟ್ಟಿ. ಬಿದಿರಿನಿಂದ ನಯವಾದ ಓಳು ಮಾಡಿ , ಮೊದಲು ತಳ ಹಚ್ಚಿಕೊಂಡು, ನಂತರ ಮೂಲಿಯನ್ನು ತಿರಿವಿಕೊಂಡು ಇದನ್ನು ಓಳಿನಿಂದ ಹೆಣೆದು ತಯಾರಿಸುತ್ತಾರೆ. 9 ಇಂಚು ಗೋಡೆಯನ್ನು ಸುತ್ತಿದ ಮೇಲೆ , ಮೇಲಿನ ಅಂಚಿಗೆ ಬಾಕ್ಸಾ, ಸಲಿಗಿ, ಕಡುಬೋಳು, ಕಡ್ಡಿ ಉಪಯೋಗಿಸಿ ದಿಂಡು ಕಟ್ಟಿರುತ್ತಾರೆ. ಇದರಲ್ಲಿ ಒಂದು ಚಿಕ್ಕ ಬಿದಿರಿನ ಬೆತ್ತವನ್ನು ಸಹ ಇರಿಸಿರುತ್ತಾರೆ. ಗೋಪಾಳವನ್ನು ದಾಸಯ್ಯರು ಉಪಯೋಗಿಸುತ್ತಾರೆ. ಹೆಚ್ಚಾಗಿ ನಾಯಕರು, ಮೇದರಂತಹ ಕೆಲವು ಬುಡಕಟ್ಟು ಸಮುದಾಯಗಳು ತಮ್ಮ ಮನೆದೇವರ ದೇವಸ್ಥಾನದಲ್ಲಿ ಜಾತಿ ಸಂಸ್ಕಾರ ಮಾಡುವಾಗ ಮುದ್ರೆ ಹಾಕಿಸಿ ಗೋಪಾಳವನ್ನು ಮುದ್ರೆ ಹೊತ್ತವರ ಕೈಗೆ ಕೊಡುತ್ತಾರೆ. ಕೆಲವರ ಮನೆಯಲ್ಲಿ ಲೋಹದ ಗೋಪಾಳಗಳು ಇರುವುದು ಕಂಡು ಬರುತ್ತವೆ. ವಿಶೇಷ ಸಂದರ್ಭದಲ್ಲಿ ದಾಸಯ್ಯರು ಸಾಂಪ್ರದಾಯಿಕವಾಗಿ ಗೋಪಾಳವನ್ನು ಹಿಡಿದು ಭಿಕ್ಷೆಯನ್ನು ಮಾಡುವರು. ಇದರ ಬೆಲೆ : 11-25 ರೂಪಾಯಿ ಇರುತ್ತದೆ.

ಪರಶುರಾಮನ ಬಟ್ಟಲು :- ಪರಶುರಾಮನ ಬಟ್ಟಲು ಪಡ್ಲಿಗಿಯ ಜೊತೆಯಲ್ಲಿಯೇ ಕೊಡುತ್ತಾರೆ. ಪರುಶುರಾಮನ ವಕ್ಕಲು ಇಲ್ಲದವರು ಈ ಬಟ್ಟಲನ್ನು ತೆಗೆದುಕೊಳ್ಳುವುದಿಲ್ಲ. ತೆಳುವಾದ ಆಕದಿಂದ ತಳತಯಾರಿಸಿ ಒಳನಿಂದ ತಳಸುತ್ತಿ ಬಾಕದಿಂದ ಕಟ್ಟು ಇಟ್ಟು ಪೋಣಿಸುತ್ತಾರೆ. ಅಂಗೈಯಲ್ಲಿ ಕೂಡುವಷ್ಟು ಇರುವ ಬಟ್ಟಲು ಇದು. ಜೋಗತಿಯರು ಇದರಲ್ಲಿ ಬಂಡಾರ-ಕುಂಕುಮ ಹಾಕಿ ಪಡ್ಲಿಗಿಯಲ್ಲಿ ಇರಿಸಿಕೊಂಡಿರುತ್ತಾರೆ. ಭಿಕ್ಷೆ ಮಾಡಿದವರಿಗೆ ಇದರಲ್ಲಿರುವ ಕುಂಕುಮ - ಬಂಡಾರವನ್ನು ಹಚ್ಚುತ್ತಾರೆ. ಇದರ ಬೆಲೆ : 2.50-3.00 ರೂಪಾಯಿ.

ದಾಸಯ್ಯನ ಬೆತ್ತ :- ದಾಸಯ್ಯನ ಬೆತ್ತ ಬಿದಿರನ್ನು ಬೇರು ಸಮೇತ ಇಲ್ಲವೇ ಬುಡದ ಹತ್ತಿರಕ್ಕೆ ಕಡಿದು ಬುಡಭಾಗದ ಗೆಣ್ಣುಗಳನ್ನು ಸವರಿ ಮುಂದೆ ಚೂಪಗೆ ಮಾಡಿರುತ್ತಾರೆ. ಇದುನೋಡಲು ಹಾವಿನ ತಲೆಯಂತೆ ಕಾಣುತ್ತವೆ. ಇದಕ್ಕೆ ಬಿದಿರಿನ ಪಟ್ಟಿ ಇಲ್ಲವೇ ಗಿಡದ ತೊಗಟೆಯನ್ನು ಸುತ್ತಿ ಬೆಂಕಿಗೆ ಹಿಡಿಯುತ್ತಾರೆ, ಹಾಗಾಗಿ ಇದರ ಮೇಲೆ ಬಾರುಗಳು ಮೂಡಿರುತ್ತವೆ. ಕೆಲವು ಸಾರೆ ಇದಕ್ಕೆ ಗೆಜ್ಜೆಯನ್ನು ಸಹ ಕಟ್ಟಿರುತ್ತಾರೆ. ಇದನ್ನು ದಾಸಯ್ಯ, ಸಾಧುಗಳು, ಮತ್ತು ಕಾಲಜ್ಞಾನವನ್ನು ಹೇಳುವವರು ಹಿಡಿದಿರುತ್ತಾರೆ. ಇದರ ಬೆಲೆ : 10-12 ರೂಪಾಯಿ.

ಅಮ್ಮನ ಗೋಡೆ :- ಇದು ಜೋಡು ಹೆಣಿಗೆ ಹಾಕಿ ನಿಯಮದ ಪ್ರಕಾರ ತಯಾರಿಸಿದ ಒಂದು ದೊಡ್ಡದಾದ ತಳ ಅಗಲ ಇರುವ ಪುಟ್ಟಿ. ಮೊದಲು ಸೈಜಿಗೆ ತಕ್ಕಂತೆ ದಪ್ಪನೆಯ ಆಕಗಳನ್ನು ಚಕ್ರಾಕಾರವಾಗಿ ಹೊಂದಿಸಿ ತಳವನ್ನು ಹಚ್ಚಿಕೊಳ್ಳುತ್ತಾರೆ. ಒಳನಿಂದ ತಳಸುತ್ತಿ ಬಳುವಿನಿಂದ (ಕಡ್ಡಿ) ಹೆಣೆಯುತ್ತಾರೆ. ತಳಮುಗಿದು ಗೋಡೆಯನ್ನು ಹೆಣೆಯುವಾಗ ತಳದಸುತ್ತಲೂ ಬಿದಿರಿನ ಪಟ್ಟಿಗಳನ್ನು ಇರಿಸುವರು. ಇವು ನೆಲದ ಮೇಲೆ ನಿಲ್ಲಲು ಕಾಲುಗಳಂತೆ ಇರುತ್ತವೆ. ಇದರ ದಿಂಡನ್ನು ಜೋಡಣಿಗಿಯಿಂದ ಬಿಗಿಯಾಗಿ ಹೆಣೆದು ಉಳಿದ ಆಕಗಳನ್ನು ಒಳಗೆ ತಿರುವುವರು. ದೇವರ ಕೆಲವು ಸಾಮಗ್ರಿಗಳನ್ನು ಸಿಕ್ಕಿಸಲು ಸಂದು ಸಿಗುವಂತೆ ಇರುತ್ತದೆ. ಇದರ ಎತ್ತರ ದೇವರ ಮೂರ್ತಿಗೆ ತಕ್ಕಂತೆ ಇರಿಸುತ್ತಾರೆ. ಇದರಲ್ಲಿ ಹೆಣ್ಣು ದೇವತೆಗಳ ಮೂರ್ತಿಯನ್ನು ಕೂಡ್ರಿಸಿಕೊಂಡು ಹೊತ್ತು ನಡೆಯುವರು. ಇದನ್ನು ಕೆಳಗಡೆ ಇಳಿಸಿವಾಗ ತಳನೆಲಕ್ಕೆ ತಾಗದಂತೆ ಸುತ್ತಲೂ ಬಿದಿರಿನ ಕಾಲುಗಳನ್ನು ಇರಿಸಿ ಹೆಣೆಯುವರು. ಇದನ್ನು ಹೆಣೆಸುವಾಗ ವಾರದದಿವಸ ಉಲ್ಪಿಯನ್ನು ಕೊಟ್ಟು ಹೆಣೆಸುತ್ತಾರೆ. ಇದರ ಬೆಲೆ ಆಕಾರಕ್ಕೆ ತಕ್ಕಂತೆ :50-75ರೂಪಾಯಿ ಇರುತ್ತದೆ.

ಜೋಕುಮಾರನ ಬುಟ್ಟಿ :- ತಳ ಅಗಲವಾಗಿದ್ದು ಮಗ್ಗುಲುಗೋಡೆ ಸ್ವಲ್ಪ ಎತ್ತರವಾಗಿರುವ ಪುಟ್ಟಿ ಇದು. ಇದನ್ನು ಮೇದರ ಮನೆಯಿಂದ ತರುವಾಗ ಉಲ್ಪಿ ಕೊಟ್ಟು ತರುವ ಪದ್ಧತಿ ಇದೆ. ಈ ಪುಟ್ಟಿ ಯನ್ನು ತರುವಾಗ ಬೋರಲು ಹಿಡಿಯದಂತೆ ತರುವರು. ಭಾದ್ರಪದ ಮಾಸದಲ್ಲಿ ಜೋಕುಮಾರ ಸ್ವಾಮಿಯನ್ನು ಕೆಲವು ಸಮುದಾಯದ ಸ್ತ್ರೀಯರು ಈ ಪುಟ್ಟಿಯಲ್ಲಿ ಕೂಡ್ರಿಸಿಕೊಂಡು ಊರಾಡುತ್ತಾರೆ. ಇದನ್ನು ತಯಾರಿಸುವಾಗ ದಪ್ಪನೆಯ ಆಕಗಳನ್ನು ಇದರ ಗಾತ್ರಕ್ಕೆ ತಕ್ಕಂತೆ ಚಕ್ರಾಕಾರವಾಗಿ ಹೊಂದಿಸಿ ಒಳನಿಂದ ಮೊದಲು ತಳ ಸುತ್ತುತ್ತಾರೆ. ತಳಮುಗಿಯುತ್ತಿದ್ದಂತೆ ಬಡಿಮ ಮೇಲಕ್ಕೆ ಬಾಗಿಸಿಕೊಂಡು ಸ್ವಲ್ಪ ದಪ್ಪವಾದ ಜೋಡು ಬಳುವಿನಿಂದ ಗೋಡೆಯನ್ನು ಹೆಣೆಯುವರು. ಎತ್ತರ ಒಂದು ಅಡಿ

ಮುಗಿಯುತ್ತಿದ್ದಂತೆ ಒಂದು ಬಳುವನ್ನು ಹೆಚ್ಚಿಗೆ ಇಟ್ಟು ದಿಂಡು ಸುತ್ತ ಹೆಣೆದು ಉಳಿದ ಆಕಗಳನ್ನು ತಿರಿವಿ ಸಿಗಿಸುತ್ತಾರೆ ಮತ್ತು ಭದ್ರವಾಗಲೆಂದು ಬಾಕ್ಸಾ, ಸಲಿಗೆ, ಕಡಚೋಳಿನಿಂದ ದಿಂಡು ಕಟ್ಟುತ್ತಾರೆ. ಇದರ ಬೆಲೆ : 35 ರೂಪಾಯಿ ಇರುತ್ತದೆ.

ಬಾಸಿಂಗದ ಬುಟ್ಟಿ:- ಅನೇಕ ಸಮುದಾಯಗಳು ಮದುವೆಯಲ್ಲಿ ಮದುಮಗನಿಗೆ ಕಟ್ಟುವ ಬಾಸಿಂಗವನ್ನು ಇಟ್ಟು ತರಲಿಕ್ಕಾಗಿ ಒಂದು ಚಿಕ್ಕ ಪುಟ್ಟಿಯನ್ನು ತರುತ್ತಾರೆ.ಇದನ್ನು, ಸಾಮಾನ್ಯ ಪುಟ್ಟಿಯನ್ನು ತಯಾರಿಸುವರೀತಿಯಲ್ಲಿಯೇ ತಯಾರಿಸುತ್ತಾರೆ. ಇದರ ತಳ ಕಿರಿದಾಗಿದ್ದು ಮೇಲೆಬಂದಂತೆ ಹಿಗ್ಗಿ ಮತ್ತೆ ಸ್ವಲ್ಪ ಕಿರಿದಾಗಿಸಿ ದಂಡಿಯನ್ನು ಮೂರುಕಡ್ಡಿಯಿಂದ ಸುತ್ತುತ್ತಾ ಪೋಣಿಸುತ್ತಾರೆ. ಇದರಲ್ಲಿ ಬಾಸಿಂಗ ಅಲುಗಾಡದಂತೆ ಕೂಡುತ್ತದೆ. ಇದರ ಬೆಲೆ : 21 ರೂಪಾಯಿ.

ನೆಟ್ಟಕ್ಕಿ ಪುಟ್ಟಿ :- ಕೆಲವು ಸಮುದಾಯದವರು ಸುರಿಗಿ ಲಗ್ನ ಮಾಡಿದರೆ ಮದುಮಗನನ್ನು ನೆಟ್ಟಕ್ಕಿ ಪುಟ್ಟಿಯಲ್ಲಿ ನಿಲ್ಲಿಸಿ ಎದುರಿಗೆ ಮದುಮಗಳನ್ನು ಬೀಸು ಕಲ್ಲಿನ ಮೇಲೆ ನಿಲ್ಲಿಸಿ ತಾಳಿ ಕಟ್ಟುವ ಶಾಸ್ತ್ರ ಮಾಡುತ್ತಾರೆ. ಈ ಪುಟ್ಟಿ ನೋಡುವುದಕ್ಕೆ ಪಡ್ಡಲಿಗೆಯಂತೆ ಕಾಣುತ್ತದೆ. ಆದರೆ ಇದನ್ನು ಬಿದಿರಿನ ತೆಳುವಾದ ಆಕಗಳಿಂದ ತಳಸುತ್ತಿ ಓಳುಗಳಿಂದ ಸುತ್ತಿ ಹೆಣೆದಿರುತ್ತಾರೆ. ಇದರ ಬೆಲೆ : 21 ರೂಪಾಯಿ ಇರುತ್ತದೆ.

ದೇವರ ಪೆಟ್ಟಿಗೆ :- ದೇವರುಗಳನ್ನು ಮತ್ತು ದೇವರ ಸಾಮಾನುಗಳನ್ನು ಇರಿಸಲು ಅವಶ್ಯಕತೆಗೆ ತಕ್ಕಂತೆ ಇದನ್ನು ತಯಾರಿಸುವರು. ಬಿದಿರಿನ ನಯವಾದ ಕಡ್ಡಿಗಳಿಂದ ಇಲ್ಲವೇ ಬೆತ್ತದ ಮೇಲ್ಪದರಿನಿಂದ ಮಾಡಿರುತ್ತಾರೆ. ಇದನ್ನು ಚೌಕಾಕಾರ, ಇಲ್ಲವೇ ಆಯತಾಕಾರದಲ್ಲಿ ತಯಾರಿಸುವರು. ಮೊದಲು ಆಕಾರಕ್ಕೆ ತಕ್ಕಂತೆ ದಪ್ಪನೆಯ ಆಕಗಳಿಂದ ತಳಹಚ್ಚಿಕೊಂಡು ಬಳುವಿನಿಂದಲೇ ತಳಸುತ್ತುತ್ತಾರೆ.ಇದರಿಂದ ಇದು ಜಾಸ್ತಿಬಿಗಿ ಮತ್ತು ಭಾರವನ್ನು ಹೊರಬಲ್ಲದಾಗಿರುತ್ತದೆ. ತಳಮುಗಿಯುತ್ತಿದ್ದಂತೆ ಅಂಚಿಗೆ ಬಿದರಿನ ಪಟ್ಟಿ ಇರಿಸಿ ಮೂಲೆತಿರಿವಿಕೊಳ್ಳುವರು. ಇದನ್ನು ಹೆಣೆಯಲು ಬಿದಿರಿನ ಇಲ್ಲವೇ ಬೆತ್ತದ ಆಕಗಳನ್ನು ಬಳಸುವರು. ಇದರ ಮೇಲೆ ಮುಚ್ಚಳ, ಇದಕ್ಕೆ ಹೊಂದಿ ಕೊಂಡಂತೆ ಇರುತ್ತದೆ. ಇಲ್ಲವಾದರೆ ಬಿಡಿಯಾಗಿರುತ್ತದೆ. ಪಕ್ಕದಲ್ಲಿ ಪುಟ್ಟಿಯನ್ನು ಹಿಡಿಯಲು ಹಿಡಿಗಳನ್ನು ಮಾಡಿರುತ್ತಾರೆ. ತಳದಲ್ಲಿ ಬಿದಿರಿನ ತುಂಡುಗಳಿಂದ ನಾಲ್ಕು ಕಾಲುಗಳನ್ನು ಜೋಡಿಸುವರು. ಇದು ಸುಂದರವಾಗಿ ಕಾಣಲು ಮತ್ತು ಹುಳು ಹಿಡಿಯದಂತೆ ರಕ್ಷಿಸಲು ವುಡ್ ಪ್ರೈಮರ್, ಇಲ್ಲವೇ ಕಟ್ಟಿಗೆಯ ಬಣ್ಣವನ್ನು ಬಳಿಯುವುದು ಸಹಜ. ಇದರ ಆಕಾರ ಕಟ್ಟಿಗೆಯ ಪೆಟ್ಟಿಗೆ ಇಲ್ಲವೇ ಕಬ್ಬಿಣದ ಟ್ರಂಕನ್ನು ಹೋಲುತ್ತದೆ. ಇದರ ಬೆಲೆ ಇದರ ಗಾತ್ರಕ್ಕೆ ತಕ್ಕಂತೆ ಇರುತ್ತದೆ. ಅಂದರೆ 101 ರಿಂದ 300 ರೂಪಾಯಿ ಇರುತ್ತದೆ.

ಭೂಮಣ್ಣಿ ಬುಟ್ಟಿ:- ಕೆಲವು ಪ್ರದೇಶಗಳಲ್ಲಿ ಬೆಳೆ ಬಂದಾಗ ಭೂಮಿತಾಯಿಯನ್ನು ಪೂಜಿಸಲು ಎಡೆ, ಮತ್ತು ಪೂಜಾ ಸಾಮಗ್ರಿಗಳನ್ನು ತುಂಬಿ ಕೊಂಡು ಹೋಗಲು ಬಳಸುವ ಬುಟ್ಟಿ ಇದು. ಸಾಮಾನ್ಯವಾಗಿ ಬಿದಿರಿನ ಆಕ ಮತ್ತು

ಓಳುಗಳಿಂದ ತಳಸುತ್ತಿ ಬಳುವುವಿನಿಂದ ಬುಟ್ಟಿಯನ್ನು ಹೆಣೆದಿರುತ್ತಾರೆ. ಇದರ ತಳ ಸ್ವಲ್ಪ ಅಗಲ ಜಾಸ್ತಿ ಇರುತ್ತದೆ. ನಂತರ ಇದನ್ನು ಸಗಣೆಯಿಂದ ಸಾರಿಸಿ, ಕೆಮ್ಮಣ್ಣು ಬಳಿಯುತ್ತಾರೆ. ಅಕ್ಕಿ ಹಿಟ್ಟಿನಿಂದ ತಯಾರಿಸಿದ ಬಣ್ಣದಿಂದ ಪುಟ್ಟಿಯಮೇಲೆ ಚಿತ್ತಾರ ಬಿಡಿಸುವರು. ಇದೇ ಭೂಮಣ್ಣಿ ಬುಟ್ಟಿ ಮಹಾನವಮಿಯಾದ ಮಾರನೆಯ ಹುಣ್ಣಿಮೆಯ ದಿವಸ ವಡೆಯಾದ ಪೈರು ಮತ್ತು ಭೂಮಿತಾಯಿಯನ್ನು ಕೆಲವು ಪ್ರದೇಶಗಳಲ್ಲಿ ಪೂಜಿಸುವರು. ಪೂಜೆಗೆ ಹೋಗಲು ಸಾಮಗ್ರಿಗಳನ್ನು ಈ ಪುಟ್ಟಿಯಲ್ಲಿ ತುಂಬಿಕೊಂಡು ಹೋಗುತ್ತಾರೆ. ಕೆಲವು ಪ್ರದೇಶಗಳಲ್ಲಿ ಇದನ್ನು ಹೆಡಿಗೆ ಪುಟ್ಟಿ ಎಂದು ಸಹ ಕರೆಯುವರು.

ಬಾಗಣದ ಮೊರ :- ಗೃಹಬಳಕೆಯಲ್ಲಿ ಉಪಯೋಗಿಸುವ ಮೊರಕ್ಕಿಂತ ಬಾಗಣದ ಮೊರ ಚಿಕ್ಕವಾಗಿರುತ್ತವೆ. ಇದನ್ನು ತಯಾರಿಸುವಾಗ ಬಿದಿರಿನಿಂದ ತೆಳುವಾಗಿ ಓಳು ಸೀಳಿಕೊಂಡು, ಮೊದಲು ನಾಲ್ಕು ಓಳು ತೆಗೆದುಕೊಂಡು ಅದಕ್ಕೆ ಮುಂಗೋಡು ಇಟ್ಟು ಮುಂಭಾಗದಿಂದ ಮೊರದ ಹೆಣಿಕೆಯನ್ನು ಹೆಣೆದು ಅವುದೇವು ತಯಾರಿಸುವರು. (ಒಂದನೇ ಛಾಯಾ ಚಿತ್ರವನ್ನು ನೋಡಿರಿ) ನಂತರ ದಪ್ಪವಾದ ಆಕ, (ಬಾಕ್ಸ) ಮತ್ತು ವರವೇಳೇವು, ಮರಸಲಗಿ ಹಾಗೂ ಒಳಕಡ್ಡಿಯಿಂದ ದಿಂಡನ್ನು ಕಟ್ಟುತ್ತಾರೆ. ಅನೇಕ ಸಂದರ್ಭದಲ್ಲಿ ಮುತ್ತೈದೆಯರಿಗೆ ಬಾಗಣ(ಬಾಗಿನ) ಕೊಡಲು ಈ ಮೊರಗಳನ್ನು ಉಪಯೋಗಿಸುವರು. ಇಂತಹ ಮೊರವನ್ನು ಮೊದಲು ಪಾರ್ವತಿ ಉಪಯೋಗಿಸಿದಳೆಂದು ಮೇದರ ನಂಬಿಕೆ. ಬಾಗಣದ ಮೊರಗಳನ್ನು ಬೆಸಸಂಖ್ಯೆಯಲ್ಲಿ ಖರೀದಿಸುತ್ತಾರೆ. ಇದರ ಬೆಲೆ : 11-13 ರೂಪಾಯಿಗೆ ಜೊತೆ (ಎರಡು)ಇರುತ್ತದೆ.

ಉಲ್ಪಿಯಮೊರ :- ಉಲ್ಪಿ ಕೊಡುವ ಮೊರ ಸಾಮಾನ್ಯ ಮೊರಕ್ಕಿಂತ ಕಡಿಮೆ ಗುಣ ಮಟ್ಟದ್ದಿರುತ್ತವೆ. ಸಾಮಾನ್ಯವಾಗಿ ಮಂಗಲ ಕಾರ್ಯಗಳಲ್ಲಿ ಪುರೋಹಿತರಿಗೆ ದಕ್ಷಿಣೆ ಮತ್ತು ಅಕ್ಕಿ, ಬೇಳೆ, ಬೆಲ್ಲ, ಹಿಟ್ಟು ಉಡಿ ಸಾಮಾನು ಇರಿಸಿ ಕೊಡಲು ಇದನ್ನು ಬಳಸುವರು.ಇದನ್ನು ಬಾಗಣದ ಮೊರವನ್ನು ತಯಾರಿಸುವ ರೀತಿಯಲ್ಲಿಯೇ ತಯಾರಿಸುತ್ತಾರೆ. ಇದರ ಬೆಲೆ : 11-13 ರೂಪಾಯಿ ಜೊತೆ ಇರುತ್ತದೆ.

ದಿಬ್ಬಣದ ಪುಟ್ಟಿ :- ಹಿಂದೂ ಸಂಪ್ರದಾಯದ ಪ್ರಕಾರ, ಮದುವೆ ಸಂದರ್ಭದಲ್ಲಿ ಮದುವೆ ಮಂಟಪಕ್ಕೆ ಕೊಂಡೊಯ್ಯುವ ಸಾಮಗ್ರಿಗಳನ್ನು ಲೋಹದ ಪುಟ್ಟಿಗಳಲ್ಲಿ ತರುವುದಿಲ್ಲ. ಕಾರಣ ಬಿದಿರಿನ ಪುಟ್ಟಿಯನ್ನು ಬಳಸುತ್ತಾರೆ. ಇದು ಗಾತ್ರದಲ್ಲಿ ದೊಡ್ಡದಾಗಿದ್ದು ಒಳ್ಳೆಯ ಗುಣ ಮಟ್ಟದ್ದಾಗಿರುತ್ತವೆ.ಇದನ್ನು ತಯಾರಿಸುವಾಗ ಮೊದಲು ಬಿದಿರಿನಿಂದ ಆಕಗಳನ್ನು ಮಾಡಿಕೊಂಡು, ತೆಳುವಾದ ಓಳುಗಳಿಂದ ತಳಸುತ್ತುವರು. ನಂತರ ತಳಬಾಗಿಸಿಕೊಂಡು ಬಳುವಿನಿಂದ ಸುತ್ತುತ್ತಾರೆ. ಪುಟ್ಟಿಯ ಗೋಡೆ ಮೇಲೆಹೊದಂತೆ ಅಗಲವಾಗಿಸುತ್ತಾ ಸುತ್ತುವರು. ಮೂರು ಬಳುವಿನಿಂದ ಮೂರು ಇಂಚಿನಷ್ಟು ದಿಂಡು ಸುತ್ತಿ ಆಕಗಳನ್ನು ಒಳಗೆ ಬಾಗಿಸಿ ದಿಂಡಿನಲ್ಲಿ ಸಿಕ್ಕಿಸುತ್ತಾರೆ. ಇದರ ಬೆಲೆ : 45ರಿಂದ 50 ರೂಪಾಯಿ ಇರುತ್ತದೆ.

ಅಂಕುರದ ಪುಟ್ಟಿ :- ಇವು ಮಧ್ಯಮ ಗಾತ್ರದ ಬೇಸನ್ನ ಪುಟ್ಟಿಯನ್ನು ಹೋಲುವಂತಹ ಬೊಗಸೆಯ ತುಂಬ ಇರುವ ದೊಡ್ಡ ಬಟ್ಟಲುಗಳು. ಇವುಗಳನ್ನು ಸಾಧಾರಣವಾಗಿ ಬಿದಿರಿನ ಆಕ, ತೆಳುವಾದ ಓಳು, ಮತ್ತು ಬಳುವುಗಳಿಂದ ಪುಟ್ಟಿಯನ್ನು ತಯಾರಿಸುವರೀತಿಯಲ್ಲಿಯೇ ತಯಾರಿಸುತ್ತಾರೆ. ಮೇದರು, ಲಂಬಾಣಿಗಳು, ಮತ್ತು ಕೆಲವು ಸಿಷ್ಟ ಸಮುದಾಯಗಳು ವಿಶೇಷ ಪೂಜಾಸಂದರ್ಭದಲ್ಲಿ ದೇವರಿಗೆ ಅಂಕುರಾರ್ಪಣೆ ಮಾಡಲು ಬಳಸುವರು. ಈ ಪುಟ್ಟಿಗಳಲ್ಲಿ ಮಣ್ಣು ಹಾಕಿ ವಿವಿಧ ಧಾನ್ಯಗಳಿಂದ ಸಸಿಗಳನ್ನು ಬೆಳಸಿ ದೇವರಿಗೆ ಅರ್ಪಿಸುವುದು ಸಂಪ್ರದಾಯ. ಇದರ ಬೆಲೆ : 15 ರೂಪಾಯಿ ಇರುತ್ತದೆ.

ಹೂವಿನ ಪುಟ್ಟಿ :- ಬಕೆಟ್ಟಿನ ಆಕಾರದಲ್ಲಿ ಚಿಕ್ಕದಾಗಿ ಇರುವ ಪುಟ್ಟಿ ಇದು. ಇದನ್ನು ಸಹ ತೆಳುವಾದ ಆಕಗಳಿಂದ ತಳಸುತ್ತಿಕೊಂಡು, ಬಣ್ಣ ಹಚ್ಚಿದ ಬಳುವಿನಿಂದ ಬಾಗಿಸಿಕೊಂಡು ಗೋಡೆಸುತ್ತುತ್ತಾರೆ, ಸ್ವಲ್ಪ ಎತ್ತರ ಬಂದ ಕೂಡಲೇ ಬಾಗಿಸಿ ಮೂರು ಬಳುವಿನಿಂದ ಎರಡು ಅಥವಾ ಮೂರು ಸುತ್ತು ದಿಂಡು ಸುತ್ತುವರು. ನಂತರ ಉಳಿದ ಆಕಗಳನ್ನು ಬಾಗಿಸಿ ದಿಂಡಿನಲ್ಲಿ ಸಿಗಿಸುತ್ತಾರೆ. ಬಿದಿರಿನ ಮೇಲ್ಭಾಗದ ಹಸಿರು ಆಕವನ್ನು ಹಿಡಿಕೆಗೆ ಕಮಾನಿನಂತೆ ಬಾಗಿಸಿ ಪುಟ್ಟಿಯತಳದಲ್ಲಿ ಬಾಗಿಸಿ ಸಿಕ್ಕಿಸಿ ತಳಕ್ಕೆ ತೆಳುವಾದ ಆಕದಿಂದ ದಿಂಡು ಸುತ್ತಿ ಓಳಿನಿಂದ ಸುತ್ತುವರು. ಇದರಲ್ಲಿ ಹೂವು, ಬತ್ತಿ ಮತ್ತು ಕೆಲವು ಪೂಜಾ ಸಾಮಗ್ರಿಗಳನ್ನು ಇರಿಸಿ ಕೊಂಡು ದೇವಸ್ಥಾನಗಳಿಗೆ ಹೋಗುವರು. ಕೆಲವುಸಾರೆ ಇದನ್ನು ಮನೆಯಲ್ಲಿ ಪ್ರತಿದಿವಸ ದೇವರಿಗೆ ಹೂವು ಪತ್ರಿ ಹಾಕಲು ಉಪಯೋಗಿಸುತ್ತಾರೆ. ಇತ್ತೀಚಿಗೆ ಇದರ ಬದಲಾಗಿ, ಹಿತ್ತಾಳೆ, ಸ್ಟೀಲ್, ಮತ್ತು ಪ್ಲಾಸ್ಟೀಕ್ ಪುಟ್ಟಿಗಳು ಬಂದಿವೆ. ಇದರ ಬೆಲೆ : 21 ರೂಪಾಯಿ ಇರುತ್ತದೆ.

ಬಿರುದಾವಳಿ :- ಇದು ಎಲೆಯಾಕಾರದಲ್ಲಿ ಬಿದಿರಿನ ನಯವಾದ ತಟ್ಟಿಯಿಂದ ಹೆಣೆದು ಒಂದು ಬಿದಿರಿಗೆ ಇದನ್ನು ಇಟ್ಟು ಬಿಗಿದಿರುತ್ತಾರೆ. ಇದರ ಮೇಲ್ಮೈಯನ್ನು ಬಣ್ಣದ ಬಟ್ಟೆಯಿಂದ ಹೊಲಿದು ಸುತ್ತಲೂ ನೆರಿಗೆ ಕಟ್ಟಿರುವರು. ಇದನ್ನು ದೇವರ ಉತ್ಸವ, ಮತ್ತು ಜಾತ್ರೆ ಸಂದರ್ಭದಲ್ಲಿ ದೇವರ ಮುಂದೆ ಹಿಡಿದಿರುತ್ತಾರೆ. ಇದರ ಬೆಲೆ: 20 ರೂಪಾಯಿ ಇರುತ್ತದೆ.

ನಂದಿಯ ಕೋಲು :- ಇದೊಂದು ಎತ್ತರ ಮತ್ತು ನೇರವಾಗಿರುವ ಗಟ್ಟಿ ಗಳ, ಸುತ್ತಲೂ ಗೆಣ್ಣುಗಳನ್ನು ನಯವಾಗಿ ಕೆತ್ತಿ ಸವರಿ ಬುಡದಲ್ಲಿ ಒಂದು ಬಿಗಿ ಬಿರುಡೆಯ ಬೆಣೆ ಬಡಿಯಲು ರಂಧ್ರ ಕೊರೆಯುವರು. ಅನುಕೂಲಕ್ಕೆ ತಕ್ಕಂತೆ ಎತ್ತರವನ್ನು ನಿರ್ಧರಿಸುವರು. ಕೆಲವೊಂದು ಸಾರೆ ಇದಕ್ಕೆ ಬಣ್ಣದ ಬಟ್ಟೆ ಇಲ್ಲವೇ ಹೂವ್ವಿನಿಂದ ಅಲಂಕರಿಸವರು, ಇಲ್ಲವೆ ಲೋಹದ ಗೆಜ್ಜೆಯ ಗಗ್ಗರಿಗಳನ್ನು ಇದಕ್ಕೆ ಹಾಕಿ ಉತ್ಸವಗಳಲ್ಲಿ ಇವುಗಳನ್ನು ಹೆಗಲಿಗೆ ಹಾಕಿಕೊಂಡು ಕುಣಿಯುತ್ತಾರೆ. ಇದರ ಬೆಲೆ : 35 ರೂಪಾಯಿ ಇರುತ್ತದೆ.

ತೇರಿನ ಜಲ್ಲಿ :- ರಥೋತ್ಸವದ ಮೇಲೆ ಅರ್ಧಗೋಲಾಕಾರದಲ್ಲಿ ಪುಟ್ಟಿಯಂತೆ ರಚಿಸಿದ ಜಲ್ಲಿ. ಇದನ್ನು ತಯಾರಿಸುವಾಗ ಹಸಿಯಾದ ಬೊಂಬನ್ನು ಸೀಳಿ ಮಧ್ಯದಲ್ಲಿ ಒಂದು ಗಟ್ಟಿಯಾದ ಐದು ಅಡಿ ಎತ್ತರದ ಬಿದಿರನ್ನು

ನೆಲದಲ್ಲಿ ಹುಗಿಯುತ್ತಾರೆ. ಅದರ ಸುತ್ತಲೂ ಆರು ಅಡಿ ಸುತ್ತಳತೆಯ ವೃತ್ತವನ್ನು ರಚಿಸಿ ವೃತ್ತದ ಸುತ್ತಳತೆಗೆ ಬೊಂಬಿನ ಸರವನ್ನು ವೃತ್ತಾಕಾರದಲ್ಲಿ ದಿಂಡು ಕಟ್ಟುವರು. ನಂತರ ಬೊಂಬಿನ ಸರ ಮಾಡಿಕೊಂಡು ಈ ದಿಂಡಿಗೆ ಕಟ್ಟುವರು. ಬೊಂಬನ್ನು ಐದು ಅಡಿ ಎತ್ತರದಿಂದ ಬಾಗಿಸಿಕೊಂಡು ವಿರುದ್ಧ ದಿಕ್ಕಿನಲ್ಲಿ ವೃತ್ತಾಕಾರದ ತಳದಿಂಡಿಗೆ ಬಗಿಯುವರು. ಹೀಗೆ ಸುತ್ತಲೂ ಅರ್ಧಚಂದ್ರಾಕೃತಿಯ ಬೊಂಬಿನ ಸರಗಳನ್ನು ಕಟ್ಟಿ ನಂತರ ತಳದಲ್ಲಿ ದಿಂಡು ಕಟ್ಟಿಕೊಳ್ಳುವರು. ಮಧ್ಯದಲ್ಲಿ ಗೋಪುರಾಕಾರದ ಅರ್ಧಗೋಲಕ್ಕೆ ಅಲ್ಲಲ್ಲಿ ಬೊಂಬಿನ ದಿಂಡು ಕಟ್ಟುತ್ತಾರೆ. ಜಲ್ಲಿಯ ಮಧ್ಯದಲ್ಲಿ ಹುಗಿದ ಬಿದಿರನ್ನು ತೆಗೆದು ಹಗ್ಗದಿಂದ ಕಟ್ಟಿ ಭದ್ರ ಪಡಿಸುವರು. ಇದನ್ನು ತಯಾರಿಸಲು ಹಸಿ ಬೊಂಬು ಬೇಕು ಇಲ್ಲವಾದರೆ ಬೊಂಬನ್ನು ನೀರಿನಲ್ಲಿ ನೆನಸಿ ಉಪಯೋಗಿಸಬೇಕಾಗುತ್ತದೆ. ಇದೇಜಲ್ಲಿಯನ್ನು ಮುಂದುವರಿಸಿ ಬಿದಿರಿನ ದಬ್ಬೆಗಳಿಂದ ಸುತ್ತ ಸುತ್ತುತ್ತಾ ನಡುವೆ ದಿಂಡು ಸುತ್ತಿ ಮುಂದುವರಿದಂತೆ ಗೆಜ್ಜೆಗಳನ್ನು ಕೂಡಿಸಿ ಚೂಪಾಗಿ ಸುತ್ತಿ ಉಳಿದ ಗೆಜ್ಜೆಗಳನ್ನು ತಿರಿವಿ ಒಳಗೆಸಿಕ್ಕಿಸುವರು.ಇದನ್ನು ಮಹಾದ್ವಾರಗಳಮೇಲೆ ಗೋಪುರದಂತೆ ಉಪಯೋಗಿಸುವರು. (ಆರನೇ ಛಾಯಾಚಿತ್ರವನ್ನು ನೋಡಿರಿ.) ಇದರ ಬೆಲೆ : 450 ರೂಪಾಯಿಗಳು.

ನಾಗಬೆತ್ತ :- ಬೆತ್ತ ಇಲ್ಲವೆ ಬಿದಿರು ನಾಗರ ಹಾವಿನಂತೆ ಸುರುಟಿಕೊಂಡಿರುವುದನ್ನು ಆರಿಸಿ ನಯವಾಗಿ ಸವರಿ ಅದರ ಮೇಲೆ ಪಾಲೀಷ್ ಹಚ್ಚುವರು. ತಲೆಯನ್ನು ನಾಗರ ಹಾವಿನ ತಲೆಯಂತೆ ಕೆತ್ತಿರುತ್ತಾರೆ. ಬಾಲವನ್ನು ಚೂಪಾಗಿ ಮಾಡಿರುವರು. ಇದನ್ನು ನಾಗರಕುಲದವರ ಮನೆಯಲ್ಲಿ ಇರಿಸಿರುತ್ತಾರೆ. ಮತ್ತೆ ಕೆಲವು ಸಾಧು ಸಂತರು ಇದನ್ನು ಕೈಯಲ್ಲಿ ಹಿಡಿದು ಕೊಂಡಿರುತ್ತಾರೆ. ಇದರ ಬೆಲೆ : 10-15 ರೂಪಾಯಿ ಇರುತ್ತದೆ.

ನಂದಿಯ ಬೆತ್ತ :- ದಪ್ಪನೆಯ ಹಿಡಿದರೆ ಕೈ ತುಂಬುವಷ್ಟು ಗಾತ್ರದ, ಮೂರು ನಾಲ್ಕು ಅಡಿ ಎತ್ತರದ ನಯವಾದ ಬಿದಿರನ್ನು ಆರಿಸಿ ಗೆಣ್ಣು ಸವರಿ ಮೇಲ್ಭಾಗದಲ್ಲಿ ಒಂದು ರಂಧ್ರ ಹಾಕುತ್ತಾರೆ. ಇದಕ್ಕೆ ಗೆಜ್ಜೆಯನ್ನು ಕಟ್ಟುತ್ತಾರೆ. ಹಿಂದಿನ ಕಾಲದಲ್ಲಿ ರಾಜ ಪುರೋಹಿತರು ಇದಕ್ಕೆ ಬೆಳ್ಳಿಯ ಕಡಗವನ್ನು ಹಾಕಿರುತ್ತಿದ್ದರು. ಇದರ ಬೆಲೆ : 20 ರೂಪಾಯಿಗಳು.

ಎಲೆಪೂಜೆ ಮಂಟಪ :- ಇದು ಗುಡಿಸಲಿನ (ಜೋಪಡಿ) ಮುಂಭಾಗದ ಆಕೃತಿಯಂತೆ ಇರುತ್ತದೆ. ಮಧ್ಯದಲ್ಲಿ ಬಾಗಿಲಿನಂತೆ ದೇವರ ಮೂರ್ತಿಯು ಕಾಣಿಸುವಷ್ಟು ಬಾಗಿಲ ಕಿಂಡಿಯನ್ನು ಬಿಟ್ಟಿರುತ್ತಾರೆ. ಮೇಲೆ ಹೋದಂತೆ ತ್ರಿಕೋನದ ಗೋಪುರದ ಆಕಾರದಲ್ಲಿರುತ್ತದೆ. ಇದನ್ನು ತಯಾರಿಸುವಾಗ ಬೊಂಬಿನಿಂದ 1.5 ಇಂಚು ಅಗಲವಿರುವ ದಬ್ಬೆಯನ್ನು ಸೀಳಿ, ನಂತರ ಸೈಜಿಗೆ ತಕ್ಕಂತೆ ಬೊಂಬಿನ ದಬ್ಬೆಗಳನ್ನು ಕತ್ತರಿಸಿಕೊಂಡು ದೇವರ ಮೂರ್ತಿ ಕಾಣುವಷ್ಟು ಕಿಂಡಿಯನ್ನು ಬಿಟ್ಟು ಮೂರು ಇಂಚಿಗೆ ಒಂದರಂತೆ ಬೊಂಬಿನ ದಬ್ಬೆಗಳನ್ನು ಮೊಳೆಯಿಂದ ಬಡಿಯುವರು. ದೇವರಿಗೆ ಎಲೆ ಪೂಜೆಯನ್ನು ಕಟ್ಟುವಾಗ ಪಟ್ಟಿಯ ಸಂದುಗಳಲ್ಲಿ ಜೋಡು ಎಲೆಗಳನ್ನು ಹೊಂದಿಸಿ ಇವನ್ನು ದೇವರ ಮುಂದೆ ಇರಿಸುವರು.ಇದರ ಬೆಲೆ : 350 ರೂಪಾಯಿಗಳು.

ದೇವರ ಛತ್ರಿ :- ಇದು ಕೊಡೆಯನ್ನು ಹೋಲುತ್ತದೆ. ದೇವರ ಉತ್ಸವದ ಮುಂದೆ ಇದನ್ನು ಹಿಡಿದಿರುವರು. ಬಿದಿರಿನ ಕೊಡೆಯಾಕಾರದ ಇದರ ಮೇಲ್ಮೈಯನ್ನು ಬಣ್ಣದ ಬಟ್ಟೆಗಳಿಂದ ಹೊದಿಸಿರುವರು. ಅಲಂಕಾರಕ್ಕೆ ಗೊಂಡೇವು ಮತ್ತು ಮುತ್ತುಗಳಿಂದ ಸಿಂಗರಿಸಿರುವರು. ಬಿರುದಾವಳಿಯ ಜೊತೆಗೆ ದೇವರ ಛತ್ರಿಯನ್ನು ದೇವರ ಮುಂದೆ ಹಿಡಿದಿರುತ್ತಾರೆ. ಇದನ್ನು ತಯಾರಿಸುವ ವಿಧಾನ : 8 ಅಡಿ ಎತ್ತರದ ಬೊಂಬನ್ನು ತೆಗೆದುಕೊಂಡು, ಮೇಲಿನ ತುದಿಯಿಂದ 2 ಅಡಿ ಕೆಳಗಡೆ ಒಂದು ರಂಧ್ರ ಹಾಕುತ್ತಾರೆ. ರಂಧ್ರದಲ್ಲಿ ಎರಡು ಚಿಕ್ಕ ಬಿದಿರಿನ ಪಟ್ಟಿಯನ್ನು + ಆಕಾರದಲ್ಲಿ ಇರಿಸಿ ಸುತ್ತಲೂ ದಿಂಡು ಕಟ್ಟುವರು. ನಂತರ ಅರ್ಧ ವೃತ್ತಾಕಾರದಲ್ಲಿ ಬೊಂಬಿನ ಸರಗಳನ್ನು ಬಾಗಿಸಿ ಕಟ್ಟಿಕೊಂಡು, ಕೊಡೆಯಾಕಾರದ ಇದರ ಮೇಲೆ ಬಣ್ಣದ ಬಟ್ಟೆಯನ್ನು ಹೊದಿಸುತ್ತಾರೆ. ಬೇಕಾದರೆ ನೆರಿಗೆ ಕಟ್ಟಿದ ಬಟ್ಟೆಯಿಂದ ಸಿಂಗರಿಸುತ್ತಾರೆ.ಇದರ ಬೆಲೆ : 125 ರೂಪಾಯಿಗಳು.

ಚೌಟಿಗಿ :- ಇದು ಜೋಗತಿಯರು ಬಳಸುವ ಒಂದು ವಾದ್ಯ. ಸಿಲಿಂಡರಿನ ಆಕಾರದ ಕಟ್ಟಿಗೆಯ ಸೇರಿನ ಮಧ್ಯದಲ್ಲಿ ಬಿದಿರಿನ ಒಂದು ಕೋಲನ್ನು ಇರಿಸಿ ಇದನ್ನು ತಂತಿಯಿಂದ ಬಿಗಿದಿರುತ್ತಾರೆ. ಜೋಗತಿಯರು ಇದನ್ನು ತಾವು ಹಾಡುವ ಹಾಡಿಗೆ ತಕ್ಕಂತೆ ಲಯಬದ್ಧವಾಗಿ ನುಡಿಸುತ್ತಾರೆ. ಇದರ ಬೆಲೆ : 11ರೂಪಾಯಿಗಳು.

ಪಲ್ಲಕ್ಕಿಯ ಬೊಂಬು :- ಪಲ್ಲಕ್ಕಿಯಬೊಂಬನ್ನು ಪಲ್ಲಕ್ಕಿಯನ್ನು ಹೋರುವುದಕ್ಕಾಗಿ ಬಳಸುತ್ತಾರೆ. ಬೊಂಬು ಅರ್ಧವೃತ್ತಾಕಾರದಲ್ಲಿ ಬಾಗಿ, ಎರಡೂ ಬದಿಯಲ್ಲಿ ಮುಂದುವರಿದಿರುತ್ತದೆ. ಆಕೃತಿಗೆ ತಕ್ಕಂತೆ ಇದರ ಬೊಂಬನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಇದನ್ನು ತಯಾರಿಸುವಾಗ ಅದೇ ಆಕಾರದಲ್ಲಿ ಬಾಗಿ ಬೆಳೆದ ಬೊಂಬನ್ನು ಆರಿಸಿ ತರುವರು. ನಂತರ ಗೆಣ್ಣುಗಳನ್ನು ಸವರಿ ಮೇಲ್ಮೈಯನ್ನು ನಯವಾಗಿ ತೀಡುವರು. ಇದರ ಬೆಲೆ : 100 ರೂಪಾಯಿಗಳು.

4.2.2 ಗೃಹಬಳಕೆ ಮತ್ತು ಅಲಂಕಾರಿಕ ಕರಕುಶಲವಸ್ತುಗಳು:

ಮೊರ :- ಮೊರ ಎಲ್ಲಾ ಸಮುದಾಯದವರು ಸಾಮಾನ್ಯ ವಾಗಿ ಬಳಸುವ ವಸ್ತು. ಪ್ರಾದೇಶಿಕವಾಗಿ ಇದನ್ನು ಮೊರ, ಮರ, ಎನ್ನುವರು. ಇದನ್ನು ಕಾಳುಗಳನ್ನು ಹಸನ ಮಾಡಲು ಮನೆಯಲ್ಲಿ ಬಳಸುವರು. ರೈತರು ಕಾಳು ಹೊಕ್ಕಲು ಮಾಡುವ ಸಂದರ್ಭದಲ್ಲಿ ತೂರುವ ಮೊರಗಳನ್ನು ಸಹ ಬಳಸುವುದು ಸಹಜ.ಮೊರಗಳ ಬಳಕೆಯನ್ನು ಆಧರಿಸಿ ವಿವಿಧ ನಮೂನೆಯ ಮೊರಗಳಿವೆ. ಹಸನು ಮಾಡುವ ಮೊರ, ತೂರುವ ಮೊರ, ಕಾಳು ತುಂಬುವ ಮೊರ, ಬಾಗಣದ ಮೊರ, ದೇವರನ್ನು ಕಳುಹಿಸುವಮೊರ,ಮೆಂತೇದಮೊರ,ಎಣ್ಣೆ ಮೊರ,ಬಣ್ಣದ ಮೊರ ಮುಂತಾದವು. ಮೊರವನ್ನು ತಯಾರಿಸುವಾಗ ಬಾಗಣದ ಮೊರವನ್ನು ತಯಾರಿಸುವ ರೀತಿಯಲ್ಲಿಯೇ ತಯಾರಿಸುತ್ತಾರೆ. ಆದರೆ ಆಕೃತಿಯಲ್ಲಿ ಸ್ವಲ್ಪ ದೊಡ್ಡದಾಗಿರುತ್ತದೆ. ಮೊರವನ್ನು ಬಿದಿರು ಇಲ್ಲವೇ ಬೊಂಬಿನಿಂದ ಸಹ ತಯಾರಿಸುವರು. ಮೊರದ ಬೆಲೆ: 15 ರೂಪಾಯಿಗೆ ಜೊತೆ(ಎರೆಡು).

ಚಿಬ್ಬಲಿ :- ಇದೊಂದು ತಟ್ಟೆಯಾಕಾರದ ಬಿದಿರಿನಿಂದ ತಯಾರಿಸಿದ ಮುಚ್ಚಳ. ಇದನ್ನು ಪುಟ್ಟಿ ಪಾತ್ರೆಗಳನ್ನು ಮುಚ್ಚಲು, ಬಸಿಯಲು, ವಸ್ತುಗಳನ್ನು ಒಣಗಿಸಲು ಬಳಸುವರು. ಪ್ರಾದೇಶಿಕವಾಗಿ ಇದನ್ನು ಚಿಬ್ಬಲಿ, ಸಿಬ್ಬಲಿ, ಸಿಬ್ಬಲ್, ಸಿಬ್ಲಿ ಜಗ, ಚಿಬ್ಲು , ಎಂದು ಕರೆಯುತ್ತಾರೆ. ಇದನ್ನು ತಯಾರಿಸುವಾಗ ಮೊದಲು ಬಿದಿರು ಇಲ್ಲವೇ ಬೊಂಬಿನಿಂದ ತೆಳುವಾದ ಆಕವನ್ನು ಮಾಡಿಕೊಳ್ಳುವರು. ನಂತರ ತೆಳುವಾದ ಓಳಿನಿಂದ ತಳಸುತ್ತಿ ಒಂಬಿನಿಂದ ತಳ ಬಡಿದು ಬಾಗಿಸಿ ಬಳುವಿನಿಂದ ಸುತ್ತುತ್ತಾರೆ. ಕೊನೆಗೆ ಮೂರು ಬಳುವಿನಿಂದ ದಿಂಡು ಕಟ್ಟಿ ಉಳಿದ ಆಕಗಳನ್ನು ದಿಂಡಿನಲ್ಲಿ ಬಾಗಿಸಿ ಸಿಕ್ಕಿಸುವರು. ಇದರ ಬೆಲೆ =10 ರೂಪಾಯಿಗಳು.

ಸಂಬಳಿಗಿ(ಈರುಳ್ಳಿಪುಟ್ಟಿ) :- ಇದು ಸಿಲಿಂಡರ್ ಆಕಾರದ, ಮೇಲೆ ಹಿಡಿಕೆ ಇರುವ ಬಿದಿರಿನ ಪುಟ್ಟಿ. ಮೇಲೆ ಕೆಳಗೆ ಸರಿದಾಡುವಂತೆ ಇದರ ಮುಚ್ಚಳವನ್ನು ಹಿಡಿಕೆಗೆ ಹೊಂದಿಕೊಂಡೇ ಪೋಣಿಸಿರುತ್ತಾರೆ. ಇದನ್ನು ಈರುಳ್ಳಿ ಮತ್ತು ತರಕಾರಿ ಹಾಕಲು, ಹೂವುಗಳನ್ನು ಸಾಗಿಸಲು, ಬುತ್ತಿಯನ್ನು ಕೊಂಡೊಯ್ಯಲು, ಉಳಿದ ಅಡುಗೆಯನ್ನು ಗಾಳಿಗೆ ಇರುವಂತೆ ಮತ್ತು ನೊಣ, ಸೊಳ್ಳೆ, ಜಿರಲೆಗಳ ಸಂಪರ್ಕದಿಂದ ದೂರವಿರಿಸಲು ಉಪಯೋಗಿಸುತ್ತಾರೆ. ಸಂಬಳಿಗೆಯನ್ನು ತಯಾರಿಸುವಾಗ ಮೊದಲು, ಬಿದಿರು ಇಲ್ಲವೇ ಬೊಂಬಿನಿಂದ ಮಧ್ಯಮಗಾತ್ರದ ಆಕವನ್ನು ಚಕ್ರಾಕಾರದಲ್ಲಿ ಹೊಂದಿಸಿ ಓಳಿನಿಂದ ಸುತ್ತುವರು. ಒಂದು ಅಡಿ ಅಗಲದಷ್ಟು ತಳವನ್ನು ಸುತ್ತಿ ನಂತರ ತಳವನ್ನು ಸಿಲಿಂಡರಾಕಾರದಲ್ಲಿ ಬಾಗಿಸಿ ದಪ್ಪನೆಯ ಓಳಿನಿಂದ ಗೋಡೆಯನ್ನು ಸುತ್ತಿ ನಂತರ ದಿಂಡನ್ನು ಮೂರು ಬಳುವಿನಿಂದ ಮೂರು ಇಂಚಿನಷ್ಟು ದಿಂಡು ಸುತ್ತುತ್ತಾರೆ. ಬಿದಿರಿನ ಹಸಿರುಭಾಗದ ಬಾಕ್ಪಾದಿಂದ ಕಮಾನಿನ ಆಕಾರದಲ್ಲಿ ಮುಚ್ಚಳವನ್ನು ಸೇರಿಸಿ ಪುಟ್ಟಿಯ ಗೋಡೆಯಗುಂಟ ಬಗಿದು, ತಳದಭಾಗದಲ್ಲಿ ಬಾಗಿಸುವರು. (ಎರಡನೇ ಛಾಯಾಚಿತ್ರವನ್ನು ಗಮನಿಸಿರಿ) ಇದು ಸುಂದರವಾಗಿ ಕಾಣಲು ಬಣ್ಣದ ಬಳುವುಗಳನ್ನು ಬಳಸುವರು. ಇದರ ಬೆಲೆ : 35 ರೂಪಾಯಿಗಳು.

ಪುಟ್ಟಿ (ಡಾಣಿಪುಟ್ಟಿ) :- ಪುಟ್ಟಿಗಳಲ್ಲಿ ಅನೇಕವಿಧಗಳಿವೆ. ಗೃಹ ಉಪಯೋಗದಿಂದ ರೈತರು, ವ್ಯಾಪಾರಿಗಳು, ತಮ್ಮ ನಿತ್ಯಬಳಕೆಯಲ್ಲಿ ವಿವಿಧ ಉದ್ದೇಶಗಳಿಗೆ ಬಳಕೆಮಾಡುತ್ತಾರೆ. ಪುಟ್ಟಿಯನ್ನು ತಯಾರಿಸುವಾಗ ಮೊದಲು ಹಸಿ ಬಿದಿರಿನಿಂದ ಆಕಗಳನ್ನು ತಯಾರಿಸಿಕೊಂಡು ಚಕ್ರಾಕಾರದಲ್ಲಿ ಹೊಂದಿಸಿ ತಳ ಸುತ್ತಿಕೊಳ್ಳುವರು. ನಂತರ ಬಿದಿರಿನ ಬಾಕಗಳಿಂದ ತಳವನ್ನು ಮುಂದುವರಿಸಿ ಬಾಗಿಸಿಕೊಳ್ಳುವರು. ಗೋಡೆಯನ್ನು ವೃತ್ತಾಕಾರದಲ್ಲಿ ಬಡಿಯುತ್ತಾ ಎರಡು ಬಳುವಿನಿಂದ ಆಕಗಳಸುತ್ತಾ ಸುತ್ತುವರು. (ಮೂರನೇ ಛಾಯಾಚಿತ್ರವನ್ನು ಗಮನಿಸಿರಿ)ಎತ್ತರ ಸಾಕೆನಿಸಿದಾಗ ಮೂರುಬಳುವುಗಳಿಂದ ದಿಂಡು ಸುತ್ತುವರು. ಕೊನೆಗೆ ಆಕಗಳನ್ನು ತಿರಿವಿ ದಿಂಡಿನಲ್ಲಿ ಬಾಗಿಸಿ ಸಿಕ್ಕಿಸುವರು. ಇದರ ಬೆಲೆ ಪುಟ್ಟಿಯ ಆಕಾರಕ್ಕೆ ತಕ್ಕಂತೆ ಇರುತ್ತದೆ. ಸಮಾನ್ಯವಾಗಿ : 20-80 ರೂಪಾಯಿಗಳು.

ಬೀಸಣಿಕೆ :- ಬೀಸಣಿಕೆ, ಗಾಳಿಯನ್ನು ಬೀಸಿಕೊಳ್ಳಲು ಬಳಸುವ ಒಂದು ಸಾಧನ. ಬೀಸಣಿಕೆಗಳಲ್ಲಿ ಅನೇಕ ಪ್ರಕಾರಗಳಿವೆ. ಸಾದಾಬೀಸಣಿಕೆ, ಚೌಕಬೀಸಣಿಕೆ, ಇಸ್ತ್ರಿ ಬೀಸಣಿಕೆ, ದುಂಡು ಬೀಸಣಿಕೆ, ಬಣ್ಣದ ಬೀಸಣಿಕೆ

ಮುಂತಾದವು. ಬೀಸಣಿಕೆಯನ್ನು ತಯಾರಿಸುವಾಗ, ಗಣ್ಣಿಲ್ಲದ ಬಿದಿರಿನಿಂದ ನಯವಾದ ಕಾಲು ಇಂಚಿನ ಓಳುಗಳನ್ನು ಸೀಳುತ್ತಾರೆ. ಓಳಿಗೆ ಬಣ್ಣವನ್ನು ಹಚ್ಚುವರು. ನಂತರ ಮುಂಭಾಗದಿಂದ ಹೆಣಿಕೆಯಾಕಾರದಲ್ಲಿ ಹೆಣೆದು ದಿಂಡನ್ನು ಓಳಿನಿಂದ ಬಾಗಿಸುತ್ತಾರೆ. ನಂತರ ದಿಂಡಿಗೆ 18 ಇಂಚು ಉದ್ದದ ಬಿದಿರನ್ನು ಅರ್ಧಕ್ಕೆ ಸೀಳಿ ಹೆಣಿಕೆಗೆ ಸಿಕ್ಕಿಸಿ ಒಂಬಿನಿಂದ ಚುಚ್ಚಿ ಓಳಿನಿಂದ ದಿಂಡು ಕಟ್ಟುತ್ತಾರೆ. ಇದರ ಬೆಲೆ :10-25 ರೂಪಾಯಿಗಳು.

ಜರಡಿ :- ದವಸ ಧಾನ್ಯಗಳಲ್ಲಿರುವ ಮಣ್ಣು, ಹುಡಿ, ಹರಳು, ಸೀರಗಾಳುಗಳನ್ನು ಬೇರ್ಪಡಿಸಲು ಜರಡಿಗಳನ್ನು ಬಳಸುತ್ತಾರೆ. ಜರಡಿಯನ್ನು ತಯಾರಿಸುವಾಗ ಬಿದಿರಿನ ಆಕದಿಂದ ಕಿಂಡಿ ಬಿಡುತ್ತಾ ತಳಹಾಕಿಕೊಳ್ಳುತ್ತಾರೆ.ನಂತರ ಅಗಲವಾದ ಆಕದಿಂದ ದಿಂಡು ಬಾಗಿಸಿಕೊಂಡು ಸುತ್ತಲೂ ಮೂರು ಇಂಚು ಎತ್ತರದಷ್ಟು ದಿಂಡನ್ನು ಕಟ್ಟುವರು. ಜರಡಿಯ ಬೆಲೆ : 30-40 ರೂಪಾಯಿಗಳು. ಇತ್ತೀಚಿಗೆ ತಗಡಿನ ಮತ್ತು ಪ್ಲಾಸ್ಟಿಕ್ ಜರಡಿಗಳು ಬಳಕೆಗೆ ಬಂದಿರುವವು.

ಪೀಠೋಪಕರಣಗಳು :- ಬಿದಿರು ಮತ್ತು ಬೆತ್ತಗಳನ್ನು ಉಪಯೋಗಿಸಿ ಅನೇಕ ಪೀಠೋಪಕರಣಗಳನ್ನು ತಯಾರಿಸುವರು. ಇವುಗಳನ್ನು ಬೆಲೆಗೆ ತಕ್ಕಂತೆ ವಿನ್ಯಾಸಗೊಳಿಸಿ ತಯಾರಿಸುವರು. ಇಲ್ಲಿ ನಾನು ಬಿದಿರಿನಿಂದ ತಯಾರಿಸುವ ವಸ್ತುಗಳನ್ನು ಮಾತ್ರ ಗಮನಿಸಿರುವುದರಿಂದ ಬೆತ್ತದಿಂದ ತಯಾರಿಸಿದ ವಸ್ತುಗಳಿಗೆ ಹೆಚ್ಚು ಒತ್ತು ಕೊಟ್ಟಿಲ್ಲ. ಬಿದಿರು ಮತ್ತು ಬೆತ್ತದಿಂದ ತಯಾರಿಸಿದ ಕೆಲವುಪೀಠೋಪಕರಣಗಳನ್ನು ಹದಿಮೂರನೇ ಛಾಯಾ ಚಿತ್ರದಲ್ಲಿ ಗಮನಿಸಿರಿ.

ಮಂಚ :- ಮಂಚವನ್ನು ಸಹ ಬೆತ್ತ ಮತ್ತು ಬಿದಿರಿನಿಂದ ತಯಾರಿಸುತ್ತಾರೆ. ಮಂಚವನ್ನು ಬಿದಿರಿನಿಂದ ತಯಾರಿಸುವಾಗ ಕೆಲವು ನಿಯಮಗಳನ್ನು ಪಾಲಿಸುತ್ತಾರೆ. ಅಂದರೆ ಬಿದಿರಿನ ಪಟ್ಟಿಗಳನ್ನು ಅಡ್ಡಲಾಗಿ ಮಂಚಕ್ಕೆ ಬಡಿಯುವುದಿಲ್ಲ ಏಕೆಂದರೆ ಸಿದಿಗಿಗೆ (ಮೃತರ ದೇಹವನ್ನು ಹೊತ್ತು ಸಾಗಿಸುವ ಸಾಧನ) ಮಾತ್ರ ಅಡ್ಡ ಪಟ್ಟಿಯನ್ನು ಹೊಡಿಯುತ್ತಾರೆ. ಮಂಚವನ್ನು ತಯಾರಿಸುವಾಗ ಮೊದಲು 6 ಅಡಿ ಉದ್ದದ 2 ಗಟ್ಟಿಯಾದ ಬೊಂಬನ್ನು ತೆಗೆದುಕೊಳ್ಳುತ್ತಾರೆ. ಅದಕ್ಕೆ 1.5 ಅಡಿಗೊಂದರಂತೆ ಎರಡೂ ಬೊಂಬುಗಳಿಗೆ ಸಮಾನಾಂತರದಲ್ಲಿ 5 ರಂಧ್ರಗಳನ್ನು ಹಾಕುವರು. ಗಟ್ಟಿಯಾದ 2.5-3-5 ಅಡಿ ಅಗಲದ ಬಿದಿರನ್ನು ಅಡ್ಡವಾಗಿ ಹಾಕಿ ಏಣಿಯಂತೆ ಮಾಡುತ್ತಾರೆ. ನಂತರ ಬೊಂಬಿನಿಂದ 6 ಅಡಿ ಉದ್ದದ 0.5 ಇಂಚು ಅಗಲದ ಬಿದಿರಿನ ದಬ್ಬೆಗಳಿಂದ ಈ ಆಕೃತಿಗೆ ಉದ್ದಲಾಗಿ ಮಳೆಯಿಂದ ಬಡಿಯುವರು. ನಂತರ ನಾಲ್ಕು ಮೂಲೆಗಳಿಗೆ ಗಟ್ಟಿ ಬಿದಿರಿನ 1.5ಅಡಿ ಎತ್ತರದ ಕಾಲುಗಳನ್ನು ಹೊಂದಿಸಿ ಬಡಿಯುತ್ತಾರೆ. ಇದರ ಬೆಲೆ : 250 ರೂಪಾಯಿಗಳು.

ಸ್ಟೂಲು :- ಸ್ಟೂಲನ್ನು ಬೆತ್ತ ಮತ್ತು ಬಿದಿರಿನಿಂದ ತಯಾರಿಸುತ್ತಾರೆ. ಸಾಮಾನ್ಯವಾಗಿ ಮೂರು ಕಾಲಿನ ಮತ್ತು ನಾಲ್ಕು ಕಾಲಿನ ಸ್ಟೂಲುಗಳನ್ನು ತಯಾರಿಸುತ್ತಾರೆ. ಸ್ಟೂಲನ್ನು ಕೂಡಲು ಮತ್ತು ಎತ್ತರ ಹೆಚ್ಚಳಿಕೆಗೆ ಬಳಸುತ್ತಾರೆ. ಇದನ್ನು ತಯಾರಿಸುವ ಮೊದಲು. ಗಟ್ಟಿಯಾದ ಬಿದಿರಿನಿಂದ ಕಾಲುಗಳನ್ನು ತಯಾರಿಸಿಕೊಂಡು ಒಂದಕ್ಕೊಂದು

ಚೌಕಾಕಾರದಲ್ಲಿ ಹೊಂದಿಸಿ ಮೊಳೆ ಬಡಿಯುತ್ತಾರೆ. ಮೇಲ್ಭಾಗಕ್ಕೆ ಬಿದಿರಿನ ದಬ್ಬೆಗಳಿಂದ ತಯಾರಿಸಿದ ತಟ್ಟೆಯನ್ನು ಬಡಿದು ದಿಂಡು ಕಟ್ಟುವರು. ಇದರ ಬೆಲೆ : 30 ರೂಪಾಯಿಗಳು .

ರ್‍ಯಾಕ್ :- ಬಿದಿರು ಮತ್ತು ಬೆತ್ತವನ್ನು ಬಳಸಿ, ಪುಸ್ತಕ, ಬಾಂಡೇ ಸಾಮಗ್ರಿ, ಮುಂತಾದ ವಸ್ತುಗಳನ್ನು ಇರಿಸಲು ರ್‍ಯಾಕ್ ತಯಾರಿಸುತ್ತಾರೆ. ಬಳಕೆದಾರನ ಅನುಕೂಲಕ್ಕೆ ತಕ್ಕಂತೆ ಇದರ ಗಾತ್ರವನ್ನು ನಿರ್ಧರಿಸುತ್ತಾರೆ. ರ್‍ಯಾಕ್ ತಯಾರಿಸುವಾಗ ಇದನ್ನು ಸ್ಟೂಲಿನಂತೆಯೇ ತಯಾರಿಸುತ್ತಾರೆ. ಆದರೆ ಮಧ್ಯದಲ್ಲಿ ಕಪಾಟಿನಂತೆ ಖಾನಿಗಳನ್ನು ಬಿಟ್ಟು ಬಿದಿರು ಇಲ್ಲವೆ ಬೆತ್ತದಿಂದ ಘನ ಆಯತಾಕಾರದಲ್ಲಿ ತಯಾರಿಸುವರು. ಇದರ ಬೆಲೆ : 80 ರೂಪಾಯಿಗಳು ಇರುತ್ತವೆ.

ಪೆನ್ನು, ಫೋನಿನ ಸ್ಟ್ಯಾಂಡ್ ಮತ್ತು ಬೆಡ್‌ಲ್ಯಾಂಪ್ :- ಕಛೇರಿಗಳಲ್ಲಿ ಮತ್ತು ಮನೆಯಲ್ಲಿ ಲೇಖನಿ ಸಾಮಗ್ರಿಗಳನ್ನಿರಿಸಲು ಬಳಸುವ ಒಂದು ಸಾಧನ. ಮತ್ತು ಟೆಲಿಫೋನ್ ಉಪಕರಣವನ್ನು ಇಡಲು ಬಿದಿರಿನಿಂದ ಇದನ್ನು ತಯಾರಿಸುತ್ತಾರೆ. ಇವುಗಳನ್ನು ಗೋಡೆಗೆ ಸಹ ನೇತು ಹಾಕಬಹುದು. ಇಲ್ಲವೇ ಟೇಬಲ್ಲಿನ ಮೇಲೆ ಇರಿಸಿರುತ್ತಾರೆ. ಈ ಉಪಕರಣವನ್ನು ತಯಾರಿಸುವಾಗ ಕೆಲಸಗಾರನು ತನ್ನ ಕಲ್ಪನೆಗೆ ತಕ್ಕಂತೆ ಬಿದಿರಿನ ತೆಳುವಾದ ದಬ್ಬೆಗಳಿಂದ ತಯಾರಿಸುತ್ತಾನೆ.ಇದರ ಬೆಲೆ ವಿನ್ಯಾಸ ಮತ್ತು ಗಾತ್ರಕ್ಕೆ ತಕ್ಕಂತೆ ಇರುತ್ತವೆ. ಅಂದರೆ : 15-100 ರೂಪಾಯಿಗಳು ಇರುತ್ತವೆ. (ಹನ್ನೊಂದನೇ ಛಾಯಾಚಿತ್ರವನ್ನು ಗಮನಿಸಿರಿ.)

ಅಟ್ಟ :- ರೈತರು ತಮ್ಮ ಕೊಟ್ಟಿಗೆಗಳಲ್ಲಿ ಜಾನುವಾರುಗಳ ಮೇವು, ಹೊಟ್ಟು ಮತ್ತು ಕೃಷಿ ಸಲಕರಣೆಗಳನ್ನು ಇಡಲು ಬಳಸುತ್ತಾರೆ. ಅಟ್ಟವನ್ನು ದನದಕೊಟ್ಟಿಗೆಯಲ್ಲಿಯೇ ಜಾನುವಾರುಗಳನ್ನು ಕಟ್ಟುವಸ್ಥಳದಲ್ಲಿ ಕಂಬಗಳಿಗೆ ಹೊಂದಿಕೊಂಡಂತೆ ಮೇಲೆ ನಿರ್ಮಿಸಿರುತ್ತಾರೆ. ಇದನ್ನು ತಯಾರಿಸುವಾಗ ನಾಲ್ಕು ಕಂಬಗಳಿಗೆ ಹೊಂದಿಕೊಂಡಿರುವಂತೆ ಬಿದಿರನ್ನು ಕಟ್ಟುತ್ತಾರೆ. ನಂತರ ಮಧ್ಯದಲ್ಲಿ ಬಿದಿರಿನ ದಬ್ಬೆಗಳನ್ನು 0.5 ಅಡಿಗೊಂದರಂತೆ ಮೊಳೆಗಳಿಂದ ಬಡಿಯುವರು. ಇದರ ಬೆಲೆ ಸೈಜಿಗೆ ತಕ್ಕಂತೆ 4-5 ಅಡಿ ಸೈಜಿಗೆ 50ರಿಂದ 100 ರೂಪಾಯಿಗಳು ಇರುತ್ತವೆ.

ತರಕಾರಿಯ ಪುಟ್ಟಿ :- ತರಕಾರಿ ಪುಟ್ಟಿಗಳಲ್ಲಿ ಅನೇಕ ನಮೂನೆಗಳುಂಟು. ಅಂದರೆ ತರಕಾರಿ ಮಾರುವವರು ಒಂದು ನಿರ್ದಿಷ್ಟ ಸ್ಥಳದಲ್ಲಿ ಕುಳಿತು ಬಗೆಬಗೆಯ ತರಕಾರಿಗಳನ್ನು ವಿವಿಧ ಗಾತ್ರದ ಪುಟ್ಟಿಗಳಲ್ಲಿ ತುಂಬಿ ಇರಿಸಿಕೊಂಡು ಮಾರುತ್ತಾರೆ. ಇವರು ಬಳಸುವ ಪುಟ್ಟಿಗಳು ಸಾಮಾನ್ಯವಾಗಿ ಚಿಕ್ಕದಾಗಿರುತ್ತವೆ. ಗೆಡ್ಡೆ-ಗೆಣಸು,ಕಾಯಿ ಮುಂತಾದವುಗಳನ್ನು ಹಾಕಲು ವತ್ತಾಗಿ ಹೆಣೆದ ಪುಟ್ಟಿಯನ್ನು ಮತ್ತು ಸೊಪ್ಪು ಹಾಕಲು ಜಾಳುಜಾಳಾಗಿ ಹೆಣೆದ ಪುಟ್ಟಿಗಳನ್ನು ಇವರು ಬಳಸುವರು. ಇದರಿಂದ ತರಕಾರಿಗಳು ಬೇಗನೆ ಕೆಡುವುದಿಲ್ಲ. ಕೆಲವು ವ್ಯಾಪಾರಿಗಳು ತರಕಾರಿಯನ್ನು ದೊಡ್ಡ ಪುಟ್ಟಿಯಲ್ಲಿ ತಲೆಯಮೇಲೆ ಹೊತ್ತು ಮಾರಾಟ ಮಾಡುತ್ತಾರೆ. ಇವರು ಬಳಸುವ ಪುಟ್ಟಿಗಳು ಗಾತ್ರದಲ್ಲಿ ದೊಡ್ಡವು ಮತ್ತು ವಿಶಾಲವಾದ ಬಾಯಿಯನ್ನು ಹೊಂದಿದ್ದು ಗಟ್ಟಿ ಮುಟ್ಟಾಗಿರುತ್ತವೆ. ಈ ಪುಟ್ಟಿಗಳನ್ನು ತಯಾರಿಸುವಾಗ ಬಿದಿರು/ಬೊಂಬಿನ ದಪ್ಪನಾದ ಆಕವನ್ನು ಸೀಳಿ ತೆಳುವಾದ ಓಳಿನಿಂದ ತಳಸುತ್ತುತ್ತಾರೆ.

1ಅಡಿತಳಸುತ್ತಿದ ನಂತರ ಸಿಲಿಂಡರ ಆಕಾರದಲ್ಲಿ ಬಾಗಿಸುವರು. ನಂತರ ದಪ್ಪನೆಯ ಓಳಿನಿಂದ ಗೋಡೆಸುತ್ತುವರು. ಗೋಡೆ 1.5 - 2. ಅಡಿ ಎತ್ತರವಾದ ನಂತರ, ದಪ್ಪನೆಯ ಸೆಲಿಗೆಯಿಂದ ಮೂರು ಇಂಚು ದಿಂಡು ಕಟ್ಟುವರು. ಉಳಿದ ಆಕಗಳನ್ನು ದಿಂಡಿನಲ್ಲಿ ಬಾಗಿಸಿ ಸಿಕ್ಕಿಸುವರು. ಇವುಗಳ ಬೆಲೆ : 25-30 ರೂಪಾಯಿಗಳು ಇರುತ್ತವೆ.

ಬಿದಿರಿನ ತಟ್ಟಿ :- ಇವುಗಳಲ್ಲಿ ಎರಡು ವಿಧದ ಟ್ಟಿಗಳಿವೆ, ಬಿದಿರಿನ ಸೀಳು ಪಟ್ಟಿಗಳಿಂದ ತಯಾರಿಸಿದ ತಡಿಕೆಗಳು.ಮತ್ತು ಬಿದಿರಿನ ದಪ್ಪನೆಯ ಕಡ್ಡಿಗಳಿಂದ ತಯಾರಿಸಿದ ಹವಾನಿಯಂತ್ರಿತ ತಟ್ಟಿಗಳು. ಇವುಗಳನ್ನು ಬೇಲಿ, ಮತ್ತು ವಿಶೇಷವಾಗಿ ಗಾಳಿ ಬೆಳಕು ಬರುವಂತೆ ಹೊರಗೋಡೆಯಾಗಿ ಕಟ್ಟಲು ಉಪಯೋಗಿಸುತ್ತಾರೆ. ತಟ್ಟಿಯನ್ನು ಚೌಕ, ಆಯತ, ಡೈಮಂಡ್, ಮತ್ತು ಇನ್ನೂ ಕೆಲವು ಆಕಾರಗಳಲ್ಲಿ ತಯಾರಿಸುವರು. 6 ಅಡಿ ಉದ್ದದಷ್ಟು ಬೊಂಬನ್ನು ಕಡಿದುಕೊಂಡು ಮೊದಲು ಸೀಳಿ 0.5 ಇಂಚಿಗೊಂದರಂತೆ ಪಟ್ಟಿಯನ್ನು ತಯಾರಿಸಿ ಆಕಾರಕ್ಕೆ ತಕ್ಕಂತೆ ಹೊಂದಿಸಿ ಮಳೆಬಡಿಯುತ್ತಾರೆ. ಇವುಗಳನ್ನು, ಡಾಬಾ,ರಿಸಾರ್ಟ್, ರೆಸ್ಟೋರೆಂಟ್, ಮನೆಯ ಮುಂದಿನ ಕಾಂಪೌಂಡಿಗೆ, ಮತ್ತು ತಾತ್ಕಾಲಿಕ ಹೋಟಲ್‌ಗಳ ನಿರ್ಮಾಣದಲ್ಲಿ ಬಳಸುತ್ತಾರೆ. ಇವುಗಳ ಬೆಲೆಯನ್ನು ವಿನ್ಯಾಸದ ಮೇಲೆ ಕಟ್ಟು ತ್ತಾರೆ ಸಾಮಾನ್ಯವಾಗಿ 6,4 ಸೈಜಿನ ತಟ್ಟಿಗೆ 50-100 ರೂಪಾಯಿಗಳು. ಹವಾನಿಯಂತ್ರಿತ ತಟ್ಟಿಗಳನ್ನು ರಿಸಾರ್ಟ ಮತ್ತು ಹೋಟಲ್‌ಗಳಲ್ಲಿ ಗೋಡೆಯ ಬದಲು ಉಪಯೋಗಿಸುತ್ತಾರೆ. (ಐದನೇ ಛಾಯಾಚಿತ್ರವನ್ನು ನೋಡಿರಿ)

ಮಿನಿನ ಮಂಕರಿ :- ಇದು ಮೀನನ್ನು ಹಿಡಿಯಲು ಬಳಸುವ ಒಂದುಸಾಧನ. ಇದನ್ನು ಮೀನುಗಾರರು ತಮಗೆ ಬೇಕಾದ ಗಾತ್ರದಲ್ಲಿ ಹೇಳಿ ಮಾಡಿಸಿಕೊಳ್ಳುತ್ತಾರೆ. ಮೀನಿನ ಮಂಕರಿಯನ್ನು ತಯಾರಿಸುವಾಗ ದಪ್ಪನೆಯ ಆಕದಿಂದ ತಳ ಸುತ್ತಿಕೊಂಡು 6 ಇಂಚಿನಷ್ಟು ತಳವನ್ನು ಸುತ್ತಿ, ಅದನ್ನು ಕೋಳಿಯ ಮೊಟ್ಟೆಯಾಕಾರದಲ್ಲಿ 2 ಅಡಿ ಉದ್ದದಷ್ಟು ತೆಳ್ಳನೆಯ ಬಳುವಿನಿಂದ ಸುತ್ತಿ ಬಾಗಿಸುವರು. ಮುಂದಿನ ಬಾಯಿಯನ್ನು 4 ಇಂಚು ಇರುವಂತೆಮಾಡಿ ಅದನ್ನು ದಪ್ಪನೆಯ ಬಳುವಿನಿಂದ ಮೂರು ಇಂಚು ದಿಂಡು ಸುತ್ತಿ ಉಳಿದ ಆಕಗಳನ್ನು ದಿಂಡಿನಲ್ಲಿ ಬಾಗಿಸುವರು. ಇದರ ಬೆಲೆ : 125 ರೂಪಾಯಿಗಳಿರುತ್ತವೆ.

ವಾಲ್ ಪ್ಲೇಟು :- ಮನೆಯಲ್ಲಿ ಮನೆಯ ಸೌಂದರ್ಯವನ್ನು ಹೆಚ್ಚಿಸಲು ಬಳಸುವ ಗೃಹ ಅಲಂಕಾರಿಕಗಳು ಇವು. ಕರಕುಶಲ ಕೇಂದ್ರಗಳಲ್ಲಿ ಮೇದರಿಗೆ ಇವುಗಳನ್ನು ವಿವಿಧ ವಿನ್ಯಾಸಗಳಿಂದ ತಯಾರಿಸುವ ತರಬೇತಿಯನ್ನು ಕೊಡುವರು. ಇವರ ಕುಶಲತೆಯಿಂದ ಇವುಗಳ ತಯಾರಿಕೆಯಲ್ಲಿ ಹೊಸ ಆವಿಷ್ಕಾರಗಳನ್ನು ಕೊಟ್ಟು ತಯಾರಿಸುತ್ತಾರೆ. ಇವುಗಳನ್ನು ಬಿದಿರು ಮತ್ತು ಬೆತ್ತ ಉಪಯೋಗಿಸಿ ತಯಾರಿಸುವುದುಂಟು. ಇವುಗಳ ಬೆಲೆ ಗಾತ್ರ, ಗುಣ ಮಟ್ಟ ಮತ್ತು ವಿನ್ಯಾಸವನ್ನು ಅವಲಂಬಿಸಿರುತ್ತದೆ. ಇದರ ಬೆಲೆ 10-15 ರೂಪಾಯಿಗಳು.

ಹೂವಿನ ಕುಂಡ :- ಮನೆಯಲ್ಲಿ ಪಡಸಾಲೆ, ವಿಶ್ರಾಂತಿ ಕೋಣೆ ಮತ್ತು ಹೊರಗಡೆ ವೇದಿಕೆ, ಕಛೇರಿ, ಮುಂತಾದವುಗಳಲ್ಲಿ ನೈಸರ್ಗಿಕ ಮತ್ತು ಕೃತಕ ಹೂವು-ಗಿಡಗಳನ್ನು ಇಡಲು ತಯಾರಿಸಿರುತ್ತಾರೆ. ಹೂವಿನ ಕುಂಡಗಳನ್ನು

ಹೆಚ್ಚಾಗಿ, ಬಿದಿರು ಇಲ್ಲವೆ ಬೆತ್ತದಿಂದ ತಯಾರಿಸುವರು. ಇದನ್ನು ತಯಾರಿಸುವಾಗ ತೆಳುವಾದ ಆಕವನ್ನು ಸೈಜಿಗೆ ತಕ್ಕಂತೆ ತೆಳುವಾದ ಓಳಿನಿಂದ ಸುತ್ತಿ ತಳವನ್ನು ಬಾಗಿಸಿ ಓಳಿನಿಂದ ಬೇಕಾದಷ್ಟು ಎತ್ತರಕ್ಕೆ ಗೋಡೆಯನ್ನು ಸುತ್ತಿ ಆಕದಲ್ಲಿ ಬಾಗಿಸುತ್ತಾರೆ. ನಂತರ ಕಮಾನಿನಾಕಾರದ ಬೆಸ್ನು ಬಿದಿರಿನ ಹಿಡಿಕಿಯನ್ನು ಗೋಡೆಯ ಮೂಲಕ ತಳದಲ್ಲಿ ಸಿಕ್ಕಿಸುತ್ತಾರೆ. ಇವುಗಳ ಬೆಲೆ ಗಾತ್ರ, ಗುಣಮಟ್ಟಕ್ಕೆ ತಕ್ಕಂತೆ ಇರುತ್ತದೆ. ಇದರ ಬೆಲೆ 10-50 ರೂಪಾಯಿಗಳು.

ಟೋಪಿ :- ಟೋಪಿಯನ್ನು ಮಳೆಗಾಲ ಮತ್ತು ಬೇಸಿಗೆಯ ಕಾಲದಲ್ಲಿ ರಕ್ಷಣೆಗೆ ಹಾಕಿಕೊಳ್ಳುತ್ತಾರೆ. ಟೋಪಿಗಳಲ್ಲಿ ಅನೇಕ ಮಾದರಿ ಮತ್ತು ವಿನ್ಯಾಸಗಳು ಇವೆ. ಪ್ರಾದೇಶಿಕವಾಗಿ ತೋಪಿ, ತೊಪ್ಪಿಗೆ, ಟೊಪ್ಪಿಗೆಗಳೆಂದು ಕರೆಯುವರು. ಟೋಪಿಗಳನ್ನು ಬಿದಿರು ಇಲ್ಲವೇ ಬೆತ್ತದಿಂದ ತಯಾರಿಸುವರು. ಇವುಗಳನ್ನು ತಯಾರಿಸುವಾಗ ತೆಳುವಾದ ಆಕಗಳನ್ನು ತೆಳುವಾದ ಓಳಿನಿಂದ ತಳವನ್ನು ಸುತುತ್ತಾರೆ. ಅದನ್ನು ಅರ್ಧ ಚಂದ್ರಾಕಾರದಲ್ಲಿ ಬಾಗಿಸಿ ತೆಳುವಾದ ಬಳುವಿನಿಂದ 6 ಇಂಚು ಸುತ್ತುವರು. ನಂತರ ಆಕವನ್ನು ಹೊರಮುಖವಾಗಿ ಬಾಗಿಸಿಕೊಂಡು ಬಳುವಿನಿಂದ 2 ಇಂಚು ಅಗಲದಷ್ಟು ವೃತ್ತಾಕಾರದಲ್ಲಿ ಸುತ್ತುವರು. ದಿಂಡನ್ನು ಸುತ್ತಿ ಉಳಿದ ಆಕಗಳನ್ನು ದಿಂಡಿನಲ್ಲಿ ಬಾಗಿಸುತ್ತಾರೆ. ಇದು ಸುಂದರವಾಗಿ ಕಾಣಲು ಅಲ್ಲಲ್ಲಿ ವಿವಿಧ ಬಣ್ಣದ ಬಳುವನ್ನು ಬಳಸಿರುತ್ತಾರೆ. ಇವುಗಳ ಬೆಲೆ : 25-50 ರೋಪಾಯಿಗಳು ಇರುತ್ತವೆ.

ಹೂವಿನ ಬೊಕ್ಕೆಯ ಸ್ಟ್ಯಾಂಡ್ :- ವಿಶೇಷ ಸಂದರ್ಭಗಳಾದ, ಮದುವೆ, ಹುಟ್ಟು ಹಬ್ಬದಂತಹ ಕಾರ್ಯ ಕ್ರಮಗಳಲ್ಲಿ ಬಿದಿರಿನಿಂದ ತಯಾರಿಸಿದ ಬೊಕ್ಕೆಗಳಲ್ಲಿ ಹೂಗುಚ್ಚಗಳನ್ನು ಇರಿಸಿ ಕೊಟ್ಟು ಶುಭಾಶಯ ಕೋರುವರು. ಹೂವಿನ ಬೊಕ್ಕೆಯ ಸ್ಟ್ಯಾಂಡ್‌ಗಳನ್ನು ನಯವಾದ ಬಿದಿರು, ಇಲ್ಲವೇ ಬೆತ್ತದಿಂದ ತಯಾರಿಸುವರು. ತಯಾರಿಸುವಾಗ ತೆಳುವಾದ ಆಕದಿಂದ ಸೈಜಿಗೆ ತಕ್ಕಂತೆ ತಳವನ್ನು ಸುತ್ತುವರು. ನಂತರ ಆಕವನ್ನು ಬಾಗಿಸಿ ಸಿಲಿಂಡರಿನ ಆಕಾರದಲ್ಲಿ ನಯವಾದ ಓಳುಗಳಿಂದ ಗೋಡೆಯನ್ನು ಸುತ್ತುವರು. ಸ್ವಲ್ಪ ಎತ್ತರದನಂತರ ಅರ್ಧಭಾಗದಲ್ಲಿ ಮಾತ್ರ ತೆಳುವಾದ ಓಳುಗಳನ್ನು ಆಕದಲ್ಲಿ ಸಿಕ್ಕಿಸಿ ಡೈಮಂಡ್ ಆಕಾರದಲ್ಲಿ ಹೆಣೆಯುತ್ತಾ ಅರ್ಧಭಾಗವನ್ನು ಎತ್ತರಕ್ಕೆ ಹೆಣೆದು ಉಳಿದರ್ಧಭಾಗವನ್ನು ಮುಂದುವರಿದ ಭಾಗಕ್ಕೆ ಮೊಟ್ಟೆಯಾಕಾರದಲ್ಲಿ ದಿಂಡನ್ನು ಕಟ್ಟುತ್ತಾರೆ. ಇದರಲ್ಲಿ ಹೂವಿನ ಗುಚ್ಚಗಳನ್ನು ಸಿಕ್ಕಿಸುವರು. ಇವುಗಳ ಬೆಲೆ 15-50 ರೂಪಾಯಿಗಳು.

ತೊಟ್ಟಿಲು :- ಮಕ್ಕಳನ್ನು ಮಲಗಿಸಲು ಅನೇಕ ಕಡೆ ಮೇದರು ತಯಾರಿಸಿದ ಬಿದಿರಿನ ಮತ್ತು ಬೆತ್ತದ ತೊಟ್ಟಿಲುಗಳನ್ನು ಬಳಸುವರು. ಕೆಲವೊಮ್ಮೆ ಜೋಡುತೊಟ್ಟಿಲುಗಳನ್ನು ಸಹ ತಯಾರಿಸಿರುತ್ತಾರೆ. ತೊಟ್ಟಿಲನ್ನುತಯಾರಿಸುವಾಗ, ಐದು ಅಡಿ ಉದ್ದದ ದಪ್ಪನೆಯ ಆಕದಿಂದ ತಳವನ್ನು ಆಕದಿಂದಲೇ ಕಿಂಡಿಯನ್ನು ಬಿಡುತ್ತಾ ತಳ ಹಾಕುತ್ತಾರೆ. 1.5.ಅಡಿ ಅಗಲ ಮತ್ತು 2.5 ಅಡಿ ಉದ್ದವಿರುವ ಆಯತಾಕಾರದ ತಳವನ್ನು ಹಾಕುವರು. ನಂತರ ಉಳಿದ ಆಕಗಳನ್ನು ಆಯತದ ಘನಾಕಾರವಾಗಿ ಬಾಗಿಸಿ ಬಣ್ಣ ಹಚ್ಚಿದ ದಪ್ಪನೆಯ ಓಳುಗಳಿಂದ 9 ಇಂಚು ಎತ್ತರದವರೆಗೆ ಗೋಡೆ ಸುತ್ತುತ್ತಾರೆ. ನಂತರನಾಲ್ಕು ಬಳುವಿನಿಂದ ಮೂರು ಇಂಚು ಎತ್ತರದಷ್ಟು ದಿಂಡನ್ನು ಸುತ್ತುವರು. ಆಮೇಲೆ ತಳಕ್ಕೆ ಬಿಗಿಯಾಗಿರಲು

ದಪ್ಪನೆಯ 2-3 ಬಿದಿರನ್ನು ಆಕದಲ್ಲಿ ಸಿಕ್ಕಿಸುತ್ತಾರೆ. ಗೋಡೆಗಳಿಗೆ ಸಹ ದಪ್ಪನೆಯ ಬಿದಿರುಗಳನ್ನು ಹೊಂದಿಸಿ ಸಿಕ್ಕಿಸುವುದು ಸಹಜ. ಇದರ ಬೆಲೆ : 150ರೂಪಾಯಿಗಳು.

ಅವುದೇವು :- ಕಟ್ಟು ಹಾಕದಿರುವ ಮೊರ. ಇದನ್ನು ಕೆಲವು ಸಮುದಾಯದವರು ಅಂತಿಮ ಸಂಸ್ಕಾರದಲ್ಲಿ ಬಳಸುತ್ತಾರೆ. ಇದರ ಬೆಲೆ ಸಾಮಾನ್ಯವಾಗಿ : 10-12 ರೋಪಾಯಿ ಇರುತ್ತದೆ.

ಇವುಗಳಲ್ಲದೇ ಕುರ್ಚಿ, ಸೋಫಾ, ಮಂಚ, ದಿವಾನ್ ಕಾಟ್, ರೇಡಿಯೋ ಪೆಟ್ಟಿಗೆ, ಸೌಂಡ್ ಬಾಕ್ಸ್ ಪೆಟ್ಟಿಗೆ, ಲ್ಯಾಂಪು-ರೇಡಿಯೋ-ಫೋನ್-ಕ್ಯಾಸೆಟ್‌ಮುಂತಾದವುಗಳ ಸ್ಟ್ಯಾಂಡ್, ಫೋಟೋ ಫ್ರೇಮ್, ಆಕಾಶದ ಬುಟ್ಟಿ ಬುಕ್‌ಸ್ಟ್ಯಾಂಡ್, ಟೇಬಲ್‌ಲ್ಯಾಂಪ್, ಫೈಲುಗಳು, ರೂಲರ್, ಬಳೆ, ಹೇರ್‌ಪಿನ್, ಕ್ಲಿಪ್,ಕೀಗೊಂಚಲು, ಆಭರಣ ಪೆಟ್ಟಿಗೆ, ಟಿಪಾಯಿ, ಸ್ಟೂಲು, ಮುಂತಾದವುಗಳನ್ನು ಸಹಿತ ಬಿದಿರು ಮತ್ತು ಬೆತ್ತದಿಂದ ತಯಾರಿಸುತ್ತಾರೆ. ಇಲ್ಲಿ ನಾನು ಮೇದರು ಬಿದಿರಿನಿಂದ ತಯಾರಿಸುವ ವಸ್ತುಗಳನ್ನು ಮಾತ್ರ ಗಮನಿಸಿ ವಿವರಿಸಿರುವೆ.

4.2.3 ವ್ಯವಸಾಯದಲ್ಲಿ ಬಳಸುವ ವಸ್ತುಗಳು :

ಬುಕ್ಕ :- ಬೀಜಗಳನ್ನು ಬಿತ್ತುವುದಕ್ಕಾಗಿ ಉಪಯೋಗಿಸುವ ಸಾಧನ. ಬುಕ್ಕವನ್ನು ಬೀಜ ಮತ್ತು ಗೊಬ್ಬರಗಳನ್ನು ಒಂದು ನಿರ್ದಿಷ್ಟವಾದ ಅಂತರದಲ್ಲಿ ಹಾಕಲು ಬಳಸುವರು. ಮೂರು ಅಡಿ ಎತ್ತರದ ಪೊಳ್ಳು ಬೊಂಬನ್ನು ಕತ್ತರಿಸಿಕೊಂಡು ತಳದಲ್ಲಿ 5ಇಂಚು ಪಾಚನ್ನು ಕೆತ್ತುತ್ತಾರೆ. ಮೇಲ್ಭಾಗವು ದುಂಡಾಕಾರವಾಗಿರುತ್ತದೆ. ನಂತರ ಇದರಲ್ಲಿ ಬೀಜ ಮತ್ತು ಗೊಬ್ಬರಗಳು ಸುಲಭವಾಗಿ ಜಾರಿ ಹೋಗಲು ಕಮ್ಮಾರರಿಂದ ಕುಲುಮೆಯಲ್ಲಿ ರಂಧ್ರ ಹಾಕಿಸುತ್ತಾರೆ. ಇವುಗಳ ಬೆಲೆ : ಒಂದು ಜೊತೆಗೆ (ಮೂರು) 45 ರೂಪಾಯಿಗಳಿರುತ್ತವೆ.

ಶಡ್ಡಿ ಬುಕ್ಕ :- ಶಡ್ಡಿ ಬುಕ್ಕ ಶಡ್ಡಿಗೆ ಹೊಂದಿಕೊಂಡಂತೆ, ಮೂರು ಕವಲುಗಳಾಗಿ ಮೂರು ಸಾಲುಗಳಲ್ಲಿ ಒಂದೇ ಮಾದರಿಯಲ್ಲಿ ಬೀಜಗಳು ಬಿತ್ತನೆಯಾಗಲು ಉಪಯೋಗಿಸುತ್ತಾರೆ. ಶಡ್ಡಿ ಬುಕ್ಕವನ್ನು ತಯಾರಿಸಲು ಬೊಂಬಿನ ಬದಲು ಪೊಳ್ಳಾದ ಬಿದಿರನ್ನು ಬುಕ್ಕವನ್ನು ತಯಾರಿಸಿದ ರೀತಿಯಲ್ಲಿಯೇ ತಯಾರಿಸುತ್ತಾರೆ. ಇವುಗಳ ಬೆಲೆ : ಒಂದು ಜೊತೆಗೆ (ಮೂರಕ್ಕೆ) 30 ರೂಪಾಯಿಗಳು.

ಈಚು :- ಗಳೇವು ಹೊಡೆಯಲು ಎತ್ತಿನ ನೊಗದಿಂದ ಗಳೇವಿನ ದಿಂಡಿಗೆ ಸಂಪರ್ಕ ಕಲ್ಪಿಸುವ ಬಿದಿರುಗಳು. ಇವುಗಳನ್ನು ನೊಗ ಮತ್ತು ಗಳೇವಿನ ಗಾತ್ರದಮೇಲೆ ತಯಾರಿಸಿರುವರು. ಕಾಡಿನಿಂದತಂದ ತೆಳುವಾದ ಮತ್ತು ಗಟ್ಟಿಯಾದ 9 ಅಡಿ ಉದ್ದದ ಬಿದಿರನ್ನು ಕಡಿದು ಕೊಡುತ್ತಾರೆ. ಇವುಗಳ ಬೆಲೆ = ಒಂದು ಜೊತೆಗೆ (ಎರಡಕ್ಕೆ)45-50 ರೂಪಾಯಿಗಳು..

ಬಂಡಿ ಏಣಿ :- ಕಟ್ಟಿಗೆಯಿಂದ ತಯಾರಿಸಿ ಬಂಡಿಯ ಮೇಲೆ ಎರಡೂ ಮಗ್ಗಲಿಗೆ ನಿರ್ಮಿಸಿದ ತಡೆಗಳಂತೆ ಇವು ಇರುತ್ತವೆ. ರೈತರು ಕೃಷಿ ಸಾಮಗ್ರಿ, ಮತ್ತು ಕೃಷಿ ಉಪಕರಣಗಳನ್ನು ಮತ್ತು ಜನರನ್ನು ಒಂದು ಪ್ರದೇಶದಿಂದ ಮತ್ತೊಂದು

ಪ್ರದೇಶಕ್ಕೆ ಸಾಗಿಸುವಾಗ ಬಂಡಿ ಏಣಿಗೆ ಅನುಕೂಲವಾಗಿರಲು ಇದನ್ನು ಬಳಸುವರು. ಬಂಡಿ ಏಣಿಯನ್ನು 9 ಅಡಿ ಉದ್ದದ ಗಟ್ಟಿಯಾದ ಬೊಂಬಿನಿಂದ ತಯಾರಿಸುತ್ತಾರೆ. ಮೇದರು 9 ಅಡಿ ಉದ್ದದ ಬೊಂಬನ್ನು ಮಾತ್ರ ಕೊಡುತ್ತಾರೆ. ಇದರ ಮುಂದಿನ ಕೆಲಸವನ್ನು ಬಡಿಗಾರರು ಮಾಡುವರು. ಇದರ ಬೆಲೆ= ಒಂದುಜೊತೆಗೆ(ಎರಡು) 65-70 ರೂಪಾಯಿಗಳು ಇರುತ್ತದೆ.

ಕಾವು :- ಕೃಷಿಕರು ಹೊಲ, ಗದ್ದೆ, ತೋಟ-ಪಟ್ಟಿಗಳಲ್ಲಿ ಬಳಸುವ ಸೆಲಿಕಿ, ಗುದ್ಲಿ, ಕೊಡ್ಲಿ, ಮುಂತಾದವುಗಳಿಗೆ ಹಾಕಿರುವ ಹಿಡಿಗಳು. ಇವುಗಳಿಗೆ ಹಿಡಿಯ ಸೈಜಿಗೆ ತಕ್ಕಂತೆ ಗಟ್ಟಿಯಾದ 1.5-2 ಅಡಿ ಉದ್ದದ ಬಿದಿರನ್ನು ಕತ್ತರಿಸಿ ಕೊಡುತ್ತಾರೆ. ಇವುಗಳ ಬೆಲೆ : 20 ರೂಪಾಯಿ.

ಕೆರ್ಸಿ :- ಇದೊಂದು ಸಿಲಿಂಡರಾಕಾರದಲ್ಲಿ ಇರುವ ಸಂಗ್ರಹ. ಪ್ರದೇಶಾನುಸರ ಇದನ್ನು ಕೆರ್ಸಿ ಗಳಿಗಿ, ಕಣಜ, ಎಂದು ಕರೆಯುತ್ತಾರೆ. ರೈತರು ಇದರಲ್ಲಿ ಕಾಳು-ಕಡಿ ಹಾಕಿ ಸಂಗ್ರಹಿಸಲು ಬಳಸುವರು. ಇವುಗಳನ್ನು ಕೀಟಗಳಿಂದ ರಕ್ಷಿಸಲು ಮೇಲೆ ಮಣ್ಣಿನಿಂದ ಮೆತ್ತು ಹಾಕಿ ಇರಿಸುತ್ತಾರೆ. ಮತ್ತೆ ಕೆಲವು ಕೃಷಿ ಉಪಕರಣಗಳನ್ನು ಹಾಕಲು ಗಳಿಗೆಯನ್ನು ಬಳಸುತ್ತಾರೆ. ಗಳಿಗೆಯನ್ನು ತಯಾರಿಸುವಾಗ ಬಿದಿರು ಅಥವಾ ಬೊಂಬಿನಿಂದ ತೆಳುವಾದ ಓಳನ್ನು ಸೀಳಿಕೊಂಡು, ಸೈಜಿಗೆತಕ್ಕಂತೆ ತೊಟ್ಟು ಹಾಕಿಕೊಂಡು ಚಾಪೆಯಂತೆ ಹೆಣೆಯುತ್ತಾರೆ. ನಂತರ ಅದನ್ನು ಬಳಸುವವರು ಸಿಲಿಂಡರಾಕಾರದಲ್ಲಿ ಸುರುಳಿ ಸುತ್ತಿ ಎರಡೂದಿಂಡನ್ನು ಸೇರಿಸಿ ಬಿಗಿಮುಕಟ್ಟುವರು. ಇದನ್ನು ಒಂದು ಸ್ಥಳದಲ್ಲಿರಿಸಿ ಇದರಲ್ಲಿ ಬೇಕಾದ ವಸ್ತುಗಳನ್ನು ಸಂಗ್ರಹಿಸಿಡುತ್ತಾರೆ. ಇದರ ಬೆಲೆ : ಮೊಳ ಒಂದಕ್ಕೆ 25 ರೂಪಾಯಿಯಂತೆ ಸೈಜಿಗೆ ತಕ್ಕಂತೆ ಇರುತ್ತದೆ.

ಗೊಟ್ಟ :- ಜಾನುವಾರುಗಳಿಗೆ ಔಷಧಿ ಹಾಕಲು ಬಳಸುವ ಬಿದಿರಿನ ಒಂದು ಉಪಕರಣ. ಇದು ಮುಂದೆ ಜಾರಿದಂತೆ ಚೂಪಾಗಿದ್ದು, ಹಿಂದೆ ದುಂಡಾಗಿ ಟೊಳ್ಳಾಗಿರುತ್ತದೆ. ಇದರ ಹಿಂಬಾಗದಲ್ಲಿ ಗಣ್ಣು ಬಂದಿರುತ್ತದೆ. ಅದರಲ್ಲಿ ಔಷಧಿಯನ್ನು ತುಂಬಿ ಚೂಪಾದ ಭಾಗವನ್ನು ಜಾನುವಾರುಗಳ ಬಾಯಿಯಲ್ಲಿ ಇರಿಸಿ, ಔಷಧಿಯನ್ನು ಹಾಕುತ್ತಾರೆ. ಇದನ್ನು ತಯಾರಿಸಿ 10 ರೂಪಾಯಿಗೆ ಒಂದರಂತೆ ಮಾರಾಟ ಮಾಡುತ್ತಾರೆ.

ಬಂಡಿಯ ತಟ್ಟಿ :- ಬಂಡಿಯಲ್ಲಿ ಸಾಗಿಸುವ ಗೊಬ್ಬರ ಮುಂತಾದ ವಸ್ತುಗಳು ಕೆಳಕ್ಕೆ ಬೀಳದಿರಲೆಂದು ಬಂಡಿಯ ಏಣಿಗೆ ಹೊಂದಿಕೊಂಡಂತೆ ಕಟ್ಟಿದ ಬಿದಿರಿನಿಂದ ತಯಾರಿಸಿದ ಸಾಧನ. ಇದನ್ನು ತಯಾರಿಸುವಾಗ ಪೊಳ್ಳು ಬೊಂಬನ್ನು 9 ಅಡಿ ಉದ್ದದಷ್ಟು ಕತ್ತರಿಸಿ 1.5 ಇಂಚಿಗೆ ಒಂದರಂತೆ ಸೀಳಿ ದಬ್ಬೆಗಳನ್ನು ಮಾಡಿಕೊಳ್ಳುತ್ತಾರೆ. ನಂತರ ಅವುಗಳನ್ನು ಜೋಡಿಸಿ, 2.5 ಅಡಿ ಎತ್ತರ ಅಡ್ಡಬಿದಿರಿನ ಡಬ್ಬಗಳಿಗೆ ಮೇಲೆ ಮತ್ತು ಕೆಳಗೆ ಜೋಡಿಸಿ ಮೊಳೆ ಹೊಡೆಯುವರು. ಇದರ ಬೆಲೆ ಒಂದು ಜೊತೆಗೆ(ಎರಡಕ್ಕೆ) 225 ರೂಪಾಯಿಗಳು.

ಚಾಕಿಮೊರ (ಬತ್ತತೂರುವ ಮೊರ) :- ಕಾಳುಗಳನ್ನು ಗೂಡಿಸಲು ಮತ್ತು ಮಿಶ್ರಮಾಡಲು ಬಳಸುವ ಮೊರದ ಆಕಾರದಲ್ಲಿರುವ ದೊಡ್ಡ ಸೈಜಿನ ಮೊರ ಇದು. ಇದನ್ನು ತಯಾರಿಸುವಾಗ ಮೊರವನ್ನು ತಯಾರಿಸಿದಂತೆಯೇ ತಯಾರಿಸುತ್ತಾರೆ. ಇದರ ಬದಲಿಗೆ ಈಗ ತಗಡಿನ ಮತ್ತು ಪ್ಲಾಸ್ಟಿಕಿನ ಚಾಕಿಗಳು ಬಂದಿವೆ. ಲೋಹದ ಚಾಕಿಗಳು ಬಿಸಿಲಿಗೆ ಕಾಯುವುದರಿಂದ ಹೆಚ್ಚಾಗಿ ಬಿದಿರಿನ ಚಾಕಿಗಳನ್ನು ಬಳಸುತ್ತಾರೆ. ಹಮಾಲರು ಕಾಳುಗಳನ್ನು ಚೀಲಗಳಿಗೆ ತುಂಬುವಾಗ ಚಾಕಿಯನ್ನು ಬಳಸುತ್ತಾರೆ. ಇವುಗಳ ಬೆಲೆ ಒಂದು ಜೊತೆಗೆ(ಎರಡಕ್ಕೆ) 45ರೂಪಾಯಿಗಳು.

ಜಲ್ಲಿ ಮತ್ತು ಮರಿಮುಚ್ಚುವ ಪುಟ್ಟಿ :- ರೈತರು ದನ ಕರುಗಳಿಗೆ ಮೇವು ಮತ್ತು ಹೊಟ್ಟುಗಳನ್ನು ತರಲು ಮತ್ತು ಮೇಕೆ,ಕುರಿಮರಿಗಳನ್ನು ಮುಚ್ಚಲು ಇವುಗಳನ್ನು ಬಳಸುತ್ತಾರೆ. ಇವು ಗಾತ್ರದಲ್ಲಿ ಅವಶ್ಯಕತೆಗೆ ತಕ್ಕಂತೆ ಪುಟ್ಟಿಗಳಿಗಿಂತ ದೊಡ್ಡದಾಗಿರುತ್ತವೆ. ಜಲ್ಲಿಯನ್ನು ಪುಟ್ಟಿಯಂತೆಯೇ ತಯಾರಿಸುವರು.ಆದರೆ ಇವುಗಳನ್ನು ತಯಾರಿಸಲು ದಪ್ಪನೆಯ ಹಸಿರು ಬೆನ್ನು ಬಿದಿರನ್ನು ಬಳಸುತ್ತಾರೆ(ನಾಲ್ಕನೇ ಛಾಯಾಚಿತ್ರವನ್ನು ನೋಡಿರಿ). ಇವುಗಳ ಬೆಲೆ 50-55 ರೂಪಾಯಿ ಇರುವುದು.

ಗೋರಿ :- ರೈತರು ಹೊಲ-ಮನೆಗಳಿಗೆ ಬಂಡಿಯಲ್ಲಿ ಸಾಗಿಸುವ ಗೊಬ್ಬರ ಮತ್ತು ಕಾಳುಕಡಿ, ತೆನೆ, ಮುಂತಾದವುಗಳು ಚಲ್ಲದಿರಲೆಂದು ಬಂಡಿಯ ಏಣಿಯ ಒಳಗಡೆ ಇದನ್ನು ಇರಿಸುತ್ತಾರೆ. ಆಯತಾಕಾರದ ಬಾನಿಯಂತೆ ಇದ್ದು ಇದು ಒಂದು ಕಡೆ ತೆರೆದು ಕೊಂಡಿರುತ್ತದೆ. ಗೋರಿಯನ್ನು ತಯಾರಿಸಲು ಹಸಿರು ಬಿದಿರಿನ ಬೆನ್ನು ಭಾಗವನ್ನು ಬಳಸುತ್ತಾರೆ. ಮೊದಲು ಬಿದಿರಿನ ದಪ್ಪನೆಯ ದಬ್ಬೆಗಳನ್ನು ತಯಾರಿಸಿ, ತಟ್ಟಿಯನ್ನು ಹೆಣೆದಂತೆ ಬಾಗಿಸಿಕೊಳ್ಳುತ್ತಾ ಹೆಣೆಯುತ್ತಾರೆ. (ಎಂಟನೇ ಛಾಯಾಚಿತ್ರವನ್ನು ನೋಡಿರಿ.) ಇದರ ಬೆಲೆ 250 ರೂಪಾಯಿ ಇರುವುದು.

ಕಾಳುತೂರುವ ಅಟ್ಟಣಿಗೆ :- ಕಣ ಕಟ್ಟುಗಳಲ್ಲಿ ಹೊಕ್ಕಲು ಮಾಡುವಾಗ ಕಾಳುಗಳನ್ನು ಗಾಳಿಯಲ್ಲಿ ತೂರಲು ಕಾಲು ಕೆಳಗೆ ಹಾಕಿ ಕೊಳ್ಳುವ ಮೂರು ಕಾಲಿನ ಸ್ಟೂಲು. ಅಟ್ಟಣಿಗೆಯನ್ನು ತಯಾರಿಸಲು ಗಟ್ಟಿಯಾದ ಬೊಂಬುಗಳನ್ನು ಮಾತ್ರ ಇವರು ಕೊಡುತ್ತಾರೆ. ಇದರ ಆಕಾರವನ್ನು ಬಡಿಗಾರ ಮಾಡುತ್ತಾನೆ. ಇದರ ಬೆಲ 50 ರೂಪಾಯಿ ಇರುವುದು.

ಬಂಡಿಯ ಸವಾರಿ :- ಹಿಂದಿನ ಕಾಲದಲ್ಲಿ ಸಾರಿಗೆಗೆ ಬಂಡಿಯನ್ನೇ ಹೆಚ್ಚಾಗಿ ಬಳಸುತ್ತಿದ್ದರು. ಬಂಡಿಯಲ್ಲಿ ಪ್ರಯಾಣಿಸುವಾಗ ಬಿಸಿಲು, ಮಳೆ, ಗಾಳಿಯಿಂದ ರಕ್ಷಿಸಿಕೊಳ್ಳಲು ಬಂಡಿಯ ಮೇಲೆ ಏಣಿಗೆ ಹೊಂದಿಕೊಂಡಂತೆ ಸವಾರಿಯನ್ನು ಬಿಗಿಸುತ್ತಿದ್ದರು. ಸವಾರಿಯನ್ನು ಬಿಗಿಯಲು ಬಂಡಿಯ ಏಣಿಗೆ ಹೊಂದಿಕೊಂಡಂತೆ 12 ಬಿದಿರಿನ ದಪ್ಪನೆಯ ದಬ್ಬೆಗಳನ್ನು ಕಟ್ಟುವರು. ನಂತರ ದಬ್ಬೆಗಳ ಇನ್ನೊಂದು ತುದಿಯನ್ನು ಎದುರಿನ ಏಣಿಗೆ ಹೊಂದಿಸಿ ಕಟ್ಟುವರು.ಇದರ ಮೇಲೆ ಬಿದಿರಿನ ಇಲ್ಲವೇ ಈಚಲದ ಚಾಪೆ, ಇಲ್ಲವೇ ಗುಡಾರವನ್ನು ಹೊದಿಸುವರು. ಇದರ ಬೆಲೆ. 200ರೂಪಾಯಿಗಳು.

ಕುಕ್ಕೆ(ಚಿಕ್ಕ):- ಎತ್ತಿನ ಬಾಯಿಗೆ ಕಟ್ಟುವ ಒಂದು ರೀತಿಯ ಬಟ್ಟಲಾಕಾರದ ಬಿದಿರಿನ ವಸ್ತು. ಬೆಳೆ ಇರುವ ಹೊಲದಲ್ಲಿ ಗಳೆ, ಎಡೆ, ಹೊಡೆಯುವಾಗ ಎತ್ತುಗಳು ಬೆಳೆದ ಬೆಳೆಯನ್ನು ತಿನ್ನದಿರಲೆಂದು ಅವುಗಳ ಬಾಯಿಗೆ ಇವುಗಳನ್ನು ಕಟ್ಟುತ್ತಿದ್ದರು.ಕುಕ್ಕೆಯನ್ನು ತೆಳುವಾದ ಆಕಗಳಿಂದ ಡೈಮಂಡ್ ಆಕಾರದಲ್ಲಿ ಹೆಣೆಯುತ್ತಾ ಬಟ್ಟಲಿನಾಕಾರಕ್ಕೆ ಬಾಗಿಸುತ್ತಾರೆ. 1 ಇಂಚಿನಷ್ಟು ದಿಂಡನ್ನು ಕಟ್ಟುತ್ತಾರೆ. 25ರೂಪಾಯಿಗೆ ಒಂದು ಜೊತೆ (ಎರಡು) ಮಾರುತ್ತಾರೆ.

4.2.4 ಇತರೆ ವಸ್ತುಗಳು:

ಮಹಾದ್ವಾರ :- ಅನೇಕ ಸಭೆ ಸಮಾರಂಭಗಳಲ್ಲಿ ಇಂತಹ ಮಹಾದ್ವಾರಗಳನ್ನು ಮೇದರು ನಿರ್ಮಿಸುತ್ತಾರೆ. ಇವುಗಳನ್ನು ಬೆಲೆಯ ಆಧಾರದ ಮೇಲೆ ನಿರ್ಮಿಸುವರು. ಅಡವಿಪೋಲ್ಸು, ಬೊಂಬು, ಬಿದಿರು, ಬಟ್ಟೆ ಮುಂತಾದವುಗಳನ್ನು ಉಪಯೋಗಿಸಿ ತಯಾರಿಸುತ್ತಾರೆ.ನಂತರ ಇದನ್ನು ವಿದ್ಯುತ್ ದೀಪಗಳಿಂದ ಅಲಂಕರಿಸುತ್ತಾರೆ. ಇದರ ಬೆಲೆ ಸೈಜಿಗೆ ಮತ್ತು ವಿನ್ಯಾಸಕ್ಕೆ ತಕ್ಕಂತೆ ಇರುತ್ತದೆ. (ಹದಿನಾರನೇ ಛಾಯಾಚಿತ್ರವನ್ನು ನೋಡಿರಿ)

ಕಮಾನು :- ರಸ್ತೆಯ ಮಧ್ಯದಲ್ಲಿ ಸ್ವಾಗತ, ಶುಭಾಶಯ,ಮುಂತಾದವುಗಳನ್ನು ತಿಳಿಸಲು ಕಮಾನು ನಿರ್ಮಿಸಿರುತ್ತಾರೆ. ಕಮಾನುಗಳನ್ನು ರಸ್ತೆಯ ಎರಡೂ ಬದಿಗೆ ಹೊಂದಿಕೊಂಡಂತೆ ಬೊಂಬುಗಳನ್ನು ಹುಗಿದು ಅವುಗಳಿಗೆ ಬಣ್ಣದ ತಟ್ಟೆಯನ್ನು ಕಟ್ಟುವರು. ಮೇಲ್ಭಾಗಕ್ಕೆ ಸ್ವಾಗತದ ಬಟ್ಟೆಯನ್ನು ಕಟ್ಟುವರು. ಇದಕ್ಕೆ ಬೆಲೆ ಹೆಚ್ಚು ಕೊಟ್ಟಂತೆ ಬಿದಿರಿನ ವಿನ್ಯಾಸಗಳನ್ನು ಮಾಡಿ ಅಲಂಕರಿಸುವರು. ಇವುಗಳಿಗೆ 300-1000 ರೂಪಾಯಿಗಳನ್ನು ಇವರು ವಿಧಿಸುತ್ತಾರೆ.

ರಂಗಮಂದಿರ :- ಮೇದರು ಹವ್ಯಾಸಿ ಕಲಾವಿದರು ಅಭಿನಯಿಸುವ ತಾತ್ಕಾಲಿಕ ರಂಗ ಮಂದಿರವನ್ನು ನಿರ್ಮಿಸಿ ಕೊಡುತ್ತಾರೆ. ರಂಗ ಸಜ್ಜಿಕೆಯನ್ನು ಸಹ ಬಿದಿರಿನ ಪರಿಕರಗಳನ್ನು ಬಳಸಿ ನಿರ್ಮಿಸುವರು. ಇವರು ರಂಗಮಂದಿರದ ವೇದಿಕೆ ಯಿಂದ ಹೊರಗಡೆ ತಡೆಗೋಡೆ ಮತ್ತು ಮೇಲ್ಛಾವಣಿಗಳನ್ನು ಸಹ ಕಟ್ಟುವರು. ರಂಗ ಮಂದಿರಕ್ಕೆ 3000-5000 ರೂಪಾಯಿ ಬಾಡಿಗೆಯನ್ನು ನಿರ್ಧರಿಸುತ್ತಾರೆ.

ತಾತ್ಕಾಲಿಕ ನಿವಾಸಗಳು :- ತಾತ್ಕಾಲಿಕವಾಗಿ ಕೆಲವು ಸಮಯದವರೆಗೆ ತಂಗಲು ಇವರು ಬಿದಿರಿನ ನಿವಾಸಗಳನ್ನು ತಯಾರಿಸಿಕೊಡುವರು. ರಸ್ತೆ ರಿಪೇರಿಯಲ್ಲಿ ತೊಡಗಿದ ಕಾರ್ಮಿಕರಿಗೆ, ಗಣಿ ಕಾರ್ಮಿಕರಿಗೆ,ನದಿ-ಸಮುದ್ರಗಳ ತೀರದಲ್ಲಿ ಅನೇಕ ಕಾರ್ಮಿಕರಿಗೆ ಇವರು ಬಿದಿರಿನಿಂದ ಕುಟೀರಗಳನ್ನು ಮತ್ತು ಜೋಪಡಿಗಳನ್ನು ತಯಾರಿಸಿ ಕೊಡುವರು. ಕೆಲವುಸಾರೆ, ವಲಸೆ ಕಾರ್ಮಿಕರಿಗೆ ಇವರು ಇಂತಹ ಮನೆಗಳನ್ನು ಬಿದಿರಿನಿಂದ ಕಟ್ಟಿ ಕೊಡುವರು. ಇವುಗಳ ಬೆಲೆಯನ್ನು ಸೈಜಿಗೆತಕ್ಕಂತೆ ಮತ್ತು ದಿನಬಾಡಿಗೆಯ ರೂಪದಲ್ಲಿ ನಿರ್ಧರಿಸುವರು.(ಒಂಬತ್ತನೇ ಛಾಯಾಚಿತ್ರವನ್ನು ನೋಡಿರಿ)

ಸೇತುವೆ :- ನದಿ, ಹಳ್ಳ, ಕಾಲುವೆ, ಕಣಿವೆಗಳನ್ನು ದಾಟಲು ಕಿರಿದಾದ ಮತ್ತು ತಾತ್ಕಾಲಿಕ ಸೇತುವೆಗಳನ್ನು ತಯಾರಿಸುವರು. ಅನೇಕ ಪ್ರವಾಸ ತಾಣಗಳಲ್ಲಿ ಇವುಗಳು ಈಗಲೂ ಕಂಡು ಬರುತ್ತವೆ. ಮೈಸೂರು ಮೃಗಾಲಯ, ಕೆ.ಆರ್.ಎಸ್, ಗೋವಾಬೀಚ್, ಮೂಕಾಂಬಿಕರಿಸಾರ್ಟ್ , ಫೆಂಟಸಿಪಾರ್ಕ್, ಕಿಷ್ಕಿಂದಾರಿಸಾರ್ಟ್ , ಮುಂತಾದ ಕಡೆಗಳಲ್ಲಿ ಇವುಗಳನ್ನು ಕಾಣಬಹುದು. ಇತ್ತೀಚಿಗೆ ಬಿದಿರಿನ ವಿನ್ಯಾಸದಲ್ಲಿ ಲೋಹದ ಸೇತುವೆಗಳನ್ನು ನಿರ್ಮಿಸಿರುವುವರು. ಇಂತಹ ಸೇತುವೆಗಳನ್ನು ಮೇದರು ಬಿದಿರು ಮತ್ತು ಬೊಂಬಿನಿಂದ ನಿರ್ಮಿಸುವ ಕುಶಲತೆಯನ್ನು ಪಡೆದಿರುವರು.

ತೆಪ್ಪ :- ಜಲಸಾರಿಗೆಯಲ್ಲಿ ಪ್ರಾಚೀನ ಕಾಲದಿಂದ ಬಿದಿರು ಮತ್ತು ಬೊಂಬಿನಿಂದ ಮಾಡಿದ ತೇಲುವ ತೆಪ್ಪವನ್ನು ಬಳಸಿರುವರು. ಇಂದಿಗೂ ಸಹ ತೆಪ್ಪದ ಆಕಾರವನ್ನು ಬದಲಿಸಿ ಬಿದಿರಿನ ತೆಪ್ಪವನ್ನು ಜಲಸಾರಿಗೆ ಸರಕು ಮತ್ತು ಪ್ರಾಣಿಗಳನ್ನು ಸಾಗಿಸಲು ಬಳಸುವರು.ನೀರಿನಲ್ಲಿ ಬೊಂಬು ಮತ್ತು ಬಿದಿರು ಸುಲಭವಾಗಿ ತೇಲುವುದರಿಂದ ಇವುಗಳಿಂದ ತೇಲುವ ತೆಪ್ಪವನ್ನು ಮಾಡುತ್ತಾರೆ. ಇವುಗಳನ್ನು ಮೇದರು ಬೇಡಿಕೆಯ ಆಕಾರ ಮತ್ತು ಗಾತ್ರಕ್ಕೆ ತಕ್ಕಂತೆ ತಯಾರಿಸುವರು.

ಪ್ರವಾಸಿ ತಾಣಗಳು :- ಇತ್ತೀಚಿಗೆ ಅನೇಕ ಪ್ರವಾಸಿ ತಾಣಗಳಲ್ಲಿ ಬ್ಯಾಲೆನ್ಸ್‌ಭಾವಣೆ, ಬಿದಿರಿನ ಆಧುನಿಕಗುಡಿಸಲು, ಸೇತುವೆ, ಅಸನ, ವಿಶ್ರಾಂತಿಗೃಹ, ಹೋಟಲ್, ಮುಂತಾದವುಗಳನ್ನು ವಿವಿಧ ವಿನ್ಯಾಸಗಳಲ್ಲಿ ತಯಾರಿಸಿರುವುದು ಕಂಡುಬರುತ್ತದೆ.ಇವುಗಳ ನಿರ್ಮಾಣದ ತಂತ್ರ ಸಂಪ್ರದಾಯಿಕವ ಜೊತೆಗೆ ಹೊಸ ಅವಿಷ್ಕಾರ ಹೊಂದಿರುವುದು ಕಂಡು ಬರುತ್ತದೆ. (ಹತ್ತು, ಹನ್ನೆರೆಡು,ಹದಿನೈದನೇ ಛಾಯಾಚಿತ್ರಗಳನ್ನು ಗಮನಿಸಿರಿ)

ಕೊಳಲು :- ಒಂದು ಜಾತಿಯ ಬಿದಿರನ್ನು ಉಪಯೋಗಿಸಿ ವಿವಿಧ ಮಾದರಿಯ ಕೊಳಲುಗಳನ್ನು ತಯಾರಿಸುತ್ತಾರೆ. ರಾಗಕ್ಕೆ ತಕ್ಕಂತೆ ಕೊಳಲುಗಳನ್ನು ತಯಾರಿಸುವರು. ಕೊಳಲುಗಳನ್ನು ವಿಶೇಷ ಪರಿಣಿತೆಯನ್ನು ಹೊಂದಿದ ಮೇದರು ಮಾತ್ರ ತಯಾರಿಸುವರು. ಕರ ಕುಶಲ ಕೇಂದ್ರಗಳಲ್ಲಿ ಇವುಗಳ ತಯಾರಿಕೆಯ ಕೌಶಲ್ಯವನ್ನು ಹೇಳಿ ಕೊಡುತ್ತಾರೆ.

ತಂಬೂರಿ :- ತಂಬೂರಿಗೆ ಹಾಕುವ ಹಿಡಿಕೆಯ ದಂಡವನ್ನು ಬಿದರಿನಿಂದಲೇ ತಯಾರಿಸಿರುತ್ತಾರೆ. ತಂಬೂರಿಗೆಂದೇ ನಾದ ಹೊರಡಬಹುದಾದ ಬಿದಿರನ್ನು ಆಯ್ಕೆಮಾಡಿ ಕೊಂಡೊಯ್ಯುವರು.

ಈಟಿ :- ಹಿಂದಿನ ಕಾಲದಲ್ಲಿ ಕಾಡಿನಲ್ಲಿ ಕಾಡು ಮೃಗಗಳನ್ನು ಬೇಟೆಯಾಡಲು ಈಟಿಯನ್ನು ಬಿದಿರಿನಿಂದಲೇ ತಯಾರಿಸುತ್ತಿದ್ದರು. ಇದರ ತುದಿಗೆ ಲೋಹದ ಚೂಪನೆಯ ವಸ್ತುವನ್ನು ಸಿಕ್ಕಿಸಿರುತ್ತಿದ್ದರು.

ಸಿದಿಗಿ :- ಮೃತನ ದೇಹಕ್ಕೆ ಅಂತಿಮ ಸಂಸ್ಕಾರ ಮಾಡಲು ಹೆಣವನ್ನು ಹೊತ್ತೊಯ್ಯುವ ಒಂದು ಸಾಧನ. ಇದನ್ನು ತಮ್ಮ ಸಮುದಾಯದವರು ಸತ್ತಾಗ ಮಾತ್ರ ಮೇದರು ತಾವೇ ತಯಾರಿಸಿಕೊಳ್ಳುವರು. ಹೆಣವನ್ನು ಮಲಗಿಸಿಕೊಂಡು

ಒಯ್ಯಲು ಸಿದಗಿಯನ್ನು ತಯಾರಿಸುವರು. ಇದನ್ನು ಬಂಡಿಯ ತಟ್ಟಿಯಂತೆ ತಯಾರಿಸುವರು ಆದರೆ ದಬ್ಬೆಗಳನ್ನು ಅಡ್ಡಲಾಗಿ ಕಟ್ಟುವರು.

ಕೈವಲ್ಯ :- ಕೈವಲ್ಯವು ಮೃತನ ದೇಹವನ್ನು ಕುಳ್ಳಿರಿಸಿಕೊಂಡು ಹೋಗುವಾಗ ಬಳಸುವ ಸಾಧನ. ಇದನ್ನು ಬಿದಿರಿನಿಂದ ಗೋಪುರೋಪಾದಿಯಲ್ಲಿ ಕಟ್ಟುವರು. ಕೆಲವು ಸಂದರ್ಭದಲ್ಲಿ ಮೇದರು ಅಲ್ಲದೇ, ಇತರೆ ಸಮುದಾಯದವರು ಸಹ ಕೈವಲ್ಯವನ್ನು ನಿರ್ಮಿಸುವರು. ಇದಕ್ಕೆ ಹೂವು ಮತ್ತು ಬಟ್ಟೆಗಳಿಂದ ಅಲಂಕರಿಸುವರು.

ಹಣ್ಣು ಸಾಗಿಸುವ ಪುಟ್ಟಿ :- ಹಣ್ಣು ಸಾಗಿಸಲು ಮೇದರು ತಯಾರಿಸುವ ಪುಟ್ಟಿ ಇತರೆ ಪುಟ್ಟಿಗಳಿಗಿಂತ ಭಿನ್ನ ವಾಗಿರುತ್ತವೆ. ಇವುಗಳನ್ನು ತಯಾರಿಸಲು ಬಳಸುವ ಓಳುಗಳು ಮೃದುವಾಗಿದ್ದು, ಸಾಗಿಸುವ ಹಣ್ಣುಗಳಿಗೆ ಧಕ್ಕೆಯಾಗುವುದಿಲ್ಲ. ಈ ಪುಟ್ಟಿಗಳನ್ನು ತಯಾರಿಸುವಾಗ ಇದನ್ನು ತರಕಾರಿ ಪುಟ್ಟಿಯಂತೆಯೇ ತಯಾರಿಸುವರು. ಇದರ ಬೆಲೆ ೨೫ ರೂಪಾಯಿಗಳು.

ತರಕಾರಿ ಮಾರುವವರ ಜಲ್ಲಿ :- ತರಕಾರಿ ಮಾರುವವರು ತರಕಾರಿಗಳನ್ನು ತುಂಬಿಕೊಂಡು ಹೋಗುವ ಪುಟ್ಟಿ. ಇವು ಇತರೆ ಪುಟ್ಟಿ ಮತ್ತು ಜಲ್ಲಿಗಳಿಗಿಂತ ಭಿನ್ನವಾಗಿರುತ್ತವೆ. ಇದನ್ನು ತಯಾರಿಸುವಾಗ ಮೊದಲು ಬಿದಿರಿನ ಆಕಗಳನ್ನು ತಯಾರಿಸಿಕೊಳ್ಳುವರು. ಆಕಗಳನ್ನು ಚಕ್ರಾಕಾರವಾಗಿ ಅಳತೆಗೆ ತಕ್ಕಂತೆ ಹೊಂದಿಸಿಕೊಂಡು ತೆಳುವಾದ ಓಳುಗಳಿಂದ ತಳಸುತ್ತುವರು. ತಳದ ಅಂಚನ್ನು ಬಿದಿರಿನ ಬಾಕಗಳಿಂದ ಸುತ್ತಿ ಮೇಲ್ಮುಖವಾಗಿ ಬಡಿದು ಬಾಗಿಸುವರು. ನಂತರ ಎರಡು ಬಾಕಗಳಿಂದ ಆಕಗಳ ಸುತ್ತ ಸುತ್ತಿ, 1.5 ಅಡಿ ಗೋಡೆಯನ್ನು ಸುತ್ತಿ ಮೂರು ಬಾಕಗಳಿಂದ ದಿಂಡು ಸುತ್ತುತ್ತಾರೆ. ತಳಕ್ಕೆ ದಪ್ಪನೆಯ ದಬ್ಬೆಗಳನ್ನು ಸೇರಿಸಿ ಬಿಗಿಯುತ್ತಾರೆ. ಇದರ ಬೆಲೆ : 40 ರೂಪಾಯಿ.

ಹೈನ ಮಾರುವವರ ಜಲ್ಲಿ :- ಹಾಲು, ಮೊಸರು, ಮಾರುವವರು ಬಳಸುವ ಪುಟ್ಟಿ. ಈ ಜಲ್ಲಿಯನ್ನು ಮೊದಲು ದಪ್ಪನೆ ಆಕಗಳನ್ನು ತೆಳುವಾದ ಓಳುಗಳಿಂದ ತಳವನ್ನು ಸುತ್ತಿ ,ನಂತರ ತೆಳುವಾದ ಬಳುವಿನಿಂದ 1.5 ಅಡಿ ಅಗಲದಷ್ಟು ಮತ್ತೆ ತಳಸುತ್ತಿ ಬಾಗಿಸುವರು. 6 ಇಂಚು ಎತ್ತರದಷ್ಟು ಗೋಡೆಯನ್ನು ಸುತ್ತಿ ಮೂರು ಇಂಚು ದಿಂಡನ್ನು ಕಟ್ಟಿ ಉಳಿದ ಆಕಗಳನ್ನು ದಿಂಡಿನಲ್ಲಿ ಬಾಗಿಸುತ್ತಾರೆ. ನಂತರ ತಳದಲ್ಲಿ ದಪ್ಪನೆಯ ಬಿದಿರಿನ ದಬ್ಬೆಗಳನ್ನು ಚೌಕಾಕಾರದಲ್ಲಿ ಸಿಕ್ಕಿಸುತ್ತಾರೆ. ಇದರ ಬೆಲೆ 50-60 ರೂಪಾಯಿಗಳು ಇರುತ್ತದೆ.

ಹೆಡಿಗೆಯ ಪುಟ್ಟಿ :- ಊರಿನಿಂದ ಆಚೆ ಇರುವ ದೇವರುಗಳಿಗೆ ಎಡೆಯನ್ನು ಇರಿಸಿಕೊಂಡು ಹೋಗುವ ಪುಟ್ಟಿ. ಹೆಡಿಗೆ ಪುಟ್ಟಿಯನ್ನು ಸಹ ಹೈನ ಮಾರುವವರ ಪುಟ್ಟಿಯಂತೆಯೇ ತಯಾರಿಸುತ್ತಾರೆ. ಇದರ ಬೆಲೆ 50-60 ರೂಪಾಯಿ ಇರುವುದು.

ಬಾಂಡೆಸಾಮಾನು ಮಾರುವಪುಟ್ಟಿ :- ಅಲ್ಯುಮಿನಿಯಮ್, ಸ್ಟೀಲ್, ಪ್ಲಾಸ್ಟಿಕ್ ಮುಂತಾದ ಪಾತ್ರೆ ಸಾಮಾನುಗಳನ್ನು ಈ ಪುಟ್ಟಿಯಲ್ಲಿ ತುಂಬಿಕೊಂಡು ತಲೆಯ ಮೇಲೆ ಹೊತ್ತು ಮಾರಾಟ ಮಾಡುವರು.ಇದನ್ನು

ತಯಾರಿಸುವಾಗ ಸೈಜಿಗೆ ತಕ್ಕಂತೆ ಬಿದಿರಿನ ದಪ್ಪನೆಯ ಆಕ ಮಾಡಿಕೊಳ್ಳುವರು. ಆಕಗಳನ್ನು ಚಕ್ರಾಕಾರವಾಗಿ ಹೊಂದಿಸಿಕೊಂಡು ಒಳನಿಂದ ತಳ ಸುತ್ತುತ್ತಾರೆ. ನಂತರ ಕಬ್ಬಿಣದ ಬೇಲುಕಟ್ಟನ್ನು ತಳದ ಮೇಲೆ ಹಾಕಿಕೊಂಡು ಮತ್ತೊಂದುಸಾರೆ ತಳಸುತ್ತುವರು. ನಂತರ ತೆಳುವಾದ ಬಳುಬಿನಿಂದ 2 ಅಡಿ ಅಗಲದ ತಳ ಸುತ್ತಿ ಬಾಗಿಸಿಕೊಂಡು ದಪ್ಪವಾದ ನಾಲ್ಕು ಬಳುವಿನಿಂದ 6 ಇಂಚು ಎತ್ತರದಷ್ಟು ಗೋಡೆಯನ್ನು ಸುತ್ತುತ್ತಾರೆ. ಕೊನೆಗೆ ದಿಂಡುಸುತ್ತಿ ಉಳಿದ ಆಕಗ ಳನ್ನು ದಿಂಡಿನಲ್ಲಿ ಬಾಗಿಸಿ ಸಿಕ್ಕಿಸುವರು. ತಳಕ್ಕೆ ತೆಳುವಾದ ಬಿದಿರಿನ ನಾಲ್ಕು ಪಟ್ಟಿಯನ್ನು ಚೌಕಾಕಾರದಲ್ಲಿ ಬಡಿಯುತ್ತಾರೆ. ಇದರ ಬೆಲೆ 150 ರೂಪಾಯಿಗಳು.

ಚಕ್ಕಲಿಯ ಪುಟ್ಟಿ :- ಇದನ್ನು ಚಕ್ಕಲಿ-ಸೆಂಡಿಗೆ, ಮತ್ತು ಬ್ರೆಡ್ ಮುಂತಾದ ಮಕ್ಕಳ ತಿನಿಸುಗಳನ್ನು ಸೈಕಲ್ ಇಲ್ಲವೇ ಮೊಟಾರಸೈಕಲ್‌ಗಳ ಮೇಲೆ ಮಾರಾಟ ಮಾಡಲು ಬಳಸುತ್ತಾರೆ. ಇದನ್ನು ತಯಾರಿಸುವಾಗ ಮೊದಲು 8 ಅಡಿ ಉದ್ದದ ದಪ್ಪನೆ ಆಕವನ್ನು ಮಾಡಿ ತೆಳುವಾದ ಒಳುಗಳಿಂದ ತಳವನ್ನು ಸುತ್ತಿ ತಳದ ಮೇಲೆ ಕಬ್ಬಿಣದ ಬೇಲುಕಟ್ಟನ್ನು ತಳದ ಸುತ್ತಹಾಕಿ ದಪ್ಪನೆಯ ಬಳುವಿನಿಂದ 3.5 ಅಡಿ ಅಗಲದಷ್ಟು ತಳವನ್ನು ಸುತ್ತುವರು. ನಂತರ ಆಕಗಳನ್ನು ಸಿಲಿಂಡರ್ ಆಕಾರದಲ್ಲಿ ಬಾಗಿಸಿ 1.25 ಅಡಿ ಎತ್ತರದಷ್ಟು ಗೋಡೆಯನ್ನು ಎರಡು ಬಳುವಿನಿಂದ ಸುತ್ತುತ್ತಾರೆ. ನಂತರ ನಾಲ್ಕು ಇಂಚು ಎತ್ತರದಷ್ಟು ನಾಲ್ಕು ಬಳುವಿನಿಂದ ಮತ್ತೆ ಗೋಡೆಯನ್ನು ಹೆಣೆಯುವರು. ಆಮೇಲೆ 1.25 ಅಡಿ ಎತ್ತರದಷ್ಟು ಎರಡು ಬಳುವಿನಿಂದ ಗೋಡೆಯನ್ನು ಸುತ್ತಿ ಕೊನೆಗೆ ನಾಲ್ಕು ಇಂಚು ಎತ್ತರದಷ್ಟು ನಾಲ್ಕು ಬಳುವಿನಿಂದ ದಿಂಡನ್ನು ಸುತ್ತುತ್ತಾರೆ. ಉಳಿದ ಆಕಗಳನ್ನು ದಿಂಡಿನಲ್ಲಿ ಬಾಗಿಸಿ ಸಿಕ್ಕಿಸುವರು. ಗೋಡೆಗೆ ಮತ್ತು ತಳ ಭಾಗದಲ್ಲಿ ಸುತ್ತಲೂ ಒಂದು ಇಂಚು ಅಗಲದ ಬಿದಿರಿನ ದಬ್ಬೆಗಳಿಂದ ಬಡಿದು ಭದ್ರಪಡಿಸುತ್ತಾರೆ. ಇದರ ಬೆಲೆ 500-650 ರೂಪಾಯಿ ಇರುತ್ತದೆ.

ವಾಹನ ಸವಾರಿ :- ಬಂಡಿಯ ಸವಾರಿಯನ್ನು ಇತ್ತಿತ್ತಲಾಗಿ ಚಿಕ್ಕ ಲಾರಿ, ಮೂರುಗಾಲಿಯ ವಾಹನಗಳಿಗೆ ಸಹ ಬಿದಿರಿನ ಸವಾರಿಯನ್ನು ಬಳಸುವುದು ಕಂಡು ಬರುತ್ತದೆ. ಸವಾರಿಯನ್ನು ಬಂಡಿಯ ಸವಾರಿಯನ್ನು ನಿರ್ಮಿಸುವ ರೀತಿಯಲ್ಲಿಯೇ ನಿರ್ಮಿಸುವರು. ಇದರ ಗಾತ್ರಕ್ಕೆ ತಕ್ಕಂತೆ ಬೆಲೆಯನ್ನು ಹೇಳುತ್ತಾರೆ.

ಬೇಲಿ ತಟ್ಟಿ :- ಇದು ಹಿತ್ತಲ, ಹೊಲ ಗದ್ದೆ, ತೋಟ-ಪಟ್ಟಿಗಳ ಸುತ್ತ ರಕ್ಷಣೆಗೆ ಬಳಸುವ ಬಿದಿರಿನ ತಡೆಗೋಡೆ. ಇವುಗಳನ್ನು ಮುಳ್ಳು ಕಂಟಿಗಳ ಬದಲಾಗಿ ಬಳಸುತ್ತಾರೆ. ಬೇಲಿತಟ್ಟಿಯನ್ನು ತಯಾರಿಸುವಾಗ ಮೊದಲು 6 ಅಡಿ ಎತ್ತರದ ಪೊಳ್ಳು ಬೊಂಬನ್ನು ಸೀಳಿ 1.5 ಇಂಚು ಅಗಲದ ಬಿದಿರಿನ ದಬ್ಬಿಗಳನ್ನು ತಯಾರಿಸಿಕೊಳ್ಳುವರು. ವಿನ್ಯಾಸಕ್ಕೆ ತಕ್ಕಂತೆ ಈ ದಬ್ಬೆಗಳನ್ನು ಹೊಂದಿಸಿಕೊಂಡು ಮೊಳೆ ಬಡಿಯುತ್ತಾರೆ. ನಂತರ ಬಿಗಿಯಾಗಿರಲೆಂದು ಅಂಚಿಗೆ ಎರಡು ದಬ್ಬೆಗಳನ್ನು ಇರಿಸಿ ಮಳೆ ಬಡಿದು ಭದ್ರ ಪಡಿಸುವರು. ಇತ್ತೀಚಿಗೆ ಬಿದಿರಿನ ವಾಸ್ಯಾಸದ ಕಬ್ಬಿಣದ ತಟ್ಟಿಗಳು ಮಾರುಕಟ್ಟೆಗೆ ಬಂದಿವೆ.(ಹದಿನಾಲ್ಕನೇ ಛಾಯಾಚಿತ್ರವನ್ನು ನೋಡಿರಿ) ಇದರ ಬೆಲೆ 4-6 ಸೈಜಿನ ತಟ್ಟಿ ಗೆ 50-75 ರೂಪಾಯಿ ಇರುವುದು .

ವೇದಿಕೆಯ ನಿರ್ಮಾಣ :- ಅನೇಕ ಸಭೆ ಸಮಾರಂಭಗಳಿಗೆ ಇವರು ತಟ್ಟಿ ಚಾಪೆ ಮತ್ತು ಬಿದಿರಿನ ಗಳ ಉಪಯೋಗಿಸಿ ವೇದಿಕೆಯನ್ನು ರಚಿಸುತ್ತಾರೆ. ಸಾದ್ಯವಾದರೆ ವೇದಿಕೆಯನ್ನು ಸಹ ಬಿದರಿನ ಕರಕುಶಲ ವಸ್ತುಗಳಿಂದ ಅಲಂಕರಿಸುವರು. ಅನೇಕ ರಂಗ ಪರಿಕರ ಮತ್ತು ಪ್ರಸಾದನವನ್ನು ಸಹ ಬಿದಿರಿನಿಂದ ತಯಾರಿಸಿ ಕೊಡುವರು. ಮೇಲ್ಪಾವಣಿ ಮತ್ತು ಪಕ್ಕದ ಗೋಡೆಗಳನ್ನುಸಹ ಬಿದಿರಿನ ತಟ್ಟಿ ಮತ್ತು ಚಾಪೆಗಳಿಂದಲೇ ನಿರ್ಮಿಸಿ ಕೊಡುವರು. ಬೆಲೆಯನ್ನು ವಿನ್ಯಾಸ ಮತ್ತು ವಿಸ್ತೀರ್ಣಗಳ ಮೇಲೆ ನಿರ್ಧರಿಸುವರು.

ವೇದಿಕೆಯ ಆಲಂಕೃತ ವಸ್ತುಗಳು :- ವಿವಿಧ ಸಂದರ್ಭದಲ್ಲಿ ವೇದಿಕೆಯನ್ನು ಇವರು ತಯಾರಿಸುವ ಕರಕುಶಲ ವಸ್ತುಗಳಿಂದ ಹೂವು, ನೆಕ್ಕಿ ಮುಂತಾದ ಅಲಂಕಾರಿಕ ವಸ್ತುಗಳ ಜೊತೆಗೆ ಅಲಂಕರಿಸುವರು. ಕರಕುಶಲ ಕೇಂದ್ರಗಳಲ್ಲಿ ತರಬೇತಿಯನ್ನು ಪಡೆದು ಇಲ್ಲವೇ ಸ್ವ ಕೌಶಲ್ಯದಿಂದ ಇವುಗಳನ್ನು ತಯಾರಿಸುತ್ತಾರೆ. ಬಿದಿರು ಮತ್ತು ಬೆತ್ತವನ್ನು ಸಹ ಇವುಗಳ ತಯಾರಿಕೆಯಲ್ಲಿ ಉಪಯೋಗಿಸುವರು. ಇವುಗಳ ಬೆಲೆಯನ್ನು ಇವುಗಳ ಗುಣಮಟ್ಟದ ಮೇಲೆ ನಿರ್ಧರಿಸುತ್ತಾರೆ.

ಏಣಿ :- ಇದು ಎತ್ತರಕ್ಕೆ ಏರಿ ಹೋಗಲು ಬಳಸುವ ಸಾಧನ. ಏಣಿಗಳಲ್ಲಿ ವಿವಿಧ ಪ್ರಕಾರಗಳಿವೆ. ಕಾಲೇಣಿ, ಚಕ್ಕಡಿಗೆ ಗೊಬ್ಬರ ಮತ್ತು ಕಾಳು, ತೆನೆ ತುಂಬಲು, ಮತ್ತು ಹಗೆಗಳಲ್ಲಿಯ ಕಾಳು ತುಂಬಲು ಏಣಿಯನ್ನು ಬಳಸುವರು. ವಳ ಏಣಿ, ಮನೆಯಲ್ಲಿ ಗೋಡೆಗೆ ಸುಣ್ಣ ಬಣ್ಣ ಬಳಿಯಲು ಮತ್ತು ಅಟ್ಟದ ಮೇಲಿನ ಸಾಮಗ್ರಿಗಳನ್ನು ಕೆಳಗಿಸಿಸಲು ಉಪಯೋಗಿಸುವರು . ಇವುಗಳ ಬಳಕೆಯ ಎತ್ತರಕ್ಕೆ ತಕ್ಕಂತೆ ಆರ್ಕಾಲು, ಎಂಟ್ಕಾಲು, ಹತ್ಕಾಲು, ಹನ್ನೆರೆಡು ಕಾಲಿನ ಏಣಿ ಎಂದು ಕರೆಯುವರು. ಏಣಿಯನ್ನು ತಯಾರಿಸುವಾಗ ಎತ್ತರಕ್ಕೆ ತಕ್ಕಷ್ಟು ಎರಡು ಗಟ್ಟಿಯಾದ ಬೊಂಬುಗಳನ್ನು ತೆಗೆದು ಕೊಳ್ಳುವರು. 12 ಇಂಚಿಗೊಂದರಂತೆ ಎರಡೂ ಬೊಂಬಿಗೆ ಸಮಾನಾಂತರವಲ್ಲಿ ರಂಧ್ರವನ್ನು ಕೊರೆಯುವರು. ನಂತರ ಅವುಗಳಿಗೆ ಗಟ್ಟಿಯಾದ ಬಿದಿರನ್ನು 14 ಇಂಚಿನಷ್ಟು ತುಂಡು ಕಡಿದು ಪಾಚ್ ಕೆತ್ತಿ ಈ ರಂಧ್ರದಲ್ಲಿ ಎರಡೂ ಬೊಂಬುಗಳು ಸೇರುವಂತೆ ಸಿಕ್ಕಿಸಿ ಮಳೆ ಬಡಿಯುತ್ತಾರೆ. ಇವುಗಳ ಬೆಲೆ 16 ರೂಪಾಯಿಗೆ ಒಂದು ಹಲ್ಲಿನಂತೆ ಲೆಕ್ಕ ಹಾಕುತ್ತಾರೆ.

ಪಕ್ಷಿಗಳ ಪಂಜರ :- ಪಕ್ಷಿಗಳನ್ನು ಬಂಧಿಸಿ ಇಡುವ ಒಂದು ಸಾಧನ. ಮಾನವ ತಾನು ವಿನೋದಕ್ಕಾಗಿ ಕೆಲವು ಪಕ್ಷಿಗಳನ್ನು ಸಾಕುತ್ತಾನೆ. ಮತ್ತೆ ಕೆಲವನ್ನು ತನ್ನ ಆಹಾರಕ್ಕಾಗಿ ಸಾಕುತ್ತಾನೆ. ಇವುಗಳನ್ನು ಜೀವಂತವಾಗಿರಿಸಲು ಪಂಜರಗಳಲ್ಲಿ ಇರಿಸುವರು. ಪಂಜರಗಳನ್ನು ಮೇದರು ಬಿದಿರು, ಬೆತ್ತದಿಂದ ತಯಾರಿಸುವರು. ಚೌಕಾಕಾರ, ಆಯತ, ಸಿಲಿಂಡರ್, ಆಕಾರದಲ್ಲಿ ತಯಾರಿಸಿ ಒಂದು ಚಿಕ್ಕ ಬಾಗಿಲನ್ನು ಇಟ್ಟಿರುವರು. (ಎರಡನೇ ಛಾಯಾಚಿತ್ರವನ್ನು ಗಮನಿಸಿರಿ) ಪಂಜರವನ್ನು ತಯಾರಿಸಲು ಮೊದಲು ಬಿದಿರಿನಿಂದ ಕಾಲು ಇಂಚು ದಪ್ಪನೆಯ ಬಿದಿರಿನ ದಬ್ಬೆಗಳನ್ನು

ನಿರ್ಮಿಸಿಕೊಂಡು ಅವುಗಳನ್ನು ಬೇಕಾದ ಆಕಾರದಲ್ಲಿ ಸಣ್ಣ ಮೊಳೆಯಿಂದ ಬಡಿದು ಪಂಜರಗಳನ್ನು ತಯಾರಿಸುತ್ತಾರೆ. ಇದರ ಬಲೆ 75-100 ರೂಪಾಯಿ ಇರುತ್ತದೆ.

ಪಕ್ಷಿಗಳ ಬಲಿ :- ಪಕ್ಷಿಗಳನ್ನು ಹಿಡಿಯಲು ಬಿದಿರು ಇಲ್ಲವೇ ಬೆತ್ತದಿಂದ ಮಾಡಿದ ಒಂದು ಸಾಧನ. ಯಾವುದೇ ಪಕ್ಷಿ ಇದರ ಒಳಗೆ ಸುಲಭವಾಗಿ ಹೋಗಬಹುದು. ಆದರೆ ಹೊರಗೆ ಬರಲು ಸಾಧ್ಯವಿಲ್ಲ. ಆರೀತಿಯಾಗಿ ವಿನ್ಯಾಸ ಗೊಳಿಸಿ ಇದರ ಬಾಗಿಲನ್ನು ರಚಿಸಿರುತ್ತಾರೆ. ಇದನ್ನು ತಯಾರಿಸುವಾಗ ಸಾಮಾನ್ಯವಾಗಿ ಪಕ್ಷಿಗಳ ಪಂಜರದಂತೆಯೇ ತಯಾರಿಸುವರು. ಆದರೆ ಸ್ವಯಂಚಾಲಿತ ಬಾಗಿಲನ್ನು ಮಾಡಿ ಅದರಲ್ಲಿ ಮೊದಲೇ ಪಕ್ಷಿಗಳನ್ನು ಇರಿಸಿ ಕಾಡಿನಲ್ಲಿ ಇಟ್ಟು ಬರುತ್ತಾರೆ. ಪಂಜರದ ಪಕ್ಷಿಯು ಕೂಗಿಗೆ ಆಕರ್ಷಿತವಾದ ಸ್ವಜಾತಿಯ ಪಕ್ಷಿಗಳು ಬಲಿಯೊಳಗೆ ಬಂದು ಬೀಳುತ್ತವೆ. ಇವುಗಳ ಬೆಲೆ 200-300 ರೂಪಾಯಿಗಳು.

ಪ್ರಾಣಿಗಳ ಪಂಜರ :- ಮೊಲ,ಮುಂತಾದ ಪ್ರಾಣಿಗಳನ್ನು ಸಾಕಲು ಬಳಸುವ ಸಾಧನ. ಇವುಗಳನ್ನು ಸಹ ಬಿದಿರು ಇಲ್ಲವೇ ಬೆತ್ತದಿಂದ ಮಾಡುವರು. ಪ್ರಾಣಿಗಳ ಪಂಜರವನ್ನು ಚೌಕಾಕಾರ ಇಲ್ಲವೇ ಆಯತಾಕಾರವಾಗಿ ಮಾಡುವರು. ಇದಕ್ಕೆ ಪ್ರಾಣಿಗಳ ಪಂಜರವನ್ನು ಬಿದಿರಿನ ದಬ್ಬೆಗಳಿಂದ ತಯಾರಿಸುವರು. ಮೊದಲು ಚೌಕಾಕಾರವಾಗಿ ಸೈಜಿಗೆ ತಕ್ಕಂತೆ ದಬ್ಬೆಗಳನ್ನು ತಯಾರಿಸಿ ಕೊಳ್ಳುವರು. ದಬ್ಬೆಗಳನ್ನು ವಿನ್ಯಾಸ ಮತ್ತು ಸೈಜಿಗೆ ತಕ್ಕಂತೆ ಹೊಂದಿಸಿ ಮೊಳೆಯನ್ನು ಬಡಿಯುವರು. ಇದಕ್ಕೆ ಪ್ರಾಣಿಯ ಸೈಜಿಗೆ ತಕ್ಕಂತೆ ಬಾಗಿಲನ್ನು ಸಹ ಇರಿಸುವರು. ಇದರ ಬೆಲೆ ಅದರ ಸೈಜಿಗೆ ತಕ್ಕಂತೆ ಇರುತ್ತದೆ.

ಚಂದ್ರಿಕೆ :- ರೇಷ್ಮೆ ಸಾಕಾಣಿಕೆಯಲ್ಲಿ ರೇಷ್ಮೆ ಹುಳು ಬೆಳೆದು ಗೂಡು ಕಟ್ಟಲು ಅನುಕೂಲವಾಗುವಂತೆ ರಚಿಸಿದ ತಟ್ಟೆಯಾಕಾರದ ಒಂದು ಸಾಧನ. ಚಂದ್ರಿಕೆಯನ್ನು ರಚಿಸುವಾಗ ಬಿದಿರಿನ ಓಳಿನಿಂದ ಚಾಪೆಯನ್ನು ಹೆಣೆದು ಸುತ್ತಲೂ ದುಂಡು ಬಿದಿರಿನಿಂದ ದಿಂಡು ಕಟ್ಟುತ್ತಾರೆ. ಒಳಮಗ್ಗಲು 4 ಇಂಚು ಅಗಲದಷ್ಟು ಚಂದ್ರಿಕೆಯ ಹೂವನ್ನು ಉದ್ದವಾಗಿ ಹೆಣೆದು, ಚಂದ್ರಿಕೆಯ ಒಳಗೆ ಚಕ್ರಾಕಾರದಲ್ಲಿ ಸುತ್ತುತ್ತಾರೆ. ಇದರ ಬೆಲೆ =225 ರೂಪಾಯಿ ಇರುತ್ತದೆ.

ಬುತ್ತಿ ಕಲ್ಲಿ :- ಊಟಕ್ಕೆ ಬೇಕಾದ ಬುತ್ತಿಯನ್ನು ಇಟ್ಟುಕೊಂಡು ಹೋಗುವ ಒಂದು ಸಾಧನ ಇದು. ಪಶುಪಾಲಕರು, ರೈತರು, ಮುಂತಾದವರು ತಮ್ಮ ಕಸುಬಿಗಾಗಿ ವಾಸಸ್ಥಾನವನ್ನು ಬಿಟ್ಟು ಹೋಗುವಾಗ ಕಲ್ಲಿಯಲ್ಲಿ ಬುತ್ತಿಯನ್ನು ಇರಿಸಿಕೊಂಡು ಹೋಗುತ್ತಾರೆ. ಇದನ್ನು ಬೆತ್ತದ ನಯವಾದ ಬಳುವುಗಳಿಂದ ತಯಾರಿಸಿರುತ್ತಾರೆ. ಇದರ ಬೆಲೆ15-25 ರೂಪಾಯಿ ಇರುತ್ತದೆ.

ಬಿದಿರಿನಕುಂಚ :- ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣ ಗಳಲ್ಲಿ ಬಳಸುವ ಬಿದಿರಿನಿಂದ ಇದನ್ನು ತಯಾರಿಸಿರುತ್ತಾರೆ.ದುಂಡನೆ ಬಿದಿರನ್ನು ಸೀಳಿಕೊಂಡು ಅಗಲಿಸುತ್ತಾರೆ. ನೋಡಲು ಇದು ಕಸಪೊರಕೆಯ ಆಕಾರದಲ್ಲಿರುತ್ತದೆ. ಇದರ ಬೆಲೆ : 10-15 ರೂಪಾಯಿ ಇರುವುದು.

ನಿಲುವು ಕಸಬರಿಗಿ :- ನಿಂತು ಕಸವನ್ನು ಗೂಡಿಸಬಲ್ಲ ಒಂದು ಕಸಬರಿಗೆ ಇದು. ಬಿದಿರಿನದಪ್ಪವಾದ ಕಡ್ಡಿಗಳನ್ನು ಒಂದು ಉದ್ದನೆಯ ಎಂಟು ಅಡಿ ಬಿದಿರಿಗೆ ಕಟ್ಟಿ ಮುಂದೆ ಅವುಗಳನ್ನು ಅಗಲಿಸಿ ಬಿದಿರಿನ ದಬ್ಬೆಯನ್ನು ಇಟ್ಟು ತಂತಿ ಇಲ್ಲವೇ ದಾರದಿಂದ ಕಟ್ಟುಕಟ್ಟಿರುತ್ತಾರೆ. ಬೀದಿಗಳನ್ನು ಗುಡಿಸಲು ಇವುಗಳನ್ನು ಬಳಸುತ್ತಾರೆ. ಇವುಗಳ ಬೆಲೆ : 50--60 ರೂಪಾಯಿ.

ಕಣದಗೋಪಾಳ :- ರೈತರ ಕಾಳುಗಳನ್ನು ವಕ್ಕಲು ಕಣದಿಂದ ದೇವರ ಹೆಸರಿನಲ್ಲಿ ಕಾಣಿಕೆಯಾಗಿ ಕಾಳು ಪಡೆಯಲು ಬಳಸುವ ಸಾದನ ಇದು. ಇವು ಆಕಾರ ಮತ್ತು ತಯಾರಿಕೆ ಗೋಪಾಳಗಳಂತೆಯೇ ಇರುತ್ತವೆ. ಆದರೆ ಗಾತ್ರ ಮಾತ್ರ ದೊಡ್ಡದು. ದಾಸಯ್ಯ ನವರು ಇವುಗಳನ್ನು ಬಳಸುತ್ತಾರೆ. ಇದರಗಾತ್ರಕ್ಕೆ ತಕ್ಕಂತೆ ಇದರ ಬೆಲೆ: 40 ರೂಪಾಯಿ ಇರುತ್ತದೆ.

ಅಡಿಕೆಯ ಚಾಪೆ :- ಅಡಿಕೆಯನ್ನು ಸಂಸ್ಕರಿಸಲು ಮತ್ತು ವಣಗಿಸಲು ಬಳಸುವ ಚಾಪೆ ಇದು. ಅಡಿಕೆಯ ಚಾಪೆಯನ್ನು ಬೊಂಬಿನಿಂದ ತಯಾರಿಸಿದ ತೆಳ್ಳನೆಯ ಓಳುಗಳಿಂದ ತಯಾರಿಸುವರು. ಬೇಕಾದ ಗಾತ್ರದಲ್ಲಿ ಇದನ್ನು ತಯಾರಿಸುತ್ತಾರೆ. ಇದರ ಬೆಲೆ 4-7 ಅಡಿ ಸೈಜಿಗೆ 50 ರೂಪಾಯಿ ಇರುವುದು.

ಅಡಿಕೆಯ ತಟ್ಟಿ :- ಸಂಸ್ಕರಿಸಿದ ಅಡಿಕೆಯನ್ನು ರಾಸಿ ಮಾಡಿ ಒಂದೆಡೆ ಹಾಕಲು ಬಳಸುವ ತಡೆಗೋಡೆ. ಬಿದಿರಿನಿಂದ ಸ್ವಲ್ಪ ದಪ್ಪನೆಯ ಆಕಗಳನ್ನು ತಯಾರಿಸಿ ಒತ್ತೊತ್ತಾಗಿ ಹೊಂದಿಸುತ್ತಾ ಮಳೆಬಡಿದು ಇವುಗಳನ್ನು ಮಾಡುವರು. ಇವುಗಳ ಬೆಲೆ ಗಾತ್ರಕ್ಕೆ ತಕ್ಕಂತೆ ಇರುತ್ತದೆ.

ಕಾಯಿಯ ಕುಕ್ಕೆ :- ಅಂಗಡಿಯ ಹೊರಗೆ ಮಾರಾಟಮಾಡಲು ತೆಂಗಿನ ಕಾಯಿಗಳನ್ನು ಹಾಕಿ ಇಡುವ ಸಾಧನ ಇದು. ಇದನ್ನು ಬಿದಿರಿನ ದಪ್ಪ ದಬ್ಬೆಗಳಿಂದ ಇಲ್ಲವೇ ಬೆತ್ತದಿಂದ ತಯಾರಿಸುವರು. ಇದು ಚೌಕ, ಇಲ್ಲವೇ ಸಿಲಿಂಡರ್ ಆಕಾರದಲ್ಲಿರುತ್ತದೆ. ಇದರ ಬೆಲೆ : 20-35 ರೂಪಾಯಿ.

ಕೋಳಿಯ ಕವಚ :- ಕೋಳಿಗಳನ್ನು ಸುರಕ್ಷಿತವಾಗಿ ಪೇಟೆಗೆ ಮಾರಲು ಕೊಂಡೊಯ್ಯುವ ಸಾಧನ ಇದು. ಕೋಳಿ ಕವಚ ಕುಂಬದ ಆಕಾರದಲ್ಲಿದ್ದು ಮೇಲೆ ಒಂದು ಚಿಕ್ಕ ಬಾಯಿ ಮಾಡಿರುತ್ತಾರೆ. ಇದರಲ್ಲಿ ಸುಲಭವಾಗಿ ಗಾಳಿ ಹೋಗಿ ಬರುವುದು. ಇದನ್ನು ಬಿದಿರಿನ ಬಳುವಿನಿಂದ ಸಿಲಿಂಡರಾಕಾರದಲ್ಲಿ ಸಂಬಳಿಗೆಯಂತೆ ತಯಾರಿಸುತ್ತರೆ. ಆದರೆ ಗಾತ್ರದಲ್ಲಿ ದೊಡ್ಡದಾಗಿರುತ್ತದೆ. ಇದರ ಬೆಲೆ : 70-90 ರೂಪಾಯಿ

ಬೆಲ್ಲದ ಚಾಪೆ :- ಆಲೆ ಮನೆಯಲ್ಲಿ ಬೆಲ್ಲವನ್ನು ತಯಾರಿಸುವಾಗ ಬೆಲ್ಲದ ಅಡಿಗೆ ಬಂದ ತಕ್ಷಣ ಅದನ್ನು ಅಚ್ಚಿಗೆ ಹಾಕಲು ನೆಲಕ್ಕೆ ಈ ಚಾಪೆಯನ್ನು ಹಾಸುತ್ತಾರೆ. ಬೆಲ್ಲದ ಚಾಪೆಯನ್ನು ಬಿದಿರು ಇಲ್ಲವೇ ಬೊಂಬಿನಿಂದ ತೆಳುವಾದ ಓಳು ಮಾಡಿ ಆಕಗಳಿಗೆ ತೊಟ್ಟಿಕ್ಕುತ್ತಾ ಸೈಜಿಗೆತಕ್ಕಂತೆ ತಯಾರಿಸುವರು. ಇದನ್ನು ತಯಾರಿಸುವುದು ಸುಲಭ, ಮಕ್ಕಳು ಸಹ

ಚೆಲ್ಲದ ಚಾಪೆಯನ್ನು ತೊಟ್ಟಿಕ್ಕುವರು. (ಏಳನೇ ಛಾಯಾಚಿತ್ರವನ್ನು ನೋಡಿರಿ). ಇದರ ಬೆಲೆ 5/10ನ ಸೈಜಿಗೆ **125-150** ರೂಪಾಯಿ.

4.2.5 ಮೇದರು ಕುಲಕಸುಬಿನಲ್ಲಿ ಬಳಸುವ ವಸ್ತುಗಳು:

- ಕತ್ತಿ :- ಬೊಂಬು ಮತ್ತು ಬಿದಿರನ್ನು ಸೀಳಲು ಬಳಸುತ್ತಾರೆ.
- ಕೊರಡು :- ಬೊಂಬು ಮತ್ತು ಬಿದಿರನ್ನು ಕಡಿಯಲು ಆಸರೆಗಾಗಿ ಉಪಯೋಗಿಸುವರು.
- ಒಂಬು :- ವಸ್ತುವಿನ ದಿಂಡು ಕಟ್ಟಲು ಬಳಸುತ್ತಾರೆ.
- ಸೀರ್ಣ :- ಇದನ್ನು ಏಣಿ, ಮಂಚ, ಕೈವೈಲ್ಯ, ಬಾಗಿಲು, ಕದ, ಮುಂತಾದುವನ್ನು ತಯಾರುಸುವಲ್ಲಿ ಬಳಸುತ್ತಾರೆ.
- ದಬ್ಬ :- ಬಿದಿರು ಇಲ್ಲವೇ ಬೊಂಬನ್ನು ಸೈಜಿಗೆ ತಕ್ಕಂತೆ 1.5ಇಂಚು ಅಗಲವಿರುವಂತೆ ಸೀಳಿದ ದಪ್ಪನೆಯ ಪಟ್ಟಿಗಳು.
- ಬಾಕ :- ಬಿದಿರಿನಿಂದ ತಯಾರಿಸಿದ 1.5 ಇಂಚು ಅಗಲದ ಓಳಿಗಿಂತ ದಪ್ಪನಾದ ಪಟ್ಟಿಗಳು.
- ಓಳು :- ಬಿದಿರು ಇಲ್ಲವೇ ಬೊಂಬಿನಿಂದ 1.5 ಇಂಚು ಅಗಲವಿರುವಂತೆ ತಯಾರಿಸಿದ ತೆಳುವಾದ ಪಟ್ಟಿಗಳು.
- ಬಳುವು :- ಬಿದಿರಿನಿಂದ ತಯಾರಿಸಿದ ನಯವಾದ ಉದ್ದನೆಯ ಕಡ್ಡಿಗಳು.
- ಆಕ :-ಬಿದಿರು ಇಲ್ಲವೇ ಬೊಂಬಿನಿಂದ ತಯಾರಿಸಿದ 1.5 ಇಂಚು ಅಗಲದ ಓಳಿಗಿಂತ ದಪ್ಪವಾದ ಮತ್ತು ದಬ್ಬಿಗಿಂತ ತೆಳುವಾದ ಪಟ್ಟಿಗಳು

(ವಸ್ತುಗಳ ತಯಾರಿಕೆಯನ್ನು ಕುರಿತಾಗಿ ವಿವರಣೆ ನೀಡಿದ ವಕ್ತೃಗಳು :ಮೇದರ ಬಸವರಾಜಪ್ಪ ಹೂವಿನಹಡಗಲಿ, ಮೇದರ ಲಕ್ಷ್ಮಣ ಹೋಸಪೇಟೆ.ಮೇದರ ವೆಂಕಟೇಶ,ಹ.ಬೊ.ಹಳ್ಳಿ, ಮೇದರ ಲಕ್ಷ್ಮಿದೇವಮ್ಮ, ಹ.ಬೊ.ಹಳ್ಳಿ, ಮೇದರ ರಾಮಣ್ಣ ಹ.ಬೊ. ಹಳ್ಳಿ. ಮತ್ತು ಮೇದರ ಮಮ್ತಾದೇವಿಯವರು.) [1]

4.2 ಬಿದಿರು:

ಬಿದಿರು ಮೇದರ ಕುಲಕಸುಬಿನ ಬಹುಮುಖ್ಯವಾದ ಕಚ್ಚಾವಸ್ತುವಾಗಿದೆ. ಬಿದಿರನ್ನು `` ಬಡವರ ಟಿಂಬೀನ್ `` (poor Man's Timber) ಎಂದು ಕರೆಯಲಾಗುತ್ತದೆ. ಮೇದರ ಕುಲಕಸುಬಿನ ವಾಣಿಜ್ಯವನ್ನು ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ ಬಿದಿರನ್ನು ಕುರಿತು ಹೇಳುವುದು ಅವಶ್ಯವೆಂದು ತಿಳಿದು ಇಲ್ಲಿ ಬಿದಿರಿನ ಬಗ್ಗೆ ಪ್ರಸ್ತಾಪಿಸುತ್ತಿದ್ದೇನೆ. ಸಾಮಾನ್ಯವಾಗಿ ಪ್ರಾಕೃತಿಕವಾಗಿ ಬೆಳೆದ ದೈತ್ಯಾಕಾರದ ಹುಲ್ಲನ್ನೇ ಬಿದಿರು ಎನ್ನುತ್ತಾರೆ. ಬಿದಿರನ್ನು ಪ್ರಾಚೀನಕಾಲದಿಂದಲೂ ಮಾನವ ಬಳಸುತ್ತಾ ಬಂದಿದ್ದಾನೆ. ಋಷಿ ಮುನಿಗಳು ತಮ್ಮ ಕುಟೀರಗಳನ್ನು ಪೂರ್ಣ ಬಿದಿರಿನಿಂದಲೇ ನಿರ್ಮಾಣ ಮಾಡುತ್ತಿದ್ದರು. ಬಿದಿರನ್ನು ಕುರಿತು ಋಗ್ವೇದದಲ್ಲಿ ಸಹ ಪ್ರಸ್ತಾಪಮಾಡಲಾಗಿದೆ.

ಬಿದಿರು ಏಕದಳ ವರ್ಗದ (Monocots) ಹುಲ್ಲಿನ ಸಂಸಾರಕ್ಕೆ ಸೇರಿದ (Graminate) ಸರ್ವಕಾಲಿಕ ಸಸ್ಯ. ಬಿದಿರು ಏಕಾಕ್ಷೀಯ(Monopodial) ಮತ್ತು ಸಂಯುಕ್ತಾಕ್ಷೀಯ (Sympodial) ಎಂದು ಎರಡು ಮಾದರಿಯಲ್ಲಿ ರೂಪಗೊಳ್ಳುವವು. ಮಳೆಗಾಲದಲ್ಲಿ ಹೆಚ್ಚಾಗಿ ಬಿದಿರಿನ ಮೊಳಕೆಗಳು ಭೂಮಿಯಿಂದ ಬೆಳೆಯುತ್ತವೆ. ಏಕಾಕ್ಷೀಯ ಬೊಂಬುಗಳು ಬಿಡಿಬಿಡಿಯಾಗಿ ಬೆಳೆದರೆ, ಸಂಯುಕ್ತಾಕ್ಷೀಯ ಬೊಂಬುಗಳು ಮೆಳೆಗಳ ರೂಪದಲ್ಲಿ ಬೆಳೆಯುತ್ತವೆ. ಮೆಳೆಗಳ ಸಂಖ್ಯೆ ಬಿದಿರಿನ ಜಾತಿಯನ್ನು ಅವಲಂಬಿಸಿರುತ್ತದೆ. ಮೊಳಕೆಗಳು ಎತ್ತರಕ್ಕೆ ಬೆಳೆದಂತೆ ಗೆಣ್ಣುಗಳು ಉದ್ದವಾಗುತ್ತಾಬರುತ್ತವೆ. ಬಿದಿರಿನ ಬಾಹ್ಯ ಲಕ್ಷಣವನ್ನು ಹೇಳುವುದಾದರೆ, ಇದು ಸಸ್ಯವಾದ್ದರಿಂದ ವರ್ಷಗಳಕಾಲ ಬೆಳೆಯುತ್ತಾ ಹೋಗುವುದಿಲ್ಲ. ಇದರ ಕಾಂಡ ಭಾಗವು ಉದ್ದವಾಗಿರುತ್ತದೆ. ಕಾಂಡದ ಗೆಣ್ಣಿನ ಭಾಗದಲ್ಲಿ ಎಲೆ ಅಥವಾ ಗರಿಗಳಿರುತ್ತವೆ. ಹಸಿರಾದ ಈ ಎಲೆಗಳು ಬಿದಿರು ಬೆಳೆದಂತೆ ಹಳದಿ ಬಣ್ಣಕ್ಕೆ ತಿರುಗಿ ಉದುರುತ್ತವೆ.ಬಿದಿರಿನ ಬುಡ ದಪ್ಪವಾಗಿದ್ದು ಎತ್ತರಕ್ಕೆ ಹೋದಂತೆಲ್ಲಾ ತೆಳುವಾಗುತ್ತಾ ಹಾವಿನಬಾಲದಂತೆ ಚೂಪಾಗಿರುವುದು. ಬಿದಿರು ಬೆಳೆದು ಒಂದು ಹಂತವನ್ನು ತಲುಪಿದ ನಂತರ ಇದನ್ನು ಕಟಾವು ಮಾಡುತ್ತಾರೆ. ಇಲ್ಲವಾದರೆ, ಕೆಲವು ಸಂದರ್ಭದಲ್ಲಿ ತುದಿಯಲ್ಲಿ ಗೊಂಚಲು ಗೊಂಚಲಾಗಿ ಹೂವು ಬಿಡುತ್ತದೆ. ಇದರ ಬೀಜಗಳು ಭತ್ತದ ರೀತಿಯ ಕಾಳುಗಳು. ಇವುಗಳನ್ನು ಬಿದಿರಕ್ಕಿ ಎನ್ನುವರು.ಬಿದಿರಿನ ಒಳಭಾಗವು ಪೊಳ್ಳಾಗಿರುತ್ತದೆ. ಪೊಳ್ಳಿನ ಅಂತರ, ಜಾತಿಯಮೇಲೆ ಅವಲಂಬಿಸಿರುತ್ತದೆ. ಬಿದಿರು ಉಷ್ಣವಲಯ ಮತ್ತು ಸಮಶೀತೋಷ್ಣವಲಯದಲ್ಲಿ ಕೂಡ ಬೆಳೆಯುತ್ತವೆ. ಬಿದಿರು ಮಂಜಿನಲ್ಲಿ ಬಹಳ ಕಾಲದವರೆಗೆ ಉಳಿಯುತ್ತದೆ. ಪ್ರಪಂಚದಲ್ಲಿ ಸುಮಾರು 700ಬಿದಿರಿನ ಪ್ರಭೇದಗಳಿವೆ. ಭಾರತದಲ್ಲಿ ಇಲ್ಲಿಯವರೆಗೆ ಬಿದಿರನಲ್ಲಿ 136 ಪ್ರಭೇದಗಳನ್ನು ಗುರುತಿಸಲಾಗಿದೆ. ಬಿದಿರಿನ ಕಳಲೆಗಳು ಮಳೆಗಾಲದಲ್ಲಿ ಹೊರಟು ತೀವ್ರಗತಿಯಿಂದ ಬೆಳೆಯುತ್ತವೆ. 3-5 ತಿಂಗಳೊಳಗೆ ಬಿದಿರು ಪೂರ್ಣವಾಗಿ ಬೆಳೆದು ನಿಲ್ಲುತ್ತವೆ. ಬಿದಿರಿನ ಪುನರುತ್ಪನ್ನವು ಇದರ ಬೀಜ ಮತ್ತು ಕಾಂಡಗಳಿಂದ ಸಾಧ್ಯ. ಬಿದಿರು ಹೂವು ಬಿಡುವುದು ಒಂದು ಪ್ರಾಕೃತಿಕ ವಿಶಿಷ್ಠತೆ. ಹೂವು ಬಿಟ್ಟ ಬಿದಿರು ಸತ್ತಂತೆಯೇ ಸರಿ ಎಂಬ ನಂಬಿಕೆ ಇದೆ. ಹೆಬ್ಬಿದಿರು, ಮತ್ತು ಕಿರುಬಿದಿರು, 40-60 ಮತ್ತು 30-40 ವರ್ಷಗಳಿಗೊಮ್ಮೆ ಹೂವುಬಿಟ್ಟು ಅದರ ಮೆಳೆಗಳು ಸಾಯುವವು ಎಂದು ತಜ್ಞರು ಹೇಳುತ್ತಾರೆ. ಆದರೆ ಅರುಂಡಿನೇರಿಯಾ ವೈಟಯಾನ, ಒಕ್ಲಾಂಡ್ರ ರೀಡಿಯ್ಕೆ ಬಿದಿರುಗಳು ಪ್ರತಿ ವರ್ಷ ಹೂವು ಬಿಡುತ್ತವೆ.

4.2.1 ಭಾರತದಲ್ಲಿ ಬಿದಿರು :

ಭಾರತದಲ್ಲಿ ಇಲ್ಲಿಯವರೆಗೆ ಬಿದಿರನ136 ಪ್ರಭೇದಗಳನ್ನು ಗುರುತಿಸಲಾಗಿದೆ. ಭಾರತದಲ್ಲಿ ಬಿದಿರು ಹಿಮಾಲಯ ಹಾಗೂ ದಕ್ಷಿಣ ಭಾಗದ ಕಾಡುಗಳಲ್ಲಿ ಅಧಿಕವಾಗಿ ಬೆಳೆಯುತ್ತದೆ. ಇದಲ್ಲದೇ ಇತರೆ ರಾಜ್ಯಗಳಲ್ಲಿ ಸಹ ಬಿದಿರು ಬೆಳೆಯುವುದು. ಹಿಮಾಲಯದಲ್ಲಿ ಬಿದಿರು ಸುಮಾರು3660 ಮೀಟರ್ ಎತ್ತರದವರೆಗೆ ಬೆಳೆಯುತ್ತದೆ ಎಂದು ತಜ್ಞರು

ಹೇಳುತ್ತಾರೆ. ಸಮಶೀತೋಷ್ಣವಲಯದಂತಹ ಪ್ರದೇಶಗಳಲ್ಲಿ ಬಿದಿರು ಹುಲ್ಲಿನ ಪೊದೆಗಳಂತೆ ಕಾಣುತ್ತದೆ. ಮತ್ತೆ ಕೆಲವು ಕಾಡುಗಳಲ್ಲಿ ಇತರೆ ಗಿಡಮರಗಳಿಗಿಂತ ಬಿದಿರೇ ಹೆಚ್ಚಿರುವುದು ಕಂಡು ಬರುತ್ತದೆ.

4.2.2 ಕರ್ನಾಟಕದಲ್ಲಿ ಬಿದಿರು:

ಬಿದಿರು ಕರ್ನಾಟಕದಲ್ಲಿ ಮಲೆನಾಡು ಮತ್ತು ಬೆಟ್ಟ-ಕಾಡುಗಳಿರುವ ಎಲ್ಲಾ ಪ್ರದೇಶದಲ್ಲಿ ಬೆಳೆಯುತ್ತದೆ. ಬಯಲು ಸೀಮೆಯ ಪ್ರದೇಶಗಳಲ್ಲಿಯು ಸಹ ಬಿದಿರು ನೈಸರ್ಗಿಕವಾಗಿ ಮತ್ತು ಮಾನವ ಪ್ರಯತ್ನದಿಂದ ಬಿದಿರು ಬೆಳೆಯುವುದನ್ನು ಕಾಣಬಹುದು. ಕರ್ನಾಟಕದ ಕಾಡುಗಳಲ್ಲಿ ವಿವಿಧ ಜಾತಿಯ ಬಿದಿರುಗಳಿರುವುದಾಗಿ ತಜ್ಞರು ಹೇಳುತ್ತಾರೆ.ಇತ್ತಿತ್ತಲಾಗಿ ಅರಣ್ಯ ಇಲಾಖೆಯವರು ಬಿದಿರಿನ ಸಸಿಗಳನ್ನು ತಯಾರಿಸಿ ವಿತರಿಸುವುದರಿಂದ ಹೊಲ, ಗದ್ದೆ, ತೋಟ, ಪಟ್ಟಗಳಲ್ಲಿ ಮತ್ತು ಬದುವು, ಒಡ್ಡು ಗಳಲ್ಲಿ ಅಲ್ಲದೇ ತೋಟಪಟ್ಟಗಳ ಸುತ್ತ ಬೇಲಿಯಂತೆ ಬಿದಿರನ್ನು ಬೆಳೆಯುತ್ತಾರೆ. ಬಳ್ಳಾರಿಜಿಲ್ಲೆಯ ಹೊಸಪೇಟೆ ಮತ್ತು ಸೊಂಡೂರು ತಾಲೂಕಿನ ಕುಮಾರಸ್ವಾಮಿಗುಡ್ಡ, ಪೆದ್ದಗುಡ್ಡ, ದೇವಗಿರಿ ಗುಡ್ಡ ಮುಂತಾದ ಗುಡ್ಡಪ್ರದೇಶಗಳಲ್ಲಿ ಬಿದಿರು ನೈಸರ್ಗಿಕವಾಗಿ ಮತ್ತು ಅರಣ್ಯಇಲಾಖೆಯವರ ಕೃಪಾಪೋಷಣೆಯಲ್ಲಿ ಬೆಳೆಯುತ್ತಿರುವುದು ಕಂಡುಬರುತ್ತದೆ. ಇದಲ್ಲದೇ ಬಳ್ಳಾರಿ ಜಿಲ್ಲೆಯ ಬಹುತೇಕ ಎಲ್ಲಾ ತಾಲೂಕುಗಳಲ್ಲಿ ತೋಟ ಪಟ್ಟಗಳ ಬೇಲಿ ಮತ್ತು ಒಡ್ಡು ಗಳ ಸಾಲಲ್ಲಿ ವಿರಳವಾಗಿ ರೈತರು ಬಿದಿರು ಬೆಳೆಸುತ್ತಾರೆ. ಇತ್ತೀಚಿಗೆ ಕರ್ನಾಟಕದಲ್ಲಿ ಅದರಲ್ಲೂ ಹೆಚ್ಚಾಗಿ ಪಶ್ಚಿಮ ಜಿಲ್ಲೆಗಳ ಮೇದರು ತಮ್ಮ ಕುಲಕಸುಬಿಗೆ ಮಹಾರಾಷ್ಟ್ರದ ಬಿದಿರನ್ನು ಹೆಚ್ಚಾಗಿ ಉಪಯೋಗಿಸುವುದಾಗಿ ಹೇಳುತ್ತಾರೆ. ಬೊಂಬುಗಳನ್ನು ಕರ್ನಾಟಕದಲ್ಲಿ ಬೆಳೆದವುಗಳನ್ನು ಮಾತ್ರ ಉಪಯೋಗಿಸುತ್ತಾರೆ. ಬಿದಿರಿನ ಕೆಲವು ಜಾತಿಗಳ ಬಗ್ಗೆ ಮಾತ್ರ ಇಲ್ಲಿ ಹೇಳುತ್ತಿದ್ದೇನೆ.

4.2.2.ಅ) ಕಿರು ಬಿದಿರು (ಮೇದರಿ, ಗಂಡುಬಿದಿರು, ಸೀಬು) (Dendrocalamus strictus)

ಕಿರು ಬಿದಿರು ಸುಮಾರು 6 ರಿಂದ 15 ಮೀಟರ್ ಎತ್ತರದವರೆಗೆ ಬೆಳೆಯುತ್ತದೆ. ಇದರ ವ್ಯಾಸ ಸಾಮಾನ್ಯವಾಗಿ 2.5ಸೆಂ. ಮೀ. ನಿಂದ 7.5ಸೆಂ. ಮೀ.ಇರುತ್ತದೆ. ಈ ಬಿದಿರು ತನುವು ಹೆಚ್ಚಿರುವ ಪ್ರದೇಶದಲ್ಲಿ ಅಂದರೆ, ಮೆಕ್ಕಲು ಮಣ್ಣು ಮತ್ತು ನೀರೋಟಿಗಳಿದ್ದಲ್ಲಿ ಬಹಳ ಹುಲುಸಾಗಿ ಬೆಳೆಯುತ್ತದೆ ಮತ್ತು ಶುಷ್ಕ ಪ್ರದೇಶಗಳಲ್ಲಿ ಸಣ್ಣಗಾತ್ರದ ಬೊಂಬುಗಳಾಗಿ ಬೆಳೆಯುತ್ತದೆ. ಜೌಗು ಮತ್ತು ಜೇಡಿಮಣ್ಣು ಇರುವ ಪ್ರದೇಶದಲ್ಲಿ ಇದು ಏಳಿಗೆ ಆಗುವುದಿಲ್ಲ. ಬೀಜಗಳಿಂದ, ಬೇರು ಕಾಂಡ ಮತ್ತು ಸಸ್ಯದ ರೆಂಬೆ, ಕಾಂಡದ ಗೆಣ್ಣು ಗಳ ಮೂಲಕ ಸಹ ಇದನ್ನು ಬೆಳೆಸಬಹುದು. ಮಳೆಗಾಲದ ಪ್ರಾರಂಭದಲ್ಲಿ ಹೊಸ ಕಳಲೆಗಳು ಹೊರಟಿರುತ್ತವೆ. ಮೂರನೆಯ ವರ್ಷ ಇದರ ಬಣ್ಣ ಮಾಸಲಾಗುತ್ತಾ ಹಳದಿ ಬಣ್ಣಕ್ಕೆ ತಿರುಗುತ್ತದೆ. ಇದು ಕಟಾವಿಗೆ ಬರಲು 10-12 ತಿಂಗಳು ಬೇಕಾಗುತ್ತದೆ. ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಇದು ಹೂವು ಬಿಡುತ್ತದೆ. ಪ್ರತಿವರ್ಷ ಚದುರಿದಂತೆ (Sporadic) ಹೂವು ಬಿಟ್ಟು 30-40 ವರ್ಷಗಳಲ್ಲಿ ಸಾಮೂಹಿಕವಾಗಿ ಹೂವುಬಿಟ್ಟು (Gregarious flowring)ಬೀಜಗಳಾಗಿ ಸಿಡಿದು ಮೆಳೆಗಳು

ಸಾಯುತ್ತವೆ. ಇದರ ಬೀಜಗಳನ್ನು ಬಿದಿರಕ್ಕಿ ಎಂದು ಕೆಲವು ಪ್ರದೇಶಗಳಲ್ಲಿ ಊಟಕ್ಕೆ ಬಳಸುವರು. ಕಿರು ಬಿದಿರು ಕರ್ನಾಟಕ ರಾಜ್ಯದಲ್ಲಿ ಬೆಳಗಾಂವಿ, ಉತ್ತರ ಕನ್ನಡ ಜಿಲ್ಲೆ ದಕ್ಷಿಣ ಕನ್ನಡ ಜಿಲ್ಲೆ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಹವಾಗುಣದ ಆಧಾರದ ಮೇಲೆ ಈ ಬಿದಿರು ತೆಳು, ದಪ್ಪ ಮತ್ತು ಮಧ್ಯಮಗಾತ್ರದ ದಪ್ಪನಾಗಿ ಬೆಳೆಯುತ್ತದೆ. ಈ ಬಿದಿರನ್ನು ಮಳೆಗಾಲದಲ್ಲಿ ಕಟಾವು ಮಾಡುವುದಿಲ್ಲ, ಏಕೆಂದರೆ ಈ ಕಾಲದಲ್ಲಿ ಬಿದಿರಿನ ಹೊಸ ಮೆಳೆಗಳು ಬಂದಿರುತ್ತವೆ. ಕಟಾವಾದ ಬಿದಿರನ್ನು ಡೈನೋಡಿರಿಸ್ (Dinoderus minutus) ನಂತಹ ಹುಳುಗಳಿಂದ ನಾಶವಾಗದಂತೆ ರಕ್ಷಿಸುತ್ತಾರೆ. ಕಿರುಬಿದಿರು ಎಳೆಯದಾಗಿದ್ದಾಗ ಇದರ ತೊಪ್ಪಲು ಆನೆಗಳಿಗೆ ಇಷ್ಟವಾದ ಊಟ. ಕಿರುಬಿದಿರನ್ನು ಗುಡಿಸಲು,ಗೃಹನಿರ್ಮಾಣ, ಪೀಠೋಪಕರಣಗಳಿಗೆ, ಚಾಪೆ ಬುಟ್ಟಿ, ರೈತಾಪಿಯ ಕೆಲಸಗಳಿಗೆ, ಕರಕುಶಲ ವಸ್ತುಗಳ ತಯಾರಿಕೆಗೆ, ಕಾಗದ ತಯಾರಿಕೆಗೆ ಬಳಸುತ್ತಾರೆ.

4.2.2.ಆ) **ಬರ್ಮಾ ಬಿದಿರು (ಬರ್ಮಾ ಬೊಂಬು)** (Dendrocalamus brandisi) :

ಬರ್ಮಾ ಬಿದಿರು 24-26 ಮೀ. ಎತ್ತರ ಬೆಳೆಯ ಬಲ್ಲದು. ಇದರ ವ್ಯಾಸ ಹನ್ನೆರಡರಿಂದ ಇಪ್ಪತ್ನಾಲ್ಕು ಸೆಂ. ಮೀ. ಇರುತ್ತದೆ. ಇವನ್ನು ಸಹ ಬೀಜ, ಕಾಂಡ, ಬೇರುಗಳು, ಮತ್ತು ಗೆಣ್ಣುಗಳ ಕಾಂಡದಿಂದ ಸಹ ಕೃತಕ ಪುನರುತ್ಪತ್ತಿ ಮಾಡಬಹುದು. ಸದಾಹಚ್ಚ ಹಸಿರಾಗಿರುವ ಬಿದಿರಿನ ಜಾತಿಗೆ ಸೇರಿದ ಬಿದಿರು ಇದು. ಕರ್ನಾಟಕದಲ್ಲಿ ಕೊಡಗು, ದಾಂಡೇಲಿ, ಚಿಕ್ಕಮಗಳೂರು, ಕೆಮ್ಮಣ್ಣುಗುಂಡಿ ಪ್ರದೇಶಗಳಲ್ಲಿ ಹೇರಳವಾಗಿ ಬೆಳೆಯುತ್ತದೆ. ಇದರ ಬೊಂಬುಗಳು ಮುಳ್ಳುಗಳಿಲ್ಲದೇ ನೀಳವಾಗಿರುತ್ತವೆ. ಇದನ್ನು ಕಟಾವು ಮಾಡುವುದು ಬಹಳ ಸುಲಭ.

4.2.2.ಇ) ಹೆಬ್ಬಿದಿರು(ಡೌಗ, ಅಂಡೆಬಿದಿರು, ಮುಳ್ಳುಬಿದಿರು) (Bambusa arundinacea)

ಹೆಬ್ಬಿದಿರು 25-30 ಮೀ. ಎತ್ತರ ಮತ್ತು 15-17 ಸೆಂ. ಮೀ. ವ್ಯಾಸದಲ್ಲಿ ಬೆಳೆಯುತ್ತದೆ. ಮುಳ್ಳು ಮತ್ತು ರೆಂಬೆಗಳು ಇದರ ಮೆಳೆಯಲ್ಲಿ ಒತ್ತತ್ತಾಗಿ ಬೆಳೆದಿರುತ್ತವೆ. ಇದನ್ನು ಕಟಾವು ಮಾಡುವುದು ಬರ್ಮಾ ಬಿದಿರನ್ನು ಕಟಾವು ಮಾಡಿದಷ್ಟು ಸುಲಭವಲ್ಲ. ಹೆಬ್ಬಿದಿರು 40-50 ವರ್ಷಗಳಿಗೊಮ್ಮೆ ವಿರಳವಾಗಿ ಹೂವು ಬಿಡುತ್ತವೆ.ಹೆಬ್ಬಿದಿರು ಅತೀ ವೇಗವಾಗಿ ಬೆಳೆಯುತ್ತದೆ. ಇದು ಹೆಚ್ಚಾಗಿ ಕಣಿವೆ, ಹಳ್ಳ, ನದಿಗಳದಂಡೆಯಂತಹ ತೇವಾಂಶ ಹೆಚ್ಚು ಇರುವ ಪ್ರದೇಶದಲ್ಲಿ ಹುಲುಸಾಗಿ ಬೆಳೆಯುತ್ತದೆ. ಇದು ಕರ್ನಾಟಕದಲ್ಲಿ ಹೆಚ್ಚಾಗಿ, ಚಿಕ್ಕಮಗಳೂರು. ಶಿವಮೊಗ್ಗ, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಮತ್ತು ಮೈಸೂರು ಜಿಲ್ಲೆಗಳಲ್ಲಿ ಬೆಳೆಯುತ್ತದೆ. ಇತ್ತೀಚಿಗೆ ಅರಣ್ಯ ಇಲಾಖೆಯವರು ಈ ಬಿದಿರಿನ ಸಸಿಗಳನ್ನು ಬೆಳೆಸಿ ರೈತರಿಗೆ ಬಿದಿರನ್ನು ಕೃಷಿಯ ಭೂಮಿಯಲ್ಲಿ ಬೆಳೆಸಲು ವಿತರಿಸುತ್ತಾರೆ. ಹೆಬ್ಬಿದಿರಿನ ಕಳಲೆ ಉಪ್ಪಿನಕಾಯಿ ಕೆಲವು ಪ್ರದೇಶಗಳಲ್ಲಿ ಬಹಳ ಪ್ರಸಿದ್ಧಿ. ಹೆಬ್ಬಿದಿರನ್ನು ಗೃಹ ನಿರ್ಮಾಣ, ಕುಲಕಸುಬುಗಳ ಕರಕುಶಲ ವಸ್ತುಗಳ ನಿರ್ಮಾಣಕ್ಕೆ ಉಪಯೋಗಿಸುತ್ತಾರೆ. ನವೀನ ಮಾದರಿಯ ತಂಗುದಾಣ ಹಾಗೂ ಕುಟೀರಗಳನ್ನು ನಿರ್ಮಿಸಲು ಈ ಬಿದಿರನ್ನು ಬಳಸುವರು.

4.2.2.ಈ) ಸುವರ್ಣ ಬಿದಿರು (ಪಟ್ಟೆಡವಗಿ) (Golden Bamboo)

ಸುವರ್ಣ ಬಿದಿರು ಅಥವಾ ಪಟ್ಟೆಡವಗಿ ಬಿದಿರು 20-25 ಮೀ. ಎತ್ತರ ಮತ್ತು 2.5-5 ಸೆಂ.ಮೀ. ವ್ಯಾಸದ ವರೆಗೆ ಬೆಳೆಯುತ್ತದೆ. ಸುವರ್ಣ ಬಿದಿರಿನ ಗಳಗಳು ಹಳದಿ ಬಣ್ಣದ್ದಾಗಿದ್ದು ಇವರ ಗೆಣ್ಣುಗಳ ನಡುವಿನ ಭಾಗದಲ್ಲಿ ಹಸಿರು ಪಟ್ಟಿಗಳು ಬಂದಿರುತ್ತವೆ. ಇದರ ಕೃತಕ ಪುನರುತ್ಪನ್ನವನ್ನುಸಹ ಸಸ್ಯೋತ್ಪನ್ನದ ರೀತಿಯಲ್ಲಿಯೇ ಮಾಡಬಹುದು. ಇದರ ಎಲೆಗಳು ಅಗಲವಾಗಿದ್ದು ನೋಡಲು ಸುಂದರವಾಗಿ ಕಾಣುತ್ತವೆ. ಬಹಳ ಕಡೆಗಳಲ್ಲಿ ಇದನ್ನು ಅಲಂಕಾರಕ್ಕಾಗಿ ಬೆಳೆಸುವುದು ಕಂಡುಬರುತ್ತದೆ. ಇದು ಹೆಚ್ಚಾಗಿ ಹೂವು ಬಿಡುವುದಿಲ್ಲವೆಂದು ಸಸ್ಯತಜ್ಞರ ಅಭಿಪ್ರಾಯವಾಗಿದೆ.

4.2.2.ಉ) ಮೂಲಿ ಬಿದಿರು (Melocanna bambusoides)

ಮೂಲಿ ಬಿದಿರು ಸುಮಾರು 9-15 ಮೀ. ಎತ್ತರದವರೆಗೆ ಬೆಳೆಯುತ್ತದೆ. ಇದರ ವ್ಯಾಸ 4-6 ಸೆಂ. ಮೀ. ಇರುತ್ತದೆ. ಮೂಲಿ ಬಿದಿರು ಕರ್ನಾಟಕದಲ್ಲಿ, ಶಿವಮೊಗ್ಗ ಜಿಲ್ಲೆಯ ಸಕ್ರೆಬೈಲು ಅರಣ್ಯ ಪ್ರದೇಶದಲ್ಲಿ ಪ್ರಾಯೋಗಿಕವಾಗಿ ಬೆಳೆಸಿದ್ದಾರೆ. ಈ ಬಿದಿರು ಸಾಮೂಹಿಕ ಹೂವು ಬಿಡುವ ಬಿದಿರಿನ ಜಾತಿಗೆ ಸೇರಿದೆ. ಇದರ ಹಣ್ಣುಗಳು ಅನೇಕ ಕಾಡು ಪ್ರಾಣಿಗಳಿಗೆ ಇಷ್ಟವಾದ ಆಹಾರವಾಗಿದೆ. ಮೂಲಿ ಬಿದಿರನ್ನು ಗೃಹನಿರ್ಮಾಣ ಮತ್ತು ಬುಟ್ಟಿ, ಚಾಪೆ, ಮುಂತಾದ ಗೃಹಬಳಕೆಯ ವಸ್ತುಗಳ ನಿರ್ಮಾಣದಲ್ಲಿ ಉಪಯೋಗಿಸುತ್ತಾರೆ.

4.2.2.ಊ) ಗರಟೆಬಿದಿರು(ಚಿವಾ,ಶಿಬ್,ತೆನೆಬಿದಿರು,ಸಾವೆಬಿದಿರು) (Oxytenanthera monostigma)

ಗರಟೆ ಬಿದಿರು 3-5 ಮೀ. ಎತ್ತರ ಮತ್ತು 2.5 ಸೆಂ.ಮೀ. ವ್ಯಾಸವುಳ್ಳದ್ದಾಗಿ ಬೆಳೆಯುತ್ತದೆ. ಇದು ನೇರವಾಗಿ ಮುಳ್ಳುಗಳಿಲ್ಲದೇ ಬಿಡಿಬಿಡಿಯಾಗಿರುವುದು. ಇದು ಸಾಮೂಹಿಕವಾಗಿ ಬೆಳೆಯುವ ಸಣ್ಣ ಬಿದಿರು. ಇದು ಹಳದಿ ಮಿಶ್ರಿತ ಮೃದುವಾದ ಬಿಳಿ ಎಲೆಗಳಿಂದ ಆವೃತವಾಗಿರುವುದು. ಇದರ ಬೊಂಬುಗಳು ಬಹಳ ಗಟ್ಟಿಯಾಗಿರುತ್ತವೆ. ಇದು ವ್ಯಾಪಕವಾಗಿ ಹೂವು ಬಿಡುತ್ತದೆ. ಇವನ್ನು ಹಿಂದಿನ ಕಾಲದಲ್ಲಿ ಕೊಡೆಗಳ ಹಿಡಿಕೆ, ವಿಹಾರದ ಕೋಲು, ಸನ್ಯಾಸಿಗಳ ಬೆತ್ತ ತಯಾರಿಸಲು ಉಪಯೋಗಿಸುತ್ತಿದ್ದರು. ಇತ್ತೀಚಿಗೆ ಇವುಗಳ ಬಳಕೆ ವಿರಳವಾಗಿದೆ. ಕರ್ನಾಟಕದಲ್ಲಿ ಇದು ಕೊಡಗು, ಮೈಸೂರು, ಚಿಕ್ಕಮಗಳೂರು, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಇವನ್ನು ಕೆಲವು ಸಾರೆ ಕಾಗದದ ಕಾರ್ಖಾನೆಗಳಲ್ಲಿ ಕಾಗದ ತಯಾರಿಕೆಗೆ ಸಹ ಬಳಸುವರು.

ಇವುಗಳಲ್ಲದೇ ವಾಟೆ ಬಿದಿರು, ಅರೋಕೇರಿಯ ಬಿದಿರು, ಪನ್ನಂಗಿ ಬಿದಿರು, ಇಬ್ಬಿದಿರು, ಅಮ್ಮ ಬಿದಿರು, ಅರಕೇರಿಯಾ ಬಿಡ್ಡಿಲಿಯೈ ಮತ್ತು ಅರಕೇರಿಯಾ ಎಕ್ಸೆಲ್ಸ, ಪಿಲೋಸ್ಟ್ಲ ಸ್ಟೈಯಲ್, ಒಕ್ಸಿಟೆನಾಂನ್ತಿಸ್ಟ್ರಾಕ್ಸಿ ಬಿದಿರುಗಳು ಕರ್ನಾಟಕದಲ್ಲಿ ಕಂಡುಬರುತ್ತವೆ. ಇಷ್ಟೆಲ್ಲಾ ಜಾತಿಯ ಬಿದಿರುಗಳು ಕರ್ನಾಟಕದಲ್ಲಿ ಕಂಡು ಬಂದರೂ ಸಹ ಬಿದಿರು ಬಳಕೆದಾರರಿಗೆ ಸಾಕಾಗುವಷ್ಟು ಬಿದಿರು ಪೂರೈಕೆಯಾಗುತ್ತಿಲ್ಲ.

(ಆಧಾರ ಗ್ರಂಥಗಳು : ಆಜ್ಜಂಪುರ ಕೃಷ್ಣಸ್ವಾಮಿ ಅವರ. ವನಸಿರಿ. ಡಾ. ಕೆ. ಎಂ ಮೈತ್ರಿ ಅವರ ಮತ್ತು ಬುಡಕಟ್ಟು ಕುಲಕಸುಬುಗಳು . ಡಾ. ಕರೀಗೌಡ ಬೀಚನಹಳ್ಳಿ ಅವರ ಕರಕುಶಲ ಕಲೆಗಳು.) [2]

4.3 ವಾಣಿಜ್ಯ :

ಆದಿಮ ಮಾನವ ಪ್ರಾಚೀನ ಕಾಲದಲ್ಲಿ ಕಾಡಿನಲ್ಲಿ ಇತರೆ ಪ್ರಾಣಿ ಸಂಕುಲದ ಜೊತೆಗೆ ಅವುಗಳಲ್ಲಿ ತಾನೂ ಒಬ್ಬನಾಗಿ ಜೀವನ ಸಾಗಿಸಿದ. ಕಾಡಿನಲ್ಲಿ ಲಭ್ಯವಿರುವ ನೈಸರ್ಗಿಕ ಗಡ್ಡೆ-ಗೆಣಸು, ಹಣ್ಣು-ಹಂಪಲ ಸಾಲದುದಕ್ಕೆ ಪ್ರಾಣಿಗಳ ಮಾಂಸವನ್ನು ಸಹ ತಿಂದು ಜೀವಿಸಿದ. ಈ ಸಂದರ್ಭದಲ್ಲಿ ಈತನ ಬೇಕು ಬೇಡಿಕೆಗಳು ಕೇವಲ ಆಹಾರ ಮತ್ತು ಲೈಂಗಿಕ ಸಂತೃಪ್ತಿ ಮಾತ್ರವಾಗಿತ್ತು. ಕಾಲ ಗತಿಸಿದಂತೆ, ಒಂದು ಕಡೆ ನೆಲೆ ನಿಂತು ತನ್ನವರೊಂದಿಗೆ ಜೀವನಸಾಗಿಸತೊಡಗಿದ. ತನ್ನ ಬಯಕೆಗಳನ್ನು ತಾನಿರುವಲ್ಲಿಯೇ ತೃಪ್ತಿಪಡಿಸಿಕೊಳ್ಳಲು ಪ್ರಯತ್ನಿಸಿದ. ಈ ಕುರಿತು ತನಗೆ ಬೇಕೆನಿಸಿದ ವಸ್ತುಗಳನ್ನು ವ್ಯವಸಾಯ ಮತ್ತು ಪಶುಪಾಲನೆಯ ಮೂಲಕ ಪಡೆಯತೊಡಗಿದ. ತನ್ನವರೊಂದಿಗೆ ಹಂಚಿತಿನ್ನುವ ಸಾಮಾಜಿಕ ಪ್ರವೃತ್ತಿ ಬೆಳೆಯಿತು. ಜೊತೆಗೆ ತನ್ನಲ್ಲಿ ತನಗೆ ಬೇಕಾದುದಕ್ಕಿಂತ ಹೆಚ್ಚಾಗಿರುವ ವಸ್ತುಗಳನ್ನು ಬೇರೆಯವರಿಗೆ ಕೊಡುವ ಮತ್ತು ಇತರರಿಂದ ತನಗೆ ಬೇಕಾದ ವಸ್ತುಗಳನ್ನು ಪಡೆಯುವುದನ್ನು ರೂಢಿಸಿಕೊಂಡ. ತನಗೆ ಬೇಕಾದ ಸರಕುಗಳನ್ನು ಸರಕುಗಳಿಗಾಗಿ ಬದಲಿಸಿ ಕೊಳ್ಳುವ ವಸ್ತು ವಿನಿಮಯ ಪದ್ಧತಿ ಬೆಳೆದು ಬಂತು.

ಹೀಗೆ ಕೊಡು-ಕೊಳ್ಳುವ ಪದ್ಧತಿಯೇ ವಾಣಿಜ್ಯ ಉಗಮದ ಆದಿಮ ಸಂಸ್ಕೃತಿ ಎಂದರೆ ತಪ್ಪಾಗುವುದಿಲ್ಲ. ಇಂತಹ ಜೀವನ ಸಾಗಿಸಿದ ಮೂಲ ವಾಣಿಜ್ಜಿಗರು ಬುಡಕಟ್ಟಿಗರಲ್ಲದೇ ಮತ್ತಾರೂ ಅಲ್ಲ. ಇಂದಿನಂತೆ ಲಾಭಾಂಶವೇ ಇವರ ವಿನಿಮಯದ ಮೂಲ ಉದ್ದೇಶವಾಗಿರಲಿಲ್ಲ. ಬದಲಾಗಿ ಹಂಚಿ ತಿನ್ನುವ ಮಾನವಿಕ ಮೌಲ್ಯ ಇಲ್ಲಿ ಪ್ರಮುಖವಾಗಿತ್ತು. ಪ್ರಾರಂಭದಲ್ಲಿ ತಾನು ವಿನಿಮಯ ಮಾಡಿಕೊಳ್ಳುವ ವಸ್ತುವಿನ ಮೌಲ್ಯವನ್ನು ಅಳತೆಮಾಡುವ ಮಾನದಂಡಗಳು ಇರಲಿಲ್ಲ. ಒಂದು ವಸ್ತುವೇ ಮತ್ತೊಂದು ವಸ್ತುವಿನ ಮೌಲ್ಯದ ಮಾನದಂಡವಾಗಿತ್ತು. ಹೀಗೆ ವಿನಿಮಯದ ಮಾಧ್ಯಮ ವಿಲ್ಲದೇ ಸರಕುಗಳಿಗೆ ಸರಕುಗಳನ್ನು ವಿನಿಮಯ ಮಾಡಿಕೊಳ್ಳುವ ಪದ್ಧತಿಯನ್ನು ಸಾಟಿ ಪದ್ಧತಿ ಎಂತಲೂ ಕರೆಯಲಾಯಿತು(Barter system). ಈ ರೀತಿಯ ಸರಕು ವಿನಿಮಯ ಪದ್ಧತಿಯು ಇತ್ತೆಂದು ಇಜಿಪ್ಟ್ ಮತ್ತು ಮೆಸಪೆಟೋಮಿಯನ್ ನಾಗರಿಕತೆಗಳಿಂದ ತಿಳಿದುಬರುತ್ತದೆ. ಕಾಲಾಂತರದಲ್ಲಿ ಮಾನವ ತನ್ನ ಬೌದ್ಧಿಕ ಬೆಳವಣಿಗೆಯಿಂದ ಸರಕು ವಿನಿಮಯ ಪದ್ಧತಿಯಲ್ಲಿನ ಸರಕುಗಳ ಮೌಲ್ಯವನ್ನು ಅಳೆಯುವ ಜಾಣ್ಮೆಯನ್ನು ಬೆಳೆಸಿಕೊಂಡ. ವಸ್ತು ಪ್ರಾಣಿಗಳನ್ನು ಮೊದಲು ವಿನಿಮಯದ ಮಾಧ್ಯಮವನ್ನಾಗಿ ಬಳಸಿದ. ನಂತರ ಚರ್ಮ, ಲೋಹಗಳನ್ನು ವಿನಿಮಯ ಮಾಧ್ಯಮದ ಹಣವನ್ನು ತಯಾರಿಸಿ ಬಳಸುತ್ತಾ ಬಂದ. ಮಾನವನ ಪ್ರಾಥಮಿಕ ಬಯಕೆಗಳು ಬೆಳೆದು ಅನುಷಂಗಿಕ ಬಯಕೆಗಳು ಬೆಳೆದುನಿಂತವು.

ಕಾಲಾಂತರದಲ್ಲಿ ಮನುಷ್ಯನ ವಾಣಿಜ್ಯ ವಹಿವಾಟುಗಳು ತನ್ನವರೊಂದಿಗಲ್ಲದೇ ದೇಶವಿದೇಶೀಯರೊಂದಿಗೆ ವಿಸ್ತಾರಗೊಂಡು ಇಡೀ ಪ್ರಪಂಚವೇ ಒಂದು ಮಾರುಕಟ್ಟೆಯಾಯಿತು. ಪ್ರಸ್ತುತ, ಭೂಮಿಯ ಯಾವುದೇ ಒಂದು ಅಂಚಿನ ಮೂಲೆಯಲ್ಲಿ ಉತ್ಪಾದನೆಯಾದ ವಸ್ತುವು ಇಡೀ ಪ್ರಪಂಚದಾದ್ಯಂತ ಬಳಕೆಯಾಗುತ್ತಿದೆ. ತಯಾರಿಸಿದ ವಸ್ತುವನ್ನು ಮಾರಾಟ ಮಾಡುವ ಹೊಸ ತಂತ್ರಜ್ಞಾನ ಮನುಷ್ಯನನ್ನು ಹೊಸತೊಂದು ವಾಣಿಜ್ಯ ಲೋಕದಲ್ಲಿ ತಂದಿರಿಸಿದೆ. ಈ ಸಂದರ್ಭದಲ್ಲಿ ಸಹ ನಮಗೆ ಗೊತ್ತಾಗದ ಹಾಗೆ ವಸ್ತುವಿನಿಮಯ ಪದ್ಧತಿ ಇನ್ನೂ ಜಾರಿಯಲ್ಲಿದೆ ಎಂದು ಹೇಳುವುದಾದರೆ ಅದು ಮೇದರಂತಹ ಅನೇಕ ಬುಡಕಟ್ಟು ಕಸುಬುದಾರರಲ್ಲಿ ಮಾತ್ರ. ಈ ಅಧ್ಯಯನ ಮತ್ತು ಅಧ್ಯಾಯದಲ್ಲಿ ಮೇದರು ತಮ್ಮ ಕುಲಕಸುಬಿನಿಂದ ತಯಾರಿಸುವ ವಸ್ತುಗಳು ಮತ್ತು ಅವುಗಳ ಮಾರಾಟದಲ್ಲಿ ಇವರು ಎದುರಿಸುವ ಸಮಸ್ಯೆಗಳನ್ನು ಕುರಿತಾದ ವಸ್ತುಸ್ಥಿತಿ ಚಿತ್ರಣವನ್ನು ಇಲ್ಲಿ ಕೊಡಲಾಗುತ್ತಿದೆ.

ವಾಣಿಜ್ಯ ಎಂದರೆ, ಸರಕು ಮತ್ತು ಸೇವೆಗಳನ್ನು ಹಣಕ್ಕಾಗಿ ವಿನಿಮಯ ಮಾಡುವ ವಿಧಾನ ಎಂದು ಸಾಮಾನ್ಯ ಅರ್ಥದಲ್ಲಿ ಹೇಳಬಹುದು. ಆದರೆ, ವಿಶಾಲ ಅರ್ಥದಲ್ಲಿ ವಾಣಿಜ್ಯವು ಸರಕು ಮತ್ತು ಸೇವೆಗಳನ್ನು ವಿನಿಮಯ ಮಾಡುವ ವಿಧಾನವಷ್ಟೇ ಆಗಿರದೇ, ಯಾವುದೇ ವಸ್ತುವಿನ ತಯಾರಿಕೆ (ಉತ್ಪಾದನೆ) ಮತ್ತು ಉತ್ಪಾದಿಸಿದ ವಸ್ತುವನ್ನು ಉತ್ಪಾದನಾ ಸ್ಥಳದಿಂದ ಉಪಭೋಗಕರಿಗೆ ತಲುಪಿಸುವಲ್ಲಿ ಎದುರಾಗಬಹುದಾದ ಆತಂಕಗಳನ್ನು ನಿವಾರಿಸುವ ಕ್ರಿಯೆಗಳನ್ನು ಒಳಗೊಂಡಿದೆ. ಅಂತೆಯೇ ವಾಣಿಜ್ಯವನ್ನು ಕುರಿತಾಗಿ, ಡಾ. ಥಾಮಸ್ ಎವ್ಲೆಲಿನ್‌ರವರು ಹೀಗೆ ಹೇಳುತ್ತಾರೆ "ವಾಣಿಜ್ಯವು ಮನುಷ್ಯನ ಆರ್ಥಿಕ ಚಟುವಟಿಕೆಗಳಲ್ಲಿಯ ಒಂದು ಭಾಗವಾಗಿದ್ದು, ಸರಕುಗಳ ಉತ್ಪಾದನೆ, ಕೊಳ್ಳುವಿಕೆ, ಮಾರುವಿಕೆ ಮತ್ತು ಸಾಗಾಣಿಕೆಗೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ಒಳಗೊಂಡಿರುತ್ತದೆ." ಡಾ. ಥಾಮಸ್ ಅವರು ಹೇಳುವ ಹಾಗೆ ಇಲ್ಲಿ ನಾನು ನನ್ನ ಅಧ್ಯಯನದಲ್ಲಿ ಮೇದರ ವಾಣಿಜ್ಯವನ್ನು ಕುರಿತಾಗಿ ಹೇಳುವಾಗ ಇವರು ತಯಾರಿಸುವ ವಸ್ತುಗಳ ವಿನಿಮಯವನ್ನಷ್ಟೇ ಹೇಳುವುದಿಲ್ಲ. ಬದಲಾಗಿ ಇವರ ಕುಲಕಸುಬಿನಲ್ಲಿ ಬಿದಿರಿನಿಂದ ಮಾತ್ರ ತಯಾರಿಸುವ ವಸ್ತುಗಳು ಮತ್ತು ಅವುಗಳ ತಯಾರಿಕೆಯಲ್ಲಿಯ ಚಟುವಟಿಕೆಗಳು ಮತ್ತು ಎದುರಿಸುವ ವಿವಿಧ ಸಮಸ್ಯೆಗಳು ಮತ್ತು ತಯಾರಿಸಿದವಸ್ತುಗಳ ವಿಕ್ರಯನ್ನು ಕುರಿತಾಗಿ ಹೇಳುವೆ. ಇದರಿಂದ ಇವರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವಾಗ ಇದು ಸಹಕಾರಿಯಾಗಬಲ್ಲದು.

ವಾಣಿಜ್ಯದ ಮಹತ್ವಗಳಾದ, ಉತ್ಪಾದಕರನ್ನು ಮತ್ತು ಬಳಕೆದಾರರನ್ನು ಜೋಡಿಸುವ ಕೊಂಡಿ, ಮಾನವನ ಬಯಕೆಗಳ ತೃಪ್ತಿ, ಜೀವನ ಮಟ್ಟದ ಏರಿಕೆ, ಉದ್ಯೋಗ ಅವಕಾಶ, ದೇಶದ ಬೆಳವಣಿಗೆ, ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ, ವ್ಯಾಪಾರದ ಪೂರಕಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ತಯಾರಿಸಿದ ವಸ್ತುಗಳನ್ನು ಗ್ರಾಹಕರಿಗೆ ವಿಕ್ರಯ ಮಾಡುವ ವ್ಯಾಪಾರದ ವಿಧಾನದಲ್ಲಿ ಅನೇಕ ಪದ್ಧತಿಗಳಿವೆ. ಆದರೆ ಮೇದರು ತಯಾರಿಸಿದ ವಸ್ತುಗಳ ವ್ಯಾಪಾರದ

ಪದ್ಧತಿಯಲ್ಲಿ ನಾವು ಥೋಕ ವ್ಯಾಪಾರ ಮತ್ತು ಕಿರುಕುಳ ಹಾಗೂನೇರ ಮಾರಾಟ ಪದ್ಧತಿಗಳನ್ನು ಮಾತ್ರ ಕಾಣುತ್ತೇವೆ. ವ್ಯಾಪಾರದ ಪೂರಕಗಳಾದ(Aids to Trade) ವ್ಯಾಪಾರ ಪ್ರತಿನಿಧಿಗಳು, ಸಾರಿಗೆ, ದಾಸ್ತಾನುಗಾರಿಕೆ, ಬ್ಯಾಂಕಿನ ವ್ಯವಸ್ಥೆ ,ವಿಮೆ, ಜಾಹಿರಾತುಗಳು ಅಪ್ರತ್ಯಕ್ಷವಾಗಿ ಇವರ ವಾಣಿಜ್ಯದಲ್ಲಿ ಕಂಡುಬರುತ್ತವೆ. ಇದನ್ನು ಪ್ರತ್ಯೇಕವಾಗಿ ಹೇಳಲಾಗಿದೆ.

(ಆಧಾರ ಗ್ರಂಥಗಳು : ಪ್ರೊ: ಬಲವಂತ ಅವರ ವ್ಯವಹಾರ ಅಧ್ಯಯನ ಮತ್ತು ವಾಣಿಜ್ಯಶಾಸ್ತ್ರ ಪ್ರೊ: ಕೆ.ಡಿ. ಬಸವ ಅವರ ಮಾರುಕಟ್ಟೆ ನಿರ್ವಹಣೆ. ಮತ್ತು ಆಧುನಿಕ ಭಾರತದ ಆರ್ಥಿಕಾಭಿವೃದ್ಧಿ. ಹಾಗೂ. Marketing Management.)[3]

4.4 ಮೇದರ ಬುಡಕಟ್ಟು ವಾಣಿಜ್ಯ ಭಾಷೆ :

ಭೂಮಿಯ ಮೇಲೆ ಮಾನವ ಜೀವತಾಳಿದಂದಿನಿಂದಲೇ ತನ್ನಲ್ಲಿರುವ ಭಾವನೆಗಳನ್ನು ಇತರರಿಗೆ ತಿಳಿಸುವ ಪ್ರಯತ್ನವನ್ನು ಮಾಡಿದ. ಮೊದಮೊದಲು ಭಾಷಾತೀತವಾದ ಸೌಂಜ್ಞೆಗಳನ್ನು ತನ್ನ ಭಾವನೆಗಳನ್ನು ವಿನಿಮಯ ಮಾಡಿಕೊಳ್ಳಲು ಬಳಸಿದ. ತನ್ನ ದೇಹದ ಕೈ, ಕಾಲು, ಕಣ್ಣು, ಮೂಗು, ಬಾಯಿ, ನಾಲಿಗೆಗಳನ್ನು ಭಾವನೆಗಳ ವಿನಿಮಯದ ಮಾಧ್ಯಮಗಳನ್ನಾಗಿ ಬಳಸಿದ. ಈ ಪ್ರಯತ್ನ ಮುಂದೆ ಭಾಷೆಯ ಅನ್ವೇಷಣೆಗೆ ದಾರಿಯಾಯಿತು. ಪ್ರದೇಶಾನುಸಾರ ಭಾಷೆಗಳು ಹುಟ್ಟಿ ಬೆಳೆದು ಬೆಳೆಯುತ್ತಲಿವೆ. ಇಂತಹ ಭಾಷೆಗಳಿಗೆ ಪ್ರಾದೇಶಿಕ ಸಂಸ್ಕೃತಿಯ ಸಂಸ್ಕಾರವನ್ನು ಪ್ರೋಕ್ಷಿಸಿ, ಪೋಷಿಸಿ ಬೆಳೆಸಲಾಯಿತು. ನಮ್ಮ ಅಧ್ಯಯನಕ್ಕೆ ಸಂಬಂಧ ಪಟ್ಟಂತೆ ವಾಣಿಜ್ಯರಂಗದ ಪ್ರತಿಯೊಂದು ಹಂತದಲ್ಲಿಯೂ ಭಾಷೆಯು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ವಾಣಿಜ್ಯದಲ್ಲಿ ಅದರ ವ್ಯಾಪ್ತಿಯಂತೆ ಪ್ರದೇಶೀಯ, ದೇಶೀಯ, ಅಂತರ್ದೇಶೀಯ ಭಾಷೆಗಳು ಹುಟ್ಟಿ ಬೆಳೆದು ಬಳಕೆಯಾಗುತ್ತಲಿವೆ. ಇತ್ತಿತ್ತಲಾಗಿ ಕಂಪ್ಯೂಟರ್‌ಭಾಷೆ, ರೋಬೋ ಭಾಷೆಗಳುಸಹ ಸಂಪರ್ಕದ ವಲಯದಲ್ಲಿಯೇ ಒಂದು ಕ್ರಾಂತಿಕಾರಕ ಬೆಳವಣಿಗೆಯನ್ನು ತಂದಿವೆ. ಭಾಷೆ ಕೆಲವೊಂದು ಸಾರೆ ಇತರರಿಗೆ ಅರ್ಥವಾಗಲು ಬೇಕಾದರೆ, ಕೆಲವು ಸಂದರ್ಭದಲ್ಲಿ ನಾವು ಇತರರಿಗೆ ಅರ್ಥವಾಗದ ಭಾಷೆಯನ್ನು ಬಳಸಲು ಇಷ್ಟಪಡುತ್ತೇವೆ. ಯಾವ ಸಂದರ್ಭದಲ್ಲಿ ನಮ್ಮ ನಮ್ಮಲ್ಲಿ ವಿನಿಮಯವಾಗುವ ವಿಷಯವನ್ನು ಗೌಪ್ಯವಾಗಿಡಲು ಪ್ರಯತ್ನಿಸುತ್ತೇವೆಯೋ, ಆ ಸಂದರ್ಭದಲ್ಲಿ ಸಾರ್ವತ್ರಿಕವಲ್ಲದ, ಇತರರಿಗೆ ಅರ್ಥವಾಗದ ಭಾಷೆಯನ್ನು ಬಳಸುತ್ತೇವೆ.

ಮೇದರು ಹೆಚ್ಚು ಶಿಕ್ಷಣವನ್ನು ಪಡೆದವರಲ್ಲ. ತಮ್ಮ ವಸ್ತುಗಳನ್ನು ಮಾರಾಟಮಾಡುವಲ್ಲಿ ಆಧುನಿಕ ಮಾರಾಟಗಾರನ ಚತುರತೆಯನ್ನು ಸಹ ಅರಿಯದವರು ಈಜನ. ಹೀಗಿರುವಾಗ ಇವರು ತಮ್ಮ ವ್ಯಾಪಾರದಲ್ಲಿ ತಮ್ಮದೇ ಆದ ವ್ಯಾಪಾರಿ ಚತುರತೆಯನ್ನು ಬಳಸುತ್ತಾರೆ. ಈ ಚತುರತೆಯ ಹಿಂದೆ ಇವರ ಪಾರಂಪರಿಕ ಸಂಸ್ಕಾರ ಮತ್ತು ಅನುಭವ

ಇದೆ. ವ್ಯಾಪಾರದ ಪ್ರತಿ ಹಂತದಲ್ಲಿ ಯಾವುದೆ ವ್ಯಾಪಾರಿಗಳು ತಮ್ಮ ವ್ಯಾಪಾರದ ಗುಟ್ಟನ್ನು ಬಿಟ್ಟುಕೊಡುವುದಿಲ್ಲ. ವ್ಯಾಪಾರದ ಗುಟ್ಟು ರಟ್ಟಾಗುವ ಮುನ್ನ ಮಾತ್ರ, ಎಂಬ ಮಾತಿದೆ. ಕಾರಣ ಯಾವುದೇ ವ್ಯಾಪಾರಿಗಳು ತಮ್ಮ ವ್ಯಾಪಾರದ ಗುಟ್ಟನ್ನು ಇತರರಿಗೆ ತಿಳಿಯಪಡಿಸುವುದಿಲ್ಲ. ಅದನ್ನು ಉಳಿಸಿಕೊಂಡು ಬರುತ್ತಾರೆ. ಅದಕ್ಕಾಗಿ ಇವರು ತಮ್ಮದೇ ಆದ ವ್ಯವಹಾರಿಕ ಭಾಷೆ ಮತ್ತು ಸೌಂಜ್ಞೆಗಳನ್ನು ಬಳಸುತ್ತಾರೆ. ಈ ಭಾಷೆಯು ಪ್ರಾದೇಶಿಕ ಭಾಷೆಯ ಮಿಶ್ರಭಾಷೆಯಾಗಿರುತ್ತದೆ. ಮೇದರು ಸಹ ಇಂತಹ ಭಾಷೆಯನ್ನು ಬಳಸುವುದು ಕಂಡು ಬರುತ್ತದೆ. ಇಂತಹುದೇ ಭಾಷೆಯನ್ನು ಇತರೆ ಸಮುದಾಯದವರು ಬಳಸುವುದು ಕಂಡು ಬರುವುದಿಲ್ಲ. ಮೇದರು ತಮ್ಮ ನಿತ್ಯ ವ್ಯವಹಾರದಲ್ಲಿ ಅನ್ಯರ ಎದುರಿಗೆ ತಾವೇತಾವು ಮಾತನಾಡುವಾಗ ಈ ಭಾಷೆಯನ್ನು ಬಳಸುತ್ತಾರೆ. ಇವರು ಬಳಕೆಮಾಡುವ ಭಾಷೆಯ ಕೆಲವು ಶಬ್ದ ಮತ್ತು ವಾಕ್ಯಗಳನ್ನು ಇಲ್ಲ ಹೇಳಲಾಗಿದೆ :

- ಅಡವಿ ಬುಳ್ಳರು ಬಂದಾರ ಯರಗಾಗು = ಅರಣ್ಯದ ಅಧಿಕಾರಿಗಳು ಬಂದಿದ್ದಾರೆ ಮರೆಯಾಗಿ ಹೋಗು.
- ಅವುಡುಸು = ಮಾತನಾಡು ಅಥವಾ ಕೇಳು ಅಥವಾ ಇಲ್ಲಿ ಕೇಳು.
- ಇಲ್ಲಿ ಅವುಡಿಸತ್ತೀನಿ ಬಾ = ಇಲ್ಲಿ ಹೇಳುತ್ತೇನೆ ಇತ್ತಕಡೆ ಬಾ.
- ಎಲ್ಲಾ ಕಡೆ ದಳೇವು ಸಾಕಷ್ಟು ಐತಿ ಕಣೇವು ನೋಡಿ ಅವುಡುಸು. = ಮಾಲು ಎಲ್ಲಾ ಕಡೆ ಬಂದಿದೆ ಕಡಿಮೆ ಬೆಲೆಯನ್ನು ಹೇಳು.
- ಏನೂ ಅವುಡ್ಸ ಬ್ಯಾಡಾ = ಏನೂ ಮಾತನಾಡ ಬೇಡ , ಸುಮ್ಮನಿರು.
- ಕಣೇವು = ಹಣ ,ದುಡ್ಡು
- ಕಣೇವು ಮಾಡಿಕ್ಯಾ = ದುಡ್ಡು ಪಡೆದುಕೋ (ನಗದು ವ್ಯಾಪಾರ ಮಾಡು)
- ಗಲಾಟೆ ವಾವುರು ಗಿರಾಕಿ = ಈಗ ಬಂದಿರುವ ಗ್ರಾಹಕ ಗಲಾಟೆ ಮನುಷ್ಯ, ಅಥವಾ, ಈತ ದುಷ್ಟನಿದ್ದಾನೆ. ಕಾರಣ ಅವನ ತಂಟೆಗೆ ಹೋಗ ಬೇಡ.
- ದಳೇವು = ವಸ್ತುಗಳು (ಬಿದಿರು, ಬಂಬು, ಮರ, ಪುಟ್ಟಿ, ಇತ್ಯಾದಿ)
- ದಳೇವು ಎಲ್ಲೀ ಇಲ್ಲ ಹೆರಗು ನಾಡಿಕೆಂತಾರ ಕಣೇವು ಹೆರಗಾಗಿ ಆವುಡಸು = ಇವರು ಎಲ್ಲಾ ಕಡೆ ವಿಚಾರಿಸಿ ಬಂದಿದ್ದಾರೆ ಬೇರೆ ಕಡೆ ಮಾಲು ಇಲ್ಲ, ಕೊಂಡು ಕೊಳ್ಳುತ್ತಾರೆ. ಹೆಚ್ಚಿನ ಬೆಲೆಯನ್ನು ಹೇಳು.
- ದೊಡ್ಡವಾವುರು = ಗಣ್ಯವ್ಯಕ್ತಿ
- ದೊಡ್ಡವಾವುರು ಹೆಣ್ಣು ಬುಳ್ಳರನ್ನು ಯರಗಾಗನ್ನು = ದೊಡ್ಡಮನುಷ್ಯರು ಬರುತ್ತಿದ್ದಾರೆ ಹೆಣ್ಣುಮಕ್ಕಳನ್ನು ಒಳಗೆ ಹೋಗಲು ಹೇಳು.
- ದೊಡ್ಡ ವಾವಿ = ಪ್ರತಿಷ್ಟಿತ ಕುಟುಂಬದ ಹೆಂಗಸು.

- ಜಾಣೇವು = ಊಟ, ಬುತ್ತಿ

- ಜಾಣೇವು ಕಾಣಿಸಿ ಬಾ ಹೋಗು = ಊಟವನ್ನು ಮಾಡಿ ಬಾ ಹೋಗು.

- ಮಾರೆವು = ಮಾಂಸ.

- ಮಾರೇವು ತಗಂತೀಯಾ = ಮಾಂಸ ಇದೇ ನೋಡು ಕೊಂಡು ಕೊಳ್ಳುವೆ ಏನು.

- ಮಂಚೇವು = ಮೀನು.

- ಮಂಚೇವು ತಗಂತೀಯಾ = ಮೀನು ಬಂದಿದೆ ನೋಡು, ಕೊಂಡು ಕೊಳ್ಳುವೆಯಾ ?

- ಯರಗಾಗು = ಮರೆಯಾಗಿ ಹೋಗಿ ಬಿಡು.

- ಯರಗಲ್ಲು = ಮಾತನಾಡಬೇಡ. ಸುಮ್ಮನಿರು.

- ಹೆರಗು ಇದ್ದದ್ದು ಹೆರಗು ಮಾಡು = ಒಳ್ಳೆಯ ಮಾಲನ್ನೇ ನೋಡಿ ಕೊಡು.

- ಹೆರಗಿಲ್ಲದ್ದು ಹೆರಗಮಾಡು = ಕಳಪೆ ಗುಣ ಮಟ್ಟದಮಾಲು ಕೊಟ್ಟು ಕಳುಹಿಸು.

- ಹಳೇ ಕಣೇವು ಯರಗಮಾಡನ್ನು = ಕೊಡಬೇಕಾದ ಬಾಕಿಯನ್ನು ಕೇಳು.

- ಮಾವ = ಅವನು, ಆ ವ್ಯಕ್ತಿ ನಾನು ಹೇಳಿದ್ದೆನಲ್ಲ ಅದೇ ವ್ಯಕ್ತಿ.

- ವಾವಿ = ಅವಳು, ಅದೇ ಹೆಣ್ಣು ಮಗಳು, ನಾನು ಹೇಳೀದ್ದೆನಲ್ಲ ಅವಳೇ ಇವಳು.

- ವಾವಿ ಗಲಾಟೆ ಹಿರೇಬುಳ್ಳಿ = ಬಂದಿರುವ ಹೆಂಗಸು ಜಗಳಗಂಟಿ ಇದ್ದಾಳೆ.

- ವಾವ ಹಿರೇ ಬುಳ್ಳರು = ಬಂದಿರುವ ವ್ಯಕ್ತಿಯು ಭಾರೀ ದೊಡ್ಡ ಮನುಷ್ಯ ಇದ್ದಾನೆ ಎಂದು ವ್ಯಂಗ್ಯವಾಗಿ ನುಡಿಯುವುದು.

- ವಾವುರಿಗೆ ಏನು ಬೇಕು ಅವುದುಸು = ಬಂದಿರುವ ಗಿರಾಕಿಗೆ ಏನು ಬೇಕು ನೋಡಿ ಕೇಳಿ ಕೊಡು.

- ವಾವುರಿಗೆ ಏನೂ ಆವುಡಿಸ ಬೇಡ ಹಿರೇ ಬುಳ್ಳರು ಇಲ್ಲಾ ಅನ್ನು = ಬಂದವರಿಗೆ ಏನೂ ಕೊಡಬೇಡ , ಮನೆಯಲ್ಲಿ ದೊಡ್ಡವರಿಲ್ಲ ಎಂದು ಹೇಳು.

- ಲಂಬೇವು = ಮದ್ಯಪಾನ.

- ಲಂಬೇವು ಕಾಣಸಾನು ಬಾ = ಮದ್ಯಪಾನ ಮಾಡೋಣ ಬಾ.

- ಲಂಬೇವು ಕಾಣಿಸಿ ಬಂದಾನ. = ಈಗ ಬಂದಿರುವ ವ್ಯಕ್ತಿ ಮದ್ಯಪಾನ ಮಾಡಿ ಬಂದಿದ್ದಾನೆ.

(ವಕ್ತೃ : ಮೇದರ ರಾಮಣ್ಣ ಹ.ಬೊ. ಹಳ್ಳಿ ಮತ್ತು ಮೇದರ ಕೊಟ್ರೇಶ ಹ.ಬೊ.ಹಳ್ಳಿ. ಹಾಗೂ ಮೇದರ ವೆಂಕಟೇಶ ಹ.ಬೊ. ಹಳ್ಳಿ. ಮೇದರ ಆನಂದ ಕೂಡ್ಲಿಗಿ.)[4]

ಅಡಿಟಿಪ್ಪಣಿಯ ಆಧಾರ ಗ್ರಂಥ ಮತ್ತು ವಕ್ತೃಗಳು :

1. (ವಸ್ತುಗಳ ತಯಾರಿಕೆಯನ್ನು ಕುರಿತಾಗಿ ವಿವರಣೆ ನೀಡಿದ ವಕ್ತೃಗಳು :ಮೇದರ ಬಸವರಾಜಪ್ಪ ಹೂವಿನಹಡಗಲಿ, ಮೇದರ ಲಕ್ಷ್ಮಣ ಹೊಸಪೇಟೆ.ಮೇದರ ವೆಂಕಟೇಶ,ಹ.ಬೊ.ಹಳ್ಳಿ, ಮೇದರ ಲಕ್ಷ್ಮೀದೇವಮ್ಮ, ಹ.ಬೊ.ಹಳ್ಳಿ, ಮೇದರ ರಾಮಣ್ಣ ಹ.ಬೊ. ಹಳ್ಳಿ. ಮತ್ತು ಮೇದರ ಮಮ್ಮಾದೇವಿಯವರು.

2. ಆಜ್ಜಂಪುರ ಕೃಷ್ಣಸ್ವಾಮಿ ಅವರ. ವನಸಿರಿ. ಡಾ. ಕೆ. ಎಂ ಮೈತ್ರಿ ಅವರ ಮತ್ತು ಬುಡಕಟ್ಟು ಕುಲಕಸುಬುಗಳು. ಡಾ. ಕರೀಗೌಡ ಬೀಚನಹಳ್ಳಿ ಅವರ ಕರಕುಶಲ ಕಲೆಗಳು.

3. ಪ್ರೊ: ಬಲವಂತ ಅವರ ವ್ಯವಹಾರ ಅಧ್ಯಯನ ಮತ್ತು ವಾಣಿಜ್ಯಶಾಸ್ತ್ರ ಪ್ರೊ: ಕೆ.ಡಿ. ಬಸವ ಅವರ ಮಾರುಕಟ್ಟೆ ನಿರ್ವಹಣೆ. ಮತ್ತು ಆಧುನಿಕ ಭಾರತದ ಆರ್ಥಿಕಾಭಿವೃದ್ಧಿ. ಹಾಗೂ.Marketing Management.

4. ಮೇದರ ರಾಮಣ್ಣ ಹ.ಬೊ. ಹಳ್ಳಿ ಮತ್ತು ಮೇದರ ಕೊಟ್ರೇಶ ಹ.ಬೊ.ಹಳ್ಳಿ, ಹಾಗೂ ಮೇದರ ವೆಂಕಟೇಶ ಹ.ಬೊ. ಹಳ್ಳಿ. ಮೇದರ ಆನಂದ ಕೂಡ್ಲಿಗಿ.



ಮೊರತಯಾರಿಸಲು ಬಿದಿರಿನಿಂದ
ಓಳು ನೀಯುತ್ತಿರುವುದು ಮತ್ತು
ಳುಗಳಿಂದ ಮೊರ ಹೆಣೆಯುತ್ತಿರುವುದು



2. ಗಿಳಿಪಂಜರ ಮತ್ತು ಈರುಳ್ಳಿಯ ಪುಟ್ಟಿ



ಡಾಣಿಪುಟ್ಟಿಗೆ ಬಳುವಿನಿಂದ
ಕಗಳ ಸುತ್ತ ಹೆಣೆಯುತ್ತಿರುವುದು




4. ಮೇಕೆ-ಕುರಿಮರಿ ಮುಚ್ಚುವ ಪುಟ್ಟಿ



ಬಿದಿರಿನ ಕಡ್ಡಿಯಿಂದ ತಟ್ಟಿ
ತಯಾರಿಸುತ್ತಿರುವುದು.



6. ಗೋಪುರದಜಲ್ಲಿ



ಬಿದಿರಿನ ಓಳುಗಳಿಂದ ಚಾಪಗೆ
ತೊಟ್ಟು ಹಾಕುತ್ತಿರುವುದು.



8. ಬಂಡಿಯಗೋರಿ



ಬಿದಿರಿನ ತಟ್ಟಿಯ ಗುಡಿಸಲು



10. ಪ್ರವಾಸಿ ತಾಣಗಳಲ್ಲಿ ಬ್ಯಾಲೆನ್ಸಭಾವಣಿ



ಕರಕುಶಲ ವಸ್ತುಗಳು



12. ನವೀನ ಮಾದರಿಯ ಬಿದಿರಿನ ಹೋಟಲ್



ಬೆತ್ತ-ಬಿದಿರಿನ ಪೀಠೋಪ ಕರಣಗಳು



14. ಬಿದಿರಿನ ವಿನ್ಯಾಸದ ಕಬ್ಬಿಣದ ತಡಿಕೆ (ತಟ್ಟಿ)



ದಿರಿನ ಆಧುನಿಕ ಗುಡಿಸಲು



16. ಬಿದಿರಿನ ಮಹಾದ್ವಾರದ ಗೋಪುರ

ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ

ಅಧ್ಯಾಯ : ಐದು

ಬಿದಿರಿನ ವಸ್ತುಗಳ ತಯಾರಿಕೆ ಮತ್ತು ಮಾರಾಟ

5.1 ಬಿದಿರಿನ ವಸ್ತುಗಳ ತಯಾರಿಕೆ (ಉತ್ಪಾದನೆ)

- 5.1.1 ಪ್ರವೇಶಿಕೆ
- 5.1.2 ವಸ್ತುವಿನ ಕಲ್ಪನೆ
- 5.1.3 ಬಿದಿರಿನ ವಸ್ತುಗಳ ಉತ್ಪಾದನೆಯ ಸಮಸ್ಯೆಗಳು
- 5.1.3.1 ಕಚ್ಚಾ ಪದಾರ್ಥದ ಸಮಸ್ಯೆ
- 5.1.3.2 ಹಣಕಾಸು ಸಮಸ್ಯೆಗಳು
- 5.1.3.3 ವಸ್ತುಗಳ ಉತ್ಪಾದನೆಯ ಯೋಜನೆಯ ಸಮಸ್ಯೆ

5.2 ತಯಾರಿಸಿದ ವಸ್ತುಗಳ ಮಾರಾಟ ಪ್ರಕ್ರಿಯೆ

- 5.2.1 ಮಾರಾಟದ ಪ್ರಕ್ರಿಯೆಯಲ್ಲಿ ಗಮನಿಸ ಬೇಕಾದ ಅಂಶಗಳು
- 5.2.1.ಅ) ಆಂತರಿಕ ಅಂಶಗಳು
- 5.2.1. ಆ) ಬಾಹ್ಯ ಅಂಶಗಳು
- 5.2.2 ತಯಾರಿಸಿದ ವಸ್ತುಗಳ ಮಾರಾಟ ಪ್ರಕ್ರಿಯೆಯ ಸಮಸ್ಯೆಗಳು

5.3 ವಸ್ತುಗಳ ವೈವಿಧ್ಯತೆ

5.4 ಗೃಹ ಮತ್ತು ಸಣ್ಣ ಕೈಗಾರಿಕೆಗಳ ಸ್ಥಿತಿಗತಿ

5.5 ಬುಡಕಟ್ಟು ವಾಣಿಜ್ಯದಲ್ಲಿ ನೈತಿಕ ಮೌಲ್ಯಗಳು

5.1. ಬಿದಿರಿನ ವಸ್ತುಗಳ ತಯಾರಿಕೆ (ಉತ್ಪಾದನೆ) (Manufacturing of Bamboo Products)

5.1.1 ಪ್ರವೇಶಿಕೆ:

ಉತ್ಪಾದನೆ ಎಂದರೆ, ಉತ್ಪಾದಕನ ವಸ್ತುವಿನ ಕಲ್ಪನೆಗೆ ತಕ್ಕಂತೆ ಅವಶ್ಯ ಪರಿಕರಗಳನ್ನು ಸಂಸ್ಕರಣಕ್ಕೊಳಪಡಿಸಿ ಅವುಗಳಿಗೊಂದು ಭೌತಿಕ ಇಲ್ಲವೇ ರಾಸಾಯನಿಕ ರೂಪಕೊಡುವುದಾಗಿದೆ. ಅಂದರೆ ಲಭ್ಯವಿರುವ ಸಾಮಗ್ರಿಗಳನ್ನು ಬಳಸಿಕೊಂಡು ವಸ್ತು ಕಲ್ಪನೆಗೆ ತಕ್ಕ ವಸ್ತುಗಳನ್ನು ತಯಾರಿಸುವುದನ್ನು ಉತ್ಪಾದನೆ ಎಂದು ಕರೆಯ ಬಹುದು. ಪ್ರೊ: ಕೆ.ಡಿ. ಬಸವ ಅವರ ಪ್ರಕಾರ ಉತ್ಪಾದನೆ ಎಂದರೆ, "ಮಾನವನ ಬಯಕೆಗಳನ್ನು ತೃಪ್ತಿಪಡಿಸುವದರ ಸಲುವಾಗಿ ಕೈಕೊಳ್ಳುವ ಚಟುವಟಿಕೆಗಳೆಂದು ಅರ್ಥ. ಪ್ರಕೃತಿಯು ಒದಗಿಸಿದ ವಸ್ತುಗಳ ಉಪಯುಕತ್ತೆಯನ್ನು ಹೆಚ್ಚಿಸಿ ಅವು ಮಾನವನ ಬಯಕೆಗಳನ್ನು ತೃಪ್ತಿಪಡಿಸುವಂತೆ ಮಾಡುವ ಕ್ರಿಯೆಯೇ ಉತ್ಪಾದನೆಯಾಗಿದೆ.ವಸ್ತುಗಳ ತುಷ್ಟಿಗುಣವನ್ನು ಉಪಯೋಗಿಸುವುದು ಅನುಭೋಗವಾದರೆ, ವಸ್ತುಗಳಿಗೆ ತುಷ್ಟಿಗುಣವನ್ನು ಸೇರಿಸುವುದು ಉತ್ಪಾದನೆಯಾಗಿದೆ ".[1]. ಇಲ್ಲಿ ವಸ್ತುವಿಗೆ ಸ್ಥಳ, ಕಾಲ, ರೂಪ, ಮತ್ತು ಸೇವೆಯ ತುಷ್ಟಿಗುಣ ಸೇರ್ಪಡೆಯಾಗುತ್ತದೆ.ಅರ್ಥಶಾಸ್ತ್ರದಲ್ಲಿ ಉತ್ಪಾದನೆಯು ಉತ್ಪಾದನೆಯ ನಿಯಮಗಳಿಗೆ ಅಧೀನವಾಗಿರುತ್ತದೆ. ಮೇದರು ತಮ್ಮ ಕುಲಕಸುಬಿನಿಂದ ವಸ್ತುಗಳನ್ನು ತಯಾರಿಸುವಾಗ ಸಹಜವಾಗಿ ದೊರೆಯುವ ಬಿದಿರನ್ನು ಅನೇಕ ಆರ್ಥಿಕ ಚಟುವಟಿಕೆಗಳಿಗೆ ಒಳಪಡಿಸಿ ವಸ್ತುಗಳನ್ನು ತಯಾರಿಸುತ್ತಾರೆ. ಗ್ರಾಹಕರ ತೃಪ್ತಿಯ ಜೊತೆಗೆ ದೇಶೀಯ ಸಂಸ್ಕೃತಿಯ ರಕ್ಷಣೆಯು ಇವರ ಉದ್ದೇಶವಾಗಿರುತ್ತದೆ.

5.1.2 ವಸ್ತುವಿನ ಕಲ್ಪನೆ:

ವಸ್ತು ಎಂದರೆ ಗ್ರಹಿಸ ಬಹುದಾದ ಸ್ಪುಟವಾದ ಭೌತಿಕ ಮತ್ತು ರಾಸಾಯನಿಕ ರೂಪದಲ್ಲಿರುವ ಕಟ್ಟು ಆಗಿದೆ. ಇನ್ನೊಂದು ಅರ್ಥದಲ್ಲಿ, ವ್ಯಕ್ತಿಯ ವೈಯಕ್ತಿಕ ಮತ್ತು ಸಾಮೂಹಿಕ ಬಯಕೆಯನ್ನು ತೃಪ್ತಿಪಡಿಸುವ ವ್ಯವಹಾರಿಕ ಇಲ್ಲವೆ ವಾಣಿಜ್ಯದ ಅವಶ್ಯಕತೆಗಳನ್ನು ಪೂರೈಸಲು ಉತ್ಪಾದಕ ಮಾರುಕಟ್ಟೆಗೆ ಬಿಡುಗಡೆ ಮಾಡಿರುವ ಪದಾರ್ಥವೇ ವಸ್ತುವಾಗಿರುತ್ತದೆ. ವಸ್ತುವನ್ನು ಕುರಿತು ಫಿಲಿಫ್ ಕೊಟ್ಲರ್ ಅವರು ಹೀಗೆ ಹೇಳುತ್ತಾರೆ. A product is anything that can be offered to a market for attention, acquisition, use, or consumption that might satisfy a want or need . It includes physical objects, services, persons, places, organizations, and ideas.[2]. "ಗಮನ ಸೆಳೆಯಲು, ಪಡೆಯಲು, ಅವಶ್ಯಕತೆಯನ್ನು ತೃಪ್ತಿಪಡಿಸುವ ಯಾವುದೇ ಪದಾರ್ಥವು ವಸ್ತು ಎಂದು ಕರೆಯಲ್ಪಡುತ್ತದೆ." ಇದು ಭೌತಿಕ ಉದ್ದೇಶ, ಸೇವೆ, ವ್ಯಕ್ತಿ ಸ್ಥಳ, ಮತ್ತು ಸಂಸ್ಥೆಯ ಉದ್ದೇಶಗಳನ್ನು ಒಳಗೊಂಡಿರುತ್ತದೆ. ಇದರಿಂದ ವಸ್ತು ಎಂದರೆ ಅದೊಂದು ಕಲ್ಪನೆಯಾಗಿರಬಹುದು, ಸರಕು ಆಗಿರಬಹುದು, ಇಲ್ಲವೇ ಸೇವೆಯಾಗಿರಬಹುದು, ಇಲ್ಲವೇ ಇವೆಲ್ಲವುಗಳ ಸಂಯೋಜನೆಯಾಗಿರಬಹುದು ಎಂದು ಅರ್ಥವಾಗುತ್ತದೆ.

ಉತ್ಪಾದಕನು ತಾನು ತಯಾರಿಸುವ ವಸ್ತುವನ್ನು ಕುರಿತು ಮೊದಲು ಪೂರ್ವ ಕಲ್ಪನೆ ಮತ್ತು ಯೋಜನೆಗಳನ್ನು ಹೊಂದಿರಬೇಕು. ಏಕೆಂದರೆ ಗ್ರಾಹಕರು ತಾವು ಕೊಂಡು ಕೊಳ್ಳುವ ವಸ್ತುವಿನ ಬಗೆಗೆ ಒಂದು ಪೂರ್ವಗ್ರಹ ಕಲ್ಪನೆಯನ್ನು ಮಾಡಿಕೊಂಡಿರುತ್ತಾರೆ. ಗ್ರಾಹಕರು ಅದನ್ನು ಬೇರೆ, ಬೇರೆ ದೃಷ್ಟಿಕೋನದಿಂದ ನೋಡುತ್ತಾರೆ. ಕಾರಣ ಉತ್ಪಾದಕನು, ಗ್ರಾಹಕನು ಹೊಂದಿರುವ ಮನೋಭಾವಗಳನ್ನು ತಿಳಿದು ಕೊಂಡು ತನ್ನ ವಸ್ತುವಿನ ಉತ್ಪಾದನೆ ಮತ್ತು ಮಾರಾಟದ ಕಾರ್ಯವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಗ್ರಾಹಕನು ಕೊಂಡುಕೊಳ್ಳುವ ಯಾವುದೇ ವಸ್ತುವಿನ ಕಲ್ಪನೆಯು ಅನೇಕ ಅಂಶಗಳಿಂದ ರೂಪಿತ ಗೊಂಡಿರುತ್ತದೆ. ಅಂದರೆ, ವ್ಯಕ್ತಿತ್ವ ಬಯಕೆ,ಅವಶ್ಯಕತೆ, ಘನತೆ, ಶಿಕ್ಷಣ, ಸುರಕ್ಷತೆ, ಮುಂತಾದವು. ಇವುಗಳ ಆಧಾರದ ಮೇಲೆ ಮಾರಾಟಗಾರನು ಪ್ರಮುಖವಾದ ನಾಲ್ಕು ಸಾಧನಗಳಾದ ವಸ್ತು ವಿತರಣೆ, ಬೆಲೆ, ಮತ್ತು ಪ್ರವರ್ತನೆ(ಮಾರಾಟದ ಪ್ರಕ್ರಿಯಾ ಮಿಶ್ರಣ)ಗಳನ್ನು ಗಮನದಲ್ಲಿರಿಸಿಕೊಂಡು ತನ್ನ ಮಾರಾಟದ ಪ್ರಕ್ರಿಯೆಯನ್ನು ರೂಪಿಸುತ್ತಾನೆ. ಆಧುನಿಕ ಮಾರುಕಟ್ಟೆಯಲ್ಲಿ ಉತ್ಪಾದಕ ತನ್ನ ಸಂಸ್ಥೆಯ ವಸ್ತುವಿನ ಉತ್ಪಾದನೆ ಮತ್ತು ಮಾರಾಟದಲ್ಲಿ ಪ್ರಮುಖವಾದ ಕೆಲವು ಅಂಶಗಳನ್ನು ಗಮನದಲ್ಲಿರಿಸಿಕೊಂಡು ಮುಂದುವರಿಯುತ್ತಾನೆ. ಅವುಗಳೆಂದರೆ,ವಸ್ತು (product), ವಸ್ತುವಿನ ಪರಿಭಾವನೆ,(product concept), ವಸ್ತುಗಳ ಮಿಶ್ರಣ ತಂತ್ರಗಳು (product Mix strategeies), ವಸ್ತುಗಳ ಜೀವಿತ ಕಾಲಚಕ್ರ(product Life Cycle:PLC), ವಸ್ತುಗಳ ವೈವಿಧ್ಯತೆ, (product Diversification), ವಸ್ತುವಿನ ಸ್ಥಾನ ನಿರ್ಧರಿಸುವಿಕೆ,(Product position), ವಸ್ತುವಿನ ಯೋಜನೆ ಮತ್ತು ಅಭಿವೃದ್ಧಿಯ ತಂತ್ರ (Product Planning and Development Strategy), ಹೊಸ ವಸ್ತುವಿನ ಯೋಜನಾ ಪ್ರಕ್ರಿಯೆ (New Product Planning Process), ಸಂವೇಷ್ಟಿಸುವಿಕೆ ಮತ್ತು ಮುದ್ರೆ ಹಾಕುವಿಕೆ (packaging and Branding).

ಪ್ರಸ್ತುತ, ಆಧುನಿಕ ಉತ್ಪಾದನೆ ಮತ್ತು ಮಾರಾಟದಲ್ಲಿ ಉತ್ಪಾದಕ, ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ತನ್ನ ವಸ್ತುವನ್ನು ಉತ್ಪಾದನೆ ಮಾಡಬೇಕಾಗಿದೆ. ಆದರೆ, ಮೇದರಂತಹ ಕುಲಕಸುಬುದಾರರು ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ತನ್ನ ವಸ್ತುಗಳ ಉತ್ಪಾದನೆಯನ್ನು ಕೈಗೊಳ್ಳಲು ಸಾಧ್ಯವೇ? ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಬುಡಕಟ್ಟು ಕಸುಬುದಾರರು ಈ ಎಲ್ಲಾ ಅಂಶಗಳನ್ನು ಅಲ್ಲದಿದ್ದರೂ ಸಹ, ಇವುಗಳಲ್ಲಿ ಕೆಲವು ಅಂಶಗಳನ್ನಾದರೂ ಗಮನದಲ್ಲಿರಿಸಿಕೊಂಡು ತಮ್ಮ ವಸ್ತುಗಳನ್ನು ತಯಾರಿಸುತ್ತಾರೆ. ಯಾವುದೇ ಉತ್ಪಾದಕ ತಾನು ತಯಾರಿಸುವ ವಸ್ತುವಿನ ಉತ್ಪಾದನೆಗೆ ಮುಂಚೆ, ಆ ವಸ್ತುವಿನ ಭೌತಿಕ ಆಕಾರದ ಕಲ್ಪನೆಯನ್ನು ಮಾಡುತ್ತಾನೆ. ಅದಕ್ಕೆ ತಕ್ಕಂತೆ ಗುಣಮಟ್ಟ, ಗಾತ್ರ, ಬಣ್ಣ, ಬೆಲೆ, ವಿನ್ಯಾಸ, ಮುಂತಾದವುಗಳ ಬಗ್ಗೆ ತಂತ್ರಜ್ಞರ ಸಲಹೆ ಪಡೆದು ಅಳವಡಿಸುವನು. ಉತ್ಪಾದನೆಗೆ ಬೇಕಾದ ಪರಿಕರಗಳನ್ನು ಜೋಡಿಸಿಕೊಂಡು ಉತ್ಪಾದನೆಗೆ ತೊಡಗುತ್ತಾನೆ. ಇಲ್ಲಿ ಪ್ರತಿಯೊಂದನ್ನೂ ತಾನು ಪಡೆದ ಅನುಭವ, ಶಿಕ್ಷಣ ಮತ್ತು ತಂತ್ರಜ್ಞಾನವನ್ನು ವೈಜ್ಞಾನಿಕವಾಗಿ ಅಳವಡಿಸಿಕೊಳ್ಳುವನು. ಆದರೆ ಮೇದರು ಇವುಗಳನ್ನು ಪಾರಂಪರಿಕ ಬಳುವಳಿಯಾಗಿ ಬಂದ ಕೌಶಲ್ಯದಿಂದ ಅಳವಡಿಸಿಕೊಂಡಿರುತ್ತಾರೆ.

ಹಾಗಾಗಿ ಇವರು ಇಂದಿಗೂ ಸಹ ನವೀನ ವಸ್ತುಗಳಿಗೆ ಮುಖಾಮುಖಿಯಾಗಿ ನಿಲ್ಲಲು ಸಾಧ್ಯವಾಗಿದೆ. ಉದಾಹರಣೆಗೆ, ಮೇದರು ಮೊರವನ್ನು ತಯಾರಿಸುವಾಗ ಹಲವು ಅಂಶಗಳನ್ನು ಗಮನಿಸುತ್ತಾರೆ. ಮೊದಲನೆಯದಾಗಿ ಕಚ್ಚಾ ಪದಾರ್ಥದ ಆಯ್ಕೆ, ಅಂದರೆ ಮೊರವನ್ನು ಬಿದಿರು ಮತ್ತು ಬೊಂಬು ಎರಡರಿಂದಲೂ ತಯಾರಿಸಬಹುದು. ಬಿದಿರಿನಿಂದ ತಯಾರಿಸಿದ ಮೊರ ಉತ್ತಮ ಗುಣಮಟ್ಟದ್ದಾಗಿರುತ್ತದೆ. ಮತ್ತು ಉತ್ಪಾದನೆಯ ವೆಚ್ಚ ಜಾಸ್ತಿಯಾಗಿರುತ್ತದೆ. ಆದರೆ ಬೊಂಬಿನಿಂದ ತಯಾರಿಸಿದ ಮೊರ ಕಡಿಮೆ ಗುಣ ಮಟ್ಟದ್ದಾಗಿರುತ್ತದೆ. ಉತ್ಪಾದನೆಯ ವೆಚ್ಚ ಕಡಿಮೆಯಾಗಿದ್ದು ಲಾಭ ಜಾಸ್ತಿಯಾಗಿರುತ್ತದೆ. ಹಾಗೆಂದ ಮಾತ್ರಕ್ಕೆ ಮೇದರು ಎಲ್ಲಾ ಸಂದರ್ಭದಲ್ಲಿ ಬೊಂಬಿನಿಂದಲೇ ಮೊರ ತಯಾರಿಸುವುದಿಲ್ಲ. ತಾನು ಮೊರವನ್ನು ತಯಾರಿಸುವುದು, ಯಾರಿಗೆ, ಯಾವಾಗ, ಯಾವ ಬಳಕೆಗಾಗಿ ಎನ್ನುವುದರ ಕಲ್ಪನೆಯನ್ನು ಗಮನದಲ್ಲಿರಿಸಿಕೊಂಡು ತಯಾರಿಸುತ್ತಾನೆ. ಇವರಿಂದ ಮೇದನನ್ನು ಒಬ್ಬ ನಿಖರವಾದ ಮತ್ತು ಪರಿಣಿತ ಉತ್ಪಾದಕ (perfect and experienced Manufacturer) ಎನ್ನಲಾಗುತ್ತದೆ.

5.1.2 ವಸ್ತುಗಳ ತಯಾರಿಕೆ (ಉತ್ಪಾದನೆ):

ಭಾರತ ಒಂದು ಗೃಹ ಕೈಗಾರಿಕೆಯ ರಾಷ್ಟ್ರ. ಕೈ ಮಗ್ಗಗಳಿಂದ ಬಟ್ಟೆ ನೇಯುವುದು, ಗೊಂಬೆ ತಯಾರಿಸುವುದು, ಕೆತ್ತನೆ ಕೆಲಸ, ಕಟ್ಟಿಗೆ ಕೆಲಸ, ನಕ್ಷಿ ತಯಾರಿಸುವುದು, ಚಮ್ಮಾರಿಕೆ, ಕಮ್ಮಾರಿಕೆ, ಕಸೂತಿ, ಹಗ್ಗತಯಾರಿಸುವುದು, ಚಾಪೆ, ಪುಟ್ಟಿ-ಮೊರ ತಯಾರಿಸುವುದು ಇಲ್ಲಿಯ ಪ್ರಮುಖವಾದ ಗೃಹಕೈಗಾರಿಕೆಗಳು. ದೇಶೀಯ ಕೈಗಾರಿಕೆಗಳಿಂದಲೇ ನಮ್ಮ ರಾಷ್ಟ್ರದ ಅಭಿವೃದ್ಧಿ ಸಾಧ್ಯವೆನ್ನುವುದು ದೇಶದ ಹಿತ ಚಿಂತಕರ ಮತ್ತು ವಿದ್ವಾಂಸರ ನುಡಿಯಾಗಿತ್ತು. ಮಹಾತ್ಮ ಗಾಂಧೀಜಿಯವರು ಸಹ ಭಾರತದ ಗುಡಿಕೈಗಾರಿಕೆಗಳ ಅಭಿವೃದ್ಧಿಯಿಂದಲೇ ಈ ದೇಶದ ಅಭಿವೃದ್ಧಿ ಸಾಧ್ಯವೆಂದು ಹೇಳಿದ್ದಾರೆ. ಮೇದರು ಅವಲಂಬಿಸಿರುವ ಬಿದಿರಿನ ಬುಡಕಟ್ಟು ಕುಲಕಸುಬು ಈ ಸಮುದಾಯದ ಗೃಹ ಕೈಗಾರಿಕೆಯಾಗಿದೆ. ಇವರು ತಮ್ಮ ಕಸುಬನ್ನು ತಮ್ಮ ವಾಸಸ್ಥಾನದಲ್ಲಿಯೇ ಮಾಡುತ್ತಾರೆ. ಕುಟುಂಬದ ಸದಸ್ಯರೆಲ್ಲರೂ ಕುಲಕಸುಬನ್ನು ಮಾಡುವರು. ಇವರು ತಮ್ಮ ಕಸುಬಿನಿಂದ ವಸ್ತುಗಳನ್ನು ತಯಾರಿಸುವಾಗ ವಿದ್ಯುಚ್ಛಕ್ತಿಯನ್ನಾಗಲಿ, ಯಂತ್ರೋಪಕರಣಗಳನ್ನಾಗಲಿ ಬಳಸುವುದಿಲ್ಲ. ಇತರ ಕುಶಲ ಕರ್ಮಿಗಳು ತಯಾರಿಸಿದ ಒಂಬು, ಕತ್ತಿ, ಕೊರಡು, ಚೀರ್ಣ, ಇವೇ ಇವರ ಕಸುಬಿನ ಉಪಕರಣಗಳು. ಪ್ರಸ್ತುತ ಜಾಗತಿಕರಣ ಮತ್ತು ಪ್ರಪಂಚ ಮಾರುಕಟ್ಟೆಯ ಪರಿಕಲ್ಪನೆಯ ಸಂದರ್ಭದಲ್ಲಿ ಇವರ ಸಮಸ್ಯೆಗಳು ಹಲವು. ಇಂತಹ ಗುಡಿಕೈಗಾರಿಕೆಗಳಲ್ಲಿ ಈ ದೇಶದ ಅನೇಕ ಬುಡಕಟ್ಟು ಸಮುದಾಯಗಳು ನಿರತವಾಗಿವೆ. ಇಂತಹ ಸಮುದಾಗಳಲ್ಲಿ ಮೇದ ಬುಡಕಟ್ಟು ಸಮುದಾಯ ತನ್ನ ಕುಲಕಸುಬಿನಿಂದ ತಯಾರಿಸುವ ವಸ್ತುಗಳ ಉತ್ಪಾದನೆಯಿಂದ ಮಾರಾಟದವರೆಗೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಈ ಅಧ್ಯಾಯದಲ್ಲಿ ಇವರು ಬಿದಿರಿನಿಂದ ಮಾತ್ರ ತಯಾರಿಸುವ ವಸ್ತುಗಳ ಉತ್ಪಾದನೆ ಮತ್ತು ಮಾರಾಟದ ಸಮಸ್ಯೆಗಳನ್ನು ಹೇಳಲಾಗುತ್ತಿದೆ.

5.1.3 ಬಿದಿರಿನ ವಸ್ತುಗಳ ಉತ್ಪಾದನೆಯ ಸಮಸ್ಯೆಗಳು

(Manufacturing Problems of Bamboo products.) :

ಮೇದರು ತಾವು ತಮ್ಮ ಕುಲಕಸುಬಿನಿಂದ ವಸ್ತುಗಳನ್ನು ತಯಾರಿಸುವಾಗ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಈ ಸಮಸ್ಯೆಗಳಿಗೆ ಇಂದಿಗೂ ಸೂಕ್ತವಾದ ಪರಿಹಾರ ಕಾಣದೇ ತಮ್ಮ ಉತ್ಪಾದನೆಯಲ್ಲಿ ಮುಂದುವರಿದಿದ್ದಾರೆ. ಇದಕ್ಕೆ ಇವರು ತಮ್ಮ ಕುಲಕಸುಬನ್ನೇ ನಂಬಿರುವ ದೃಢವಾದ ನಂಬಿಗೆಯೇ ಕಾರಣವಾಗಿದೆ. ಇತರೆ ಉತ್ಪಾದಕರ ಸಮಸ್ಯೆಗಳಿಗಿಂತ ಇವರ ಸಮಸ್ಯೆಗಳು ಭಿನ್ನ ಮತ್ತು ವಿಚಿತ್ರವಾಗಿವೆ. ಈ ಅಧ್ಯಾಯದಲ್ಲಿ ಅವರ ಉತ್ಪಾದನೆಯ ಸಮಸ್ಯೆಗಳನ್ನು ಹೀಗೆ ಹೇಳಲಾಗಿದೆ.

5.1.3.1 ಕಚ್ಚಾ ಪದಾರ್ಥದ ಸಮಸ್ಯೆ (Problem of Raw Material):

ಉತ್ಪಾದನೆಯನ್ನು ನಿಯಂತ್ರಿಸುವ ಅಂಶಗಳಲ್ಲಿ ಕಚ್ಚಾ ಪದಾರ್ಥ ಪ್ರಮುಖವಾದ ಅಂಶವಾಗಿದೆ. ಉತ್ಪಾದಿತ ವಸ್ತುವಿನ ಗುಣಮಟ್ಟ ಅದರ ಉತ್ಪಾದನೆಯಲ್ಲಿ ಬಳಸಿದ ಕಚ್ಚಾ ಪದಾರ್ಥದ ಗುಣ ಮಟ್ಟವನ್ನು ಅವಲಂಬಿಸಿರುತ್ತದೆ. ಮೇದರ ಕುಲಕಸುಬಿನಲ್ಲಿ ಬಳಸುವ ಕಚ್ಚಾ ಪದಾರ್ಥ ಬಿದಿರು. ಬಿದಿರಿನ ಸಸ್ಯಶಾಸ್ತ್ರೀಯ ಸಂಪೂರ್ಣ ಮಾಹಿತಿಯನ್ನು ಪ್ರತ್ಯೇಕವಾಗಿ ಹೇಳಲಾಗಿದೆ. ನಾಡಿನ ಯಾವುದೋ ಪ್ರದೇಶದಲ್ಲಿ ಬೆಳೆದ ಬಿದಿರು ನಾಡಿನಾದ್ಯಂತ ಉತ್ಪಾದನೆಗೆ ಬಳಕೆಯಾಗುತ್ತದೆ. ಮಾನವನ ನಿತ್ಯಬಳಕೆಯ ಹತ್ತು ಹಲವು ಆಯಾಮಗಳಲ್ಲಿ ಬಿದಿರು ಇಲ್ಲವೇ ಬಿದಿರಿನಿಂದ ತಯಾರಿಸಿದ ವಸ್ತುಗಳ ಬಳಕೆ ಸಾಮಾನ್ಯ. ಹಾಗಾಗಿ ಬಿದಿರನ್ನು ಕುರಿತು ಜನಪದೀಯರು ಹೀಗೆ ಹಾಡಿದ್ದಾರೆ.

ಬಿದಿರೇ ನಾನಾರಿಗಲ್ಲದವಳಾದೆ
ಹುಟ್ಟೂತ ಹುಲ್ಲಾದೆ ಬೆಳೆಯೂತ ಬಿದಿರಾದೆ
ನಾರಿಯರ ಕೈಯೊಳಗೆ ಕೇರೂವ ಮೊರವಾದೆ
ಬಿದಿರೇ ನಾನಾರಿಗಲ್ಲದವಳಾದೆ.

ಎಂದು ಬಿದಿರಿನ ಹುಟ್ಟು ಮತ್ತು ಉಪಯೋಗಗಳನ್ನು ಕುರಿತಂತೆ ಅರ್ಥಗರ್ಭಿತವಾಗಿ ಹಾಡುತ್ತಾರೆ. ಇಂತಹ ಕಾಚ್ಚಾವಸ್ತು ಬಿದಿರಿನ ಉತ್ಪಾದನೆಯ ಸಮಸ್ಯೆಗಳು ಹೀಗಿವೆ.

ಅ) ನೈಸರ್ಗಿಕವಾಗಿ ಬೆಳೆಯುತ್ತದೆ:

ಬಿದಿರು ನೈಸರ್ಗಿಕವಾಗಿ ಕಾಡು, ಬೆಟ್ಟ-ಕಣಿವೆಯ ಪ್ರದೇಶಗಳಲ್ಲಿ ಮಾತ್ರಹೇರಳವಾಗಿ ಬೆಳೆಯುತ್ತದೆ. ಇದು ನೈಸರ್ಗಿಕವಾಗಿ ಬೆಳೆಯುವುದರಿಂದ ಇದರ ಮೇಲೆ ನಿಸರ್ಗದ ಸಂಪೂರ್ಣ ಹಿಡಿತ ಇರುತ್ತದೆ. ನಿಸರ್ಗದ ಅನುಕೂಲಕರ ವಾತಾವರಣದಿಂದ ಕೆಲವುಸಮಯ ಬಿದಿರು ಹೇರಳವಾಗಿ ಬೆಳೆಯುತ್ತದೆ. ಮಳೆ ಅಭಾವದಿಂದಾಗಿ ಇದರ ಬೆಳವಣಿಗೆ ಮತ್ತು ಪೂರೈಕೆಯಲ್ಲಿ ಕೊರತೆ ಉಂಟಾಗುತ್ತದೆ. ಕೆಲವೊಮ್ಮೆ ಹೇರಳವಾಗಿ ಬೆಳೆದ ಬಿದಿರು ಕಟಾವಿಗೆ

ಮುಂಚೆ ಬೆಂಕಿ, ಬಿರುಗಾಳಿ, ನೆರೆಹಾವಳಿಯಂತಹ ನಿಸರ್ಗದ ವಿಕೋಪಕ್ಕೆ ಬಲಿಯಾಗುತ್ತದೆ. ಕಾರಣ ಇದರ ಉತ್ಪಾದನೆ ಮತ್ತು ಪೂರೈಕೆಯನ್ನು ನಿಯಂತ್ರಿಸುವುದು ಕಷ್ಟಸಾಧ್ಯ. ಕರ್ನಾಟಕದಲ್ಲಿ ಸುಮಾರು 4 ಲಕ್ಷ ಹೆಕ್ಟೇರುಗಳ ವಿಸ್ತೀರ್ಣದಲ್ಲಿ ಬಿದಿರು ಬೆಳೆಯುತ್ತದೆ. ಇದರಿಂದ ವಾರ್ಷಿಕ ಉತ್ಪಾದನೆ 1 ಲಕ್ಷಟನ್ ಮಾತ್ರ. ಆದರೆ ಬೇಡಿಕೆ ಇರುವುದು 6,46,000 ಟನ್‌ಗಳು. 5,46,000 ಟನ್ ಬಿದಿರನ್ನು ಹೊರ ರಾಜ್ಯಗಳಿಂದ ತರಿಸಿಕೊಳ್ಳುತ್ತಾರೆ. ಇತ್ತೀಚಿಗೆ ಕರ್ನಾಟಕ ಸರಕಾರ ಅರಣ್ಯ ಇಲಾಖೆಯಿಂದ ಬಿದಿರಿನ ಬೆಳೆಯ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ನಿರ್ಮಿಸಿದೆ. ಪ್ರತಿ ವರ್ಷ ಬಿದಿರು ಅಭಿವೃದ್ಧಿಗೆ ಸರಕಾರ ಹಣ ಮೀಸಲಿರಿಸಿ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದೆ. ಬಿದಿರಿನ ಬೆಳೆಯನ್ನು ಪ್ರೋತ್ಸಾಹಿಸಲು, ಸಂಕೇಶ್ವರ ಮತ್ತು ಮಹಾರಾಷ್ಟ್ರಜಾತಿಯ ಬಿದಿರಿನತಳಿಗಳನ್ನು ಸಾವಂತ ಮಾಡಿ ಮೇಸಗಳನ್ನು ಬೆಳೆಸಲು ಯೋಜನೆಗಳನ್ನುರೂಪಿಸಿದೆ. ಹೊಸ ತಳಿಗಳ ಬಿದಿರಿನಸಸಿಗಳನ್ನು ತಯಾರಿಸಿ ರೈತರಿಗೆ ವಿತರಿಸಲಾಗುತ್ತಿದೆ.

ಆ) ವರ್ಷದ ಕೆಲವು ಋತುಮಾನಗಳಲ್ಲಿ ಮಾತ್ರ ಬೆಳೆಯುತ್ತದೆ :

ಬಿದಿರು ಪ್ರತಿವರ್ಷ ಮಳೆಗಾಲದಲ್ಲಿ ಮೊಳಕೆಗಳು ಹೊರಟು ಬೆಳೆಯುತ್ತದೆ. ಬಿದಿರಿನ ಮೆಳೆಗಳು ಚಿಕ್ಕವಿದ್ದಾಗ ಬಿದಿರನ್ನು ಕಟಾವು ಮಾಡುವುದಿಲ್ಲ. ಹಾಗೆ ಮಾಡಿದರೆ ಮೆಳೆಗಳು ನಾಶವಾಗುತ್ತವೆ. ಬಿದಿರನ್ನು ಅಕ್ಟೋಬರ್-ನವಂಬರ್ ತಿಂಗಳಿನಿಂದ ಕಟಾವು ಮಾಡುತ್ತಾರೆ. ಬಿದಿರಿನ ಉತ್ಪಾದನೆ ವರ್ಷದ ಕೆಲವು ಕಾಲದಲ್ಲಿ ಮಾತ್ರವಿದ್ದು ಇದರ ಬಳಕೆ ವರ್ಷವಿಡೀ ಇರುವುದು. ಹಾಗಾಗಿ ಇದರ ಉತ್ಪಾದನೆ, ಪೂರೈಕೆ ಮತ್ತು ಬೇಡಿಕೆಯನ್ನು ನಿಯಂತ್ರಿಸುವುದು ಸಾಧ್ಯವಾಗುವುದಿಲ್ಲ.

ಇ) ಅನಿಯಂತ್ರಿತ ಗುಣ ಮಟ್ಟ:

ಉತ್ಪಾದನೆಯ ಸಿದ್ಧಾಂತದ ಪ್ರಕಾರ ಉತ್ಪಾದಿತ ವಸ್ತುವಿನ ಗುಣಮಟ್ಟ ಅದರ ಉತ್ಪಾದನೆಯಲ್ಲಿ ಬಳಸಿದ ಕಚ್ಚಾ ವಸ್ತುವಿನ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಪ್ರತಿಯೊಬ್ಬ ಉತ್ಪಾದಕನು ತಾನು ತಯಾರಿಸುವ ವಸ್ತುವಿನ ಗುಣಮಟ್ಟವನ್ನು ತಾನು ಬಳಸುವ ಕಚ್ಚಾಪದಾರ್ಥದಿಂದ ನಿರ್ಧರಿಸುವನು. ಆದರೆ ಮೇದರು ಬಳಸುವ ಬೊಂಬು ಮತ್ತು ಬಿದಿರು ನೈಸರ್ಗಿಕವಾಗಿ ಬೆಳೆಯುವುದರಿಂದ ಇದರ ಬೆಳವಣಿಗೆಯ ಮೇಲೆ ಮಾನವ ತನ್ನ ನಿಯಂತ್ರಣವನ್ನು ಸಾಧಿಸಲಾರ. ವಾಯುಗುಣದಿಂದಾಗಿ ಇದರ ಗುಣಮಟ್ಟ ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿರುತ್ತದೆ. ನೈಸರ್ಗಿಕ ವಸ್ತುಗಳ ಗುಣಮಟ್ಟವನ್ನು ನಿಸರ್ಗವೇ ನಿಯಂತ್ರಿಸುತ್ತದೆ. ಇದರ ಮೇಲೆ ಮಾನವನ ನಿಯಂತ್ರಣ ಅಸಾಧ್ಯವಾಗಿರುತ್ತದೆ. ಇವರು ತಯಾರಿಸುವ ವಸ್ತುಗಳ ಗುಣಮಟ್ಟ ಬಿದಿರಿನ ಗುಣಮಟ್ಟವನ್ನೇ ಅವಲಂಬಿಸಿರುತ್ತದೆ. ಹಾಗಾಗಿ, ಮೇದರು ತಮ್ಮ ಕುಲಕಸುಬಿನ ವಸ್ತುಗಳಲ್ಲಿ ಏಕರೀತಿಯ ಗುಣಮಟ್ಟವನ್ನು ಸಾಧಿಸುವುದು ಸಾಧ್ಯವಿಲ್ಲ. ಇದರ ಪರಿಣಾಮವಾಗಿ ಇವರಿಗೆ ಬೆಲೆಯ ಮೇಲೆ ನಿಯಂತ್ರಣ ತಪ್ಪಿ ಲಾಭಾಂಶದ ಪ್ರಮಾಣ ಏರಿಳಿತಗಳಿಂದ ಕೂಡಿರುತ್ತದೆ.

ಈ) ಕಡಿಮೆಬಿದಿರು - ತಲಾ ವಿತರಣೆ:

ಕಾಡು, ಸರಕಾರದ ವಶವಾಗಿ ಕಾಡಿನ ಸಹಜ ಉತ್ಪನ್ನ ವಸ್ತುಗಳು ಸರಕಾರದ ಅಧೀನಕ್ಕೆ ಒಳಪಟ್ಟವು. ಅಂದಿನಿಂದ ಕಾಡಿನಲ್ಲಿ ಬೆಳೆಯುವ ಬಿದಿರನ್ನು ಸರಕಾರವು ಅರಣ್ಯಇಲಾಖೆಯ ಕಾನೂನಿನ ಪ್ರಕಾರ ಕಟಾವು ಮಾಡಿ ವಿತರಿಸುವುದು. ಅರಣ್ಯಇಲಾಖೆಯವರು, ಕಾನೂನಿನ ಪ್ರಕಾರ ಮೇದರಿಗೆ ಬೊಂಬು ಮತ್ತು ಬಿದಿರುಗಳನ್ನು ಅವರ ಸಂಘ ಸಂಸ್ಥೆಗಳಮೂಲಕ ರಿಯಾಯಿತಿದರದಲ್ಲಿ ವಿತರಿಸುವರು. ಪ್ರಸ್ತುತ ಇವರ ವಿತರಣೆಯ ಪ್ರಕಾರ ಒಂದು ಕುಟುಂಬಕ್ಕೆ ಒಂದು ತಿಂಗಳಿಗೆ 50 ಬೊಂಬು ಮತ್ತು ಬಿದಿರನ್ನು ಮಾತ್ರ ಪೂರೈಸುತ್ತಾರೆ. ಆದರೆ ಒಬ್ಬ ಕುಲಕಸುಬು ನಿರತ ಕೆಲಸಗಾರನಿಗೆ ಅವಶ್ಯಕತೆ ಇರುವುದು ಪ್ರತಿ ತಿಂಗಳಿಗೆ ಕನಿಷ್ಟಪಕ್ಷ 105 ಬೊಂಬು ಮತ್ತು ಬಿದಿರು ಬೇಕಾಗುತ್ತದೆ. ಇದರಿಂದ ಕಸುಬುನಿರತ ಕೆಲಸಗಾರರು ಖಾಸಗಿ ವ್ಯಕ್ತಿಗಳಿಂದ ಹೆಚ್ಚಿನ ಬೆಲೆಯನ್ನು ಕೊಟ್ಟು ಕೊಳ್ಳಬೇಕಾಗುತ್ತದೆ. ಪರಿಣಾಮ ಇವರ ಉತ್ಪಾದನಾ ವೆಚ್ಚ ಅಧಿಕವಾಗಿ ಲಾಭಾಂಶ ಕಡಿಮೆಯಾಗುವುದು. ಇದು ಇವರ ಆರ್ಥಿಕ ಜೀವನ ಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

ಉ) ಸಾಗಾಟದ ಅಧಿಕ ಸಾರಿಗೆಯ ವೆಚ್ಚ :

ಈ ಮೊದಲೇ ಹೇಳಿದಂತೆ ಬಿದಿರು ನಾಡಿನ ಕೆಲವು ಪ್ರದೇಶದಲ್ಲಿ ಮಾತ್ರ ಬೆಳೆಯುತ್ತದೆ. ಇದರ ಬಳಕೆ ನಾಡಿನಾದ್ಯಂತ ಇದೆ. ಉತ್ಪಾದನಾ ಸ್ಥಳದಿಂದ ಉಪಭೋಗದ (ಬಳಕೆ) ಸ್ಥಳಕ್ಕೆ ಬಿದಿರನ್ನು ಸಾಗಿಸುವಾಗ ಅಧಿಕವಾದ ಸಾರಿಗೆ ವೆಚ್ಚವನ್ನು ಭರಿಸ ಬೇಕಾಗಿದೆ. ಬಳ್ಳಾರಿ ಜಿಲ್ಲೆಯಂಥಹ ಬಯಲು ಸೀಮೆಯಲ್ಲಿ ಹೇರಳವಾಗಿ ಬಿದಿರು ಬೆಳೆಯುವುದಿಲ್ಲ. ಈ ಪ್ರದೇಶಕ್ಕೆ ಬಿದಿರನ್ನು ಹೊರ ಜಿಲ್ಲೆಗಳಿಂದಲೇ ತರುವುದು ಇಲ್ಲಿ ಅನಿವಾರ್ಯವಾಗಿದೆ. ಬಳ್ಳಾರಿಜಿಲ್ಲೆಯ ಮೇದರು ಬಿದಿರನ್ನು ಶಿವಮೊಗ್ಗ, ಭದ್ರಾವತಿ, ಸಾಗರ, ಯಲ್ಲಾಪುರ, ಸಿರಸಿ, ಮಹರಾಷ್ಟ್ರ ಮತ್ತು ಆಂಧ್ರಪ್ರದೇಶಗಳಿಂದ ತರುತ್ತಾರೆ. ಅಲ್ಲದೇ ಮಹಾರಾಷ್ಟ್ರದಿಂದ ಸಹ ಖಾಸಗಿ ವ್ಯಕ್ತಿಗಳಿಂದ ಇವರು ಹೆಚ್ಚಾಗಿ ಬಿದಿರು ತರಿಸುತ್ತಾರೆ. ಕರ್ನಾಟಕದಲ್ಲಿಯ ಬಿದಿರು ಗಟ್ಟಿಯಾಗಿರುತ್ತದೆ ಮತ್ತು ಬಾಳಿಕೆ ಬರುತ್ತದೆ. ಆದರೆ, ನಯವಾದಕೆಲಸಕ್ಕೆ ಬರುವುದಿಲ್ಲ ಎಂದು ಇವರು ಹೇಳುತ್ತಾರೆ. ಹೀಗಾಗಿ ಇವರು ಇಲ್ಲಿಂದ ಸುಮಾರು 300 ರಿಂದ 500 ಕಿಲೋ ಮೀಟರ್ ದೂರದಿಂದ ಬಿದಿರನ್ನು ತರುವಾಗ ಅಧಿಕವಾದ ಸಾರಿಗೆ ವೆಚ್ಚವನ್ನು ಭರಿಸಬೇಕಾಗುವುದು. ಇದಕ್ಕೆ ಸರಕಾರವು ಹೊರ ರಾಜ್ಯದಲ್ಲಿ ಬೆಳೆದ ಬಿದಿರನ್ನು ಕರ್ನಾಟಕದಲ್ಲಿ ಒಂದೊಂದು ವಿಭಾಗಗಳಲ್ಲಿ ವಿತರಿಸುವ ವ್ಯವಸ್ಥೆಯನ್ನು ಮಾಡುವುದು ಅಗತ್ಯವಾಗಿದೆ. ಜೊತೆಗೆ ಕಚ್ಚಾ ಬಿದಿರನ್ನು ಹೊರ ರಾಜ್ಯದಿಂದ ಸಾಗಿಸುವಾಗ ಅನೇಕ ಅಡೆತಡೆಗಳನ್ನು ಮತ್ತು ಕಾನೂನಿನ ಪಾಲನೆಯನ್ನು ಮಾಡಬೇಕಾಗುತ್ತದೆ. ಇದರಿಂದ ಕೆಲವೊಮ್ಮೆ ಇವರು ದಂಡ ಮತ್ತು ಕಾನೂನುಬಾಹಿರವಾಗಿ ಹಣ ಕೊಡುವುದು ಅನಿವಾರ್ಯ. ಇದಕ್ಕೆ ಪರಿಹಾರವಾಗಿ ಸರಕಾರ ಇದಕ್ಕೆ ಅನುಕೂಲಕರವಾದ ವ್ಯವಸ್ಥೆಯನ್ನು ಮಾಡುವುದು ಅವಶ್ಯವಿದೆ.

ಊ) ಕಚ್ಚಾ ಬಿದಿರಿನ ದಾಸ್ತಾನು ಸಮಸ್ಯೆ:

ಮೇದರು ಡಿಪೋಗಳಲ್ಲಿ ತಾವು ಖರೀದಿಸಿದ ಬೊಂಬು ಮತ್ತು ಬಿದಿರುಗಳನ್ನು ದಾಸ್ತಾನು ಮಾಡುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಏಕೆಂದರೆ ಇವರ ಡಿಪೋಗಳು ಹೆಚ್ಚಾಗಿ ಬಜಾರಗಳಲ್ಲಿ ಇರುತ್ತವೆ. ಬಜಾರಗಳಲ್ಲಿ ಅಂಗಡಿ ಮುಂಗಟ್ಟುಗಳ ಸ್ಥಳಾವಕಾಶ ಕಿರಿದಾಗಿರುತ್ತದೆ. ಉದ್ದಗಾತ್ರದ ಬೊಂಬು-ಬಿದಿರುಗಳನ್ನು ದಾಸ್ತಾನು ಉದ್ದೇಶದಿಂದ ತುಂಡರಿಸುವುದು ಸಾಧ್ಯವಿಲ್ಲ. ಇವರು ತಮ್ಮ ಕಚ್ಚಾ ಸಾಮಗ್ರಿಗಳನ್ನು ಡಿಪೋದ ಮುಂದೆಯೇ ದಾಸ್ತಾನು ಮಾಡುತ್ತಾರೆ. ಇದರಿಂದ ಇವರಿಗೆ ತೊಂದರೆಯಾಗುವುದು. ಜೊತೆಗೆ ಅಕ್ಕಪಕ್ಕದ ವ್ಯಾಪಾರಸ್ಥರಿಗೂ ತೊಂದರೆಯಾಗುವುದು. (ಒಂದನೇ ಛಾಯಾಚಿತ್ರವನ್ನು ನೋಡಿರಿ) ಕಾರಣ ಸರಕಾರವು ಇವರ ಕಚ್ಚಾ ಪದಾರ್ಥದ ದಾಸ್ತಾನು ಸಮಸ್ಯೆಯನ್ನು ನಿವಾರಿಸಲು ಪ್ರತ್ಯೇಕ ದಾಸ್ತಾನು ಗೋದಾಮುಗಳ ವ್ಯವಸ್ಥೆಮಾಡುವುದರ ಅವಶ್ಯಕತೆ ಇದೆ. ಮನೆಯಲ್ಲಿ ಕಸುಬು ನಿರತರಾದವರು ಸಹ ಈ ಸಮಸ್ಯೆಯನ್ನು ಎದುರಿಸುತ್ತಾರೆ. ಅನೇಕ ಕಸುಬುದಾರರು ಚಿಲ್ಲರೆಯಾಗಿ ಪ್ರತಿನಿತ್ಯ ಅವಶ್ಯವಿರುವಷ್ಟು ಬಿದಿರನ್ನು ಕೊಂಡು ಬಳಸುತ್ತಾರೆ.

ಋ) ಬಿದಿರು ಕಟಾವು ಮಾಡಿ ಮೇದರಿಗೆ ವಿತರಿಸುವಲ್ಲಿ ಸರಕಾರದ ಕಾನೂನು :

ಮೇದರ ಕುಲಕಸುಬಿಗೆ ಬೇಕಾದ ಬಿದಿರನ್ನು ಕಟಾವು ಮಾಡಿ ವಿತರಿಸುವುದರಲ್ಲಿ ಸರಕಾರದ ಕೆಲವು ಕಾನೂನುಗಳು ಬಹಳ ತೀಕ್ಷ್ಣವಾಗಿವೆ. ಅರಣ್ಯ ಕಾಯಿದೆಪ್ರಕಾರ ಮೇದರಿಗೆ ಬಿದಿರನ್ನು ಮೇದರ ಸಹಕಾರಿ ಸಂಘಗಳಮೂಲಕ ವಿತರಿಸಲು, ಮೊದಲು ಮೇದರ ಸಹಕಾರಿ ಸಂಘಗಳು ಸ್ಥಾಪನೆಯಾಗಬೇಕು. ಮೇದರ ಸಹಕಾರಿ ಸಂಘಗಳ ಸ್ಥಾಪನೆಗೆ ಕನಿಷ್ಟ ಮೇದರ ಕುಟುಂಬಗಳು ಅದರ ಸದಸ್ಯರಾಗಬೇಕಾಗಿದೆ. ಇಷ್ಟು ಸಂಖ್ಯೆಯಲ್ಲಿ ಮೇದರ ಕುಟುಂಬಗಳು ಒಂದೇ ಗ್ರಾಮದಲ್ಲಿ ವಾಸಿಸುವುದಿಲ್ಲ. ಹಾಗಾಗಿ ಸಹಕಾರಿ ಸಂಘಗಳ ಸ್ಥಾಪನೆಗೆ ತೊಂದರೆಯಾಗುತ್ತದೆ. ಸಂಘಟನೆಯ ಅಭಾವದಿಂದಾಗಿ ಸ್ಥಾಪನೆಯಾಗಿರುವ ಸಹಕಾರಿ ಸಂಘಗಳು ಸತತವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಕಾರಣ ಇವರು ಅನಿವಾರ್ಯವಾಗಿ ಬಿದಿರನ್ನು ಖಾಸಗಿ ಮಾರಾಟಗಾರರಿಂದ ಹೆಚ್ಚಿನ ಬೆಲೆಗೆ ಕೊಂಡು ಕೊಳ್ಳಬೇಕಾಗಿದೆ.

5.1.3.2 ಹಣಕಾಸು ಸಮಸ್ಯೆಗಳು (Problem of Finance):

ವಾಣಿಜ್ಯ ಮತ್ತು ಆರ್ಥಿಕ ತಜ್ಞರು ಹೇಳುವಹಾಗೆ ಪ್ರತಿಯೊಂದು ವಾಣಿಜ್ಯ ಮತ್ತು ಉದ್ದಿಮೆಯ ಮೂಲ ಧಾತು ಬಂಡವಾಳ. ಅವಶ್ಯವಾದಷ್ಟು ಬಂಡವಾಳವನ್ನು ಸೂಕ್ತಸಮಯದಲ್ಲಿ ತೊಡಗಿಸಬೇಕು. ಯಾವುದೇ ಉದ್ದಿಮೆ, ಬಂಡವಾಳದ ಕೊರತೆ ಮತ್ತು ಅಧಿಕ ಬಂಡವಾಳದ ಹೊರೆಯಿಂದ ರೋಗಗ್ರಸ್ತವಾಗಬಾರದು. ಉದ್ದಿಮೆಗೆ ಬಂಡವಾಳವು ಮಾನವನ ದೇಹದ ರಕ್ತವಿದ್ದಂತೆ. ಹೆಚ್ಚು ಕಡಿಮೆ ಆಗದಂತೆ ಸಮತೋಲನ ಪ್ರಮಾಣದಲ್ಲಿ ಬಂಡವಾಳದ ಹೂಡಿಕೆಯಾಗಿರಬೇಕು. ಗೃಹಕೈಗಾರಿಕೆಗಳನ್ನು ಮತ್ತು ಸಣ್ಣಕೈಗಾರಿಕೆಗಳನ್ನು ನಡೆಸುವುದಕ್ಕೆ ಕನಿಷ್ಠ ಬಂಡವಾಳದ ಅವಶ್ಯಕತೆ ಇರುತ್ತದೆ. ಈ ಕಸುಬಿನಲ್ಲಿ ತೊಡಗಿರುವ ಅನೇಕ ಕೆಲಸಗಾರರಿಗೆ ಕನಿಷ್ಠ ಹಣಕಾಸಿನ ಸಮಸ್ಯೆ

ಇರುತ್ತದೆ. ಈ ಸಮಸ್ಯೆಯನ್ನು ನಿವಾರಿಸಲು ಅವರು ಸ್ವಂತ ಬಂಡವಾಳ ಇಲ್ಲವೇ ಖಾಸಗಿ ವ್ಯಕ್ತಿಯಿಂದ ಅಥವಾ ಸರಕಾರದ ಯೋಜನೆಗಳ ಉಪಯೋಗ ಪಡೆದು ಹಣಕಾಸಿನ ಕೊರತೆಯನ್ನು ನೀಗಿಸಿಕೊಳ್ಳುತ್ತಾರೆ. ಕುಲಕಸುಬು ನಿರತ ಮೇದರಿಗೆ ಎರಡು ವಿಧದಲ್ಲಿ ಬಂಡವಾಳ ಬೇಕಾಗುತ್ತದೆ. ಅಂದರೆ, ಡಿಪೋ ನಡೆಸುವವರಿಗೆ ಅಧಿಕ ಬಂಡವಾಳ ಬೇಕಾದರೆ ಕುಲಕಸುಬಿನಲ್ಲಿ ನಿರತರಾದವರಿಗೆ ಕಡಿಮೆ ಬಂಡವಾಳ ಬೇಕಾಗುತ್ತದೆ. ಇವರ ಹಣಕಾಸಿನ ಸಮಸ್ಯೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಿ ನೋಡಲಾಗಿದೆ.

5.1.3.2.ಅ) ಸಾಲ ಸೌಲಭ್ಯದ ಮಾಹಿತಿ ಕೊರತೆ:

1951ರಲ್ಲಿ ಕೇಂದ್ರಸರಕಾರದ ಆರ್ಥಿಕ ಯೋಜನೆಯ ಪ್ರಕಾರ ಸಣ್ಣ ಮತ್ತು ಗೃಹ ಕೈಗಾರಿಕೆಗಳ ಸಮಸ್ಯೆಗಳನ್ನು ಬಗೆಹರಿಸಲು ಹಲವು ಕ್ರಮಗಳನ್ನು ಕೈಗೊಂಡಿತು. ಅವುಗಳಲ್ಲಿ ಹಣಕಾಸಿನ ಸಹಾಯ (Financial Help) ಕೂಡ ಒಂದಾಗಿದೆ. ಈ ಯೋಜನೆಯ ಪ್ರಕಾರ ಸರಕಾರವು ಈ ಕ್ರಮಗಳನ್ನು ಕೈಗೊಂಡಿತು.

ಅ-1) ದಿ ಸ್ಟೇಟ್ ಏಡ್ ಟು ಇಂಡಸ್ಟ್ರೀಜ ಆ್ಯಕ್ಟ (The State Aid to Industries act)

ಅ-2) ರಾಜ್ಯದ ಹಣಕಾಸಿನ ನಿಗಮಗಳು (State Financial Corporations)

ಅ-3) ಸ್ಟೇಟ್ ಬ್ಯಾಂಕ್ಆಫ್ ಇಂಡಿಯಾ (State Bank of India)

ಅ-4) ವಾಣಿಜ್ಯ ಬ್ಯಾಂಕ್ (Commercial Bank)

ಅ-5) ಸಾಲ ಹಣದ ಭದ್ರತೆಯ ಯೋಜನೆ (Credit Guarantee Scheme)

ಅ-6) ಸಹಕಾರಿ ಸಂಘಗಳ ಸ್ಥಾಪನೆ (Industrial Co-operatives)

ಅ-7) ರಾಷ್ಟ್ರೀಯ ಸಣ್ಣ ಕೈಗಾರಿಕಾ ಸಂಸ್ಥೆ (National Small Industries Corporation)

ಅ-8) ಭಾರತೀಯ ಚಿಕ್ಕ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ (Small Industries Development Bank of India)

ಅ-9) ಚಿಕ್ಕ ಕೈಗಾರಿಕೆಗಳ ಅಭಿವೃದ್ಧಿ ನಿಧಿ (Small Industries Development fund)

ಅ-10) ರಾಷ್ಟ್ರೀಯ ಇಕ್ವಿಟಿ ನಿಧಿ (National Equity Fund)

ಅ-11) ಏಕ ಗವಾಕ್ಷಿ ಯೋಜನೆ. (Single Window Scheme)

ಅ-13) ಷೇರು ಬಂಡವಾಳದಲ್ಲಿ ಭಾಗವಹಿಸುವಿಕೆ (Equity Participation)

ಮೇಲೆ ತಿಳಿಸಲಾದ ಅನುಕೂಲ ಕ್ರಮಗಳ ಮಾಹಿತಿ ಈ ಸಮುದಾಯದ ಕುಲಕಸುಬುದಾರರಿಗೆ ತಿಳಿದಿಲ್ಲವೆಂದು ಇವರು ಹೇಳುತ್ತಾರೆ. ಕಾರಣ ಇವರಿಗೆ ಹಣಕಾಸು ಸೌಲಭ್ಯಗಳ ಕುರಿತಂತೆ ಮಾಹಿತಿಯನ್ನು ಒದಗಿಸುವ ಯೋಜನೆಗಳ ಅವಶ್ಯಕತೆ ಇದೆ. ಇದಕ್ಕಾಗಿ ಇವರಿಗೆ ಮಾಹಿತಿ ಒದಗಿಸುವ ಪ್ರಾದೇಶಿಕ ಕಾರ್ಯಾಗಾರಗಳನ್ನು ನಡೆಸಬೇಕಾಗಿದೆ.

5.1.3.2.ಆ) ಸಮುದಾಯದವರಿಗೆ ಮೀಸಲಿರುವ ವಿಶೇಷ ಸಾಲ ಯೋಜನೆಗಳ ಕೊರತೆ:

ಸರಕಾರ ಕೈಗೊಂಡಿರುವ ಹಣಕಾಸು ಸೌಲಭ್ಯಗಳು ಸಮಗ್ರ ಸಣ್ಣ ಕೈಗಾರಿಕೆ ಮತ್ತು ಗೃಹ ಕೈಗಾರಿಕೆಗಳಿಗೆ ಅನ್ವಯಿಸುತ್ತವೆ. ಆದರೆ ಮೇದರಿಗಾಗಿ ವಿಶೇಷವಾಗಿ ಮೀಸಲಿರುವ ಹಣಕಾಸು ಸೌಲಭ್ಯಗಳ ಕೊರತೆ ಕಂಡು ಬರುತ್ತದೆ. ಕುಲಕಸುಬು ದಾರರಿಗೆ ಬೇಕಾದ 500-1000 ರೂಪಾಯಿಗಳವರೆಗಿನ ತಾತ್ಕಾಲಿಕ ಅಲ್ಪಾವಧಿಯ ಸಾಲದ ಯೋಜನೆ ಈ ಸಮುದಾಯದವರಿಗೆ ಅವಶ್ಯವಾಗಿದೆ. ಏಕೆಂದರೆ ಇವರಿಗೆ ದಿನಬಳಕೆಗೆ ಬೇಕಾದ ಬಿದಿರು ಮತ್ತು ಬೊಂಬು ಕೊಂಡು ಕೊಳ್ಳಲು ಪ್ರತಿಯೊಬ್ಬ ಕಸುಬುದಾರರಿಗೆ ಇಷ್ಟು ಹಣ ಅವಶ್ಯ. ಕಾರಣ ಇಂತಹ ಸಾಲದ ಯೋಜನೆಗಳು ಇವರಿಗೆ ಸಹಕಾರಿಯಾಗ ಬಲ್ಲವೆಂದು ಇವರು ಹೇಳುವರು. ಯಾರಾದರು ಸಾಲ ಕೇಳಲು ಬ್ಯಾಂಕಿಗೆ ಹೋದರೆ, 5000-10000 ಮೇಲ್ಪಟ್ಟು ಸಾಲ ಕೊಡುವುದಾಗಿ ಅಧಿಕಾರಿಗಳು ಹೇಳುವರು, ನಮಗೆ ಅಷ್ಟು ದುಡ್ಡಿನ ಆವಶ್ಯಕತೆ ಬೀಳುವುದಿಲ್ಲ ಎಂದು ಇವರು ಹೇಳುತ್ತಾರೆ. ಕಾರಣ ಇವರಿಗೆ ಹಣಕಾಸು ಸೌಲಭ್ಯಗಳ ಕುರಿತು ಸಂಪೂರ್ಣ ಮಾಹಿತಿ ಅವಶ್ಯಕತೆ ಇದೆ ಎಂದು ತಿಳಿದುಬರುತ್ತದೆ, ಮತ್ತು ಅವಶ್ಯಕತೆಗೆ ತಕ್ಕದಾದಷ್ಟು ಹಣವನ್ನು ಸಾಲದ ರೂಪದಲ್ಲಿ ಒದಗಿಸುವ ಯೋಜನೆಗಳು ಜಾರಿಗೆ ಬರಬೇಕಾಗಿದೆ.

5.1.3.2.ಇ) ಸಾಲ ಪಡೆಯುವಲ್ಲಿ ಪಾಲಿಸಬೇಕಾದ ವಿಶೇಷ ನಿಯಮಾವಳಿಗಳು:

ಸಣ್ಣ ಕೈಗಾರಿಕೆ ಮತ್ತು ಗೃಹ ಕೈಗಾರಿಕೆಗಳಿಗೆ ಮೀಸಲಿರುವ ಸಾಲಗಳ ಉಪಯೋಗವನ್ನು ಏಕೆ ಪಡೆಯುವುದಿಲ್ಲ ಎಂದು ಇವರನ್ನು ಕೇಳಿದರೆ, ಸಾಲ ಪಡೆಯಲು ಅನುಸರಿಸ ಬೇಕಾದ ವಿಶೇಷ ನಿಯಮಾವಳಿಗಳ ಬಗ್ಗೆ ಈ ಸಮುದಾಯದವರು ಬೇಸತ್ತು ಕೊಂಡಿದ್ದಾರೆ. ಕಾರಣ ಇವರಿಗಾಗಿ ಮೀಸಲಾದ ಸಾಲದ ಯೋಜನೆಗಳು ಸುಲಭ ರೀತಿಯಲ್ಲಿ ಸಾಲ ಮುಂಜೂರು ಮಾಡುವ ನಿಯಮಾವಳಿಗಳಿಂದ ಕೂಡಿರಬೇಕೆಂದು ಇಲ್ಲಿ ಹೇಳಬೇಕಾಗುವುದು.

5.1.3.2.ಈ) ಸಾಲ ಪಡೆಯಲು ಕಸುಬುದಾರರು ಮುಂದೆ ಬಾರದಿರುವುದು:

ನನ್ನ ಕ್ಷೇತ್ರ ಕಾರ್ಯದಲ್ಲಿ ಮಾಹಿತಿಯನ್ನು ಸಂಗ್ರಹಿಸುವಾಗ ಪ್ರತಿಯೊಬ್ಬ ಕೆಲಸಗಾರರನ್ನು ಸಹ ನೀವು ಸಾಲ ಪಡೆದಿದ್ದೀರಾ ಎಂದು ಕೇಳಿದೆವು. ಅವರಿಂದ ಬಂದ ಸಾಮಾನ್ಯವಾದ ಉತ್ತರ ಇಲ್ಲ. ಏಕೆಂದು ಪ್ರಶ್ನಿಸಿದರೆ, ನಮಗೆ ಸಾಲ ಬೇಕಾಗಿಲ್ಲ . ದಿನ ಬಳಕೆಗೆ ಬೇಕಾಗುವ 1-2-3 ಬಿದಿರುಗಳನ್ನು ಇಲ್ಲೇ ಡಿಪೋದಲ್ಲಿ ಉದ್ರಿ ತರುತ್ತೇವೆ, ಮತ್ತೆ ಸಾಮಾನು ತಯಾರಿಸಿ ಮಾರಿ ಅವರಿಗೆ ಮುಟ್ಟಿಸುತ್ತೇವೆಂದು ಹೇಳುತ್ತಾರೆ. ಇದರಿಂದ ಇವರು ಸಾಲಪಡೆಯಲು ಮುಂದೆ ಬರುವುದಿಲ್ಲ. ಸಾಲ ಯೋಜನೆಗಳ ಬಗ್ಗೆ ಇವರಿಗಿರುವ ಭಯ ಮತ್ತು ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಬೇಕು.

5.1.3.3 ಉತ್ಪಾದನೆಯ ವಸ್ತುಗಳ ಯೋಜನೆಯ ಸಮಸ್ಯೆ (Problem of Product Planning):

ಯೋಜನೆ ಎಂದರೆ ಭವಿಷ್ಯವನ್ನು ಕುರಿತಾಗಿ ಪ್ರಸ್ತುತದಲ್ಲಿ ಯೋಜಿಸುವಿಕೆ (ತೀರ್ಮಾನ ತೆಗೆದು ಕೊಳ್ಳುವುದು) ಎಂದು ಅರ್ಥವಾಗುತ್ತದೆ. ಯಾವುದೇ ಉತ್ಪಾದಕನು ತಾನು ತಯಾರಿಸಿ ಮಾರಾಟಮಾಡುವ ವಸ್ತುವಿನ ಸಂಪೂರ್ಣ

ಜ್ಞಾನವನ್ನು ಪಡೆದಿರಬೇಕು. ಅಂದರೆ ಮಾತ್ರ ತಾನು ತಯಾರಿಸಿದ ವಸ್ತು ಗ್ರಾಹಕರ ಬಯಕೆ-ಬೇಡಿಕೆಗಳನ್ನು ತೃಪ್ತಿ ಪಡಿಸುವ ಜನಪ್ರಿಯ ವಸ್ತುಗಳಾಗುತ್ತವೆ. ಮತ್ತು ಮಾರುಕಟ್ಟೆಯಲ್ಲಿ ವಿಫಲವಾಗದಂತೆ ಎಂತಹ ಪೈಪೋಟಿಯನ್ನಾದರೂ ಎದುರಿಸಿ ನಿಲ್ಲುತ್ತವೆ. ಫಿಲಿಫ್ ಕಾಟ್ಲರ್ ಅವರು ಹೇಳುವಂತೆ In developing a product, the product planner needs to think about the product on three levels.i.e. Core, Tangible, and Augmented product [3]. ಅಂದರೆ ಉತ್ಪಾದಕ ತನ್ನ ವಸ್ತು ವಿಕಸನ ಅಥವಾ ಅಭಿವೃದ್ಧಿ ಪಡಿಸುವಲ್ಲಿ ಮೂರು ಹಂತಗಳನ್ನು ಗಮನಿಸಬೇಕು. ಅವುಗಳೆಂದರೆ, ವಸ್ತುವಿನ ಹೃದಯ ಅಥವಾ ಗರ್ಭಾವಸ್ಥೆ ಅಥವಾ ಭ್ರೂಣಹಂತ, ಮುಟ್ಟಿ ತಿಳಿಯಬಹುದಾದ ನಿಷ್ಕೃಷ್ಟಹಂತ ಮತ್ತು ವರ್ಧನ ಅಥವಾ ಅಭಿವೃದ್ಧಿಪಡಿಸುವ ಹಂತ. ಮೊದಲನೆ ಹಂತದಲ್ಲಿ ಗ್ರಾಹಕರು ಏನನ್ನು ಕೊಳ್ಳಬಯಸುತ್ತಾರೆ ಎನ್ನುವುದನ್ನು ತಿಳಿಯಬೇಕಾಗಿದೆ. ಎರಡನೆಯ ಹಂತದಲ್ಲಿ ವಸ್ತುವಿನ ಗುಣಮಟ್ಟ, ವಿನ್ಯಾಸ, ಬಾಹ್ಯ ಸ್ವರೂಪ, ಮುದ್ರೆ ಮತ್ತು ಮೂಟೆ ಕಟ್ಟುವುದರ ತಂತ್ರಜ್ಞಾನವನ್ನು ತಿಳಿಯುವುದು. ಮೂರನೆಯ ಹಂತವು ಮಾರಾಟದ ನಂತರದ ಸೇವೆಗಳನ್ನೊಳಗೊಂಡಿರುತ್ತದೆ. ಈ ಮೂರು ಹಂತಗಳ ಪರಿಕಲ್ಪನೆಯನ್ನು ಮೇದರಂತಹ ಬುಡಕಟ್ಟು ಸಮುದಾಯಗಳು ತಮ್ಮ ಕುಲಕಸುಬಿನಿಂದ ತಯಾರಿಸುವ ವಸ್ತುಗಳಲ್ಲಿ ಅಳವಡಿಸಲು ಸಾಧ್ಯವೇ ಎನ್ನುವುದು ಪ್ರಶ್ನೆಯಾದರೆ. ಈ ಕೌಶಲ್ಯವನ್ನು ಮೇದರು ತಮ್ಮ ವಂಶವಾಹಿನಿಯ ಜೊತೆಗೆ ಪಾರಂಪರಿಕವಾಗಿ ಅವ್ಯಕ್ತವಾಗಿ ಅರಿತು ಅಳವಡಿಸುತ್ತಾರೆ.ಇವುಗಳನ್ನು ಸಂಕ್ಷಿಪ್ತವಾಗಿ ಹೀಗೆ ವಿಶ್ಲೇಷಿಸ ಬಹುದು.

- ವಸ್ತುವಿನ ಭ್ರೂಣ ಹಂತ (core product) : ಈ ಹಂತದಲ್ಲಿ ಮೇದರು, ಗ್ರಾಹಕರು ಏನನ್ನು ಕೊಳ್ಳ ಬಯಸುತ್ತಾರೆ ಎನ್ನುವುದನ್ನು, ಋತುಮಾನ, ಪ್ರದೇಶ, ಸಂದರ್ಭವನ್ನು ಅರಿತುಕೊಂಡು ವಸ್ತುಗಳನ್ನು ತಯಾರಿಸುತ್ತಾರೆ. ಬಳಕೆದಾರನ ಬಳಕೆಯ ಮೂಲ ಉದ್ದೇಶ ಮತ್ತು ಸಾಮರ್ಥ್ಯವನ್ನು ಅರಿತಿರುತ್ತಾರೆ. ಅದಕ್ಕೆ ತಕ್ಕಂತೆ ವಸ್ತುವಿನ ಉತ್ಪಾದನೆಯ ಯೋಜನೆಯನ್ನು ರೂಪಿಸಿಕೊಂಡು ಅವಶ್ಯ ವಸ್ತುಗಳನ್ನು ತಯಾರಿಸುವರು.

- ನಿಷ್ಕೃಷ್ಟ ಹಂತ (Tangible product) : ಮೇದರು ತಾವು ತಯಾರಿಸುವ ವಸ್ತುಗಳ ಗ್ರಾಹಕರ ಪ್ರಾದೇಶಿಕ ಮಹತ್ವವನ್ನು ಅರಿತಿರುತ್ತಾರೆ. ಏಕೆಂದರೆ ಇವರು ತಯಾರಿಸುವ ಎಲ್ಲಾ ವಸ್ತುಗಳನ್ನು ಎಲ್ಲಾ ಪ್ರದೇಶದಲ್ಲಿ ಎಲ್ಲಾ ಕಾಲದಲ್ಲಿ ಗ್ರಾಹಕರು ಕೊಳ್ಳಬಯಸುವುದಿಲ್ಲ. ಇವರು ನಿತ್ಯ ತಯಾರಿಸುವ ಮೊರವನ್ನು ಉದಾಹರಣೆಯಾಗಿ ತೆಗೆದುಕೊಂಡರೆ, ಇವರು ಸುಗ್ಗಿಯಕಾಲಕ್ಕೆ ತಯಾರಿಸುವ ತೂರುವ ಮೊರ, ಶ್ರಾವಣಮಾಸದಲ್ಲಿ ತಯಾರಿಸುವ ಬಾಗಣದ ಮೊರ, ದುಷ್ಟದೇವತೆಗಳನ್ನು ಕಳುಹಿಸುವ ಸಂದರ್ಭದಲ್ಲಿ ತಯಾರಿಸುವ ದೇವರ ಮೊರ, ಮದುವೆ ಹಾಗೂ ದಿನನಿತ್ಯ ಬಳಸುವ ಗೃಹ ಬಳಕೆಯ ಮೊರದ ತಯಾರಿಕೆಯ ಪರಿಕಲ್ಪನೆ ಇವರಲ್ಲಿ ಪಾರಂಪರಿಕವಾಗಿ ಮೈಗೂಡಿಕೊಂಡು ಬಂದಿರುತ್ತದೆ. ಇವುಗಳಗುಣಮಟ್ಟ, ವಿನ್ಯಾಸ, ಬಾಹ್ಯ ಸ್ವರೂಪದ ಬಗ್ಗೆ ಇವರು ತಮ್ಮದೇ ಆದ ಪೂರ್ವ

ಯೋಜನೆಯನ್ನು ರೂಪಿಸಿಕೊಳ್ಳುವರು. ವಸ್ತುಗಳ ತಯಾರಿಕೆಯಲ್ಲಿ ನಿಷ್ಕೃಷ್ಟ ಹಂತವನ್ನು ಸಮರ್ಥವಾಗಿ ಇವರು ನಿಭಾಯಿಸುವುದು ಕಂಡುಬರುತ್ತದೆ.

– ವರ್ಧನ ಹಂತ (Augment product.) : ಈ ಹಂತದಲ್ಲಿ ಮೇದರು ತಾವು ಮಾರಾಟ ಮಾಡಿದ ವಸ್ತುಗಳ ಮಾರಾಟದ ನಂತರದ ಸೇವೆಗಳನ್ನು ಸಹ ಗ್ರಾಹಕರಿಗೆ ಸಲ್ಲಿಸುತ್ತಾರೆ. ಇವರು ಗ್ರಾಹಕನು ರೋಕವಾಗಿ ಕೊಂಡು ಕೊಂಡ ಮೊರ, ಚಾಪೆ, ಬುಟ್ಟಿ ಮುಂತಾದವುಗಳನ್ನು ಜಾಗರೂಕತೆಯಿಂದ ಹೊಂದಿಸಿ ದಾರ ಅಥವಾ ಬದಿರಿನ ಓಳು ಮತ್ತು ಬಾಕಗಳಿಂದ ಬಿಗಿದು ಅವುಗಳ ಬಾಹ್ಯ ಆಕೃತಿಗೆ ಧಕ್ಕೆ ಬಾರದಂತೆ ಮೂಟೆಯನ್ನು ಕಟ್ಟಿ ಕೊಡುತ್ತಾರೆ.

ಇಲ್ಲಿ ಇವರು ಆಧುನಿಕ ಮಾರಾಟಗಾರನು ಮಾಡುವ ಸಂವೇಷ್ಟಿಸುವಿಕೆ (Packaging) ಕಾರ್ಯ ಮತ್ತು ಸೇವೆಯನ್ನು ಗ್ರಾಹಕರಿಗೆ ಒದಗಿಸುವುದು ಸಹಜ. ಇವರು ಒದಗಿಸುವ ಮಾರಾಟದ ಸಂದರ್ಭದ ಸೇವೆಗಳು ಮತ್ತು ಮಾರಾಟದ ನಂತರದ ಸೇವೆಗಳು ವಿಶೇಷ ಮತ್ತು ವಿಶಿಷ್ಟವಾಗಿರುತ್ತವೆ. ಕೆಲವು ಸಮಯ ತಾತ್ಕಾಲಿಕ ಬದಿರಿನ ಗುಡಿಸಲುಗಳನ್ನು ನಿರ್ಮಿಸಿ ಕೊಡುವ ಸಂದರ್ಭದಲ್ಲಿ ತಾನೇ ಖುದ್ದಾಗಿ ಸ್ಥಳಕ್ಕೆ ಹೋಗಿ ಗುಡಿಸಲನ್ನು ನಿರ್ಮಿಸುವನು (Instalation). ಡಿಪೋದಲ್ಲಿ ಮಾರಾಟ ಮಾಡಿದ ಕಡಪಾ, ಹಂಚು, ಪಾಲಿಷ್ ಮಾಡಿದ ಬಂಡೆಗಳನ್ನು ಗ್ರಾಹಕನ ಮನೆಬಾಗಿಲಿಗೆ ತಲುಪಿಸುವ ಮತ್ತು ಉದ್ರಿ ಮಾರಾಟದ ಸೇವೆಯನ್ನು ಸಹ (Delivery and Credit Service) ನೀಡುತ್ತಾರೆ.

ಅನೇಕ ಧಾರ್ಮಿಕಕಾರ್ಯ ಮತ್ತು ದೇವರ ಉತ್ಸವಗಳಲ್ಲಿ ಇವರು ನಿರ್ಮಿಸುವ ಬೀದಿಯ ಕಮಾನು, ಹಂದರ, ಮಹಾದ್ವಾರ, ತಯಾರಿಸುವ ಉತ್ಸವದ ಮಂಟಪ ಇವೆಲ್ಲ, ಸಮಾಜದ ಜಾತಿ ಮತ್ತು ವರ್ಗಾಧಾರಿತ ಕಸುಬುಗಳಾಗಿವೆ. ಮೇದರು ತಾವು ಮಾಡುವ ಕಾರ್ಯದಬಗ್ಗೆ ಕೀಳುಭಾವನೆಯನ್ನು ತಾಳುವುದಿಲ್ಲ. ಮೇದರಿಗೆ ಇವೆಲ್ಲವುಗಳ ಆಧುನಿಕ ಮಜಲು ಮತ್ತು ತಂತ್ರದ ಕಲ್ಪನೆ ಇಲ್ಲದೇ ತಾನು ನಿರ್ವಹಿಸುತ್ತಿರುವುದು ಇದೊಂದು ಸೇವೆ ಎನ್ನುವ ಸಾಮಾಜಿಕ ಸೇವಾ ಮನೋ ಭಾವದಿಂದ ಈ ಕಾರ್ಯದಲ್ಲಿ ನಿರತನಾಗಿರುತ್ತಾನೆ. ಮೇದರ ವಾಣಿಜ್ಯದಲ್ಲಿ ಕಾಣಬಹುದಾದ ವ್ಯಾಪಾರ ಮತ್ತು ವಾಣಿಜ್ಯ ಸೇವೆಯ ನೈತಿಕ ಮೌಲ್ಯ (Business Ethics) ಇದಾಗಿರುತ್ತದೆ. ಆಧುನಿಕ ವಾಣಿಜ್ಯ ರಂಗದಲ್ಲಿ ವಾಣಿಜ್ಯ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ. ಪ್ರತಿಯೊಬ್ಬ ಉತ್ಪಾದಕನು ತಾನು ತಯಾರಿಸಿದ ವಸ್ತುವಿನ ಮಾರುಕಟ್ಟೆಯ ಆಕ್ರಮಣದ ಬಗ್ಗೆ ಮಾತ್ರ ಯೋಚಿಸುತ್ತಾನೆ. ಆದರೆ ಅದರಿಂದ ಸಮಾಜ ಮತ್ತು ಮಾನವನ ಜೀವನದ ಮೇಲೆ ಎಂತಹ ಪರಿಣಾಮಗಳು ಬೀರುತ್ತವೆ ಎನ್ನುವ ನೈತಿಕ ಯೋಚನೆಯನ್ನು ಮಾಡುವುದಿಲ್ಲ. ಮೇದರಂತಹ ಬುಡಕಟ್ಟು ಕುಲಕಸುಬು ದಾರರು ಇವುಗಳ ಜೊತೆಗೆ ವಸ್ತುವಿನ ಯೋಜನೆಯಲ್ಲಿ ಪ್ರಮುಖವಾದ ನಾಲ್ಕು ಅಂಶಗಳನ್ನು ಗಮನಿಸಬೇಕಾಗಿದೆ. ಅವುಗಳೆಂದರೆ, ಬೇಡಿಕೆಯ ಯೋಜನಾ ಸಮಸ್ಯೆ, ವಸ್ತುಗಳ ವಿಂಗಡಣೆ ಮತ್ತು ಶ್ರೇಣಿಕರಣದ

ಸಮಸ್ಯೆ, ಬೆಲೆ ನಿರ್ಧರಿಸುವ ಸಮಸ್ಯೆ ಮತ್ತು ಗ್ರಾಹಕರ ಸಮಸ್ಯೆ. ಇವುಗಳನ್ನು ಮಾರಾಟದ ಸಮಸ್ಯೆಗಳಲ್ಲಿ ಪ್ರತ್ಯೇಕವಾಗಿ ನೋಡಲಾಗಿದೆ.

5.2 ತಯಾರಿಸಿದ ವಸ್ತುಗಳ ಮಾರಾಟಪ್ರಕ್ರಿಯೆ (Marketing of Manufactured Products):

ಉತ್ಪಾದಿಸಿದ ಯಾವುದೇ ವಸ್ತುಗಳು ಅದರ ಭೌತಿಕ ಮತ್ತು ರಸಾಯನಿಕ ಆಕಾರದ ವಿನಾಶಕ್ಕೆ ಮುಂಚೆ ಗ್ರಾಹಕರನ್ನು ತಲುಪಿ ಉಪಭೋಗಕ್ಕೆ ಒಳಪಡಬೇಕು. ಹಾಗಾದರೆ ಮಾತ್ರ ಉತ್ಪಾದನೆಯ ಕಾರ್ಯ ಸಫಲವಾದಂತೆ. ವಿವಿಧ ಪ್ರದೇಶಗಳಲ್ಲಿ ವಿಸ್ತ್ರುತವಾಗಿ ಹರಡಿರುವ ಅನುಭೋಗಿಗಳಿಗೆ ಅವರ ಅವಶ್ಯಕತೆ ಮತ್ತು ಅಪೇಕ್ಷೆಗೆತಕ್ಕಂತೆ ಉತ್ಪಾದಕರ ಸರಕುಗಳ ಒಡೆತನವನ್ನು ವರ್ಗಾಯಿಸುವ ಮತ್ತು ಹೊಂದಾಣಿಸುವುದೇ ಮಾರಾಟ ಪ್ರಕ್ರಿಯೆಯಾಗಿದೆ. ಪ್ರೊ.ಕೆ.ಡಿ. ಬಸವಾ ಅವರು ಹೇಳುವಹಾಗೆ, "ಉತ್ಪಾದಕರಿಂದ ಬಳಕೆದಾರರಿಗೆ ಅಥವಾ ಅನುಭೋಗಿಗಳಿಗೆ ಸರಕು-ಸೇವೆಗಳ ಪರಿಚಲನೆಯನ್ನು ನಿಯಂತ್ರಿಸುವ ವ್ಯವಹಾರಿ ಚಟುವಟಿಕೆಗಳ ನಿರ್ವಹಣೆಯೇ ಮಾರಾಟ ಪ್ರಕ್ರಿಯೆಯಾಗಿದೆ ".[4] ಈ ರೀತಿಯಾದ ಮಾರಾಟ ಪ್ರಕ್ರಿಯೆಯ ಚಟುವಟಿಗಕೆಗಳು ಒಂದು ಕಡೆ ಮಾರಾಟ ಪ್ರಕ್ರಿಯೆಯು ಸರಕು-ಸೇವೆಗಳು ಮತ್ತು ಮಾರುಕಟ್ಟೆಯ ಒತ್ತಡಗಳು, ಇನ್ನೊಂದು ಕಡೆ ಇವುಗಳ ಒಡೆತನದ ವರ್ಗಾವಣೆಯ ಜೊತೆಗೆ ಅನುಭೋಗಿಗಳ ನಡುವೆ ಆಂತರಿಕ ಸಂಬಂಧಗಳು ಇರುತ್ತವೆ . ಈ ಎರಡೂ ಗುಂಪುಗಳ ಮೇಲೆ ಪ್ರತ್ಯಕ್ಷವಾಗಿಯೂ ಮತ್ತು ಪರೋಕ್ಷವಾಗಿಯೂ ಅನೇಕ ಪರಿಣಾಮವನ್ನುಂಟು ಮಾಡುತ್ತವೆ. ಇಂತಹ ಬಾಹ್ಯ ಮತ್ತು ಆಂತರಿಕ ಅಂಶಗಳೇ ಮಾರಾಟದ ಪ್ರಕ್ರಿಯೆಯ ಪರಿಸರವಾಗಿದೆ.

5.2.1 ಮಾರಾಟದ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳು :

ಮಾರಾಟ ಪ್ರಕ್ರಿಯೆಯು ಅನೇಕ ಹಂತಗಳಲ್ಲಿ ಬದಲಾವಣೆಗೊಳಗಾಗಿರುವುದು ಕಂಡು ಬರುತ್ತದೆ. ಉತ್ಪಾದನಾ ಪ್ರಾಧಾನ್ಯ ಹಂತ, ವಸ್ತು ಪ್ರಾಧಾನ್ಯ ಹಂತ, ಮಾರಾಟದ ಪ್ರಾಧಾನ್ಯ ಹಂತ,ಗ್ರಾಹಕ ಪ್ರಾಧಾನ್ಯ ಹಂತ, ನಿರ್ವಹಣಾ ಪ್ರಾಧಾನ್ಯಹಂತ ಮತ್ತು ಸಾಮಾಜಿಕ ಪ್ರಾಧಾನ್ಯ ಹಂತ. ಈ ಎಲ್ಲಾ ಹಂತಗಳನ್ನು ದಾಟಿ ಆಧುನಿಕ ಮಾರಾಟ ಪ್ರಕ್ರಿಯೆಯಲ್ಲಿ ಬಳಕೆದಾರನೇ ಪ್ರಾಧಾನ್ಯನಾಗಿದ್ದಾನೆ. ಪ್ರಸ್ತುತ ಮಾರಾಟ ಪ್ರಕ್ರಿಯೆಯು ಬಳಕೆದಾರರ ಅವಶ್ಯಕತೆ, ನಿರೀಕ್ಷೆ, ಬೇಡಿಕೆ ಮತ್ತು ಆಸೆಗಳನ್ನು ಈಡೇರಿಸುವ ಗುರಿಯನ್ನು ಹೊಂದಿದೆ. ಪ್ರಸ್ತುತ ಅಧ್ಯಯನದಲ್ಲಿ ಮೇದರು ತಯಾರಿಸುವ ಪ್ರತಿಯೊಂದು ವಸ್ತುಗಳು ಗ್ರಾಹಕರ ಪ್ರಾದೇಶಿಕ ಅಭಿಲಾಷೆಗೆ ತಕ್ಕಂತೆ ತಯಾರಿಸಿ ಮಾರಲ್ಪಡುತ್ತವೆ. ತಾವು ತಯಾರಿಸುವ ವಸ್ತುಗಳು ಬಳಕೆದಾರನ ಮೇಲೆ ಬೀರುವ ಪ್ರಭಾವವನ್ನು ಗಮನದಲ್ಲಿರಿಸಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಮೇದರು ತಾವು ತಯಾರಿಸವ ವಸ್ತುಗಳ ಮಾರಾಟದ ಪ್ರಕ್ರಿಯೆಯಲ್ಲಿ ಪ್ರಮುಖವಾಗಿ ಗ್ರಾಹಕರ

ಮೇಲೆ ಪ್ರಭಾವ ಬೀರುವ ಕೆಲವು ಅಂಶಗಳನ್ನು ಗಮನಿಸಬೇಕಾಗುತ್ತದೆ. ಈ ಅಂಶಗಳನ್ನು ಆಂತರಿಕ ಅಂಶಗಳು ಮತ್ತು ಬಾಹ್ಯಅಂಶಗಳು ಎಂದು ಪ್ರತ್ಯೇಕವಾಗಿ ಗಮನಿಸಲಾಗಿದೆ.

5.2.1.ಅ) ಆಂತರಿಕ ಅಂಶಗಳು :

ಮೇದರು ತಾವು ತಯಾರಿಸುವ ವಸ್ತುಗಳ ಕೆಲವು ನಿಯಂತ್ರಣಗಳು ಆಂತರಿಕವಾಗಿದ್ದು ತಮ್ಮಿಂದಲೇ ಇವುಗಳನ್ನು ನಿಯಂತ್ರಿಸಲು ಸಾಧ್ಯವಾಗುವುದು. ಗ್ರಾಹಕನನ್ನು ಆಕರ್ಷಿಸಲು ಮತ್ತು ಮಾರುಕಟ್ಟೆಯಲ್ಲಿ ತಮ್ಮ ವಸ್ತುವಿಗೆ ಬೇಡಿಕೆ ಬರಲು ಈ ಅಂಶಗಳನ್ನು ಇವರು ಗಮನದಲ್ಲಿರಿಸಿಕೊಂಡು ಉತ್ಪಾದನೆಯನ್ನು ಮಾಡುತ್ತಾರೆ. ಅವುಗಳೆಂದರೆ,

- ಉತ್ಪಾದಿಸುವ ವಸ್ತು (Product) : ಮೇದರು ತಾವು ತಯಾರಿಸುವ ವಸ್ತುವಿನ ತಯಾರಿಕೆಯಲ್ಲಿ ಬಳಸುವ ಕಚ್ಚಾ ವಸ್ತು ಮತ್ತು ಅದರ ಗುಣಮಟ್ಟ ಅದರ ವಿನ್ಯಾಸ, ಆಕಾರ, ತಯಾರಿಸುವಾಗ ಅಳವಡಿಸುವ ವಿಧಾನ, ಅದರ ಬಾಳಿಕೆಯನ್ನು ಗಮನದಲ್ಲಿಟ್ಟುಕೊಂಡಿರುತ್ತಾರೆ. ಇವೆಲ್ಲವುಗಳು ಗ್ರಾಹಕನ ನಿರೀಕ್ಷೆಗೆ ತಕ್ಕಂತೆ ಇರಬೇಕು. ಬುಡಕಟ್ಟು ಕಸುಬುದಾರರು ಮತ್ತು ಗ್ರಾಹಕರ ನಡುವಿನ ವಸ್ತು ಸಂಬಂಧ ಅನೇಕ ಸಾಂಪ್ರದಾಯಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಹೊಂದಿರುತ್ತವೆ. ಬಳಕೆದಾರರು ಅದರ ಬಳಕೆಯಿಂದ ಸಂಪೂರ್ಣ ತೃಪ್ತಿಯನ್ನು ಹೊಂದಬೇಕು. ಮತ್ತು ತನ್ನ ಕೊಳ್ಳುವಿಕೆಯನ್ನು ಪುನರಾವರ್ತಿಸುವಂತಿರಬೇಕು. ಮೇದರು ತಯಾರಿಸುವ ವಸ್ತುಗಳು ಮುದ್ರೆಇಲ್ಲದ ವಸ್ತುವಾಗಿರುವುದರಿಂದ ಇಲ್ಲಿ ನಂಬಿಕೆ ಬಹಳ ಮುಖ್ಯ ವಾಗಿರುತ್ತದೆ.
- ಬೆಲೆ (Price) : ತಯಾರಿಸಿದ ವಸ್ತುವಿನ ಮಾರಾಟದ ಬೆಲೆಯು ಸಹ ಗ್ರಾಹಕನ ಮೇಲೆ ಪ್ರಭಾವ ಬೀರುವ ಪ್ರಮುಖವಾದ ಅಂಶ. ಇತರೆ ಉತ್ಪಾದಕರು ತಮ್ಮ ವಸ್ತುವಿನ ಬೆಲೆಯನ್ನು ನಿರ್ಧರಿಸುವಾಗ ಬೆಲೆನಿರ್ಧರಿಸುವ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅದರ ಮಾರಾಟದ ಬೆಲೆಯನ್ನು ನಿರ್ಧರಿಸುತ್ತಾರೆ.ಡಾ.ಮಾರ್ಷಲ್ ಅವರು ಹೇಳುವ ಹಾಗೆ,ಬೇಡಿಕೆ ಮತ್ತು ಪೂರೈಕೆಗಳು ಒಂದು ಕತ್ತರಿಯ ಎರಡು ಅಲಗುಗಳಿದ್ದಂತೆ. ಕಾಗದವನ್ನು ಕತ್ತರಿಸಲು ಕತ್ತರಿಯ ಎರಡು ಅಲಗುಗಳು ಅತ್ಯಾವಶ್ಯಕ. ಒಂದೇ ಅಲಗಿನಿಂದ ಕತ್ತರಿಸಲು ಸಾಧ್ಯವಿಲ್ಲ. ಅದರಂತೆ ಬೆಲೆ ನಿರ್ಧಾರವಾಗಬೇಕಾದರೆ ಬೇಡಿಕೆ ಮತ್ತು ಪೂರೈಕೆಗಳೆರಡೂ ಅತ್ಯಾವಶ್ಯಕ.[5] ಈ ಬೆಲೆ ಸ್ಥಿರವಾಗಿರಬಹುದು ಇಲ್ಲವೇ ಮಾರಾಟ ಮತ್ತು ಪೈಪೋಟಿಗೆ ತಕ್ಕಂತೆ ಬದಲಾಗುತ್ತಿರಬಹುದು. ಮುದ್ರಿತ ವಸ್ತುವಿನ ಬೆಲೆಯನ್ನು ವಸ್ತುವಿನ ಪೊಟ್ಟಣದ ಮೇಲೆ ಮುದ್ರಿಸಿರುತ್ತಾರೆ. ಮೇದರು ತಯಾರಿಸುವ ವಸ್ತುಗಳು ಮುದ್ರೆ ಇಲ್ಲದ ಮತ್ತು ಪೊಟ್ಟಣ ಕಟ್ಟದ ವಸ್ತುಗಳು. ಇವರು ತಾವು ತಯಾರಿಸಿದ ವಸ್ತುಗಳ ಬೆಲೆಯನ್ನು ನಿರ್ಧರಿಸುವಾಗ ಕೆಲವು ಅಂಶಗಳನ್ನು ಗಮನಿಸುತ್ತಾರೆ. ಅವುಗಳೆಂದರೆ, ವಸ್ತುವಿನ ಗುಣಮಟ್ಟ, ಗ್ರಾಹಕನ ಕೊಳ್ಳುವ ಉದ್ದೇಶ ಮತ್ತು ಸಾಮರ್ಥ್ಯಹಾಗೂ ಪ್ರಸ್ತುತ ಮಾರುಕಟ್ಟೆಯಲ್ಲಿಯ ಪೈಪೋಟಿ ಮತ್ತುಸಂದರ್ಭ.

- **ಮಾರಾಟ ಪ್ರವರ್ತನೆ** (Promotion) : ವಸ್ತುವಿನ ಮಾರಾಟವನ್ನು ಹೆಚ್ಚಿಸುವುದು ಮಾರಾಟ ಪ್ರವರ್ತನೆಯ ಮುಖ್ಯ ಉದ್ದೇಶವಾಗಿದೆ. ಮಾರಾಟಗಾರರು ತಮ್ಮ ವಸ್ತುವಿನ ಮಾರಾಟವನ್ನು ಹೆಚ್ಚಿಸಲು ಜಾಹಿರಾತು, ಪ್ರಚಾರ ಕಲೆ, ಸಂಶೋಧನೆಗಳನ್ನು ಅಳವಡಿಸುತ್ತಾರೆ. ಆದರೆ, ಮೇದರು ತಯಾರಿಸುವ ವಸ್ತುಗಳ ಮಾರಾಟವನ್ನು ಹೆಚ್ಚಿಸಲು ಇಂತಹ ಯಾವುದೇ ತಂತ್ರಗಳನ್ನು ಬಳಸುವುದಿಲ್ಲ. ಇವರು ವಿಶಿಷ್ಟವಾದ ಜಾಹಿರಾತು ಪದ್ಧತಿಯನ್ನು ಅನುಸರಿಸುತ್ತಾರೆ. ಅಂದರೆ, ಇವರು ತಾವು ತಯಾರಿಸಿದ ವಸ್ತುಗಳನ್ನು ಮನೆ-ಡಿಪೋಗಳ ಮುಂದೆ ಬೀದಿಯ ಪಕ್ಕದಲ್ಲಿ ಕ್ರಮವಾಗಿ ಹೊಂದಿಸಿ ಇರಿಸಿರುತ್ತಾರೆ. ಇದರಿಂದ ಆಕರ್ಷಿತರಾದ ಗ್ರಾಹಕರು ತಮ್ಮೆಡೆಗೆ ಬರುತ್ತಾರೆ. ಡಿಪೋಗಳಲ್ಲಿ ಬೊಂಬು, ಬಿದಿರು, ಪೋಲ್ಸ್, ಕಡಪ, ಹಂಚು, ತಟ್ಟಿ, ಚಾಪೆ, ಇವೆಲ್ಲವನ್ನು ಸಹ ಕ್ರಮಬದ್ಧವಾಗಿ ಅಂಗಡಿ ಮುಂಗಟ್ಟುಗಳಿಗೆ, ಇಲ್ಲವೇ ಪಕ್ಕದ ಗೋಡೆ, ಬೀದಿಯ ಗಿಡ-ಮರಗಳಿಗೆ ಹೊಂದಿಸಿರುತ್ತಾರೆ. ತಯಾರಿಸಿದ ಮೊರ, ಬುಟ್ಟಿ, ಬೀಸಣಿಕೆ, ತಟ್ಟಿ, ಚಾಪೆ, ಕುರ್ಚಿ, ಸೋಫಾ, ಟಿಪಾಯಿ, ಮತ್ತು ಅನೇಕ ಕರಕುಶಲ ವಸ್ತುಗಳನ್ನು ಸಹಿತ ಅಂದವಾಗಿ ಮನೆಯಮುಂದೆ ಜನರಿಗೆ ಕಾಣುವಂತೆ ಹೊಂದಿಸಿರುತ್ತಾರೆ. ಈ ರೀತಿಯ ಪ್ರದರ್ಶನ ಆಧುನಿಕ ಜಾಹಿರಾತಿನ ಕಿಟಕಿ ಪ್ರದರ್ಶನ (Window Display) ವನ್ನು ನಾಚಿಸುವಂತಿರುತ್ತದೆ. ಇದು ಇವರು ತಮ್ಮ ವಸ್ತುವಿನ ಮಾರಾಟ ಪ್ರವರ್ತನೆಯಲ್ಲಿ ಅಳವಡಿಸುವ ಪಾರಂಪರಿಕ ಪ್ರವರ್ತನೆ.

- **ವಿತರಣೆ** (Physical Distribution or Place) : ತಯಾರಿಸಿದ ವಸ್ತುಗಳನ್ನು ಸಮಯೋಚಿತವಾಗಿ, ಕಡಿಮೆ ವೆಚ್ಚದಲ್ಲಿ ಸಗಟು ಇಲ್ಲವೇ ಚಿಲ್ಲರೆ ವ್ಯಾಪಾರಿಗಳ ಮೂಲಕ ಗ್ರಾಹಕರಿಗೆ ತಲುಪಿಸುವುದು ವಿತರಣೆಯ ಕಲೆಯಾಗಿದೆ. ಇತರೆ ಉತ್ಪಾದಕರು ವಿತರಣೆ ವಿಧಾನದಲ್ಲಿ ವಿವಿಧ ವಿತರಣಾ ಮಾರ್ಗಗಳನ್ನು ಅನುಸರಿಸುತ್ತಾರೆ. ಅದಕ್ಕಾಗಿ ವಿತರಣಾ ಯೋಜನೆಯನ್ನು ರೂಪಿಸುವರು. ದಾಸ್ತಾನು, ಸಾರಿಗೆ ಮತ್ತು ಪೂರೈಕೆಗಳನ್ನು ಗಮನದಲ್ಲಿಟ್ಟುರುವರು. ಆದರೆ ಮೇದರು ತಾವು ತಯಾರಿಸುವ ವಸ್ತುಗಳನ್ನು ಉಪಭೋಗಕರಿಗೆ ತಲುಪಿಸುವಾಗ ತಮ್ಮದೇ ಆದ ಕೆಲವು ಮಾರ್ಗಗಳನ್ನು ಅನುಸರಿಸುತ್ತಾರೆ. ಡಿಪೋಗಳಲ್ಲಿ, ಗೃಹನಿರ್ಮಾಣದ ಪೂರಕ ವಸ್ತುಗಳನ್ನು ಮಾರಾಟ ಮಾಡುವಾಗ ಸಟ್ಟಾ ಮತ್ತು ಚಿಲ್ಲರೆ ಎರಡೂ ಪದ್ಧತಿಯಲ್ಲಿ ಮಾರಾಟ ಮಾಡುವರು. ಕೆಲವುಸಾರಿ ಗ್ರಾಹಕರಿಗೆ ಮನೆಬಾಗಿಲಿಗೂ ವಸ್ತುಗಳನ್ನು ಪೂರೈಸುವರು. ಕುಲಕಸುಬಿನಿಂದ ತಯಾರಿಸಿದ ವಸ್ತುಗಳ ಮಾರಾಟ ಮಾಡುವಾಗ ನೇರಮಾರಾಟದ ಮಾರ್ಗವನ್ನು ಇವರು ಅನುಸರಿಸುವುದು ಸಹಜ. ಕೆಲವರು ತಾವುತಯಾರಿಸಿದ ವಸ್ತುಗಳನ್ನು ತಲೆಯಮೇಲೆಹೊತ್ತು ಗ್ರಾಹಕರಿಗೆ ಹಳ್ಳಿ ಪಟ್ಟಣಗಳನ್ನು ತಿರುಗಿ ನೇರವಾಗಿ ಮಾರಾಟ ಮಾಡುತ್ತಾರೆ.ಮತ್ತೆ ಕೆಲವೊಮ್ಮೆ ವಾರದ ಸಂತೆಯಲ್ಲಿ ಬೀದಿಯ ಪಕ್ಕದ ಅಂಗಡಿ ಮುಂಗಟ್ಟುಗಳ ಮುಂದೆ ಗಾಳಿ-ಮಳೆ-ಬಿಸಿಲುಗಳಲ್ಲಿಯೇ ಮಾರಾಟ ಮಾಡುವರು. (ಎರೆಡು,ಮೂರು ಮತ್ತು ನಾಲ್ಕನೇ ಛಾಯಾಚಿತ್ರಗಳನ್ನು ನೋಡಿರಿ) ಇವರಿಗಾಗಿ ಪ್ರತ್ಯೇಕವಾದ ಮಾರುಕಟ್ಟೆಯ ವ್ಯವಸ್ಥೆ ಇಲ್ಲ. ಮತ್ತೆ ಕೆಲವರು ತಯಾರಿಸಿದ ವಸ್ತುಗಳನ್ನು ಚಿಲ್ಲರೆಯಾಗಿ ಕಸುಬುದಾರರಿಂದ ಖರೀದಿಸಿ ಗ್ರಾಹಕರಿಗೆ ನೇರವಾಗಿ ಮಾರಾಟ

ಮಾಡುತ್ತಾರೆ. ಕೊರಚರು ಮುಂತಾದ ಅನ್ಯ ಸಮುದಾಯದವರಿಗೆ ಕೂಡ ಇವರು ತಮ್ಮ ವಸ್ತುಗಳನ್ನು ಸಟ್ಟಾ ಮಾರಾಟ ಮಾಡುವರು. ಮಾರಾಟದ ವಿತರಣಾ ಮಾರ್ಗಗಳನ್ನು ಅನುಕೂಲಕ್ಕೆ ತಕ್ಕಂತೆ ಇವರು ಅಳವಡಿಸಿ ಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಇವರು ಎದುರಿಸುವ ಸಮಸ್ಯೆಗಳನ್ನು ಪ್ರತ್ಯೇಕವಾಗಿ ಹೇಳಲಾಗಿದೆ.

5.2.1. ಅ) ಬಾಹ್ಯ ಅಂಶಗಳು :

ಉತ್ಪಾದಕನು ತಾನು ತಯಾರಿಸಿ ಮಾರಾಟ ಮಾಡುವ ತನ್ನ ವಸ್ತುಗಳನ್ನು ನಿರ್ಧರಿಸುವ ಕೆಲವು ಅಂಶಗಳನ್ನು ತನ್ನಿಂದ ಆಂತರಿಕವಾಗಿ ನಿಯಂತ್ರಿಸಲು ಸಾಧ್ಯವಾಗುವುದಿಲ್ಲ. ಅಂತಹ ಅಂಶಗಳನ್ನು ಬಾಹ್ಯ ಇಲ್ಲವೆ ಅನಿಯಂತ್ರಿತ ಅಂಶಗಳೆಂದು ಕರೆಯಲಾಗುತ್ತದೆ. ಅವುಗಳೆಂದರೆ,

- ಬಳಕೆದಾರರ ವರ್ತನೆ : ಪ್ರಸ್ತುತ ಗ್ರಾಹಕನಿಂದ ನಿಯಂತ್ರಿಸಲ್ಪಡುವ ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಗ್ರಾಹಕ ಪ್ರಮುಖ ಪಾತ್ರದಾರಿ. ಉತ್ಪಾದಕ, ಗ್ರಾಹಕನ ವರ್ತನೆಯನ್ನು ಅರಿತುಕೊಂಡು ತನ್ನ ಉತ್ಪಾದನೆ ಮತ್ತು ಮಾರಾಟವನ್ನು ಕೈಗೊಳ್ಳಬೇಕಾಗುತ್ತದೆ. ಮೇದರು ಸಹ ತಾವು ಮಾರಾಟಮಾಡುವ ವಸ್ತುಗಳ ಖರೀದಿದಾರನ ವರ್ತನೆಯನ್ನು ಗಮನಿಸುತ್ತಾರೆ. ಕೊಳ್ಳುವವರ ಶಕ್ತಿ, ಸಾಮರ್ಥ್ಯ, ಸ್ವಭಾವ, ಅಭಿಲಾಷೆ, ಉದ್ದೇಶ, ಸಾಮಾಜಿಕ ಜೀವನಮಟ್ಟ ಇವೆಲ್ಲ ಅಂಶಗಳು ಬಳಕೆದಾರನ ವರ್ತನೆಯನ್ನು ಬಿಂಬಿಸುತ್ತವೆ. ವಿಶೇಷವಾಗಿ ಮೇದರು ತಯಾರಿಸುವ ವಸ್ತುಗಳನ್ನು ಸಮಾಜದ ಪ್ರತಿಯೊಂದು ಸಮುದಾಯದವರೂ ಉಪಯೋಗಿಸುವರು. ಹುಟ್ಟಿನಿಂದ ಸಾವು-ಸಂಸ್ಕಾರದವರೆಗಿನ ಆಚರಣೆಗಳಲ್ಲಿ ವಿಶೇಷವಾಗಿ ಬಿದಿರಿನಿಂದ ತಯಾರಿಸಿದ ವಸ್ತುಗಳನ್ನು ತಮ್ಮ ಮತಸಂಪ್ರದಾಯದ ಪ್ರಕಾರ ಉಪಯೋಗಿಸುತ್ತಾರೆ. ಇಂತಹ ಸಂದರ್ಭದಲ್ಲಿ ಮೇದರು ಇವರ ವರ್ತನೆಗಳನ್ನು ಗಮನಿಸಿ ವಸ್ತುವಿನ ಬೆಲೆ ಮತ್ತು ಮಾರಾಟದ ಸೇವೆಗಳನ್ನು ಒದಗಿಸುವರು. ಇವು ಪ್ರಾದೇಶಿಕವಾಗಿ ಮೇದರಿಗೆ ಅನುಭವಕ್ಕೆ ಬಂದ ಬಳಕೆದಾರನ ವರ್ತನೆಗಳಾಗಿರುತ್ತವೆ. ಮಾರಾಟದ ಸಂದರ್ಭದಲ್ಲಿ ಮೇದರು ಎದುರಿಸುವ ಸಮಸ್ಯೆಗಳಲ್ಲಿ ಇವುಗಳನ್ನು ಪ್ರತ್ಯೇಕವಾಗಿ ಹೇಳಲಾಗಿದೆ.

-ವ್ಯಾಪಾರಸ್ಥರ ವರ್ತನೆ : ವ್ಯಾಪಾರಸ್ಥರ ವರ್ತನೆಯು ವಸ್ತುವಿನ ಬಗೆಗೆ ಅವರಿಗಿರುವ ಆಸಕ್ತಿ ಮಾರಾಟದಿಂದ ಸಿಗುವ ಲಾಭ, ಹಣಕಾಸು ಸ್ಥಿತಿ ಇವುಗಳೇ ಪ್ರಮುಖವಾದ ಅಂಶಗಳಾಗಿವೆ. ಕೆಲವು ಸಂದರ್ಭದಲ್ಲಿ ಮೇದರು ತಮ್ಮ ವಸ್ತುಗಳನ್ನು ಮಾರಾಟ ಮಾಡಲು ಹಳ್ಳಿಪ್ರದೇಶಗಳಿಗೆ ಹೋಗಿದ್ದಾಗ, ಅನಿವಾರ್ಯವಾಗಿ ಲಾಭಾಂಶವನ್ನು ಪರಿಗಣಿಸದೇ ಕಡಿಮೆ ಬೆಲೆಗೆ ಮಾರಾಟಮಾಡಿ ಬರುತ್ತಾರೆ. ಕೆಲವು ಸಂದರ್ಭದಲ್ಲಿ ಉದ್ರಿ ಮಾರಾಟ ಮಾಡುವುದು ಸಹ ಅನಿವಾರ್ಯವಾಗುವುದು. ಇಂತಹ ಅಂಶಗಳನ್ನು ಇವರು ನಿಯಂತ್ರಿಸುವುದು ಅಸಾಧ್ಯವಾಗಿರುತ್ತದೆ. ಕಾರಣ ಇವರು ಸಮಯಕ್ಕೆ ತಕ್ಕಂತೆ ವರ್ತಿಸುವರು.

- ಪ್ರತಿಸ್ಪರ್ಧಿಗಳ ವರ್ತನೆ : ಮೇದರಲ್ಲಿ ತಮ್ಮ ಸಮುದಾಯದವರೇ ತಮಗೆ ಪೈಪೋಟಿಯನ್ನು ಎಸಗುತ್ತಾರೆ. ಅನೇಕ ಸಂದರ್ಭಗಳಲ್ಲಿ ಇವರು ತಮ್ಮ ವ್ಯಾಪಾರದ ಗುಟ್ಟನ್ನು ಬಿಟ್ಟುಕೊಡುವುದಿಲ್ಲ. ಆದರೆ ತಮ್ಮ ಸಮುದಾಯದವರೇ

ಅನಾವಶ್ಯ ಪೈಪೋಟಿಯನ್ನು ಒಡ್ಡುವುದು ಕಂಡುಬರುತ್ತದೆ. ಇಂತಹ ಸಂದರ್ಭಗಳಲ್ಲಿ ಇವರು ಪೈಪೋಟಿಯ ಸ್ವರೂಪ, ಗಾತ್ರ, ಶಕ್ತಿ ಮತ್ತು ಇತರೆ ಅಂಶಗಳನ್ನು ಗಮನಿಸಿ ವ್ಯಾಪಾರ ಮಾಡುವರು. ಈ ಸಂದರ್ಭದಲ್ಲಿ ಪೈಪೋಟಿಯಲ್ಲಿ ರಾಜಿ ಮಾಡಿಕೊಳ್ಳುತ್ತಾರೆ. ಹೊಂದಾಣಿಕೆಯಿಂದ ಕೆಲವೊಂದು ಮಾರುಕಟ್ಟೆ, ಸಂತೆಗಳನ್ನು ಹಂಚಿಕೊಂಡು ವ್ಯಾಪಾರ ಮಾಡುತ್ತಾರೆ. ಈ ಸಹಬಾಳ್ವೆ ಇತರೆ ವ್ಯಾಪಾರಿಗಳಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ.

-ಸರಕಾರ ಮತ್ತು ಸಮಾಜದ ಧೋರಣೆ : ವಸ್ತುಗಳನ್ನು ಮಾರಾಟ ಮಾಡುವಲ್ಲಿ ಸರಕಾರ ತನ್ನದೇ ಆದ ನೀತಿ ಮತ್ತು ಕಾನೂನುಗಳನ್ನು ಜಾರಿಗೊಳಿಸಿರುತ್ತದೆ. ಅವುಗಳನ್ನು ಪಾಲಿಸುವುದು ಅವಶ್ಯ. ಆದರೆ, ಬಹಳಷ್ಟು ಮೇದರು ತಾವು ತಯಾರಿಸುವ ವಸ್ತುವಿನ ಮಾರಾಟವನ್ನು ಕುರಿತಾಗಿ ಯಾವ ಅಧಿಕಾರಿಗಳಿಗೆ ಪ್ರಶ್ನಿಸಲು ಅಧಿಕಾರವಿದೆ, ಎಂಬುದನ್ನು ಸಹ ತಿಳಿದು ಕೊಳ್ಳದೇ ಕಾನೂನಿನ ಕುರುಡುತನಕ್ಕೆ ಹೆದರಿ ಲಂಚ ಮತ್ತು ಬಕ್ಷೀಸನ್ನು ಕೊಡುವುದು ಸಹಜ. ಸುಸಜ್ಜಿತವಲ್ಲದ ಮಾರುಕಟ್ಟೆ ಇವರದು. ಅನೇಕ ಸಾರೆ ರಸ್ತೆ ಬದಿಯ ಮಾರಾಟಲ್ಲಿ ತೊಡಗಿದ್ದಾಗ ಸರಕಾರ ಮತ್ತು ಸಮಾಜದಿಂದ ಹಿಂಸೆ ಮತ್ತು ಶಿಕ್ಷೆಗೊಳಗಾಗಿರುವುದು ಕಂಡು ಬರುತ್ತದೆ. ಅನೇಕರು ಅಂಗಡಿ ಮತ್ತು ಮನೆಯ ಮುಂದುಗಡೆ ಮೊರ-ಪುಟ್ಟಿಯನ್ನು ಇಡುವುದು ಶುಭಸೂಚಕವಲ್ಲವೆಂದು ಇವರನ್ನು ಅಲ್ಲಿಂದ ಉಯಿಲೆಬ್ಬಿಸುತ್ತಾರೆ. ಇವರನ್ನು ಅನೇಕಸಾರೆ ಅಸ್ಪೃಶ್ಯರಂತೆ ಕಂಡ ಘಟನೆಗಳು ಸಹ ಕಂಡುಬರುತ್ತವೆ.

5.2.2 ತಯಾರಿಸಿದ ವಸ್ತುಗಳ ಮಾರಾಟಪ್ರಕ್ರಿಯೆಯ ಸಮಸ್ಯೆಗಳು (Problems of Marketing of Manufactured Products.) :

ಯಾವುದೇ ಉತ್ಪಾದಕ ತಾನು ತಯಾರಿಸಿದ ವಸ್ತುಗಳನ್ನು ಗ್ರಾಹಕರಿಗೆ ತಲುಪಿಸುವಾಗ ಅನೇಕ ವಿತರಣಾ ಮಾರ್ಗಗಳನ್ನು ಅನುಸರಿಸುತ್ತಾನೆ. ಒಂದು ಸಿದ್ಧಾಂತದ ಮೇಲೆ ಈ ವಿತರಣಾ ಮಾರ್ಗವನ್ನು ಆರಿಸಿಕೊಳ್ಳುವರು. ಮೇದರು ತಾವು ಕುಲಕಸುಬಿನಿಂದ ತಯಾರಿಸಿದ ವಸ್ತುಗಳನ್ನು ಗ್ರಾಹಕರಿಗೆ ತಾವೇ ನೇರವಾಗಿ ಮಾರಾಟ ಮಾಡುವುದು ಸಹಜ. ಇವರ ಮಾರುಕಟ್ಟೆಗಳು ಸುಸಜ್ಜಿತವಲ್ಲದ ಮಾರುಕಟ್ಟೆಗಳು. ಕಾರಣ ಇವರು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾರುಕಟ್ಟೆಯನ್ನು ಆರಿಸಿಕೊಳ್ಳುವರು. ಇಂತಹ ಸಂದರ್ಭದಲ್ಲಿ ಮೇದರು ಕುಲಕಸುಬಿನಿಂದ ತಯಾರಿಸಿದ ವಸ್ತುವಿನ ಮಾರಾಟದಲ್ಲಿ ಇವರು ಎದುರಿಸುವ ಸಮಸ್ಯೆಗಳನ್ನು ಇಲ್ಲಿ ಗಮನಿಸಿದೆ.

5.2.2.ಅ) ಮುದ್ರೆ ಇಲ್ಲದ ವಸ್ತುಗಳು :

ಮೇದರು ತಯಾರಿಸುವ ವಸ್ತುಗಳಿಗೆ ಅವರು ವಸ್ತುವಿನ ಮಾಹಿತಿ ಮತ್ತು ವಿವರಣೆ, ಕುರಿತಂತೆ ಮುದ್ರೆಯನ್ನು ಹಾಕಿರುವುದಿಲ್ಲ. ಇವರ ಮಾರಾಟದ ಪ್ರಕ್ರಿಯೆ ಮುದ್ರಿತವಲ್ಲದ ವಸ್ತುಗಳ ಮಾರಾಟ ಪ್ರಕ್ರಿಯೆಯಾಗಿದೆ. ಇಂತಹ ಸಂದರ್ಭದಲ್ಲಿ ಗ್ರಾಹಕ ಮತ್ತು ಉತ್ಪಾದಕರ ನಡುವೆ ಒಂದು ಸಾಮಾಜಿಕ ನೈತಿಕ ಸಂಬಂಧ ಏರ್ಪಟ್ಟಿರುತ್ತದೆ. ಅಂದರೆ ಗ್ರಾಹಕ ವಸ್ತುವಿನ ಬಗ್ಗೆ ಉತ್ಪಾದಕನು ಕೊಡುವ ಮಾಹಿತಿಯನ್ನು ನಂಬುತ್ತಾನೆ. ಈ ಮಾಹಿತಿಯು ವಸ್ತುವಿನ

ಗುಣಮಟ್ಟ , ಬೆಲೆ, ಬಾಳಿಕೆ, ಸಾಂಪ್ರದಾಯಿಕ ಮತ್ತು ಸಾಮಾಜಿಕ ಘನತೆಗೆ ಸಂಬಂಧಿಸಿದ್ದಾಗಿರುತ್ತದೆ. ಏಕೆಂದರೆ ಮೇದರು ತಯಾರಿಸುವ ವಸ್ತುಗಳ ಖರೀದಿದಾರರೆಲ್ಲರೂ ಅಂತಿಮ ಮತ್ತು ವೈಯಕ್ತಿಕ ಉಪಭೋಗಕರಲ್ಲ. ಇವರು ಕೆಲವು ಸಾರಿ ಇತರರ ಆದೇಶದಂತೆ ಈ ವಸ್ತುಗಳನ್ನು ಕೊಳ್ಳಲು ಬಂದಿರುತ್ತಾರೆ. ಇಂತಹ ಸಂದರ್ಭದಲ್ಲಿ ಉತ್ಪಾದಕ ಅಥವಾ ಮಾರಾಟಗಾರ ಕೊಡುವ ಮಾಹಿತಿಯ ನಂಬಿಗೆಯಿಂದಲೇ ವಸ್ತುವನ್ನು ಕೊಂಡುಕೊಳ್ಳುತ್ತಾರೆ. ಉದಾ : ಚಿಬ್ಬಲಿಯನ್ನು ಖರೀದಿಸುವಾಗ ಅದರ ಬೆಲೆ 15 ರೂಪಾಯಿಗಳು ಏಕೆಂದರೆ ಇದನ್ನು ಮಹಾರಾಷ್ಟ್ರದ ನೈಸ್ ಬಿದಿರಿನಿಂದ ತಯಾರಿಸಲಾಗಿದೆ. ಎಂದು ಮೇದ ಹೇಳುತ್ತಾನೆ. ಅಂತಹುದೇ ಚಿಬ್ಬಲಿಯನ್ನು ದಾಂಡೇಲಿ ಬಿದಿರಿನಿಂದ ತಯಾರಿಸಿದ್ದಾದರೆ 10 ರೂಪಾಯಿ ಎಂದು ಹೇಳುತ್ತಾನೆ. ಇಲ್ಲಿ ಖರೀದಿಮಾಡುವವನಿಗೆ ಬಿದಿರಿನ ವ್ಯತ್ಯಾಸಗಳು ಗೊತ್ತಿರುವುದಿಲ್ಲ. ಆದರೆ ಇಲ್ಲಿ ವಾಣಿಜ್ಯದ ನೈತಿಕ ಮತ್ತು ನೈಜ ಮೌಲ್ಯವಾದ ನಂಬಿಕೆ ಕಾರಣವಾಗಿರುತ್ತದೆ. ದೇವರ ಪುಟ್ಟಿಯನ್ನು ತಯಾರಿಸುವಾಗ ಬಿದಿರಿನ ಬದಲು ಬೆತ್ತವನ್ನು ಬಳಸುತ್ತಾರೆ. ಇದರಿಂದಾಗಿ ಅದರ ಉತ್ಪಾದನೆಯ ವೆಚ್ಚ ಅಧಿಕವಾಗಿರುತ್ತದೆ. ಇವರ ವಿಶ್ವಾಸವನ್ನು ತಿಳಿಯದ ಮತ್ತು ಇವರ ಮಾತನ್ನು ನಂಬಲಾರದ ಕೆಲವು ಗ್ರಾಹಕರು ಇದನ್ನು ಸಾಬೀತು ಪಡಿಸುವಂತೆ ವಿಚಿತ್ರರೀತಿಯಲ್ಲಿ ವರ್ತನೆ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಮೇದರಿಗೆ ತಮ್ಮ ವಸ್ತುವನ್ನು ಗುಣಮಟ್ಟದ ಆಧಾರದ ಮೇಲೆ ವಿಂಗಡಣೆ, ಶ್ರೇಣೀಕರಣ, ಮತ್ತು ವರ್ಗೀಕರಣ ಮಾಡುವುದು ಕಷ್ಟವಾಗುತ್ತದೆ. ಈ ತೊಂದರೆಗಳು ಮುದ್ರಿತವಾದ ವಸ್ತುಗಳ ಮಾರಾಟದಲ್ಲಿ ಕಂಡುಬರುವುದಿಲ್ಲ. ಮೇದರು ಇಂತಹ ಸನ್ನಿವೇಶಗಳನ್ನು ತಮ್ಮದೇ ಆದ ಕೌಶಲ್ಯದಿಂದ ನಿರ್ವಹಿಸುತ್ತಾರು.

5.2.2.ಆ) ಸಾರಿಗೆಯ ಸಮಸ್ಯೆ :

ಮೇದರ ಕುಲಕಸುಬಿಗೆ ಸಂಬಂಧಿಸಿದಂತೆ ದಾಸ್ತಾನು ಸಮಸ್ಯೆಯಲ್ಲಿ ಎರಡು ರೀತಿಯ ದಾಸ್ತಾನು ಸಮಸ್ಯೆಯನ್ನು ಇವರು ಎದುರಿಸುತ್ತಾರೆ. ಕಚ್ಚಾಬಿದಿರಿನ ದಾಸ್ತಾನು ಸಮಸ್ಯೆ ಮತ್ತು ತಯಾರಿಸಿದ ವಸ್ತುಗಳ ದಾಸ್ತಾನು ಸಮಸ್ಯೆ. ಉತ್ಪಾದಿಸಿದ ವಸ್ತುಗಳು ಉತ್ಪಾದನಾ ಸ್ಥಳದಿಂದ ಉಪಭೋಗದ ಸ್ಥಳಕ್ಕೆ ಚಲಿಸುವಲ್ಲಿ ಸಾರಿಗೆ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಸಾರಿಗೆಯ ಸಂಶೋಧನಾ ಮಾರ್ಗಗಳೇ ಇಂದಿನ ವಿಶ್ವಗ್ರಾಮಕ್ಕೆ ಮತ್ತು ವಿಶ್ವ ಮಾರುಕಟ್ಟೆಗೆ ಸಾಧ್ಯವಾಗಿದೆ. ಉತ್ಪಾದಿತ ವಸ್ತುಗಳು ಅದರ ಭೌತಿಕ ಮತ್ತು ರಸಾಯನಿಕ ಮೌಲ್ಯವನ್ನು ಕಳೆದುಕೊಳ್ಳುವುದಕ್ಕೆ ಮುಂಚೆ ಉಪಭೋಗಕ್ಕೆ ಒಳಪಡಬೇಕು. ಪ್ರಸ್ತುತ ಬೆಳೆದು ನಿಂತ ಸಾರಿಗೆಯ ವ್ಯವಸ್ಥೆಯಲ್ಲಿ ಪ್ರಪಂಚದ ಒಂದು ಅಂಚಿನಲ್ಲಿ ಉತ್ಪಾದಿಸಿದ ವಸ್ತು ಕೆಲವೇ ಘಂಟೆಗಳಲ್ಲಿ ಪ್ರಪಂಚದ ಇನ್ನೊಂದು ಅಂಚಿನಲ್ಲಿ ಉಪಭೋಗಕ್ಕೆ ಲಭ್ಯವಿರುತ್ತದೆ. ಇಂತಹ ಸಂದರ್ಭದಲ್ಲಿ ಮೇದರಂತಹ ಬುಡಕಟ್ಟು ಸಮುದಾಯ ತಯಾರಿಸುವ ಕೈಗಾರಿಕೆ ವಸ್ತುಗಳ ಮಾರಾಟದಲ್ಲಿ ಸಾರಿಗೆ ವ್ಯವಸ್ಥೆ ಕಠಿಣವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿಯ ಸಂತೆ ಮತ್ತು ಜಾತ್ರೆ, ಉತ್ಸವದಂತಹ ಸಂದರ್ಭದಲ್ಲಿ ಇವರು ತಮ್ಮ ವಸ್ತುಗಳನ್ನು ಮಾರಲು ಲಭ್ಯವಿರುವ ರಸ್ತೆ (ಮೋಟಾರು) ಸಾರಿಗೆಯನ್ನೆ ಅವಲಂಬಿಸುವರು. ಈ

ವ್ಯವಸ್ಥೆಯಲ್ಲಿ ಕೆಲವೊಮ್ಮೆ ಹೆಚ್ಚಿನ ದುಡ್ಡು ಕೊಟ್ಟು ಹೋಗಬೇಕಾಗುತ್ತವೆ. ಕೆಲವೊಂದುಸಂದರ್ಭದಲ್ಲಿ ಇವರ ಪೂರ್ತಿ ವಸ್ತುಗಳನ್ನು ವಾಹನಗಳಲ್ಲಿ ಕೊಂಡೊಯ್ಯಲು ನಿರಾಕರಿಸುವರು. ಏಕೆಂದರೆ ಈ ವಸ್ತುಗಳು ಹೆಚ್ಚು ಜಾಗವನ್ನು ಆಕ್ರಮಿಸಿಕೊಳ್ಳುತ್ತವೆ. ಇಂತಹ ಸಂದರ್ಭದಲ್ಲಿ ಇವರು ಹತ್ತಾರು ಕಿಲೋಮೀಟರ್ ತಮ್ಮ ಮಾರಾಟದ ವಸ್ತುಗಳನ್ನು ತಲೆಯ ಮೇಲೆ ಹೊತ್ತು ಸಾಗುತ್ತಾರೆ.

ಇವರು ಡಿಪೋಗಳಲ್ಲಿ ಮಾರಾಟಮಾಡುವ ಬೊಂಬು, ಬಿದಿರು, ಕಡಪಾ, ಮುಂತಾದ ವಸ್ತುಗಳನ್ನು ನೂರಾರು ಕಿ.ಮೀ. ದೂರದಿಂದ ತರಬೇಕಾಗುತ್ತವೆ. ಇದಕ್ಕಾಗಿ ಹೆಚ್ಚಿನ ಸಾರಿಗೆವೆಚ್ಚವನ್ನು ಭರಿಸಬೇಕಾಗುವುದು. ಇವರು ಹೇಳುವಂತೆ ಕೆಲವೊಮ್ಮೆ ಕೊಂಡ ಬೆಲೆಯ ಅರ್ಧದಷ್ಟನ್ನು ಸಾರಿಗೆಯ ವೆಚ್ಚಕ್ಕೆ ಕೊಡಬೇಕಾಗಿರುತ್ತದೆ. ಇದರಿಂದ ಇವರ ಉತ್ಪಾದನಾವೆಚ್ಚ ಮತ್ತು ಮಾರಾಟದಬೆಲೆಕೂಡ ಅನಿವಾರ್ಯವಾಗಿ ಅಧಿಕವಾಗುತ್ತದೆ.

5.2.2. ಇ) ದಾಸ್ತಾನು ಸಮಸ್ಯೆ :

ಮೇದರ ಕುಲಕಸುಬಿಗೆ ಸಂಬಂಧಿಸಿದಂತೆ ದಾಸ್ತಾನು ಸಮಸ್ಯೆಯಲ್ಲಿ ಎರಡು ರೀತಿಯ ದಾಸ್ತಾನು ಸಮಸ್ಯೆಯನ್ನು ಇವರು ಎದುರಿಸುತ್ತಾರೆ. ಕಚ್ಚಾಬಿದಿರಿನ ದಾಸ್ತಾನು ಸಮಸ್ಯೆ ಮತ್ತು ತಯಾರಿಸಿದ ವಸ್ತುಗಳ ದಾಸ್ತಾನು ಸಮಸ್ಯೆ. ಮೇದರು ತಯಾರಿಸುವ ವಸ್ತುಗಳ ಕಚ್ಚಾ ಪದಾರ್ಥವಾದ ಬಿದಿರು ಮತ್ತು ಬೊಂಬು ವರ್ಷದ ಕೆಲವು ಋತುಮಾನಗಳಲ್ಲಿ ಮಾತ್ರ ಬೆಳೆದು ಕಟಾವಿಗೆ ಬರುತ್ತವೆ. ಆದರೆ ಇವುಗಳ ಉಪಯೋಗ ವರ್ಷವಿಡೀ ನಡೆದಿರುತ್ತದೆ. ಕಾರಣ ಕಟಾವು ಮಾಡಿದ ಬಿದಿರನ್ನು ಅವುಗಳು ನಾಶವಾಗದಂತೆ ಕಾಪಾಡುವುದು ಅಗತ್ಯ. ಬಿದಿರಿನ ತಳಿಗಳ ಆಧಾರಮೇಲೆ ಅವುಗಳು ಎಷ್ಟುಕಾಲ ಬಾಳುತ್ತವೆ ಎನ್ನುವುದು ಖಚಿತವಾಗಿಲ್ಲ. ಬಿದಿರಿನಲ್ಲಿ ಸಿಹಿಯಾದ ದ್ರವರೂಪದ ಪದಾರ್ಥವು ಅನೇಕ ಕೀಟಗಳನ್ನು ಆಕರ್ಷಿಸುತ್ತದೆ. ಹೀಗೆ ಕೀಟಗಳಿಂದ ಆಕರ್ಷಿತವಾದ ಬಿದಿರಿಗೆ ಮೂರು ವಿಧದ ಕಾಯಿಲೆಗಳು ಬರುತ್ತವೆ. ಕೊರೆಯುವ ಹುಳುವಿನ ಬಾಧೆ,(ಓಡುವ ಹುಳುವಿನಬಾಧೆ) ಇಂತಹ ರಕ್ಷಣೆಯ ಫಂಗಸ್ ಕ್ಷಯ,(ಡಿಕೋಕ್ಸ್‌ಫಂಗಿ) ಮತ್ತು ಚುಕ್ಕೆ ರೋಗ,(ಮೋಯ್‌ಲ್ಡ್‌ಫಂಗಿ). ಸರಕಾರವು ಕೆಲವು ಪ್ರದೇಶಗಳಲ್ಲಿ ಇದರ ಪರಿಹಾರ ಕಾರ್ಯದಲ್ಲಿ ತೊಡಗಿರುವುದು ಸ್ತುತ್ಯಾರ್ಹ.

ಕೊರೆಯುವ ಹುಳುವಿನ ಬಾಧೆ:- ಬಿದಿರಿನಲ್ಲಿನ ಸಿಹಿ ಅಂಶದಿಂದ ಆಹಾರಕ್ಕಾಗಿ ಕೊರೆಯುವ ಹುಳು ಆಕರ್ಷಿತವಾಗುತ್ತವೆ. ಈ ಹುಳುಗಳು ಬಿದಿರಿನ ಕಾಂಡ ಭಾಗದಲ್ಲಿ ಸೇರಿ ವಂಶಾಭಿವೃದ್ಧಿಯನ್ನು ಮಾಡುತ್ತವೆ. ಹುಳುಗಳು ಹೆಚ್ಚಾದಂತೆ ಬಿದಿರು ಪೊಳ್ಳಾಗಿ ನಾಶವಾಗುತ್ತದೆ.

ಫಂಗಸ್ ಕ್ಷಯ : - ಹೆಚ್ಚು ತೇವಾಂಶ ವಿದ್ದಾಗ ಫಂಗಸ್ ಸಾಮಾನ್ಯವಾಗಿ ಕಾಣಿಸುತ್ತದೆ. ಬಿದಿರನ ತೊಪ್ಪಲು ಹೆಚ್ಚು ತೇವಾಂಶಕ್ಕೆ ಒಳಗಾದಾಗ ಈ ಕಾಯಿಲೆ ಬರುತ್ತದೆ. ಇದರಿಂದ ಬಿದಿರಿನ ತೊಪ್ಪಲು ಸಂಪೂರ್ಣ ನಾಶವಾಗಿ ಕಾಂಡದ ಬೆಳವಣಿಗೆ ಕುಂಠಿತವಾಗುತ್ತದೆ.

ಚುಕ್ಕೆ ರೋಗ, : - ಬಿದಿರಿನ ಮೇಲ್ಮೈಗೆ ಕಪ್ಪು ಇಲ್ಲವೇ ಕಂದು ಬಣ್ಣದ ಚುಕ್ಕೆಗಳು ಬೀಳುತ್ತವೆ. ಬಿದಿರಿನ ಮೇಲ್ಮೈ ಈ ಚುಕ್ಕೆಗಳಿಂದ ಕುರೂಪಿಯಾಗಿ ಕಾಣುತ್ತದೆ. ಕುಲಕಸುಬಿನಿಂದ ತಯಾರಿಸುವ ಅಲಂಕಾರಿಕ ಮತ್ತು ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಇದು ತೊಂದರೆಯಾಗುತ್ತವೆ.

ಬಿದಿರಿಗೆ ತಗುಲುವ ರೋಗಗಳ ಚಿಕಿತ್ಸಾವಿಧಾನವು ಪೂರ್ವಕಾಲದಿಂದಲೇ ನಡೆದು ಬಂದಿದೆ. ಇವುಗಳನ್ನು ರೋಗದಿಂದ ರಕ್ಷಿಸಲು ಆಧುನಿಕ ಲಾಮಿನೇಷನ್, ವಾರ್ನೀಶ್, ಕಾಸ್ಟಿಕ್ ಸೋಡಾ, ಬೋರಿಕ್ ಆ್ಯಸಿಡ್, ಮುಂತಾದ ರೋಗ ನಿರೋಧಕ ಔಷಧಿಗಳನ್ನು ಬಳಸುತ್ತಾರೆ.

ಕಟಾವು ಮಾಡಿದ ಬಿದಿರನ್ನು ದಾಸ್ತಾನು ಮಾಡುವಾಗ ಈ ಎಲ್ಲಾ ತಂತ್ರಗಳನ್ನು ಬಳಸಿ ಅವುಗಳು ನಾಶವಾಗದಂತೆ ಕಾಪಾಡುತ್ತಾರೆ. ಡಿಪೋ ಹೊಂದಿದವರು ದಾಸ್ತಾನುಮಾಡಲು ನಿಯಮಿತ ಅವಧಿಯವರೆಗೆ ಮಾತ್ರ ಅಂದರೆ 15-30ದಿವಸಗಳವರೆಗೆ ಬೇಕಾಗುವಷ್ಟು ಬಿದಿರುಗಳನ್ನು ಮಾತ್ರ ಕೊಂಡುತಂದು ದಾಸ್ತಾನು ಮಾಡುತ್ತಾರೆ. ಏಕೆಂದರೆ ಇವುಗಳು ಹೆಚ್ಚು ಪ್ರದೇಶವನ್ನು ಆಕ್ರಮಿಸುವುದರಿಂದ ಬೃಹತ್‌ಪ್ರಮಾಣದಲ್ಲಿ ದಾಸ್ತಾನು ಮಾಡುವುದಿಲ್ಲ. ಇಡೀ ಬಿದಿರನ್ನು ತುಂಡು ಮಾಡಿ ದಾಸ್ತಾನು ಮಾಡುವುದು ಸಹ ಸಾಧ್ಯವಾಗುವುದಿಲ್ಲ. ಪ್ರಸ್ತುತ ಸರಕಾರವು ಒಕ್ಕಲು ತನ ಹುಟ್ಟುವಳಿಗಳ ದಾಸ್ತಾನು ಸೌಕರ್ಯವನ್ನು ಬಿದಿರಿನ ದಾಸ್ತಾನುಗಳಿಗೆ ಸಹ ವಿಸ್ತರಿಸುವುದು ಅವಶ್ಯವಿದೆ. ಮೇದರು ತಮ್ಮ ಮನೆಯಲ್ಲಿ ಕುಲಕಸುಬಿನಿಂದ ತಯಾರಿಸಿದ ವಸ್ತುಗಳನ್ನು ಅವುಗಳ ಮಾರಾಟದ ಸಮಯದವರೆಗೆ ದಾಸ್ತಾನು ಮಾಡಬೇಕಾಗಿರುತ್ತದೆ. ಕಾರಣ ತಯಾರಿಸಿದ ವಸ್ತುಗಳನ್ನು ಚಿಕ್ಕದಾದ ಮನೆಯಲ್ಲಿ ಅಡುಗೆಮನೆ, ಪಡಶಾಲೆ, ಎಲ್ಲೆಂದರಲ್ಲಿ ದಾಸ್ತಾನು ಮಾಡಿರುತ್ತಾರೆ. ಅನೇಕರು ಅವುಗಳನ್ನು ಮನೆಯ ಜಂತಿಗೆ(ಛಾವಣಿಗೆ) ತೂಗು ಹಾಕಿರುತ್ತಾರೆ. ಕಾರಣ ಸರಕಾರವು ಇವರು ತಯಾರಿಸಿದ ವಸ್ತುಗಳ ದಾಸ್ತಾನು ಮಳಿಗೆಗಳನ್ನು ಒದಗಿಸುವುದು ಅವಶ್ಯವಾಗಿದೆ. ಇಲ್ಲವೆ ನೇಕಾರರ ಕಸುಬಿಗೆ ಅನುಕೂಲವಾಗುವಂತಹ ಮನೆಯ ಯೋಜನೆಗಳನ್ನು, ಇವರಿಗೂ ಸಹ ವಿಸ್ತರಿಸಬೇಕು.

5.2.2.ಈ) ಸುಸಜ್ಜಿತವಲ್ಲದ ಮಾರುಕಟ್ಟೆಯ ವ್ಯವಸ್ಥೆ:

ಮಾರುಕಟ್ಟೆ ಎಂದರೆ ವಸ್ತುಗಳನ್ನು ಮಾರುವ ಮತ್ತು ಕೊಳ್ಳುವ ಒಂದು ನಿರ್ದಿಷ್ಟವಾದ ಸ್ಥಳವಾಗಿದೆ. ಆದರೆ, ವಿಶಾಲ ಅರ್ಥದಲ್ಲಿ ಮಾರುಕಟ್ಟೆ ಎಂದರೆ ಕೇವಲ ಒಂದು ಪ್ರದೇಶವಾಗಿರುವುದಿಲ್ಲ. ಟಾಸ್ಸೆ, ಕ್ಲಾರ್ಕ ಮತ್ತು ಕ್ಲಾರ್ಕ ಅವರ ಪ್ರಕಾರ ಮಾರುಕಟ್ಟೆ ಎಂದರೆ, ಯಾವುದೊಂದು ವಸ್ತುವಿನ ಒಡೆತನವನ್ನು ವರ್ಗಾಯಿಸುವ ಶಕ್ತಿಗಳು ಕಾರ್ಯ ಮಾಡುತ್ತಿರುವ ಕೇಂದ್ರವು ಅಥವಾ ಪ್ರದೇಶವು ಮಾರುಕಟ್ಟೆಯಾಗಿದೆ. ಇಲ್ಲಿಂದ ವಸ್ತುಗಳ ಸಾಗಾಟವಾಗಬಹುದು ಅಥವಾ ಇಲ್ಲಿಗೆ ಅವುಗಳ ಸಾಗಾಟವಾಗಬಹುದು.[6] ಕ್ಲಾರ್ಕ ಅವರ ವ್ಯಾಖ್ಯಾನ ಮೇದರಂತಹ ಕುಲಕಸುಬುವಸ್ತುಗಳ ಮಾರಾಟದಲ್ಲಿ ಕೆಲವು ಸಂದರ್ಭದಲ್ಲಿ ಮಾತ್ರ ಅನ್ವಯವಾಗುತ್ತದೆ. ಏಕೆಂದರೆ ಮೇದರು ತಾವು ತಯಾರಿಸಿದ ವಸ್ತುಗಳನ್ನು ಎರಡು ರೀತಿಯಲ್ಲಿ ಮಾರಾಟ ಮಾಡುತ್ತಾರೆ. ಮೊದಲನೆಯದು,

ಮುಕ್ತವಾಗಿ ಮತ್ತು ನೇರವಾಗಿ ಗ್ರಾಹಕರ ಮನೆಬಾಗಿಲಿಗೆ ಕೊಂಡೊಯ್ದು ಮಾರಾಟ ಮಾಡುವುದು. ಇನ್ನೊಂದು ರೀತಿಯಲ್ಲಿ ಇವರು ಸಂತೆ, ಜಾತ್ರೆ, ವಾರದ ದಿವಸ, ಜನ ಸೇರುವ ಪ್ರದೇಶದಲ್ಲಿ ಬೀದಿಯ ಪಕ್ಕದಲ್ಲಿ ತಮ್ಮ ವಸ್ತುಗಳ ಮಾರಾಟ ಮಾಡುತ್ತಾರೆ. ಇವರು ಆಯ್ದುಕೊಳ್ಳುವ ಮಾರುಕಟ್ಟೆಯಸ್ಥಳ ಬೀದಿಯಪಕ್ಕದ ಚರಂಡಿಮೇಲೆ, ಇಲ್ಲವೇ ಬೀದಿಯ ಕಸದಗುಂಡಿಯ ಪಕ್ಕದಲ್ಲಿರುತ್ತದೆ. (ಮೂರು ಮತ್ತು ನಾಲ್ಕನೇ ಛಾಯಾಚಿತ್ರವನ್ನು ಗಮನಿಸಿರಿ) ಮೇಲೆ ಸೂರಿಲ್ಲದ, ಬಯಲು ಪ್ರದೇಶಗಳೆ ಇವರ ಮಾರಾಟದ ಮಾರುಕಟ್ಟೆ ತರಕಾರಿ, ಹೂವು, ಮಾಂಸ, ಮೀನು, ಪಾದರಕ್ಷೆ ಮುಂತಾದ ವಸ್ತುಗಳ ವಿಧದ ಮಾರುಕಟ್ಟೆಗಳಿವೆ. ಇವರು ತಯಾರಿಸುವ ವಸ್ತುಗಳಿಗಾಗಿ ನಿರ್ದಿಷ್ಟವಾದ ಮಾರುಕಟ್ಟೆಯ ವ್ಯವಸ್ಥೆಇಲ್ಲ. ಇದರ ಕೊರತೆಯನ್ನು ಸಂಬಂಧ ಪಟ್ಟ ಇಲಾಖೆಯವರು ನೀಗಿಸಬೇಕಾಗಿದೆ. ಇದರಿಂದ ಇವರಿಗೆ ಸಾಮಾಜಿಕ ಮತ್ತು ವಾಣಿಜ್ಯ ನೀತಿಯ ಅಸಮಾನತೆಯನ್ನು ಹೋಗಲಾಡಿಸಿ ನ್ಯಾಯ ಒದಗಿಸಿ ಕೊಟ್ಟಂತಾಗುತ್ತದೆ.

5.2.2.ಉ) ಗ್ರಾಹಕರ ಸಮಸ್ಯೆ:

ಮಾರಾಟ ಪ್ರಕ್ರಿಯೆಯ ಸಮಸ್ಯೆಗಳಲ್ಲಿ ಮಾರಾಟಗಾರರು ಗ್ರಾಹಕರಕುರಿತಾದ ಸಮಸ್ಯೆಗಳನ್ನು ಅಥವಾ ಅನುಭೋಗಿಗಳ ವರ್ತನೆಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಏಕೆಂದರೆ, ಮಾರಾಟ ಪ್ರಕ್ರಿಯೆಯ ಯಶಸ್ಸು ಅನುಭೋಗಿಗಳ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಕೊಳ್ಳುವ ಮಾದರಿಯ ರೂಪದಲ್ಲಿ ವ್ಯಕ್ತಪಡಿಸುವ ಪ್ರತಿಕ್ರಿಯೆಗಳನ್ನು ಅವಲಂಬಿಸಿರುತ್ತದೆ. ಪ್ರಸ್ತುತ ಗ್ರಾಹಕ ಮತ್ತು ಅನುಭೋಗಿ ಪದಗಳನ್ನು ಪರ್ಯಾಯ ಪದಗಳಾಗಿ ಇಲ್ಲಿ ಬಳಸಲಾಗಿದೆ. ವೆಬ್‌ಸ್ಟರ್ ಅವರ ಪ್ರಕಾರ ಅನುಭೋಗಿಗಳ ವರ್ತನೆಯೆಂದರೆ ಸಂಭವನೀಯ ಗ್ರಾಹಕರ ಮಾನಸಿಕ, ಸಾಮಾಜಿಕ ಮತ್ತು ಭೌತಿಕ ವರ್ತನೆಯಾಗಿದೆ. ಅವರಿಗೆ ಸರಕು ಮತ್ತು ಸೇವೆಗಳ ಬಗೆಗೆ ಅರಿವಾದಂತೆ ಅವರು ಅವುಗಳನ್ನು ಮೌಲ್ಯೀಕರಿಸುತ್ತಾರೆ, ಕೊಂಡುಕೊಳ್ಳುತ್ತಾರೆ, ಅನುಭೋಗಿಸುತ್ತಾರೆ ಮತ್ತು ಅವುಗಳ ಬಗ್ಗೆ ಇತರರಿಗೆ ಹೇಳುತ್ತಾರೆ.[7] ಅನುಭೋಗಿಗಳ ವರ್ತನೆಯು ಮಾನಸಿಕವಾಗಿರುತ್ತದೆ. ಯಾವ ಸರಕುಗಳನ್ನು ಎಲ್ಲಿ, ಯಾವಾಗ, ಯಾರಿಂದ, ಎಷ್ಟು ಪ್ರಮಾಣದಲ್ಲಿ ಕೊಳ್ಳಬೇಕು ಎನ್ನುವುದನ್ನು ನಿರ್ಧರಿಸುತ್ತದೆ. ಅನುಭೋಗಿಗಳ ಕೊಳ್ಳುವ ವರ್ತನೆಯನ್ನು ಕೆಲವು ಅಂಶಗಳು ನಿರ್ಧರಿಸುತ್ತವೆ. ಅವುಗಳೆಂದರೆ, ಉತ್ತೇಜಕಗಳು, ವಾಹಕಗಳು, ಸಂಸ್ಕರಣ,ಮತ್ತು ಫಲಿತಾಂಶ.

ಉತ್ತೇಜಕಗಳು : ಉತ್ತೇಜಕಗಳು ಗ್ರಾಹಕನ ಕೊಳ್ಳುವಶಕ್ತಿ, ಆಂತರಿಕ ಅಂಶಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು, ಮಾರಾಟದ ಪ್ರಕ್ರಿಯೆ ಮಿಶ್ರಣ, ಪರಿಸರದ ಅಂಶಗಳನ್ನು ಒಳಗೊಂಡಿರುತ್ತವೆ. ಮೇದರು ತಯಾರಿಸುವ ಅನೇಕ ವಸ್ತುಗಳನ್ನು ಗ್ರಾಹಕರು ತನ್ನ ನಿತ್ಯ ಜೀವನದಲ್ಲಿ ಬಳಸುತ್ತಾರೆ. ಸಾಮಾಜಿಕ ಜೀವನದಲ್ಲಿ ಗೃಹಬಳಕೆಗಾಗಿ, ತನ್ನ ಕೃಷಿ, ವಾಣಿಜ್ಯ ಮುಂತಾದ ವೃತ್ತಿಯಲ್ಲಿ ಬಳಸುತ್ತಾನೆ. ಸಾಂಸ್ಕೃತಿಕ ಅಂಶಗಳಾದ, ಜನನದಿಂದ ಮರಣದವರೆಗಿನ

ಅನೇಕ ಆಚರಣೆಗಳಲ್ಲಿ ಸಾಂಪ್ರದಾಯಿಕ ಮತ್ತು ಧಾರ್ಮಿಕ ಆಚರಣೆಗಳಲ್ಲಿಕೂಡ ಬಳಸುವುದು ಸಹಜ. ವಿವಿಧ ಸಂದರ್ಭಗಳಲ್ಲಿ ಗ್ರಾಹಕನ ಕೊಳ್ಳುವ ಪ್ರತಿಕ್ರಿಯೆ ವಿಭಿನ್ನವಾಗಿರುತ್ತದೆ. ಸಂದರ್ಭಕ್ಕೆ ತಕ್ಕಂತೆ ಗ್ರಾಹಕರು ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ಅರಿತುಕೊಂಡು ವಸ್ತುಗಳನ್ನು ಕೊಂಡು ಕೊಳ್ಳುತ್ತಾರೆ.

ವಾಹಕಗಳು: ಜಾಹಿರಾತು, ಪ್ರಚಾರ, ಮಾರಾಟದ ಪ್ರವರ್ತನೆ, ಕುಟುಂಬದ ಅವಶ್ಯಕತೆಗಳು ಮತ್ತು ವೈಯಕ್ತಿಕ ಪ್ರಾಶಸ್ತ್ಯಗಳು ಗ್ರಾಹಕನ ಕೊಳ್ಳುವ ವರ್ತನೆಯನ್ನು ನಿರ್ಧರಿಸುವ ವಾಹಕ ಅಂಶಗಳಾಗಿವೆ. ಮಾನವ ತನ್ನ ದೈನಂದಿನ ಜೀವನದ ಆಚರಣೆಗಳ ಅವಶ್ಯಕತೆಗೆ ತಕ್ಕಂತೆ ಮೇದರು ತಯಾರಿಸುವ ವಸ್ತುಗಳನ್ನು ಕೊಂಡು ಕೊಳ್ಳುತ್ತಾನೆ. ಇವುಗಳ ಮೇಲೆ ಹೆಚ್ಚು ಜಾಹಿರಾತು ಮತ್ತು ಪ್ರಚಾರಗಳು ಪ್ರಭಾವವನ್ನು ಬೀರುವುದಿಲ್ಲ. ಹೆಚ್ಚಾಗಿ ಬಯಲು ಸೀಮೆಯ ಪ್ರದೇಶದಲ್ಲಿ ವಾಸಿಸುವವರು ತಮ್ಮ ನಿತ್ಯ ಬಳಕೆಯಲ್ಲಿ ಮೊರ, ಚಿಬ್ಬಲಿ, ಸಂಬಳಿಗೆ ಮುಂತಾದವುಗಳನ್ನು ಬಳಸುವುದು ಅನಿವಾರ್ಯವಾಗಿದೆ. ಕಾರಣ ಇವುಗಳನ್ನು ಕೊಳ್ಳುವುದು ಇಲ್ಲಿ ಅವಶ್ಯ ಮತ್ತು ಅನಿವಾರ್ಯವಾಗಿದೆ.

ಸಂಸ್ಕರಣ : ಯೋಜನೆಯ ಪ್ರಕ್ರಿಯೆ, ಪ್ರೇರಣೆಗಳು, ಪ್ರವೃತ್ತಿ ಹಿಂದಿನ ಅನುಭವ ಮೌಲ್ಲೀಕರಣ, ಕೊಳ್ಳುವ ಅಥವಾ ಕೊಳ್ಳದಿರುವ ತೀರ್ಮಾನ, ಇವು ಸಂಸ್ಕರಣದ ಅಂಶವನ್ನು ನಿರ್ಧರಿಸುವ ಉಪ ಅಂಶಗಳಾಗಿವೆ. ಮೇದರು ತಯಾರಿಸುವ ವಸ್ತುಗಳನ್ನು ಹೆಚ್ಚಾಗಿ, ಕೊಳ್ಳುವ ಅನುಭವ ಇರುವವರು ಮಾತ್ರ ಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಇವರು ಹಿಂದಿನ ಅನುಭವದ ಪ್ರಕಾರ ಪೂರ್ವಗ್ರಹ ಪೀಡಿತ ಬೆಲೆಕಟ್ಟುವ ವರ್ತನೆಯನ್ನು ಹೊಂದಿರುತ್ತಾರೆ. ಅಂದರೆ, ಮಾರುವವರು ಎಷ್ಟೇ ಬೆಲೆಯನ್ನು ಹೇಳಲೀ ಇವರು ಅದರ ಅರ್ಧದ ಬೆಲೆಯನ್ನು ಕೇಳುವುದು, ಇಲ್ಲವೇ ವರ್ಷಾರು ತಿಂಗಳ ಹಿಂದೆ ಕೊಂಡು ಕೊಂಡ ಬೆಲೆಯನ್ನು ಪ್ರಸ್ತಾಪಿಸಿ ತರ್ಕ ಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಜೊತೆಗಾರರ ಪ್ರೇರಣೆಗೆ ಒಳಪಟ್ಟು ವಸ್ತುಗಳನ್ನು ಕೊಂಡುಕೊಳ್ಳುವರು. ಅನೇಕಸಾರಿ ಗ್ರಾಹಕರು ಅವಶ್ಯಕತೆ ಇಲ್ಲದಿದ್ದರು ಸಹ ಕೊಂಡುಕೊಳ್ಳುವುದು ಸಹಜ. ಮತ್ತೆ ಕೆಲವು ಸಂದರ್ಭದಲ್ಲಿ ಅವಶ್ಯಕತೆ ಇದ್ದರೂ ಸಹ ಕೊಳ್ಳುವುದನ್ನು ಮುಂದೂಡುತ್ತಾರೆ. ಇದರಿಂದ ಉತ್ಪಾದಕ-ಮಾರಾಟಗಾರರಿಗೆ ಗ್ರಾಹಕರ ಬೇಡಿಕೆಯ ಮಟ್ಟವನ್ನು ಅಳೆಯುವುದು ಕಷ್ಟವಾಗುತ್ತದೆ. ಜನನ-ಮರಣ-ಮದುವೆಯಂತಹ ಸಂದರ್ಭಗಳಲ್ಲಿ ಮಾರುವವರು ಹೇಳಿದ ಬೆಲೆಗೆ ಅನಿವಾರ್ಯವಾಗಿ ಕೊಂಡು ಕೊಳ್ಳುತ್ತಾರೆ.

ಫಲಿತಾಂಶ : ಫಲಿತಾಂಶದ ಅಂಶವನ್ನು ವಸ್ತುವಿನ ಆಯ್ಕೆ, ಮುದ್ರೆಯ ಆಯ್ಕೆ, ವ್ಯಾಪಾರಸ್ಥನ ಆಯ್ಕೆ, ವಸ್ತುವನ್ನು ಬಳಸುವಾಗಿನ ವರ್ತನೆ, ವಸ್ತುವನ್ನು ಕೊಂಡ ನಂತರದ ಅನುಭವಗಳು ಫಲಿತಾಂಶದ ಉಪಾಂಶಗಳಾಗಿವೆ. ಎಲ್ಲಾ ಪ್ರದೇಶದಲ್ಲಿ ಬಿದಿರಿನಿಂದ ತಯಾರಿಸಿದ ಏಕರೀತಿಯಾದ ವಸ್ತುಗಳನ್ನು ಉಪಯೋಗಿಸುವುದಿಲ್ಲ. ಬಳಕೆಯ ಉದ್ದೇಶ ಒಂದೇಯಾಗಿದ್ದರೂ ವಸ್ತುವಿನ ವಿನ್ಯಾಸ ಮತ್ತು ಆಕಾರದಲ್ಲಿ ಬದಲಾವಣೆ ಇರುತ್ತವೆ. ಇವರ ವಸ್ತುಗಳ ಆಯ್ಕೆಯು ಪ್ರದೇಶದಿಂದ ಪ್ರದೇಶಕ್ಕೆ ವಿಭಿನ್ನವಾಗಿರುತ್ತದೆ. ಮತ್ತು ಕೆಲವು ಸಮುದಾಯದವರು ಸಾಂಪ್ರದಾಯಿಕವಾಗಿ ಕೆಲವು

ವಸ್ತುಗಳನ್ನು ಉಪಯೋಗಿಸದಿರುವುದು ಕಂಡುಬರುವುದು. ಆಗ ವಸ್ತುವಿನ ಬೆಲೆ ಮತ್ತು ಗುಣಮಟ್ಟ ಯಾವುದೇ ಪ್ರಭಾವ ಬೀರುವುದಿಲ್ಲ. ವಸ್ತುವನ್ನು ಬಳಸುವಾಗ ಅದರ ಘಟ್ಟತನ, ಬಾಳಿಕೆಯ ಮತ್ತು ಉಪಯೋಗದ ನಂತರದ ಫಲಿತಾಂಶವನ್ನು ಇವರು ಗಮನದಲ್ಲಿಟ್ಟುಕೊಂಡು ಕೊಳ್ಳುತ್ತಾರೆ. ಅಲ್ಲದೇ ಯಾರಿಂದ ಕೊಳ್ಳಬೇಕೆಂದು ನಿರ್ಧರಿಸಿ ಕೊಂಡು ಕೊಳ್ಳುತ್ತಾರೆ. ಇಲ್ಲಿ ವಸ್ತುವನ್ನು ಅಳೆಯುವ ಮಾನದಂಡ ನಂಬಿಕೆ ಮಾತ್ರ. ಗ್ರಾಹಕರಿಗೆ ಮುದ್ರೆ ಇಲ್ಲದ ವಸ್ತುಗಳನ್ನು ಕೊಳ್ಳುವ ಸಂದರ್ಭದಲ್ಲಿ ವ್ಯಾಪಾರಸ್ಥರ ನಂಬಿಕೆ ಬಹಳ ಮುಖ್ಯವಾಗಿರುತ್ತದೆ. ವಸ್ತುವಿನ ಬಳಕೆಯ ನಂತರ ಅದರ ಫಲಿತ ಅವರಿಗೆ ತೃಪ್ತಿಯನ್ನು ಕೊಡದಿದ್ದರೆ, ನಂಬಿಕೆಗೆ ಧಕ್ಕೆ ಬರುತ್ತದೆ.

ಊ) ಸಮುದಾಯದವರಿಂದಲೇ ಪೈಪೋಟಿ :

ಪ್ರಸ್ತುತ ಜಗತ್ತು ಸ್ಪರ್ಧಾತ್ಮಕ ಜಗತ್ತು ಇಲ್ಲಿ ಎಲ್ಲರೂ ಸ್ಪರ್ಧೆಯನ್ನು ಎದುರಿಸುವುದು ಅನಿವಾರ್ಯ. ಯಾವುದೇ ವಸ್ತುವಿನ ಉತ್ಪಾದನೆ ಮತ್ತು ಮಾರಾಟದಲ್ಲಿ ಅರ್ಥಶಾಸ್ತ್ರದ ಪರಿಧಿಯಲ್ಲಿ ಹಲವು ವಿಧವಾದ ಪೈಪೋಟಿಗಳಿವೆ. ಪ್ರತಿಯೊಬ್ಬ ಉತ್ಪಾದಕನು ತನ್ನ ವಸ್ತುವನ್ನು ಮಾರಾಟ ಮಾಡುವುವಾಗ ಎದುರಿಸಬಹುದಾದ ಪೈಪೋಟಿಯ ವಿಧಾನವನ್ನು ಗಮನದಲ್ಲಿರಿಸಿಕೊಂಡು ಮಾರಾಟದ ತಂತ್ರಗಳನ್ನು ರೂಪಿಸುತ್ತಾನೆ. ಪ್ರತಿಸ್ಪರ್ಧಿಗಳು ಅನುಸರಿಸುವ ಪೈಪೋಟಿಯ ವಿಧಿ ವಿಧಾನಗಳನ್ನು ಪ್ರಮುಖವಾಗಿ ಗಮನಿಸಲೇಬೇಕಾಗಿರುತ್ತದೆ. ಮೇದರು ತಯಾರಿಸಿ ಮಾರಾಟ ಮಾಡುವ ವಸ್ತುಗಳಲ್ಲಿ ಸಮುದಾಯದವರೇ ಪ್ರತಿಸ್ಪರ್ಧಿಗಳು. ಕೆಲವೊಂದು ಪ್ರದೇಶದಲ್ಲಿ ಮಾತ್ರ ಅನ್ಯ ಸಮುದಾಯದವರು ಇವರಿಗೆ ಪೈಪೋಟಿ ಒಡ್ಡುತ್ತಾರೆ. ಕೆಲವೊಂದುಸಾರಿ ಸಮುದಾಯದವರೆಲ್ಲ ಸೇರಿ ನಿರ್ದಿಷ್ಟ ವಸ್ತುವಿನ ಕನಿಷ್ಠ ಬೆಲೆಯನ್ನು ನಿಗದಿ ಪಡಿಸುವರು. ಇನ್ನು ಕೆಲವು ಪ್ರದೇಶಗಳಲ್ಲಿ ಜಾತಿಯ ಯಜಮಾನನ ಸಮ್ಮುಖದಲ್ಲಿ ಮಾರಾಟ ಮಾಡುವ ವಸ್ತುವಿನ ಕನಿಷ್ಠಬೆಲೆಯನ್ನು ಪಂಚಾಯಿತಿಯ ಮೂಲಕ ನಿರ್ಧರಿಸಿರುತ್ತಾರೆ. ಯಾರಾದರೂ ಕನಿಷ್ಟ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿದರೆ ಸಮುದಾಯದಿಂದ ದಂಡ ವಿಧಿಸುವರು. ಅನೇಕ ಸಂದರ್ಭದಲ್ಲಿ ಸಮುದಾಯದವರೊಡನೆ ಜಗಳ ಮತ್ತು ನಿಷ್ಠುರತೆ ಅನಿವಾರ್ಯವಾಗುವುದು. ಇವರ ಉತ್ಪಾದನೆ ಮತ್ತು ಮಾರಾಟ ಪ್ರಕ್ರಿಯೆಯಲ್ಲಿ ಬಳಸುವ ತಂತ್ರಗಳಿಗಿಂತ ಸಮುದಾಯ ಮತ್ತು ಸಮಾಜದ ಜೊತೆಯ ಹೊಂದಾಣಿಕೆ ಮತ್ತು ಬಾಂಧವ್ಯ ಪ್ರಮುಖವಾಗಿರುತ್ತದೆ. ಇಂತಹ ಸಾಮಾಜಿಕ ಭಾವನಾತ್ಮಕ ಸಂಬಂಧ ಮನುಷ್ಯನ ವ್ಯಾಪಾರದ ಮೌಲ್ಯಗಳನ್ನು ಹೆಚ್ಚಿಸುತ್ತವೆ, ಬಹಳ ಕಾಲ ಸ್ಥಿರವಾಗಿರುತ್ತವೆ. ಅಂತೆಯೇ ಇವರ ಕಸುಬಿನ ಗುಟ್ಟು ಪಾರಂಪರಿಕವಾಗಿ ಇವರಲ್ಲಿಯೇ ಉಳಿದು ಬಂದಿದೆ. ಇವರಲ್ಲಿಯ ಹೊಂದಾಣಿಕೆಯು ಚೆನ್ನಾಗಿದ್ದು ಗ್ರಾಹಕ ತನ್ನ ಜಾಣತನವನ್ನು ಪ್ರದರ್ಶಿಸಿದರೆ, ಇವರು ತಮ್ಮ ವಾಣಿಜ್ಯ ಭಾಷೆಯ ಮೂಲಕ ಮಾತನಾಡಿಕೊಂಡು ಅಂತಹ ಗ್ರಾಹಕನನ್ನು ನಿಯಂತ್ರಿಸುತ್ತಾರೆ. ಇವರ ಪೈಪೋಟಿಯಲ್ಲಿ ವಾಣಿಜ್ಯದ ನೈತಿಕ ಮೌಲ್ಯಗಳು ಪ್ರಮುಖ ಪಾತ್ರವಹಿಸುತ್ತವೆ.

ಋ) ವಸ್ತು ವಿನಿಮಯ ಪದ್ಧತಿಯ ಅನಿವಾರ್ಯತೆ :

ಈ ಶತಮಾನದಲ್ಲಿಯೂ ಸಹ ವಸ್ತು ವಿನಿಮಯ ಪದ್ಧತಿಯು ರೂಢಿಯಲ್ಲಿದೆ ಎಂದರೆ ಆಶ್ಚರ್ಯವಾಗಬಹುದು. ವಸ್ತು ವಿನಿಮಯ ಪದ್ಧತಿಯು ವಾಣಿಜ್ಯದ ಆದಿಮ ವಿನಿಮಯ ಪದ್ಧತಿಯಾಗಿದೆ. ವಾಣಿಜ್ಯದ ಉಗಮದಲ್ಲಿ ವಿನಿಮಯ ಮಾಧ್ಯಮದ ಕೊರತೆ ಇದ್ದಾಗ ವಸ್ತು ವಿನಿಮಯ ಪದ್ಧತಿಯು ಪ್ರಚಲಿತದಲ್ಲಿತ್ತು. ವಸ್ತುವಿನ ನಿಖರವಾದ ಮೌಲ್ಯವನ್ನು ಮಾಪನ ಮಾಡಬೇಕಾದಾಗ ವಿನಿಮಯ ಮಾಧ್ಯಮದ ಬೆಳವಣಿಗೆಯಾಯಿತು. ಪ್ರಸ್ತುತ, ಜಗತ್ತಿನಲ್ಲಿ ವಿನಿಮಯಕ್ಕೆ ಒಳಪಡುವ ವಸ್ತುವಿನ ಮೌಲ್ಯವನ್ನು ನಿಖರವಾಗಿ ಅಳೆಯುವ ಮಾನದಂಡಗಳು ಅಸಂಖ್ಯಾತ. ಇಂದಿನ ವೈಜ್ಞಾನಿಕ ಮತ್ತು ಆಧುನಿಕ ಮಾರುಕಟ್ಟೆಯ ಯುಗದಲ್ಲಿ ವಸ್ತುವಿನಿಮಯ ಪದ್ದತಿ ಜಾರಿಯಲ್ಲಿದೆ ಎಂದರೆ ಇದು ನಂಬಿ ಅಳವಡಿಸಿಕೊಂಡವರ ಅನಿವಾರ್ಯತೆ. ಪ್ರಸ್ತುತ ವಸ್ತುವಿನಿಮಯ ಪದ್ದತಿಯ ಅವಶ್ಯಕತೆಗಿಂತಲೂ ಅನಿವಾರ್ಯವನ್ನು ಇಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ. ಈ ಸಂದಿಗ್ಧ ಪರಿಸ್ಥಿತಿ ಮೇದರಂತಹ ಬುಡಕಟ್ಟು ಸಮುದಾಯದವರ ವಾಣಿಜ್ಯದಲ್ಲಿ ಕಂಡುಬರುತ್ತದೆ. ಮೇದರು ತಮ್ಮ ಉತ್ಪಾದಿತ ವಸ್ತುಗಳನ್ನು ಮಾರಾಟಮಾಡಲು, ಹಳ್ಳಿ, ಹಟ್ಟಿ, ತಾಂಡಾ, ಮುಂತಾದಪ್ರದೇಶಗಳಿಗೆ ಹೋಗುತ್ತಾರೆ. ಅಲ್ಲಿ ಇವರ ವಸ್ತುವನ್ನು ವ್ಯವಸಾಯೋತ್ಪನ್ನಗಳೊಂದಿಗೆ ವಿನಿಮಯ ಮಾಡಿಕೊಳ್ಳಲು ಒತ್ತಾಯವಿರುತ್ತದೆ. ಆ ಜನರು ಹೊಂದಿರುವ ಕಾಳು-ಕಡಿ, ಹಣ್ಣು-ತರಕಾರಿಗಳ ಜೊತೆ ಇವರು ತಮ್ಮ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ವ್ಯಾಪಾರಕ್ಕೆ ಹೋಗಿ ಮತ್ತೆ ತಿರುಗಿಬರುವಾಗ ಭಾರವಾದ ಮೂಟೆಗಳನ್ನು ಹೊತ್ತು ಸಾಗುವ ಇವರ ಅನಿವಾರ್ಯತೆಯನ್ನು ಇವರು ಸಹಿಸಿಕೊಳ್ಳುತ್ತಾರೆ. ಮತ್ತೆ ಕೆಲವು ಪ್ರದೇಶಗಳಲ್ಲಿ ಆಯಕಾರ ಪದ್ಧತಿಯನ್ನು ಇವರ ಮೇಲೆ ಸಹ ಹೇರಲು ಒತ್ತಡವಿರುತ್ತದೆ. ಆಧುನಿಕ ಮಾರುಕಟ್ಟೆಯಲ್ಲಿ ಇವರದು ಆದಿಮ ವಹಿವಾಟು ಎಂದರೆ ತಪ್ಪಲ್ಲ.

ಎ) ಸಾಮಾಜಿಕ ಅಸಮಾನತೆ :

ಸಮಾನತೆಯನ್ನು ಪ್ರತಿಯೊಂದು ಸಮುದಾಯದವರು ಈ ಸಮಾಜದಲ್ಲಿ ಬಯಸುವುದು ಸಹಜ. ಸಾಮಾಜಿಕ ಅಸಮಾನತೆ ವ್ಯವಸ್ಥಿತವಾಗಿ ಈ ದೇಶದಲ್ಲಿ ನಡೆದುಬಂದಿರುವುದು ಒಂದು ದುರಂತದ ಕಥೆ. ಮಾನವನ ಆರ್ಥಿಕ, ಮತ್ತು ವಾಣಿಜ್ಯದ ಚಟುವಟಿಕೆಗಳು ಸಮಾಜದ ಮೇಲೆ ಪ್ರಭಾವವನ್ನು ಬೀರುತ್ತವೆ. ಉತ್ಪಾದಕನು ವಸ್ತುವಿನ ಉತ್ಪಾದನೆಯಲ್ಲಿ ಬಳಸಿದ ಆಕರಗಳು, ಅದರ ವಿನ್ಯಾಸ, ವಸ್ತುವಿನ ಸಾಂಸ್ಕೃತಿಕ ಹಿನ್ನೆಲೆ ಮತ್ತು ಆವಿಷ್ಕಾರ ಇವೆಲ್ಲವೂ ಸಮಾಜದ ಮೇಲೆ ಪ್ರಭಾವ ಬೀರುತ್ತವೆ. ಉತ್ಪಾದಕರು ಮತ್ತು ಮಾರಾಟಗಾರರು ಮನಸ್ಸು ಮಾಡಿದರೆ, ಗ್ರಾಹಕರ ಅನುಭೋಗದ ಮಾದರಿಯನ್ನೇ ಬದಲಾಯಿಸಬಹುದು. ಪ್ರಸ್ತುತ ಸಂದರ್ಭದಲ್ಲಿ ಮುಂದುವರಿದ ರಾಷ್ಟ್ರಗಳಲ್ಲಿ ತಲೆಎತ್ತಿರುವ ಆಹಾರತಯಾರಿಕೆಯ ಬೃಹತ್ ಕಾರ್ಖಾನೆಗಳಿಂದ ಅಡುಗೆಮನೆಯ ಸಂಸ್ಕೃತಿಯೇ ಸಂಪೂರ್ಣ ನಾಶವಾಗಿರುವುದು ಕಂಡುಬರುತ್ತದೆ. ಮಾರಾಟ ಪ್ರಕ್ರಿಯೆ ಹಾಗೂ ಸಮಾಜ ಎರಡೂ ಯಾವಾಗಲೂ ಕೂಡಿ

ಸಾಗಿರುತ್ತವೆ. ಇವೆರಡರ ನಡುವೆ ಅವಿನಾಭಾವ ಸಂಬಂಧವಿರುತ್ತದೆ. ಒಂದು ಇನ್ನೊಂದರ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುತ್ತದೆ. ಮೊಗಳ್ಳಿ ಗಣೇಶ್ ಅವರು ಹೇಳುವಂತೆ ಈ ಗ್ರಾಹಕ ಯುಗದಲ್ಲಿ ವಸ್ತುಗಳು ಮನುಷ್ಯನನ್ನು ಕೊಂಡುಕೊಳ್ಳುತ್ತಿವೆಯೋ, ಮನುಷ್ಯನೇ ಮಾರುಕಟ್ಟೆಗೆ ತನ್ನನ್ನು ಮಾರಿಕೊಳ್ಳುತ್ತಿರುವನೋ ಅಥವಾ ಮನುಷ್ಯನೇ ಉತ್ಪಾದಕತೆಗೆ ಪ್ರಧಾನ ಆಕರವಾಗುತ್ತಿದ್ದಾನೋ ಎಂಬ ಗೊಂದಲಗಳಿವೆ.[8] ಇವರ ಹೇಳಿಕೆಯಂತೆ ಪ್ರಸ್ತುತ ಗ್ರಾಹಕ ಪ್ರಧಾನ ಆಧುನಿಕ ಮಾರುಕಟ್ಟೆಯಲ್ಲಿ ಗ್ರಾಹಕನ ಪಾರಂಪರಿಕ ಸಾಂಸ್ಕೃತಿಕ ಅಭಿರುಚಿಗಳು ಬದಲಾಗುತ್ತಿರುವುದು ಗಮನಾರ್ಹ. ಇದು ಸಮಾಜದ ಮೂಲ ಮೌಲ್ಯಗಳಮೇಲೆ ಪ್ರಭಾವ ಬೀರುತ್ತದೆ.

ಸಮಾಜದಲ್ಲಿ ಇಂದಿನ ಮಾರಾಟ ಪ್ರಕ್ರಿಯೆಯಲ್ಲಿ ಉತ್ಪಾದಕ ಮತ್ತು ಮಾರಾಟಗಾರ ಗ್ರಾಹಕರ ಮೇಲೆ, ಮತ್ತು ಗ್ರಾಹಕ ಉತ್ಪಾದಕ ಮತ್ತು ಮಾರಾಟಗಾರರ ಮೇಲೆ ಪ್ರಭಾವ ಬೀರುತ್ತಾನೆ. ಮೇದರು ತಯಾರಿಸಿ ಮಾರುವ ಬಿದಿರಿನ ವಸ್ತುಗಳ ಮಾರಾಟದ ಮೇಲೆ ಸಮಾಜ ಮತ್ತು ಸಮಾಜದ ಮೇಲೆ ಮೇದರು ಪ್ರಭಾವವನ್ನು ಬೀರುತ್ತಾರೆ. ಇವರ ಉತ್ಪಾದನೆ ಮತ್ತು ವಸ್ತುಗಳ ಮಾರಾಟ ದೇಶೀಯ ಸಂಸ್ಕೃತಿಯ ಉಳಿವಿಗಾಗಿ ನಡೆಸಿದ ಹೋರಾಟವಾಗಿದೆ. ಆದರೆ ಇವರು ಈ ಸಂದರ್ಭದಲ್ಲಿ ಸಾಮಾಜಿಕ ಅಸಮಾನತೆಯ ಅನೇಕ ಸಂಕಷ್ಟಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ಅಂದರೆ ಸಮಾಜದಲ್ಲಿ ಇವರನ್ನು ಮತ್ತು ಇವರ ಕಸುಬನ್ನು ಹೀನವಾಗಿ ಕಾಣುವರು. ಅನ್ಯಸಮುದಾಯದವರು ಇವರ ಮನೆಗಳ ಓಣಿಯಲ್ಲಿ ನೆಲೆಸಲು ಹಿಂಜರಿಯುತ್ತಾರೆ. ಮಾರುಕಟ್ಟೆ ಮತ್ತು ಬೀದಿಗಳಲ್ಲಿ ನಿವೇಶನಗಳನ್ನು ಕೊಳ್ಳುವಾಗ ಪಕ್ಕದನಿವಾಸ ಮೇದರರದಾಗಿದ್ದರೆ ತಾವುಕೈಗೊಳ್ಳುವ ವ್ಯಾಪಾರಕ್ಕೆ ಎದುರಾಗಬಹುದಾದ ಅನಾನುಕೂಲತೆ ಮತ್ತು ಸಾಮಾಜಿಕ ಗೌರವವನ್ನು ಅನಾವಶ್ಯವಾಗಿ ಕಲ್ಪಿಸಿಕೊಂಡು ನಿರ್ಧಾರವನ್ನು ಬದಲಾಯಿಸುತ್ತಾರೆ. ಮೇದರು ತಮ್ಮ ವಸ್ತುಗಳನ್ನು ಮಾರಾಟ ಮಾಡಲು ಹಳ್ಳಿಮತ್ತು ಶಹರ ಪ್ರದೇಶಗಳಿಗೆ ಹೋದಾಗ ಇವರನ್ನು ಅಸ್ಪೃಶ್ಯರಂತೆ ನೋಡುವರು. ಸಾರ್ವಜನಿಕ ಪ್ರದೇಶಗಳಾದ ಸಾರಿಗೆ, ಹೋಟಲ್, ಖಾನಾವಳಿಗಳಲ್ಲಿ ಕೆಲವೊಮ್ಮೆ ಮೇದರು ಮತ್ತು ಕೊರಚರನ್ನು ಒಂದೇ ಎಂದು ಭಾವಿಸಿ ನಮ್ಮನ್ನು ಹೀನಾಯವಾಗಿ ಕಾಣುತ್ತಾರೆಂದು ಈ ಸಮುದಾಯದವರು ಹೇಳುವರು. ಇಂತಹ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಇವರ ವೃತ್ತಿಗೆ ಸಾಮಾಜಿಕ ಮನ್ನಣೆ ಮತ್ತು ಗೌರವ ಕೊಡಬೇಕು.

ಐ) ಬದಲಿ ವಸ್ತುಗಳ ಆಗಮನ :

ಬದಲಾಗುತ್ತಿರುವ ಗ್ರಾಹಕರ ಅಭಿರುಚಿಗೆ ತಕ್ಕಂತೆ ಮೇದರು ತಯಾರಿಸುವ ಬಿದಿರಿನ ಅನೇಕ ವಸ್ತುಗಳಿಗೆ ಬದಲೀವಸ್ತುಗಳು ಆಗಮಿಸಿರುವುದು ಇವರ ಕಸುಬಿಗೆ ಕೊಡಲಿ ಪೆಟ್ಟು ಬಿದ್ದಂತಾಗಿದೆ. ಬದಲಾದ ಉತ್ಪಾದನಾ ನೀತಿ ಮತ್ತು ಗ್ರಾಹಕರ ಅಭಿರುಚಿ ಮಾನವನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಮತ್ತು ಆರೋಗ್ಯದ ಮೇಲೆ ವ್ಯತಿರಿಕ್ತವಾದ ಪರಿಣಾಮ ಬೀರುತ್ತದೆ. ಬಿದಿರಿನಿಂದ ವಸ್ತುಗಳನ್ನು ತಯಾರಿಸುವಾಗ ಮತ್ತು ಉಪಯೋಗದ ನಂತರ

ಈ ವಸ್ತುವನ್ನು ಭೂಮಿಯ ಮೇಲೆ ಹಾಕುವುದರಿಂದ ಯಾವುದೇ ವಿಧವಾದ ಪರಿಸರಮಾಲಿನ್ಯ ಆಗುವುದಿಲ್ಲ. ಏಕೆಂದರೆ ಬಿದಿರು ಭೂಮಿಯಲ್ಲಿ ಸುಲಭವಾಗಿ ಕೊಳೆತು ಹೋಗುತ್ತದೆ. ಆದರೆ ಬಿದಿರಿನ ವಸ್ತುಗಳಿಗೆ ಬದಲಿಯಾಗಿ ಬಂದ ಪ್ಲಾಸ್ಟಿಕ್ ವಸ್ತುಗಳ ಬಳಕೆಯಿಂದ ಪರಿಸರಮಾಲಿನ್ಯ ವಾಗುತ್ತವೆ. ಇದರಿಂದ ಭೂಮಿಯ ಫಲವತ್ತತೆ ಕಡಿಮೆಯಾಗಿ ಬಂಜರುತನ ಮೂಡುತ್ತದೆ. ಇದು ಮುಂದಿನ ಪೀಳಿಗೆಗೆ ಭೂಮಾಲಿನ್ಯದ ಪಿತ್ರಾರ್ಜಿತವಾದ ಕೊಡುಗೆಯಾಗುವುದು.

ಈ ಹಿಂದೆ ಸಮಾಜದ ಎಲ್ಲಾ ಸಮುದಾಯದವರು ಬಿದಿರಿನಿಂದ ತಯಾರಿಸಿದ ವಸ್ತುಗಳನ್ನು ಸರ್ವೇ ಸಾಧಾರಣವಾಗಿ ಬಳಸುತ್ತಿದ್ದರು. ಆದರೆ ಬದಲೀ ವಸ್ತುಗಳ ಆಗಮನದಿಂದಾಗಿ ಕೆಲವೊಂದು ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳಲ್ಲಿ ಮಾತ್ರ ಬಿದಿರಿನ ವಸ್ತುಗಳನ್ನು ಕಟ್ಟುನಿಟ್ಟಾಗಿ ಬಳಸುತ್ತಾರೆ. ಮಿಕ್ಕಂತೆ, ಗೃಹಬಳಕೆ, ಪೀಠೋಪಕರಣ, ಕೃಷಿ, ವಾಣಿಜ್ಯ, ಉದ್ದಿಮೆ ರಂಗಗಳಲ್ಲಿ ಬಿದಿರಿನ ವಸ್ತುಗಳ ಬದಲಾಗಿ 80% ಪ್ಲಾಸ್ಟಿಕ್ ವಸ್ತುಗನ್ನು ಬಳಸುವರು. ಇದರಿಂದ ಇವರ ಪಾರಂಪರಿಕ ಕುಲಕಸುಬಿಗೆ ಧಕ್ಕೆಯಾಗುತ್ತದೆ. ಜೊತೆಗೆ ದೇಶೀಯ ಸಂಸ್ಕೃತಿಯ ಮತ್ತು ಗೃಹಕೈಗಾರಿಕೆಗಳ ಸಂರಕ್ಷಣೆಗೆ ಕಂಟಕವಾಗುತ್ತದೆ. ಕಾರಣ ಇದಕ್ಕೆ ಸರಕಾರ ಪ್ಲಾಸ್ಟೀಕ ವಸ್ತುಗಳ ಬಳಕೆಯ ನಿರ್ಬಂಧವನ್ನು ಹಾಕಿದರೆ ದೇಶೀಯ ಕೈಗಾರಿಕೆಗಳ ರಕ್ಷಣೆ ಮತ್ತು ಒಂದು ಸಮುದಾಯದ ಆರ್ಥಿಕ ಚಟುವಟಿಕೆಗಳಿಗೆ ರಕ್ಷಣೆ ಕೊಟ್ಟಂತಾಗುವುದು.

5.3 ವಸ್ತುಗಳ ವೈವಿಧ್ಯತೆ (Product Diversification) :

5.3.1 ಪ್ರವೇಶಿಕೆ :

ಗ್ರಾಹಕ ಪ್ರಧಾನವಾದ ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಉತ್ಪಾದಕ ಮತ್ತು ಮಾರಾಟಗಾರ ಮಾರುಕಟ್ಟೆಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿರುತ್ತಾನೆ. ಈ ಪ್ರಯತ್ನ ಸಾಫಲ್ಯವಾಗಲು ನಿತ್ಯ ಹೊಸತನವನ್ನು ಅಳವಡಿಸಿಕೊಳ್ಳಲು ಹುಡುಕಾಟಸಾಗಿರುತ್ತದೆ. ತಾನು ಇತರರಿಗಿಂತ ಭಿನ್ನ ಮತ್ತು ವಿಶೇಷವಾಗಿರಬೇಕೆನ್ನುವುದೇ ಉತ್ಪಾದಕನ ಉದ್ದೇಶ. ಇದಕ್ಕಾಗಿ ವೈವಿಧ್ಯತೆಯನ್ನು ಅಳವಡಿಸಿಕೊಳ್ಳುತ್ತಾನೆ. ವೈವಿಧ್ಯತೆ ಎಂದರೆ, ಒಂದು ಹೊಸದನ್ನು ಸೇರಿಸುವುದು ಎಂದು ಅರ್ಥವಾಗುತ್ತದೆ. ಹೊಸಸೇರ್ಪಡೆ ಎಂದರೆ, ಹೊಸ ವಸ್ತುವಾಗಿರಬಹುದು, ಹೊಸ ಮಾರುಕಟ್ಟೆಯಾಗಿರಬಹುದು, ಇಲ್ಲವೇ ಅಳವಡಿಸಿದ ಹೊಸ ತಂತ್ರವಾಗಿರಬಹುದು. ಸೇರ್ಪಡೆಯಾಗುವ ಹೊಸ ವಸ್ತುಗಳು ಆಗಲೇ ಅಸ್ತಿತ್ವದಲ್ಲಿರುವ ವಸ್ತುಗಳಿಗೆ ಪೂರಕ ವಾದ ವಸ್ತುವಾಗಿರ ಬಹುದು, ಇಲ್ಲವೇ ಇವಕ್ಕಿಂತ ವಿಭಿನ್ನವಾದ ವಸ್ತುವಾಗಿರಬಹುದು. ವೈವಿಧ್ಯತೆಯು ಉತ್ಪಾದನೆ ಇಲ್ಲವೇ ಮಾರಾಟಕ್ಕೆ ಸಂಬಂಧಿಸಿದ್ದಾಗಿರಬಹುದು. ವೈವಿಧ್ಯತೆ ಸಂಭವಿಸಬಹುದಾದ ಆರ್ಥಿಕ ಹಿನ್ನಡೆ ಅಥವಾ ಮುಗ್ಗಟ್ಟನ್ನು ನಿವಾರಿಸುತ್ತದೆ. ವೈವಿಧ್ಯತೆಯನ್ನು ಅಳವಡಿಸಿಕೊಳ್ಳುವುದು ಪ್ರಸ್ತುತ ಅಸ್ತಿತ್ವದಲ್ಲಿರುವ ಟಾಟಾ, ಗೋದ್ರೇಜ್, ಬಜಾಜ್,

ಹಿಂದುಸ್ತಾನ್‌ನಂತಹ ಬೃಹತ್ ಉದ್ದಿಮೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಅದು ಮೇದರಂತಹ ಬುಡಕಟ್ಟು ಕಸುಬುದಾರರಿಂದ ಸಂತೆಯಲ್ಲಿ ಮಾರಾಟ ಮಾಡುವ ದಿನಸಿ ಅಂಗಡಿಯವನಿಗೂ ವಸ್ತು ವೈವಿಧ್ಯತೆಯ ನಿಯಮ ಅನ್ವಯಿಸುತ್ತದೆ.

ಇಂತಹ ವಸ್ತು ವೈವಿಧ್ಯತೆ ಮೇದ ಬುಡಕಟ್ಟು ಸಮುದಾಯದವರ ಕುಲಕಸುಬಿನಲ್ಲಿ ಮತ್ತು ಇವರು ಮಾರಾಟ ಮಾಡುವ ವಸ್ತುಗಳಲ್ಲಿ ಹೇಗೆ ಸಾಧ್ಯವೆಂಬುವುದು ಇಲ್ಲಿ ಕುತೂಹಲದ ಪ್ರಶ್ನೆ. ಅನೇಕ ಬುಡಕಟ್ಟು ಸಮುದಾಯಗಳು ತಾವು ಕುಲಕಸುಬಿನಿಂದ ತಯಾರಿಸಿದ ವಸ್ತುಗಳ ಮಾರಾಟ ಪ್ರಕ್ರಿಯೆಯಲ್ಲಿ ಇತರ ಸಮುದಾಯದವರು ತಯಾರಿಸದ ವಸ್ತುಗಳ ವೈವಿಧ್ಯತೆಯನ್ನು ಮಿಶ್ರಮಾಡಿಕೊಂಡು ಮಾರಾಟ ಮಾಡುವುದು ಸಹಜ. ಮೇದರು ಮೊದಲು ತಮ್ಮ ಡಿಪೋಗಳಲ್ಲಿ ಬಿದಿರು, ಬೊಂಬು, ಮತ್ತು ಪೋಲ್ಸ್‌ಗಳನ್ನು ಮಾತ್ರ ಮಾರಾಟ ಮಾಡುತ್ತಿದ್ದರು. ಆದರೆ ಇತ್ತೀಚಿಗೆ ಇವರು ವಸ್ತುಗಳ ವೈವಿಧ್ಯತೆಯನ್ನು ಅಳವಡಿಸಿಕೊಂಡಿರುವುದು ಗಮನಾರ್ಹ. ಅಂದರೆ, ತಮ್ಮ ಬಿದಿರು, ಬೊಂಬು, ವಸ್ತುಗಳಿಂದ, ಕಡಪಾ, ನೈಸ್‌ಕಲ್ಲು, ಹೆಂಚು, ಪೋಲ್ಸ್, ಹರಿನಾಲಿಗೆ, ಪ್ಲಾಸ್ಟಿಕ್ ತಾಡಪಾಲುಗಳು, ಮುಂತಾದವುಗಳನ್ನು ಮಾರಾಟದ ವಸ್ತುಗಳ ಸಾಲಿಗೆ ಸೇರಿಸಿಕೊಂಡಿದ್ದಾರೆ. ಇದಲ್ಲದೆ, ಡಿಪೋದ ಪಕ್ಕದಲ್ಲಿಯೇ, ನೆಲದ ಹಾಸುಗಳಾದ, ಸಿರಮಿಕ್, ಟೈಲ್ಸ್, ಮಾರ್ಬಲ್, ಗ್ರೈನೆಟ್, ಸಿಮೆಂಟ್ ಮತ್ತು ಕೆಲವು ಗೃಹನಿರ್ಮಾಣಕ್ಕೆ ಪೂರಕವಾದ ವಸ್ತುಸಾಮಗ್ರಿಗಳನ್ನು ಇವರು ಮಾರಾಟ ಮಾಡುತ್ತಾರೆ.

ವಸ್ತು ವೈವಿಧ್ಯತೆಯ ಉದ್ದೇಶ ಮತ್ತು ಪ್ರಯೋಜನೆಗಳು ವೈವಿಧ್ಯತೆಯ ಕಾರಣಗಳನ್ನು ತಿಳಿಸುತ್ತವೆ. ವಸ್ತುಗಳ ವೈವಿಧ್ಯತೆಯ ಮೂಲಗುರಿ, ಮಾರುಕಟ್ಟೆಯಲ್ಲಿ ತಮ್ಮ ಮಾರಾಟದ ಸ್ಥಾನವನ್ನು ಕಾಪಾಡಿಕೊಂಡು ಬರುವುದು ಮತ್ತು ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ಗರಿಷ್ಠಪ್ರಮಾಣದಲ್ಲಿ ಲಾಭವನ್ನು ಗಳಿಸುವುದಾಗಿದೆ. ವಸ್ತುಗಳ ವೈವಿಧ್ಯತೆಯಲ್ಲಿ ಅನೇಕ ಪದ್ದತಿಗಳನ್ನು ಕಾಣಬಹುದು. ಇವುಗಳನ್ನು ವಾಣಿಜ್ಯ ತಜ್ಞರು ವಸ್ತುಗಳ ವೈವಿಧ್ಯತೆಯ ವಿವಿಧ ರೂಪಗಳೆಂದು ಹೇಳಿದ್ದಾರೆ.

ವಸ್ತುಗಳ ವೈವಿಧ್ಯತೆಗೆ ಅನೇಕ ಅಂಶಗಳು ಪ್ರೇರಣೆ ನೀಡುತ್ತವೆ. ಅವುಗಳೆಂದರೆ, ಗ್ರಾಹಕರ ತೃಪ್ತಿ ಉತ್ಪಾದಕರ ಅಪೇಕ್ಷೆ, ಸಾಮಾಜಿಕ ಬದಲಾವಣೆ, ಸರಕಾರದ ಮತ್ತು ವಾಣಿಜ್ಯದ ಬದಲಾದ ಧೋರಣೆಗಳು, ಬದಲಾದ ತಾಂತ್ರಿಕಾಭಿವೃದ್ಧಿ, ಇಲ್ಲಿಯವರೆಗೆ ಉಪಯೋಗಿಸದಿರದ ಸಾಮರ್ಥ್ಯದ ಬಳಕೆ ಮುಂತಾದವು. ಬೃಹತ್ ವಾಣಿಜ್ಯ ಉದ್ದಿಮೆದಾರರಿಂದ ಮೆದರಂತಹ ಬುಡಕಟ್ಟು ಕಸುಬುದಾರರು ಸಹ ಇವುಗಳಲ್ಲಿ ಯಾವುದೇ ಅಂಶದ ಪ್ರೇರಣೆಯಿಂದ ತನ್ನ ವಸ್ತುಗಳ ಉತ್ಪಾದನೆ ಮತ್ತು ಮಾರಾಟದಲ್ಲಿ ವೈವಿಧ್ಯತೆಯನ್ನು ಅಳವಡಿಸಿ ಕೊಳ್ಳುತ್ತಾರೆ. ಇದರಿಂದ ಇವರ ಆರ್ಥಿಕ ಚಟುವಟಿಕೆಗಳಿಗೆ ಒಂದು ಸ್ಥಿರವಾದ ಭದ್ರತೆ ದೊರೆತಂತಾಗುತ್ತದೆ, ಮತ್ತು ಮಾರುಕಟ್ಟೆಯಲ್ಲಿ ಭದ್ರವಾದ ಸ್ಥಾನವನ್ನು ಪಡೆಯುತ್ತಾರೆ.

5.3.2 ವಸ್ತುಗಳ ವೈವಿಧ್ಯತೆಯ ವಿವಿಧ ಆಕಾರಗಳು :

ವಸ್ತುಗಳ ವೈವಿಧ್ಯತೆಯನ್ನು ಅಳವಡಿಸಿಕೊಳ್ಳುವವರು ಪ್ರಚಲಿತ ಮಾರುಕಟ್ಟೆಯಲ್ಲಿ ಗ್ರಾಹಕರ ಅಭಿರುಚಿಗೆ ತಕ್ಕಂತೆ ಮತ್ತು ತಮ್ಮ ಅನುಕೂಲಕ್ಕೆತಕ್ಕಂತೆ ಆಕಾರವನ್ನು ಅಳವಡಿಸಿಕೊಳ್ಳುತ್ತಾರೆ. ಇಲ್ಲಿ ಮೇದರು ತಯಾರಿಸಿ ಮಾರಾಟ ಮಾಡುವ, ಮತ್ತು ಡಿಪೋದಲ್ಲಿ ಮಾರಾಟ ಮಾಡುವ ವಸ್ತುಗಳ ವೈವಿಧ್ಯತೆಯನ್ನು ಅನುಲಕ್ಷಿಸಿ ವಿವಿಧ ಪ್ರಕಾರಗಳನ್ನು ಇಲ್ಲಿ ವಿವರಿಸಿದೆ.

5.3.2.ಅ) ಸಂಬಂಧಿಸಿದ ವಸ್ತುಗಳ ಪಂಕ್ತಿಯಲ್ಲಿ ವೈವಿಧ್ಯತೆ : ಸಂಬಂಧಿಸಿದ ವಸ್ತುಗಳ ಪಂಕ್ತಿಯಲ್ಲಿ ವೈವಿಧ್ಯತೆ ಎಂದರೆ, ಉತ್ಪಾದಕ ಅಥವಾ ಮಾರಾಟಗಾರ ಈಗಾಗಲೇ ತಾನು ತಯಾರಿಸುವ ಇಲ್ಲವೇ ಮಾರಾಟ ಮಾಡುತ್ತಿರುವ ವಸ್ತುಗಳ ಅದೇ ಪಂಕ್ತಿಯ ವಸ್ತುಗಳನ್ನು ಸೇರಿಸುವುದು. ಮೇದರು ತಾವು ಡಿಪೋದಲ್ಲಿ ಮಾರಾಟ ಮಾಡುತ್ತಿರುವ ವಸ್ತುಗಳಾದ ಗೃಹ ನಿರ್ಮಾಣದ ವಸ್ತುಗಳಲ್ಲಿ ಮತ್ತೆ ಕೆಲವು ವಸ್ತುಗಳನ್ನು ತಮ್ಮ ಮಾರಾಟದ ವಸ್ತುಗಳ ಪಂಕ್ತಿಯಲ್ಲಿ ಸೇರಿಸುತ್ತಾರೆ. ಅಂದರೆ ಇವರು ಪೂರ್ವದಲ್ಲಿ ಬೊಂಬು, ಬಿದಿರುಗಳನ್ನು ಮಾತ್ರ ಮಾರಾಟ ಮಾಡುತ್ತಿದ್ದರು. ಆದರೆ ಈಗ, ಅದರ ಜೊತೆಗೆ ಗೃಹ ನಿರ್ಮಾಣಕ್ಕೆ ಪೂರಕವಾದ ಪೋಲ್ಸ್, ಕಡಪಾ ಕಲ್ಲುಗಳು, ನೈಸ್ ಬಂಡೆಗಳು, ಹಂಚು, ಹರಿನಾಲಿಗೆ, ನೈಸ್ ಬಂಡೆ, ಸಿರಾಮೆಕ್, ಪಾಲಿಷ್‌ಕಲ್ಲು, ಮಾರ್ಬಲ್, ಮುಂತಾವ ವಸ್ತುಗಳನ್ನು ತಮ್ಮ ಮಾರಾಟದ ವಸ್ತುಗಳ ಪಂಕ್ತಿಯನ್ನು ವೈವಿಧ್ಯ ಗೊಳಿಸಿದ್ದಾರೆ. ಇದರಿಂದ, ಇವರ ಮಾರಾಟದ ಸರಾಸರಿ ವೆಚ್ಚ ಕಡಿಮೆಯಾಗುತ್ತೆ. ಇದರ ಉದ್ದೇಶ ಮಾರಾಟದ ಸಂಘಟನೆ ಪುನರ್ಘಟಿಸುವುದು. ಮತ್ತು ಮಾರುಕಟ್ಟೆಯಲ್ಲಿ ಪೈಪೋಟಿಯನ್ನು ಸಮರ್ಥವಾಗಿ ಎದುರಿಸುವುದು. ಅಲ್ಲದೇ ಏಕ ಮತ್ತು ಬಹು ಉದ್ದೇಶದ ಗ್ರಾಹಕರನ್ನು ಆಕರ್ಷಿಸುವುದಾಗಿದೆ.

5.3.2.ಆ) ಸಂಬಂಧಿಸಿರದ ವಸ್ತುಗಳ ಪಂಕ್ತಿಯಲ್ಲಿ ವೈವಿಧ್ಯತೆ : ಉತ್ಪಾದಕ ಅಥವಾ ಮಾರಾಟಗಾರ ತಾನು ತಯಾರಿಸುವ ಅಥವಾ ಮಾರಾಟ ಮಾಡುವ ವಸ್ತುವಿನ ಪಂಕ್ತಿಗೆ ಸಂಬಂಧವಿರದ ವಸ್ತುಗಳನ್ನು ತನ್ನ ವಸ್ತುಗಳ ಪಂಕ್ತಿಯಲ್ಲಿ ಸೇರಿಸುವುದು ಎಂದರ್ಥವಾಗುತ್ತದೆ. ಈ ವಿಧವಾದ ವಸ್ತು ವೈವಿಧ್ಯತೆ ಮೇದರ ವಾಣಿಜ್ಯದಲ್ಲಿ ಕಂಡು ಬರುವುದು ವಿರಳ. ಬಳ್ಳಾರಿ ಜಿಲ್ಲೆಯ ಭೌಗೋಳಿಕ ವ್ಯಾಪ್ತಿಯಲ್ಲಿ ಸಿರಗುಪ್ಪಾದಲ್ಲಿ ಈ ರೀತಿಯ ವಸ್ತುವೈವಿಧ್ಯತೆಯಲ್ಲಿ ಇಬ್ಬರು ಮೇದರು ತೊಡಗಿರುವುದು ಕಂಡುಬರುತ್ತದೆ. ಅಂದರೆ ಆವರು ತಮ್ಮ ಕುಲಕಸುಬಿನ ವಸ್ತುಗಳ ಮಾರಾಟದಮಳಿಗೆಯ ಹತ್ತಿರ ಎಲೆಕ್ಟ್ರಾನಿಕ್ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ. ಮತ್ತೊಬ್ಬರು ಸಾರಿಗೆ ಮಧ್ಯವರ್ತಿಯ ವ್ಯವಹಾರ ಮಾಡುತ್ತಿರುವುದು ಕಂಡು ಬರುತ್ತದೆ. ಆದರೆ ಮೇದರು ತಯಾರಿಸುವ ವಸ್ತುಗಳನ್ನು ಅನ್ಯ ಸಮುದಾಯದ ಮಾರಾಟಗಾರರು ತಮ್ಮ ಮಾರಾಟದ ವಸ್ತುಗಳ ವೈವಿಧ್ಯತೆಯಲ್ಲಿ ಅಳವಡಿಸಿಕೊಳ್ಳುವುದು ಕಂಡು ಬರುತ್ತದೆ.

5.3.2.ಇ) ವಸ್ತುಗಳ ಬದಲಾವಣೆ : ಈ ವಿಧಾನದಲ್ಲಿ ಉತ್ಪಾದಕ ಮತ್ತು ಮಾರಾಟಗಾರ ತನ್ನ ಹಳೆಯ ವಸ್ತುವಿನ ಬೇಡಿಕೆ ಕಡಿಮೆ ಆಗುತ್ತಿದ್ದಂತೆ, ಹಳೆವಸ್ತುವಿಗೆ ಹೊಸಆವಿಷ್ಕಾರದಿಂದ ಹೊಸರೂಪವನ್ನು ಕೊಟ್ಟು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಾನೆ. ಈ ವಿಧವಾದ ವಸ್ತುಗಳ ವೈವಿಧ್ಯತೆ ಮೇದರು ತಯಾರಿಸುವ ವಸ್ತುಗಳಲ್ಲಿ ಭಾಗಶಃ ಕಂಡು ಬರುತ್ತದೆ. ಇವರು ತಯಾರಿಸುವ ಮೊರದಲ್ಲಿ ಬದಲಾವಣೆಯನ್ನು ತಂದು ಮೆಂತೆದ ಮೊರ, ಬಣ್ಣದ ಮೊರಗಳನ್ನು ತಯಾರಿಸುತ್ತಾರೆ. ಗೃಹ ಬಳಕೆಯ ವಸ್ತುಗಳಾದ ಪುಟ್ಟಿ , ಚಿಬ್ಬಲಿ, ಬೀಸಣಿಕೆ, ಮುಂತಾದ ವಸ್ತುಗಳಲ್ಲಿ ಹೊಸ ಆವಿಷ್ಕಾರವನ್ನು ಅಳವಡಿಸಿ ಗ್ರಾಹಕರನ್ನು ಆಕರ್ಷಿಸುತ್ತಾರೆ. ಮತ್ತು ಬದಲಿ ವಸ್ತುಗಳಿಗೆ ಪೈಪೋಟಿಯನ್ನು ನೀಡುವರು.

5.3.3 ವಸ್ತುಗಳ ವೈವಿಧ್ಯತೆಯ ಉದ್ದೇಶ ಮತ್ತು ಪ್ರಯೋಜನೆಗಳು :

ವಸ್ತುಗಳ ವೈವಿಧ್ಯತೆ ಉದ್ದೇಶ ಮತ್ತು ಕಾರಣಗಳನ್ನು ಪ್ರೊ.ಕೆನೆಥ್ ಆರ್. ಆಂಡ್ರೊಜ ಅವರು ವಸ್ತುಗಳ ವೈವಿಧ್ಯತೆ ಮತ್ತು ಸಾರ್ವಜನಿಕ ಹಿತಾಶಕ್ತಿ ಎಂಬ ತಮ್ಮ ಗ್ರಂಥದಲ್ಲಿ ವಿಂಗಡಿಸಿ ಪ್ರಸ್ತಾಪಿಸಿದ್ದಾರೆ. ಇವರ ಹೇಳಿಕೆಯನ್ನು ಪರಿಗಣಿಸಿ ಮೇದ ಬುಡಕಟ್ಟು ತಮ್ಮ ವಸ್ತುಗಳ ತಯಾರಿಕೆ ಮತ್ತು ಮಾರಾಟದಲ್ಲಿ ಅನುಸರಿಸಿರುವ ವಸ್ತುಗಳ ವೈವಿಧ್ಯತೆಯ ಉದೇಶ ಮತ್ತು ಪ್ರಯೋಜನೆಗಳನ್ನು ಈ ಕೆಳಗಿನಂತೆ ಹೇಳಲಾಗಿದೆ.

5.3.3.ಅ) ಲಾಭಾಂಶ(ಗಳಿಕೆ) ಮತ್ತು ಸಂಘಟನೆಯಲ್ಲಿ ಸ್ಥಿರತೆಯನ್ನು ಕಾಪಾಡಬಹುದು : ಯಾವುದೇ ಕಾರಣದಿಂದ ಮಾರಾಟಗಾರ ಮತ್ತು ಉತ್ಪಾದಕನ ವಸ್ತುಗಳ ಬೇಡಿಕೆಯಲ್ಲಿ ಸ್ಥಿರತೆಯನ್ನು ಕಾಪಾಡಬಹುದು. ಮಾರುಕಟ್ಟೆಯಲ್ಲಿ ಮತ್ತು ಸಮಾಜದಲ್ಲಿ ಮನ್ನಣೆಯನ್ನು ಪಡೆಯಬಹುದು. ಇದರಜೊತೆಗೆ ಋತುಮಾನಗಳ ಮುಗ್ಗಟ್ಟನ್ನು ನಿಯಂತ್ರಿಸುತ್ತಾ, ವರ್ತಮಾನದ ಕುಂದು ಕೊರತೆಗಳನ್ನು ನಿವಾರಿಸಬಹುದು. ಅಲ್ಲದೇ ಮುಂದಿನ ಯೋಜನೆಗಳನ್ನು ಪೂರಕವಾಗಿ ರೂಪಿಸಬಹುದು.

5. 3. 3.ಆ) ಸಂಪನ್ಮೂಲಗಳ ಸಮರ್ಥವಾದ ಬಳಕೆ : ವಸ್ತುವೈವಿಧ್ಯತೆಯಲ್ಲಿ ಉತ್ಪಾದಕ ತಾನು ಉತ್ಪಾದಿಸುವ ವಸ್ತುವಿನ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸುವನು. ಲಭ್ಯವಿರುವ ನೈಸರ್ಗಿಕ, ಮತ್ತು ಮಾನವ ಸಂಪನ್ಮೂಲಗಳನ್ನು ಸರಿಯಾದ ಸಮಯದಲ್ಲಿ ಸರಿಯಾದ ರೀತಿಯಲ್ಲಿ ಬಳಸುವರು. ಉತ್ಪಾದನೆಯಲ್ಲಿ ಬಳಸಬಹುದಾದ ಕಚ್ಚಾ ಪದಾರ್ಥಗಳನ್ನು ಮೂಲ ಉದ್ದೇಶಗಳಿಗಲ್ಲದೇ ಇತರೆ ಹೊಸ ಉದ್ದೇಶಗಳಿಗೂ ಸಹ ಬಳಸಬಹುದು. ಮೂಲ ವಸ್ತುಗಳ ಜೊತೆಗೆ ಉಪವಸ್ತುಗಳ ಉತ್ಪಾದನೆಯನ್ನು ಸಹ ಕೈಗೊಳ್ಳಬಹುದು. ಉತ್ಪಾದಿತ ವಸ್ತುಗಳಿಗೆ ಬೇಡಿಕೆ ಉಂಟಾದಾಗ ಅದರ ಸದುಪಯೋಗ ಪಡಿಸಿಕೊಳ್ಳಬಹುದು. ಉದಾ: ಮೇದರು ಬಿದಿರನ್ನು ಸೀಳುವಾಗ ಬರುವ ನಯವಾದ ಬಿದಿರಿನ ಮತ್ತು ಚಿತ್ತದ ತೆಳುಬಾಕಗಳಿಂದ ಇತ್ತೀಚಿಗೆ ಕರಕುಶಲ ವಸ್ತು ಮತ್ತು ಹೂವಿನ ಹಾರಗಳನ್ನು ತಯಾರಿಸುತ್ತಾರೆ.

5. 3. 3.ಇ) ಸಮರ್ಥವಾದ ಮಾರಾಟ: ವಸ್ತುಗಳ ವೈವಿಧ್ಯತೆಯಲ್ಲಿ ನಿರ್ದಿಷ್ಟವಾದ ಗ್ರಾಹಕರ ಕೋರಿಕೆಗಳನ್ನು ಈಡೇರಿಸಬಹುದು. ಮತ್ತು ಮಾರಾಟದ ವೆಚ್ಚದ ಪ್ರಮಾಣವನ್ನು ಕಡಿಮೆ ಮಾಡ ಬಹುದು. ವ್ಯಾಪಾರದ ಮೂಲ ವಸ್ತುವಿನ ವಹಿವಾಟನ್ನು ಸಹ ಹೆಚ್ಚಿಸಲು ಸಾಧ್ಯ. ಮೇದರು ತಯಾರಿಸುವ ವಸ್ತುಗಳ ಬೇಡಿಕೆಯು ಒಂದೇ ರೀತಿಯಲ್ಲಿರುವುದಿಲ್ಲ. ಋತುಮಾನಗಳಿಗೆ ತಕ್ಕಂತೆ ಬದಲಾಗುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಉತ್ಪಾದಕ ತನ್ನ ವಸ್ತುವಿನ ಉತ್ಪಾದನೆ ಮತ್ತು ಮಾರಾಟದ ಸಮತೋಲನವನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಗ್ರಾಹಕರ ಬೇಡಿಕೆಗೆ ತಕ್ಕಂತೆ ಗಾತ್ರ ಮತ್ತು ಗುಣ ಮಟ್ಟದ ವಸ್ತುಗಳನ್ನು ತಯಾರಿಸಿ ಪೂರೈಸಬಹುದು.

5. 3. 3.ಈ) ಅವಕಾಶಗಳ ಬಳಕೆ : ವಾಣಿಜ್ಯ ರಂಗದಲ್ಲಿ ಉತ್ಪಾದಕ ಮತ್ತು ಮಾರಾಟಗಾರರು ಬರುವ ಅವಕಾಶಗಳಿಗೋಸ್ಕರ ಕಾಯುತ್ತಾರೆ. ಬಂದಂತಹ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುತ್ತಾರೆ. ತನ್ನ ವ್ಯಾಪಾರವು ಅಧಿಕ ಲಾಭವನ್ನು ಗಳಿಸುವ ಸಂದರ್ಭದಲ್ಲಿ ನಗದುಹಣ ಮತ್ತು ಸಂಚಿತಹಣದ ಬಳಕೆ ಮಾಡಬೇಕು. ವೈವಿಧ್ಯತೆಯ ಲಾಭವನ್ನು ಸಂಪೂರ್ಣವಾಗಿ ನಿಗದಿತ ಅವಧಿಯಲ್ಲಿಯೇ ಬಳಸಿ ಕೊಳ್ಳಲು ಸಾಧ್ಯವಾಗುತ್ತದೆ.

5.4 ಗೃಹ ಮತ್ತು ಸಣ್ಣ ಕೈಗಾರಿಕೆಗಳ ಸ್ಥಿತಿಗತಿ :

ಔದ್ಯೋಗಿಕ ಕ್ರಾಂತಿಗೆ ಮುಂಚೆ ಭಾರತದಲ್ಲಿ ದೊಡ್ಡ ಕೈಗಾರಿಕೆಗಳ ಉತ್ಪಾದನೆಗಿಂತ ಗೃಹ ಮತ್ತು ಸಣ್ಣ ಕೈಗಾರಿಕೆಯ ಉತ್ಪಾದನೆಗಳು ಹೆಚ್ಚಾಗಿದ್ದಿತು. ನಂತರ ಕೈಗಾರಿಕೆರಂಗದಲ್ಲಿ ಆದಬದಲಾವಣೆ ಬೃಹತ್ ಪ್ರಮಾಣದ ಉತ್ಪಾದನೆಗೆ ದಾರಿಯಾಯಿತು. ಗೃಹ ಮತ್ತು ಸಣ್ಣಕೈಗಾರಿಕೆಗಳ ಉತ್ಪಾದನೆ ಕಡಮೆಯಾದರುಸಹ ಇವು ಒದಗಿಸುವ ಉದ್ಯೋಗಾವಕಾಶದ ಪ್ರಮಾಣ ಹೆಚ್ಚಾಗಿರುವುದು. ಭಾರತ ಸ್ವಾತಂತ್ರ್ಯದ ನಂತರ ತನ್ನ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ದಿಗೆ ಅನೇಕ ಕ್ರಮಗಳನ್ನು ತೆಗೆದುಕೊಂಡಿತು. ಆ ಸಂದರ್ಭದಲ್ಲಿ ಇವು ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದವು. ಗೃಹ ಮತ್ತು ಸಣ್ಣ ಕೈಗಾರಿಕೆಗಳ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಹೇಳಬೇಕಾಗುತ್ತದೆ.

5.4.2 ಗೃಹ ಮತ್ತು ಸಣ್ಣ ಕೈಗಾರಿಕೆಗಳ ಸಮಸ್ಯೆಗಳು :

5.4.2.ಅ) ಕಚ್ಚಾ ಸರಕುಗಳ ಕೊರತೆ : ಗೃಹ ಮತ್ತು ಸಣ್ಣ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳು ಸಮಯಕ್ಕೆ ಸರಿಯಾಗಿ ಬೇಕಾದಷ್ಟು ಪೂರೈಕೆಯಾಗುತ್ತಿಲ್ಲ. ಪೂರೈಕೆಯಾದ ಕಚ್ಚಾ ಸಾಮಗ್ರಿಗಳಿಗೆ ಅಧಿಕ ಬೆಲೆ ಮತ್ತು ವಿಭಿನ್ನವಾದ ಗುಣಮಟ್ಟವನ್ನು ಹೊಂದಿರುತ್ತದೆ. ಇದರಿಂದ ಉತ್ಪಾದಕರಿಗೆ ತಮ್ಮ ಉತ್ಪಾದಕ ವಸ್ತುಗಳ ಮೇಲಿನ ಹಿಡಿತ ತಪ್ಪುತ್ತದೆ.

5.4.2. ಆ) ಉಪಕರಣಗಳ ಅಭಾವ : ಇವರು ಬಳಸುವ ಉಪಕರಣಗಳು ಹೆಚ್ಚಾಗಿ ಪ್ರಾಚೀನ ಕಾಲದ ಉಪಕರಣಗಳಾಗಿವೆ. ಕೆಲವೊಂದು ಕೈಗಾರಿಕೆಗಳಲ್ಲಿ ಮಾತ್ರ ಆಧುನಿಕ ಉಪಕರಣಗಳನ್ನು ಬಳಸಲಾಗುತ್ತಿದೆ. ಆದರೆ

ಮೇದರು ತಮ್ಮ ಕುಲಕಸುಬಿನಲ್ಲಿ ಬಳಸುವ ಉಪಕರಣಗಳು ಶುದ್ಧ ಪ್ರಾಚೀನ ಕಾಲದ ಉಪಕರಣಗಳಾಗಿವೆ. ಇದರಿಂದಾಗಿ ಇವರ ಉತ್ಪಾದನೆಯ ವೇಗ ಮತ್ತು ಸಾಮರ್ಥ್ಯ ಕಡಿಮೆಯಾಗಿರುತ್ತದೆ.

5.4.2.ಇ) ಬಂಡವಾಳದ ಕೊರತೆ : ಸಣ್ಣ ಕೈಗಾರಿಕೆಗಳಿಗೆ ವಿಶೇಷವಾದ ಸಾಲದ ಯೋಜನೆಗಳಿವೆ. ಆದರೆ ಮೇದರಂತಹ ಬುಡಕಟ್ಟು ಕುಲಕಸುಬುಗಳಿಗೆ ಪ್ರತ್ಯೇಕವಾದ ಕಡಿಮೆ ಬಡ್ಡಿದರದ ಸಾಲಯೋಜನೆಗಳ ಕೊರತೆ ಕಂಡುಬರುತ್ತದೆ. ಹೆಚ್ಚಾಗಿ ಮೇದರು ಖಾಸಗಿ ವ್ಯಕ್ತಿಗಳಿಂದ ಸಾಲಪಡೆದು ತಮ್ಮ ಕೈಗಾರಿಕೆಯನ್ನು ಮಾಡುತ್ತಾರೆ. ಇದರಿಂದ ಇವರ ಸರಾಸರಿ ಲಾಭದ ಪ್ರಮಾಣ ಕಡಿಮೆಯಾಗಿರುತ್ತದೆ.

5.4.2.ಈ) ಮಾರಾಟದ ಸೌಲಭ್ಯದ ಅಭಾವ : ತಯಾರಿಸಿದ ವಸ್ತುಗಳ ಲಾಭಾಂಶದ ಪ್ರಮಾಣ ಆ ವಸ್ತುವಿಗೆ ಇರುವ ಮಾರಾಟದ ಅನುಕೂಲತೆಗಳನ್ನು ಅವಲಂಬಿಸಿರುತ್ತದೆ. ಸಣ್ಣ ಕೈಗಾರಿಕೆಗಳು ತಯಾರಿಸಿದ ಎಲ್ಲಾ ವಸ್ತುಗಳಿಗೆ ಸುಸಜ್ಜಿತವಾದ ಮತ್ತು ಸಂಘಟಿಸಲ್ಪಟ್ಟ ಮಾರುಕಟ್ಟೆಯ ಅಭಾವ ಕಂಡು ಬರುತ್ತದೆ. ಕೆಲವೊಂದು ಸಣ್ಣ ಕೈಗಾರಿಕೆಯ ವಸ್ತುಗಳಿಗೆ ಮಾತ್ರ ಸುಸಜ್ಜಿತವಾದ ಮಾರುಕಟ್ಟೆಯ ವ್ಯವಸ್ಥೆ ಇದೆ.

5.4.2.ಉ) ಸಂಪ್ರದಾಯ : ಈ ಕೈಗಾರಿಕೆಗಳಲ್ಲಿ ನಿರತರಾದವರು ಹೆಚ್ಚಾಗಿ ಸಂಪ್ರದಾಯಗಳಿಗೆ ಕಟ್ಟುಬಿದ್ದವರಾಗಿರುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಇವರ ಸಂಪ್ರದಾಯಗಳು ಅಡ್ಡಿಯಾಗುತ್ತವೆ. ಇವರ ಸಂಪ್ರದಾಯಗಳಿಗೆ ಪೂರಕವಾದ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಬೇಕು.

5.4.2.ಊ) ಪೈಪೋಟಿ : ಇವರಲ್ಲಿ ಸ್ವಜನರಿಂದಲೇ ಪೈಪೋಟಿ ಹೆಚ್ಚಾಗಿ ಕಂಡು ಬರುತ್ತದೆ. ಮತ್ತು ಆಗಮಿಸಿದ ಬದಲಿ ವಸ್ತುಗಳನ್ನು ದೊಡ್ಡ ಕೈಗಾರಿಕೆಗಳು ಉತ್ಪಾದಿಸುತ್ತಿದ್ದು ಅವುಗಳೊಂದಿಗೆ ಇವರ ಪೈಪೋಟಿ ಎಲ್ಲಾ ಸಂದರ್ಭದಲ್ಲಿ ಸಮರ್ಥವಾಗಿರುವುದಿಲ್ಲ.

5.4.2.ಋ) ತೆರಿಗೆಯ ಹೊರೆ : ಸಣ್ಣ ಕೈಗಾರಿಕೆ ಮತ್ತು ಗೃಹ ಕೈಗಾರಿಕೆ ವಸ್ತುಗಳ ಕಚ್ಚಾ ಸರಕುಗಳ ಮೇಲೆ ಮತ್ತು ಉತ್ಪಾದಿತ ವಸ್ತುಗಳ ಮೇಲೆ ವಿಧಿಸುವ ತೆರಿಗೆ ಪದ್ಧತಿಯನ್ನು ಸಡಿಲ ಗೊಳಿಸ ಬೇಕು. ಇದಕ್ಕೂ ಮೊದಲು ಬುಡಕಟ್ಟು ಕೈಗಾರಿಕೆಗಳ ಮೇಲೆ ವಿಧಿಸುವ ತೆರಿಗೆಯ ಕುರಿತು ಈ ಜನರಿಗೆ ಶಿಕ್ಷಣವನ್ನು ಕೊಡಬೇಕು. ಇವರಿಗೆ ತೆರಿಗೆ ಕಟ್ಟುವುದಕ್ಕಿಂತ ತೆರಿಗೆಯಬಗ್ಗೆ ಭಯವಿದೆ. ಈ ಕುರಿತು ಇವರಿಗೆ ತಿಳುವಳಿಕೆಯ ಕಾರ್ಯಾಗಾರಗಳನ್ನು ಏರ್ಪಡಿಸಬೇಕು.

5.4.2. ಎ) ಉತ್ಪಾದನಾ ವಿಧಾನ: ಇವರ ಉತ್ಪಾದನೆಯ ವಿಧಾನ ಪಾರಂಪರಿಕ ವಾಗಿದ್ದು ಓಬಿರಾಯನ ಕಾಲದ ಮಾದರಿಯಲ್ಲಿಯೇ ಇರುವುದರಿಂದ ಉತ್ಪಾದನೆಯನ್ನು ತೀವ್ರಗೊಳಿಸುವುದು ಸಾಧ್ಯವಾಗುತ್ತಿಲ್ಲ. ಕಸುಬು ಮತ್ತು ಉತ್ಪಾದನೆಯಲ್ಲಿ ತೊಡಗಿರುವವರ ಜೀವನ ಮಟ್ಟವನ್ನು ಗಣನೀಯ ಪ್ರಮಾಣದಲ್ಲಿ ಸುಧಾರಿಸಲು ಸಾಧ್ಯವಾಗುವುದಿಲ್ಲ.

5.4.2.ಏ) ಮಾರುಕಟ್ಟೆಯ ಸಮಸ್ಯೆ : ಇವರು ತಯಾರಿಸಿದ ವಸ್ತುಗಳ ಮಾರಾಟ ಪ್ರಕ್ರಿಯೆಯಲ್ಲಿ ಆಧುನಿಕತೆಯ ಕೊರತೆ ಇದೆ. ವಸ್ತುಗಳ ವಿತರಣಾ ಮಾರ್ಗದ ಆಯ್ಕೆಯಲ್ಲಿ ಒಂದೇ ರೀತಿಯಾದ ಪ್ರಾಚೀನ ವಿತರಣಾ ಮಾರ್ಗವನ್ನೇ ಇವರು ಅನುಸರಿಸುತ್ತಾರೆ. ಇದರಿಂದಾಗಿ ಇವರಿಗೆ ಉತ್ಪಾದನೆ ಮತ್ತು ವಿತರಣೆ ಎರಡನ್ನೂ ಒಂದೇ ಸಮಯಕ್ಕೆ ನಿಯಂತ್ರಿಸುವುದು ಕಷ್ಟಸಾಧ್ಯವಾಗುತ್ತದೆ. ಇವರು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ಪ್ರತ್ಯೇಕವಾದ ಮಾರುಕಟ್ಟೆಯ ವ್ಯವಸ್ಥೆ ಇಲ್ಲ. ಇದರಿಂದಾಗಿ ಇವರು ಮಾರಾಟ ಮಾಡುವಾಗ ಪ್ರತಿ ದಿವಸ ತಮ್ಮ ಮಾರುಕಟ್ಟೆಯ ಸ್ಥಳವನ್ನು ಬದಲಾಯಿಸುವುದು ಅನಿವಾರ್ಯವಾಗಿರುತ್ತದೆ. ಅತಂತ್ರ ಸ್ಥಿತಿಯ ಇವರ ಮಾರುಕಟ್ಟೆಗೆ ಒಂದು ಸ್ಥಿರವಾದ ಮಾರುಕಟ್ಟೆಯನ್ನು ಒದಗಿಸುವುದು ಅವಶ್ಯವಾಗಿದೆ.

5.4.3 ಗೃಹ ಮತ್ತು ಸಣ್ಣ ಕೈಗಾರಿಕೆ ಅಭಿವೃದ್ಧಿಗೆ ಸರಕಾರ ಕೈಗೊಂಡ ಕ್ರಮಗಳು :

ಸ್ವಾತಂತ್ರ್ಯ ನಂತರ 1951 ರಿಂದ ತನ್ನ ಆರ್ಥಿಕ ಯೋಜನೆಯ ಮೂಲಕ ಸಣ್ಣ ಮತ್ತು ಗೃಹಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಸರಕಾರವು ಅನೇಕ ಕ್ರಮಗಳನ್ನು ಕೈಗೊಂಡಿದೆ. ಸರಕಾರ ಕೈಗೊಂಡ ಈ ಕ್ರಮಗಳನ್ನು ಅಧ್ಯಯನದ ದೃಷ್ಟಿಯಿಂದ ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ :

5.4.3.1 ಸಂಘಟನೆಯ ಸಹಾಯ : ಇವುಗಳ ಅಭಿವೃದ್ಧಿಗೋಸ್ಕರ ಸರಕಾರವು ಕೇಂದ್ರೀಯ ಸಣ್ಣ ಕೈಗಾರಿಕೆಗಳ ಸಂಸ್ಥೆ, ಸಣ್ಣ ಕೈಗಾರಿಕೆಯ ಕಾರ್ಪೋರೇಶನ್, ಔದ್ಯೋಗಿಕ ವಸಾಹತು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಗೃಹ ಉದ್ದಿಮೆಗಳಮಂಡಳಿ, ಸಣ್ಣಕೈಗಾರಿಕೆಗಳ ಮಂಡಳಿ, ಅಖಿಲ ಭಾರತ ಕೈಮಗ್ಗದಮಂಡಳಿ, ನಾರು, ಕಾಫಿ, ರೇಷ್ಮೆ, ಮಂಡಳಿಗಳನ್ನು ಸ್ಥಾಪಿಸಿತು.

5. 4. 3.2 ತಾಂತ್ರಿಕ ಸಹಾಯ : ಸಣ್ಣ ಮತ್ತು ಗೃಹ ಕೈಗಾರಿಕೆಗಳ ತಂತ್ರಜ್ಞಾನವನ್ನು ಹೆಚ್ಚಿಸಲು ಕೇಂದ್ರೀಯ ಚಿಕ್ಕ ಕೈಗಾರಿಕಾಸಂಸ್ಥೆ, ಪ್ರೊಟೋಟೈಪ್ ಉತ್ಪಾದಕ ಕೇಂದ್ರಗಳು, ಔದ್ಯಮಿಕ ಡಿಜೈನುಗಳಕೇಂದ್ರ, ಸಣ್ಣಕೈಗಾರಿಕಾ ಸಂಶೋಧನಾಭಿವೃದ್ಧಿ ಮಂಡಳಿ, ತಾಂತ್ರಿಕ ಶಿಕ್ಷಣ, ಗ್ರಾಮೀಣ ಕೈಗಾರಿಕೆಗಳ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಿದೆ.

5. 4.3.3 ಕೆಲಸಗಾರರಿಗೆ ತರಬೇತಿ : ಆಸಕ್ತಿ ಇರುವ ಕೆಲಸಗಾರರಿಗೆ ತರಬೇತಿ ನೀಡಲು ಸರಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ಬ್ಲಾಕ್ ಮಟ್ಟದ ವಿಸ್ತರಣಾ ಅಧಿಕಾರಿಗಳಿಗೆ ಮತ್ತು ಜಿಲ್ಲಾ ಉದ್ದಿಮೆ ಅಧಿಕಾರಿಗಳಿಗೆ ಕೆಲಸಗಾರರಿಗೆ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಲಾಗಿದೆ.

5. 4.4. ಕಚ್ಚಾ ವಸ್ತು, ಯಂತ್ರೋಪಕರಣ ಮತ್ತು ವಿದ್ಯುಚ್ಛಕ್ತಿಗಳ ಪೂರೈಕೆ : ರಾಷ್ಟ್ರೀಯ ಸಣ್ಣ ಕೈಗಾರಿಕಾ ಸಂಸ್ಥೆಯಮೂಲಕ ಸಣ್ಣಕೈಗಾರಿಕೆಗಳಿಗೆ ಯಂತ್ರೋಪಕರಣಗಳನ್ನು ಸುಲಭಕಂತುಗಳ ಸಾಲದ ಮೂಲಕ ಒದಗಿಸಿಕೊಡುತ್ತದೆ. ಸರಕಾರಿ ವ್ಯಾಪರ ಸಂಸ್ಥೆಯು ಅವಶ್ಯವಾದ ಕಚ್ಚಾ ಪದಾರ್ಥಗಳನ್ನು ಸರಿಯಾಗಿ ಪೂರೈಕೆ ಮಾಡುವ ವ್ಯವಸ್ಥೆ ಮಾಡುತ್ತಿದೆ. ಸಣ್ಣ ಕೈಗಾರಿಕೆಗಳಿಗೆ ಅವಶ್ಯ ವಿದ್ಯುಚ್ಛಕ್ತಿಯ ಪೂರೈಕೆಗೆ ಆದ್ಯತೆಯನ್ನು ನೀಡುತ್ತಿದೆ.

5. 4.5 ಮಾರಾಟದ ಸೌಲಭ್ಯ : ಗೃಹ ಮತ್ತು ಸಣ್ಣಕೈಗಾರಿಕೆಗಳು ಅನುಭವಿಸುತ್ತಿರುವ ತಯಾರಿಸಿದ ವಸ್ತುಗಳ ಮಾರಾಟವನ್ನು ಮಾಡಲು ಅನೇಕ ಮಾರಾಟ ಮಳಿಗೆ ಮತ್ತು ಸಂಸ್ಥೆಗಳನ್ನು ಸ್ಥಾಪಿಸಿದೆ. ಇದಕ್ಕಾಗಿ, ರಾಷ್ಟ್ರೀಯ ಸಣ್ಣ ಕೈಗಾರಿಕೆ ಸಂಸ್ಥೆ, ಅಖಿಲ ಭಾರತ ಕೈಮಗ್ಗದ ಸಮಿತಿ, ಅಖಿಲ ಭಾರತ ಕುಶಲ ಕೈಗಾರಿಕೆಗಳ ಸಮಿತಿಗಳನ್ನು ಸ್ಥಾಪಿಸಿದೆ. ಆದರೆ ಅಧ್ಯಯನಕ್ಕೆ ಸಂಬಂಧ ಪಟ್ಟಂತೆ ಮೇದರು ತಯಾರಿಸುವ ಚೆತ್ತದ ವಸ್ತುಗಳಿಗೆ ಮಕತ್ತು ಬಿದಿರಿನ ಕರಕುಶಲ ವಸ್ತುಗಳಿಗೆ ಮಾತ್ರ ಪ್ರೋತ್ಸಾಹವಿದ್ದು ಉಳಿದಂತೆ ಬಿದಿರಿನಿಂದ ತಯಾರಿಸುವ ವಿವಿಧ ವಸ್ತುಗಳ ಮಾರಾಟಕ್ಕೆ ಸಂಪೂರ್ಣವಾದ ಮಾರಾಟ ಸೌಲಭ್ಯದ ಕೊರತೆ ಇದೆ.

5. 4.6 ಜಿಲ್ಲಾ ಕೈಗಾರಿಕಾಕೇಂದ್ರಗಳು : 1978 ರಲ್ಲಿ ಜಿಲ್ಲಾ ಕೈಗಾರಿಕೆಗಳ ಕೇಂದ್ರಸ್ಥಾಪಿಸಲಾಯಿತು. ಇದರ ಮೂಲಕ ಗೃಹ ಮತ್ತು ಸಣ್ಣಕೈಗಾರಿಕೆಗಳಿಗೆ ಬೇಕಾದ ಎಲ್ಲಾ ಸಲಹೆ, ಸೂಚನೆ ಮತ್ತು ಮಾರ್ಗದರ್ಶನಗಳನ್ನು ನೀಡಿ ಇವುಗಳ ಅಭಿವೃದ್ದಿಗೆ ಸೇವೆಯನ್ನು ಸಲ್ಲಿಸಲು ಈ ಕೇಂದ್ರಗಳು ನಿರತರಾಗಿವೆ. ನಿರುದ್ಯೋಗಿ ಯುವಕರಿಗೆ ಜಿಲ್ಲಾ ಕೈಗಾರಿಕಾ ಕೇಂದ್ರಗಳು ನೆರವು ಮತ್ತು ಮಾರ್ಗದರ್ಶನವನ್ನು ಮಾಡುತ್ತವೆ. 1992 ರಲ್ಲಿ ದೇಶದಲ್ಲಿ ಒಟ್ಟು 431 ಜಿಲ್ಲೆಗಳ ಉಸ್ತುವಾರಿ ನೋಡಿಕೊಳ್ಳಲು 422 ಜಿಲ್ಲಾ ಕೈಗಾರಿಕೆಗಳ ಕೇಂದ್ರ ಸ್ಥಾಪಿಸಲಾಯಿತು.

5.4.7 ರಾಜ್ಯಾದಾಯದ ಪ್ರೇರಣೆಗಳು : ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಣ್ಣ ಹಾಗೂ ಗೃಹ ಕೈಗಾರಿಕೆಗಳ ಅಭಿವೃದ್ದಿಗೆ ಅನೇಕ ವಿಧವಾದ ಉತ್ತೇಜನಗಳನ್ನು ನೀಡಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಹೊಸತಾಗಿ ಪ್ರಾರಂಭಿಸಿದ ಕೈಗಾರಿಕೆಗಳಿಗೆ ನಿಗದಿತ ವರ್ಷಗಳವರೆಗೆ ತೆರಿಗೆ ವಿನಾಯಿತಿಯನ್ನು ನೀಡಲಾಗಿದೆ. ಬಂಡವಾಳ ಹೂಡಿಕೆಯಲ್ಲಿ ರಿಯಾಯಿತಿ, ಬಡ್ಡಿದರದ ಸಾಲ, ಸಹಾಯಧನ, ನೀಡಲಾಗುತ್ತದೆ. ಇಂತಹ ಕೈಗಾರಿಕೆಗಳು ಉತ್ಪಾದಿಸುವ ಕೈಗಾರಿಕಾ ವಸ್ತುಗಳ ಮೇಲೆ ಸುಂಕದ ರಿಯಾಯಿತಿ ನೀಡಲಾಗಿದೆ. ಆದರೆ ಮೇದರ ಕುಲಕಸುಬಿನಿಂದ ತಯಾರಿಸುವ ವಸ್ತುಗಳ ಕೈಗಾರಿಕೆಗಳಿಗೆ ಪ್ರತ್ಯೇಕವಾದ ಪ್ರೇರಣೆಗಳ ಕೊರತೆ ಕಂಡುಬರುತ್ತದೆ.

5.4.8 ಇತರೆ ಸೌಲಭ್ಯಗಳು : ಹಿಂದುಳಿದ ಪ್ರದೇಶಗಳಲ್ಲಿ ಈ ಕೈಗಾರಿಕೆಗಳು ಬೆಳೆದು ನಿಲ್ಲಲು ಗ್ರಾಮೀಣ ಕೈಗಾರಿಕೆಗಳ ಯೋಜನೆ, ಮತ್ತು ಗ್ರಾಮೀಣ ಕುಶಲಕರ್ಮಿಗಳ ಕಾರ್ಯಕ್ರಮ, ಉದ್ದಿಮೆದಾರಿಕೆಯ ಪ್ರವರ್ತನೆಗಳನ್ನು ಸ್ಥಾಪಿಸಲಾಯಿತು. ಪಂಚವಾರ್ಷಿಕ ಯೋಜನೆಗಳಲ್ಲಿ ಗೃಹ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ದಿಗಾಗಿ ಹಣವನ್ನು ಮೀಸಲಾಗಿರಿಸಿ ವಿನಿಯೋಗಿಸಲಾಯಿತು. 1996-97ರ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳ ಉತ್ಪಾದನೆಯ ಗುರಿ 4,20,000 ಕೋಟಿ. ರೂ. ಇದ್ದು, 4,18,870 ಕೋಟಿ.ರೂ.ಗುರಿಸಾಧಿಸಿದೆ. ಇದರಿಂದ 228 ಲಕ್ಷ ಜನರಿಗೆ ಉದ್ಯೋಗವಕಾಶ ಕಲ್ಪಿಸಿಕೊಟ್ಟಿದೆ. ಗೃಹಮತ್ತು ಸಾಂಪ್ರದಾಯಿಕ ಕೈಗಾರಿಕೆಗಳ ಉತ್ಪಾದನೆಯ ಗುರಿ 42,000 ಕೋಟಿ ರೂ. ಇದ್ದು 41,000 ಕೋಟಿ, ರೂ. ಗುರಿ ಸಾಧಿಸಿದೆ. ಇದರಿಂದ 347 ಲಕ್ಷಜನರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡಲಾಗಿದೆ.

5.5 ಬುಡಕಟ್ಟು ವಾಣಿಜ್ಯದಲ್ಲಿ ನೈತಿಕ ಮೌಲ್ಯಗಳು :

5.5.1 ಪ್ರವೇಶಿಕೆ :

ವಾಣಿಜ್ಯ ಯಾವತ್ತೂ ಸಮಾಜದ ಒಂದು ಭಾಗವಾಗಿಯೇ ಬೆಳೆಯುತ್ತಾ ಬಂದಿದೆ. ವಾಣಿಜ್ಯದ ಮೂಲ ಉದ್ದೇಶ ಲಾಭಾಂಶದ ಲೆಕ್ಕಾಚಾರ ಅಷ್ಟೇ ಅಲ್ಲ. ಸಮಾಜದ ಸರ್ವತೋಮುಖವಾದ ಹಿತಕ್ಕಾಗಿ ಶ್ರಮಿಸುವುದು ವಾಣಿಜ್ಯದ ಮುಖ್ಯ ಉದ್ದೇಶವಾಗಿರಬೇಕು. ವಾಣಿಜ್ಯದ ಅಭಿವೃದ್ಧಿ ಮತ್ತು ಯಶಸ್ಸು ಸಮಾಜವನ್ನು ಅವಲಂಬಿಸಿದೆ. ಸಮಾಜದ ಸಾಂಸ್ಕೃತಿಕ ಮತ್ತು ನೈತಿಕ ಅಭ್ಯುದಯ ಮತ್ತು ಅಧಃಪತನ ವಾಣಿಜ್ಯವನ್ನು ಅವಲಂಬಿಸಿದೆ. ಇಂದು ಬೃಹತ್ಪ್ರಮಾಣದಲ್ಲಿ ಬೆಳೆದು ನಿಂತ ವಾಣಿಜ್ಯವು ಪ್ರಪಂಚದಾದ್ಯಂತ ತನ್ನ ಸೇವೆಯನ್ನು ಸಲ್ಲಿಸುತ್ತಿದೆ. ಈ ಸೇವೆಯ ಸಾರ್ಥಕತೆಯು ಒಂದು ನೈತಿಕ ಮೌಲ್ಯಾಧಾರಿತ ಸಮಾಜದ ನಿರ್ಮಾಣವಾದಾಗ ಮಾತ್ರ ಸಾಧ್ಯವಾಗುತ್ತದೆ. ತಯಾರಿಸಿದ ವಸ್ತುಗಳನ್ನು ಗ್ರಾಹಕರಿಗೆ ಉಣಬಡಿಸುವ ಕಾರ್ಯವೊಂದೇ ವಾಣಿಜ್ಯದ ಅಂತಿಮಗುರಿಯಲ್ಲ. ಸಮಾಜಘಾತಕ,ಮತ್ತು ವಿನಾಶಕಾರಿ ಚಟುವಟಿಕೆಯಲ್ಲಿ ವಾಣಿಜ್ಯ ಸಂಸ್ಥೆಗಳು ತೊಡಗಿದರೆ ಅವು ಕ್ಷಣಕಾಲ ಮಾತ್ರ ಹೆಚ್ಚಿನ ಲಾಭವನ್ನು ತಂದು ಕೊಡುತ್ತವೆ. ಆದರೆ ಸಮಾಜ ಇದನ್ನು ಅರ್ಥೈಸಿಕೊಂಡಾಗ ಇದರ ವಿರುದ್ಧ ಸಿಡಿದೇಳುತ್ತದೆ. ಕಾರಣ ಉತ್ಪಾದನಾ ಕಾರ್ಯದಲ್ಲಿ ತೊಡಗಿರುವ ಯಾವುದೇ ಸಂಸ್ಥೆಗಳು ತನ್ನ ವಾಣಿಜ್ಯ ಮತ್ತು ಮಾರಾಟದ ಪ್ರಕ್ರಿಯೆಯಲ್ಲಿ ಕನಿಷ್ಠ ನೈತಿಕಮೌಲ್ಯಗಳನ್ನು ಅಳವಡಿಸಿಕೊಂಡಿರಬೇಕು. ಇದು ತನಗೆ ಮತ್ತು ಸಮಾಜಕ್ಕೆ ಒಳಿತನ್ನು ತರುತ್ತದೆ.ಇಲ್ಲದೇ ಹೋದರೆ ತಾನು ಮತ್ತು ಸಮಾಜ ಎರಡೂ ಅವನತಿಯನ್ನು ಹೊಂದುತ್ತವೆ.

5.5.2 ವಾಣಿಜ್ಯಮೌಲ್ಯ: ಮೌಲ್ಯ ಎಂದರೆ ಯಾವುದುಜೀವಿಗಳಿಗೆ ಪ್ರಯೋಜನವನ್ನುಂಟು ಮಾಡುವುದೋ ಅದು ಮೌಲ್ಯ. ಯಾವ ವಸ್ತುವಿನ ಉಪಭೋಗದಿಂದ ಮಾನವನಿಗೆ ಒಳಿತಾಗುತ್ತದೆಯೋ ಅದು ಮೌಲ್ಯ. ಯಾವುದು ನಮ್ಮ ನೈತಿಕ ಉನ್ನತಿಗೆ ಸಹಾಯ ವಾಗುವುದೋ ಅದು ನೈತಿಕಮೌಲ್ಯ. ಯಾವುದು ವಾಣಿಜ್ಯದ ದೀರ್ಘಕಾಲದ ಉನ್ನತಿ ಮತ್ತು ಅಸ್ತಿತ್ವಕ್ಕೆ ಸಹಾಯವಾಗುವುದೋ, ಮತ್ತು ಮೌಲ್ಯಾಧಾರಿತ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಿರುವುದೋ, ಅದು ನಿಜವಾದ ವಾಣಿಜ್ಯ ಮೌಲ್ಯ. ನಾವು ಉತ್ಪಾದಿಸಿದ ಮತ್ತು ಉಪಭೋಗಿಸಿದ ಎಲ್ಲಾ ವಸ್ತುವಿಗೆ ಮೌಲ್ಯವಿದೆ ಎಂದು ಹೇಳಲಾಗದು. ವ್ಯಕ್ತಿಗೆ ಮತ್ತು ಸಮಾಜಕ್ಕೆ ಹಾನಿಯನ್ನುಂಟು ಮಾಡದ, ಹಿತವನ್ನುಂಟು ಮಾಡುವ ಎಲ್ಲಾ ವಸ್ತುಗಳು ಸಹ ಮೌಲ್ಯವಂತವೆಂದುಕೂಡ ಹೇಳಲಾಗದು. ಉತ್ತಮವಾದ ವಸ್ತುವಾದರೂ ಸಹ ಅದನ್ನು ಮೋಸದಿಂದ ಮಾರಾಟದ ಪ್ರಕ್ರಿಯೆಗೊಳಪಡಿಸಿ, ಇಲ್ಲವೇ ಮೋಸದಿಂದ ಗ್ರಾಹಕ ಪಡೆದಿದ್ದರೆ ಅದು ಮೌಲ್ಯವಂತ ವಸ್ತುವಾಗಲಾರದು.

ವಾಣಿಜ್ಯದಲ್ಲಿ ಮೌಲ್ಯ ಗಳನ್ನು ಉತ್ಪಾದನಾ ಮೌಲ್ಯ, ವಿಕ್ರಯ ಮೌಲ್ಯ, ಮತ್ತು ನೈಜ ಮೌಲ್ಯಗಳು ಎಂದು ವರ್ಗೀಕರಿಸ ಬಹುದು. ಉತ್ಪಾದನಾ ಮೌಲ್ಯ ಎಂದರೆ, ಉತ್ಪಾದಕನು ವಸ್ತುವಿನ ಉತ್ಪಾದನೆಯಲ್ಲಿ ಬಳಸುವ ಕಚ್ಚಾ

ಸರಕಿನ ಭೌತಿಕ, ರಸಾಯನಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಗುಣಮಟ್ಟ, ಉತ್ಪಾದನೆಯಲ್ಲಿಯ ಸ್ವಚ್ಛತೆ, ಅದಕ್ಕೆ ಕೊಡುವ ಸಾಂಸ್ಕೃತಿಕ ಸಂಸ್ಕಾರ ಮತ್ತು ಪಾರಂಪರಿಕಪಾವಿತ್ರ್ಯತೆಯನ್ನು ಒಳಗೊಂಡಿರುತ್ತದೆ. ಉತ್ಪಾದನೆಯ ನಂತರ ಉತ್ಪಾದಿತ ವಸ್ತುವಿನ ಬಾಹ್ಯಆಕಾರ ಇವೆಲ್ಲವನ್ನೂ ಮರೆಮಾಚಿರುತ್ತದೆ. ನೈಜ ಮೌಲ್ಯ ವಸ್ತುವಿನ ಉಪಯುಕತ್ತೆಯನ್ನು, ಅದರ ಬಾಳಿಕೆ, ಮತ್ತು ಉಪಭೋಗಕನ ಭೋಗದ ತುಷ್ಟಿಗುಣವನ್ನು ಅವಲಂಬಿಸಿರುತ್ತದೆ. ನೈಜ ಮೌಲ್ಯವು ಉಪಭೋಗಕನ ಜೀವನದ ನೈತಿಕ ಮತ್ತು ಆರ್ಥಿಕ ಮಟ್ಟವನ್ನು ಹೆಚ್ಚಿಸುತ್ತದೆ. ಸಮಾಜದಲ್ಲಿ ಆರೋಗ್ಯಕರ ಮತ್ತು ಮೌಲ್ಯಾಧಾರಿತ ಸಾಂಸ್ಕೃತಿಕ ವಾತಾವರಣವನ್ನು ನಿರ್ಮಿಸುತ್ತದೆ. ವಿಕ್ರಯ ಮೌಲ್ಯ ಅದರ ಮಾರಾಟವನ್ನು ಹೆಚ್ಚಿಸುವುದಕ್ಕಾಗಿ ಅನುಸರಿಸುವ ಮಾರ್ಗ ಮತ್ತು ವಿಧಾನಗಳನ್ನು ಸೂಚಿಸುತ್ತದೆ. ವಸ್ತುವಿನ ಆಕರ್ಷಣೆ, ಹೊರಆವರಣದ ಬಣ್ಣ, ಮುದ್ರೆ, ಸಂವೇಷ್ಟಿಸುವಕೆ, ಜಾಹಿರಾತುಗಳನ್ನೊಳಗೊಂಡಿರುತ್ತದೆ. ಇವು ವಸ್ತುವಿನ ನೈಜಮೌಲ್ಯ ಏನೇ ಇದ್ದರೂ ಅವುಗಳನ್ನು ಮರೆಮಾಚಿ, ಆ ವಸ್ತುವಿನ ವಿಕ್ರಯಮೌಲ್ಯವನ್ನು ಹೆಚ್ಚಿಸುತ್ತದೆ. ಪ್ರಸ್ತುತ ವಾಣಿಜ್ಯ ಯುಗದಲ್ಲಿ ನೈಜಮೌಲ್ಯಕ್ಕಿಂತ ವಿಕ್ರಯ ಮೌಲ್ಯವೇ ಪ್ರಾಧಾನ್ಯತೆಯನ್ನು ಪಡೆಯುತ್ತದೆ. ಒಬ್ಬ ಉತ್ಪಾದಕ, ಉತ್ಪಾದನಾ ಮತ್ತು ನೈಜ ಮೌಲ್ಯವನ್ನು ಹೊಂದಿದ ವಸ್ತುವನ್ನು ತಯಾರಿಸಿರಬಹುದು. ಆದರೆ ಅವನು ವಿಕ್ರಯದಲ್ಲಿ ಬಳಸುವ ಮೌಲ್ಯಗಳು ಗ್ರಾಹಕರಿಂದ ಆಕರ್ಷಿತವಾಗದಿದ್ದರೆ, ಉತ್ಪಾದನಾ ಮತ್ತು ನೈಜ ಮೌಲ್ಯಗಳು ವ್ಯರ್ಥವಾಗುತ್ತವೆ. ಇದರಿಂದ ಸಾಮಾಜಕ್ಕೆ ಹಾನಿಯಾಗುತ್ತದೆ. ಆದರೆ, ಒಬ್ಬ ಉತ್ಪಾದಕ ಉತ್ಪಾದನೆ ಮತ್ತು ನೈಜ ಮೌಲ್ಯಗಳನ್ನು ಹೊಂದಿರದ ವಸ್ತುವಿನ ವಿಕ್ರಯದ ಚತುರತೆಯನ್ನು ಹೊಂದಿದ್ದರೆ ತನ್ನ ವಸ್ತುವಿಗೆ ಮಾರುಕಟ್ಟೆಯನ್ನು ಪಡೆಯುತ್ತಾನೆ . ಮತ್ತು ಇದರಿಂದ ಸಾಮಾಜಿಕ ಹಾನಿಯುಂಟಾಗುತ್ತದೆ.

5.5.3 ಬುಡಕಟ್ಟು ವಾಣಿಜ್ಯದ ಮೌಲ್ಯಗಳು :

ಆಧುನಿಕ ಪ್ರಪಂಚದಲ್ಲಿ ಬೆಳೆದು ನಿಂತ ಪ್ರಪಂಚ ಮಾರುಕಟ್ಟೆಯ ವಾಣಿಜ್ಯವು, ಇಡೀ ಭೂಖಂಡವನ್ನೆ ಒಂದು ಮಾರುಕಟ್ಟೆಯ ವ್ಯಾಪ್ತಿಯಲ್ಲಿ ತಂದಿದೆ. ಮಾರುಕಟ್ಟೆಯ ಸಾಂಪ್ರದಾಯಿಕ ಅರ್ಥವು ವಿಶಾಲವಾದ ವ್ಯಾಪ್ತಿಯಲ್ಲಿ ತನ್ನ ವಿಸ್ತೃತವಾದ ಆಕಾರವನ್ನು ತಾಳಿದೆ. ಮನುಷ್ಯ ಬಳಸುವ ಸಾಮಾನ್ಯ ಸೂಜಿಯಿಂದ ಮೋಜಿನ ವಿಮಾನದ ವರೆಗಿನ ವಸ್ತುಗಳು, ತಾನಿರುವಲ್ಲಿಯೇಕೊಂಡು ಉಪಭೋಗಿಸ ಬಹುದಾದ ಸೌಕರ್ಯಗಳನ್ನು ಆಧುನಿಕ ವಿಕ್ರಯ ಪ್ರಕ್ರಿಯೆ ಒದಗಿಸಿಕೊಟ್ಟಿದೆ. ಈ ನಿಟ್ಟಿನಲ್ಲಿ ಬೆಳೆದ ವಾಣಿಜ್ಯವು ತನ್ನ ನೈಜಮೌಲ್ಯಗಳನ್ನು ಕಳೆದುಕೊಳ್ಳುತ್ತಿದೆ. ಸಾಧನಾ ಮೌಲ್ಯಗಳು ಸಾಧ್ಯಮೌಲ್ಯಗಳಿಗಿಂತ ಶ್ರೇಷ್ಠವೆನ್ನುವಂತೆ ಗೋಚರಿಸುತ್ತವೆ. ಏಕೆಂದರೆ ಸಾಧ್ಯಮೌಲ್ಯಗಳು ನೇರವಾಗಿ ಮಾನವನ ಬಯಕೆಯನ್ನು ತೀರಿಸಲಾರವು. ಅವುಗಳಿಗೆ ಸಾಧನಾ ಮೌಲ್ಯಗಳ ಅವಶ್ಯಕತೆ ಅನಿವಾರ್ಯವಾಗಿದೆ. ಹೀಗಾಗಿ ಸಾಧ್ಯ ಮೌಲ್ಯಗಳಿಗಿಂತ ಸಾಧನಾ ಮೌಲ್ಯಗಳದೇ ಮೇಲುಗೈಯಾಗಿದೆ. ಹಣ ಒಂದು ಸಾಧನಾ ಮೌಲ್ಯ ಅಷ್ಟೆ, ಆದರಿಂದಲೇ ನಾವು ನಮ್ಮ ಎಲ್ಲಾ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಸಾಧ್ಯವಿಲ್ಲ. ಆದರೂ ಸಹ ಮಾನವ

ಅವಶ್ಯಕತೆಗಿಂತಲೂ ಅಧಿಕ ಹಣವನ್ನು ಸಂಗ್ರಹಿಸಲು ಪ್ರಯತ್ನಿಸುತ್ತಾನೆ. ಏಕೆಂದರೆ, ಹಣದಿಂದ ಹಾಸಿಗೆ ಸಿಗುತ್ತದೆ ವಿನಃ ನಿದ್ರೆ ಸಿಗುವುದಿಲ್ಲ. ಹಾಗೆಯೇ ಹಣದಿಂದ ಅಹಾರ ಮತ್ತು ಔಷಧಿ ಸಿಗುತ್ತದೆಯೇವಿನಃ ಬಾಯಿಯ ರುಚಿ ಮತ್ತು ಆರೋಗ್ಯಸಿಗುವುದಿಲ್ಲ. ಕಾರಣ ಪ್ರಸ್ತುತ ಸಮಾಜದಲ್ಲಿ ನೈಜಮೌಲ್ಯದ ಮಾರಾಟಪ್ರಕ್ರಿಯೆಗಳು ಬೆಳೆಯ ಬೇಕಾಗಿದೆ.

ಪಾರಂಪರಿಕವಾದ ಭಾರತೀಯ ಗೃಹಕೈಗಾರಿಕೆಗಳ ಉತ್ಪಾದನೆ ಮತ್ತು ಮಾರಾಟ ಪ್ರಕ್ರಿಯೆಗಳಲ್ಲಿ ನೈಜಮೌಲ್ಯಗಳು ಪ್ರಮುಖವಾಗಿವೆ. ಇವರು ತಯಾರಿಸುವ ಅನೇಕ ವಸ್ತುಗಳು ಮುದ್ರೆ ಇಲ್ಲದ ಮತ್ತು ಸಂವೇಷ್ಟಿಸದ ವಸ್ತುಗಳಾಗಿವೆ. ಇವುಗಳ ಗುಣಮಟ್ಟ ಬಾಳಿಕೆ, ಬೆಲೆ, ಉಪಯುಕ್ತತೆಗಳೆಲ್ಲವೂ ಮೌಖಿಕವಾಗಿ ಮಾರಾಟಗಾರನಿಂದಲೇ, ಗ್ರಾಹಕರಿಗೆ ತಿಳಿಸಲ್ಪಡುತ್ತವೆ. ಇದರಲ್ಲಿ ಈರ್ವರನಡುವೆ ನಂಬಿಕೆ, ವಿಶ್ವಾಸ, ಮತ್ತು ಪಾರಂಪರಿಕ ಪರಿಕಲ್ಪನೆಗಳ ಆಶಯಗಳಿರುತ್ತಿದ್ದವು. ಈ ಕೈಗಾರಿಕೆ ವಸ್ತುಗಳಲ್ಲಿ ಸಹ ವಿಕ್ರಯ ಮೌಲ್ಯಗಳು ಕಂಡು ಬಂದರೆ ಅವು ಆಧುನಿಕ ವಾಣಿಜ್ಯದ ಪ್ರಭಾವವೇ ಇರಬೇಕು. ಇಂತಹ ಬುಡಕಟ್ಟು ವಾಣಿಜ್ಯದಲ್ಲಿ ಕಂಡು ಬರುವ ವಾಣಿಜ್ಯಮೌಲ್ಯಗಳನ್ನು ಇಲ್ಲಿ ಸೂಕ್ಷ್ಮವಾಗಿ ಪರಿಚಯಿಸಿದೆ.

5.5.3.ಅ) ಉತ್ಪಾದನಾ ಮೌಲ್ಯ: ಬುಡಕಟ್ಟುಗಳು ತಮ್ಮ ಗೃಹ ಕೈಗಾರಿಕೆಯಲ್ಲಿ ತಯಾರಿಸುವಾಗ ಅಳವಡಿಸುವ ಮೌಲ್ಯಗಳು ಉತ್ಪಾದನಾ ಮೌಲ್ಯಗಳಾಗಿವೆ. ಇವರು ತಯಾರಿಸಿ ಮಾರಾಟ ಮಾಡುವ ವಸ್ತುಗಳಲ್ಲಿ ಪಾರಂಪರಿಕವಾಗಿ ಅಳವಡಿಸಿ ಕಾಪಾಡಿಕೊಂಡು ಬಂದ ಮೌಲ್ಯಗಳಿರುತ್ತವೆ. ಕಚ್ಚಾ ಪದಾರ್ಥದ ಆಯ್ಕೆ, ಅವುಗಳ ತಯಾರಿಕೆಯಲ್ಲಿ ಬಳಸುವ ತಂತ್ರ ಮತ್ತು ಕುಶಲತೆಯಲ್ಲಿ ಪ್ರಾಮಾಣಿಕತೆ ಇರುತ್ತದೆ. ತಯಾರಿಕೆಯಲ್ಲಿ ಗ್ರಾಹಕರಿಗೆ ಮೋಸ ಎಸಗುವ ತಂತ್ರಗಳನ್ನು ಇವರು ಬಳಸುವುದಿಲ್ಲ. ಇವರು ತಾವು ತಯಾರಿಸುವ ವಸ್ತುಗಳಿಗೆ ಬೇಕಾದ ಬಿದಿರು ಸಾಕಷ್ಟು ಪ್ರಮಾಣದಲ್ಲಿ ಸರಿಯಾದ ಸಮಯಕ್ಕೆ ಪೂರೈಕೆ ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ ಕೆಲವು ಪ್ರದೇಶದಲ್ಲಿ ಮಾತ್ರ ಅನ್ಯ ಮಾರ್ಗದಿಂದ ಬಿದಿರನ್ನು ಅಡವಿಯಿಂದ ಕಡಿದು ತರುವುದಾಗಿ ಇವರು ಹೇಳುತ್ತಾರೆ. ಮತ್ತು ಇವರಲ್ಲಿ ಸಂಬಂಧಿಸಿದ ಅಧಿಕಾರಿಗಳ ಶ್ಯಾಮೀಲು ಪರವಾನಿಗೆ ಇರುತ್ತದೆ ಎಂದು ಇವರು ಹೇಳುತ್ತಾರೆ. ಕೆಲವು ಧಾರ್ಮಿಕ ಮತ್ತು ಮಂಗಲ ಕಾರ್ಯದಲ್ಲಿ ಬಳಸುವ ವಸ್ತುಗಳ ತಯಾರಿಕೆಯಲ್ಲಿ ಕೆಲವು ನೀತಿ ನಿಯಮಗಳಿರುತ್ತವೆ. ಇಂತಹ ನೀತಿ ನಿಯಮಗಳನ್ನು ಇವರು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಉದಾ: ಪಡ್ಲಿಗಿ, ದೇವರಪುಟ್ಟಿ ಅಮ್ಮನಗೋಡೆಯನ್ನು ತಯಾರಿಸುವಾಗ ಮಡಿಯಿಂದ ತಯಾರಿಸ ಬೇಕು. ಇದನ್ನು ಇವರು ಪಾಲಿಸುತ್ತಾರೆ.

5.5.3.ಆ) ನೈಜ ಮೌಲ್ಯ : ನೈಜ ಮೌಲ್ಯವು ವಸ್ತುವಿನ ಉಪಯುಕ್ತತೆಯನ್ನು ಮತ್ತು ಅದರ ಬಾಳಿಕೆಯನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಮುದ್ರಿಸಿದ ಮತ್ತು ಸಂವೇಷ್ಟಿಸಿದ ವಸ್ತುಗಳ ಮಾರಾಟ ಪ್ರಕ್ರಿಯೆಯಲ್ಲಿ ವಸ್ತುವಿನ ಉಪಯುಕ್ತತೆ ಮತ್ತು ಅದರ ಜೀವಿತದ ಅವಧಿಯನ್ನು ಅದರ ಪೊಟ್ಟಣದ ಮೇಲೆ ಮುದ್ರಿಸಿರುತ್ತಾರೆ. ಅಕ್ಷರಸ್ತನಾದ

ಗ್ರಾಹಕ ಇದನ್ನೆಲ್ಲಾ ಗಮನಿಸಿಬಹುದು. ಆದರೆ ಅನಕ್ಷರಸ್ಥ ಗ್ರಾಹಕ ಇದನ್ನು ಗಮನಿಸಲು ಸಾಧ್ಯವಾಗುವುದಿಲ್ಲ. ಮೇದರು ತಯಾರಿಸಿ ಮಾರಾಟ ಮಾಡುವ ವಸ್ತುಗಳ ಉಪಯುಕ್ತತೆ ಮತ್ತು ಬಾಳಿಕೆಯನ್ನು ಇವರು ನೇರವಾಗಿ ಗ್ರಾಹಕರಿಗೆ ಮಾರಾಟದ ಸಂದರ್ಭದಲ್ಲಿ ತಿಳಿಸಿಕೊಡುತ್ತಾರೆ. ಇಲ್ಲಿ ಪ್ರಾಮಾಣಿಕತೆ ಮತ್ತು ನಂಬಿಗೆ ಕಾರಣವಾಗಿರುತ್ತದೆ. ಉದಾ : ಮೇದರು ಮೊರ ತಯಾರಿಸುವಾಗ ಅದರ ಅವುದೇವನ್ನು ಬೊಂಬಿನ ಓಳುಗಳಿಂದ ಇಲ್ಲವೇ, ಬದಿರಿನ ಓಳುಗಳಿಂದ ಸಹ ತಯಾರಿಸ ಬಹುದು. ಇವೆರಡರ ನಡುವಿನ ವ್ಯತ್ಯಾಸವನ್ನು ಸಾಮಾನ್ಯ ಗ್ರಾಹಕ ಗುರುತಿಸಲಾರ. ಆದರೆ, ಬದಿರಿನ ಓಳುಗಳಿಂದ ತಯಾರಿಸಿದ ಮೊರ ಬಾಳಿಕೆ ಬರುತ್ತದೆ. ಬೊಂಬಿನ ಓಳನಿಂದ ತಯಾರಿಸಿದ ಮೊರ ಬಾಳಿಕೆ ಬರುವುದಿಲ್ಲ. ಇಲ್ಲಿ ಮೇದರು ಕಡಮೆ ಬೆಲೆಯ ಮೊರವನ್ನು ಕೇಳಿದರೆ ಬೊಂಬಿನ ಮೊರಗಳನ್ನು ಮತ್ತು ತಾಳಿಕೆ ಬರುವ ಹೆಚ್ಚಿನ ಬೆಲೆಯ ಮೊರಗಳನ್ನು ಕೇಳಿದರೆ ಬದಿರಿನ ಮೊರಗಳನ್ನು ಕೊಡುತ್ತಾರೆ. ಇದುವಿಕ್ರಯ ಮೌಲ್ಯ. ಇದು ಇವರು ತಮ್ಮ ವಸ್ತುವಿನ ಮಾರಾಟಪ್ರಕ್ರಿಯೆಯಲ್ಲಿ ಅಳವಡಿಸಿದ ನೈಜ ಮೌಲ್ಯವನ್ನು ಎತ್ತಿತೋರಿಸುತ್ತದೆ.

5.5.3. ಇ) ವಸ್ತುತಂತ್ರ ಮತ್ತು ಪುರುಷತಂತ್ರ : ಮೌಲ್ಯವು ವಸ್ತುವನ್ನು, ವ್ಯಕ್ತಿಯನ್ನು ಮತ್ತು ಸಂದರ್ಭವನ್ನು ಸಹ ಅವಲಂಬಿಸಿರುತ್ತದೆ. ಅಂದರೆ ಯಾವುದೇ ಸಂದರ್ಭದಲ್ಲಿ ಒಂದು ವಸ್ತುವಿನ ಮೌಲ್ಯ ವ್ಯಕ್ತಿಯನ್ನು ಅವಲಂಬಿಸಿರುತ್ತದೆ. ವ್ಯಕ್ತಿಯ ಮನೋಭಾವಕ್ಕೆ ತಕ್ಕಂತೆ ವಸ್ತುವಿನ ಮೌಲ್ಯ ಬದಲಾಗುತ್ತಾ ಹೋಗುತ್ತದೆ. ಬಾಗಣದ ಮೊರ, ಪಡ್ಲಿಗಿ, ಗೋಪಾಳ, ಸೆಟ್ಟಕ್ಕಿ ಪುಟ್ಟಿ ಮುಂತಾದ ವಸ್ತುಗಳು, ಇವುಗಳನ್ನು ಬಳಸುವ ಹಿಂದೂಸಂಪ್ರದಾಯದ ವ್ಯಕ್ತಿಯಲ್ಲಿ ಮೌಲ್ಯವನ್ನು ಪಡೆಯುತ್ತವೆ. ಮೇದರು ತಾವು ತಯಾರಿಸಿ ಮಾರಾಟ ಮಾಡುವ ವಸ್ತುಗಳನ್ನು ಪ್ರದೇಶ, ಕಾಲ, ಪರಿಸರ, ಮತ್ತು ಗ್ರಾಹಕನ ಅಭಿರುಚಿಗೆ ತಕ್ಕಂತೆ ಪುರುಷ ಮತ್ತು ಸಂದರ್ಭವನ್ನು ಗಮನದಿಲ್ಲಿರಿಸಿಕೊಂಡು ತಯಾರಿಸುತ್ತಾರೆ.

5.5.3.ಈ) ಅಬಾಧಿತ ಅಸ್ತಿತ್ವ : ಮೇದರ ಕುಲಕಸುಬಿಗೆ ಮತ್ತು ಇವರು ತಯಾರಿಸುವ ವಸ್ತುಗಳಿಗೆ ಅಬಾಧಿತವಾದ ಅಸ್ತಿತ್ವವಿದೆ. ಆದ್ದರಿಂದಲೇ ಶತಶತಮಾನಗಳಿಂದ ಇವರ ಕುಲಕಸುಬು ಅಸ್ತಿತ್ವದಲ್ಲಿದೆ. ಆಧುನಿಕ ಪ್ರಪಂಚ ಮಾರುಕಟ್ಟೆಯಲ್ಲಿ ಎದುರಾದ ಬದಲೀ ವಸ್ತುಗಳಿಗೆ ಮುಖಾಮುಖಿಯಾಗಿ ನಿಲ್ಲುವ ಶಕ್ತಿ ಮತ್ತು ಸಾಮರ್ಥ್ಯವನ್ನು ಈ ವಸ್ತುಗಳು ಹೊಂದಿವೆ. ಇದಕ್ಕೆ ದೇಶೀಯ ಸಂಸ್ಕೃತಿ ಮತ್ತು ಆಚರಣೆಗಳು ಪೋಷಣೆಯನ್ನು ಕೊಡುತ್ತವೆ. ಬದಲೀ ವಸ್ತುವಿನ ವಿನ್ಯಾಸ, ಬೆಲೆ, ಗುಣಮಟ್ಟ ಬಾಳಿಕೆ ಬುಡಕಟ್ಟುವಸ್ತುಗಳಿಗಿಂತ ಉತ್ತಮವಾಗಿದ್ದರೂ ಸಹ ಕೆಲವು ಧಾರ್ಮಿಕ ಮತ್ತು ಮಂಗಲ ಕಾರ್ಯಗಳಲ್ಲಿ ಬದಿರಿನ ವಸ್ತುಗಳನ್ನೇ ಬಳಸುತ್ತಾರೆ. ಇದಕ್ಕೆ ವಸ್ತುವಿನ ಸಾಂಸ್ಕೃತಿಕ ಸಂಸ್ಕಾರ ಕಾರಣವಾಗಿರುತ್ತದೆ. ಇಂತಹ ಅಬಾಧಿತ ಅಸ್ತಿತ್ವವನ್ನು ಇತರೆ ಎಲ್ಲಾ ವಸ್ತುಗಳ ಬಳಕೆಯಲ್ಲಿ ಕಾಣುವುದಿಲ್ಲ.

5.5.3.ಉ) ಪ್ರಾಮಾಣಿಕವಾದ ಲಾಭ ಮತ್ತು ತೆರಿಗೆಪಾವತಿ: ಪ್ರತಿಯೊಬ್ಬ ಉತ್ಪಾದಕ ಮತ್ತು ಮಾರಾಟಗಾರ ತನ್ನ ಮಾರಾಟದ ಪ್ರಕ್ರಿಯೆಯಲ್ಲಿ ಹೆಚ್ಚಿನ ಲಾಭಾಂಶವನ್ನು ನಿರೀಕ್ಷಿಸುತ್ತಾನೆ. ಕೆಲವು ಉತ್ಪಾದಕರು ಅದಕ್ಕಾಗಿ ಏನೆಲ್ಲ ಕುತಂತ್ರಗಳನ್ನು ಬಳಸುತ್ತಾರೆ. ವಸ್ತುವಿನ ಉತ್ಪಾದನೆಯ ವೆಚ್ಚವನ್ನು ಹೆಚ್ಚು ಕಡಿಮೆ ಲೆಕ್ಕಾಚಾರ ಮಾಡಿ ತೋರಿಸಿ ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳುತ್ತಾನೆ. ವಸ್ತುವಿನ ಪೊಟ್ಟಣದ ಮೇಲೆ, ಸುಳ್ಳು ಲೆಕ್ಕಾ ಚಾರದ ಮಾರಾಟದ ಬೆಲೆಯನ್ನು ಮುದ್ರಿಸಿ ಗ್ರಾಹಕರ ಪ್ರಶ್ನಿಸುವ ಅಧಿಕಾರನ್ನು ಕಿತ್ತುಕೊಂಡಿರುವನು. ತೆರಿಗೆ ಪಾವತಿ ರಹಿತ ವಸ್ತುಗಳನ್ನು ಮಾರಿ, ಮಾರಿಸುತ್ತಾನೆ. ಇದರಿಂದ ಸರಕಾರ ಮತ್ತು ಸಮಾಜಕ್ಕೆ ಅನ್ಯಾಯ ಮತ್ತು ಮೋಸವನ್ನು ಮಾಡುತ್ತಾನೆ. ಇಲ್ಲಿ ತಯಾರಿಸಿದ ವಸ್ತುಗಳು ಎಷ್ಟೇ ಗುಣಯುತವಾಗಿದ್ದರೂ ಅವು ಮೌಲ್ಯವನ್ನು ಕಳೆದು ಕೊಳ್ಳುತ್ತವೆ. ಆದರೆ ಬುಡಕಟ್ಟು ವಾಣಿಜ್ಯದಲ್ಲಿ ಈ ಸಮಸ್ಯೆ ಬರುವುದಿಲ್ಲ. ತಾವು ತಯಾರಿಸುವ ವಸ್ತುಗಳ ಮಾರಾಟದ ಬೆಲೆಯನ್ನು ತಮ್ಮ ದಿನಗೂಲಿಗೆ ಹೋಲಿಕೆಯನ್ನು ಮಾಡಿಕೊಂಡು ಇವರು ನಿರ್ಧರಿಸಿ ಹೇಳುತ್ತಾರೆ. ದೀರ್ಘಕಾಲದ ಭವಿಷ್ಯತ್‌ನ್ನು ಇವರು ತಮ್ಮ ವಾಣಿಜ್ಯದಲ್ಲಿ ಯೋಚಿಸುವುದಿಲ್ಲ ಮತ್ತು ಯೋಜಿಸುವುದುಸಹ ಇಲ್ಲ. ವರ್ತಮಾನದಲ್ಲಿ ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಿ ಬಂದಷ್ಟು ಲಾಭವನ್ನು ಪಡೆಯುವದಷ್ಟೆ ಇವರ ಗುರಿಯಾಗಿರುತ್ತದೆ. ಇದಕ್ಕೆ ಇವರ ನಂಬಿಕೆಗಳು ಕಾರಣವಾಗುತ್ತವೆ. ಅಪ್ರಮಾಣಿಕವಾಗಿ ವಸ್ತುವನ್ನು ಹೆಚ್ಚಿನ ಬೆಲೆಗೆ ಗ್ರಾಹಕರಿಗೆ ಮಾರುವ ಕುತಂತ್ರವನ್ನು ಇವರು ಮಾಡುವುದಿಲ್ಲ.

5.5.3.ಊ) ನೈತಿಕಮೌಲ್ಯ : ನಾವು ಪಡೆದ ವಾಣಿಜ್ಯಕೌಶಲ್ಯ ಮತ್ತು ವಿದ್ಯೆ ಸಾರ್ಥಕವಾಗಬೇಕಾದರೆ,ನಮ್ಮ ವಾಣಿಜ್ಯ ಮತ್ತು ಜೀವನದಲ್ಲಿ ನೈತಿಕ ಮಾರ್ಗವನ್ನು ಅನುಸರಿಸ ಬೇಕು. ಇಲ್ಲವಾದರೆ ನ್ಯಾಯಯುತವಲ್ಲದ ಜೀವನವನ್ನು ನಡೆಸಲು ವಿದ್ಯೆ ಸಹಾಯಕವಾಗುತ್ತದೆ. ಸ್ವಾಮಿ ವಿವೇಕಾನಂದರು ಹೇಳುವ ಹಾಗೆ ಜ್ಞಾನವು ಒಂದು ಶಕ್ತಿ, ಇದನ್ನು ಒಳ್ಳೆಯ ರೀತಿಯಲ್ಲಾಗಲೀ, ಕೆಟ್ಟ ರೀತಿಯಲ್ಲಾಗಲಿ, ಉಪಯೋಗಿಸಬಹುದು. ಇದನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳಬೇಕಾದರೆ ವ್ಯಕ್ತಿಯಲ್ಲಿ ನೈತಿಕ ಪರಿವರ್ತನೆಯುಂಟಾಗಬೇಕು.[9] ಮಾನವ ತನ್ನ ಜೀವನದಲ್ಲಿ ಅಳವಡಿಸುವ ನೈತಿಕತೆಗೆ ಮೂರು ಬಗೆಯ ಆಧಾರಗಳಿರುತ್ತವೆ.ಅವುಗಳೆಂದರೆ, ಭಯ, ಎರಡನೆಯದು ಧಾರ್ಮಿಕ ಸಂಪ್ರದಾಯ, ಮೂರನೆಯದು ಅಂತಃಪ್ರೇರಣೆ .

ಭಯ : ಕಾನೂನಿನ ಭಯ, ನರಕದ ಭಯ, ಕಷ್ಟದ ಭಯ , ಮತ್ತು ಸಾರ್ವಜನಿಕ ಅಭಿಪ್ರಾಯದ ಭಯ ಸಾಮಾನ್ಯ ಭಯಗಳು. ಗ್ರಾಹಕರ ಭಯ, ಮಾರುಕಟ್ಟೆಯ ಅಸ್ತಿತ್ವದ ಭಯ, ಪೈಪೋಟಿಯ ಭಯ ಇವು ವಾಣಿಜ್ಯದ ಭಯಗಳು. ಇವುಗಳಲ್ಲಿ ಯಾವುದಾದರೊಂದು ಇಲ್ಲವೇ ಇವೆಲ್ಲವುದರ ಭಯದಿಂದ ಮಾನವ ನೈತಿಕತೆಯನ್ನು ಅಳವಡಿಸಿಕೊಳ್ಳುತ್ತಾನೆ. ಭಯ ಇಲ್ಲದಿದ್ದರೆ ಇವರ ವ್ಯಾಪಾರದ ಸ್ವರೂಪವೇ ಬದಲಾಗುತ್ತದೆ. ಭಯಗಳು ಉತ್ಪಾದಕ ಮತ್ತು ಮಾರಾಟಗಾರನನ್ನು ನೀತಿ ಮಾರ್ಗದಲ್ಲಿ ನಡೆಯಲು ಪ್ರೇರೇಪಿಸುತ್ತವೆ.

ಧಾರ್ಮಿಕ ಸಂಪ್ರದಾಯದ : ಸಮಾಜದಲ್ಲಿ ಪ್ರಚಲಿತದಲ್ಲಿರುವ ಎಷ್ಟೋ ನೀತಿ-ನಿಯಮ, ಆಚಾರ-ವಿಚಾರಗಳು ಪ್ರಾರಂಭದಿಂದಲೂ ನಮ್ಮ ಮೇಲೆ ಪ್ರಭಾವಬೀರಿರುತ್ತವೆ. ಹೊರ ಜಗತ್ತಿನ ಪ್ರಭಾವ ವ್ಯಕ್ತಿಯ ಕೆಲಸ ಮತ್ತು ಜೀವನದಲ್ಲಿ ಇವುಗಳನ್ನು ಅಳವಡಿಸಿಕೊಳ್ಳಬೇಕಾಗುವುದು. ಅದಕ್ಕೆ ಅನುಗುಣವಾಗಿಯೇ ಬಾಳ ಬೇಕಾಗುತ್ತದೆ. ಬುಡಕಟ್ಟಿಗರ ಅನೇಕ ಧಾರ್ಮಿಕ ಆಚರಣೆ, ಸಂಪ್ರದಾಯಗಳು ಇವರ ವಾಣಿಜ್ಯದಲ್ಲಿ ನೈತಿಕತೆಯನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತವೆ.

ಅಂತಃಪ್ರೇರಣೆಯ ಭಯ : ಇಲ್ಲಿ ಯಾವುದೇ ಬಾಹ್ಯ ಒತ್ತಡವಿಲ್ಲದೇ ಉತ್ಪಾದಕ ಮತ್ತು ಮಾರಾಟಗಾರ ಸ್ವಪ್ರೇರಣೆಯಿಂದ ನೈತಿಕತೆಯ ಸ್ವಭಾವವನ್ನು ಬೆಳೆಸಿಕೊಳ್ಳುತ್ತಾನೆ. ಇಲ್ಲಿ ಯಾವುದೇ ಭಯ, ಮತ್ತು ಒತ್ತಡಗಳಿರುವುದಿಲ್ಲ. ಒಳ್ಳೆಯ ವಸ್ತುವನ್ನು ತಯಾರಿಸುವುದು, ನ್ಯಾಯಯುತವಾದ ಬೆಲೆಗೆ ಮಾರುವುದು, ಗ್ರಾಹಕರಿಗೆ ಮತ್ತು ಸರಕಾರಕ್ಕೆ ಮೋಸ ಮಾಡಬಾರದು, ಎನ್ನುವುದು ಸ್ವಇಚ್ಛೆಯಿಂದ ಬಂದಿರುತ್ತದೆ. ಇದು ಸಂಪ್ರದಾಯಿಕವಾಗಿ ಇಲ್ಲವೇ ಪಾರಂಪರಿಕ ಸಂಸ್ಕಾರದೊಂದಿಗೆ ಬಂದಿರುವುದು.

ಮೇದಬುಡಕಟ್ಟು ಸಮುದಾಯದವರು ತಮ್ಮ ಕುಲಕಸುಬು ವಾಣಿಜ್ಯದಲ್ಲಿ ಇಂತಹ ಯಾವುದೇ ಬಗೆಯ ಆಧಾರದಿಂದ ತಮ್ಮ ಜೀವನ ಮತ್ತು ವಾಣಿಜ್ಯದಲ್ಲಿ ನೈತಿಕ ಮೌಲ್ಯವನ್ನು ಅಳವಡಿಸಿಕೊಂಡಿರುತ್ತಾರೆ.

5.5.3.ಋ) ಸೇವೆ : ಅನೇಕ ವಾಣಿಜ್ಯ ಮಳಿಗೆಗಳಲ್ಲಿ ವಿಚಿತ್ರವಾದ ಫಲಕಗಳನ್ನು ತೂಗು ಹಾಕಿರುವುದು ಕಂಡು ಬರುತ್ತದೆ. ಗಿರಾಕಿಗಳೇ ದೇವರು, ನಿಮ್ಮಸೇವೆಗಾಗಿ ನಾವು ಸದಾ ಸಿದ್ಧ ಉದ್ರಿ ವೈರತ್ವಕ್ಕೆ-ನಗದು ಸ್ನೇಹಕ್ಕೆ ಮಾರ್ಗ, ಇವೆಲ್ಲ ಗ್ರಾಹಕರ ಮನವೊಲಿಸಲು ಬಳಸುವ ತಂತ್ರಗಳು. ಆದರೆ ಯಾವ ಒಬ್ಬ ಉತ್ಪಾದಕ ಮತ್ತು ಮಾರಾಟಗಾರನೂ ಗ್ರಾಹಕರಿಗೆ ಹಣವನ್ನು ಪಡೆಯದೇ ವಸ್ತುಗಳನ್ನು ದಯಪಾಲಿಸುವುದಿಲ್ಲ. ಆದರೆ, ಕೆಲವು ಬುಡಕಟ್ಟು ಕಸುಬುದಾರರು, ಅನೇಕ ಧಾರ್ಮಿಕ ಕಾರ್ಯಗಳಲ್ಲಿ ದೇವರಿಗೆ ತಾವು ಸಲ್ಲಿಸುವ ಸೇವೆ ಎಂದು ತಮ್ಮ ಕಸುಬು ಆಧಾರಿತ ಕೆಲಸಗಳನ್ನು ದುಡ್ಡು ಪಡೆಯದೇ ಮಾಡುತ್ತಾರೆ. ಅಲ್ಲದೇ ಕೆಲವು ಸಾಮಾಜಿಕ ಕಾರ್ಯಗಳಲ್ಲಿ ಸಹ ಇವರು ತಮ್ಮ ಸೇವೆ ಎಂದು ತಮ್ಮ ಕಸುಬಿನ ಕೌಶಲ್ಯವನ್ನು ಬಳಕೆ ಮಾಡುವುದುಂಟು. ಇಂತಹ ಅನೇಕ ಘಟನೆಗಳನ್ನು ವಕ್ತೃಗಳು ನನ್ನ ಕ್ಷೇತ್ರಕಾರ್ಯದಲ್ಲಿ ಹೇಳಿರುವರು.

5.5.3. ಎ) ಸಾಮಾಜಿಕ ಹೊಣೆಗಾರಿಕೆ : ಭೂಮಿಗೆ ಮನುಷ್ಯ ಬರುವಾಗ ಏಕಾಂಗಿಯಾಗಿ ಬರುತ್ತಾನೆ. ಕುಟುಂಬ ಸಮಾಜದೊಂದಿಗೆ ಸಂಘ ಜೀವಿಯಾಗಿ ಬೆಳೆಯುತ್ತಾನೆ. ಸಮಾಜ ತನಗೆ ಕೊಟ್ಟ ನೀತಿಗಳಿಗೆ ಋಣಿಯಾಗಿ ತಾನು ಸಮಾಜಕ್ಕೆ ತನ್ನ ಸೇವೆಯನ್ನು ಸಲ್ಲಿಸಬೇಕು. ಸಮಾಜದ ಹೊಣೆಗಾರಿಕೆ ಪ್ರತಿಯೊಬ್ಬರೂ ಕಾರಣೀಭೂತರು. ವಾಣಿಜ್ಯ ಮತ್ತು ವ್ಯವಹಾರಸ್ಥರು ಸಮಾಜದ ಹಿತ ಮತ್ತು ಅಭ್ಯುದಯಕ್ಕಾಗಿ ದುಡಿಯಬೇಕು. ಅಂತಹ ಚಟುವಟಿಕೆಗಳನ್ನೇ ಅವರು ರೂಪಿಸಿಕೊಂಡು ರೂಢಿಸಿಕೊಳ್ಳಬೇಕು. ಸಮಾಜವನ್ನು ಕಲುಷಿತಗೊಳಿಸುವ ವಿಧ್ವಂಸಕ

ಚಟುವಟಿಕೆಗಳಲ್ಲಿ ತೊಡಗ ಬಾರದು. ತಮ್ಮ ವ್ಯವಹಾರದಲ್ಲಿ ಪ್ರಾಮಾಣಿಕತೆಯನ್ನು ಅಳವಡಿಸಿಕೊಂಡು, ತಾವು ಉತ್ಪಾದಿಸಿ ಮಾರಾಟ ಮಾಡುವ ವಸ್ತುಗಳ ಗುಣಮಟ್ಟ, ಬೆಲೆ, ಲಾಭಾಂಶದಲ್ಲಿ ನೈತಿಕ ತತ್ವಗಳನ್ನು ಅಳವಡಿಸಿಕೊಂಡಿರಬೇಕು. ತಾನೂ ಮತ್ತು ತನ್ನ ಗ್ರಾಹಕರ ಯೋಗಕ್ಷೇಮವನ್ನು ಸದಾ ಬಯಸುತ್ತಿರಬೇಕು. ಏಕೆಂದರೆ ಪ್ರಪಂಚದಲ್ಲಿ ಯಾವುದೂ ಸ್ಥಿರವಲ್ಲ. ಬದಲಾಗುತ್ತಿರುವ ಗ್ರಾಹಕರ ಅಭಿರುಚಿಗೆತಕ್ಕಂತೆ ವಸ್ತುಗಳನ್ನು ಉತ್ಪಾದಿಸಿ ಪೂರೈಸುವಲ್ಲಿ ಸಾಮಾಜಿಕ ಕಲ್ಯಾಣವನ್ನು ಗಮನದಲ್ಲಿರಿಸಿಕೊಂಡಿರುವುದು ಅವಶ್ಯ. ಸಮಾಜ ಕಲ್ಯಾಣದ ಗುರಿಯನ್ನು ಹೊಂದಿರಬೇಕು. ಇಲ್ಲವಾದರೆ ಸಮಾಜದ ಜೊತೆಯಲ್ಲಿ ವಾಣಿಜ್ಯ ಸಂಘಟನೆಗಳು ಸಹ ಸಂಕಟವನ್ನು ಎದುರಿಸಬೇಕಾಗುತ್ತದೆ. ಈ ಅಂಶಗಳಲ್ಲಿ ಕೆಲವಾದರೂ ಬುಡಕಟ್ಟು ವಾಣಿಜ್ಯದಲ್ಲಿ ಕಂಡು ಬರುತ್ತವೆ.

5.5.3.ಐ) ಮಾಲಿನ್ಯ ರಹಿತ ಪರಿಸರನಿರ್ಮಾಣ : ಮಾನವ ಈ ಭೂಮಿಯ ಮೇಲೆ ಜನ್ಮತಾಳಿದಂದಿನಿಂದ ಇಲ್ಲಿಯ ನಿಸರ್ಗವನ್ನು ತನ್ನಿಚ್ಛೆಯಂತೆ ಬಳಕೆ ಮಾಡಿಕೊಂಡು ಬಂದಿದ್ದಾನೆ. ಸುಂದರವಾದ ಪರಿಸರವನ್ನು ಕಲುಷಿತ ಗೊಳಿಸುತ್ತಿದ್ದಾನೆ. ಪ್ರಸ್ತುತ ಪ್ರಪಂಚದಲ್ಲಿ ಉತ್ಪಾದನೆಯಲ್ಲಿ ತೊಡಗಿರುವ ಬೃಹತ್ ಉದ್ದಿಮೆಗಳು ತಮ್ಮ ಉತ್ಪಾದನೆಯ ಜೊತೆಗೆ ಇಡೀ ಪರಿಸರವನ್ನು ವಿವಿಧ ಮಾರ್ಗಗಳಿಂದ ಮಲಿನ ಗೊಳಿಸುತ್ತಿವೆ. ಉತ್ಪಾದನೆಯಲ್ಲಿ ಹೊರಹಾಕುವ ತ್ಯಾಜ್ಯ ವಸ್ತುಗಳಿಂದ ಭೂಮಾಲಿನ್ಯ, ಜಲಮಾಲಿನ್ಯ, ಮತ್ತು ವಾಯು ಮಾಲಿನ್ಯಗಳುಂಟಾಗುತ್ತಿವೆ. ಭೂಮಾಲಿನ್ಯದಿಂದ ಭೂಮಿಯಲ್ಲಿ ಕೊಳೆಯಲಾರದ ಪ್ಲಾಸ್ಟಿಕ್‌ನಂತಹ ವಸ್ತುಗಳು ಸೇರಿಕೊಂಡು ಭೂಮಿಯ ಫಲವತ್ತತೆ ನಾಶವಾಗಿ ಭೂಮಿ ಬಂಜರಾಗುತ್ತಿದೆ. ಜಲಮಾಲಿನ್ಯದಿಂದ ಜಲಚರಗಳು ಅಳಿವು ಉಳಿವಿನ ಅಂಚಿನಲ್ಲಿವೆ. ಜೀವಿಗಳಿಗೆ ಕುಡಿಯಲು ಸಹ ಶುದ್ಧವಾದ ನೀರು ಸಿಗದಾಗಿದೆ. ವಾಯುಮಾಲಿನ್ಯದಿಂದ ವಾಯುಮಂಡಲದಲ್ಲಿಯ ಆಮ್ಲಜನಕದ ಪ್ರಮಾಣ ಕಡಿಮೆಯಾಗಿದೆ. ಓಜೋನ್‌ಪದರುಸಹ ರಂಧ್ರವಾಗುತ್ತಿದೆ. ಬುಡಕಟ್ಟು ಕುಲಕಸುಬಿನಿಂದ ಇಂತಹ ಮಾಲಿನ್ಯವಾಗುವುದಿಲ್ಲ. ಮೇದರು ತಯಾರಿಸುವ ಬಿದಿರಿನ ವಸ್ತುಗಳ ತ್ಯಾಜ್ಯವಸ್ತುಗಳು ಭೂಮಿಯಲ್ಲಿ ಸುಲಭವಾಗಿ ಕೊಳೆಯುತ್ತವೆ ಮತ್ತು ಭೂಮಿಯ ಫಲವತ್ತತೆಯನ್ನು ಹೆಚ್ಚಿಸುತ್ತವೆ. ಇದರಿಂದಾಗಿ ಮಾಲಿನ್ಯ ರಹಿತ ಪರಿಸರ ನಿರ್ಮಾಣ ಸಾಧ್ಯವಾಗುತ್ತದೆ. ಮತ್ತು ದೇಶೀಯ ಗೃಹಕೈಗಾರಿಕೆಗಳ ಅಭಿವೃದ್ಧಿ ಸಾಧ್ಯವಾಗುತ್ತದೆ.

5.5.3.ಒ) ದೇಶೀಯ ಸಂಸ್ಕೃತಿಯ ಮತ್ತು ಆಚರಣೆಗಳ ರಕ್ಷಣೆ: ಬುಡಕಟ್ಟು ಕಸುಬುದಾರರು ತಯಾರಿಸುವ ಅನೇಕ ವಸ್ತುಗಳು ಈ ದೇಶ ಮತ್ತು ನಾಡಿನ ಸಂಸ್ಕೃತಿಯ ಸಂಸ್ಕಾರವನ್ನು ಕಾಣುತ್ತೇವೆ. ಪ್ರತಿಯೊಂದು ವಸ್ತುವಿನ ನಿರ್ಮಾಣದ ವಿನ್ಯಾಸ ಮತ್ತು ಅದರ ಭೌತಿಕ ಆಕಾರದಲ್ಲಿ ದೇಶೀಯ ಜಾನಪದೀಯ ಲಕ್ಷಣಗಳಿರುತ್ತವೆ. ಇವುಗಳನ್ನು ಕಟ್ಟುನಿಟ್ಟಾಗಿ ಅನೇಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳಲ್ಲಿ ಬಳಸಲಾಗುತ್ತದೆ. ಇಂತಹ ವಸ್ತುಗಳ ಬದಲಿಗೆ ಬಂದ ಅನೇಕ ವಸ್ತುಗಳ ಗುಣಮಟ್ಟ, ಬಾಳಿಕೆ, ಬೆಲೆ, ಮುಂತಾದವುಗಳಲ್ಲಿ ಎಷ್ಟೇ ಅನುಕೂಲತೆಗಳನ್ನು ಹೊಂದಿದ್ದರೂ

ಸಹ ಅವುಗಳಿಗೆ ಸಾಂಪ್ರದಾಯಿಕ ಸಂಸ್ಕಾರಗಳಿರುವುದಿಲ್ಲ. ಕಾರಣ ಬುಡಕಟ್ಟು ಗೃಹ ಕೈಗಾರಿಕೆಗಳನ್ನು ರಕ್ಷಿಸಿ ಅವುಗಳನ್ನು ಉಳಿಸಿ ಬೆಳೆಸುವುದರಿಂದ ಒಂದುನಾಡಿನ ಸಂಸ್ಕೃತಿಯನ್ನು ಕಾಪಾಡಿದಷ್ಟೆ ಫಲ ಲಭ್ಯವಾಗುತ್ತದೆ.

ಅಡಿಟಿಪ್ಪಣಿಗಳು :

1. ಕೆ.ಡಿ .ಬಸವಾ, ಆಧುನಿಕ ಅರ್ಥಶಾಸ್ತ್ರ ಪುಟ.209. ವಿದ್ಯಾವಾಹಿನಿ ಪ್ರಕಾಶನ, ಹುಬ್ಬಳ್ಳಿ. 2000.
2. Philip Kotler: principles of Marketing 3rd Edition.page :296.published by: prentice, Half of India Private Limited. M-97 New Delhi-110001)
3. Philip kotler. Principles of Marketing. Page no:296 . Publication : prentice-hall of India private limited New Delhi –110001 –1989.
4. ಅಮೇರಿಕನ್ ಮಾರ್ಕೆಟಿಂಗ್ ಅಸೋಷಿಯೇಶನ್ ನೀಡಿದ ವ್ಯಾಖ್ಯೆಯ ಪ್ರೊ.ಕೆ.ಡಿ. ಬಸವಾ. ಮಾರುಕಟ್ಟೆ ನಿರ್ವಹಣೆ. ಪುಟ ಸಂ.3.27.ಪ್ರಕಾಶಕರು ವಿದ್ಯಾವಾಹಿನಿ ಪ್ರಕಾಶನ, ಹುಬ್ಬಳ್ಳಿ .
5. ಕೆ.ಡಿ.ಬಸವಾ. ಆಧುನಿಕ ಅರ್ಥಶಾಸ್ತ್ರ ಪುಟ : 258. ವಿದ್ಯಾವಾಹಿನಿ ಪ್ರಕಾಶನ ಹುಬ್ಬಳ್ಳಿ.
6. ಪ್ರೊ.ಕೆ.ಡಿ.ಬಸವಾ.ಮಾರುಕಟ್ಟೆ ನಿರ್ವಹಣೆ ಪುಟ : 1.5. ವಿದ್ಯಾವಾಹಿನಿ ಪ್ರಕಾಶನ ಹುಬ್ಬಳ್ಳಿ.
7. ಅದೇ.ಪುಟ : 6.1
8. ಮೊಗಳ್ಳಿ ಗಣೇಶ್. ದಲಿತರು ಮತ್ತು ಜಾಗತೀಕರಣ. ಪುಟ. 223. ನಿರ್ದೇಶಕರು,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ - ಹಂಪಿ.
9. ಸ್ವಾಮಿ ನಿತ್ಯಸ್ಥಾನಂದ. ಜೀವನ ಮೌಲ್ಯಗಳು.ಪುಟ: 35. ಅಧ್ಯಕ್ಷರು, ಶ್ರೀ ರಾಮಕೃಷ್ಣ ಆಶ್ರಮ ಮೈಸೂರು -2001

ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ



1. ಮೇದರ ಡಿಪೋ । ಅಡ್ಡಿ



2. ಬಿದಿರಿನ ಆಯ್ಕೆಯಲ್ಲಿ ಗ್ರಾಹಕರು



3. ಬೀದಿಯಲ್ಲಿಯೇ ಮಾರಾಟ



4. ತಯಾರಿಸಿದ ವಸ್ತುಗಳನ್ನು ತಲೆಯ ಮೇಲೆ ಹೊತ್ತು ಮಾರಾಟ ಮಾಡುವುದು

ಅಧ್ಯಾಯ - ಆರು

ಸಮಾರೋಪ :

ಅಧ್ಯಾಯ - ಆರು

ಸಮಾರೋಪ :

ನನ್ನ ಈ ಅಧ್ಯಯನದಲ್ಲಿ ಮೇದಬುಡಕಟ್ಟು ಸಮುದಾಯದ ಅನೇಕ ಮಾಹಿತಿಯನ್ನು ಕೊಟ್ಟಿದ್ದೇನೆ. ಈ ಸಮುದಾಯವು ಕಾಲಕಾಲಕ್ಕೆ ಅನೇಕ ಅನ್ಯಸಮುದಾಯಗಳ ಪ್ರಭಾವಕ್ಕೊಳಗಾಗಿದೆ. ಆದರು ಸಹ ತನ್ನ ಪಾರಂಪರಿಕ ಮೌಲ್ಯಗಳನ್ನು ಕಾಪಾಡಿಕೊಂಡು ಬಂದಿದೆ. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಿಂದ ಕರ್ನಾಟಕಕ್ಕೆ ಅನೇಕ ಬುಡಕಟ್ಟುಸಮುದಾಯಗಳು ವಲಸೆ ಬಂದವು. ಅವುಗಳಲ್ಲಿ ಮೇದಬುಡಕಟ್ಟುಸಮುದಾಯವೂ ಒಂದು. ಹೀಗೆ ವಲಸೆ ಬರುವಾಗ ಇವರು ತಮ್ಮ ಕುಲಕಸುಬಿನೊಂದಿಗೆ ಒಂದು ಸ್ಥಿರವಾದ ನೆಲೆಯನ್ನು ಕಾಣುವ ಕಲ್ಪನೆಯ ಕನಸಿನೊಂದಿಗೆ ಬಂದರು. ಕಾಡಿನೊಂದಿಗಿದ್ದ ತಮ್ಮ ಸಂಬಂಧವನ್ನು ಸರಕಾರದ ಹೊಸ ನೀತಿಯಿಂದ ಬದಲಿಸಿಕೊಳ್ಳಬೇಕಾಯಿತು. ಕಳೆದುಕೊಂಡ ಅವರ ಆರ್ಥಿಕ ಚಟುವಟಿಕೆಗಳ ಮೇಲೆ ಭಾರತದ ಸ್ವಾತಂತ್ರ್ಯದ ನಂತರ ಸಹ ಬೆಳಕುಹರಿಯದಾಯಿತು. ತಡವಾಗಿ ನಾಡಜೀವನಕ್ಕೆ ಕಾಲಿರಿಸಿದ ಇಂತಹ ಸಮುದಾಯಗಳು ಮುಖ್ಯವಾಹಿನಿಗೆ ಸೇರುವಲ್ಲಿ ಸಾಮಾಜಿಕ ಭಿನ್ನಾಬಿಪ್ರಾಯಗಳು ಮೂಡಿ ಬೆಳೆದವು. ಈ ಕುರಿತ ಸರಕಾರದ ಯೋಜನೆಗಳು ಪೂರ್ಣಫಲಿಸದಾಗಿವೆ.

ಈ ಅಧ್ಯಯನದಲ್ಲಿ ಮೇದರ ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳ ಜೊತೆಗೆ ಇವರ ಸಾಮಾಜಿಕ ಚಟುವಟಿಕೆಗಳ ಮಾಹಿತಿಯನ್ನು ನೀಡಲಾಗಿದೆ. ಮೇದಸಮುದಾಯದ ಸಂಸ್ಕೃತಿಯ ಜೊತೆಗೆ ಇವರ ಕುಲಕಸುಬು ಆಧಾರಿತ ವಾಣಿಜ್ಯಚಟುವಟಿಕೆಗಳನ್ನು ಗಮನಿಸಿರುವುದು ಈ ಅಧ್ಯಯನದ ವೈಶಿಷ್ಟತೆ. ತಲೆಮಾರುಗಳಿಂದ ಅನೇಕ ಮಗ್ಗಲುಗಳಲ್ಲಿ ಶೋಷಿತವಾದ ಸಮುದಾಯದ ಜೀವನಕ್ರಮ ಹೀಗಿತ್ತು ಎಂದು ಬಿಚ್ಚಿಡುವುದು ಒಂದು ರೀತಿಯ ಅಧ್ಯಯನ. ಅದರ ಜೊತೆಗೆ ಇವರು ನಂಬಿ ಆಶ್ರಯಿಸಿರುವ ಕಸುಬು ಮತ್ತು ಅದರ ವಾಣಿಜ್ಯದ ಒಳಹರವಿನ ಕಷ್ಟಸುಖಗಳ ಒಂದು ಚಿತ್ರಣ ಈ ಅಧ್ಯಯನದಲ್ಲಿ ಕಂಡುಬರುತ್ತದೆ. ಆಧುನಿಕಪ್ರಪಂಚ ವಿಶ್ವಮಾರುಕಟ್ಟೆಯ ಸಂದರ್ಭದಲ್ಲಿ ಬುಡಕಟ್ಟುಕುಲಕಸುಬಿನ ವಸ್ತುಗಳು ನವೀನ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಮುಖಾಮುಖಿಯಾಗುತ್ತವೆ. ಅವುಗಳ ಎದುರು ತೊಡೆಚಪ್ಪರಿಸಿ ಪೈಪೋಟಿಗೆ ನಿಲ್ಲಬೇಕಾಗಿದೆ. ಮಾರುಕಟ್ಟೆಯಲ್ಲಿ ತಮ್ಮ ವಸ್ತುವಿನ ಅಳಿವು ಉಳಿವಿನ ಜೊತೆಗೆ ತಮ್ಮ ಬದುಕಿನಸವಾಲನ್ನು ಎದುರಿಸಬೇಕಾಗಿದೆ.

ಬಹುದೂರದ ಕಾಡುನಂಬಿ ಬಳ್ಳಾರಿ ಜಿಲ್ಲೆಯಂತಹ ಬಯಲು ಸೀಮೆಗಳಲ್ಲಿಯ ಇವರ ಬದುಕಿನ ಪೂರ್ಣಚಿತ್ರಣವನ್ನು ಈ ಅಧ್ಯಯನದಲ್ಲಿ ಚಿತ್ರಿಸಲೆತ್ನಿಸಿರುವೆ. ಈ ಸಮುದಾಯವನ್ನು ಕುರಿತು ಬಳ್ಳಾರಿ ಜಿಲ್ಲೆಯಾದ್ಯಂತ ಸಂಗ್ರಹಿಸಿದ ಮಾಹಿತಿಯನ್ನು ನನ್ನ ಕಾಣ್ಕೆಯ ಜೊತೆಗೆ ಉಲ್ಲೇಖಿಸಿದ್ದೇನೆ. ಇವರ ಪಾರಂಪರಿಕ ಆಚಾರಗಳಜೊತೆ ಕಸುಬಿನಿಂದ ತಯಾರಿಸುವ ವೈವಿಧ್ಯಮಯ ವಸ್ತುಗಳ ತಯಾರಿಕೆ ಮತ್ತು ವಿಕ್ರಯೆಯ ಪ್ರಕ್ರಿಯೆಗಳನ್ನು

ಸಮಸ್ಯೆಗಳಸಮೇತ ವಿವರಿಸಿರುವೆ. ಮೇದರ ಸಂಸ್ಕೃತಿ ಮತ್ತು ವಾಣಿಜ್ಯಅಧ್ಯಯನ ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಸ್ತುತ ಪಡಿಸುವ ಈ ಮಹಾಪ್ರಬಂಧ ಎರಡು ಭಾಗಗಳ ಆರು ಅಧ್ಯಾಯಗಳಿಂದ ಬರೆಯಲ್ಪಟ್ಟಿದೆ. ಭಾಗ ಒಂದು ಇವರ ಸಂಸ್ಕೃತಿಗೆ ಸಂಬಂಧಿಸಿದ ಮೂರು ಅಧ್ಯಾಯಗಳನ್ನೊಳಗೊಂಡಿದ್ದುಭಾಗ ಎರಡರಲ್ಲಿ ಇವರ ಕುಲಕಸುಬಿಗೆ ಸಂಬಂಧಿಸಿದ ವಾಣಿಜ್ಯವನ್ನು ಕುರಿತಾಗಿದೆ.

ಪ್ರಥಮಾಧ್ಯಾಯದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಮೇದಬುಡಕಟ್ಟು ಸಮುದಾಯದ ಸಂಸ್ಕೃತಿ ಮತ್ತು ವಾಣಿಜ್ಯವನ್ನು ಕುರಿತಂತೆ ಅಧ್ಯಯನ ಮಾಡುವ ಉದ್ದೇಶ, ಮಹತ್ವ ಅಧ್ಯಯನದ ವಿಧಾನ ಹಾಗೂ ಅಧ್ಯಯನದ ವ್ಯಾಪ್ತಿಯನ್ನು ಕುರಿತಾಗಿ ವಿಶ್ಲೇಷಣೆ ಮಾಡಿದೆ. ಜಾಗತೀಕರಣದ ಪ್ರಸ್ತುತ ಸಂದರ್ಭದಲ್ಲಿ ಬುಡಕಟ್ಟುಗಳ ಸ್ಥಿತಿಗತಿಯನ್ನು ಕುರಿತಂತೆ ನೋಡುವ ಮುನ್ನ ಜನಾಂಗಿಕ ಮೂಲವನ್ನು ಸಹ ಗಮನಿಸಲಾಗಿದೆ. ಇವರ ಪ್ರಸ್ತುತ ಬದುಕಿನ ಸಾಂಸ್ಕೃತಿಕ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಕಾರಣವಾದ ಇವರ ಸೃಷ್ಟಿಪುರಾಣಗಳನ್ನು ಗಮನಿಸಿ ವಿಶ್ಲೇಷಣೆಗೆ ಒಳಪಡಿಸಿ ಇವರ ಅನನ್ಯತೆಯನ್ನು ಗಮನಿಸಲಾಗಿದೆ. ಏಕೆಂದರೆ, ಇಂದಿನ ನಾಗರೀಕ ನಗರೀಕರಣ ಸಂದರ್ಭದಲ್ಲಿ ಕೆಳಜಾತಿಯ ಸಮುದಾಯಗಳು ಅನೇಕ ಸವಾಲುಗಳಿಗೆ ಮುಖಾಮುಖಿಯಾಗಿ ನಿಲ್ಲುತ್ತವೆ. ತಮ್ಮ ಪಾರಂಪರಿಕ ಮೌಲ್ಯಗಳನ್ನು ಮೇಲ್ವರ್ಗದ ಸಂಸ್ಕೃತಿಯ ಸೆಳೆವಿನಲ್ಲಿ ಕೊಚ್ಚಿಹೋಗದಂತೆ ನಿಲ್ಲಿಸುವ ಪ್ರಯತ್ನಮಾಡುತ್ತಿವೆ. ಜಾಗತಿಕ ಮಾರುಕಟ್ಟೆಯ ಸಂದರ್ಭದಲ್ಲಿ ಬೃಹತ್ ಉದ್ದಿಮೆಗಳ ಜೊತೆಜೊತೆಗೆ ಈ ಸಮುದಾಯಗಳು ತಮ್ಮ ಕುಲಕಸುಬನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಇವರ ದೃಢವಾದ ವಿಶ್ವಾಸ ಮತ್ತು ನಂಬಿಕೆಗಳನ್ನು ಹಲವು ಆಯಾಮಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಿದೆ.

ಎರಡನೇ ಅಧ್ಯಾಯದಲ್ಲಿ ಮೇದರ ಜೀವನಕ್ರಮ ಮತ್ತು ಆಚರಣೆಗಳನ್ನು ಕುರಿತಂತೆ ಪರಿಚಯಿಸಿದೆ. ಮೇದರು ತಮ್ಮ ಸಂಪ್ರದಾಯ, ಆಚಾರ, ನಂಬಿಕೆ, ನಿಷೇಧ ಮತ್ತು ವೈದ್ಯಪದ್ಧತಿಯಲ್ಲಿ ತಮ್ಮದೇ ಅನನ್ಯತೆಯನ್ನು ಮೆರೆಸುತ್ತಾರೆ. ಸಂಸ್ಕೃತಿ ಮತ್ತು ವಾಣಿಜ್ಯಕ್ಕೆ ಸಂಬಂಧಪಟ್ಟಂತೆ ಇವರ ಪ್ರತ್ಯೇಕವಾದ ನಂಬಿಕೆಗಳನ್ನು ಗುರುತಿಸಿ ಹೇಳಲಾಗಿದೆ.

ಮೂರನೇ ಅಧ್ಯಾಯದಲ್ಲಿ ಇವರ ಸಾಮಾಜಿಕ ವ್ಯವಸ್ಥೆ ಮತ್ತು ಧಾರ್ಮಿಕ ಆಚರಣೆಗಳನ್ನು ಕುರಿತಂತೆ ಐದು ಉಪ ಅಧ್ಯಾಯಗಳನ್ನಾಗಿ ವಿಂಗಡಿಸಿ ಹೇಳಲಾಗಿದೆ. ಕರ್ನಾಟಕದಲ್ಲಿ ಇವರ ಪ್ರಸಾರನೆಲೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿದೆ. ಬಳ್ಳಾರಿ ಜಿಲ್ಲೆಯಲ್ಲಿ ಇವರ ಪ್ರಸಾರನೆಲೆಗಳು ಮತ್ತು ಜನಸಂಖ್ಯೆಯ ಸಂಪೂರ್ಣ ಮಾಹಿತಿಯನ್ನು ಸಾದರಪಡಿಸಿರುವೆ. ಬಳ್ಳಾರಿಜಿಲ್ಲೆಯ 525 ಮೇದರ ಕುಟುಂಬಗಳನ್ನು ಸಂದರ್ಶಿಸಿ ಇವರ ಜನಸಂಖ್ಯೆ ಕೋಷ್ಟಕಗಳನ್ನು ವಿವಿಧ ಆಯಾಮಗಳಲ್ಲಿ ರೂಪಿಸಿ ಹೇಳಲಾಗಿದೆ. ಇವರ ಕುಲದ ಚಿಹ್ನೆ,ಬೆಡಗು-ಗೋತ್ರಗಳನ್ನು ಸಹ ತಿಳಿಸಿದೆ. ಇವರು ಆಚರಿಸುವ ಹಬ್ಬ ಮತ್ತು ಕುಲದೇವತೆಯ ಜಾತ್ರೆಯನ್ನು ವಿವಿಧ ಸಂದರ್ಭಗಳಲ್ಲಿಯ ಆಚರಣೆಗಳನ್ನು ಗಮನಿಸಿ ಛಾಯಾಚಿತ್ರಗಳ ಸಮೇತ ಹೇಳಲಾಗಿದೆ. ಈ ಅಧ್ಯಾಯದಲ್ಲಿ ಇವರ ಪವಾಡಪುರುಷರು ಹಾಗೂ ಸಾಂಸ್ಕೃತಿಕ ವೀರರ ಪರಿಚಯ ಇರುವುದು.

ಭಾಗ ಎರಡರ ನಾಲ್ಕನೇ ಅಧ್ಯಾಯದಲ್ಲಿ ಇವರ ಕುಲಕಸುಬು ಮತ್ತು ವಾಣಿಜ್ಯದ ಸ್ವರೂಪವನ್ನು ವಿವರಿಸಿದೆ. ನನ್ನ ಅಧ್ಯಯನದ ಭೌಗೋಳಿಕವಾಪ್ತಿ ಬಳ್ಳಾರಿ ಜಿಲ್ಲೆಯಲ್ಲಿ ಇವರ ಒಟ್ಟು ಜನಸಂಖ್ಯೆಯ 80.84% ಕುಲಕಸುಬಿನಲ್ಲಿ ನಿರತರಾಗಿರುವರು. ಇವರು ಕುಲಕಸುಬಿನಲ್ಲಿ ಬಿದಿರಿನಿಂದ ತಯಾರಿಸುವ ವಿವಿಧ ವಸ್ತುಗಳ ಸಾಂಸ್ಕೃತಿಕ ಮತ್ತು ವಾಣಿಜ್ಯಕೌಶಲ್ಯವನ್ನು ಗಮನಿಸಿದೆ. ಇವರು ತಯಾರಿಸುವ ವಸ್ತುಗಳನ್ನು ಅವುಗಳ ಬಳಕೆಯ ಆಧಾರದ ಮೇಲೆ ಐದು ಗುಂಪುಗಳಾಗಿ ವಿಂಗಡಿಸಿ, ವಿವರಣೆ ನೀಡಿದೆ. ಇವರ ಅನನ್ಯವಾದ ವಾಣಿಜ್ಯಭಾಷೆಯನ್ನು ಉದಾಹರಣೆಗಳ ಸಮೇತವಾಗಿ ಹೇಳಿರುವೆ. ಇವರು ತಯಾರಿಸುವ ವಸ್ತುಗಳ ಕಚ್ಚಾ ವಸ್ತುವಾದ ಬಿದಿರನ್ನು ಕುರಿತು ಸಸ್ಯಶಾಸ್ತ್ರೀಯ ವಿವರಣೆಯನ್ನು ಕೊಡಲಾಗಿದೆ. ಕರ್ನಾಟಕದಲ್ಲಿ ಲಭ್ಯವಿರುವ ವಿವಿಧಜಾತಿಯ ಬಿದಿರಿನ ತಳಿಗಳನ್ನು ಕುರಿತು ಹೇಳಲಾಗಿದೆ. ವಾಣಿಜ್ಯದ ಉಗಮ ಮತ್ತು ಬೆಳವಣಿಗೆ ಹಾಗೂ ಪ್ರಸ್ತುತ ವಾಣಿಜ್ಯದ ಪ್ರಭಾವವನ್ನು ಕುರಿತಂತೆ ಪರಿಚಯಿಸುತ್ತಾ, ಜಾಗತೀಕರಣದ ಸಂದರ್ಭದಲ್ಲಿ ದೇಶೀಯ ಬುಡಕಟ್ಟು ಕೈಗಾರಿಕೆಗಳ ವಾಣಿಜ್ಯದ ಸ್ಥಾನವನ್ನು ಗುರುತಿಸಿದೆ.

ಐದನೇ ಅಧ್ಯಾಯದಲ್ಲಿ ಮೇದರು ಬಿದಿರಿನಿಂದ ತಯಾರಿಸುವ ವಸ್ತುಗಳ ಉತ್ಪಾದನೆ ಮತ್ತು ಮಾರಾಟವನ್ನು ಕುರಿತಂತೆ ಐದು ಉಪ ಅಧ್ಯಾಯಗಳಾಗಿ ವಿಂಗಡಿಸಿ ಚರ್ಚಿಸಲಾಗಿದೆ. ಇವರು ತಯಾರಿಸುವ ವಸ್ತುಗಳ ಉತ್ಪಾದನೆಯ ಮತ್ತು ಮಾರಾಟದ ಸಮಸ್ಯೆಗಳನ್ನು ಪ್ರತ್ಯೇಕವಾಗಿ ಗಮನಿಸಿಹೇಳಲಾಗಿದೆ. ಗೃಹ ಮತ್ತು ಸಣ್ಣಕೈಗಾರಿಕೆಗಳ ಸ್ಥಿತಿಗತಿ ಹಾಗೂ ಇವುಗಳ ಅಭಿವೃದ್ಧಿಗಾಗಿ ಸರಕಾರವು ಕೈಗೊಂಡ ಕ್ರಮ ಮತ್ತು ಅವುಗಳ ಕುಂದುಕೊರತೆಯನ್ನು ಕುರಿತಂತೆ ಸಂಕ್ಷಿಪ್ತವಾಗಿ ವಿವರಿಸಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಆಗಮಿಸದ ಬದಲೀ ವಸ್ತುಗಳ ಪ್ರಭಾವ ಮತ್ತು ವಾಣಿಜ್ಯದ ನೈತಿಕಮೌಲ್ಯಗಳನ್ನು ಹೇಳುತ್ತಾ, ಬುಡಕಟ್ಟುವಾಣಿಜ್ಯದ ನೈತಿಕಮೌಲ್ಯಗಳನ್ನು ಕುರಿತು ವಿವರಣೆಯನ್ನು ನೀಡಿದೆ. ಇವರು ತಮ್ಮವಾಣಿಜ್ಯಮೌಲ್ಯವನ್ನು ಕೇವಲ ಲಾಭಾಂಶಕ್ಕಷ್ಟೇ ಸೀಮಿತಗೊಳಿಸಿಲ್ಲ. ದೇಶೀಯ ಸಾಮಜಿಕ, ಸಾಂಸ್ಕೃತಿಕ ಮತ್ತುಧಾರ್ಮಿಕ ಮೌಲ್ಯಗಳ ಸಂರಕ್ಷಣೆಗೆ ರಕ್ಷಾಕವಚವಾಗಿದ್ದಾರೆ. ಗ್ರಾಹಕನನ್ನು ತೃಪ್ತಿಪಡಿಸುತ್ತಾ ಈ ನಾಡಿನ ಸಂಸ್ಕೃತಿಯನ್ನು ರಕ್ಷಿಸುತ್ತಾ ವಾಣಿಜ್ಯದಲ್ಲಿ ಮೌಲ್ಯಗಳನ್ನು ಮೆರೆಸುತ್ತಾರೆ. ಕೈಗೊಂಡ ಪ್ರಸ್ತುತ ಅಧ್ಯಯನವು ಬುಡಕಟ್ಟುಅಧ್ಯಯನದ ಸಾಲಿಗೆ ಒಂದು ಹೊಸ ಸೇರ್ಪಡೆಯಾಗಲಿದೆ. ಇದರಿಂದ ಈ ಸಮುದಾಯದ ಸಾಮಾಜಿಕ ಬದುಕಿನ ಸ್ವರೂಪ ಮತ್ತು ಪಾರಂಪರಿಕ ಮೌಲ್ಯಗಳ ಅಳಿವು ಉಳಿವು ಹಾಗೂ ಆರ್ಥಿಕಚಟುವಟಿಕೆಗಳ ನೆಲೆಗಳು ಗೊತ್ತಾಗುತ್ತವೆ. ಜಾಗತೀಕರಣದ ಅಬ್ಬರದಿಂದ ವಿನಾಶದ ಅಂಚಿನಲ್ಲಿರುವ ಬುಡಕಟ್ಟುಕೈಗಾರಿಕೆಗಳನ್ನು ವಿನಾಶಕ್ಕೆ ಮುನ್ನ ಅವುಗಳರಕ್ಷಣೆಗೆ ಇಂತಹ ಅಧ್ಯಯನಗಳು ಸಹಕಾರಿಯಾಗಬಲ್ಲವು.

ಫಲಿತಗಳು :

ಪ್ರಸ್ತುತ ಅಧ್ಯಯನದ ಮೇದ ಬುಡಕಟ್ಟು ಸಮುದಾಯವನ್ನು ಸಮಾನಾರ್ಥಕದ ಪರ್ಯಾಯ ಪದಗಳಿಂದ ಕರೆಯಲಾಗುವುದು. ಇವರ ವೈವಾಹಿಕ ಸಂಬಂಧವನ್ನು ಗಮನಿಸಲಾಗಿ, ಕರ್ನಾಟಕ ಮತ್ತು ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದ ಮೇದರ ನಡುವೆ ಈ ಸಂಬಂಧಗಳು ಏರ್ಪಟ್ಟಿವೆ. ಕಾರಣ ಸರಕಾರದ ಮೀಸಲಾತಿಯನ್ನು ಈ ಸಮುದಾಯದ ಎಲ್ಲಾ ಸಮಾನಾರ್ಥಕ ಪದಗಳಿಗೆ ವಿಸ್ತರಿಸಬೇಕಾಗಿದೆ.

1 ಇವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳು ಇತರೆ ಬುಡಕಟ್ಟು ಆಚರಣೆಗಳಂತೆ ಕಂಡು ಬಂದರೂ ವಿಶೇಷ ಭಿನ್ನತೆಗಳಿವೆ.

2 ಇವರಲ್ಲಿ ಗಂಡುಳ್ಳ ಜೋಗತಿಯರು ಇದ್ದಾರೆ. ಆದರೆ ಗಂಡುಜೋಗಪ್ಪರು ಇಲ್ಲ. ಇತ್ತೀಚಿಗೆ ಬಾಲ್ಯವಿವಾಹ ಪದ್ಧತಿ ಇವರಲ್ಲಿ ಕಂಡು ಬರುವುದಿಲ್ಲ.

3 ಕರ್ನಾಟಕದ ಮೇದರು ಕನ್ನಡವನ್ನು ಮಾತನಾಡುತ್ತಾರೆ. ಕೆಲವು ಪ್ರದೇಶಗಳಲ್ಲಿ ಕನ್ನಡದ ಜೊತೆಗೆ ಪ್ರಾದೇಶಿಕ ಭಾಷೆಯನ್ನೂ ಮಾತನಾಡುವರು.

4 ಇವರ ಕುಲದೇವತೆ ಮಲೆಮ್ಮ, ಜೊತೆಗೆ ಚೌಡಮ್ಮನನ್ನುಕೂಡ ಆರಾಧಿಸುವರು.

5 ಕೆಲವು ಪ್ರದೇಶದಲ್ಲಿ ಮೇದರು ಲಿಂಗಧಾರಣೆ ಮಾಡಿಸಿಕೊಂಡಿರುವರು. ಇವರಲ್ಲಿ ಮುದ್ರೆಹಾಕುವ ಪದ್ಧತಿ ಸಹ ಇದೆ.

6 ಮೇದರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ನೆಲೆಸಿರುವರು. ಅಧ್ಯಯನದ ಭೌಗೋಳಿಕವ್ಯಾಪ್ತಿಯಾದ ಬಳ್ಳಾರಿಜಿಲ್ಲೆಯಲ್ಲಿ 525 ಮೇದರ ಕುಟುಂಬಗಳು ನೆಲೆಸಿದ್ದು, ಇಲ್ಲಿಯ ಒಟ್ಟು ಜನಸಂಖ್ಯೆ 3036 ಇದೆ. ಇವರ ಸಾಕ್ಷರತೆಯ ಪ್ರಮಾಣ 67.61% ಇದೆ. ಕುಲಕಸುಬು ಮಾಡುವವರ ಪ್ರಮಾಣ 80.84% ಇದ್ದು ಒಟ್ಟು 141 ಡಿಪೋಗಳು ಇರುವುದು ತಿಳಿದುಬಂದಿದೆ.

7 ಇವರ ಕುಲಕಸುಬಗೆ ಬೇಕಾದ ಬಿದಿರಿನ ಪೂರೈಕೆಯಲ್ಲಿ ಕೊರತೆ ಇದೆ. ಸರಕಾರದ ಬಿದಿರಿನ ತಲಾವಿತರಣಾ ಪ್ರಮಾಣವನ್ನು ಹೆಚ್ಚಿಸಬೇಕು. ಕುಲಕಸುಬು ಮಾಡಲು, ಒಂದುತಿಂಗಳಿಗೆ ಗಂಡ ಹೆಂಡತಿ ಇಬ್ಬರಿಗೆ ಕನಿಷ್ಟ ಒಂದುನೂರು ಬೊಂಬು ಮತ್ತು ಬಿದಿರಿನ ಅವಶ್ಯಕವಿದೆ. ಬಯಲುಸೀಮೆಯಲ್ಲಿ ನೆಲೆಸಿರುವ ಮೇದರಿಗೆ ಬಿದಿರು ವಿತರಣೆಯ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಬೇಕು.

8 ಮೇದರ ಬೊಂಬು ಬಿದಿರು ಸಹಕಾರಿ ಸಂಘಗಳ ನೋಂದಣಿ ಮತ್ತು ಬಿದಿರು ವಿತರಣೆಯ ನಿಯಮಗಳನ್ನು ಸಡಿಲಗೊಳಿಸಬೇಕು.

10 ಈಗಲೂ ಮೇದರು ಕುಲಕಸುಬುಮಾಡಲು ಕೆಲಕಾಲ ವಲಸೆಹೋಗಿ ಮತ್ತೆ ಮೂಲ ನೆಲೆಗಳಿಗೆ ಹಿಂತಿರುಗುತ್ತಾರೆ.

11 ಮೇದರ ಕುಲಕಸುಬಿನ ಅಭಿವೃದ್ಧಿಗೆ ಪ್ರಾದೇಶಿಕ ಸಮತೋಲನವನ್ನು ಕಾಪಾಡಬೇಕು. ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಲು ಪಾರಂಪರಿಕ ಸಂಸ್ಕೃತಿಗೆ ಪೆಟ್ಟಾಗದಂತೆ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಬೇಕು.

12 ಸರಕಾರದ ಸಣ್ಣ ಮತ್ತು ಗೃಹಕೈಗಾರಿಕೆಗಳ ಅಭಿವೃದ್ಧಿಯ ಯೋಜನೆಯಲ್ಲಿ ಬುಡಕಟ್ಟುಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕು.

13 ಕುಲಕಸುಬುದಾರರಿಗೆ ಪ್ರತ್ಯೇಕ ಆರೋಗ್ಯವಿಮಾಸೌಲಭ್ಯವನ್ನು ಒದಗಿಸಬೇಕಾಗಿದೆ.

14 ಅಖಿಲ ಭಾರತ ಕುಶಲಕೈಗಾರಿಕೆಗಳ ಸಮಿತಿಯ ಕುಶಲವಸ್ತುಗಳ ಮಾರಾಟ ಮಳಿಗೆಗಳನ್ನು ತಾಲೂಕ ಕೇಂದ್ರಗಳಲ್ಲಿ ಸ್ಥಾಪಿಸಬೇಕು ಮತ್ತು ಮೇದರು ಕುಲಕಸುಬಿನಿಂದ ತಯಾರಿಸುವ ವಸ್ತುಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಒದಗಿಸಬೇಕು.

15 ಕರಕುಶಲ ಕೇಂದ್ರಗಳಲ್ಲಿ ಇವರು ತಯಾರಿಸುವ ವಸ್ತುಗಳಿಗೆ ಕೊಡುವ ಸಂಭಾವನೆಯನ್ನು ಹೆಚ್ಚಿಸಬೇಕು ಮತ್ತು ಇವರನ್ನು ಕೇಂದ್ರಗಳಲ್ಲಿ ಖಾಯಂ ನೌಕರರನ್ನಾಗಿ ನೇಮಿಸಿಕೊಳ್ಳಬೇಕು.

16 ಬಿದಿರು ಕೃಷಿಯನ್ನು ಅಭಿವೃದ್ಧಿಪಡಿಸಬೇಕು. ಈ ಕುರಿತು ರಿಯಾಯಿತಿ ಕೃಷಿಸಾಲಸೌಲಭ್ಯಗಳನ್ನು ಜಾರಿಗೆತರಬೇಕಾಗಿದೆ.

17 ಬುಡಕಟ್ಟು ಸಮುದಾಯದ ಮಕ್ಕಳು ಉನ್ನತ ವ್ಯಾಸಂಗ ಮಾಡಲು ಸಹಕಾರಿಯಾಗುವಂತೆ ಸರಕಾರ ಹೊಸನೀತಿಗಳನ್ನು ಜಾರಿಗೆ ತರಬೇಕು.

18 ಬುಡಕಟ್ಟು ಹಬ್ಬ, ಜಾತ್ರೆ, ಕಸುಬು ಮತ್ತು ಕಲೆಗಳ ಉತ್ಸವಗಳನ್ನು ಏರ್ಪಡಿಸಬೇಕು.

ಅನುಬಂಧ

ಗ್ರಂಥ ಋಣ

ಸಂಪ್ರದಾಯದ ಹಾಡುಗಳು

ಬುಡಕಟ್ಟುಗಾದೆ ಮತ್ತು ಒಗಟುಗಳು

ಕೋಷ್ಟಕಗಳು

ವಕ್ತೃಗಳ ವಿವರ

ಗ್ರಂಥಋಣ :

1. ಕೃಷ್ಣಮೂರ್ತಿ ಹನೂರು, ಮ್ಯಾಸಬೇಡರ ಸಂಸ್ಕೃತಿ , ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. 1993.

2. ಕಾರ್ಲ್‌ಮಾರ್ಕ್ಸ್, ಬಂಡವಾಳದ ಉದ್ಭವ,ಪ್ರಗತಿ ಪ್ರಕಾಶನ, ಮಾಸ್ಕೋ, 1981.

3. ಖಂಡೋಬ ಪಿ ಕೆ, ಕರ್ನಾಟಕದ ಲಂಬಾಣಿಗಳು: ಒಂದುಸಾಂಸ್ಕೃತಿಕ ಅಧ್ಯಯನ, ದಿ: ತೇಜಸಿಂಗ್‌ರಾಠೋಡ ಮೆಮೋರಿಯಲ್‌ಟ್ರಸ್ಟ್ ಗುಲ್ಬರ್ಗ, 1991

4. ಕೋಟಗಾನ ಹಳ್ಳಿರಾಮಯ್ಯ, ಸಿಂದ್‌ಮಾದಿಗರ ಸಂಸ್ಕೃತಿ,ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು 1993

5. ಗಿರಿಧರ್ ಹವಾಲ್ದಾರ್, ಕೊರಚರು: ಒಂದು ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಡಿ,ಲಿಟ್‌ಮಹಾಪ್ರಬಂಧ, ಕನ್ನಡ.ವಿವಿ-ಹಂಪಿ. 2002

6. ನಾಯಕ್. ಡಿ.ಬಿ, ಲಂಬಾಣಿ ಸಂಸ್ಕೃತಿ,ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು. 1993

7. ಚಂದ್ರಪ್ಪ.ಎನ್, ಮೊಂಡರ ಸಂಸ್ಕೃತಿ,ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು, 1993

8. ದೇವೇಂದ್ರಕುಮಾರ್ ಹಕಾರಿ,ಡೊಂಬರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು 1993

9. ಜೋಗನ್ ಶಂಕರ್, ಗ್ರಾಮ ಸಮಾಜ,ಜೀವಪ್ರಕಾಶನ,ಮೈಸೂರು, 1995

10. ಚಂದ್ರುಕಾಳೇನಹಳ್ಳಿ, ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು, 1993

11. ದಾಸೇಗೌಡ.ಜೆ.ವಿ, ನಮ್ಮ ಜಾನಪದ ನಂಬಿಕೆಗಳು,ಕನ್ನಡ ಅಧ್ಯಯನ ಸಂಸ್ಥೆ,ಮೈಸೂರು, 1973

12. ನಾಯಕ.ಎನ್.ಆರ್, ಉತ್ತರಕನ್ನಡ ಜಿಲ್ಲೆಯ ಬುಡಕಟ್ಟುಗಳ ಜಾನಪದ,ಪ್ರಸಾರಾಂಗ ಕರ್ನಾಟಕ.ವಿವಿ.ಧಾರವಾಡ

13. ಚಂದ್ರಶೇಖರ್ ಕಂಬಾರ್,ಸಂ. 1 - 2,ಕರ್ನಾಟಕ ಜಾನಪದ ವಿಶ್ವಕೋಶ,ಕಸಾಪ,ಬೆಂಗಳೂರು 1985

14. ಪ್ರಭಾಕರ್‌ಎ.ಎಸ್, ಬುಡಕಟ್ಟುಬಮುಕಿನ ಸ್ಥಿತ್ಯಂತರಗಳು,ಕನ್ನಡ.ವಿ.ವಿ, ಹಂಪಿ, 2000

15. ಬೋರಲಿಂಗಯ್ಯ.ಹಿ.ಚಿ,ಕರ್ನಾಟಕಜನಪದ ಕಲೆಗಳ ಕೋಶ,ಪ್ರಸಾರಾಂಗ,ಕನ್ನಡ,ವಿ.ವಿ,ಹಂಪಿ, 1996

16. ಬೋರಲಿಂಗಯ್ಯ.ಹಿ.ಚಿ,ಸಿದ್ದಿಯರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿ,ಬೆಂಗಳೂರು, 1993

17. ಬೋರಲಿಂಗಯ್ಯ.ಹಿ.ಚಿ,ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ ಪಬ್ಲಿಕೇಷನ್,ಬೆಂಗಳೂರು, 2001

18. ಮೊಗಳ್ಳಿಗಣೇಶ,ದಲಿತರು ಮತ್ತು ಜಾಗತೀಕರಣ,ಕನ್ನಡ,ವಿ.ವಿ,ಹಂಪಿ, 1999

19. ಪುಟ್ಟಯ್ಯ.ಬಿ.ಎಂ,ಸಾವು ಒಂದು ಚಿಂತನೆ,ಪ್ರಸಾರಾಂಗ,ಕನ್ನಡ.ವಿ.ವಿ, ಹಂಪಿ, 2001

20. ಶಂಕರನಾರಾಯಣ.ತೀ.ನಂ,ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು,ಪ್ರಸಾರಾಂಗ,ಮೈಸೂರು,ವಿ.ವಿ.ಮೈಸೂರು, 1982

21. ಹಿರೇಮಠ.ಎಸ್.ಎಸ್, ಹಬ್ಬಗಳು, ಸಮತಾಪ್ರಕಾಶನ,ಹರಪನಹಳ್ಳಿ, 1992

22. ಸತ್ಯನಾಯಕ ಎ. ಎಂ, ಉತ್ತರಕರ್ನಾಟಕದ ಮದುವೆ ಸಂಪ್ರದಾಯಗಳು, ಚಂದ್ರಪಭ ಪ್ರಕಾಶನ, ಬಾಗಲಕೋಟೆ, 2000

23. ಶಂಕರನಾರಾಯಣ ರಾವ್. ಎನ್.ಪಿ, ಪರಿವರ್ತನೆಯಸುಳಿಯಲ್ಲಿಕಿರುಸಮುದಾಯಗಳು, ಕಸಾಪ,ಬೆಂಗಳೂರು, 2000

24. ಕೆ.ಡಿ .ಬಸವಾ, ಆಧುನಿಕ ಅರ್ಥಶಾಸ್ತ್ರ ವಿದ್ಯಾವಾಹಿನಿ ಪ್ರಕಾಶನ, ಹುಬ್ಬಳ್ಳಿ. 2000.

25. ಡಾ. ಕೆ. ಎಂ. ಮೈತ್ರಿ : ಬುಡಕಟ್ಟುಕುಲಕಸುಬುಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.2002

26. ಅಜ್ಜಂಪುರ ಕೃಷ್ಣಸ್ವಾಮಿ, ವನಸಿರಿ,ಕರ್ನಾಟಕದ ವೃಕ್ಷ ಸಂಪತ್ತು ಮತ್ತು ವನ್ಯಮೃಗಗಳು,ಸ್ವರ್ಣಾಂಬ ಪಬ್ಲೀಕೇಷನ್ಸ್,ಬೆಂಗಳೂರು.1993

27. ಕರೀಗೌಡ ಬೀಚನಹಳ್ಳಿ,ಸಂ. ಕರಕುಶಲ ಕಲೆಗಳು,ಪ್ರಸಾರಾಂಗ,ಕನ್ನಡ ವಿ.ವಿ.ಹಂಪಿ,2000

28. ಗಂಗಾಧರ ದೈವಜ್ಞ. ಬುಡಕಟ್ಟುಸಮಾಜ ಹುಟ್ಟುಸಾವಿನ ನಡುವೆ , ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ,2000

29. ಪ್ರೊ: ಕೆ.ಡಿ.ಬಸವಾ ಮಾರುಕಟ್ಟೆನಿರ್ವಹಣೆ,ವಿದ್ಯಾವಾಹಿನಿ ಪ್ರಕಾಶನ,ಹುಬ್ಬಳ್ಳಿ., 2000

30. ಕೆ.ಡಿ.ಬಸವಾ ಆಧುನಿಕ ಭಾರತದ ಆರ್ಥಿಕಾಭಿವೃದ್ಧಿ,ವಿದ್ಯಾವಾಹಿನಿ ಪ್ರಕಾಶನ,ಹುಬ್ಬಳ್ಳಿ, 2002

31. ಭೀಮಣ್ಣ ಬೋನ್ಹಾಳ, ಕಾಯಾಕ ಗೌರವ ಶಿವಶರಣ ಮೇದಾರ ಕೇತಯ್ಯ ಸ್ಮಾರಕ ಸಂಪುಟ,ಶ್ರೀ ಬೋನ್ಹಾಳ ಪ್ರಕಾಶನ , ಕಲಬುರ್ಗಿ,1993

32. ಡಾ.ನಂ.ತಪಸ್ವೀಕುಮಾರ್ ಸಂಸ್ಕೃತಿ ವಿಕಾಸ,ಚೇತನ ಬುಕ್‌ಹೌಸ್,ಮೈಸೂರು, 2000

33. ಡಾ.ಹೆಚ್.ತಿಪ್ಪೆರುದ್ರಸ್ವಾಮಿ ಪ್ರಸಂ.ವಿಶಿಷ್ಟ ಜಾನಪದ.(ವಿಚಾರ ಸಂಕಿರಣದ ಪ್ರಬಂಧಗಳು) ಕನ್ನಡ ವಿಭಾಗ .ಮೈಸೂರು. ವಿ.ವಿ. ಮೈಸೂರು.

34. ಸ್ವಾಮಿನಿತ್ಯಸ್ಥಾನಂದ, ಜೀವನ ಮೌಲ್ಯಗಳು,ಶ್ರೀ ರಾಮಕೃಷ್ಣಾಶ್ರಮ, ಯಾದವಗಿರಿ, ಮೈಸೂರು. 2001

English Books:

1. Nirmal KumarBose, Some Indian Tribes,National Book Trust,New Delhi,1972.
2. Misra.P.K, MalotraK.C, Nomads in India,Anthropological Survey of India, Calcutta, 1982
3. Editor : Thurston & Rangachar K.,Casts and Tribes of Southern India, (seven volume)Asian Educational Services,New Delhi,1909
4. Nanjundayya ,H.V., The Ethnographical Survey of Mysore(Bangalore Govt.press,1906)

5. Ananthakrishna Iyer,L.K.,The Mysore Tribes &Castes(Delhi:Mittal publications 1988),Vol.IV,PP.191-205

6. Singh,K.S.,The Scheduled Tribes (Delhi:Oxford University press, 1994) Vol: III, pp.765-7

7. Luiz.,A.A.D,Tribes of Mysore,(Bangalore,G.S.Viswa&co.,1963)pp.153-9

8. Hassan,Syed Siraj ul,The Castes &Tribes of H.E.H,The Nizams Dominion(New Delhi: Asian Educational Services,1989), pp.135-42

9. Simha,R.N.,Scheduled Castes & Scheduled Tribes(Prohibition of Transfer of certain lands) Act & Rules in Karnataka(Bangalore: Sree Ambika Boook House,1999)pp.,42,45

10. Enthoven, R.E.,The Tribes & Castes of Bombay (New Delhi: AsianEducational Service,1999) Vol: I,pp.191-205

10. Principles of Marketing.by. Philip kotler . Publication : prentice-hall of India private limited New Delhi –110001 –1989

11. A kannad –English Dictionary By:Rev.F.Kittel.,Mangalore Basel MissionBook & Tract Depository 1894.

12. JCSinha Principles of Marketing and Salesmanship,R,Chand &co.,NewDelhi,1994

13. MB.Kadkol Income Tax Law and Practice .Renuka prakashana Hubli,2003

14. K.D Basava, Marketing Management, Vidyavahini PrakaShana Hubli,

ನಿಘಂಟು ಮತ್ತು ಗ್ಯಾಸೆಟಿಯರ್‌ಗಳು :

1. ಕನ್ನಡ ಜಾನಪದ ವಿಶ್ವಕೋಶ

2. ಕನ್ನಡ ಕನ್ನಡ ನಿಘಂಟು ಮೂರನೇ ಸಂಪುಟ ,ಕಸಾಪ,ಬೆಂಗಳೂರ.

3. ಲಕ್ಕಪ್ಪಗೌಡ.ಹೆಚ್.ಜಿ, ಪ್ರಸಂ.ಕರ್ನಾಟಕ ಬುಡಕಟ್ಟುಗಳು ಸಂಪುಟ:2 ಕರ್ನಾಟಕ ಜಾನಪದ ಮತ್ತು ಯಕ್ಷಗಾನಅಕಾಡೆಮಿ ಬೆಂಗಳೂರು.1998.

4. ಕನ್ನಡ ರತ್ನಕೋಶ,ಕನ್ನಡ ಅಭಿವೃದ್ಧಿಪ್ರಾಧಿಕಾರ ಬೆಂಗಳೂರು.1994

5. ಇಂಗ್ಲೀಷ್- ಕನ್ನಡ ನಿಘಂಟು, ಪ್ರಸಾರಾಂಗ ಮೈಸೂರು ವಿ.ವಿ. ಮೈಸೂರು,೧೯೮೫

6. A kannad –English Dictionary By:Rev.F.Kittel.,Mangalore Basel MissionBook & Tract Depository 1894.

ಸಂಪ್ರದಾಯದ ಹಾಡುಗಳು.

ಬಯಕೆಯ ಹಾಡು :

ತೋಸಿದ ಗೋದಿ ಬೀಸಿ ಬೀಸಿ ಪುಟಾಣಿ ಕಣುಕ ಹಣದು ಹಣದು
ಸುರಂಗದೋಳಗಿ ಸವಿತ್ತ ಮಾಡಿ ಉಣ್ಣಂಗಾಗ್ಯವರೀ.
ಬಾಲಾನ ಬಯಕಿಲೆ ಬಗುಸಂಗಾಗ್ಯಾವರೀ

ಕರದು ಮುರದು ಕರಚಿಯ ಕಾಯಿ ಹಪ್ಪಳ ಸಂಡಿಗೆ ಉಪ್ಪಿನ ಕಾಯಿ
ಹಗರೀ ದಂಡ್ಯಾಗ ಕುತಗಂಡುಣ್ಣಂಗಾಗ್ಯಾವರೀ.
ಬಾಲಾನ ಬಯಕಿಲೆ ಬಗುಸಂಗಾಗ್ಯಾವರೀ

ಬಿಳಿಯ ಜೋಳದ ರೊಟ್ಟಿ ಸುಟ್ಟು ಎಳೆಯ ಜವಳಿಯ ಕಾಯಿ ಪಲ್ಲೆ
ಹೊಳೆಯಾ ದಂಡೇಲಿ ಕುತುಗುಂಡುಣ್ಣಂಗಾಗ್ಯಾವರೀ
ಹಳ್ಳಾದ ದಂಡ್ಯಾಗ ಕುತಗಂಡುಣ್ಣಂಗಾಗ್ಯಾವರೀ

ಎಳ್ಳು ಹಚ್ಚಿದ ಸ ಜ್ಜೆ ರೊಟ್ಟಿ ಎಳೆಯ ಮುಳ್ಳುಗಾಯಿ ಪಲ್ಲೆ
ಹಳ್ಳಾದ ದಂಡ್ಯಾಗ ಕುತಗಂಡುಣ್ಣಂಗಾಗ್ಯಾವರೀ
ಬಾಲಾನ ಬಯಕಿಲೆ ಬಗುಸಂಗಾಗ್ಯಾವರೀ

ಜರತಾರ ಕಡ್ಡಿಯ ಸೀರೆಯನುಟ್ಟು ತೋಪು ಮುಸುಗು ಮೇಲೆ ಮಾಡಿ
ಬಿಸಲೀಗೆ ತೋಳು ಮಾಡಿ ನಡಿಯಂಗಾಗ್ಯಾವರೀ
ಬಾಲಾನ ಬಯಕೀಲೆ ಬಗುಸುಂಗಾಗ್ಯಾವರೀ.

ಕಾಲಿಗೆ ಕಡ್ಲಿ ಪಿಲಿಯನಿಟ್ಟು ನಡುವಿಗೆ ಗೆಜ್ಜೆ ಪಟ್ಟಿಯನಿಟ್ಟು
ಮುಂದಾಕ ಮೂರು ಹೆಜ್ಜೆಯನಿಟ್ಟು ನಡಿಯಂಗಾಗ್ಯಾವರೀ
ಬಾಲಾನ ಬಯಕೀಲೆ ಬಗುಸಂಗಾಗ್ಯಾವರೀ

ಹಡಿರು ಕಡ್ಡಿಯ ಸೀರೆಯನುಟ್ಟು ಹಸಾನವೆರೆಡು ವಂಕಿಯ ನಿಟ್ಟು
ಬಿಸಿಲೀಗೆ ತೋಳು ಮಾಡಿ ನಡಿಯಂಗಾಗ್ಯಾವರೀ
ಬಾಲಾನ ಬಯಕೀಲೆ ಬಗುಸಂಗಾಗ್ಯಾವರೀ

ಹೂವುಗಾರರ ಮನೀಗೆ ಹೋಗಿ ಹೂವಿನ ದಂಡಿ ಎಣಾಸಿಕೊಂಡು
ರಾಯರೆಡಗಡಿಗೆ ಕುತುಗಂಡು ಮುಡಿಯಂಗಾಗ್ಯಾವರೀ
ಬಾಲಾನಾಬಯಕೀಲೆ ಬಗುಸಂಗಾಗ್ಯಾವರೀ

ತೊಟ್ಟಿಲು ಕಾರ್ಯದಲ್ಲಿ ಹಾಡುವ ಜೋಗುಳ ಪದ.

ಚಿನ್ನದ ಅಂಗಿ ರನ್ನದಾ ಅಂಗಿ ಜೋ ಜೋ ಎನ್ನೀರೇ
ಬಾಲಾನ ತಾಯಿ ಹೆಸರೇನಿಡುತೀ ಜೋ ಜೋ ಎನ್ನೀರೇ
ಮುತ್ತೀನ ಅಂಗಿ ರತ್ನದ ಟೋಪಿ ಜೋ ಜೋ ಎನ್ನೀರೇ
ಕಂದಾನ ತಾಯಿ ಹೆಸರೇನಿಡುತೀ ಜೋ ಜೋ ಎನ್ನೀರೇ
ಬಂಗಾರದ ತೊಟ್ಲು ಬೆಳ್ಳಿಯ ಹಗ್ಗ ಜೋ ಜೋ ಎನ್ನೀರೇ
ಮಗನಾ ತಾಯಿ ಹೆಸರೇನಿಡುತೀ ಜೋ ಜೋ ಎನ್ನೀರೇ.

ನನ್ನ ಮಗನ ಹೆಸರು ನಾನೇನು ಬಲ್ಲೆ ಜೋ ಜೋ ಎನ್ನಿರೇ
ನಮ್ಮತ್ತಿ ಮಾವನ ಕೇಳಿ ಹೆಸರಿಡೀರವ್ವ ಜೋ ಜೋ ಎನ್ನೀರೇ

★ ★ ★

ಜೋ ಜೋ ಎಂದು ಜನ್ಮಕ್ಕೆ ಬಂದು
ನಿತ್ಯಾ ನಿರಂಜನಾ ಪ್ರಭುಲಿಂಗನೆಂದೂ
ನಿಜಬೀಜ ಮಂತ್ರೋಳು ಜೋಗುಳ ಪಾಡೆಂದು ಜೋ ಜೋ...

ಆರು ಮೂರು ಲಿಂಗ ನವರತ್ನ ಮಾಲೆ
ಪರಶಿವ ತತ್ವದ ಪದಕ ಕೊರಳಲ್ಲಿ
ವೀರಾ ಧೀರ ಎರಡು ಕಡಗಾ ಬಿಂದೋಲೇ
ಈಗಾ ಇನ್ನೂರ ಹದಿನಾರು ಮುತ್ತೀನರಳೋಲೆ. ಜೋ.ಜೋ. . .

ತೊಟ್ಟೀಲು ಇರುವುದು ಹೃಕ್ತಮಲಾ ದಲ್ಲೀ
ತನುವು ತುದೀಯ ಸೋನೆ ಷಟಸ್ಥಲದಲ್ಲೀ
ಕಟ್ಟೀದರುನ್ನಾಲೆ ಪವನ ಹಸ್ತದಲೀ
ನೀವು ದಿಟ್ಟೀಸಿ ತೂಗಿರೇ ಸೂಚಿತ ಹಸ್ತದಲೀ ಜೋ ಜೋ . . .

ತಾನೇ ತೊಟ್ಟಿಲವಾಗಿ ತಾನೇ ತೂಗಿದನು
ತನ್ನಾ ಕೈಯೊಳಗೆ ತಾನೇ ನಿದ್ರೀಸಿದಾ
ತಾನೆ ಎಚ್ಚರವಾಗಿ ಎದ್ದು ಕುಳಿತಾನು
ಮಾಹಾಜ್ಞಾನಿ ನೀರಂಜನನು ಲೀಲೆ ಹಾಡಿದನು ಜೋ ಜೋ. . .

ನೀರು ಎರೆಯುವಾಗ ಹಾಡುವ ಸೋಬಾನಪದ :

ಕಂಬಕ ಎದುರಾಗ ತುಂಬವ್ವಾ ಕಳಸಾನ
ಕಂಬಾದ ಮ್ಯಾಲೆರಡು ಅರಗಿಣಿಯೇ ಸೋ ಎನ್ನೀ ಸೋಬಾನವೆನ್ನೀ
ಕಂಬಾದಮ್ಯಾಲೆರಡು ಅರಗಿಣಿ ಪುರಗಿಣಿಬೆಕ್ಕು
ಸಂಭ್ರಮದಾ ನುಡಿಯಾ ನುಡಿದಾವೇ ಸೋ...

ಗ್ವಾಡಿಗೆ ಎದುರಾಗಿ ಹೂಡವ್ವಾ ಕಳುಸಾನ
ಗ್ವಾಡೀಯ ಮೆಲೆರಡು ಅರಗಿಣಿಯೇ ಸೋ ಎನ್ನೀ ಸೋಬಾನವೆನ್ನೀ
ಗ್ವಾಡೀಯ ಮೇಲೆರಡು ಅರಗಿಣಿ ಪುರಗಿಣಿ ಬೆಕ್ಕು
ಸೋಬಾನದಾ ನುಡಿಯಾ ನುಡದಾವೆ. ಸೋ.

ಸೋಬಾನವೆನ್ನುವುದಾ ಯ್ಯಾರು ಮಾಡಿದರವ್ವಾ
ಸೂರಿಗನ ತಂಗಿ ಧರಣೆವ್ವಸೋಬಾನವೇ ಸೋ ಎನ್ನೀ ಸೋಬಾನವೆನ್ನೀ
ಸೂರಿಗನ ಏ ತಂಗಿ ಧರಣೆವ್ವಮಾಡಿದ ನುಡಿಯಾ
ಸೋಬಾನದ ನುಡಿಯಾ ನುಡಿದಾವೇ ಸೋವಾನವೇ. ಸೋ.

ಬಾಲೆಗೆ ಹೆರೆದಾ ನೀರು ಬಾಗಿಲಿಗೇ ಬಂದಾವೇ
ಬಾಗಿಲ ದಾಟ ಹರಿದಾಟ ಸೋಬಾನವೇ ಸೋ ಎನ್ನಿಸೋಬಾನವೆನ್ನೀ
ಬಾಗೀಲ ಏ ದಾಟ ಹರಿದಾಟ ಪಾಂಡವರ

ಬಾಳೆ ವನಹೆ ಹರಿದಾವೆ ಸೋಬಾನವೇ ಸೋ
ಪುತ್ರನಿಗೆರೆದಾ ನೀರು ಹಿತ್ತಲಕಾ ಹರಿದಾವ
ಹಿತ್ತಾಲ ದಾಟ ಹರಿದಾಟ ಸೋಬಾನವೇ ಸೋ ಎನ್ನಿ ಸೋಬಾನವೆನ್ನೀ
ಹಿತ್ತಾಲ ಏ ದಾಟ ಹರಿದಾಟ ಪಾಂಡವರ
ಕಿತ್ತಾಳೆ ವನಕೆ ಹರಿದಾವೇ ಸೋ

ಋತುಮತಿ ಆದಾಗ ಹಾಡುವ ಸೋಬಾನ ಪದ :

ಮೈನೆರೆತೇ ಮೈಯ ನೆರೆತೇ ಏನುಂಡು ಮೈನೆರೆತೇ
ಏನುಂಡು ಮೈನೆರತೇ ಮೈಯಾನೆರೆತೇ ಸೋ. . .

ತುಪ್ಪಾಬಾನುಂಡಿದ್ದೆ ಪಟಮಂಚಕ ಮಲಗಿದ್ದೆ
ಉತುತ್ತಿ ಗೊನಿಯಾ ಹಿಡದಿದ್ದೇ ಸೋಬಾನವೇ
ಉತುತ್ತಿಯಾ ಏ ಗೊನಿಯಾ ಹಿಡದಿದ್ದೆ ಮಲೆಮ್ಮಾ
ಮುತ್ತೈದತನವಾ ಪಡದಿದ್ದೇ ಸೋಬಾನವೇ.. ॥ ಮೈ ನೆರೆತೇ॥

ಹಾಲು ಬಾನುಂಡಿದ್ದೆ ಪಟ್ಟಮಂಚಕೆ ಮಲಗಿದ್ದೆ
ಬಾಳೆ ಗೊನಿಯಾ ಹಿಡದಿದ್ದೆ ಸೋಬಾನವೇ
ಬಾಳೇಯಾ ಏ ಗೊನಿ ಹಿಡಿದಿದ್ದೆ ಶಿವನಲ್ಲಿ
ಬಾಣಂತಿ ತನವಾ ಪಡದಿದ್ದೆ ಸೋಬಾನವೇ. ॥ ಮೈನೆರೆತೇ॥

ಏರಿಯಾ ಏ ಮ್ಯಾಲೆ ಬೋರೆಂಬಾದದಿಯಾನೇ
ಅರುಸಾವಿರದಾ ಎಲಿದೋಟಾ ಸೋಬಾನವೇ
ಆರೇನ ಸಾವಿರದ ಎಲಿಯಾ ತೋಟದಾಗ
ಅವರ ಮಾವ ಕೇಳ್ಯಾನ ಹೊಸ ಸುದ್ದಿ ಸೋಬಾನವೇ ॥ಮೈನೆರೆತೇ॥

ಹೊಸ ಸುದ್ದಿ ಕೇಳ್ಯಾನೆ ಹುಸಿನಗೆ ನಕ್ಕಾನೆ
ಎಸಳಾ ಮಲ್ಲೀಗೆ ಕೊಯ್ಯಿಸ್ಯಾನೆ ಸೋಬಾನವೇ
ಎಸಳಾನಾ ಮಲ್ಲೀಗೆ ಕೋಸಿ ದಂಡೀಯಾ ಕಟ್ಟಿ
ಸೊಸೆ ಇದ್ದ ಮನೆಗೆ ಕಳಿಸ್ಯಾನೆ ಸೋಬಾನವೇ ॥ ಮೈನೆರೆತೇ॥।

ಏರಿಯಾ ಏ ಮ್ಯಾಲೆ ಬೋರೆಂಬಾದದೀಯಾನೆ
ಹತ್ತು ಸಾವಿರದ ಎಲಿದೋಟ ಸೋಬಾನವೇ
ಹತ್ತೇನೆ ಸಾವಿರದ ಎಲಿಯಾ ತೋಟದಾಗ
ಅವರತ್ತಿ ಕೇಳ್ಯಾಳೆ ಹೊಸಸುದ್ದೀ ಸೋಬಾನವೇ ॥ ಮೈನೆರೆತೆ॥

ಹೊಸಸುದ್ದಿ ಕೇಳ್ಯಾಳ ಹುಸಿ ನಗೆ ನಕ್ಕಾಳೆ
ಎಸಳಾ ಮಲ್ಲೀಗೆಯ ಕೊಯಿಸ್ಯಾಳೇ ಸೋಬಾನವೇ
ಎಸಳಾ ಮಲ್ಲಿಗಯ ಕೊಯಿಸಿ ದಂಡಿಯಾ ಕಟ್ಟಿ
ಸೊಸೆ ಇದ್ದ ಮನಿಗೇ ಕಳಿಸ್ಯಾಳೆ ಸೋಬಾನವೇ ॥ ಮೈನೆರೆತೇ॥

ಗಿತ್ತೇನೆ ನನಮಗಳು ಮತ್ತೆಲ್ಲಿ ಕುಳಿತಾಳೆ
ಸುತ್ತಾಲೋಡ್ಯಾವೆ ಮಳಿಮೋಡಾ ಸೋಬಾನವೇ
ಸುತ್ತಾಲೋಡ್ಯಾವೆ ಮಳಿ ಮೋಡ ಆವರಪ್ಪಾ

ಮುತ್ತೀನ ಡೇರಿಯಾ ಹೊಡಿಸ್ಯಾನೆ ಸೋಬಾನವೇ ॥ ಮೈನೆರೆತೇ॥

ಗಿತ್ತೇನೆ ನನತಂಗಿ ಮತ್ತೆಲ್ಲಿ ಕುಳಿತಾಳೆ
ಸುತ್ತಾಲೋಡ್ಯಾವೆ ಮಳಿಮೋಡಾ ಸೋಬಾನವೇ
ಸುತ್ತಾಲೋಡ್ಯಾವೆ ಮಳಿಮೋಡಾ ಆವರಣ್ಣ
ಹೂವೀನ ಡೇರಿ ಹೊಡಿಸ್ಯಾನೆ ಸೋಬಾನವೇ ॥ ಮೈನೆರೆತೇ॥

ವೀಳ್ಯಾಶಾಸ್ತ್ರಮುತ್ತುಧಾರೆ ಎರೆಯುವಾಗ ಹಾಡುವ ಸೋಬಾನ ಪದ :
ಒಂದರವಿ ಹಾಸಿದ್ದೇ ಒಂದರವಿ ಹೊಚ್ಚಿದ್ದೇ
ಒಂದಾಬಳ್ಳೀಲೆ ಎಣ್ಣೆ ಎರಾದಿದ್ದೆ ಸೋಬಾನವೇ
ಒಂದಾಬಳ್ಳೀಲೆ ಎಣ್ಣೆ ಎರದಿದ್ದೆ ಎನ್ನಾ ಮಗಳೇ
ಇಂದು ನಮ್ಮನಿಗೆ ಎರವಾದೇ ಸೋಬಾನವೇ ॥ ಸೋ. .॥

ಮೂರರವಿ ಹಾಸಿದ್ದೆ ಮೂರರವಿ ಹೊಚ್ಚೀದ್ದೆ
ಮೂರಬಳ್ಳಿಲೆ ಎಣ್ಣೆ ಎರಾದಿದ್ದೆ ಸೋಬಾನವೇ
ಮೂರಬಳ್ಳೀಲೆ ಎಣ್ಣೆ ಎರದಿದ್ದೆ ಎನ್ನ ಮಗಳೇ
ಇಂದು ನಮ್ಮ ಮನಿಗೆ ಎರವಾದೇ ಸೋಬಾನವೇ ॥ಸೋ॥

ಐದರಬಿ ಹಾಸಿದ್ದೆ ಐದರವಿ ಹೊಚ್ಚೀದ್ದೆ
ಐದಾಬಳ್ಳಿಲೆ ಎಣ್ಣೆ ಎರಾದಿದ್ದೆ ಸೋಬಾನವೇ
ಐದಾಬಳ್ಳೀಲೆ ಎಣ್ಣೆ ಎರದಿದ್ದೆ ಎನ್ನ ಮಗಳೇ
ಇಂದು ನಮ್ಮ ಮನಿಗೆ ಎರವಾದೇ ಸೋಬಾನವೇ ॥ಸೋ॥

ಏಳರವಿ ಹಾಸಿದ್ದೆ ಏಳರವಿ ಹೊಚ್ಚೀದ್ದೆ
ಏಳಾಬಳ್ಳಿಲೆ ಎಣ್ಣೆ ಎರಾದಿದ್ದೆ ಸೋಬಾನವೇ
ಏಳಾಬಳ್ಳೀಲೆ ಎಣ್ಣೆ ಎರದಿದ್ದೆ ಎನ್ನ ಮಗಳೇ
ಇಂದು ನಮ್ಮ ಮನಿಗೆ ಎರವಾದೇ ಸೋಬಾನವೇ ॥ಸೋ॥

ನಿಂಬೀಯಾ ಏ ಹಣ್ಣಾ ಹೊಂದೀಸಿನಡದಂಗಾ
ಮಂದ್ಯಾಗನಮ್ಮಗಳಾ ಕೊಡತೇವೇ ಸೋಬಾನವೇ
ದಡ್ಲೀಯಾ ಏ ಹಣ್ಣಾ ಹೊಂದೀಸಿ ನಡದಂಗಾ
ದೊಡ್ಡವರೆದುರಿಗೆ ನಮ್ಮಗಳಾ ಕೊಡತೇವೇ ಸೋಬಾನವೇ ॥ಸೋ॥

ಅತ್ತೀಯ ಕರೀರವ್ವಾ ಅತ್ತೀಗೆ ಕರೀರವ್ವಾ
ನಾದಿನಿಯರ ಕರಿರವ್ವ ಎರೀಯಾಕ ಸೋಬಾನವೇ
ನಮ್ಮಾ ಮಗಳಲ್ಲವ್ವಾ ನಿಮ್ಮಾ ಮಗಳೆಂದು ತಿಳಿಯೇ
ನಿಮ್ಮಾ ಮಗಳೆಂದು ಸಲುಹವ್ವಾ ಸೋಬಾನವೇ ॥ಸೋ॥

★ ★ ★

ಕಾಲುಂಗರ ಸಣ್ಣಾ ಮಕ ಪದ್ಮ ಕಾಟಿನಕಂಬ
ಆಗರದಾಗಿತ್ತೊಂದರಗಿಣಿಯೇ ಸೋ ಎನ್ನಿ ಸೋಬಾನವೆನ್ನಿ

ಅಗರದಾಗಿತ್ತೊಂದರಗಿಣಿಯೇ ರಾಜಣ್ಣ
ಆ ಹೆಣ್ಣೀಗಾಗಿ ತಪವಿದ್ದಸೋ ಎನ್ನೀ ಸೋಬಾನವೆನ್ನಿ

ಆರು ಸಾವಿರ ಹೊನ್ನು ಹೋರಿಮ್ಯಾಲೆ ಹೇರಿಕೊಂಡು
ಧೀರಾ ಕರುನಾಡ ತಿರುಗ್ಯಾನೇ ಸೋ ಎನ್ನಿ ಸೋಬಾನವೆನ್ನಿ
ಧೀರಾ ಕರುನಾಡ ತಿರುಗೀನಾವ ತಂದೇವಾ
ಅಡ್ಡೀ ಮನಿಗೆ ತಕ್ಕ ಮಡದೀಯಾ ಸೋ ಎನ್ನಿ ಸೋಬಾನವೆನ್ನಿ

ಹತ್ತುಸಾವಿರ ಹೊನ್ನು ಎತ್ತಿನಮ್ಯಾಲೆ ಹೇರಿಕೊಂಡು
ತಿಕ್ಕು ದೇಶಗಳಾ ತಿರುಗ್ಯಾನ ಸೋ ಎನ್ನಿ ಸೋಬಾನವೆನ್ನಿ

ದಿಕ್ಕು ದೇಶಗಳಾ ತಿರುಗೀನಾವ ತಂದೇವ
ಮಂಚಕ್ಕೆ ತಕ್ಕ ಮಡದೀನಾ ಸೋ ಎನ್ನೀ ಸೋಬಾನವೆನ್ನೀ

ಆರೂ ಕಂಬದ ನಡುವೆ ಕೆತ್ತಿದಾ ಮಂಚವ ಹಾಕಿ
ನಾಯಕರ ಮಗನ ಜಳುಕಾವ ಸೋ ಎನ್ನಿ ಸೋಬಾನವೆನ್ನಿ

ನಾಯಕರ ಮಗನ ಜಳುಕಾವ ಮಾಡುವಾಗ
ಪತ್ರ ಬಂದಾವ ಇವಾ ನೋಡಾ ಸೋ ಎನ್ನೀ ಸೋಬಾನವೆನ್ನೀ

ಪತ್ರ ಬಂದಾರೆ ಬರಲೀಳಾ ನೋಡನಂತ
ಮಾವನ ಮಗಳು ಅತಿರಂಭೇ ಸೋ ಎನ್ನೀ ಸೋಬಾನವೆನ್ನೀ

ಹತ್ತು ಕಂಬದ ನಡುವೆ ಮುತ್ತಿನ ಮಂಚವ ಹಾಕಿ
ನಾಯಕರ ಮಗನಾ ಜಳುಕಾವ ಸೋ ಎನ್ನಿ ಸೋಬಾನವೆನ್ನಿ

ನಾಯಕರ ಮಗನ ಜಳುಕಾವ ಮಾಡುವಾಗ
ಪತ್ರ ಬಂದಾವ ಇವಾ ನೋಡಾ ಸೋ ಎನ್ನೀ ಸೋಬಾನವೆನ್ನೀ

ಪತ್ರ ಬಂದಾರೆ ಬರಲೀಳಾ ನೋಡಾನಂತ
ಅತ್ತೇಯ ಮಗಳು ಅತಿರಂಭೇ ಸೋ ಎನ್ನೀ ಸೋಬಾನವೆನ್ನೀ

ಅತ್ತೇಯ ಮಗಳಾ ಅತೀ ರಂಭೇ ಕೊಳ್ಳಾಳಾ
ಮಾಮೂಲಿಸರವಾ ಕದೀ ಬೇಕು ಸೋ ಎನ್ನಿ ಸೋಬಾನವೆನ್ನಿ

ಬಾಸಿಂಗಕೆ ಮುತ್ತುಸೂಸಲಾ ಕಟ್ಟಿದಾರೇ
ದೇಶದ ಬಡವಾರು ಬಳುಕೊಳ್ಳೀರೋ ಸೋ ಎನ್ನೀ ಸೋಬಾನವೆನ್ನೀ

ದಂಡೀಗೆ ಮುತ್ತು ತೊಂಡಾಲ ಕಟ್ಟಿದಾವೇ
ಹಿಂದಿರೋ ಬಡವರು ಬಳುಕೊಳ್ಳಿರೋ ಸೋ ಎನ್ನಿ ಸೋಬಾನವೆನ್ನೀ

ಹಿಂದಿರೋ ಬಡವರು ನೀವು ಬಳುಕೊಳ್ಳಿರೋ ರಾಣೆಮ್ಮ
ಬಂದಿಗೇಲಿ ಹೊನ್ನಸುರಿದಂತೇ ಸೋ ಎನ್ನೀ ಸೋಬಾನವೆನ್ನೀ

ನಾಗೋಲಿಶಾಸ್ತ್ರದ ಸೋಬಾನ ಪದ :
ಬಾಳಿ ಹಣ್ಣಿನಂಗದ ಬಾಲೆ ಬಂದಿಳಿದಾಳೆ
ಇಂಬು ಬಿಡುರಾಯ ಎಡಗಡಿಗೆ
ಇಂಬೇನ ಬಿಡುವುದಕೆ ನಾನ್ಯಾರೆ ನೀನ್ಯಾರೆ
ನಿಮ್ಮಪ್ಪಾರ ಕುಲವಾ ಹೊಡದೇಳೆ ॥ ಸೋ॥

ನಮ್ಮಪ್ಪಾರ ಕುಲವಾ ಏನ ಕೇಳರಿ ರಾಯ
ನಲವತ್ತು ಸಾವಿರದ ಹಡಗಾವ
ನಲವತ್ತು ಸಾವಿರದ ಹಡಗಾ ವ್ಯಾಪರದಾಗ
ಬಂಬು ಮಾರುವರಾ ಮಗಳಯ್ಯ ॥ಸೋ॥

ನಿಂಬೀ ಹಣ್ಣಿನಂಗ ರಂಬೆ ಬಂದಿಳಿದಾಳೆ
ಇಂಬು ಬಿಡು ರಾಯ ಎಡಭಾಗ
ಇಂಬೇನ ಬಿಡುವುದಕಾ ನಾನ್ಯಾರ ನೀನ್ಯಾರ
ನಿಮ್ಮ ಕಕ್ಕಾರ ಕುಲವಾ ಹೊಡದೇಳಾ ॥ ಸೋ॥

ನಮ್ಮಕಕ್ಕಾರ ಕುಲವಾ ಏನ ಕೇಳರಿ ರಾಯ
ಅರವತ್ತು ಸಾವಿರದ ಹಡಗಾವ
ಅರವತ್ತು ಸಾವಿರದ ಹಡಗಾ ವ್ಯಾಪರದಾಗ
ಹೊನ್ನಾ ಮಾರುವರಾ ಮಗಳಯ್ಯ ॥ಸೋ॥

ಉತ್ತತ್ತಿ ಹಣ್ಣಿನಂಗದ ನಿತ್ರಿ ಬಂದಿಳಿದಾಳೆ
ಇಂಬು ಬಿಡುರಾಯ ಎಡಗಡಿಗೆ
ಇಂಬೇನ ಬಿಡುವುದಕೆ ನಾನ್ಯಾರೆ ನೀನ್ಯಾರೆ
ನಿಮ್ಮಣ್ಣರ ಕುಲವಾ ಹೊಡದೇಳೆ. ॥ ಸೋ॥

ನಮ್ಮಣ್ಣಾರ ಕುಲವಾ ಏನ ಕೇಳರಿ ರಾಯ
ಎಂಬತ್ತು ಸಾವಿರದ ಹಡಗಾವ
ಎಂಬತ್ತು ಸಾವಿರದ ಹಡಗಾ ವ್ಯಾಪರದಾಗ
ವಜ್ರ ಮಾರುವರಾ ಮಗಳಯ್ಯ ॥ಸೋ॥

ಅಡಗಿಯ ಮನಿಯಾಗ ಮಡದೀನಾ ಕರೆದಾನ
ಹೆಡಗಿ ಬಂಗಾರದ ಚಲುವೇನಾ
ಹೆಡಿಗಿ ಬಂಗಾರದ ಚಲುವೆ ನಮ್ಮವ್ವನಾ
ಎಡಗೈಯಾಲಿಡಿದು ಕರೆದಾನ ॥ಸೋ॥

ಎಡಗೈಯಲಿಡಿದು ಕರೆದಾನ ನಮ್ಮವ್ವನಾ
ಅಂಜಾಲೋ ನಿನ್ನ ಬಳಗಾಕೆ
ಅಂಜಾಲೋ ನಿನ್ನ ಬಳಗಾಕೆ ಕ್ಯಾತಯ್ಯ
ತುಂಬಿದ ಕೊಡದಂಗ ಬೆವೆತಾಲೋ ॥ಸೋ॥

ಕಾಲು ತೊಳೆಯುವಾಗ ಹಾಡುವ ಸೋಬಾನ ಪದ :

ಕಾಲ ತೊಳೆಯನು ಬನ್ನೀರೇ ಅಣ್ಣಾನಾ
ಪಾದ ತೊಳೆಯನು ಬನ್ನೀರೇ ॥ ಪ॥

ಕಾಲತೊಳೆಯನು ಬಾರೇ ಮೇಲ ಮುಸುಕಿನ ಶ್ಯಾಣಿ
ವಾಲಿ ಹೊನ್ನಾಳಿ ಕೇಳಿ ಎಲ್ಲಾ ಕಾಲ ತೊಳಿಯನು ಬನ್ನೀರೇ
ಅಣ್ಣಾನ ಪಾದ ತೊಳಿಯನು ಬನ್ನೀರೇ

ಆನೆ ಕೊಡತೀನಿ ತಂಗಿ ಆನಿ ಮರಿ ಕೊಡತೀನಿ
ವಾಲಿ ಕೊಡತೀನಿ ಕಿವಿಯಾಗಾ ಕಾಲತೊಳೆಯನು ಬನ್ನೀರೇ
ಅಣ್ಣಾನ ಪಾದ ತೊಳಿಯನು ಬನ್ನೀರೇ

ಆನೆ ಐದಾವಣ್ಣಾ ಆನಿಮರಿ ಐದಾವ
ವಾಲೆ ಐದಾವ ಕೀವೀಯಾಗ ಕಾಲತೊಳೆಯನು ಬನ್ನೀರೇ
ಅಣ್ಣಾನ ಪಾದ ತೊಳಿಯನು ಬನ್ನೀರೆ

ಒಂಟೆ ಕೊಡತೀನಿ ತಂಗಿ ಒಂಟೆ ಮರಿ ಕೊಡತೀನಿ
ಗಂಟೆ ಕೊಡತೀನಿ ಕೀವಿಯಾಗ ಕಾಲತೊಳೆಯಸು ಬನ್ನೀರೇ
ಒಂಟೆ ಐದಾವಣ್ಣಾ ಒಂಟೆ ಮರಿ ಐದಾವೆ
ಗಂಟೆ ಐದಾವ ಕೀವೀಯಾಗ ಕಾಲ ತೊಳೆಯನು ಬನ್ನೀರೇ

ಆನೆ ಐದಾವಣ್ಣ ಒಂಟೆಮರಿ ಐದಾವ
ಕುಂತಾಡ ಮಗಳಾ ಕೋಡಾನಮಗಾ ಕಾಲ ತೊಳೆಯಸು ಬನ್ನೀರೇ
ಅಣ್ಣಾನ ಕಾಲ ತೊಳೆಯನು ಬನ್ನೀರೇ ॥ ಸೋ ॥

ನಡಾವಳಿ ಪದ :

ಅತ್ತೀಯ ಮನಿಯಾಗ ಅರವತ್ತು ಗಂಗಾಳ
ಬೆಳಗುತೀನತ್ತೇ ಬೈಯಾ ಬೇಡಾ ಸೋಬಾನವೇ
ಬೆಳಗೂತೀನತ್ತೆ ತೊರೆದು ತವರಾ ಮನೆಯಾ
ಸಾವರದುವ್ವಾ ಮಾಡಿ ಸಲುಹ್ಯಾರೇ ಸೋಬಾನವೇ

ಸಾವರದುವ್ವಾದರೇ ತುರುಬೀಗೆ ಮೂಡಿಸೋ
ಹೊರುಬಾರೇ ಹೆಂಡಿ ಸಗಣೀಯಾ ಸೋಬಾನವೇ
ಸೆಗಣೀಯಾ ಹೋರಾಕ ಬಡವಾರ ಮಗಳಲ್ಲಾ
ನಲವತ್ತೊಂದ್ಹಳ್ಳಿ ಗೌಡಕೀ ಸೋಬಾನವೇ

ನಲವತ್ತೊಂದು ಹಳ್ಳಿ ಗೌಡಿಕೆ ಗೌಡರ ಮಗಳೇ
ತರುವಾಗ ಅತ್ತೆಮ್ಮಾ ಅರಿಯೇನೇ ಸೋಬಾನವೇ
ಊರೀಗೆ ದೊಡ್ಡೋನು ಗೌಡರು ನಮ್ಮಪ್ಪಾ
ಬಾಗಿಲಿಗೆ ಮುತ್ತು ಬಿಗಿಸ್ಯಾನೇ ಸೋಬಾನವೇ

ಮಾವೀನ ಹೂವಾದೇ ಮಾವೀನ ಕಾಯಾದೇ

ಹಂದರಕಾ ಹಾಲಗಂಬವಾದೆ
ದಂಡಿ ಬಾಸಿಂಗವಾದೆ
ದೊಡ್ಡ-ದೊಡ್ಡ ಮಠದೊಳಗೆ ಕಜ್ಜಾಯ ಬುಟ್ಟಿಯಾದೆ ॥ 5 ॥

ತಿಪ್ಪೆಯ ತೆಳಗಿದ್ದೆ
ಅದರುದ್ದ ಬೆಳದಿದ್ದೆ
ಸಿದ್ದರಾಮೇಶ್ವರನಿಗೆ ನಂದಿ ಕೋಲಾದೆ ॥6॥

ದೇಶದೋಳು ಶಿಶುನಾಳ
ದೀಶನ ಮಠದೊಳಗೆ
ಸಾಧುರ ಕೈಯೊಳಗೆ ಏಕದಾರಿ ಕೊಳವೆಯಾದೆ ॥ 7 ॥

ಮೇದರ ಕೇತಯ್ಯನವರ ವಚನಗಳು :

ಅರಿವಿನ ಕುಳವನರಿಯೆ, ಮಹಿನ ತೆರನನರಿಯೆ
ಅರಿವು , ಮರಹಳಿದ ಗವರೇಶ್ವರ ಲಿಂಗಕ್ಕೆ
ಅರಿವೇ ಅರ್ಪಿತ, ಮರವೇ ಅನರ್ಪಿತ
ಮೊರನ ಹೆಣೆವ ಗೌರ, ನನೆತ್ತ ಬಲ್ಲೆನಯ್ಯ ॥1 ॥

ಇಂದ್ರಿಯಂಗಳ ಕೊಂದೆನೆಂದಡೆ, ಅವು ಕಂದರ್ಪನ ಹಂಗು
ಕಂದರ್ಪನ ಕೊಂದೆನೆಂದಡೆ, ಅವು ಕಂಗಳ ಲಾಭ
ಕಂಗಳು ಮುಚ್ಚಿಯಲ್ಲದೆ ಲಿಂಗವ ಕಾಣಬಾರದು
ಆದುನಿರಂಗಂಗಲ್ಲದೇ, ಜಗದ ಹಂಗಿನವರಿಗಿಲ್ಲಾ ಎಂದೆ, ಗವರೇಶ್ವರಾ ॥2॥

ಎನ್ನ ಕಾಯದ ಕಳವಳ ನಿಲಿಸಿ, ಗುರುಲಿಂಗವ ತೋರಿದ
ಎನ್ನ ಮನದ ವ್ಯಾಕುಳವ ನಿಲಿಸಿ, ಜಂಗಂಲಿಂಗವ ತೋರಿದ
ಇಂತು ಅಂತರಂಗ ಬಹಿರಂಗದಲ್ಲಿ ತಾನಾಗಿ, ಎನ್ನಪಾವನ ಮಾಡಿದ
ಅಮರಗಣಂಗಳು ಮುನಿದು ಎನ್ನ ಕೈಲಾಸಕ್ಕೆ ಒಯ್ದಡೆ
ಸದ್ಯೋನ್ಮುಕ್ತಿಯ ತೋರಲೆಂದು ಮರ್ತ್ಯಕ್ಕೆ ಮರಳಿ ತಂದ
ಸಂಗನವಸವಣ್ಣನೆ ಗುರುವೆನಗೆ, ಸಂಗನಬಸವಣ್ಣನೆ ಪರವೆನಗೆ
ಸಂಗನವಸವಣ್ಣನ ಕರುಣದಿಂದ, ಘನಕ್ಕೆ ಘನಮಹಿಮ ಅಲ್ಲಮಪ್ರಭುವಿನ
ಶ್ರೀಪಾದವ ಕಂಡು ಬದುಕಿದೆನು ಕಾಣಾ, ಗವರೇಶ್ವರಾ ॥ 3 ॥

ಎನ್ನ ಪ್ರಾಣದಲ್ಲಿ ಆಚಾರಲಿಂಗವಾಗಿ ಮೂರ್ತಿಗೋಂಡನಯ್ಯಾ, ಬಸವಣ್ಣನು
ಎನ್ನ ಜಿಹ್ವೆಯಲ್ಲಿ ಗುರಲಿಂಗವಾಗಿ ಮೂರ್ತಿಗೊಂಡನಯ್ಯಾ, ಚನ್ನಬಸವಣ್ಣನು
ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ಮೂರ್ತಿಗೊಂಡನಯ್ಯಾ , ಘಟ್ಟಿವಾಳ ಮದ್ದಯ್ಯನು
ಎನ್ನ ಕತ್ತಿನಲ್ಲಿ ಜಂಗಮಲಿಂಗವಾಗಿ ಮೂರ್ತಿಗೊಂಡನಯ್ಯಾ, ಸಿದ್ದರಾಮಯ್ಯನು
ಎನ್ನ ಶೋತ್ರದಲ್ಲಿ ಪ್ರಸಾದಲಿಂಗವಾಗಿ ಮೂರ್ತಿಗೋಂಡನಯ್ಯಾ, ಮರುಳು ಶಂಕರದೇವರು
ಎನ್ನ ಹೃದಯದಲ್ಲಿ ಮಹಾಲಿಂಗವಾಗಿ ಮೂರ್ತಿಗೊಂಡನಯ್ಯಾ , ಪ್ರಭುದೇವರು
ಎನ್ನ ಸಾರ್ವಾಂಗದಲ್ಲಿ ಮೂರ್ತಿಗೊಂಡರು ಪ್ರಮಥರು
ಗವರೇಶ್ವರಲಿಂಗದಲ್ಲಿ ಸುಖಿಯಾಗಿ ಬದುಕಿದೆನು ಕಾಣಾ, ಮಡಿವಾಳ ಮಾಚಯ್ಯಾ ॥ 4 ॥

ಎನ್ನ ಚಿತ್ತಕ್ಕೆ ಆಚಾರಲಿಂಗವಾದಾತ, ಬಸವಣ್ಣ
ಎನ್ನ ಬುದ್ಧಿಗೆ ಗುರುಲಿಂಗವಾದಾತ, ಬಸವಣ್ಣ
ಎನ್ನ ಅಹಂಕಾರಕ್ಕೆ ಶಿವಲಿಂಗವಾದಾತ, ಬಸವಣ್ಣ
ಎನ್ನ ಮನಕ್ಕೆ ಜಂಗಮಲಿಂಗವಾದಾತ, ಬಸವಣ್ಣ
ಎನ್ನ ಜೀವಕ್ಕೆ ಪ್ರಸಾದಲಿಂಗವಾದಾತ, ಬಸವಣ್ಣ
ಎನ್ನ ಅರುವಿಗೆ ಮಹಾಲಿಂಗವಾದಾತ, ಬಸವಣ್ಣ
ಎನ್ನ ಸ್ಥೂಲಕ್ಕೆ ಇಷ್ಟಲಿಂಗವಾದಾತ, ಬಸವಣ್ಣ
ಎನ್ನ ಸೂಕ್ಷ್ಮತನುವಿಂಗೆ ಪ್ರಾಣಲಿಂಗವಾದಾತ, ಬಸವಣ್ಣ
ಎನ್ನ ಕಾರಣತನುವಿಂಗೆ ತೃಪ್ತಿಲಿಂಗವಾದಾತ,ಬಸವಣ್ಣ
ಇಂತೆಂದರಿದೆನಾಗಿ, ಗವರೇಶ್ವರಲಿಂಗದಲ್ಲಿ ಆನು ಸುಖಿಯಾಗಿರ್ದೆನಯ್ಯಾ ॥5 ॥

ಎನ್ನ ಭಕ್ತಿ, ಬಸವಣ್ಣನಲ್ಲಿ ಬಯಲಾಯಿತ್ತು
ಎನ್ನ ಜ್ಞಾನ, ಚೆನ್ನಬಸವಣ್ಣನಲ್ಲಿ ಬಯಲಾಯಿತ್ತು
ಎನ್ನ ವೈರಾಗ್ಯ, ಪ್ರಭುದೇವರಲ್ಲಿ ಬಯಲಾಯಿತ್ತು
ಇಂತೀಮೂವರು ಒಬ್ಬರೊಂದ ಬಯಲಮಾಡಿದರಾಗಿ
ಗವರೇಶ್ವರ ಲಿಂಗದಲ್ಲಿ ನಿಶ್ಚಿಂತವಾಯಿತ್ತು ॥ 6 ॥

ಒಂದು ಬಿದಿರಿಂಗೆ ಕವೆ ಮೂರು ,ಆ ಕವೆಯ ಒಳಗೆ ಲಕ್ಷ ಸಿಬಿರು
ಮೂರು ಕವೆಯ ಕೊಚ್ಚಿಸಿ, ಬಿಲ್ಲ ಸಿಕ್ಕ ಬಿಡಿಸಿ, ಸೀಳಿದ ಬಿದಿರ
ಹೊರೆಹೊರೆಯಲ್ಲಿ ನೆಯಿದೆ, ತೊಟ್ಟಿಲ ಸಂದ ಕಾಣದಂತೆ ನಾಲ್ಕು ಕಾಲನಿಕ್ಕಿ
ಅಂದ ಅಂದವಾದ ತೊಟ್ಟಿಲ ದಂಡೆಯನಿಕ್ಕಿ,
ಕಟ್ಟುವಕ್ಕೆ ಶ್ರುತ ದೃಷ್ಟವೆಂಬೆರಡು, ದಾರದಲ್ಲಿ ತೊಟ್ಟಿಲ ಕಟ್ಟಿ
ಗವರೇಶ್ವರ ಲಿಂಗಕ್ಕೆ ಹುಟ್ಟುಗೆಟ್ಟು ಹೋಗೋ ಎಂದು ಜೋಗುಳವಾಡಿದೆ. ॥ 7 ॥

ಕರಣದ ಶರಣನ ಕಂಡಿಹೆ, ಕೇಳಿಹೆ,
ಉಂಡುಟ್ಟುದ್ದವಾಗಿ ಹೇಳಿ ಜೋಗೈಸಿಹೆನೆಂಬ
ಬಾಲರಿಗಿನ್ನೆಲ್ಲಿಯ ಅನುಭಾವ
ಪರಮ ಬುರುವೆ, ಗವರೇಶ್ವರಾ ॥ 8 ॥

ಪ್ರಾಣಸ್ಥಾನದಲ್ಲಿ ಆಪ್ಯಾಯನವಾಯಿತ್ತು, ಲಿಂಗಜಂಗಮ
ತನುಸ್ಥಾನದಲ್ಲಿ ಆಪ್ಯಾಯನವಾಯಿತ್ತು
ಆಚಾರಲಿಂಗಸ್ಥಲ,ಗುರುಲಿಂಗಸ್ತಲ
ಈ ಉಭಯಸ್ಥಳ ನಿಃಸ್ಥಲವಾಗಿ
ತಾನೊಂದೇ ತೋರುತ್ತಿರ್ದಿತ್ತು
ಈ ತೋರುವ ತೋರಿಕೆಯೆ ಬಸವಣ್ಣನೆನಗೆ
ಆ ಬಸವಣ್ಣನ ಕರುಣದಿಂದ ಪ್ರಭುದೇವರ ಶ್ರೀಪಾದವ ಕಂಡು
ನಾನು ಬದುಕಿದೆನು ಕಾಣಾ, ಗವರೇಶ್ವರಾ. ॥ 9 ॥

ಭಕ್ತಂಗೆ ಸುಖವೂ ಸರಿ, ದುಃಖವೂಸರಿ
ಉರಿಸಿರಿ ಉಭಯವೂ ಸರಿ
ಎನ್ನದಿರ್ದಡೆ ಭಕ್ತನಿಗದೇ ಹಾನಿ

ಎಂಗಮವೆಂದು ಪ್ರಮಾಣಿಸಿ
ತನ್ನ ಕಂಗಳ ಮುಂದೆ ಕಂಡವರ ಭಂಜಿಸಲಿಕ್ಕೆ, ತನ್ನಂಗವಹೊರೆದಡೆ
ತೀರ್ಥಪ್ರಸಾದಕ್ಕೆ ಅವನಂದೇ ಹೊರಗು
ಗವರೇಶ್ವರಾ. ॥ 10 ॥

ಮೊದಲಿಲ್ಲದೆ ಲಾಭವುಂಟೆ ?
ನಿರೀಕ್ಷಣೆಯಿಲ್ಲದೆ ಪರೀಕ್ಷೆಯುಂಟೆ ?
ಗುರುವಿಲ್ಲದೆ ಲಿಂಗವುಂಟೆ ?
ಇಂತಿ ವೇಷದ ಭಾಷೆಗೆ ಹೇಸಿದೆನು ಕಾಣಾ
ಗವರೇಶ್ವರಾ. ॥ 11 ॥

ಮೊದಲು ಹುಸಿ, ಲಾಭ ದಿಟವೆ ?
ನಿರೀಕ್ಷಣೆಯಿಲ್ಲದೆ ಪರೀಕ್ಷೆ ಉಂಟೆ ?
ಈ ಯಾವ ಸರದಂಗವ
ಗವರೇಶ್ವರಲಿಂಗ ನೀನೇ ಬಲ್ಲೆ ? ॥ 12 ॥

ಮೊರನ ಹೊಲಿವ ಗವರ ನಾನೆತ್ತ ಬಲ್ಲೆನು ?
ಕಟ್ಟಿಕೊಂಡಾತ ಭಕ್ತನಪ್ಪನೆ, ಕೆಡಹಿದಾತ ದ್ರೋಯಿಯಪ್ಪನೆ ?
ಆ ಲಿಂಗವು ಕಟ್ಟಲಿಕೆ, ತನ್ನ ಕೈಯಲ್ಲಿಪ್ಪುದೆ ?
ಕೆಡಹಲಿಕೆ ಬೀಳಲು ಬಲ್ಲುದೆ ?
ಆ ಲಿಂಗ ಬಿದ್ದ ಬಳಿಕ, ಜಗತ್ತು ಉಳಿಯಬಲ್ಲದೆ
ಆಪ್ರಾಣಲಿಂಗ ಬಿದ್ದ ಬಳಿಕ, ಈ ಪ್ರಾಣ ಉಳಿಯಬಲ್ಲುದೆ
ಆ ಲಿಂಗ ಬಿದ್ದಿತ್ತೆಂಬ ಸೂತಕದ ಶಬ್ದ ಭ್ರಾಂತುವಿನ ಪುಂಜ
ಅಂತು ಅದ ಕೇಳಲಾಗದು
ಯುಗಜುಂಗಂಗಳು ಗತವಹವಲ್ಲದೆ, ಲಿಂಗಕ್ಕೆ ಗತ ಉಂಟೆ ?
ಲಿಂಗ ಬಿದ್ದಿತ್ತೆಂದು ನಿಂದಿಸಿ ನುಡಿವ ದ್ರೋಹಿಗಳ ಮಾತ ಕೇಳಲಾಗದು, ಗವರೇಶ್ವರಾ ॥ 13 ॥

ಬುಡಕಟ್ಟು ಗಾದೆ ಮತ್ತು ಒಗಟುಗಳು

ಅನೇಕ ಬುಡಕಟ್ಟು ಸಮುದಾಯಗಳಲ್ಲಿ ಕಂಡು ಬರುವಂತೆ ಮೇದ ಬುಡಕಟ್ಟು ಸಮುದಾಯದಲ್ಲಿ ಸಹ ಅನೇಕ ಗಾದೆ ಮತ್ತು ಒಗಟುಗಳು ಇವೆ. ಇಲ್ಲಿ ನಾನು ಈ ಸಮುದಾಯದ ಕಸುಬು ಮತ್ತು ಇವರಲ್ಲಿ ಕಂಡು ಬರುವ ವಿಶೇಷವಾದ ಗಾದೆ ಮತ್ತು ಒಗಟುಗಳನ್ನು ಮಾತ್ರ ಉಲ್ಲೇಖಿಸಿದ್ದೇನೆ .

ಗಾದೆಗಳು :

- ಬೆಳದಿಂಗಳಾಗ ಗಳ ಕಡಿಬ್ಯಾಡ, ಬೋಳು ತಲೆಯಲ್ಲಿ ಬಿದಿರು ಹೋರ ಬ್ಯಾಡ.
- ಕರಿದಿಂಗಳಾಗ ಬಿದಿರು ಕಡದರೆ, ಕಂಡಂಗ ದುಡ್ಡು ನಿಂದಾ.
- ಬೊಂಬು ಹೋರುವವರ ಸಂಗಡ ಹಂಬಲಿಸಿದರೆ ಇಂಬು ಸಿಕ್ಕೀತೆ.

- ಬಂಡೆ ಹೋಡೆಯ ಬಹುದು ಬಿದಿರು ಮಾತ್ರ ಕಡಿಯಲಾರೆ.
- ಪುಟ್ಟಿಹೆಣಕಂತಾ ಕಟ್ಟಿಗೆ ಕುಂದ್ರಲೇ ಅಂದ್ರ, ಹೊಟ್ಟಿಕೆರಕಂತಾ ಒಣೆ ಒಣೆ ತಿರುಗುತೀನಿ ಅಂದನಂತೆ.
- ಮನೆಯಲ್ಲಾನಿಂದ, ಅದ್ರ ಗಳ ಮಾತ್ರ ಮುಟ್ಟಬೇಡ.
- ಮುಡಿ ಕಟ್ಟಿಯಾಯಿತು ಬುಟ್ಟಿಹೆಣದಾಯಿತು.
- ಮೇದ ಮೇಟು ಹೋದ ಹೆಜ್ಜೆಯೂ ಕಾಣುವುದಿಲ್ಲ.
- ಕೈಯಾಗ ಕತ್ತಿ ಕಾಲಾಗ ಬಿದಿರು ಇದ್ದರೆ ಬಾಯಿಯ ತುಂಬಾ ಬೆಲ್ಲ.
- ಮೊರದಿಂದ ಕತ್ತಲೆಯನ್ನು ಹೊರ ಹಾಕಿದಂತೆ.
- ಮೂರು ಮಹಡಿಯ ಮನೆಯಿದ್ದರೂ , ಮನೆಮುಂದೆ ಮಾರು ಬಿದಿರಿನ ಸೂರು ಚಂದ.
- ಮೇದರ ಬದುಕು ಚಾಪ್ಯಾಗ ಐತಿ.
- ಬಿದಿರಿನ ಕಾಯಕ ಶರಣರ ಬದುಕು.
- ಗೋಪಾಳ ಪುಟ್ಟಿಯಲ್ಲಿ ಶನೀಶ್ವರ ಹೊಕ್ಕಂಗ.
- ಬಿದಿರಿನ ತಟ್ಟಿ ಮಾರಿದಾಕ್ಷಣ, ಶಟ್ಟಿಯಾದಾನೇನು.
- ಬಿದಿರು, ಬುಡ ಕಡಿದರೂ ಭೂಮಿಗೆ ತಾಗಲಿಲ್ಲ, ನಿನ್ನಂತವನು ಮಂದ್ಯಾಗಿದ್ದರೂ ಬೆರಯಲಿಲ್ಲ.
- ಬೆತ್ತದ ಪೆಟ್ಟು ಹೆತ್ತವರು ಹೊಡದರೆ ನೋಯದೇನು.
- ಬೆತ್ತ ಮೆತ್ತಗಾದರೂ ದಬ್ಬೆ ನೋಯಿಸದಿರದು.
- ಬಿದಿರು ಬೆಳೆದರೆ ಬಾಳು. ಬೆಳೆಯದಿದ್ದರೆ ಗೋಳು.
- ಪುಟ್ಟಿ ಮಾರಾಕ ಶನಿಗೇಡಿ ಸಂತಿಗೆಹೋದರ, ಆಲಿಕಲ್ಲಿನ ಮಳೆ ಬಂತಂತೆ.
- ಬಯಕೆ ತೀರಸಾಕ ಮುಳ್ಳು ಮೀನು ತಿಂದ್ಹಂಗ.
- ಕಸುಬು ಬಿಡ್ತಾ ಬಿಡ್ತಾ ಮ್ಯಾದ ಹಾಳಾದನಂತ.
- ಜಾತಿಬಿಟ್ಟರೂ ಸುಖ ಪಡಬೇಕು.
- ಬಿದಿರನ್ನು ಮುದ್ದಿಸ ಬಾರದು ಉದ್ರಿ ಕೊಡಬಾರದು.
- ಜಿಪುಣ ಗಳಿಸಿದರೆ ಜಾಣ ಉಣತಾನ.
- ಹಸಿಬಿದರು ಕೆತ್ತಾಕ ಹಸ, ಮೊಸರು ಉಣ್ಣಾಕ ಹಸ.

- ಎಳೆ ಬಿದಿರು ಕಡಿಬ್ಯಾಡ ಗಂಡುಳ್ಳಾಕಿ ಮನಿಗೆ ಹೋಗಬ್ಯಾಡ.
- ಎಳೆ ಬಿದಿರು ಕಡಿಬ್ಯಾಡ ಹಳೆ ಗೆಳೆತನ ಬಿಡಬ್ಯಾಡ.
- ಬಿದಿರು ಸೀಳದೆ ಮೇದ ಕೆಟ್ಟ, ಮಣ್ಣು ತುಳಿಯದೆ ಕುಂಬಾರ ಕೆಟ್ಟ.
- ಒಣ ಬಿದಿರು ಸೀಳಬ್ಯಾಡ ಒಣ್ಣ್ಯಾಗ ನಿಷ್ಠೂರ ಆಗಬ್ಯಾಡ.
- ಸೀರಲಿದ್ದರೆ ಸೀರಿಣಿಗ್ಯಾಕ, ಕೇರದಿದ್ದರೆ ಮೊರಯ್ಯಾಕ.
- ಕುಂತು ಹೆಣದರೆ ಮೊರ, ಹಣದರ ಬರೀ ಸಾಲ.
- ಬಿದಿರು ಸೀಳದಾವ ಹುಡಿಗಿಯ ನಡು ಹ್ಯಾಂಗ ಏರ್ಯಾನು.
- ಬಿದಿರು ಎದುರು ಸೀಳ ಬ್ಯಾಡ, ಅನ್ನನಾ ಉದುರು ಮಾಡಬೇಡಾ.
- ಬಡ್ಡಿ ಬಂಬು, ಗಿಡ್ಡ ಹೋರಿನಾ ಬಿಟ್ಟು ಬರಬಾರದು.

ಒಗಟುಗಳು :

- ಮೊಳತು ಮೂರು ತಾಸಿಗೆ ಗೇಣುದ್ದಾ ನಿಗಿರಿ ನಿಂತೈತಿ --- ಬಿದಿರು.
- ಇದ್ದರೆ ಒಂದೇ ಹೆಸರು, ಸತ್ತರೆ ಸಾವಿರ ಹೆಸರು. --- ಬಿದಿರು.
- ಮೈತುಂಬಾ ಮುಳ್ಳು ಹಂದಿಯಲ್ಲ, ಮೈ ಕೊಯ್ದರೆ ಒಂದು ಹನಿ ರಕ್ತ ಇಲ್ಲ --- ಬಿದಿರು
- ಎರಡನ್ನ ನಾಲ್ಕು ಜನ ಹೋರುತಾರೆ. --- ಚಟ್ಟಾ.
- ನಮ್ಮ ಕೈಯ್ಯಾನ ಗೂಟ ಹಸುವಿನ ಹೊಟ್ಟೆ ಹರಿತೈತಿ.--- ಗೊಟ್ಟ
- ಒಬ್ಬರ ಬಾಯಾಗ ಇನ್ನೊಬ್ಬರ ಮುಕುಳಿ, --- ಜೋಡಿಸಿ ಹಿಡಿದ ಮೊರ.
- ಗಿಡ್ಡ ಹುಡುಗಿ ಮನಿಯ್ಯಾರೆಲ್ಲಾ ಉಣ್ಣಾವಷ್ಟು ರೊಟ್ಟಿ ತಿಂತಾಳ,--- ರೊಟ್ಟಿ ಚಿಬ್ಬಲಿ.
- ಮೈ ತುಂಬಾ ಅರಿಶಿಣ ಮದುಮಗಳಲ್ಲ, ದಿನಾ ಸಂತೆಗೆಹೋದರೂ ಏನೂ ತಿನ್ನಾದಿಲ್ಲ, --- ಮೆಂತದ ಮೊರ.
- ಹುಡಿಗೀಗೆ ಚಲೋ ಕಿಮ್ಮತ್ತು ಬರಬೇಕಂದ್ರ ಆಕಿ ತೂತು ಸಣ್ಣದಿರಬೇಕು,--- ಗಟ್ಟಿ ಬಿದಿರು.
- ಮುದುಕಿಯ ಓರು ಅಗಲಾ ಆದಂಗಲ್ಲಾ ನೋಡಿ ನೋಡಿ ದೂರಾ ಸರಿತಾರ,--- ಪೊಳ್ಳು ಬೊಂಬು.
- ಗರಿ ಇಲ್ಲಾ ಗೆರಿ ಇಲ್ಲಾ ನೆಟ್ಟಗೋಗ್ತೈತಿ , ಸರಾಬರಾ ಓಡ್ಯಾಡತೈತಿ ಲಾಳ ಅಲ್ಲ, --- ಕತ್ತಿ.
- ಮಗ್ಗಲಾಗಿದ್ದರೂ ಯಾಕವ್ವಾ ಅನ್ನಲಿಲ್ಲ, ಸಿಂಗಾರಾಗಿ ಊರು ತಿರುಗುವಾಗ ಎಲ್ಲರೂ ಕೈ ಮುಗಿತಾರ. - ಪಡ್ಲಿಗಿ.
- ಚಟ್ರದೆಲಿ ಹಿಪ್ಪೀ ಜಿಡ್ಡು, ಹಿಕ್ಕ ಬಿಡಿಸಿ, ಜಡೆ ಹೆಣದವನೇ ಜಾಣ. --- ಬಿದಿರಿನ ಮೆಳೆ.

ಕ್ಷೇತ್ರಕಾರ್ಯ ಮಾಹಿತಿ ಪಟ್ಟಿಕೆ(ಪ್ರಶ್ನಾವಳಿ)

ಸಂಶೋಧನೆಯ ವಿಷಯ :- ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ

ವೈಯಕ್ತಿಕ /ಕೌಟುಂಬಿಕ ಮಾಹಿತಿ.:- ಜಿಲ್ಲೆ ……………ತಾಲ್ಲೂಕು……………………ಗ್ರಾಮ……………………

ಮಾರ್ಗದರ್ಶಕರು
ಡಾ|| ಕೆ.ಕೇಶವನ್ ಪ್ರಸಾದ್
ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

ಹಂಪಿ
ಬುಡಕಟ್ಟು ಅಧ್ಯಯನ ವಿಭಾಗ
ಗಿರಿಸೀಮೆ
ಕನ್ನಡ ವಿಶ್ವವಿದ್ಯಾಲಯ ಹಂಪಿ -583276

ಸಂಶೋಧಕರು
ಕಡ್ಲಬಾಳ ಪನ್ನಂಗಧರ
ಹಿ.ವೇ.ಶ್ರೇ.ವಾಣಿಜ್ಯ ಉಪನ್ಯಾಸಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ

ಅ) ಸಾಮಾನ್ಯ ಮಾಹಿತಿ:-
1) ಸಮೀಕ್ಷೆಯ ದಿನಾಂಕ…………
2) ವಾಸ್ತವ್ಯ / ಗ್ರಾಮ…………
3) ಹೋಬಳಿ…………
4) ಮಾತೃ ಭಾಷೆ…………
5) ಆಡುವ ಇತರ ಭಾಷೆ…………
6) ಮನೆತನದ ಹೆಸರು…………
7) ಗೋತ್ರ / ಬೆಡಗು / ಬಳಿ…………
8) ಮನೆದೇವರು…………
9) ಕುಲದ ಚಿಹ್ನೆ…………
10) ಭೂ ಹಿಡುವಳಿ (ಎಕರೆಗಳಲ್ಲಿ)…………
ಒಣ…………ನೀರಾವರಿ…………

ಆ) ಪಶು ಸಂಪತ್ತು (ಸಂಖ್ಯೆಗಳಲ್ಲಿ):-
1) ಎತ್ತು…………
2) ಎಮ್ಮೆ…………
3) ಆಕಳು…………
4) ಕುರಿ…………
5) ಮೇಕೆ…………
6) ಕೋಳಿ…………
7) ಇತರೆ…………

ಕ್ರ. ಸಂ	ಕುಟುಂಬದ ಸದಸ್ಯರ ಹೆಸರುಗಳು	ಲಿಂಗ		[illegible]	ವಿವಾಹಿತ/ ಅವಿವಾಹಿತ/ ಬೆಡಗು	[illegible]	[illegible]	ವೃತ್ತಿ					ಕಚ್ಚಾ ಸಾಮಾಗ್ರಿಗಳು ದೊರೆಯುವ ಸ್ಥಳ	[illegible]	[illegible]	[illegible] %	ವಲಸೆ ಬಂದಿದ್ದರೆ		[illegible]	ಸರಕಾರಿ ಸೌಲಭ್ಯಗಳು				ಇತರ ಮಾಹಿತಿ
		ಗಂಡು	ಹೆಣ್ಣು					[illegible]	[illegible]	[illegible]	[illegible]	[illegible]					ಎಲ್ಲಿಂದ	[illegible]		[illegible]	[illegible]	[illegible]	[illegible]	
1	2	3	4	5	6	7	8	9	10	11	12	13	14	15	16	17	18	19	20	21	22	23	24	25
1																								
2																								
3																								
4																								
5																								
6																								
7																								
8																								
9																								
10																								
11																								
12																								
13																								
14																								

ಇ) ತಯಾರಿಸುವ ವಸ್ತುಗಳು:-
1) ಮೊರ
2) ಚಿಬ್ಬಲ
3) ಪುಟ್ಟಿ
4) ಜರಡಿ
5) ಸಂಬಳಿಗಿ
6) ದೇವರ ಪುಟ್ಟಿ
7) ಬೀಸಣಿಗಿ
8) ತಟ್ಟಿ
9) ಏಣಿ
10) ಮಂಚ
11) ಸೋಫ
12) ಕುರ್ಚಿ
13) ಗೆಣಿ (ಕಣಜ)
14) ಪಡ್ಡಲಿಗಿ
15) ಗೋಪಾಳ
16) ಬುತ್ತಿಕಲ್ಲಿ
17) ತರಕಾರಿ ಪುಟ್ಟಿ
18) ಕರಕುಶಲ ವಸ್ತುಗಳು
19) ಅಲಂಕಾರಿಕ ವಸ್ತುಗಳು
20) ಅಕ್ಕಡಿಕೋಲು
21) ಗೋರಿ
22) ಮರಿ ಮುಚ್ಚುವಪುಟ್ಟಿ
23) ಪಂಜರಗಳು
24) ತರಕಾರಿ,ಹೂ ಸಾಗಿಸುವಪುಟ್ಟಿ
25) ಮಂಕರಿ
26) ಮೀನು ಮಂಕರಿ
27) ಜಾಳಿಸುವ ಮಂಕರಿ
28) ಕಣಗೂಟ ಮಂಕರಿ
29) ಬೇಲಿತಟ್ಟಿ
30) ಅಡಿಕೆ ಕೈತಟ್ಟಿ
31) ಅಡಿಕೆ ಚಾಪಿ
32) ಕುಕ್ಕೆ
33) ಕಾಯಿಕುಕ್ಕೆ
34) ಕೋಳಿಕವಚ
35) ದಾಡಿದಬ್ಬೆ
36) ತೊಟ್ಟಿಲು

ಈ) ವಾಣಿಜ್ಯ ಮಾಹಿತಿ
ಅಂಗಡಿ/ಡಿಪೋದಲ್ಲಿ ಮಾರಾಟ ಮಾಡುವ ವಸ್ತುಗಳು :-
1) ಬಿದಿರು
2) ಬಂಬು
3) ಸೀಬು
4) ಗಳ
5) ಕಡಪ ಕಲ್ಲು
6) ಹಂಚು
7) ಪೋಲ್ಸ್
8) ಅಡಿಕೆ ಬಂಬು
9) ಬಂಡೆ
10) ಟೈಲ್ಸ್
11) ಮಾರ್ಬಲ್ಸ್
12) ಸಿರಾಮಿಕ್
13) ಹರಿ ನಾಲಿಗೆ
14) ಇತರೆ

ಉ) ಮನೆಯ ಮಾದರಿ:-
1) ಗುಡಿಸಲು
2) ಮಾಳಿಗೆ ಮನೆ
3) ಆರ್ ಸಿ.ಸಿ. ಮನೆ
4) ಹಂಚಿನ ಮನೆ
5) ತಗಡಿನ ಮನೆ
6) ಬಿದಿರಿನ ಮನೆ
7) ತಟ್ಟಿಯ ಮನೆ
8) ಕಲ್ಲಿನ ಮನೆ
9) ತಾತ್ಕಾಲಿಕ
10) ಚಾಪಿಯಮನೆ

ಊ) ವಸ್ತುಗಳ ತಯಾರಿಕೆ ಮತ್ತು ಮಾರಾಟದ ಮಳಿಗೆ:-
1) ವಾಸಸ್ಥಳಕ್ಕೆ ಹೊಂದಿಕೊಂಡಿದೆ
2) ಪ್ರತ್ಯೇಕವಾಗಿದೆ
3) ಕ್ಷೇತ್ರಫಲ (ಅಡಿಗಳಲ್ಲಿ)

ಋ) ಹೊಂದಿರುವ ಸೌಲಭ್ಯಗಳು:-
1) ಮನೆ ಸ್ವಂತ / ಬಾಡಿಗೆ
2) ನಿವೇಶನ
3) ವಿದ್ಯುತ್ ದೀಪ
4) ನೀರು
5) ಬಂಡಿ (ಎತ್ತಿನ ಗಾಡಿ)
6) ಸೈಕಲ್
7) ಸ್ಕೂಟರ್
8) ಆಟೋರಿಕ್ಷಾ
9) ಸೈಕಲ್ ರಿಕ್ಷಾ
10) ಜೀಪು
11) ಕಾರು
12) ಟ್ರ್ಯಾಕ್ಟರ್
13) ಲಾರಿ
14) ರೇಡಿಯೋ
15) ಟೇಪ್ ರಿಕಾರ್ಡರ್ ವಿ.ಸಿ.ಡಿ
16) ಟಿ.ವಿ.
17) ಟೆಲಿಫೋನ್ ಭೂ/ ಮೊಬೈಲ್
18) ವಿ.ಸಿ.ಆರ್.
19) ಫ್ರಿಜ್
20) ಕೂಲರ್
21) ಫ್ಯಾನ್
22) ಶೌಚಾಲಯ
23) ಸ್ನಾನದ ಕೋಣೆ
24) ಪಡಿತರ ಚೀಟಿ
25) ಕೇಸರಿ ಕಾರ್ಡು
26) ಹಳದಿ ಕಾರ್ಡು
27) ಸರ್ಕಾರಿ ನಿವೇಶನ
28) ಸಾಲ ಸೌಲಭ್ಯ
.ಸಬ್ಸಿಡಿ
.ಮೀಸಲಾತಿ
.ಇತರೆ

ಋು) ತಯಾರಿಸಿದ ವಸ್ತುಗಳ ಮಾರಾಟ ವಿಧಾನ:-
1) ಥೋಕ ಮಾರಾಟ
2) ಚಿಲ್ಲರೆ ಮಾರಾಟ
3) ಸಂತೆಯಲ್ಲಿ ಮಾರಾಟ
4) ಜಾತ್ರೆಯಲ್ಲಿ ಮಾರಾಟ
5) ರಸ್ತೆ ಬದಿ ಮಾರಾಟ
6) ಇತರೆ ಜನಾಂಗದವರಿಗೆ ಥೋಕ ಮಾರಾಟ
7) ತಲೆಯ ಮೇಲೆ ಹೊತ್ತು ನೇರ ಮಾರಾಟ
8) ಇತರೆ ಸಂದರ್ಭಗಳಲ್ಲಿ :-

ಎ) ವೈಯಕ್ತಿಕ ವಿಶೇಷತೆಗಳು
ಹೆಸರು…………
1) ಜನಪದ…………
2) ರಂಗಭೂಮಿ…………
3) ಸಾಹಿತ್ಯ…………
4) ಕುಲಕಸುಬು…………
5) ಇತರೆ…………

ಏ) ಇತರೆ ಮಾಹಿತಿ…………………………………………

ಬಳ್ಳಾರಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು ಜನಸಂಖ್ಯೆ ಮಾಹಿತಿ ಕೋಷ್ಟಕ - 1

ಕ್ರ. ಸಂ	ಗ್ರಾಮ	ವಯೋ ಗುಂಪು																	
		0-14			15-29			30-44			45-59			60- ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಎಮ್ಮಿಗನೂರು	-	01	01	02	-	02	-	01	01	01	-	01	-	-	-	03	02	05
2	ಬಳ್ಳಾರಿ	156	132	288	158	146	304	110	83	193	54	47	101	32	35	67	510	443	953
3	ಕುಡುತಿನಿ	-	01	01	02	-	02	-	-	-	-	01	01	01	-	01	03	02	05
4	ಕುರುಗೋಡು	03	07	10	05	01	06	02	04	06	02	01	03	-	01	01	12	14	26
5	ರುದ್ರಪಾದ	01	-	01	01	03	04	01	02	03	-	01	01	-	-	-	03	06	09
6	ಶ್ರೀಧರಗಡ್ಡಿ	25	19	44	29	28	57	13	16	29	10	08	18	08	05	13	85	76	161
	ಒಟ್ಟು	185	160	345	197	178	375	126	106	232	67	58	125	41	41	82	616	543	1159

ಬಳ್ಳಾರಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಕೋಷ್ಟಕ - 2

ಕ್ರ.ಸಂ	ತಾಲೂಕು	ಗ್ರಾಮ	ಕುಟುಂಬಗಳು	ಜನ ಸಂಖ್ಯೆ		ಒಟ್ಟು
				ಗಂಡು	ಹೆಣ್ಣು	
1	ಬಳ್ಳಾರಿ	ಎಮ್ಮಿಗನೂರು	01	03	02	05
2	,,	ಬಳ್ಳಾರಿ	155	510	443	953
3	,,	ಕುಡಿತಿನಿ	01	03	02	05
4	,,	ಕುರುಗೋಡು	05	12	14	26
5	,,	ರುದ್ರಪಾದ	03	03	06	09
6	,,	ಶ್ರೀಧರಗಡ್ಡಿ	34	85	76	161
	ಒಟ್ಟು		199	616	543	1159

ಬಳ್ಳಾರಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಸಾಕ್ಷರರ್ಹರು ಮತ್ತು ಸಾಕ್ಷರರ ಮಾಹಿತಿ ಕೋಷ್ಟಕ - 3

ಕ್ರ. ಸಂ.	ಗ್ರಾಮ	ಕುಟುಂಬ ಸಂಖ್ಯೆ	ಒಟ್ಟು ಜನ ಸಂಖ್ಯೆ			0-6			ಸಾಕ್ಷರರ್ಹರು			ಸಾಕ್ಷರರು		
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಎಮ್ಮಿಗನೂರು	01	03	02	05	-	-	-	03	02	05	02	03	05
2	ಬಳ್ಳಾರಿ	155	510	443	953	64	67	131	446	376	822	376	252	628
3	ಕುಡುತಿನಿ	01	03	02	05	-	-	-	03	02	05	03	01	04
4	ಕುರುಗೋಡು	05	12	14	26	-	02	02	12	12	24	09	06	15
5	ರುದ್ರಪಾದ	03	03	06	09	-	-	-	03	06	09	01	01	02
6	ಶ್ರೀಧರಗಡ್ಡಿ	34	85	76	161	07	04	11	78	72	150	60	36	96
	ಒಟ್ಟು	199	616	543	1159	71	73	144	545	470	1015	451	299	750

ಬಳ್ಳಾರಿ ತಾಲೂಕಿನ ಮೇದಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ. - 4

ಕ್ರ. ಸಂ	ಗ್ರಾಮ	ಕು. ಸಂಖ್ಯೆ	ಅಕ್ಷರಸ್ಥರು/ ಅನಕ್ಷರಸ್ಥರು						ವೃತ್ತಿ				ಒಟ್ಟು ಜನ ಸಂಖ್ಯೆ				ಶೈಕ್ಷಣಿಕ ಮಟ್ಟ									
			ಗಂಡು		ಹೆಣ್ಣು		0-5 ಮಗು										1-7		8-10		11-12		ಪದವಿ		ಸ್ನಾತಕೋ ಪದವಿ	
			ಅಕ್ಷರಸ್ಥರು	ಅನಕ್ಷರಸ್ಥರು	ಅಕ್ಷರಸ್ಥರು	ಅನಕ್ಷರಸ್ಥರು	ಗಂ	ಹೆ	ಕು.ಕ	ನೌಕರಿ	ಇತರೆ	ಅಭ್ಯಾಸ	ಗಂ	ಹೆ	ಒಟ್ಟು	ಡಿಪ್ಲೊ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
1	ಎಮ್ಮಿಗನೂರು	01	03	-	02	-	-	-	03	-	-	02	03	02	05	01	02	01	-	01	-	01	-	-	-	-
2	ಬಳ್ಳಾರಿ	155	406	64	270	131	40	42	510	14	81	266	510	443	953	44	174	151	119	91	44	10	38	-	01	-
3	ಕುಡುತಿನಿ	01	03	-	01	01	-	-	03	-	-	02	03	02	05	01	01	-	02	01	-	-	-	-	-	-
4	ಕುರುಗೋಡು	05	09	03	07	06	-	01	13	-	-	12	12	14	26	04	03	06	04	-	02	-	-	-	-	-
5	ರುದ್ರಪಾದ	03	01	02	01	05	-	-	-	-	08	01	03	06	09	-	01	01	-	-	-	-	-	-	-	-
6	ಶ್ರೀದರಗಡ್ಡಿ	34	61	19	37	36	05	03	05	03	102	43	85	76	161	-	33	18	22	16	02	02	03	-	-	-
	ಒಟ್ಟು	199	483	88	318	179	45	46	534	17	191	326	616	543	1159	50	214	177	147	109	48	13	41	-	01	-

ಹಗರಿಬೊಮ್ಮನಹಳ್ಳಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು ಜನಸಂಖ್ಯೆ ಮಾಹಿತಿ ಕೋಷ್ಟಕ - 5

ಕ್ರ. ಸಂ	ಗ್ರಾಮ	ವಯೋ ಗುಂಪು																	
		0-14			15-29			30-44			45-59			60- ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಬೆಣಕಲ್ಲು	-	01	01	01	01	02	01	01	02	-	-	-	-	-	-	02	03	05
2	ದಶಮಾಪುರ	-	-	-	01	02	03	01	-	01	-	01	01	-	-	-	02	03	05
3	ಹಗರಿಬೊಮ್ಮನಹಳ್ಳಿ	25	32	57	21	21	42	15	19	34	10	04	14	04	03	07	75	79	154
4	ಹಂಪಸಾಗರ	03	-	03	-	01	01	01	01	02	-	-	-	-	-	-	04	02	06
5	ತಂಬ್ರಹಳ್ಳಿ	-	-	-	01	-	01	-	-	-	-	-	-	-	-	-	01	-	01
	ಒಟ್ಟು	28	33	61	24	25	49	18	21	39	10	05	15	04	03	07	84	87	171

ಹಗರಿಬೊಮ್ಮನಹಳ್ಳಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಕೋಷ್ಟಕ - 6

ಕ್ರ.ಸಂ	ತಾಲೂಕು	ಗ್ರಾಮ	ಕುಟುಂಬಗಳು	ಜನ ಸಂಖ್ಯೆ		ಒಟ್ಟು
				ಗಂಡು	ಹೆಣ್ಣು	
1	ಹಗರಿಬೊಮ್ಮನಹಳ್ಳಿ	ಬೆಣಕಲ್ಲು	01	02	03	05
2	,,	ದಶಮಾಪುರ	02	02	03	05
3	,,	ಹಗರಿಬೊಮ್ಮನಹಳ್ಳಿ	28	75	79	154
4	,,	ಹಂಪಸಾಗರ	01	04	02	06
5	,,	ತಂಬ್ರಹಳ್ಳಿ	01	01	-	01
	ಒಟ್ಟು		33	84	87	171

ಹಗರಿಬೊಮ್ಮನಹಳ್ಳಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಸಾಕ್ಷರರ್ಹರು ಮತ್ತು ಸಾಕ್ಷರರ ಮಾಹಿತಿ ಕೋಷ್ಟಕ - 7

ಕ್ರ. ಸಂ.	ಗ್ರಾಮ	ಕುಟುಂಬ ಸಂಖ್ಯೆ	ಒಟ್ಟು ಜನ ಸಂಖ್ಯೆ			0-6			ಸಾಕ್ಷರರ್ಹರು			ಸಾಕ್ಷರರು		
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಬೆಣಕಲ್ಲು	01	02	03	05	-	-	-	02	03	05	02	03	05
2	ದಶಮಾಪುರ	02	02	03	05	-	-	-	02	03	05	01	01	02
3	ಹಗರಿಬೊಮ್ಮನಹಳ್ಳಿ	28	75	79	54	08	12	20	67	67	134	54	43	97
4	ಹಂಪಸಾಗರ	01	04	02	06	-	-	-	04	02	06	03	01	04
5	ತಂಬ್ರಹಳ್ಳಿ	01	01	-	01	-	-	-	01	-	01	01	-	01
	ಒಟ್ಟುಮೊತ್ತ	33	84	87	171	08	12	20	76	75	151	61	48	109

ಹಗರಿಬೊಮ್ಮನಹಳ್ಳಿ ತಾಲೂಕಿನ ಮೇದಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ - 8

ಕ್ರ. ಸಂ	ಗ್ರಾಮ	ಕು. ಸಂ ಖ್ಯೆ	ಅಕ್ಷರಸ್ಥರು/ ಅನಕ್ಷರಸ್ಥರು						ವೃತ್ತಿ				ಒಟ್ಟು ಜನ ಸಂಖ್ಯೆ				ಶೈಕ್ಷಣಿಕ ಮಟ್ಟ									
			ಗಂಡು		ಹೆಣ್ಣು		0-5 ಮಗು										1-7		8-10		11-12		ಪದವಿ		ಸ್ನಾತ್ತಕೊ ಪದವಿ	
			ಅಕ್ಷರ ಸ್ಥರು	ಅನಕ್ಷ ರಸ್ಥರು	ಅಕ್ಷರ ಸ್ಥರು	ಅನಕ್ಷ ರರು	ಗಂ	ಹೆ	ಕು.ಕ	ನೌಕ ರಿ	ಇತರೆ	ಅಭ್ಯಾ ಸ	ಗಂ	ಹೆ	ಒಟ್ಟು	ಡಿಪ್ಲೋ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
1	ಬೆಣಕಲ್ಲು	01	02	-	03	-	-	-	-	01	02	02	02	03	05	-	01	01	01	02	-	-	-	-	-	-
2	ದಶಮಾಪುರ	02	01	01	01	02	-	-	02	-	03	-	02	03	05	-	01	01	-	-	-	-	-	-	-	-
3	ಹಗರಿಬೊಮ್ಮನ ಹಳ್ಳಿ	28	54	14	47	24	07	08	82	02	04	51	75	79	154	08	25	23	19	17	02	02	07	01	01	-
4	ಹಂಪಸಾಗರ	01	03	01	01	01	-	-	02	-	-	04	04	02	06	01	02	-	01	01	-	-	-	-	-	-
5	ತಂಬ್ರಹಳ್ಳಿ	01	01	-	-	-	-	-	01	-	-	-	01	-	01	01	01	-	-	-	-	-	-	-	-	-
	ಒಟ್ಟು	33	61	16	52	27	07	08	87	03	09	57	84	87	171	10	30	25	21	20	02	02	07	01	01	-

ಹೂವಿನ ಹಡಗಲಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು ಜನಸಂಖ್ಯೆ ಮಾಹಿತಿ ಕೋಷ್ಟಕ - 9

ಕ್ರ. ಸಂ	ಗ್ರಾಮ	ವಯೋ ಗುಂಪು																	
		0-14			15-29			30-44			45-59			60- ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಇಟ್ಟಿಗಿ	01	-	01	02	02	04	01	01	02	-	-	-	01	01	02	05	04	09
2	ಹೂವಿನ ಹಡಗಲಿ	12	18	30	11	12	23	08	07	15	01	04	05	04	03	07	36	44	80
3	ಹೊಳಲು	04	10	14	08	07	15	05	02	07	01	02	03	01	04	05	19	25	44
4	ಮಾಗಳ	06	02	08	08	05	13	01	02	03	02	04	06	03	02	05	20	15	35
5	ಮುದೆನೂರು	04	-	04	01	-	01	01	01	02	-	01	01	-	01	01	06	03	09
6	ಮೈಲಾರ	-	03	03	02	-	02	-	-	-	-	01	01	01	-	01	03	04	07
7	ಸೋಗಿ	07	04	11	09	06	15	02	07	09	04	02	06	02	03	05	24	22	46
	ಒಟ್ಟು	34	37	71	41	32	73	18	20	38	08	14	22	12	14	26	113	117	230

ಹೂವಿನ ಹಡಗಲಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಕೋಷ್ಟಕ - 10

ಕ್ರ.ಸಂ	ತಾಲೂಕು	ಗ್ರಾಮ	ಕುಟುಂಬಗಳು	ಜನಸಂಖ್ಯೆ		ಒಟ್ಟು
				ಗಂಡು	ಹೆಣ್ಣು	
1	ಹೂವಿನ ಹಡಗಲಿ	ಇಟ್ಟಿಗಿ	02	05	04	09
2	..	ಹೂವಿನ ಹಡಗಲಿ	15	36	44	80
3	..	ಹೊಳಲು	08	19	25	44
4	..	ಮಾಗಳ	09	20	15	35
5	..	ಮುದೆನೂರು	02	06	03	09
6	..	ಮೈಲಾರ	01	03	04	07
7	..	ಸೋಗಿ	09	24	22	46
	ಒಟ್ಟು		46	113	117	230

ಹೂವಿನ ಹಡಗಲಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಸಾಕ್ಷರರ್ಹರು ಮತ್ತು ಸಾಕ್ಷರರ ಮಾಹಿತಿ ಕೋಷ್ಟಕ - 11

ಕ್ರ. ಸಂ.	ಗ್ರಾಮ	ಕುಟುಂಬ ಸಂಖ್ಯೆ	ಒಟ್ಟು ಜನ ಸಂಖ್ಯೆ			0-6			ಸಾಕ್ಷರರ್ಹರು			ಸಾಕ್ಷರರು		
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಇಟ್ಟಿಗಿ	02	05	04	09	-	-	-	05	04	09	04	-	04
2	ಹೂವಿನ ಹಡಗಲಿ	15	36	44	80	05	09	14	31	35	66	27	19	46
3	ಹೊಳಲು	08	19	25	44	02	04	06	17	21	38	12	11	23
4	ಮಾಗಳ	09	20	15	35	04	01	05	16	14	30	13	06	19
5	ಮುದೆನೂರು	02	06	03	09	02	-	02	04	03	07	02	-	02
6	ಮೈಲಾರ	01	03	04	07	-	01	01	03	03	06	-	-	-
7	ಸೋಗಿ	09	24	22	46	-	-	-	24	22	46	18	07	25
	ಒಟ್ಟು	46	113	117	230	13	15	28	100	102	202	76	43	119

ಹೂವಿನ ಹಡಗಲಿ ತಾಲೂಕಿನ ಮೇದಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ - 12

ಕ್ರ. ಸಂ	ಗ್ರಾಮ	ಕು. ಸಂಖ್ಯೆ	ಅಕ್ಷರಸ್ಥರು / ಅನಕ್ಷರಸ್ಥರು						ವೃತ್ತಿ				ಒಟ್ಟು ಜನ ಸಂಖ್ಯೆ				ಶೈಕ್ಷಣಿಕ ಮಟ್ಟ									
			ಗಂಡು		ಹೆಣ್ಣು		0-5 ಮಗು										1-7		8-10		11-12		ಪದವಿ		ಸ್ನಾತಕೋ ಪದವಿ	
			ಅಕ್ಷರ ಸ್ಥರು	ಅನಕ್ಷರ ಸ್ಥರು	ಅಕ್ಷರ ಸ್ಥರು	ಅನಕ್ಷ ರಸ್ಥರು	ಗಂ	ಹೆ	ಕು.ಕ	ನೌಕರಿ	ಇತರ	ಅಭ್ಯಾಸ	ಗಂ	ಹೆ	ಒಟ್ಟು	ಡಿಪ್ಲೋ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
1	ಇಟ್ಟಿಗಿ	2	04	01	01	03	-	-	07	-	-	02	05	04	09	02	04	-	-	-	-	01	-	-	-	-
2	ಹೂ। ಹಡಗಲಿ	15	29	04	20	16	03	08	33	02	11	23	36	44	80	05	16	15	08	04	02	02	01	01	-	-
3	ಹೊಳಲು	8	12	05	12	10	02	03	29	-	-	10	19	25	44	03	07	06	05	06	-	-	-	-	-	-
4	ಮಾಗಳ	9	14	03	06	08	03	01	15	03	09	04	20	15	35	01	08	05	02	01	02	-	02	-	-	-
5	ಮುದೆನೂರು	2	03	02	-	03	01	-	-	-	05	03	06	03	09	-	02	-	01	-	-	-	-	-	-	-
6	ಮೈಲಾರ	1	-	03	-	03	-	01	06	-	-	-	03	04	07	-	-	-	-	-	-	-	-	-	-	-
7	ಸೋಗಿ	09	18	06	07	15	-	-	28	01	11	06	24	22	46	02	12	04	04	03	01	-	01	-	-	-
	ಒಟ್ಟು	46	80	24	46	58	09	13	118	06	36	48	113	117	230	13	49	30	20	14	05	03	04	01	-	-

ಹೊಸಪೇಟೆ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು ಜನಸಂಖ್ಯೆ ಮಾಹಿತಿ ಕೋಷ್ಟಕ -13

ಕ್ರ. ಸಂ	ಗ್ರಾಮ	ವಯೋ ಗುಂಪು																	
		0-14			15-29			30-44			45-59			60- ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಅನಂತ ಶಯನಗುಡಿ	02	-	02	-	-	-	01	01	02	-	-	-	-	-	-	03	01	04
2	ಡಾಣಾಪುರ	01	05	06	04	03	07	01	03	04	01	-	01	-	-	-	07	11	18
3	ಗರಗ	39	38	77	32	20	52	18	20	38	11	11	22	02	07	09	102	96	198
4	ಹಾರುವನ ಹಳ್ಳಿ	16	20	36	08	06	14	06	08	14	04	04	08	02	02	04	36	40	076
5	ಹೊಸಪೇಟೆ	64	59	123	50	62	112	40	37	77	21	22	43	11	09	20	186	189	375
6	ಕಂಪ್ಲಿ	17	20	37	23	17	40	11	13	24	11	13	24	04	01	05	66	64	130
7	ಕಾಮಾಲಾಪುರ	04	01	05	-	-	-	01	01	02	-	-	-	01	01	02	06	03	009
8	ಮರಿಯಮ್ಮನಹಳ್ಳಿ	04	05	09	07	04	11	04	02	06	01	01	02	01	02	03	17	14	31
9	ನಾಗೇನಹಳ್ಳಿ	03	07	10	04	05	09	03	03	06	01	01	02	02	02	04	13	18	31
	ಒಟ್ಟು	150	155	305	128	117	245	85	88	173	50	52	102	23	24	47	436	436	872

ಹೊಸಪೇಟೆ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಕೋಷ್ಟಕ - 14

ಕ್ರ.ಸಂ	ತಾಲೂಕು	ಗ್ರಾಮ	ಕುಟುಂಬಗಳು	ಜನ ಸಂಖ್ಯೆ		ಒಟ್ಟು
				ಗಂಡು	ಹೆಣ್ಣು	
1	ಹೊಸಪೇಟೆ	ಅನಂತಶಯನ ಗುಡಿ	01	03	01	04
2	,,	ಡಣಾಪುರ	04	07	11	18
3	,,	ಗರಗ	32	102	96	198
4	,,	ಹಾರುವನಹಳ್ಳಿ	10	36	40	76
5	,,	ಹೊಸಪೇಟೆ	62	186	189	375
6	,,	ಕಂಪ್ಲಿ	25	66	64	130
7	,,	ಕಾಮಲಾಪುರ	01	06	03	09
8	,,	ಮರಿಯಮ್ಮನಹಳ್ಳಿ	02	17	14	31
9	,,	ನಾಗೇನಹಳ್ಳಿ	05	13	18	31
	ಒಟ್ಟು		142	436	436	872

ಹೊಸಪೇಟೆ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಸಾಕ್ಷರರ್ಹರು ಮತ್ತು ಸಾಕ್ಷರರ ಮಾಹಿತಿ ಕೋಷ್ಟಕ - 15

ಕ್ರ. ಸಂ.	ಗ್ರಾಮ	ಕುಟುಂಬ ಸಂಖ್ಯೆ	ಒಟ್ಟು ಜನ ಸಂಖ್ಯೆ			0-6			ಸಾಕ್ಷರರ್ಹರು			ಸಾಕ್ಷರರು		
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಅನಂತಶಯನಗುಡಿ	01	03	01	04	01	-	01	02	01	03	01	-	01
2	ಡಣಾಪುರ	04	07	11	18	-	-	-	07	11	18	05	08	13
3	ಗರಗ	32	102	96	198	18	15	33	84	81	165	52	26	78
4	ಹಾರುವನಹಳ್ಳಿ	10	36	40	76	08	07	15	28	33	61	16	10	26
5	ಹೊಸಪೇಟೆ	62	186	189	375	29	27	56	157	162	319	141	112	253
6	ಕಂಪ್ಲಿ	25	66	64	130	08	09	17	58	55	113	44	29	73
7	ಕಾಮಲಾಪುರ	01	06	03	09	01	01	02	05	02	07	04	01	05
8	ಮರಿಯಮ್ಮನಹಳ್ಳಿ	02	17	14	31	01	02	03	16	12	28	12	08	20
9	ನಾಗೇನಹಳ್ಳಿ	05	13	18	31	01	02	03	12	16	28	06	07	13
	ಒಟ್ಟು	142	436	436	872	67	63	130	369	373	742	281	201	482

ಹೊಸಪೇಟೆ ತಾಲೂಕಿನ ಮೇದಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ. - 16

ಕ್ರ.ಸಂ	ಗ್ರಾಮ	ಕು. ಸಂಖ್ಯೆ	ಅಕ್ಷರಸ್ಥರು / ಅನಕ್ಷರಸ್ಥರು						ವೃತ್ತಿ				ಒಟ್ಟು ಜನ ಸಂಖ್ಯೆ				ಶೈಕ್ಷಣಿಕ ಮಟ್ಟ									
			ಗಂಡು		ಹೆಣ್ಣು		0-5 ಮಗು										1-7		8-10		11-12		ಪದವಿ		ಸ್ನಾತಕೋ ಪದವಿ	
			ಅಕ್ಷರಸ್ಥರು	ಅನಕ್ಷರಸ್ಥರು	ಅಕ್ಷರಸ್ಥರು	ಅನಕ್ಷರಸ್ಥರು	ಗಂ	ಹೆ	ಕು.ಕ	ನೌಕರಿ	ಇತರ	ಅಭ್ಯಾಸ	ಗಂ	ಹೆ	ಒಟ್ಟು	ಡಿಪ್ಲೋ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
1	ಅನಂತಶಯನ ಗುಡಿ	01	01	01	-	01	01	-	02	-	-	01	03	01	04	-	01	-	-	-	-	-	-	-	-	-
2	ಡಣಾಪುರ	04	05	02	08	03	-	-	09	-	-	09	07	11	18	-	01	06	04	02	-	-	-	-	-	-
3	ಗರಗ	32	56	33	27	55	13	14	94	-	28	49	102	96	198	01	30	20	12	06	07	-	03	-	-	-
4	ಹಾರುವನಹಳ್ಳಿ	10	17	12	12	23	07	05	38	02	02	22	36	40	76	-	11	09	04	01	-	-	01	-	-	-
5	ಹೊಸಪೇಟೆ	62	142	20	110	54	24	25	211	09	15	91	186	189	375	28	67	64	46	42	22	03	06	03		
6	ಕಂಪ್ಲಿ	25	44	14	32	26	08	06	79	-	06	31	066	064	130	09	25	17	15	9	01	03	03	-	-	-
7	ಕಮಲಾಪುರ	01	04	01	01	01	01	01	04	-	-	03	06	03	09	01	04	-	-	01	-	-	-	-	-	-
8	ಮರಿಯಮ್ಮನಹಳ್ಳಿ	02	12	04	08	05	01	01	19	-	-	10	17	14	31	02	08	03	02	04	01	01	01	-	-	-
9	ನಾಗೇನಹಳ್ಳಿ	05	06	06	07	10	01	01	21	-	-	08	13	18	31	-	05	06	01	01	-	-	-	-	-	-
	ಒಟ್ಟು	142	287	93	205	178	56	53	477	11	51	224	436	436	872	41	152	125	84	66	31	7	14	03	-	-

ಕೂಡ್ಲಿಗಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು ಜನಸಂಖ್ಯೆ ಮಾಹಿತಿ ಕೋಷ್ಟಕ - 17

ಕ್ರ. ಸಂ	ಗ್ರಾಮ	ವಯೋ ಗುಂಪು																	
		0-14			15-29			30-44			45-59			60- ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಅಪ್ಪಯ್ಯನಹಳ್ಳಿ	05	-	05	-	01	01	01	-	01	-	01	01	01	-	01	07	02	09
2	ಗುಡೆಕೋಟೆ	02	02	04	06	06	12	02	02	04	-	01	01	-	01	01	10	12	22
3	ಕೂಡ್ಲಿಗಿ	05	05	10	07	06	13	03	05	08	03	02	05	01	-	01	19	18	37
4	ಕೊಟ್ಟೂರು	19	10	29	14	14	28	12	11	23	06	04	10	04	02	06	55	41	96
5	ಮಹದೇವಪುರ	09	05	14	05	02	07	03	06	09	03	01	04	01	-	01	21	14	35
6	ರಾಯಪುರ	-	02	02	02	-	02	-	-	-	02	02	04	-	01	01	04	05	09
7	ಸಿಡೇಗಲ್ಲು	-	-	-	-	-	-	-	-	-	-	01	01	-	-	-	-	01	01
	ಒಟ್ಟು	40	24	64	34	29	63	21	24	45	14	12	26	07	04	11	116	93	209

ಕೂಡ್ಲಿಗಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಕೋಷ್ಟಕ - 18

ಕ್ರ.ಸಂ	ತಾಲೂಕು	ಗ್ರಾಮ	ಕುಟುಂಬಗಳು	ಜನ ಸಂಖ್ಯೆ		ಒಟ್ಟು
				ಗಂಡು	ಹೆಣ್ಣು	
1	ಕೂಡ್ಲಿಗಿ	ಅಪ್ಪಯ್ಯನಹಳ್ಳಿ	02	07	02	09
2	,,	ಗುಡೆಕೋಟೆ	03	10	12	22
3	,,	ಕೂಡ್ಲಿಗಿ	06	19	18	37
4	,,	ಕೊಟ್ಟೂರು	16	55	41	96
5	,,	ಮಹದೇವಪುರ	08	21	14	35
6	,,	ರಾಯಪುರ	02	04	05	09
7	,,	ಸಿಡೇಗಲ್ಲು	01	-	01	01
	ಒಟ್ಟು		38	116	93	209

ಕೂಡ್ಲಿಗಿ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಸಾಕ್ಷರರ್ಹರು ಮತ್ತು ಸಾಕ್ಷರರ ಮಾಹಿತಿ ಕೋಷ್ಟಕ - 19

ಕ್ರ. ಸಂ.	ಗ್ರಾಮ	ಕುಟುಂಬ ಸಂಖ್ಯೆ	ಒಟ್ಟು ಜನ ಸಂಖ್ಯೆ			0-6			ಸಾಕ್ಷರರ್ಹರು			ಸಾಕ್ಷರರು		
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಅಪ್ಪಯ್ಯನಹಳ್ಳಿ	02	07	02	09	03	-	03	04	02	06	03	-	03
2	ಗುಡೆಕೋಟೆ	03	10	12	22	01	01	02	09	11	20	08	03	11
3	ಕೂಡ್ಲಿಗಿ	06	19	18	37	01	01	02	18	17	35	18	13	31
4	ಕೊಟ್ಟೂರು	16	55	41	96	04	05	09	51	36	87	42	21	63
5	ಮಹದೇವಪುರ	08	21	14	35	07	-	07	14	14	28	03	03	06
6	ರಾಯಪುರ	02	04	05	09	-	-	-	04	05	09	03	02	05
7	ಸಿಡೇಗಲ್ಲು	01	-	01	01	-	-	-	-	01	01	-	-	-
	ಒಟ್ಟು	38	116	93	209	16	07	23	100	86	186	77	42	119

ಕೂಡ್ಲಿಗಿ ತಾಲೂಕಿನ ಮೇದಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ. - 20

ಕ್ರ. ಸಂ	ಗ್ರಾಮ	ಕು. ಸಂಖ್ಯೆ	ಅಕ್ಷರಸ್ಥರು / ಅನಕ್ಷರಸ್ಥರು						ವೃತ್ತಿ				ಒಟ್ಟು ಜನ ಸಂಖ್ಯೆ				ಶೈಕ್ಷಣಿಕ ಮಟ್ಟ									
			ಗಂಡು		ಹೆಣ್ಣು		0-5 ಮಗು										1-7		8-10		11-12		ಪದವಿ		ಸ್ನಾತಕೋ ಪದವಿ	
			ಅಕ್ಷರಸ್ಥರು	ಅನಕ್ಷರಸ್ಥರು	ಅಕ್ಷರಸ್ಥರು	ಅನಕ್ಷರಸ್ಥರು	ಗಂ	ಹೆ	ಕು.ಕ	ನೌಕರಿ	ಇತರೆ	ಅಭ್ಯಾಸ	ಗಂ	ಹೆ	ಒಟ್ಟು	ಡಿಪ್ಲೋ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
1	ಅಪ್ಪಯ್ಯನಹಳ್ಳಿ	02	03	01	-	02	03	-	04	-	-	02	07	02	09	-	02	-	-	-	01	-	-	-	-	-
2	ಗುಡೆಕೋಟೆ	03	08	01	03	08	01	01	10	02	04	04	10	12	22	-	02	01	03	01	02	01	01	-	-	-
3	ಕೂಡ್ಲಿಗಿ	06	18	-	13	04	01	01	22	01	-	12	19	18	37	03	10	08	04	04	01	01	03	-	-	-
4	ಕೊಟ್ಟೂರು	16	43	09	22	16	03	03	56	03	02	29	55	41	96	08	27	17	10	05	06	-	05	-	-	-
5	ಮಹದೇವಪುರ	08	03	05	03	11	03	-	26	-	02	04	21	14	35	-	03	03	-	-	-	-	-	-	-	-
6	ರಾಯಪುರ	02	03	01	02	03	-	-	06	-	-	03	04	05	09	-	01	02	02	-	-	-	-	-	-	-
7	ಸಿಡೇಗಲ್ಲು	01	-	-	-	01	-	-	01	-	-	-	-	01	01	-	-	-	-	-	-	-	-	-	-	-
	ಒಟ್ಟು	38	78	27	43	45	11	05	125	06	08	54	116	93	209	11	40	31	19	10	10	02	09	-	-	-

ಶಿರಗುಪ್ಪ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು ಜನಸಂಖ್ಯೆ ಮಾಹಿತಿ ಕೋಷ್ಟಕ - 21

ಕ್ರ. ಸಂ	ಗ್ರಾಮ	ವಯೋ ಗುಂಪು																	
		0-14			15-29			30-44			45-59			60- ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಸಿರಿಗೇರಿ	02	04	06	05	02	07	02	02	04	01	05	06	02	-	02	12	13	25
2	ಶಿರಗುಪ್ಪ	14	19	33	13	11	24	07	08	15	03	03	06	03	02	05	40	43	83
3	ತೆಕ್ಕಲಕೋಟೆ	03	05	08	05	06	11	02	02	04	01	03	04	02	01	03	13	17	30
	ಒಟ್ಟು	19	28	47	23	19	42	11	12	23	05	11	16	07	03	10	65	73	138

ಶಿರಗುಪ್ಪ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಕೋಷ್ಟಕ - 22

ಕ್ರ.ಸಂ	ತಾಲೂಕು	ಗ್ರಾಮ	ಕುಟುಂಬಗಳು	ಜನ ಸಂಖ್ಯೆ		ಒಟ್ಟು
				ಗಂಡು	ಹೆಣ್ಣು	
1	ಸಿರುಪ್ಪ	ಸಿರಿಗೇರಿ	06	12	13	25
2	,,	ಶಿರಗುಪ್ಪ	12	40	43	83
3	,,	ತೆಕ್ಕಲಕೋಟೆ	06	13	17	30
	ಒಟ್ಟು		24	65	73	138

ಶಿರಗುಪ್ಪ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಸಾಕ್ಷರರ್ಹರು ಮತ್ತು ಸಾಕ್ಷರರ ಮಾಹಿತಿ ಕೋಷ್ಟಕ - 23

ಕ್ರ. ಸಂ.	ಗ್ರಾಮ	ಕುಟುಂಬ ಸಂಖ್ಯೆ	ಒಟ್ಟು ಜನ ಸಂಖ್ಯೆ			0-6			ಸಾಕ್ಷರರ್ಹರು			ಸಾಕ್ಷರರು		
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಸಿರಿಗೇರಿ	06	12	13	25	02	04	06	10	09	19	04	01	05
2	ಶಿರಗುಪ್ಪ	12	40	43	83	08	13	21	32	30	62	23	16	39
3	ತೆಕ್ಕಲಕೋಟೆ	06	13	17	30	01	01	02	12	16	28	04	04	08
	ಒಟ್ಟು	24	65	73	138	11	18	29	54	55	109	31	21	52

ಶಿರಗುಪ್ಪ ತಾಲೂಕಿನ ಮೇದಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ. - 24

ಕ್ರ. ಸಂ	ಗ್ರಾಮ	ಕು. ಸಂಖ್ಯೆ	ಅಕ್ಷರಸ್ಥರು/ ಅನಕ್ಷರಸ್ಥರು						ವೃತ್ತಿ				ಒಟ್ಟು ಜನ ಸಂಖ್ಯೆ				ಶೈಕ್ಷಣಿಕ ಮಟ್ಟ									
			ಗಂಡು		ಹೆಣ್ಣು		0-5 ಮಗು										1-7		8-10		11-12		ಪದವಿ		ಸ್ನಾತ್ತಕೊ ಪದವಿ	
			ಅಕ್ಷರ ಸ್ಥರು	ಅನಕ್ಷ ಸ್ಥರರು	ಅಕ್ಷರ ಸ್ಥರು	ಅನಕ್ಷ ರಸ್ಥರು	ಗಂ	ಹೆ	ಕು.ಕ	ನೌಕ ರಿ	ಇತ ರೆ	ಅಭ್ಯಾ ಸ	ಗಂ	ಹೆ	ಒಟ್ಟು	ಡಿಪ್ಲೋ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
1	ಸಿರಿಗೇರಿ	06	05	06	01	08	01	04	16	-	02	02	12	13	25	01	03	02	-	-	01	-	-	-	-	-
2	ಶಿರಗುಪ್ಪ	12	23	09	19	14	08	10	37	01	11	16	40	43	83	09	11	14	10	05	01	-	01	-	-	-
3	ತೆಕ್ಕಲಕೋಟೆ	06	04	08	04	13	01	-	24	-	-	05	13	17	30	03	03	03	01	01	-	-	-	-	-	-
	ಒಟ್ಟು	24	32	23	24	35	10	14	77	01	13	23	65	73	138	13	17	19	11	06	02	-	01	-	-	-

ಸೊಂಡೂರು ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು ಜನಸಂಖ್ಯೆ ಮಾಹಿತಿ ಕೋಷ್ಟಕ - 25

ಕ್ರ.ಸಂ	ಗ್ರಾಮ	ವಯೋ ಗುಂಪು																	
		0-14			15-29			30-44			45-59			60- ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
1	ಅಂಕಮ್ಮನಹಾಳು	10	13	23	03	02	05	02	07	09	04	01	05	02	-	02	21	23	44
2	ಬಂಡ್ರಿ	02	06	08	05	01	06	02	03	05	03	-	03	-	-	-	12	10	22
3	ಚೋರನೂರು	-	-	-	01	01	02	-	01	01	-	-	-	-	-	-	01	02	03
4	ಸುಶೀಲನಗರ	09	06	15	04	07	11	03	04	07	01	-	01	-	01	01	17	18	35
5	ಸೊಂಡೂರು	13	17	30	18	15	33	08	10	18	04	05	09	04	-	04	47	47	94
6	ತಾರಾನಗರ	01	01	02	03	02	05	02	01	03	-	-	-	-	01	01	06	05	11
7	ತೋರಣಗಲ್ಲು	-	01	01	01	01	02	-	01	01	01	-	01	-	-	-	02	03	05
8	ಯಶವಂತನಗರ	11	09	20	05	04	09	05	02	07	01	02	03	01	03	04	23	20	43
	ಒಟ್ಟು	46	53	99	40	33	73	22	29	51	14	18	22	17	15	12	129	128	257

ಸೊಂಡೂರು ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಕೋಷ್ಟಕ - 26

ಕ್ರ.ಸಂ	ತಾಲೂಕು	ಗ್ರಾಮ	ಕುಟುಂಬ ಗಳು	ಜನ ಸಂಖ್ಯೆ		ಒಟ್ಟು
				ಗಂಡು	ಹೆಣ್ಣು	
1	ಸೊಂಡುರು	ಅಂಕಮ್ಮನಹಾಳು	07	21	23	44
2	,,	ಬಂಡ್ರಿ	04	12	10	22
3	,,	ಚೋರನೂರು	01	01	02	03
4	,,	ಸುಸೀಲನಗರ	04	17	18	35
5	,,	ಸೊಂಡೂರು	14	47	47	94
6	,,	ತಾರಾನಗರ	03	06	05	11
7	,,	ತೋರಣಗಲ್ಲು	01	02	03	05
8	,,	ಯಶವಂತನಗರ	09	23	20	43
	ಒಟ್ಟು		43	129	128	257

ಸೊಂಡೂರು ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಸಾಕ್ಷರರ್ಹರು ಮತ್ತು ಸಾಕ್ಷರರ ಮಾಹಿತಿ ಕೋಷ್ಟಕ - 27

ಕ್ರ. ಸಂ.	ಗ್ರಾಮ	ಕುಟುಂಬ ಸಂಖ್ಯೆ	ಒಟ್ಟು ಜನ ಸಂಖ್ಯೆ			0-6			ಸಾಕ್ಷರರ್ಹರು			ಸಾಕ್ಷರರು		
			ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
1	ಅಂಕಮ್ಮನಹಾಳು	07	21	23	44	06	06	12	15	17	32	13	08	21
2	ಬಂಡ್ರಿ	04	12	10	22	02	02	04	10	08	18	06	01	07
3	ಚೋರನೂರು	01	01	02	03	-	-	-	01	02	03	01	01	02
4	ಸುಶೀಲನಗರ	04	17	18	35	04	04	08	13	14	27	06	02	08
5	ಸೊಂಡೂರು	14	47	47	94	05	11	16	42	36	78	33	22	55
6	ತಾರಾನಗರ	03	06	05	11	-	-	-	06	05	11	03	02	05
7	ತೋರಣಗಲ್ಲು	01	02	03	05	-	01	01	02	02	04	01	01	02
8	ಯಶವಂತನಗರ	09	23	20	43	05	07	12	18	13	31	15	05	20
	ಒಟ್ಟು	43	129	128	257	22	31	53	107	97	204	78	42	120

ಸೊಂಡೂರು ತಾಲೂಕಿನ ಮೇದಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ. - 28

ಕ್ರ. ಸಂ	ಗ್ರಾಮ	ಕು. ಸಂಖ್ಯೆ	ಅಕ್ಷರಸ್ಥರು/ ಅನಕ್ಷರಸ್ಥರು						ವೃತ್ತಿ				ಒಟ್ಟು ಜನ ಸಂಖ್ಯೆ				ಶೈಕ್ಷಣಿಕ ಮಟ್ಟ									
			ಗಂಡು		ಹೆಣ್ಣು		0-5 ಮಗು										1-7		8-10		11-12		ಪದವಿ		ಸ್ನಾತಕೊ ಪದವಿ	
			ಅಕ್ಷರಸ್ಥರು	ಅನಕ್ಷರಸ್ಥರು	ಅಕ್ಷರಸ್ಥರು	ಅನಕ್ಷರಸ್ಥರು	ಗಂ	ಹೆ	ಕು.ಕಸುಬು	ನೌಕರಿ	ಇತರೆ	ಅಭ್ಯಾಸ	ಗಂ	ಹೆ	ಒಟ್ಟು	ಡಿಪ್ಲೋ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
1	ಅಂಕಮ್ಮನಹಾಳು	07	13	05	08	11	03	04	20	-	-	17	21	23	44	-	10	08	02	-	01	-	-	-	-	-
2	ಬಂಡ್ರಿ	04	07	04	01	07	01	02	08	-	09	02	12	10	22	-	04	-	02	01	-	-	-	-	-	-
3	ಚೋರನೂರು	01	01	-	01	01	-	-	03	-	-	-	01	02	03	-	-	01	01	-	-	-	-	-	-	-
4	ಸುಶೀಲನಗರ	04	06	08	02	12	03	04	26	-	-	02	17	18	35	-	05	02	01	-	-	-	-	-	-	-
5	ಸೊಂಡೂರು	14	33	09	21	17	05	09	49	02	01	28	47	47	94	02	16	11	08	11	04	-	05	-	-	-
6	ತಾರಾನಗರ	03	03	03	02	03	-	-	09	-	-	02	06	05	11	01	01	01	01	01	01	-	-	-	-	-
7	ತೋರಣಗಲ್ಲು	01	01	01	-	02	-	01	03	-	-	01	02	03	05	-	01	01	-	-	-	-	-	-	-	-
8	ಯಶವಂತನಗರ	09	16	03	06	09	04	05	21	-	05	08	23	20	43	-	09	04	06	01	-	-	-	-	-	-
	ಒಟ್ಟು	43	80	33	41	62	16	25	139	02	15	60	129	128	257	03	46	28	21	14	06	-	05	-	-	-

ವಕ್ತೃಗಳ ವಿವರ :

ಕ್ರ.ಸಂ	ಹೆಸರು	ವಯಸ್ಸು	ವೃತ್ತಿ	ಗ್ರಾಮ/ ಓಣಿ
1	ಸುರೇಶ	27	ಕರಕುಶಲ/	ಸೋಲ್ಜರ್‌ಬಾವಿ.ಬಳ್ಳಾರಿ.
2	ಎಂ.ಬಿ.ಶಿವಣ್ಣ	45	ಇಂಜಿನಿಯರ್	ತೇರುಬೀದಿ.ಬಳ್ಳಾರಿ.
3	ತೊಗರಿ ಬಸಪ್ಪ	32	ಕರಕುಶಲ/	ಸಿರುಗುಪ್ಪರಸ್ತೆ ಬಳ್ಳಾರಿ
4	ಮಲ್ಲೇಶಪ್ಪ.ಸಮಾಜದ ಅಧ್ಯಕ್ಷರು	56	ಡಿಪ್ಲೊ/	ಅದೇ
5	ತಾಯಪ್ಪ	40	ಸರಕಾರಿನೌಕರ	ಅದೇ
6	ಎಂ.ಹನುಮಂತಪ್ಪ	48	ಕುಲಕಸುಬು	ಅದೇ
7	ಮೇದರ ಕುಮಾರಸ್ವಾಮಿ	65	ಡಿಪ್ಲೊ/ಕು ಕ	ಸೊಂಡೂರು ಮೇನ್ ಬಜಾರ
8	ಎಂ.ನಾಗಪ್ಪ(ಕು.ದೇ.ಪೂಜಾರಿ)	60	ಕು ಕ	ಮೇದರಓಣಿ ಸೊಂಡೂರು
9	ಎಂ .ಹನುಮಂತಪ್ಪ	60	ಕು ಕ	ಅದೇ
10	ಎಂ.ಹುಲಿಗೆಮ್ಮ	65	ಕು ಕ	ಯಶವಂತನಗರ
11	ಎಂ.ಹುಲುಗಪ್ಪ	65	ಡಿಪ್ಲೊ	ಓಂಕಾರೇಶ್ವರ ಮಂದಿರದ ಹತ್ತಿರ ಹೊಸಪೇಟೆ
12	ಎಂ.ಲಕ್ಷ್ಮಣ	40	ಡಿಪ್ಲೊ/ಕು ಕ	ಮೇನ್‌ರೋಡ್ ಹೋಸಪೇಟೆ
13	ಎಂ.ವಸಂತ	45	ಡಿಪ್ಲೊ/ಕು ಕ	ಅದೇ
14	ಎಂ.ನೀಲಮ್ಮ	27	ಕು ಕ	ಅದೇ
15	ಎಂ.ನಾಗಮ್ಮ	46	ಕು ಕ	ಮರಿಯಮ್ಮನ ಹಳ್ಳಿ
16	ಎಂ.ಲಕ್ಷ್ಮಿ	32	ಕು ಕ	ಅದೇ
17	ಮೇದರ ತುಳಸಮ್ಮ	31	ಕು ಕ	ಅದೇ
18	ಮೇದರ ಗಾಳೆಮ್ಮ	40	ಕು ಕ	ಅದೇ
19	ಎಂ.ಹೆಚ್. ಆನಂದ	38	ಡಿಪ್ಲೊ/ಕು ಕ	ಗುಡೇಕೋಟೆರಸ್ತೆ ಕೂಡ್ಲಿಗಿ
20	ಎಂ.ಪಕ್ಕೀರಪ್ಪ	65	ಡಿಪ್ಲೊ/ಕು ಕ	ಹರಪನಹಳ್ಳಿರಸ್ತೆ ಕೊಟ್ಟೂರು
21	ಎಂ. ಭೀಮಣ್ಣ	57	ಕು ಕ	ರಾಯಪುರ
22	ಮೇದರ ರಾಮಣ್ಣ	27	ಡಿಪ್ಲೊ/ಕು ಕ	ಹಗರಿಬೊಮ್ಮನಹಳ್ಳಿ
23	ಮೇದರ ವೆಂಕಟೇಶ	27	ಡಿಪ್ಲೊ/ಕು ಕ	ಅದೇ

24	ಮೇದರ ಹನುಮಂತಪ್ಪ ಸಮಾಜದ ಯಜಮಾನ	56	ಡಿಪ್ಲೊ/ಕು ಕ	ಅದೇ
25	ಮೇದರ ಲಕ್ಷ್ಮೀದೇವಮ್ಮ	35	ಕು ಕ	ಅದೇ
26	ಎಂ.ಮಮ್ಮಾದೇವಿ(ಜೋಗಮ್ಮ)	54	ಕು ಕ	ಅದೇ
27	ಮೇದರ ಬಸವರಾಜಪ್ಪ	55	ಡಿಪ್ಲೊ/ಕು ಕ	ಮಾಗಳರಸ್ತೆ ಹೂವಿನಹಡಗಲಿ
28	ಎಂ.ಬಸವರಾಜಪ್ಪ	47	ಬ್ಯಾಂಕ್‌ನೌಕರರು	ಅದೇ
29	ಮೇದರ ಮೈಲಾರಪ್ಪ	40	ಡಿಪ್ಲೊ/ಕು ಕ	ಹೊಳಲು ಹೂವಿನಹಡಗಲಿ.ತಾ
30	ಮೇದರ ಉಚ್ಚೆಂಗೆಮ್ಮ	58	ಕು ಕ	ಅದೇ
31	ಮೇದರ ಬಾಲಚಂದ್ರಪ್ಪ	53	ಶಿಕ್ಷಕರು	ಮಾಗಳ ಹೂವಿನಹಡಗಲಿ .ತಾ
32	ನರಸಿಂಗಪ್ಪ	60	ಡಿಪ್ಲೊ/ಕು ಕ	ಸಿರಗುಪ್ಪ
33	ಮೇದರ ಅಮರೇಶ	35	ಎಲೆಕ್ಟ್ರಾನಿಕಷಾಪ್	ಅದೇ
34	ಮೇದರ ನರಸಪ್ಪ	60	ಡಿಪ್ಲೊ/ಕು ಕ	ತೆಕ್ಕಲಕೋಟೆ ಸಿರಗುಪ್ಪ. ತಾ
35	ಪ್ರೊ:ಬಿಆರ್.ಸುರುಪುರ	68	ನಿವೃತ್ತ ಕುಲಸಚಿವ	ಐವಾನ್‌ಷಾಯಿ ಗುಲ್ಬರ್ಗ
36	ಭೀಮಣ್ಣ ಬೊಸ್ಗಾಲ್	52	ಶಿಕ್ಷಕರು	ಎಸ್‌ಬಿ.ಕಾಲೇಜ್‌ಹತ್ತಿರಗುಲ್ಬರ್ಗ
37	ಎಂ.ಕರಿಬಸಮ್ಮ	53	ಕು ಕ	ಹಗರಿಬೊಮ್ಮನಹಳ್ಳಿ
38	ಮೇದರ ಗಂಗಮ್ಮ	51	ಕು ಕ	ಹೂವಿನಹಡಗಲಿ
39	ಮೇದರ ಸತ್ಯಮ್ಮ	55	ಕು ಕ	ದಾವಣಗೆರೆ
40	ಲಕ್ಷ್ಮೀದೇವಮ್ಮ (ಶಿವ ಶರಣೆ)	26	ಶರಣೆಯರ ಕಾಯಕ	ವಿಠಲಾಪುರ ದಾವಣಗೆರೆ .ತಾ
41	ಶಾಂತಮ್ಮ (ಶಿವ ಶರಣೆ)	47	ಅದೇ	ಅದೇ